
# ಕಗ್ಗ ರಸಧಾರೆ

ಸಂಪುಟ 2

ಕಗ್ಗ ರಸಧಾರೆ-ಸಂಪುಟ-2 (ಡಿವಿಜಿಯವರ ಮಂಕುತಿಮ್ಮನ
ಕಗ್ಗಗಳ ರಸಧಾರೆ)

JNANA002065



ಡಿವಿಜಿಯವರ ಮಂಕುತಿಮ್ಮನ ಕಗ್ಗಗಳ ರಸಧಾರೆ

ವ್ಯಾಖ್ಯಾತ: ರವಿ ತಿರುಮಲೈ

# ಕಗ್ಗ ರಸಧಾರೆ

**ಡಿವಿಜಿಯವರ ಮಂಕುತಿಮ್ಮನ ಕಗ್ಗಗಳ ರಸಧಾರೆ**

**ಸಂಪುಟ - 2**

ವ್ಯಾಖ್ಯಾತ: ರವಿ ತಿರುಮಲೈ

ಪ್ರಕಾಶಕರು

ವಿಜಯರವಿ ಪ್ರಕಾಶನ

**"KAGGA RASADHARE" Vol-2 Muktaka 201-450 Nos**.
-A commentary in Kannada
on Dr. D.V.Gundappa's “Mankuthimmana Kagga”
by Ravi Tirumalai

Pages: xi +291

©: Author

Published: 2014
Copies: 500

Price: Rs. 250/-

Author:
Ravi Tirumalai
Mobile: 96322 46255, 99451 56255
email: myrathy@gmail.com

Printed on : 80 gsm Maplitho
Size: 1/4 Crown

Publisher:
Vijayaravi Prakashana
No. 603, Montana Block
Heritage Estate, Doddaballapura Road
Yelahanka, Bangalore 560064
Tel: 080-2366 4241

Printed at:
Sun Prints
21/1, 2nd Cross,
4th Main, Chamarajapet
Bangalore-560 018
Tel: 94480 67224

ನನಗೆ ಬದುಕಿನ ಪಾಠ

ಹೇಳಿಕೊಟ್ಟ ಎಲ್ಲರಿಗೂ

ಅರ್ಪಣೆ

# ರಸಧಾರಾ ಸೂಚಿ


| ವಿಷಯ | ಮುಕ್ತಕಗಳ ಸಂಖ್ಯೆ | ಪುಟ ಸಂಖ್ಯೆ |
|---|---|---|
| ವಿಧಿಯ ವೈಚಿತ್ರ್ಯ | 201-203 | 1-5 |
| ಕ್ಷಣ ಕ್ಷಣವು ಹೊಸ ಹಸಿವು | 204-208 | 5-11 |
| ಸಾಜದ ಶಿಕ್ಷೆ | 209-213 | 11-17 |
| ಸಹಜದಿನ ಕೃತಕಮುಂ | 214-218 | 18-23 |
| ನಿತ್ಯ ವಿಸ್ಫುರಣ | 219-223 | 23-29 |
| ಪ್ರಗತಿ ತತ್ವ | 224-228 | 29-35 |
| ಜೀವನದ ಧರ್ಮ | 229-233 | 35-40 |
| ಸೃಷ್ಟಿಯಲಿ ಜನವಾಕು | 234-238 | 41-47 |
| ಸಮತಾ ತತ್ವ | 239-243 | 47-53 |
| ಆತ್ಮ ವಿಸ್ತರಣ | 244-248 | 53-60 |
| ಜೀವನವೇ ಪರಮೈಶ್ವರ್ಯ | 249-253 | 60-66 |
| ಬ್ರಹ್ಮ ನಾಟಕ | 254-258 | 67-73 |
| ಇಹ-ಪರ ಸಮನ್ವಯ | 259-263 | 73-78 |
| ನಾಚಿಕೆಯದೇಕೆ | 264-268 | 78-84 |
| ಬ್ರಹ್ಮ ಸಂಸಾರಿ | 269-273 | 84-90 |
| ಜೀವ ಪೂಜೆ | 274-278 | 90-95 |
| ತಿಳಿದು ಹಳಿಯುವೊಡೆ ಹಳಿ | 279-283 | 95-102 |
| ನೀತಿ ನಿರ್ಣಯ | 284-290 | 102-111 |
| ವಾಸನೆ ತಾಯಿ-ಸಂದರ್ಭ ತಂದೆ | 291-293 | 111-114 |
| ಕ್ಷಮೆ | 294-298 | 115-121 |
| ಬೆಪ್ಪನಾ | 299-303 | 121-126 |
| ಪ್ರಗತಿ ಕತೆ | 304-308 | 127-133 |

| | | |
|---|---|---|
| ವಿಕಟ ರಸಿಕನು ದಾತ | 309-313 | 133-139 |
| ಬ್ರಹ್ಮೋದ್ಯಾನ | 314-318 | 140-146 |
| ಪೂರ್ಣ ದರ್ಶನ | 319-323 | 146-152 |
| ನಾವೆಲ್ಲಾರಾಟದೆಲೆ | 324-328 | 152-159 |
| ನೇತ್ರದಂದದೆ ನೋಟ | 329-333 | 159-164 |

| **ವಿಷಯ** | **ಮುಕ್ತಕಗಳ ಸಂಖ್ಯೆ** | **ಪುಟ ಸಂಖ್ಯೆ** |
|---|---|---|
| ನೂರು ಜಡೆ ಕೋಲಾಟ | 334-338 | 165-170 |
| ಸಂಸಾರ ಸುಖ | 339-343 | 170-176 |
| ಸುಖ ಭ್ರಾಂತಿ | 344-348 | 176-181 |
| ದೈವ ಭಾಗ | 349-355 | 181-189 |
| ದಾತ ತಿಲಘಾತಕ | 356-358 | 189-193 |
| ವಿಧಿಯಂತ್ರ | 359-363 | 193-198 |
| ತಟವಟವೋ ಸೃಷ್ಟಿದಯೆ | 364-368 | 198-204 |
| ಮನವ ತೊರೆದಿರಬಹುದೇ | 369-373 | 204-209 |
| ಮನಸ್ಸಿನ ಹವ | 374-378 | 209-214 |
| ಕುಲಕದಿರು ಬಾಲವನು | 379-383 | 215-219 |
| ಸೃಷ್ಟಿ ಕೀಲು | 384-388 | 220-225 |
| ಸಾಪೇಕ್ಷ ಸತ್ಯ | 389-393 | 225-230 |
| ದೇಹ ಕುದುರೆ-ಆತ್ಮ ಸವಾರ | 394-398 | 230-235 |
| ದೃಶ್ಯ-ನಶ್ಯ-ದರ್ಶನೀಯ | 399-404 | 236-242 |
| ನರ-ನಾರೀ ಪ್ರೇಮ | 405-408 | 242-246 |
| ಮಾನುಷ ಚರಿತ್ರೆ | 409-413 | 246-251 |
| ಪ್ರೇಮ ವಿಕಟ | 414-418 | 252-257 |
| ಭಾವರಾಗೋದ್ರೇಕ | 419-423 | 257-262 |

| | | |
|---|---|---|
| ಮಾನುಷ ಪ್ರೀತಿ | 424–429 | 263–269 |
| ದೃಷ್ಟಿಯಿಂದ ಸಮಷ್ಟಿ | 430–433 | 269–273 |
| ನಗುವಳುವು ರಸಪಾಕ | 434–441 | 273–282 |
| ಸೌಂದರ್ಯ ಮಹಿಮೆ | 442–445 | 282–286 |
| ಬ್ರಹ್ಮಾಸ್ಪಂದನ | 446–448 | 286–289 |
| ದ್ವಂದ್ವ ಸ್ವಾರಸ್ಯ | 449–450 | 289–291 |

# ಮುನ್ನುಡಿ

'ಡಿ.ವಿ.ಜಿ.' ಎಂಬ ಸಂಕೇತಾಕ್ಷರಗಳಿಂದ ಖ್ಯಾತರಾದ ಡಾ|| ಡಿ. ವಿ. ಗುಂಡಪ್ಪನವರು ರಚಿಸಿದ 'ಮಂಕುತಿಮ್ಮನ ಕಗ್ಗ' ಇಪ್ಪತ್ತನೇ ಶತಮಾನದ ಉತ್ತರಾರ್ಧದ ಕನ್ನಡ ಕೃತಿಗಳಲ್ಲಿ ಅತ್ಯಂತ ವಿಶಾಲ ಜನಾದರಣೆಯನ್ನು ಪಡೆದ ಕೃತಿ ಎಂಬ ಸಂಗತಿಯು ವಿವಾದಾತೀತವಾಗಿ ಸಿದ್ಧಪಟ್ಟಿದೆ. ನಿತ್ಯಜೀವನದಲ್ಲಿ ಎದುರಾಗುವ ಯಾವುದೇ ಸಮಸ್ಯೆಯ ಪ್ರಸಕ್ತಿ ಬಂದಾಗಲೂ, ಹಲವಾರು ವೈಪರೀತ್ಯಗಳಿಂದ ಕೂಡಿದ ಜಗತ್ತಿನ ವಿಷಯದಲ್ಲಿ ಸಾಮಾನ್ಯ ವ್ಯಕ್ತಿಯೊಬ್ಬನು ಯಾವ ಮನೋಭಂಗಿಯನ್ನು ಬೆಳೆಸಿಕೊಳ್ಳುವುದು, ನೆಮ್ಮದಿಗೆ ದಾರಿ ಮಾಡಬಹುದೆಂಬುದರ ಪ್ರಸಕ್ತಿ ಬಂದಾಗಲೂ, ಸರ್ವವಿದಿತ ಪೌರಾಣಿಕಾಖ್ಯಾನಗಳಿಂದ ಮತ್ತು ಐತಿಹಾಸಿಕ-ಸಾಹಿತ್ಯಕ ಸಂದರ್ಭಗಳಿಂದ ನಾವು ಕಲಿಯಬಹುದಾದ ಪಾಠಗಳು ಏನೆಂದು ಚಿಂತಿಸುವಾಗಲೂ, ಪರಸ್ಪರ ವಿರುದ್ಧಗಳಂತೆ ತೋರುವ (ಉದಾಹರಣೆ: ಸಂಪ್ರದಾಯ ಮತ್ತು ಆಧುನಿಕತೆ, ಶ್ರದ್ಧೆ ಮತ್ತು ವೈಚಾರಿಕತೆ, ಇತ್ಯಾದಿ) ದ್ವಂದ್ವಗಳ ನಡುವೆ ಸಮನ್ವಯ ಕುರಿತು ಚಿಂತಿಸುವಾಗಲೂ, ಹೀಗೆ ಜೀವನದ ಪ್ರಮುಖ ಸನ್ನಿವೇಶಗಳಲ್ಲಿ ನೆರವನ್ನೀಯುವ ಹಿತವಚನಗಳ ಒಟ್ಟಿಲು 'ಮಂಕುತಿಮ್ಮನ ಕಗ್ಗ'. ಇದಿಷ್ಟು ಪ್ರಯೋಜಕತೆಯ ಮಾತಾಯಿತು. ಎರಡನೆಯದಾಗಿ, ಇಂದಿನವರಿಗೆ ಅತ್ಯಂತ ಉಪಕಾರಕವಾದ ಈ ಹಿತಬೋಧನೆಯನ್ನು ಕಾವ್ಯಮುಕ್ತಕಗಳಾಗಿ ಪದ್ಯರೂಪದಲ್ಲಿ ನಿವೇಶನಗೊಳಿಸಿರುವುದರಿಂದ ಲಬ್ಧವಾಗಿರುವ ಸ್ಮರಣಾನುಕೂಲತೆ. ಮೇಲಿನ ಎರಡೂ ಲಾಕ್ಷಣಿಕ ಅಂಶಗಳು. ಇವೆರಡಕ್ಕೂ ಮೀರಿದ ಒಂದು ಅನನ್ಯತೆ 'ಮಂಕುತಿಮ್ಮನ ಕಗ್ಗ'ದಲ್ಲಿದೆ. ಅದೆಂದರೆ, ಈ ಇಡೀ ಕೃತಿಯ ಅಂತಃಶ್ರುತಿಯಂತೆ ಓದುಗರನ್ನು ತನ್ನೆಡೆಗೆ ಸೆಳೆದುಕೊಳ್ಳುವ ಸ್ನೇಹಧ್ವನಿ. ಇಲ್ಲಿಯ ಅನೇಕ ಉಕ್ತಿಗಳು ಉನ್ನತ ಪಾಂಡಿತ್ಯದಿಂದ, ಶಾಸ್ತ್ರಾಧ್ಯಯನದಿಂದ ಮತ್ತು ಗಾಢ ಲೋಕಾನುಭವದಿಂದ ಜನಿತವಾದವು. ಆದರೆ ಕೃತಿಯಲ್ಲಿ ಎಲ್ಲಿಯೂ 'ನಾನು ಜ್ಞಾನಿ', ಅನುಭವಿ; ನನ್ನ ಮಾತನ್ನು ನೀವೆಲ್ಲ ಕೇಳಿರಿ' ಎಂಬಂತಹ ಠೇಂಕಾರದ ಧ್ವನಿ ಇಲ್ಲ. ಪ್ರತಿಯಾಗಿ ಪದ್ಯಗಳುದ್ದಕ್ಕೂ ಎದ್ದು ಕಾಣುವುದು 'ನಾನು ನಿಮ್ಮಂತಹ ಒಬ್ಬ ಸಾಮಾನ್ಯ; ನಿಮ್ಮಂತೆ ನಾನೂ ಬವಣೆಪಟ್ಟವನು, ನಮ್ಮ ಅನುಭವಗಳನ್ನು ಹಂಚಿಕೊಳ್ಳೋಣ' ಎಂಬ ರೀತಿಯ ನಮ್ರತೆಯಿಂದಲೂ ಮೈತ್ರಿಭಾವದಿಂದಲೂ ಕೂಡಿದ ಪ್ರೇಮಳತೆ, ಲಕ್ಷಾಂತರ ಜನರಿಗೆ 'ಕಗ್ಗ'ದಿಂದ ಸಾಂತ್ವನವೂ ಸಮಾಧಾನವೂ ದೊರೆಯುತ್ತಿರುವುದು ಈ ಆದ್ರತೆಯಿಂದ. ಇದರಿಂದಾಗಿ ಅಸಂಖ್ಯ ಜನರ ಬಾಳಿನಲ್ಲಿ ಓರ್ವ ಆತ್ಮೀಯ ಸ್ನೇಹಿತನ ಸ್ಥಾನವನ್ನು 'ಕಗ್ಗ'ಪಡೆದುಕೊಂಡಿದೆ.

ವರ್ಷಗಳು ಕಳೆದಂತೆ 'ಕಗ್ಗ'ದ ಜನಪ್ರಿಯತೆ ನೂರ್ಮಡಿಯಾಗಿ ಹೆಚ್ಚುತ್ತಿರುವುದು ಸಾಹಿತ್ಯಲೋಕದ ಒಂದು ವಿಸ್ಮಯ. ಕಳೆದ ಅರ್ಧ ಶತಮಾನದುದಕ್ಕೂ ಗ್ರಂಥಗಳಲ್ಲಿ, ಲೇಖನಗಳಲ್ಲಿ, ಉಪನ್ಯಾಸಗಳಲ್ಲಿ, ಚಿಂತನಗೋಷ್ಠಿಗಳಲ್ಲಿ 'ಕಗ್ಗ'ದ ಪದ್ಯಗಳಷ್ಟು ಅಧಿಕವಾಗಿ ಮೇಲಿಂದ ಮೇಲೆ ಉದ್ಧತಗೊಳ್ಳುತ್ತ ಬಂದಿರುವ ಉಕ್ತಿಗಳು ಬೇರೆ ಇಲ್ಲ. 'ಕಗ್ಗ' ನಮ್ಮ ಜನತೆಯ ಮನದಾಳದ ಯಾವುದೋ ಆಕಾಂಕ್ಷೆಗಳಿಗೆ ಸಮಾಧಾನ ನೀಡಲು ಶಕ್ತವಾಗಿದೆ ಎನ್ನಲು ಈ ವಿಶಾಲ

ಜನಾದರಣೆಗಿಂತ ಬೇರೆ ಪುರಾವೆಯ ಅಗತ್ಯ ಇಲ್ಲ. ಯಾವ ರೀತಿಯ ಸಾಂತ್ವನಕ್ಕಾಗಿ ಜನತೆ ಕಾದಿದ್ದಿತೋ ಅದು 'ಕಗ್ಗ'ದಿಂದ ಲಬ್ಧವಾಯಿತೆಂಬುದು ಸ್ಪಷ್ಟವಿದೆ. ಹೀಗೆ ಸಾಹಿತ್ಯಕೃತಿಯೊಂದು ಜನಸಾಮಾನ್ಯರಿಗೆ ಆಪ್ತವಾಗುವುದು ವಿರಳವಾಗಿಯಷ್ಟೆ ನಡೆಯುವ ವಿದ್ಯಮಾನ.



ಈ ಹಿನ್ನೆಲೆಯಲ್ಲಿ 'ಕಗ್ಗ'ದ ಹಲವಾರು ಗದ್ಯಾನುವಾದಗಳೂ, ಅವಲೋಕನಗಳೂ, ವ್ಯಾಖ್ಯಾನಗಳೂ ಪರಾಮರ್ಶನಗಳೂ ಬಂದಿರುವುದು ಮತ್ತು ಈಗಲೂ ಬರುತ್ತಿರುವುದು ಸಹಜವೇ ಆಗಿದೆ. ಈ ಬಗೆಬಗೆಯ ಅನುಕೃತಿಗಳೂ ವಿಶಾಲ ಪ್ರಸಾರವನ್ನು ಪಡೆದುಕೊಂಡಿವೆ ಎಂಬುದು ಡಿ.ವಿ.ಜಿ.ಯವರ ಮೂಲಕೃತಿಯ ಸತ್ಯವಂತಿಕೆಗೆ ಸಾಕ್ಷ್ಯವಾಗಿದೆ. 'ಕಗ್ಗ'ವನ್ನು ಕುರಿತು ವಿವಿಧೆಡೆಗಳಲ್ಲಿ ಪದೇಪದೇ ನಡೆಯುವ ವಾಚನ- ವ್ಯಾಖ್ಯಾನ-ಪ್ರವಚನಗಳೂ ವಿಶಾಲ ಪ್ರಮಾಣದ ಶ್ರೋತೃಗಳನ್ನು ಆಕರ್ಷಿಸಿವೆ. ಮುದ್ರಿತ ರೂಪದಲ್ಲಿ ಮಾತ್ರವಲ್ಲದೆ ವಿದ್ಯುನ್ಮಾನ ಮಾಧ್ಯಮದ ಮೂಲಕವೂ 'ಕಗ್ಗ'ವನ್ನು ಕುರಿತ ವ್ಯಾಖ್ಯಾನಗಳನ್ನು ದೂರದ ಪ್ರದೇಶಗಳ ಮತ್ತು ವಿದೇಶಗಳ ಸಹಸ್ರಾರು ಸಾಹಿತ್ಯ ಪ್ರೇಮಿಗಳು ಆಸ್ವಾದಿಸುತ್ತಿದ್ದಾರೆ. ಈ ಹಿಂದೆಯೇ ಹಲವಾರು ಅನುವಾದ ಅಥವಾ ಅವಲೋಕನ ಕೃತಿಗಳು ಪ್ರಕಟಗೊಂಡಿದ್ದರೂ ಹೊಸ ಕೃತಿಗಳಿಗೂ ಸ್ವಾಗತ ದೊರೆಯುತ್ತಿದೆ.

ಹೀಗೆ ವರ್ಧಿಸುತ್ತ ಸಾಗಿರುವ 'ಕಗ್ಗ' ವಾಙ್ಮಯಕ್ಕೆ ಇದೀಗ ಸೇರ್ಪಡೆಯಾಗುತ್ತಿರುವುದು, ನನ್ನ ಮಿತ್ರರೂ ಮೌಲಿಕ ಸಾಹಿತ್ಯದ ಅಭ್ಯಾಸಿಗಳೂ ಅಧ್ಯಯನಶೀಲರೂ ಆದ ಶ್ರೀ ರವಿ ತಿರುಮಲೈ ರಚಿಸಿರುವ 'ಕಗ್ಗ- ರಸಧಾರೆ" ಎಂಬ ಶೀರ್ಷಿಕೆಯ ನೂತನ ವ್ಯಾಖ್ಯಾನ, 'ಕಗ್ಗ'ದ ಒಂದೊಂದು ಮುಕ್ತಕದಲ್ಲಿಯೂ ಜಗದ್ವಿಶಾಲವಾದ ಭಾವನಾ ಪ್ರಪಂಚವು ಘನೀಕೃತವಾಗಿದೆ. ಅಲ್ಲಿಯ ಶಬ್ದಗಳ ವಾಚ್ಯಾರ್ಥದ ಹತ್ತುಪಟ್ಟು ವಿಸ್ತೃತಾರ್ಥವು ಅಲ್ಲಿಯ ಮಾತುಗಳ ಹಿಂದಿನ ಧ್ವನಿಮೆಯಲ್ಲಿ ಸ್ಫೋಟಗೊಳ್ಳುತ್ತದೆ. ಹೀಗೆ ಒಳಹೊಕ್ಕಷ್ಟೂ ಹೆಚ್ಚುಹೆಚ್ಚು ಅರ್ಥಸೂಕ್ಷ್ಮಗಳು ಪ್ರಕಟಗೊಳ್ಳುತ್ತ ಹೋಗುತ್ತವೆ. ಭೌತಶಾಸ್ತ್ರದ ಪರಿಭಾಷೆಯಲ್ಲಿ ಹೇಳುವುದಾದರೆ 'ಕಗ್ಗ'ದ ಉಕ್ತಿಗಳು 'ಸ್ಟಾಟಿಕ್' ರೀತಿಯವಲ್ಲ, ಅವು 'ಡೈನಾಮಿಕ್' ರೀತಿಯವು, ಎಂದರೆ ಸಂಚಲನಾಶೀಲವಾದವು. ಈ ವೈಶಿಷ್ಟ್ಯದಿಂದಾಗೆಯೇ ಸಹೃದಯ ಓದುಗರಿಗೆ ಈ ಪದ್ಯಗಳಿಂದ ದೊರೆಯುವ ಒಡನಾಟವು ಪ್ರವಾಹರೂಪದ್ದೂ ಸಾತತ್ಯಗುಣವುಳ್ಳದ್ದೂ ಆಗಿದೆ. ಮನನಮಾಡಿ ಧ್ಯಾನಿಸಿದೆಂತೆಲ್ಲ ಹೆಚ್ಚುಹೆಚ್ಚು ಅರ್ಥಸೂಕ್ಷ್ಮಗಳು ಹೊಳೆಯುತ್ತಾ ಹೋಗುತ್ತವೆ.

ಈ ಸತ್ತ್ವವಂತಿಕೆಯ ಕಾರಣದಿಂದ 'ಕಗ್ಗ'ವನ್ನು ಕುರಿತು ಈಗಾಗಲೇ ಹಲವಾರು ಕೃತಿಗಳು ಹೊರಬಂದಿದ್ದರೂ ನೂತನ ಅರ್ಥಶೋಧಗಳಿಗೆ ಸದಾ ಅವಕಾಶ ಉಳಿದೇ ಇರುತ್ತದೆ. ಕೃತಿಯ ಬಳಿಸಾರುವ ಜಿಜ್ಞಾಸುಗಳ ವ್ಯುತ್ಪತ್ತಿಗೂ ಮತ್ತು ಭಂಗ್ಯಂತರಕ್ಕೂ ಅನುಗುಣವಾಗಿ ಒಂದೊಂದು ಅನುಕೃತಿಗೂ ಅದರದ್ದೇ ವೈಶಿಷ್ಟ್ಯವಿರುವುದು ಸಾಧ್ಯವಿದೆ. ಅದರಂತೆ ಪ್ರಕೃತ 'ಕಗ್ಗ-ರಸಧಾರೆ' ವ್ಯಾಖ್ಯಾನ ಕೃತಿಯಲ್ಲಿ ಶ್ರೀ ರವಿ ತಿರುಮಲೈ ಅವರು ಒಂದು ವಿನೂತನ ಪ್ರಸ್ಥಾನವನ್ನು ಸಂಯೋಜಿಸಲು ಯತ್ನಿಸಿದ್ದಾರೆ. ಇಲ್ಲಿ ಪ್ರತಿ ಪದ್ಯದ ಪದವಿಭಾಗ, ಅಲ್ಲಲ್ಲಿ ಕಠಿಣ ಶಬ್ದಾರ್ಥ ಇದ್ದು ಅನಂತರ ಇಂಗಿತಾರ್ಥದ ವ್ಯಾಖ್ಯೆ ಇದೆ.

ಅಭಿಜಾತ ಸಾಹಿತ್ಯದ ವ್ಯಾಸಂಗದ ಹಿನ್ನೆಲೆ ಇದ್ದವರಿಗೆ ಪರಿಚಯವೇ ಆಗಿದ್ದರೂ ಅಂತಹ ಹಿನ್ನೆಲೆ ಇಲ್ಲದವರಿಗೆ ಸುಗಮವಾಗಲೆಂಬ ದೃಷ್ಟಿಯಿಂದ ಪದ್ಯಗಳಲ್ಲಿನ ಗ್ರಾಂಥಿಕ ಪ್ರಯೋಗಗಳಿಗೆ ಹೊಸಗನ್ನಡ ಆಡುಭಾಷೆಯ ವಿವರಣೆಗಳನ್ನು ಇಲ್ಲಿ ಕೊಡಲಾಗಿದೆ. (ಉದಾಹರಣೆ: ಕಗ್ಗ-135ರಲ್ಲಿ ಸಾಮಾನ್ಯ ಓದುಗರಿಗೆ ಸುಬೋಧವಲ್ಲದ 'ಶಂಪಾತರಂಗ' ಎಂದರೆ ಮಿಂಚಿನ ಅಲೆಗಳು ಎಂಬ ಮತ್ತು 'ಧಂಭೋಳಿ' ಎಂದರೆ ವಜ್ರಾಯುಧ ಎಂಬ ವಿವರಣೆ ಸೇರಿಸಲಾಗಿದೆ.) ಮೂಲ ಪದ್ಯದೊಳಗಿನ ಉಲ್ಲೇಖಗಳ ಮತ್ತು ರೂಪಕಗಳ ಅರ್ಥದ ಗ್ರಹಿಕೆಗೆ



ಪೂರಕವಾಗುವಂತೆ ಭೌತಜಗತ್ತಿನ ಮತ್ತು ಮಾನವ ಜೀವನದ ಸನ್ನಿವೇಶಗಳ ವಿವರಗಳನ್ನು ಅಳವಡಿಸಿರುವುದು ಪ್ರಾರಂಭಿಕ ಸ್ತರದ ವಾಚಕ ಸಮುದಾಯಕ್ಕೆ ಪ್ರಯೋಜಕವಾಗಿದೆ. ಅಲ್ಲಲ್ಲಿ ಸಮಾಂತರ ಆಶಯದ ಪೂರ್ವ ಸಾಹಿತ್ಯೋಲ್ಲೇಖಗಳನ್ನು ನೀಡಲಾಗಿದೆ. ಇಲ್ಲಿಯ ಉಕ್ತಿಗಳು ಪ್ರತಿಫಲಿಸುವ ದಾಸಸಾಹಿತ್ಯದ ಉದ್ಧೃತಗಳನ್ನು ಹಲವಾರೆಡೆ ಕೊಡಲಾಗಿದೆ. ಭೌತವಿಶ್ವದ ರಚನೆಯ ವಿಸ್ಮಯಗಳ ಅವಲೋಕನವೇ ಹೇಗೆ ತತ್ತ್ವಬೋಧಕವಾಗಬಲ್ಲದೆಂಬುದನ್ನು ಹಲವಾರೆಡೆ ಸೂಚಿಸಲಾಗಿದೆ. ಉದಾಹರಣೆಗೆ : “ಅಮಿತಪ್ರಪಂಚಾಕುಂಚನಾವರ್ತನ” ಎಂಬ (ಕಗ್ಗ-91) ಸೂತ್ರರೂಪ ಪದಗುಚ್ಛವನ್ನು ಬೀಜದಿಂದ ಮರವಾಗುವ ಪ್ರಕ್ರಿಯೆಯ ಮತ್ತು ರೇಷ್ಮೆಹುಳುವಿನ ಜೀವನಚಕ್ರದ ನಿದರ್ಶನ ನೀಡಿ ಪುಷ್ಟಿಕರಿಸಲಾಗಿದೆ. ಕಗ್ಗ-147ರಲ್ಲಿ ಒಮ್ಮೆ ಮೋಹಕವೆನಿಸಿ ಅನಂತರ ಮೈಮರೆತರೆ ಅಧಃಪತನಕಾರಿಯಾಗುವ ಮಾಯೆಯ ಸ್ವರೂಪವನ್ನು ವರ್ಣಿಸುವಲ್ಲಿ ಜೀವನನಿರ್ವಹಣೆಯಲ್ಲಿ ಅಂತರ್ವಿವೇಚನೆಗೆ ಇರಬೇಕಾದ ಮುಖ್ಯ ಸ್ಥಾನವನ್ನು ವಿವರಿಸಲಾಗಿದೆ. 'ಕರವೆರಡರದೃಷ್ಟಕ್ಕೆ'

ಎಂಬ ಕಗ್ಗ-158ರಲ್ಲಿ ಅಧ್ಯಾಹೃತವಾಗಿರುವ ಹಸ್ತಸಾಮುದ್ರಿಕ ವಿವರವನ್ನು ಲೇಖಕರು ಸ್ಫುಟಗೊಳಿಸಿದ್ದಾರೆ. ಕಗ್ಗ-162ರಲ್ಲಿ 'ಬಿಗಿಯದಿರು ನೀಂ ಬೀಗಿ' ಎಂಬ ವಾಕ್ಯಖಂಡಿಕೆಯಲ್ಲಿ ಹುದುಗಿರುವ ಶರಣಾಗತಿತ್ವದ ಉಪಾದೇಯತೆಯನ್ನು ಕಂಠೋಕ್ತಗೊಳಿಸಿದ್ದಾರೆ. ಕಗ್ಗ-185ರಲ್ಲಿ 'ಹೃದಯಜೀವನಕಿನಿತು ಬೆಲೆಯಿರದೇ?' ಎಂಬ ಮಾತುಗಳ ಆಶಯವನ್ನು ಸಾಂಪ್ರತಕಾಲದ ಕೇವಲ ವ್ಯವಹಾರ ಪ್ರಧಾನವೂ ಮೌಲ್ಯದೂರವೂ ಆದ ರೀತಿ-ನೀತಿಗಳ ಪ್ರಸ್ತಾಪದ ಮೂಲಕ ಸ್ಪಷ್ಟಗೊಳಿಸಿದ್ದಾರೆ, ಕಗ್ಗ ರಸಧಾರೆಯ ಮೊದಲ ಸಂಪುಟದಲ್ಲಿ.

ಇನ್ನು ಎರಡನೇ ಸಂಪುಟದಲ್ಲಿ ಅದೇ ದಾಟಿಯನ್ನು ಮುಂದುವರೆಸುತ್ತಾ ಮುಕ್ತಕ 201 ರಲ್ಲಿ ದುರ್ಯೋಧನನ ದೃಷ್ಟಾಂತದಿಂದ ಮಾನವರಲ್ಲಿರುವ 'ಅಸೂಯೆಯನ್ನು, ಮುಕ್ತಕ 231ರಲ್ಲಿ ಬದುಕನ್ನು ಹೇಗೆ ನೋಡಬೇಕು ಎನ್ನುವ ಸತ್ವವನ್ನು, ಮುಕ್ತಕ 234 ರಲ್ಲಿ "ಅನ್ಯಾಯ ವಿಕಟಗಳೆನಿತೋ ಸೃಷ್ಟಿಕ್ರಮದಿ" ಎಂದು ಪರಮಾತ್ಮನ ಸೃಷ್ಟಿಯನ್ನೇ ಪ್ರಶ್ನಿಸುವ ಮನುಷ್ಯನ ವಿಚಿತ್ರ ಮನೋಭಾವವನ್ನೂ, ಮುಕ್ತಕ 270ರಲ್ಲಿ ಸಮಾಜದಲ್ಲಿರಬೇಕಾದ 'ಏಕಾತ್ಮತಾ' ಭಾವದ ಅವಶ್ಯಕತೆಯನ್ನೂ, ಮುಕ್ತಕ 304ರಲ್ಲಿ 'ಗ್ರೀಕ್ ದೇಶದ ಸಿಸಿಫಸ'ನ ಕಥೆಯನ್ನು ದೃಷ್ಟಾಂತವಾಗಿ ನೀಡುತ್ತಾ ಮಾನವ ಪ್ರಯತ್ನದ ಮಿತಿಗಳನ್ನೂ, ವಿಶಧೀಕರಿಸುತ್ತಾ ಹೋಗಿದ್ದಾರೆ.

ಹೀಗೆ 'ಕಗ್ಗ'ದ ಪದ್ಯಗಳ ಆಶಯದ ತಳಹದಿಯಾಗಿರುವ ಸತರ್ಕ ಚಿಂತನ ವಿನ್ಯಾಸದ ಹಂತಗಳನ್ನು ಸ್ಫುಟಗೊಳಿಸುವ ರೀತಿಯಲ್ಲಿ ಪ್ರಕೃತ 'ಕಗ್ಗ-ರಸಧಾರೆ' ವ್ಯಾಖ್ಯಾನವು ರೂಪುಗೊಂಡಿದೆ. ಪ್ರಕೃತ ಸಂಪುಟದಲ್ಲಿ 'ಕಗ್ಗ'ದ ಇನ್ನೂರ ಒಂದರಿಂದ ನಾನೂರ ಐವತ್ತರ ತನಕದ ಪದ್ಯಗಳ ಮೇಲಣ ವ್ಯಾಖ್ಯಾನವಿದೆ. ಉಳಿದ ಮುಂದಿನ ಪದ್ಯಗಳ ವ್ಯಾಖ್ಯಾನಗಳು ಈ ಸರಣಿಯ ಮೂರು ಮತ್ತು ನಾಲ್ಕನೇ ಸಂಪುಟಗಳಲ್ಲಿ ಸಂಪನ್ನಗೊಳ್ಳಲಿವೆ.

ಶ್ರೀ ರವಿ ತಿರುಮಲೈ ಅವರ ಈ ಶ್ರದ್ಧಾಪೂರ್ವಕ ಸಾಹಿತ್ಯ ಕೈಂಕರ್ಯಕ್ಕಾಗಿ ಅವರನ್ನು ಅಭಿನಂದಿಸುತ್ತ ಈ ನೂತನ ವ್ಯಾಖ್ಯಾನಕ್ಕೆ ವಾಚಕರ ಪ್ರೋತ್ಸಾಹವೂ, ಸಹೃದಯ ಸ್ಪಂದನವೂ ದೊರೆಯಲೆಂದು ಹಾರೈಸುತ್ತೇನೆ.

ಶ್ರೀ ಜಯ ಸಂವತ್ಸರ, ಚಾಂದ್ರಮಾನ ಉಗಾದಿ, **ಡಾ|| ಎಸ್. ಆರ್. ರಾಮಸ್ವಾಮಿ**

ಚೈತ್ರ ಶುದ್ಧ, ಪಾಡ್ಯ, 31. 3. 2014

# ಪ್ರಸ್ತಾವನೆ

ನಾನು ಸಾಹಿತಿಯೂ ಅಲ್ಲ, ಲೇಖಕನೂ ಅಲ್ಲ. ಹತ್ತಾರು ವಿಧವಾದ ಜೀವನಾನುಭವಗಳನ್ನು ಪಡೆದ ನನಗೆ ಶ್ರೀ ಹೆಚ್. ವಿ. ಶ್ರೀಕಾಂತ್‌ರವರು ಬರೆದ 'ಮಂಕುತಿಮ್ಮನ ಕಗ್ಗ-ತಾತ್ಪರ್ಯ' ಒಂದು ನಿಧಿಯೇ ಸಿಕ್ಕಂತಾಗಿತ್ತು. ಕನ್ನಡ ಸಾಹಿತ್ಯ ಲೋಕದಲ್ಲಿ ಅತೀ ಹೆಚ್ಚು ಮನ್ನಣೆಯನ್ನು ಪಡೆದ ಮೇರು ಕೃತಿ ಮಂಕುತಿಮ್ಮನ ಕಗ್ಗ. ಆದರೆ ಈ ಕೃತಿಗೆ ಸಾಹಿತ್ಯ ಅಕಾಡಮಿ ಪ್ರಶಸ್ತಿಯಾಗಲಿ, ಜ್ಞಾನಪೀಠ ಪ್ರಶಸ್ತಿಯಾಗಲೀ ಲಭ್ಯವಾಗಲಿಲ್ಲ. ಆದರೆ ಈ ಕೃತಿಗೆ 'ನೋಬಲ್' ಬಹುಮಾನ ಸಿಕ್ಕಿದ್ದರೂ ಅದು ನೋಬಲ್‌ಗೆ ಹಿರಿಮೆಯಾಗುತ್ತಿತ್ತೇ ವಿನಃ ಮಂಕುತಿಮ್ಮನ ಕಗ್ಗಕ್ಕಲ್ಲ. ಏಕೆಂದರೆ ಎಲ್ಲ ಹಿರಿಮೆಗಳನ್ನೂ ತನಲ್ಲೇ ಅಡಕವಾಗಿಟ್ಟುಕೊಂಡಿರುವ ಮಂಕುತಿಮ್ಮನ ಕಗ್ಗವನ್ನು ಯಾರಾದರೂ ಕೊಂಡಾಡಿದರೆ ಅದು ಕೊಂಡಾಡುವವರಿಗೆ ಹಿರಿಮೆಯಷ್ಟೇ!! ಮುಖಪುಸ್ತಕದ (facebook) ನನ್ನ ಸಹೃದಯ ಮಿತ್ರರ ಒತ್ತಾಸೆಯಿಂದ ಪ್ರತಿ ನಿತ್ಯ ನಾನು ಬರೆಯುವ "ಮಂಕುತಿಮ್ಮನ ಕಗ್ಗ - ರಸಧಾರೆ" ಈಗ್ಗೆ ಎರಡು ವರ್ಷಗಳಿಂದ ಅವ್ಯಾಹತವಾಗಿ ಹರಿದು ಬರುತ್ತಿದೆ. ಹೀಗೆ ಹರಿದು ಬಂದ ಮೊದಲ 200 ರಸಧಾರೆಗಳನ್ನು ಕಳೆದ ವರ್ಷ ಮಾರ್ಚ್ ತಿಂಗಳ 17ರಂದು ಪುಸ್ತಕ ರೂಪದಲ್ಲಿ ಲೋಕಾರ್ಪಣೆ ಮಾಡಲಾಯಿತು. "ಮಂಕುತಿಮ್ಮನ ಕಗ್ಗರಸಧಾರೆ", ಸಂಪುಟ-ಎರಡು ಈಗ ಸಂಪೂರ್ಣಗೊಂಡು ನಿಮ್ಮ ಕೈಯಲ್ಲಿದೆ.

ಬರೆಯಲೇನೋ ಮೊದಲಾದೆ. ಆದರೆ ಮನಸ್ಸಿನ ಒಂದು ಮೂಲೆಯಲ್ಲಿ ಒಂದು "ಭಯ" ಎಚ್ಚರಿಸುತ್ತಲೇ ಇತ್ತು. ಕಾಳಿದಾಸ 'ರಘುವಂಶ' ಕಾವ್ಯವನ್ನು ಬರೆಯಲುದ್ಯುಕ್ತನಾದಾಗ ಅವನಿಗೆ ಉಂಟಾದ ಶಂಕೆಗಳೇ ನನ್ನ ಮನಸ್ಸಿನಲ್ಲೂ ಸುಳಿದಾಡಿದವು. ಕಾಳಿದಾಸ ಬರೆಯುತ್ತಾನೆ, "ಕ್ವ ಸೂರ್ಯಃ ಪ್ರಭವೋ ವಂಶಃ, ಕ್ವಚಾಲ್ಪ ವಿಷಯಾ ಮತಿಃ ತಿತೀರ್ಶುರ್ದುಸ್ತರಂ ಮೋಹಾತ್ ಉಡುಪೇನಾಸ್ಮಿ ಸಾಗರಂ" ಅರ್ಥಾತ್, ಎಲ್ಲಿ ಸೂರ್ಯ ಪ್ರಭೆಯಷ್ಟು ಪ್ರಾಜ್ವಲ್ಯಮಾನವಾದ ರಘುವಂಶ, ಅಲ್ಪ ವಿಷಯಗಳನ್ನರಿತ ನಾನೆಲ್ಲಿ, ಒಂದು ಸಣ್ಣ ಹರಿಗೋಲಿನ ಸಹಾಯದಿಂದ, ದುಸ್ತರವಾದ ಮತ್ತು ವಿಶಾಲವಾದ ಸಾಗರವನ್ನು ದಾಟಲು ಅತ್ಯಾಸೆಪಡುವವನಂತಿದೆ ನನ್ನ ಸ್ಥಿತಿ, ಎಂದು ಹೇಳುತ್ತಾನೆ.

ಜ್ಞಾನದ ಯಾವ ಭಾಗವನ್ನೂ ಆಳವಾಗಿ ಅಭ್ಯಾಸ ಮಾಡದ, ಅಲ್ಪ ಮತಿಯಾದ ನಾನು ಈ "ಕಗ್ಗ"ವೆಂಬ ಮಹಾಸಾಗರದಲ್ಲಿ ಈಜಲು ಮತ್ತು ಈಜಿ ದಾಟಲು ಅತಿ ಆಸೆಯಿಂದ ಹೊರಟಂತೆ ಇತ್ತು ನನ್ನ ಪರಿಸ್ಥಿತಿ. ಮೊದಮೊದಲು ಬಹಳ ಅಳುಕಿನಿಂದಲೇ ಬರೆಯಲು ಶುರುಮಾಡಿದೆ. ಗುಂಡಪ್ಪನವರು ಈ ಮುಕ್ತಕಗಳಲ್ಲಿ ಎರಕ ಹೊಯ್ದಿರುವ ವಿಚಾರಗಳನ್ನು ಮನದೊಳಕ್ಕೆ ಇಳಿಸಿಕೊಳ್ಳುತ್ತಾ ನನ್ನ ವಿಚಾರಗಳೂ ವಿಕಾಸ ಗೊಳ್ಳತೊಡಗಿದವು. ನಾನೂ ಸಹ ಇದನ್ನೊಂದು ಕಲಿಕೆಯ ಮಾಧ್ಯಮವಾಗಿ ಅನುಭವಿಸುತ್ತಾ ಹೋದೆ.

ಇದಕ್ಕೂ ಮುಂಚೆ ನಾನು ಆರನೇ ತರಗತಿಯಲ್ಲಿ ಓದುತ್ತಿದ್ದಾಗ, ಮಾನ್ಯ ಡಿ.ವಿ.ಜಿ.ಯವರ "ವನಸುಮದೊಳೆನ್ನ ಜೀವನವು ವಿಕಸಿಸುವಂತೆ" ಎನ್ನುವ ಪದ್ಯ ನನ್ನನ್ನು ಬಹಳ ಆಕರ್ಷಿಸಿತ್ತು. ಶ್ರಾವ್ಯವಾಗಿ ಹಾಡುವ ಪ್ರಯತ್ನವನ್ನೂ ಸಹ ಮಾಡಿದ್ದೆ. ವೇದಾಂತದ ಸಾರವನ್ನು ಆ ಪದ್ಯದ ಸಾಲುಗಳಲ್ಲಿ ಗುಂಡಪ್ಪನವರು ತುಂಬಿ ಬಿಟ್ಟಿದ್ದಾರೆ ಎಂದು ನನಗೆ ಈಗ ಅನಿಸಿತು. ಈ ಕಗ್ಗದ ಮುಕ್ತಕಗಳನ್ನು ಓದಿದ ನಂತರ, ಆ ನಂಬಿಕೆ ದೃಢವಾಯಿತು. "ವಿಪುಲಾಶ್ರಯವನೀವ ಸುಫಲ ಸುಮಭರಿತ ಪಾದಪದಂತೆ" ಎಂಬಂತೆ ತಮ್ಮ ಜೀವನವನ್ನೂ ಮಾನ್ಯ



ಗುಂಡಪ್ಪನವರು ನಡೆಸಿದರೆಂದೂ ನಾ ಬಲ್ಲೆ. ಅಂತಹ ಮಹನೀಯರು ಬರೆದ ಈ ಮುಕ್ತಕಗಳಿಗೆ, ವಿವರಣೆ ನೀಡುವ ಸೌಭಾಗ್ಯವನ್ನೂ ಅವರೇ ನನಗೆ ದಯ ಪಾಲಿಸಿದ್ದೆಂದು ನಾ ತಿಳಿದಿದ್ದೇನೆ.

ಜೀವನದಲ್ಲಿ ಪ್ರತಿಯೊಬ್ಬರ ಮನಗಳಲ್ಲೂ ಸಹಜವಾಗಿ ಉದ್ಭವವಾಗುವ ಸಾವಿರಾರು ಪ್ರಶ್ನೆಗಳಿಗೆ ಉತ್ತರಗಳು ಸಿಗುತ್ತವೆ ನಮಗೆ ಈ ಮುಕ್ತಕಗಳಲ್ಲಿ. ಇವುಗಳ ಪಠಣದಿಂದ ಅಧ್ಯಾತ್ಮಿಕವಾಗಿ ನಮಗಿರುವ ಸಂದೇಹಗಳಿಗೆ ಉತ್ತರವನ್ನು ಕಂಡುಕೊಳ್ಳುವ ಉಪಾಯವನ್ನು ಮಾನ್ಯ ಗುಂಡಪ್ಪನವರು ಸೂಚಿಸಿದ್ದಾರೆ. ತತ್ವಶಾಸ್ತ್ರದ ಶಿಖರದಲ್ಲಿ ನಿಂತು, ಅಧಿಕಾರಯುಕ್ತವಾಗಿ ತತ್ವದ ಮತ್ತು ಸತ್ವದ ಸಮಗ್ರ ದರ್ಶನವನ್ನು ನೀಡುವ "ಮಂಕುತಿಮ್ಮನ ಕಗ್ಗ" ಕನ್ನಡ ಸಾಹಿತ್ಯದ ಮೇರುಕೃತಿ ಎಂಬುವುದರಲ್ಲಿ ಸಂದೇಹವೇ ಇಲ್ಲ. ಇದು ತತ್ವಶಾಸ್ತ್ರವಾಗಿ, ದರ್ಶನವಾಗಿ ಮತ್ತು ಅತ್ಯುತ್ತಮ ಸಾಹಿತ್ಯಕ ಕೃತಿಯಾಗಿ ಆರು ದಶಕಗಳಿಗೂ ಮೀರಿ, ಸಾರ್ವಕಾಲಿಕ ಸತ್ಯವನ್ನು ನಿರಂತರವಾಗಿ ಪ್ರತಿಪಾದಿಸುತ್ತಿದೆ.

ಡಿ.ವಿ.ಜಿ.ಯವರು ಕ್ಲುಪ್ತವಾಗಿ ಮತ್ತು ಚೊಕ್ಕವಾಗಿ ಬರೆದ ನಾಲ್ಕು ಸಾಲುಗಳನ್ನು ಪುಟಗಟ್ಟಲೆ ಬರೆಯುವ ಅವಶ್ಯಕತೆ ಏನು? ಎಂದು ಒಂದು ಸಂದೇಹವೂ ನನ್ನ ಮನದಲ್ಲಿ ಬಂದದ್ದು ಉಂಟು. ಆದರೆ ಕಗ್ಗದ ಮುಕ್ತಕಗಳು ಹಳೆಗನ್ನಡದಲ್ಲಿವೆ. ಇಂದಿನ ಪೀಳಿಗೆಗೆ ಕನ್ನಡವನ್ನು ಓದುವುದೇ ಕಷ್ಟ, ಇನ್ನು ಅವರಿಗೆ ಹಳೆಗನ್ನಡವನ್ನು ಓದುವುದು ಸಾಧ್ಯವಿಲ್ಲ ಅಥವಾ ಕಷ್ಟ ಸಾಧ್ಯ. ಅಷ್ಟೇ ಅಲ್ಲ ಇದು ತತ್ವಶಾಸ್ತ್ರ, ಬಹಳ ಕ್ಲಿಷ್ಟವಾದ ವಿಷಯ. ಹಾಗಾಗಿ ಹಳೆಗನ್ನಡದ ಪ್ರಯೋಗವಿರುವ ಮತ್ತು ಉನ್ನತವಾದ ತತ್ವಶಾಸ್ತ್ರವನ್ನು ಪ್ರತಿಪಾದಿಸುವ ಈ ಮುಕ್ತಕಗಳನ್ನು ಓದಿ ಅರ್ಥಮಾಡಿಕೊಳ್ಳುವುದೆಂದರೆ "ನೀರಿಳಿಯದ ಗಂಟಲಲ್ಲಿ ಕಡುಬು ತುರುಕಿದಂತಾಯ್ತು'' ಎಂದು ಮುದ್ದಣನಿಗೆ

ಮನೋರಮೆ ಹೇಳಿದಂತಾಯ್ತು. 'ಕಗ್ಗವೆಂದರೆ ಕಗ್ಗಂಟು' ಎಂದು ಅದನ್ನು ನೋಡಿ "ಅಯ್ಯೋ ಇದು ನಮಗೆ ಅರ್ಥವಾಗುವುದಿಲ್ಲ" ಎನ್ನುವವರನ್ನು ನಾ ನೋಡಿದ್ದೇನೆ. ಆದ್ದರಿಂದಲೇ, ಈ ಮುಕ್ತಕಗಳ ಸಾರಾಂಶವನ್ನು ನನ್ನ ಮಿತ ಅರಿವಿನ ಪರಿಧಿಯೊಳಗೆ ಸರಳವಾದ ಭಾಷೆಯಲ್ಲಿ ಓದುಗರಿಗೆ ತಿಳಿಸಲು ಪ್ರಯತ್ನಪಟ್ಟಿದ್ದೇನೆ.

ಡಿ.ವಿ.ಜಿ.ಯವರ "ಮಂಕುತಿಮ್ಮನ ಕಗ್ಗ"ಗಳ ಒಂದೊಂದು ಮುಕ್ತಕವೂ ಮುಕ್ತವಾಗಿ ಒಂದು ತತ್ವವನ್ನು ಪ್ರತಿಪಾದಿಸುತ್ತದೆ. ಒಂದೊಂದು ಮುಕ್ತಕಕ್ಕೂ ಒಂದೊಂದು ಪುಸ್ತಕವನ್ನೇ ಬರೆಯಬಹುದು. ಒಂದೊಂದು ಮುಕ್ತಕವೂ ಜ್ಞಾನಿಗಳ ಕೈಯಲ್ಲಿ ಸಿಕ್ಕಾಗ, ವಜ್ರ ತಿಕ್ಕಿದಷ್ಟೂ ಹೊಳಪು ಹೆಚ್ಚಾಗುವಂತೆ, ಹೊಸ ಹೊಸ ಹೊಳಹುಗಳು, ಆಯಾಮಗಳ ವ್ಯಾಖ್ಯಾನ ಸಿಗುತ್ತದೆ. ಏಕೆಂದರೆ ಈ ಮುಕ್ತಕಗಳು ಪ್ರತಿಪಾದಿಸುವುದು ಸಾರ್ವಕಾಲಿಕ ತತ್ವಾಧಾರಿತ ಸತ್ಯಗಳು. ಆದರೆ ನಾನು ಜ್ಞಾನಿಯಲ್ಲ. ನಾನು ಜ್ಞಾನ ಪಿಪಾಸು. ಈ ಮುಕ್ತಕಗಳು ನನ್ನ ಪಿಪಾಸೆಯನ್ನು ತಣಿಸುವಲ್ಲಿ ಬಹಳ ಉಪಯುಕ್ತವಾಗಿವೆ. ಪ್ರತಿಯೊಬ್ಬರೂ ಅವರವರದೇ ರೀತಿಯಲ್ಲಿ, ಅವರವರ ವಿದ್ಯೆ ಅನುಭವ, ಕಲಿಕೆ ಮತ್ತು ಸಂಸ್ಕಾರಗಳ ಆಧಾರದ ಮೇಲೆ ಇದಕ್ಕೆ ತಮ್ಮದೇ ಆದ ಒಂದು ಭಿನ್ನವಾದ ವ್ಯಾಖ್ಯಾನವನ್ನು ಮಾಡಬಹುದು. ಗುಂಡಪ್ಪನವರ ಈ ಮುಕ್ತಕಗಳು ಪ್ರತಿಯೊಬ್ಬರಿಗೂ ಅಂತಹ ಅವಕಾಶವನ್ನು ಕಲ್ಪಿಸಿದೆ. ಯಾರ ಪಾತ್ರೆ ದೊಡ್ಡದೋ ಅವರ ಗ್ರಹಿಕೆಯೂ ಅಷ್ಟೇ ದೊಡ್ಡದಾಗಿರುತ್ತದಲ್ಲವೇ?

ಹೀಗೆ ನನ್ನ ಜ್ಞಾನ ದಾಹವನ್ನು ತೀರಿಸಿಕೊಳ್ಳಲು ನಾನು ಪ್ರಯತ್ನಪಟ್ಟಾಗ, ಫಲ ಸ್ವರೂಪದಲ್ಲಿ ಹೊರಬಂದದ್ದೇ "ಕಗ್ಗ ರಸಧಾರೆ", ಪ್ರತಿಯೊಂದು ಮುಕ್ತಕವನ್ನೂ ಬಿಡಿಸಲು ಕೈಗೆತ್ತಿಕೊಂಡಾಗ ಒಂದು ಹೊಸ ಹೊಳಹು, ಒಂದು ಹೊಸ ವಿಚಾರ ಮತ್ತು ಒಂದು ಹೊಸ ತತ್ವ ಕಣ್ಣ ಮುಂದೆ ನಿಲ್ಲುತ್ತಿತ್ತು. ಪ್ರತಿಯೊಂದು ಮುಕ್ತಕವನ್ನೂ,

ನನ್ನ ಪರಿಮಿತ ಮತಿಯ ಪರಿಧಿಯೊಳಗೆ ಬಿಡಿಸಲು ಪ್ರಯತ್ನಪಟ್ಟಿದ್ದೇನೆ. ನಾನು ಬರೆದಿರುವ ವಿವರಣೆ, ವ್ಯಾಖ್ಯಾನಗಳ ಪ್ರಸ್ತುತತೆ, ಕೇವಲ ನನ್ನ ಜೀವನಾನುಭವ, ನಾ ಹಲವರಿಂದ ಕಲಿತ ಜೀವನದ ಪಾಠ ಮತ್ತು ನಾನು ಓದಿದ ಪುಸ್ತಕಗಳ ಆಧಾರಿತವಾಗಿವೆ.

"ಕಗ್ಗ ರಸಧಾರೆ" ಕೇವಲ ಭಗವತ್ ಪ್ರೇರಣೆಯಿಂದ ನನ್ನಿಂದ ಬರೆಯಿಸಲ್ಪಟ್ಟಿದೆ. ಹೀಗೆ ನನ್ನನ್ನು ಬರೆಯಲು ಪ್ರೇರೇಪಿಸಿದ ಆ ಪರಮ ಚೇತನಕ್ಕೆ ಮತ್ತು ಆ ಪರಮ ಚೇತನದ ಪ್ರತಿರೂಪಗಳಾಗಿ ನನ್ನನ್ನು ಬರೆಯುವಲ್ಲಿ ಮತ್ತು ಇದನ್ನು ಪುಸ್ತಕ ರೂಪದಲ್ಲಿ ತರಲು ಪ್ರೋತ್ಸಾಹಿಸಿದ ನನ್ನ ಸಹೃದಯ ಮಿತ್ರರಿಗೂ ನನ್ನ ಅನಂತನಮನಗಳು.

ನನ್ನ ಈ ಪ್ರಯತ್ನದಲ್ಲಿ ನನಗೆ ದಾರಿದೀಪವಾಗಿ ಮಾನ್ಯ ಶ್ರೀ ಶ್ರೀಕಾಂತ್‌ರವರೂ ಮತ್ತು ಮಾನ್ಯ ಶ್ರೀ ಡಿ. ಆರ್. ವೆಂಕಟರಮಣನ್ ಅವರೂ ತಮ್ಮ ಕೃತಿರೂಪದಲ್ಲಿ ನನಗೆ ಸಹಕಾರಿಯಾಗಿದ್ದಾರೆ. ಅವರಿಗೆ ನನ್ನ ಅನಂತ ಧನ್ಯವಾದಗಳು.

**ಎಷ್ಟು ಚಿಂತಿಸಿದೊಡಂ ಶಂಕೆಯನೆ ಬೆಳೆಸುವೀ ।**
**ಸೃಷ್ಟಿಯಲಿ ತತ್ತ್ವವೆಲ್ಲಿಯೋ ಬೆದಕಿ ನರನು ॥**
**ಕಷ್ಟಪಡುತಿರಲೆನುವುದೇ ಬ್ರಹ್ಮ ವಿಧಿಯೇನೋ! ।**
**ಅಷ್ಟೇ ನಮ್ಮಯ ಪಾಡು?- ಮಂಕುತಿಮ್ಮ ॥**

ಎಂದು ಸಾವಿರಾರು ಪ್ರಶ್ನೆಗಳನ್ನು ತಮ್ಮ ಮೊದಲ 40 ಮುಕ್ತಕಗಳಲ್ಲಿ ನಮ್ಮ ಮುಂದೆ ಇರಿಸಿರುವ ಮಾನ್ಯ ಗುಂಡಪ್ಪನವರು, ನಮ್ಮ ಸ್ವತಂತ್ರ ಚಿಂತನೆಗೆ ಸಾಕಷ್ಟು ಅವಕಾಶವನ್ನು ಮಾಡಿಕೊಟ್ಟಿದ್ದಾರೆ. ಪ್ರತೀ ಮುಕ್ತಕದಲ್ಲೂ ಅವರು ಉಲ್ಲೇಖಿಸಿರುವ ಪ್ರಶ್ನೆಗಳು ಜಿಜ್ಞಾಸುವಿಗೆ ಒಂದು ದೀರ್ಘ ತಪಸ್ಸನ್ನು ಮಾಡುವಷ್ಟು ಹರಹನ್ನು ನೀಡುತ್ತದೆ. ಈ "ಮಂಕುತಿಮ್ಮನ ಕಗ್ಗ" ಒಂದು ಜೀವನ ದರ್ಶನ.

ಜಿಜ್ಞಾಸೆ ಹೆಚ್ಚಾಗಿ ಜ್ಞಾನ ಮನದಲ್ಲಿ ತುಂಬಿದಾಗ, ಲೋಕ ಕಲ್ಯಾಣಕ್ಕಾಗಿ ಅದನ್ನು ಹೊರಹಾಕುವುದು "ಋಷಿ ಸಂಸ್ಕೃತಿ". ಗುಂಡಪ್ಪನವರೇ ಒಂದು ಕಡೆ "ಯಾವ ತಿಳುವಳಿಕೆ ನಮ್ಮ ಜನಕ್ಕೆ ಇದ್ದರೆ ಸೂಕ್ತ ಎಂದು ನನಗೆ ಅನ್ನಿಸಿತೋ, ಅಂತಹ ತಿಳುವಳಿಕೆಯನ್ನು ನಾನು ಮೊದಲು ಸಂಪಾದಿಸಿಕೊಂಡು ಇತರರಿಗೆ ತಿಳಿಯಪಡಿಸ ಬೇಕೆಂದೂ, ಜೀವನದ ಯಾವ ಸೊಬಗನ್ನು ನಾನು ಅನುಭವಿಸಿದಾಗ, ಅದನ್ನು ಇತರರೂ ಅನುಭವಿಸಿಯಾರೆಂದು ನನಗನ್ನಿಸಿತೋ

ಅಂತಹ ಸೊಗಸನ್ನು ತೋರಿಸುವುದು ನನ್ನ ಎಲ್ಲ ಬರವಣಿಗೆಯಲ್ಲೂ, ಮಾತಿನಲ್ಲೂ ಇರುವ ತಾತ್ಪರ್ಯ" ಎಂದು ಹೇಳುತ್ತಾರೆ. ಪುರಾತನ ಋಷಿ ಮುನಿಗಳು ಈ ಜಗತ್ತಿಗೆ ಯಾವ ಉದ್ದೇಶದಿಂದ ವೇದೋಪನಿಷತ್ತುಗಳನ್ನು ನೀಡಿದರೋ ಅಂತಹ ಉದಾತ್ತ ಉದ್ದೇಶವು ನಮ್ಮ ಗುಂಡಪ್ಪನವರದಾಗಿತ್ತು. ಆ ದೃಷ್ಟಿಯಲ್ಲಿ ನೋಡಿದಾಗ, ನಮ್ಮ ಗುಂಡಪ್ಪನವರು "ಋಷಿ" ತುಲ್ಯರು. ಅವರಿಗೆ ನನ್ನ ಸಾಷ್ಟಾಂಗ ನಮನಗಳು.



ಮಾನ್ಯ ಗುಂಡಪ್ಪನವರ ಒಡನಾಟದ ಭಾಗ್ಯವನ್ನು ಪಡೆದ ಗೋಖಲೆ ಸಂಸ್ಥೆಯ ಮುಖ್ಯಸ್ಥರಾದ ಮಾನ್ಯ ಡಾ. ಎಸ್.ಆರ್. ರಾಮಸ್ವಾಮಿಗಳ ಸಹೃದಯದ 'ಮುನ್ನುಡಿ'ಗೆ ನಾ ಆಭಾರಿಯಾಗಿದ್ದೇನೆ.

ಈ ಪುಸ್ತಕದ ಮುಖಪುಟಕ್ಕೆ, ತಾವು ಬರೆದ ಡಿ.ವಿ.ಜಿ.ಯವರ ಚುಕ್ಕಿ ಚಿತ್ರವನ್ನು ಉಪಯೋಗಿಸಲು ಅನುಮತಿ ನೀಡಿದ ಮಾನ್ಯ ಶ್ರೀ ಮೋಹನ್ ವರ್ಣೇಕರ್‌ರವರಿಗೆ ನನ್ನ ಹೃತ್ಪೂರ್ವಕ ಧನ್ಯವಾದಗಳು.

ಈ ಪುಸ್ತಕದ ಪ್ರಕಟಣೆಗೆ ಕೃಪೆಮಾಡಿ ಅನುಮತಿಸಿದ 'ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ'ಗೆ ನಾನು ಆಭಾರಿಯಾಗಿದ್ದೇನೆ.

ಈ ಪುಸ್ತಕದಲ್ಲಿ ಬರೆದ ಹಲವಾರು ವಿಚಾರಗಳನ್ನು ವಿಮರ್ಶೆಗೆ ಒಳಪಡಿಸಿ, ನನ್ನನ್ನು ತಿದ್ದಿ ತಮ್ಮ ಅನುಭವವನ್ನು ನನಗೆ ಎರಕ ಹೊಯ್ದು 'ಕಗ್ಗದ ಭಟ್ಟರು' ಎಂದೇ ಪ್ರಸಿದ್ಧರಾದ ಮಾನ್ಯ ಶ್ರೀ ಹೆಚ್. ಎಸ್. ಲಕ್ಷ್ಮೀ ನಾರಾಯಣ ಭಟ್ಟರಿಗೂ ನನ್ನ ತುಂಬು ಹೃದಯದ ಕೃತಜ್ಞತೆಗಳು. ಈ ಪುಸ್ತಕದ ಪ್ರಕಟಣೆಗೆ ಅನುಕೂಲವಾದ ಅಮೂಲ್ಯ ಸಲಹೆಯನ್ನಿತ್ತ ನವಕರ್ನಾಟಕ ಪಬ್ಲಿಕೇಷನ್‌ನ ಶ್ರೀ ಉಡುಪರಿಗೂ ನಾನು ಕೃತಜ್ಞನಾಗಿದ್ದೇನೆ.

ವಿಚಾರಗಳ ಸಂಕೀರ್ಣತೆ ಮತ್ತು ಕ್ಲಿಷ್ಟತೆಗಳು ಇದಿರಾದಾಗ, ನನ್ನ ಸಹಾಯಕ್ಕೆ ಬಂದವರು ಮತ್ತು ಕಗ್ಗಗಳನ್ನು ದೀರ್ಘಕಾಲದ ಅಭ್ಯಾಸದಿಂದ ಅರಿತವರೂ ಆದ ನನ್ನ ಸ್ನೇಹಿತರು ಮಾನ್ಯ ಶ್ರೀಪಾದರಾವ್ ಮಂಜುನಾಥ್‌ರವರು, ಶ್ರೀ

ರಮೇಶ್ ಜೋಯಿಸ್‌ರವರು, ನನ್ನ 'ಗುರು' ಸಮಾನರಾದ ಮೈಸೂರಿನ, ನಿವೃತ್ತ ಸಂಸ್ಕೃತ ಮಹಾ ಮಹೋಪಾಧ್ಯಾಯಿನಿ, ಶ್ರೀಮತಿ ಡಾ|| ಕೆ.ಎಲ್ ಪ್ರಸನ್ನಾಕ್ಷಿಯವರು. ಇವರೆಲ್ಲರಿಗೂ ನಾನು ಚಿರಋಣಿ, ನನ್ನ ಈ ಪ್ರಯತ್ನದಲ್ಲಿ ನನಗೆ ಬೆನ್ನುಲುಬಾಗಿ ನಿಂತಿರುವ ನನ್ನ ಮಿತ್ರರಾದ ಎಮ್.ಎಸ್. ಪ್ರಸಾದ್, ಪುಷ್ಪರಾಜ ಚೌಟ, ಬದರೀನಾಥ ಪಲವಳ್ಳಿ, ಜಿ. ರವಿಕುಮಾರ್, ಪರೇಶ್ ಶರಾಫ್, ರಾಜೇಂದ್ರ ಶೆಟ್ಟಿ, ನನ್ನ ಶ್ರೀಮತಿ ವಿಜಯಲಕ್ಷ್ಮಿ ಮುಂತಾದವರೆಲ್ಲರಿಗೂ ನನ್ನ ಕೃತಜ್ಞತಾಪೂರ್ವಕ ನಮಸ್ಕಾರಗಳು.

ಈ ಪುಸ್ತಕಕ್ಕೆ "ಕಗ್ಗ ರಸಧಾರೆ" ಎಂಬ ಹೆಸರನ್ನು ನೀಡಿದ ಶ್ರೀ ಪುಷ್ಪರಾಜ ಚೌಟ ಮತ್ತು ಸದಾ ನನಗೆ ಸೂಕ್ತ ಸಲಹೆಗಳನ್ನು ನೀಡುತ್ತಾ ಈ ಪುಸ್ತಕದ ಮುಖಪುಟದ ವಿನ್ಯಾಸವನ್ನು ನನಗೆ ಕೊಟ್ಟ ನನ್ನ ಮಿತ್ರ ಶ್ರೀ ವಸಂತ್ ಕುಮಾರ್ ಅವರಿಗೂ ನನ್ನ ಅನಂತ ನಮನಗಳು.

ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿಕೊಟ್ಟ ಮಿತ್ರ ಚಾಮರಾಜಪೇಟೆಯ ಸನ್ ಪ್ರಿಂಟ್ಸ್‌ನ ಮಾಲೀಕರಾದ ಶ್ರೀ ಕೇಶವಮೂರ್ತಿಯವರಿಗೂ ನನ್ನ ನಮನಗಳು.

ನನ್ನ ಈ ಕಿರು ಪ್ರಯತ್ನವು ಓದುಗರಿಗೆ ಹಿಡಿಸಿದರೆ ನಾ ಧನ್ಯ. ಓದುಗರ ಪ್ರೋತ್ಸಾಹವೇ ನನ್ನ ಈ ಪ್ರಯತ್ನಕ್ಕೆ ಸಿಗುವ ಪಾರಿತೋಷಕ. ಕಗ್ಗ ರಸಧಾರೆ-ಸಂಪುಟ-1ಕ್ಕೆ ಪ್ರೋತ್ಸಾಹ ನೀಡಿ ನನ್ನನ್ನು ಈ ಕಾರ್ಯವನ್ನು ಮುಂದುವರೆಸಿಕೊಂಡು ಸಂಪುಟ-2ನ್ನು ಹೊರತರಲು ಉತ್ಸಾಹವನ್ನು ತುಂಬಿದ ಎಲ್ಲ ಓದುಗರಿಗೂ ನನ್ನ ಹೃತ್ಪೂರ್ವಕ ಧನ್ಯವಾದಗಳು.

ಬೆಂಗಳೂರು **ರವಿ ತಿರುಮಲೈ**

25. 4. 2014

# ವಿಧಿಯ ವೈಚಿತ್ರ್ಯ 201-203

**ಮುಕ್ತಕ-201**

**ಉರಿಯುತಿರೆ ಹೊಟ್ಟೆ ಕಿಚ್ಚಾರಿಸಲು ನೀರೆಲ್ಲಿ? |**
**ನರಕವೆದೆಯಲಿ ನೆಲೆಸೆ ನಿದ್ದೆಗೆಡೆಯೆಲ್ಲಿ? |**
**ಹರಿಸಲಪ್ಪುದೆ ನರರು ಮತ್ಸರಿಯ ಸಂಕಟವ ? |**
**ಕರುಬಿದನ ಹರಿ ಹೊರೆಗೆ ಮಂಕುತಿಮ್ಮ ||**

ಕಿಚ್ಚಾರಿಸಲು=ಕಿಚ್ಚು+ಆರಿಸಲು, ನರಕವೆದೆಯಲಿ=ನರಕವು+ಎದೆಯಲಿ, ನಿದ್ದೆಗೆಡೆಯಲ್ಲಿ ನಿದ್ದೆಗೆ+ಎಡೆಯಲ್ಲಿ, ಹರಿಸಲಪ್ಪುದೆ=ಹರಿಸಲು+ಅಪ್ಪುದೆ.

ಕಿಚ್ಚು=ಬೆಂಕಿ, ಉರಿ, ಎಡೆಯಲ್ಲಿ=ಅವಕಾಶವೆಲ್ಲಿ, ಹರಿಸಲು=ಹೋಗಲಾಡಿಸಲು, ಅಪ್ಪುದೆ=ಆಗುವುದೆ, ಮತ್ಸರಿಯ=ಮತ್ಸರ ಪಡುವವನ, ಕರುಬಿದನ=ಕರುಬುವವನ, ಹೊರೆಗೆ=ರಕ್ಷಣೆ.

ಹೊಟ್ಟೆಯುರಿಯನ್ನು ಆರಿಸಲು ನೀರು ಎಲ್ಲಿಹುದು? ನರಕದಂಥ ಹಿಂಸೆಯನ್ನು ನೀಡುವ ಈ ಅಸೂಯೆ ಎನ್ನುವ ಉರಿ ಹೃದಯದಲ್ಲಿ ನೆಲೆಸಿರುವಾಗ, ನಿದ್ದೆ ಬರಲು ಹೇಗೆ ಸಾಧ್ಯ. ಮತ್ಸರ ಪಡುವವನ ಸಂಕಟವನ್ನು ಯಾರಾದರೂ ನಿವಾರಿಸಲು ಸಾಧ್ಯವೇ? ಅಂತಹವನನ್ನು ಆ ದೇವರೇ ಕಾಪಾಡಬೇಕು ಎನ್ನುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಯಾರಿಗೆ ಏನು, ಎಷ್ಟು ಮತ್ತು ಯಾವ ಸಮಯಕ್ಕೆ ಸಿಗಬೇಕೆನ್ನುವುದು ವಿಧಿ ಲಿಖಿತವೆನ್ನುತ್ತದೆ ನಮ್ಮ ಸನಾತನ ಧರ್ಮ. ಪ್ರತಿಯೊಬ್ಬರ ಅನುಭವವೂ ಅದನ್ನು ಪುಷ್ಟಿಕರಿಸುತ್ತದೆ. ಆಸೆಪಟ್ಟು ಸಿಕ್ಕಿದ್ದರಲ್ಲಿ ತೃಪ್ತಿಯಿಂದ ಜೀವನ ಮಾಡಿದವರ ಮತ್ತು ಅತಿಯಾಸೆಪಟ್ಟು ಅಸೂಯೆ ಮತ್ತು ಅಹಂಕಾರದಿಂದ ತಮ್ಮ ಹಾಗೂ ತಮ್ಮನ್ನು ನಂಬಿದವರ ಜೀವನವನ್ನು ನಾಶಮಾಡಿದವರ ದೃಷ್ಟಾಂತಗಳು ನಮಗೆ ಹೇರಳವಾಗಿ ಸಿಗುತ್ತವೆ. ಮಹಾಭಾರತದ ದುರ್ಯೋಧನನೇ ಇದಕ್ಕೆ ಸೂಕ್ತ ಉದಾಹರಣೆ. ಹಾಗೆ ನಾವು ಆಸೆಪಟ್ಟು ನಮಗೆ ಸಿಗದಿದ್ದನ್ನು ನೆನೆದು ಮತ್ತು ಅದು ಬೇರೆಯವರಿಗೆ ಸಿಕ್ಕಿದರೆ ಕಂಡು ಅಸೂಯೆ ಪಡುವುದು ಎಷ್ಟು ಸರಿ? ಆದರೆ, ಮಾನವನ ಸ್ವಭಾವವು ಹೀಗೆ ಅಸೂಯೆ ಪಡುತ್ತಲೇ

ಇರುತ್ತದೆ. ಈ ಅಸೂಯೆ ಎನ್ನುವ ಬೆಂಕಿ, ಅಸೂಯೆ ಪಡುವವನನ್ನು ಒಳಗೊಳಗೇ ಸುಡುತ್ತಲೇ ಇರುತ್ತದೆ. ಈ ಬೆಂಕಿಯನ್ನು ಯಾರಿಂದಲೂ ಆರಿಸಲು ಸಾಧ್ಯವಿಲ್ಲ.

ಅಸೂಯೆಪಟ್ಟಾಕ್ಷಣ ನಾವು ಬಯಸಿದ್ದು ಸಿಗುವ ಹಾಗಿದ್ದರೆ, ಅದು ಬೇರೆ ವಿಷಯ. ಹಾಗೆ ಸಿಗುವುದಿಲ್ಲವಲ್ಲ. ವಸ್ತುವಂತೂ ಸಿಗುವುದಿಲ್ಲ, ಉಳಿಯುವುದು ಕೇವಲ ನಮ್ಮನ್ನು ಸುಡುವ ಅಸೂಯೆಯ ಬೆಂಕಿ, ಇದು ಮನಸ್ಸನ್ನು ಸುಡುತ್ತದೆ ಮತ್ತು ಆ ಸುಡುವ ಮನಸ್ಸು ದೈಹಿಕ ಆರೋಗ್ಯವನ್ನೂ ಹಾಳುಗೆಡುವುತ್ತದೆ. ಚಿಂತೆ ಹತ್ತಿ ನಿದ್ದೆಯೂ ಬರುವುದಿಲ್ಲ. ಈ ಚಿಂತೆಗೆ ಕಾರಣ, ಆಸೆಪಡುವ ನಾವು, ನಮ್ಮ ಯೋಗ್ಯತೆ ಮತ್ತು ಸಾಮರ್ಥ್ಯದ ಮಿತಿ ಎರಡನ್ನೂ ಅರಿತಿರುವುದಿಲ್ಲ .





ಅನ್ಯರಿಗೆ ಅದು ಗೊತ್ತಾದರೂ ಅವರು ನಮ್ಮ ಮನಸ್ಸಿನ ಈ ತೊಳಲಾಟವನ್ನು, ಹಿಂಸೆಯನ್ನು ಹೋಗಲಾಡಿಸಲಾರರು. ಏಕೆಂದರೆ, ನಮ್ಮ ಮನಸ್ಸನ್ನು ಅವರು ಅರಿಯಲಾರರು. ಆದರೆ, ವಿವೇಚನೆಯಿಂದ ಕೂಡಿದ ಆಲೋಚನೆಯಿದ್ದರೆ, ನಾವು ಖಂಡಿತ ನಮ್ಮ ಮನಸ್ಸಿನಲ್ಲಿ ನಡೆಯುವ ಈ ತೀರಲಾರದ ಆಸೆಗಳನ್ನು ಮತ್ತು ಆ ಆಸೆಗಳಿಂದ ಉಂಟಾದ ಅಸೂಯೆಯನ್ನು ಹೋಗಲಾಡಿಸಿಕೊಳ್ಳಬಹುದು. ಆದರೆ ಅದಕ್ಕೆ ನಮ್ಮ 'ಅಹಂಕಾರ' ಅಡ್ಡ ಬರುತ್ತದೆ. ಅಂತಹವರನ್ನು ಆ ದೇವರೇ ಕಾಪಾಡಬೇಕು ಎನ್ನುತ್ತಾರೆ ಮಾನ್ಯ ಗುಂಡಪ್ಪನವರು.

"ಅನ್ಯೇಷಾಂ ಉದಯಂ ದೃಷ್ಟ್ವಾಯೇ ಅಭಿನಂದಂತಿ ಮಾನವಾಃ, ತೇ ವೈ ಭಾಗವತೋತ್ತಮಾಃ". ಪರರ ಅಭಿವೃದ್ಧಿಯನ್ನು ಕಂಡು ಸಂತೋಷಪಡುವವನು, ಪರಮಾತ್ಮನಿಗೆ ಪ್ರಿಯನಾಗುತ್ತಾನೆ ಎಂದು ಅರ್ಥ. 'ಅಸೂಯೆ ಪಡುವವನು ಅಲ್ಲ', ಎಂದೂ ಅರ್ಥ.

ಹಾಗಾಗಿ ನಮ್ಮ ಮಾನಸಿಕ ಸ್ವಾಸ್ಥ್ಯವನ್ನು ದೃಷ್ಟಿಯಲ್ಲಿರಿಸಿಕೊಂಡು, ಮಿತಿಗಳನ್ನು ಅರಿತುಕೊಂಡು, ಪೂರ್ವಕರ್ಮಾನುಸಾರ, ವಿಧಿಯನುಸಾರ, ಸಾಮರ್ಥ್ಯಕ್ಕನುಸಾರ ನಮಗೆ ಲಭ್ಯವಾದದ್ದನ್ನು ತೃಪ್ತಿಯಿಂದ ಅನುಭವಿಸಿದರೆ ಮನಸ್ಸಿಗೆ ನಿರಾಳ, ನೆಮ್ಮದಿ. ಆಯ್ಕೆ ಮಾಡಿಕೊಳ್ಳಲು ನಮಗೆ ಸಂಪೂರ್ಣ ಸ್ವಾತಂತ್ರ್ಯ ಮತ್ತು ಅಧಿಕಾರವುಂಟು. ನಾವೇನು ಆಯ್ದು ಕೊಂಡರೆ ಅದರನುಸಾರ ಕಷ್ಟವೋ ಅಥವಾ ಸುಖವೋ ಸಿಗುತ್ತದೆ.

**ಮುಕ್ತಕ-202**

**ರಾವಣನ ದಶಶಿರವದೇಂ? ನರನು ಶತಶಿರನು |**
**ಸಾವಿರಾಸ್ಯಗಳನೊಂದರೊಳಣಗಿಸಿಹನು ||**
**ಹಾವಾಗಿ ಹುಲಿಯಾಗಿ ಕಪ್ಪೆ ಹುಲ್ಲೆಯುವಾಗಿ |**
**ಭೂವ್ಯೋಮಕತಿಶಯನು - ಮಂಕುತಿಮ್ಮ ||**

ದಶಶಿರವದೇಂ=ದಶ+ಶಿರವು+ಅದೇಂ,
ಸಾವಿರಾಸ್ಯಗಳನೊಂದರೊಳಣಗಿಸಿಹನು=ಸಾವಿರ+ಆಸ್ಯಗಳನು+ಒಂದರ+ಒಳಗೆ+ಅಣಗಿಸಿಹನು,
ಹುಲ್ಲೆಯುವಾಗಿ=ಹುಲ್ಲೆಯುಂ+ಆಗಿ, ಭೂವ್ಯೋಮಕ ಶಯನು=ಭೂ+ಮಕ+ಅತಿಶಯನು.
ಆಸ್ಯಗಳನು=ಮುಖಗಳನು, ಹುಲ್ಲೆಯುಂ=ಜಿಂಕೆಯೂ, ವ್ಯೋಮಕೆ=ಆಕಾಶಕ್ಕೆ.

ರಾವಣನಿಗೆ ಹತ್ತು ತಲೆಗಳಿರಬಹುದು. ಆದರೆ ನಮ್ಮ ಮನುಷ್ಯನಿಗೆ ನೂರಾರು ತಲೆಗಳು, ಸಾವಿರ ಮುಖಗಳನ್ನು ಒಂದೇ ಮುಖದಲ್ಲಿ ಅಡಗಿಸಿಟ್ಟುಕೊಂಡು ಪ್ರದರ್ಶಿಸುವ ಕ್ಷಮತೆ ಇರುವವನು ಮನುಷ್ಯ, ಹಾವಾಗಿ, ಹುಲಿಯಾಗಿ, ಕಪ್ಪೆ, ಜಿಂಕೆಯಾಗಿಯೂ ತನ್ನ ಗುಣಗಳನ್ನು ತೋರುವ ಈ ಮನುಷ್ಯ ಇಡೀ ಜಗತ್ತಿನಲ್ಲಿ ಅತಿಶಯದ ಪ್ರಾಣಿ ಎಂದು ಉಲ್ಲೇಖಿಸುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಮಾನ್ಯ ಗುಂಡಪ್ಪನವರು ಮಾನವನ ಬಹುಮುಖ 'ಪ್ರತಿಭೆ' ಕುರಿತು ಈ ಮುಕ್ತಕದಲ್ಲೂ ಉಲ್ಲೇಖ ಮಾಡುತ್ತಾರೆ. ರಾಮಾಯಣದಲ್ಲಿ ರಾವಣನಿಗೆ ದಶಗ್ರೀವ, ದಶಕಂಠ ಎಂದೂ ಕರೆದಿದ್ದಾರೆ. 64 ವಿದ್ಯೆಗಳಲ್ಲಿ ಪಾರಂಗತನಾದ

ರಾವಣ ಏಕಕಾಲದಲ್ಲಿ ಹತ್ತಾರು ಕೆಲಸಗಳನ್ನು ಮಾಡುವ ಕ್ಷಮತೆಯನ್ನು ಹೊಂದಿದ್ದನಾದ್ದರಿಂದ ಅವನಿಗೆ ಸೂಚ್ಯವಾಗಿ ದಶಕಂಠನೆಂದು ಕರೆದಿದ್ದಾರೆ, ವಾಲ್ಮೀಕಿ ರಾಮಾಯಣದಲ್ಲಿ. ಅಷ್ಟೇ ಅಲ್ಲ, ರಾಮ ರಾವಣರ ಯುದ್ಧದಲ್ಲಿ ಒಂದು ತಲೆ ಕಡಿದರೆ ಮತ್ತೊಂದು ತಲೆ ಉದ್ಭವವಾಗುತ್ತಿತ್ತಂತೆ. ಅದು ಕೂಡ, ಅವನ ಒಂದು ಸಾಮರ್ಥ್ಯವನ್ನು ಯಾರಾದರೂ ಮೀರಿಸಿದರೆ ಅವನ ಮತ್ತೊಂದು ಸಾಮರ್ಥ್ಯ ಕೆಲಸಮಾಡುತಿತ್ತು ಎನ್ನುವುದನ್ನು ಸೂಚ್ಯವಾಗಿ ಹಾಗೆ ಹೇಳಿದ್ದಾರೆ ಅಷ್ಟೇ.

ರಾವಣನಿಗೆ ಹತ್ತು ತಲೆಗಳಾದರೆ ಮನುಷ್ಯನಿಗೆ ನೂರಾರು ತಲೆಗಳಿವೆ, ಎಂದು ಮನುಷ್ಯನ ಬಹು ರೂಪಗಳನ್ನು ವಿಶ್ಲೇಷಣೆ ಮಾಡಿದ್ದಾರೆ. ಹಾವಾಗಿ ಛಲ ಹಿಡಿಯುವ ಗುಣ, ಕೋಪಗೊಂಡು ಹುಲಿಯಂತೆ ಮತ್ತೊಬ್ಬರ ಮೇಲೆ ಎರಗುವ ಗುಣ, ಕಪ್ಪೆಯಂತೆ ತಾನುಂಟು ತನ್ನ ಪ್ರಪಂಚವುಂಟು ಎಂದು ತಮ್ಮ ಸ್ವಾರ್ಥದ ವೃತ್ತದಲ್ಲೇ ಇರುವ ಗುಣ, ಸಾತ್ವಿಕ ಗುಣಗಳನ್ನು ಸಂಪೂರ್ಣವಾಗಿ ಹೊಂದಿರುವ ಆ ಜಿಂಕೆ ಮರಿಯಂತಹ ಗುಣ, ಗೋವಿನಂತೆ ಮಮತೆಯ ಗುಣ, ಹೀಗೆ ಎಲ್ಲ ಗುಣಗಳನ್ನೂ ಹೊಂದಿ ಸಮಯ, ಸಂದರ್ಭಕ್ಕೆ ಸರಿಯಾಗಿ ಅವುಗಳನ್ನು ಪ್ರದರ್ಶಿಸುವ ಕಲೆಯನ್ನು ಆ ಪರಮಾತ್ಮ ಕೇವಲ ಮನುಷ್ಯನಿಗಷ್ಟೇ ಕೊಟ್ಟಿದ್ದಾನೆ ಎಂದರೆ ಆಶ್ಚರ್ಯದ ವಿಷಯವೇ ಅಲ್ಲವೇ? ಈ ಗುಣ ಬೇರೆ ಬೇರೆ ಜನರಲ್ಲಿ ಬೇರೆ ಬೇರೆ ರೀತಿಯಲ್ಲಿ ಮತ್ತು ಬೇರೆ ಬೇರೆ ಪ್ರಮಾಣ, ಪರಿಮಾಣಗಳಲ್ಲಿ ಇರುತ್ತದೆ.

ಒಂದೇ ವ್ಯಕ್ತಿ ಒಂದೇ ಸಮಯದಲ್ಲಿ ಹಲವರೊಡನೆ ಹಲವು ಬಗೆಯಲ್ಲಿ ನಡೆದುಕೊಳ್ಳುವುದನ್ನು ನಾವು ನೋಡಿದ್ದೇವೆ. ಒಂದೇ ವ್ಯಕ್ತಿ ಇಷ್ಟೊಂದು ವೈವಿಧ್ಯತೆಯಿಂದ ವ್ಯವಹರಿಸುವುದನ್ನು ನೋಡಿ ಇಡೀ ಜಗತ್ತೇ ಚಕಿತಗೊಂಡಿದೆ ಎಂದು ಒಂದು ಅತಿಶಯವನ್ನು ವ್ಯಕ್ತಪಡಿಸುತ್ತಾರೆ ಮಾನ್ಯ ಗುಂಡಪ್ಪನವರು. ಈ ರೀತಿಯ ಬಹುಮುಖ ಮನುಷ್ಯನಿಗೆ ಬೇಕೇ? ಎಂದರೆ ಹೌದು ಬೇಕು. ಇದನ್ನೂ ಆ ಪರಮಾತ್ಮನೇ ಕೊಟ್ಟ ಗುಣವಲ್ಲವೇ? ಅವನಾಡಿಸುವ ಜಗನ್ನಾಟಕದಲ್ಲಿ, ಪಾತ್ರಗಳು ಸರಿಯಾದ ನಟನೆಯನ್ನು ಮಾಡಲು ಅವನು ನೀಡಿರುವ ಒಂದು ಪರಿಕರವಲ್ಲವೇ (tool) ಈ ಬಹುಮುಖತ್ವ,

ಈ ಜಗತ್ತನ್ನು ಸುಂದರವಾಗಿಡಲು ಹೆಚ್ಚು ತಿಳುವಳಿಕೆಯನ್ನೂ ಈ ಬಹುಮುಖ ಪ್ರತಿಭೆಯನ್ನೂ ಆ ಪರಮಾತ್ಮ ನೀಡಿದರೆ ಮನುಷ್ಯ "ಪರಮಾತ್ಮನ ಕಾರಣವನ್ನು ಕಡೆಗಣಿಸಿ ತನ್ನ ಸ್ವಾರ್ಥಕ್ಕಾಗಿಯೇ ಅದನ್ನು ಉಪಯೋಗಿಸಿ

ರಾವಣನಿಗಿಂತ ತಾನು ಒಂದು ಕೈ ಹೆಚ್ಚು ಎನ್ನುವಂತೆ ನಡೆದುಕೊಳ್ಳುತ್ತಿದ್ದಾನೆ. ಕೇವಲ ಸ್ವಾರ್ಥದಿಂದ, ಈ ಜಗತ್ತಿನ ಎಲ್ಲವನ್ನೂ ತನ್ನದಾಗಿಸಿಕೊಳ್ಳಲು ಅವನು ತೋರುವ ಬಹುಮುಖ ಪ್ರತಿಭೆಯನ್ನು ನೋಡಿದರೆ ಅಸಹ್ಯವಾಗುತ್ತದೆ.

ವಾಚಕರೆ ನಾವು ಲೋಕದ ಡೊಂಕನ್ನು ತಿದ್ದಲು ಸಾಧ್ಯವಿಲ್ಲ. ಹಾಗಾಗಿ ನಮ್ಮನ್ನು ನಾವೇ ವಿಶ್ಲೇಷಣೆ ಮಾಡಿಕೊಂಡು ಸಾಧ್ಯವಾದಷ್ಟು ತಿದ್ದಿಕೊಳ್ಳಲು ಪ್ರಯತ್ನಪಟ್ಟರೆ ಒಳ್ಳೆಯದು.





**ಮುಕ್ತಕ-203**

**ತಲೆಯೊಳಗೆ ನೆರದಿಹವು ನೂರಾರು ಹಕ್ಕಿಗಳು ।**
**ಗಿಳಿ ಗೂಗೆ ಕಾಗೆ ಕೋಗಿಲೆ ಹದ್ದು ನವಿಲು ॥**
**ಕಿಲಕಿಲನೆ ಗೊರಗೊರನೆ ಕಿರಿಚಿ ಕೂಗುತ್ತಿಹವು ।**
**ನೆಲೆಯಲ್ಲಿ ನಿದ್ದೆಗೆಲೋ? ಮಂಕುತಿಮ್ಮ ॥**

ನೆಲೆಯಲ್ಲಿ ನೆಲೆ+ಎಲ್ಲಿ, ನಿದ್ದೆಗೆಲೋ ನಿದ್ದೆಗೆ-ಎಲೋ,

ನಾವು ಈ ಹಿಂದಿನ ಮುಕ್ತಕಗಳಲ್ಲಿ ಮನುಷ್ಯನ ಮನಸ್ಸಿನಲ್ಲಿ ಒಂದೇ ಸಮಯದಲ್ಲಿ ನಡೆಯುವ ಹಲವಾರು ಯೋಚನೆಗಳ ವಿಚಾರ ಮತ್ತು ಮನುಷ್ಯನ ಗುಣಗಳ ಹಲವಾರು ಮುಖವಾಡಗಳ ವಿಚಾರವನ್ನು ನೋಡಿದ್ದೇವೆ. ಒಂದು ಬಾರಿ ಯಾವುದೇ ಮನುಷ್ಯನ ಮಸ್ತಿಷ್ಕದಲ್ಲಿ ಹೊಕ್ಕು ನೋಡಿದರೆ, ನಮಗೆ ಅಲ್ಲಿ ಭಯಂಕರವಾಗಿ ನಡೆಯುವ ಚಿತ್ರ ವಿಚಿತ್ರವಾದ ವಿಚಾರಗಳ ಕುಸ್ತಿಯು ಕಾಣುತ್ತದೆ. ಒಂದರ ಮೇಲೊಂದು ಬೀಳುತ್ತಾ, ಒಂದರೊಂದಿಗೆ ಇನ್ನೊಂದು ಗುದ್ದಾಡುತ್ತಾ, ಕೆಲವು ಸೋಲುತ್ತಾ, ಕೆಲವು ಗೆಲ್ಲುತ್ತಾ, ಸೋತದ್ದು ಮತ್ತೆ ಗೆಲ್ಲುತ್ತಾ, ಗೆದ್ದು ಸೋಲುತ್ತಾ, ಹೊಸ ಹೊಸ

ಪಟ್ಟುಗಳನ್ನು ಹಾಕುತ್ತಾ, ತಮ್ಮೊಳಗೆ ತಾವೇ ಗುದ್ದಾಡುವ, ವಿವೇಕದೊಡನೆ ಮತ್ತು ಬುದ್ಧಿಯೊಡನೆ ಗುದ್ದಾಡುವ ಸಾವಿರಾರು ಯೋಚನೆಗಳ ಆಗರವೇ ನಮ್ಮ ಮನಸ್ಸಿನ ಹಂದರ.

ವಾಸ್ತವಿಕವಾಗಿ ಯಾವ ಶಬ್ದವೂ ಆಗದಿದ್ದರೂ, ನಮ್ಮ ಮನದಲ್ಲಿ, ಗಿಳಿ-ಕಾಗೆ-ಗೂಬೆ-ಕೋಗಿಲೆಯಂತಹ ಪಕ್ಷಿಗಳು ಒಂದೇ ಬಾರಿ ಕೂಗಿದರೆ ಆಗುವ ಕಲರವವಾದಂತೆ ಭಾಸವಾಗುತ್ತದೆ. ಈ ಶಬ್ದಗಳೇ ಹಲ ವಿಧವಾದ ಆಲೋಚನೆಗಳಂತೆ ನಮ್ಮ ಮನಸ್ಸಿನಲ್ಲಿ ಹೊಕ್ಕು ರಾದ್ಧಾಂತ ಮಾಡುತ್ತಿರುತ್ತದೆ. ಅಂತಹ ಕಲಸುಮೇಲೋಗರವಾದ ಆಲೋಚನೆಗಳ ಗೂಡಿನಲ್ಲಿ ಶಬ್ದವೆಲ್ಲಾ ಸ್ತಬ್ಧವಾಗಿ ನಮಗೆ ನಿದ್ದೆ ಬರುವುದು ಸಾಧ್ಯವೇ ಎಂದು ಕೇಳುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಒಂದು ಯೋಚನೆ ಹೋದರೆ ಮತ್ತೊಂದು ಆ ಕ್ಷಣವೇ ನುಸುಳುತ್ತದೆ. ಹಾಗೆ ಬಂದು ಹೋಗುವ ಆಲೋಚನೆ ಗಳನ್ನು ನಾವು ದೂರ ನಿಂತು ನೋಡಿ, ಅವು ಏಕೆ ಬರುತ್ತವೆ ಎಂದು ಆಲೋಚಿಸಿದರೆ, ನಮಗೆ ಕಾರಣವೇ ತಿಳಿಯುವುದಿಲ್ಲ. ಈ ಮನಸ್ಸೇ ಒಂದು ಚಿತ್ರವಿಚಿತ್ರ ಆಲೋಚನೆಗಳ ಗೂಡು, ಇದರಲ್ಲಿ ಕೇಳಿಬರುವ ಶಬ್ದವನ್ನು ಸುಮ್ಮನಾಗಿಸಲೇ ನಮ್ಮ ಪೂರ್ವಜರು ನಮಗೆ ಪೂಜೆ, ಧ್ಯಾನ, ಯೋಗ, ಅಧ್ಯಯನ, ಭಜನೆ, ಸಂಗೀತ ಮುಂತಾದ ಉಪಾಯಗಳನ್ನು ಹೇಳಿಕೊಟ್ಟಿದ್ದಾರೆ. ಯೋಗವನ್ನು 'ಚಿತ್ತ ವೃತ್ತಿ ನಿರೋಧಕ' ಎಂದು ಪರಿಭಾಷಿಸಿದ್ದಾರೆ ಎಂದ ಮೇಲೆ, ಮನಸ್ಸನ್ನು ಸುಮ್ಮನಾಗಿಸಬೇಕಾದ ಕಾರಣವೂ ಅವರಿಗೆ ಗೊತ್ತಿತ್ತು ಎಂದು ಅರ್ಥವಲ್ಲವೇ?

ಮನಸ್ಸಿನ ಶಬ್ದ ಜಂಗುಳಿ ಕಡಿಮೆಯಾದರೆ ಅಥವಾ ಒಂದು ಸಮಯದಲ್ಲಿ ಯಾವುದಾದರೂ ಒಂದೇ ವಿಷಯದ ಮೇಲೆ ಸಕಾರಾತ್ಮಕವಾಗಿ ಕೇಂದ್ರೀಕೃತವಾದರೆ, ಅದು ಧ್ಯಾನವಾಗುತ್ತದೆ. ಧ್ಯಾನದಲ್ಲಿ ಅನವಶ್ಯಕವಾದ ಶಬ್ದಗಳೆಲ್ಲ ಶಾಂತವಾಗಿ, ಮನಸ್ಸಿಗೆ ನೆಮ್ಮದಿ ಸಿಗುತ್ತದೆ. ಮೊದಮೊದಲು ಜಾಗೃತವಾಗಿರುವಾಗ ಮಾತ್ರ

ಶಾಂತವಾಗಿದ್ದು ನಿದ್ದೆ ಬಂದಂತಾಗಿ, ಆ ಆಲೋಚನೆಗಳು ಕನಸಿನಲ್ಲಿ ತಮ್ಮ ರುದ್ರನರ್ತನ ಮಾಡುತ್ತವೆ. ಆದರೆ ಧ್ಯಾನ, ದೀರ್ಘ ಮತ್ತು ದೃಢವಾದಾಗ ನಮಗೆ ಸಂಪೂರ್ಣ, ಕನಸಿಲ್ಲದ (ಸಾವಿನಂತಹ) ನಿದ್ದೆ ಬರುತ್ತದೆ.

ವಾಚಕರೆ, ಈ ಮೇಲೆ ಹೇಳಿದ ಎಲ್ಲ ವಿಷಯಗಳೂ ನಿಮ್ಮೆಲ್ಲರ ಮನಸ್ಸುಗಳಲ್ಲೂ ಎಂದಾದರೂ ಬಂದಿರಬಹುದು. ಆದರೆ ನಾವೆಲ್ಲಾ ಸಾಮಾನ್ಯ ಮನುಷ್ಯರು. ನಮ್ಮ ಮನಸ್ಸನ್ನು ತಹಬಂದಿಗೆ ತಂದುಕೊಳ್ಳುವ ಸಾಮರ್ಥ್ಯ ಇದ್ದರೂ ಕೇವಲ ಪ್ರಯತ್ನದ ಕೊರತೆಯಿಂದ ನಮಗೆ ಅದು ಸಾಧ್ಯವಾಗುವುದಿಲ್ಲ. ನಾವೂ ಸಹ ಸತತ ಪ್ರಯತ್ನಪಟ್ಟರೆ, ಅದು ಅಸಾಧ್ಯವಲ್ಲ.

# ಕ್ಷಣಕ್ಷಣವು ಹೊಸಹಸಿವು-204-208

**ಮುಕ್ತಕ-204**

**ದೇವಾಂಶ ಪಶ್ವಂಶಗಳ ಗಂಟು ಮಾನುಷತೆ |**
**ಧೀವಿಮರ್ಶೆಯಿನೊಂದ ಸತ್ಕರಿಸಿ ಬಳಿಸಿ ||**
**ಭಾವಪರಿಶೋಧನೆಯಿನಿನ್ನೊಂದ ದಂಡಿಪುದೆ |**
**ಜೀವಪ್ರಕರ್ಷಗತಿ - ಮಂಕುತಿಮ್ಮ ||**

ಪಶ್ವಂಶಗಳ=ಪಶು+ಅಂಶಗಳ, ಧೀವಿಮರ್ಶೆಯಿನೊಂದ=ಧೀ+ವಿಮರ್ಶೆಯಿನ್+ಒಂದ,
ಭಾವಪರಿಶೋಧನೆಯಿನಿನ್ನೊಂದ=ಭಾವ+ಪರಿಶೋಧನೆಯಿನ್+ಒಂದ,
ಜೀವಪ್ರಕರ್ಷಗತಿ=ಜೀವ+ಪ್ರಕರ್ಷ+ಗತಿ.
ಧೀ=ಬುದ್ಧಿವಂತಿಕೆ, ಪ್ರಕರ್ಷ=ಪ್ರಗತಿ,

ದೇವತೆಗಳಿಗಿರುವ ಗುಣಗಳ ಮತ್ತು ಪಶುಗಳಿಗಿರುವ ಗುಣಗಳ ಮಿಶ್ರಣವೇ ಮನುಷ್ಯಗುಣ. ತನ್ನ ಬುದ್ಧಿಶಕ್ತಿಯನ್ನು ಉಪಯೋಗಿಸಿ ಪಶುಗುಣಗಳನ್ನು ಕರಗಿಸುತ್ತಾ ದೈವೀಗುಣಗಳನ್ನು ಹೆಚ್ಚಿಸಿಕೊಳ್ಳುವುದೇ ಪ್ರಕರ್ಷ, ಎಂದರೆ ಪ್ರಗತಿ ಎಂದು ಈ ಮುಕ್ತಕದಲ್ಲಿ ಮಾನ್ಯ ಗುಂಡಪ್ಪನವರು ಪ್ರಸ್ತಾಪಿಸುತ್ತಾರೆ.

ಹಲವಾರು ಜನ್ಮಗಳಲ್ಲಿ, ಹಲವಾರು ದೇಹಗಳನ್ನು ಧರಿಸಿ, ಅವುಗಳ ಗುಣಗಳನ್ನು ತನ್ನದಾಗಿಸಿಕೊಂಡಿರುವ ಮನುಷ್ಯನಲ್ಲಿರುವ ಚೇತನ, ಸಂಪೂರ್ಣವಾಗಿ ತನ್ನ ಹಳೆಯ ವಾಸನೆಗಳನ್ನು ಬಿಡದ ಕಾರಣ ಮನುಷ್ಯನಲ್ಲಿ ಆ ಪಶುಗುಣಗಳು ಇರುತ್ತವೆ. ಆದರೆ ಎಲ್ಲ ಪ್ರಾಣಿಗಳಿಗಿಂತ ಉತ್ತಮ ದೇಹವನ್ನು ಹೊಂದಿರುವ ಮನುಷ್ಯ ದೈವೀಗುಣಗಳನ್ನೂ ಹೊಂದಿರುತ್ತಾನೆ. ಆದರೆ ಪ್ರತಿ ಮನುಷ್ಯನಲ್ಲೂ ಈ ಎರಡೂ ಗುಣಗಳ ಪರಿಮಾಣ ಮತ್ತು ಪ್ರಮಾಣ ಬೇರೆ ಬೇರೆಯದಾಗಿರುತ್ತದೆ. ಹಾಗಾಗಿ ಪ್ರತೀ ಮನುಷ್ಯನ ನಡವಳಿಕೆಯೂ ಈ ಗುಣಗಳು ಮತ್ತು ಅವುಗಳ ಪ್ರಮಾಣ ಪರಿಮಾಣಗಳಗನುಗುಣವಾಗಿಯೇ ಇರುತ್ತದೆ.

ತನ್ನ ಜೀವನವನ್ನು ಸುಂದರವಾಗಿ ರೂಪಿಸಿಕೊಳ್ಳಲು ಮನುಷ್ಯನಿಗೆ ಅನ್ಯ ಪ್ರಾಣಿಗಳಿಗಿಂತ ಅಧಿಕವಾದ ಬುದ್ಧಿಶಕ್ತಿಯನ್ನು ಆ ಪರಮಾತ್ಮ ಕರುಣಿಸಿದ್ದಾನೆ. ಅದನ್ನು ಉಪಯೋಗಿಸಿಕೊಂಡು ತನ್ನಲ್ಲಿರುವ ಪಶು





ಗುಣಗಳನ್ನು ಕಡಿಮೆ ಮಾಡಿಕೊಳ್ಳುತ್ತಾ, ದೈವೀ ಗುಣಗಳನ್ನು ಹೆಚ್ಚು ಮಾಡಿಕೊಳ್ಳುವ ಪ್ರಯತ್ನವನ್ನು ಮನುಷ್ಯ ಮಾಡಿದರೆ ಅದು ಪ್ರಗತಿಯಾಗುತ್ತದೆ. ಹಾಗೆ ಪಶುಗುಣಗಳನ್ನು ಸಂಪೂರ್ಣವಾಗಿ ನೀಗಿಸಿಕೊಂಡರೆ ಮನುಷ್ಯ ಮಾನವನಾಗುತ್ತಾನೆ ಎಂಬುದೇ ಈ ಮುಕ್ತಕದ ಹೂರಣ.

ಆದರೆ ವಸ್ತುಸ್ಥಿತಿಯೇ ಬೇರೆಯಾಗಿದೆ. ಈ ಜಗತ್ತಿನ ಆಕರ್ಷಣೆಯಲ್ಲಿ ಮನುಷ್ಯ ವಿವೇಚನೆಯನ್ನು ತೊರೆದು, ಸ್ವಾರ್ಥದಿಂದ ತನ್ನಲ್ಲಿರುವ ಪಾಶವೀ ಗುಣಗಳನ್ನು ಅಧಿಕವಾಗಿಸಿಕೊಳ್ಳುತ್ತಿದ್ದಾನೆ. ಇವನ ದುರಾಸೆಗೆ ಅಂತ್ಯವೇ ಇಲ್ಲವೆಂಬಂತೆ, ಎಲ್ಲಿ ನೋಡಿದರೂ ಭಾಷೆ, ಜಾತಿ, ಧರ್ಮ, ನೀರು, ನೆಲ, ಆಕಾಶ, ಸಮುದ್ರ, ಇತ್ಯಾದಿಗಳ ಕಾರಣದಿಂದ ಪ್ರಪಂಚದ ಯಾವುದಾದರೊಂದು ಮೂಲೆಯಲ್ಲಿ ಪ್ರತಿ ನಿತ್ಯ ಕದನ ಮತ್ತು ಹೋರಾಟ ನಡೆದೇ ಇರುತ್ತದೆ. ಪಶುಗುಣಗಳನ್ನು ಸಂಪೂರ್ಣವಾಗಿ ಪಡೆದ, ಆ ಪಶುಗಳಿಗಿಲ್ಲದ ಪಾಶವೀ ಭಾವದಿಂದ ಮನುಷ್ಯ ತನ್ನ ಜೀವನವನ್ನು

ನರಕವಾಗಿಸಿಕೊಂಡಿದ್ದಾನೆ. ಜಗತ್ತಿನ ಜನರೆಲ್ಲಾ ಈ ಬಗ್ಗೆ ಆಲೋಚನೆ ಮಾಡಬೇಕಾದ ಪರಿಸ್ಥಿತಿ ಬಂದಿದೆ. "ನಾವು ಏಕೆ ಹೀಗೆ? ಶಾಂತವಾಗಿ, ಸುಂದರವಾಗಿ ಬಾಳಲು ನಮಗೆ ಸಾಧ್ಯವಿಲ್ಲವೆ?" ಎಂದು ಯೋಚಿಸಬೇಕಾಗಿದೆ. ಪ್ರತಿ ವ್ಯಕ್ತಿಯೂ ಬದಲಾಗಿ, ಇಡೀ ಸಮಾಜವೇ ಬದಲಾಗಿ, ಎಲ್ಲರೂ ಶಾಂತಿ ಯಿಂದ ಬಾಳಲು ಆಗುವಂತೆ ಈ ಜಗತ್ತು ಬದಲಾಗಬೇಕು. ಅದರ ಪ್ರಯತ್ನ ನಮ್ಮಿಂದಲೇ ಮೊದಲಾಗ ಬೇಕಲ್ಲವೇ? ಆತ್ಮಾವಲೋಕನಕ್ಕೆ ಇದು ಸರಿಯಾದ ಸಮಯವಲ್ಲವೇ?

**ಮುಕ್ತಕ 205**

**ಕಲ್ಲಾಗಿ ನಿಲ್ಲುವನು, ಬಳ್ಳಿವೊಲು ಬಳುಕುವನು ।**
**ಮುಳ್ಳಾಗಿ ಚುಚ್ಚುವನು, ಪುಲ್ಲಸುಮವಹನು ॥**
**ಕಲ್ಲೋಲವಾರಿಧಿವೊಲುರವಣಿಸಿ ಮೊರೆಯುವನು ।**
**ಕ್ಷುಲ್ಲಮಾನಸನಿವನು – ಮಂಕುತಿಮ್ಮ ॥**

ಪುಲ್ಲಸುಮವಹನು=ಪುಲ್ಲ+ಸುಮವು+ಅಹನು,
ಕಲ್ಲೋಲವಾರಿಧಿವೊಲುರವಣಿಸಿ=ಕಲ್ಲೋಲ+ವಾರಿಧಿ+ವೊಲು+ಉರವಣಿಸಿ,
ಕ್ಷುಲ್ಲಮಾನಸನಿವನು=ಕ್ಷುಲ್ಲ+ಮಾನಸನು+ಇವನು
ಪುಲ್ಲ=ಅರಳಿದ, ಅಹನು=ಇಹನು, ವಾರಿಧಿ=ಸಮುದ್ರ, ವೊಲು=ಹಾಗೆ, ಅಂತೆ,
ಉರವಣಿಸಿ=ಮೇಲೆ ಬಿದ್ದು, ಕ್ಷುಲ್ಲಮಾನಸನಿವನು=ಕ್ಷುಲ್ಲಕ (ನೀಚ) ಮನಸಿನವನು.

ಮನುಷ್ಯನ ಹಲವಾರು ಗುಣಗಳನ್ನು ವರ್ಣಿಸುತ್ತಾ, ಮಾನವನು ಕೆಲಬಾರಿ, ಕಲ್ಲಿನಂತೆ ಗಟ್ಟಿಯಾಗಿಯೂ, ಕೆಲಬಾರಿ ಬಳ್ಳಿಯಂತೆ ವಾಲುತ್ತಾ, ಕೆಲಬಾರಿ ಮುಳ್ಳಿನಂತೆ ಪರರನ್ನು ಚುಚ್ಚುತ್ತಾ, ಕೆಲಬಾರಿ ಅರಳಿದ ಕುಸುಮದಂತೆ ಸುಗಂಧವನ್ನು ಬೀರುತ್ತಾ, ಕೆಲಬಾರಿ ಸಮುದ್ರದ ಅಲೆಯಂತೆ ಮೇಲೆದ್ದು ಮತ್ತೆ ಕೆಳಗೆ ಬೀಳುತ್ತಾ ಸ್ಥಿರ ಮನಸ್ಸಿಲ್ಲದ ಕ್ಷುಲ್ಲಕ ಮನಸ್ಸಿನವನು ಇವನು, ಎಂದು ಪ್ರಸ್ತಾಪ ಮಾಡುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಗುಹೆಯಂತಿರುವ, ಆಳವಾದ ಸಮುದ್ರದಂತಿರುವ ಈ ಮಾನವನ ಮನಸ್ಸನ್ನು ಅರಿಯುವುದು ಬಹಳ ಕಷ್ಟ. ಒಂದು ಘಳಿಗೆ ಇದ್ದ ಮನೋಭಾವ ಮತ್ತೊಂದು ಘಳಿಗೆ ಇರುವುದಿಲ್ಲ. ಇವನ ಮನಸ್ಸು ಬಹಳ ಸೂಕ್ಷ್ಮ ಕಷ್ಟಗಳು ಬಂದಾಗ ಇವನು ಕೆಲಬಾರಿ ಕುಸಿದೇ ಹೋಗುತ್ತಾನೆ ಅಥವಾ ಗಟ್ಟಿಯಾಗಿ ಕಲ್ಲಿನಂತೆ ಸೆಟೆದು ನಿಲ್ಲುತ್ತಾನೆ.

ತನ್ನ ಕಾರ್ಯಗಳನ್ನು ಪೂರೈಸಿಕೊಳ್ಳಲು ಇವನು ಹಲವು ಬಾರಿ ಸಹಾಯಕ್ಕಾಗಿ 'ಬಳ್ಳಿ'ಯಂತೆ ಅನ್ಯರ ಮೇಲೆ ಆಧಾರಪಡುತ್ತಾನೆ ಮತ್ತೆ ಕೆಲಬಾರಿ ಯಾರ ಸಹಾಯವೂ ಇಲ್ಲದೆ ಗೆಲ್ಲುತ್ತಾನೆ. ತನ್ನ ಕಾರ್ಯ ಸಾಧನೆಯ ದಾರಿಯಲ್ಲಿ ಅವನಿಗೆ ತೊಡಕಾದವರನ್ನು 'ಮುಳ್ಳಿನಂತೆ ಚುಚ್ಚಿ' ತನಗಿರುವ ಅಡ್ಡಿಯನ್ನು ತೊಲಗಿಸಿಕೊಂಡು ಮುಂದುವರೆಯುತ್ತಾನೆ. ಸಫಲನಾದಾಗ ತನ್ನ ಸಫಲತೆಯ ಫಲವನ್ನು ಸ್ವಾರ್ಥದಿಂದ ತಾನೊಬ್ಬನೇ ಅನುಭವಿಸುತ್ತಾನೆ ಅಥವಾ ಒಂದು ಹೂ ಸಫಲತೆಯಿಂದ ಅರಳಿ ತನ್ನ ಸುಗಂಧವನ್ನು ಜಗಕೆಲ್ಲ ಪಸರಿಸುವಂತೆ, ಹಲವರೊಡನೆ ಹಂಚಿಕೊಂಡು ಬಾಳುತ್ತಾನೆ. ಇವೆಲ್ಲ ಮಾನವನ ಸಹಜ ಗುಣಗಳು.

ವಿಪರ್ಯಾಸವೇನೆಂದರೆ, ತಮ್ಮ ಕಷ್ಟಗಳನ್ನು ತಾವೇ ನಿವಾರಿಸಿಕೊಳ್ಳಲು ಸಾಮರ್ಥ್ಯವಿದ್ದರೂ, ಆಲಸ್ಯದಿಂದ ಅನ್ಯರಮೇಲೆ ಆಧಾರಪಡುವವರು ಬಹಳಷ್ಟು ಜನ ಸಿಗುತ್ತಾರೆ. ತಮಗೆ ಯಾವ ರೀತಿಯ ತೊಂದರೆಯನ್ನು ಕೊಡದೆ ಇದ್ದರೂ ಪರರನ್ನು ಘಾಸಿಗೊಳಿಸಿ, ಅವರಿಗೆ ತೊಂದರೆಯನ್ನು ಕೊಟ್ಟಾಗಲೀ ತಮ್ಮ ಕಾರ್ಯ ಸಾಧಿಸುವವರೂ ಬಹಳಷ್ಟು ಜನ ನಮಗೆ ಸಿಗುತ್ತಾರೆ. ತಮ್ಮ ಸುತ್ತಲೂ ಕಷ್ಟಕಾರ್ಪಣ್ಯದಿಂದ ನರಳುತ್ತಿರುವ ಜನರನ್ನೂ ಕಂಡೂ ಕಾಣದಂತಹ ಕಣ್ಣಿದ್ದ ಕುರುಡರೂ ಸಹ ನಮಗೆ ವಿಫುಲವಾಗಿ ಕಾಣಸಿಗುತ್ತಾರೆ. ತಮ್ಮಲ್ಲಿ ಹೇರಳವಾಗಿ ಧನವಿದ್ದರೂ ಮತ್ತಷ್ಟಕ್ಕೆ ದುರಾಸೆ ಪಡುತ್ತಾ ಎಲ್ಲವೂ ತನಗೆ ಬೇಕು ಎನ್ನುವ ಭಾವದಿಂದ, ತಮ್ಮ ಬುದ್ಧಿ, ಸಾಮರ್ಥ್ಯ ಮತ್ತು ಸಂಪತ್ತು ಕೇವಲ ತನಗಾಗಿಯೇ ಎಂದುಕೊಳ್ಳುವ ಅಪ್ಪಟ ಸ್ವಾರ್ಥಿಗಳೂ ನಮಗೆ ಹೇರಳವಾಗಿ ಸಿಗುತ್ತಾರೆ.

ಈ ಜಗತ್ತಿನಲ್ಲಿ ಅನೇಕಾನೇಕ ವಿಧವಾದ ಮನೋಭಾವವುಳ್ಳ ಜನರು ಇರುತ್ತಾರೆ. ನಾವೂ ಅವರಲ್ಲಿ ಒಬ್ಬರು. ನಮ್ಮ ವಿದ್ಯೆ, ಜ್ಞಾನ ಮತ್ತು ಸಂಸ್ಕಾರಗಳು, ನಮ್ಮನ್ನು ನಾವು ಅವಲೋಕಿಸಿಕೊಳ್ಳುವ ಪ್ರವೃತ್ತಿಯನ್ನು ಬೆಳೆಸಿ, ನಾವು ಏನಾಗಬೇಕು, ಏನು ಮಾಡಬೇಕು, ಏನು ಮಾಡಬಾರದು ಎಂಬ ಅರಿವನ್ನು ಮೂಡಿಸಿದರೆ ಒಳ್ಳೆಯದು. ಹಾಗಲ್ಲದೆ, ನಾವು ಮಾಡುವುದೇ ಸರಿ ಎನ್ನುವ ಪ್ರವೃತ್ತಿ ಬೆಳೆಸಿಕೊಂಡರೆ ನಾವು ಬದಲಾಗಲು ಸಾಧ್ಯವೇ ಇಲ್ಲ. ಹಾಗಾಗಿ ವಾಚಕರೆ, ಯೋಚನೆ ಮಾಡಬೇಕು. ನಾವೇನಾಗಿದ್ದೇವೆ? ನಾವೇನಾಗಬೇಕು? ಎನ್ನುವ ಪ್ರಶ್ನೆಗಳು ನಮ್ಮನ್ನು

ಕಾಡಬೇಕು. ಇರುವ ಸ್ಥಿತಿಯಿಂದ ಉತ್ತಮವಾಗುವ ಆಸೆ ಮತ್ತು ಆಸೆಗೆ ಪೂರಕವಾದ ಪ್ರಯತ್ನ ನಡೆದರೆ ಉತ್ತಮ ಮಾನವರಾಗಲು ಸಾಧ್ಯ.





**ಮುಕ್ತಕ-206**

**ಸತ್ತವೆನ್ನಾಶೆಗಳು, ಗೆದ್ದೆನಿಂದ್ರಿಯಗಣವ ।**
**ಚಿತ್ತವಿನ್ನಲುಗದೆಂಬಾ ಜಂಬ ಬೇಡ ॥**
**ಎತ್ತಣಿಂದಲೋ ಗಾಳಿ ಮೋಹಬೀಜವ ತಂದು ।**
**ಬಿತ್ತಲಾರದೆ ಮನದಿ - ಮಂಕುತಿಮ್ಮ ॥**

ಸತ್ತವೆನ್ನಾಶೆಗಳು=ಸತ್ತವು+ಎನ್ನ+ಆಶೆಗಳು, ಗೆದ್ದೆನಿಂದ್ರಿಯಗಣವ=ಗೆದ್ದೆನು+ಇಂದ್ರಿಯ+ಗಣವ,
ಚಿತ್ತವಿನ್ನಲುಗದೆಂಬಾ=ಚಿತ್ತವು+ಇನ್ನು+ಅಲುಗದು+ಎಂಬ.
ಚಿತ್ತ=ಮನಸ್ಸು, ಎತ್ತಣಿಂದಲೋ=ಎಲ್ಲಿಂದಲೋ,

ನನ್ನ ಆಸೆಗಳು ಸತ್ತಿವೆ. ನಾನು ಇಂದ್ರಿಯಗಳನ್ನು ಗೆದ್ದಿದ್ದೇನೆ. ನನ್ನ ಮನಸ್ಸು ಇನ್ನು ಚಂಚಲವಾಗದು, ಎಂಬ ಜಂಬ ಪಡಬೇಡ. ಯಾವುದಾದರೂ ಒಂದು ಕಾರಣದಿಂದ, ನಿನ್ನ ಮನಸ್ಸಿನಲ್ಲಿ ಮತ್ತೆ ಆಸೆಯ ಬೀಜ ಬಂದು ಮೊಳಕೆಯೊಡೆಯಬಹುದಲ್ಲ ಎಂದು ಒಂದು ವಾಸ್ತವಿಕತೆಯನ್ನು ಬಣ್ಣಿಸುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ನಮ್ಮಲ್ಲಿ ಎಷ್ಟೋ ಜನ “ಅಯ್ಯೋ, ನನಗಿನ್ನೇನೂ ಬೇಡಪ್ಪ, ನನಗೆ ಯಾವ ಆಸೇನೂ ಇಲ್ಲ” ಎಂದು ಹೇಳುವವರನ್ನು ನೋಡುತ್ತೇವೆ. ಅವರೆಲ್ಲ ಸತ್ಯವಾಗಿ ಸಂಪೂರ್ಣವಾಗಿ ಆಸೆಯನ್ನು ಗೆದ್ದವರೇ? ಇಂದ್ರಿಯಗಳನ್ನು ಗೆದ್ದವರೇ? ಎಂದು ಅವಲೋಕಿಸಿ ನೋಡಿದರೆ, ಅದು ಬರೀ ಬಾಯಿ ಮಾತು ಎಂದು ನಮಗೆ ಅರ್ಥವಾಗುತ್ತದೆ. ಇದು

ಬಹಳ ಸಹಜವಾದ ವಿಷಯ. ಇದರಲ್ಲಿ ತಪ್ಪೇನೂ ಇಲ್ಲ. ಆದರೆ ಈ ರೀತಿಯ ವೈರಾಗ್ಯದ ಮಾತುಗಳು ಸಾಂದರ್ಭಿಕವಾಗಿ, ಆ ಸಮಯಕ್ಕೆ ಬಂದು ಹೋಗುವ ಭಾವಗಳಷ್ಟೇ ಎಂದು ಎಲ್ಲರಿಗೂ ಗೊತ್ತು. ವೈರಾಗ್ಯದಲ್ಲಿ ಹಲವಾರು ಬಗೆಗಳಿವೆ. 'ಸ್ಮಶಾನ ವೈರಾಗ್ಯ', 'ಅಭಾವ ವೈರಾಗ್ಯ', 'ಪ್ರಸವ ವೈರಾಗ್ಯ' ಮುಂತಾದವು. ಇಂತಹ ವೈರಾಗ್ಯಗಳು ಕೇವಲ ತಾತ್ಕಾಲಿಕ. ಆ ಸಮಯಕ್ಕೆ ಅಷ್ಟೇ. ನಮ್ಮ ಮನಸ್ಸು ಮತ್ತೆ ಮೊದಲಿನಂತಾಗುತ್ತದೆ.

ಕಷ್ಟಗಳು ಬಂದಾಗ ಅಥವಾ ನಮಗೆ ಹೋರಾಡುವ ಸಾಮರ್ಥ್ಯ ಕಡಿಮೆಯಾದಾಗ ಒಂದು ರೀತಿಯ ವೈರಾಗ್ಯ ಬರುತ್ತದೆ. ಆದರೆ ಹಾದಿಯ ಅಂತ್ಯದಲ್ಲಿ ಬೆಳಕು ಕಂಡಾಗ ಮತ್ತೆ ಆಸೆ ಚಿಗುರುತ್ತದೆ. ಮತ್ತೆ ನಾವು ಕಾರ್ಯ ಪ್ರವೃತ್ತರಾಗುತ್ತೇವೆ. ಮತ್ತೆ ಆಸೆಗಳ ಬೆನ್ನೇರಿ ಹೋಗುತ್ತೇವೆ. ಇದು ಮಾನವನ ಸಹಜಗುಣ. ನಾವು ಜೀವಿಸಿರುವ ತನಕ ಈ ಆಸೆಗಳ ಪ್ರಭಾವ ನಮ್ಮ ಮೇಲೆ ಸದಾ ಆಗುತ್ತಲೇ ಇರುತ್ತದೆ. ಆಸೆಗಳಿದ್ದಷ್ಟು ದಿನ ನಾವು ಅವುಗಳನ್ನು ತೀರಿಸಿಕೊಳ್ಳಲು ನಿರಂತರ ಪ್ರಯತ್ನವನ್ನು ಮಾಡುತ್ತಲೇ ಇರುತ್ತೇವೆ.

ಆಸೆ ಪಡುವುದು ತಪ್ಪಲ್ಲ. ಆದರೆ ನಮ್ಮಾಸೆಯನ್ನು ನಾವು ಅರಿತು ಪಟ್ಟರೆ, ಮಿತಿಗಳನ್ನು ಅರಿತರೆ, ಅದನ್ನು ಸಾಧಿಸುವ ತೀವ್ರತೆಯನ್ನು ಬಿಟ್ಟರೆ, ಅದರಿಂದ ಬರುವ ಫಲ, ಫಲದಿಂದ ಬರುವ ಸುಖಗಳಿಗೆ ಹೆಚ್ಚು





ಮಹತ್ವವನ್ನು ನೀಡದೆ ಶಾಂತವಾಗಿ ಮತ್ತು ನಿರ್ಲಿಪ್ತತೆಯಿಂದ ಇದ್ದರೆ, ಪರಿಣಾಮಗಳಿಂದಾಗುವ ಆಘಾತಗಳನ್ನು ತಡೆದುಕೊಳ್ಳುವ ಶಕ್ತಿ ನಮಗೆ ಇರುತ್ತದೆ. ಇದು ಪ್ರತಿಯೊಬ್ಬರಿಗೂ ವೇದ್ಯವಾದರೆ ಒಳ್ಳೆಯದು. ಅರಿಯದಿದ್ದರೆ ಮನುಷ್ಯ ಈ ಆಸೆಗಳ ವಿಷಮ ವೃತ್ತದಿಂದ ಹೊರಬರಲು ಸಾಧ್ಯವೇ ಇಲ್ಲ. ಮತ್ತೆ ಮತ್ತೆ ಆ ಆಸೆಗಳು ನಮ್ಮಲ್ಲಿ ಹೊಕ್ಕು ನಮ್ಮನ್ನು ತನ್ನ ಸೆಳೆತಕ್ಕೆ ಬೀಳಿಸಿ, ನಮ್ಮನ್ನು ನಾನಾ ರೀತಿಯಲ್ಲಿ ಪೀಡಿಸುತ್ತದೆ. ಎಚ್ಚರದಿಂದಿರುವುದು ಒಳ್ಳೆಯದು.

**ಮುಕ್ತಕ-207** **ಒಣಗಿ ಬೇಸಗೆಯಿಂದ ಮಣ್ಣಾಗಿ ಕಾಣದಿಹ |**

**ತೃಣ ಮೊಳೆಯುವುದು ಮರಳಿ ಹನಿಯೆರಡು ಬೀಳೆ ||**

**ಅಣಗಿರ್ದು ನರನಾಶೆಯಂತು ಕಷ್ಟದ ದಿನದಿ |**

**ಕುಣಿವುದನುಕೂಲ ಬರೆ – ಮಂಕುತಿಮ್ಮ ||**

ಹನಿಯೆರಡು=ಹನಿ+ಎರಡು, ಅಣಗಿದ್ದು=ಅಣಗಿ+ಇದ್ದು, ನರನಾಶೆಯಂತು=ನರನ+ಆಶೆ+ಎಂತು.
ಕುಣಿವುದನುಕೂಲ=ಕುಣಿವುದು+ಅನುಕೂಲ+ಬರೆ, ತೃಣ=ಹುಲ್ಲು, ಅಣಗಿದ್ದು=ಸುಪ್ತವಾಗಿದ್ದು.

ಬೇಸಿಗೆಯಲ್ಲಿ ಒಣಗಿ ನಮಗೆ ಬರೀ ಮಣ್ಣಂತೆ ಕಾಣುವ ಹುಲ್ಲು ನಾಲ್ಕು ಹನಿ ಮಳೆ ಬಿದ್ದರೆ ಮತ್ತೆ ಚಿಗುರುವಂತೆ, ಕಷ್ಟದ ದಿನಗಳಲ್ಲಿ ಮನದ ಅಂತರ್ಯದಲ್ಲಿ, ಕಾಣದಂತೆ ಇದ್ದ ಮನುಷ್ಯನ ಆಸೆಗಳೆಲ್ಲ ಅನುಕೂಲವಾದ ಸ್ಥಿತಿ ಬಂದೊಡನೆಯೇ ಮತ್ತೆ ಚಿಗುರುತ್ತವೆ ಎಂದು ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ ಹೇಳುತ್ತಾರೆ.

ಮನುಷ್ಯನ ಅಂತರ್ಯವನ್ನು ಬೆದಕಿ ನೋಡಿದರೆ ಆಸೆ ಸಾಯುವುದೇ ಇಲ್ಲ. ಅದನ್ನೇ ದಾಸರು 'ಆಸೆ ಸತ್ತಂತಿರಬಹುದು' ಎಂದರು. 'ಆಸೆ ಸತ್ತಂತೆ' ಇರಬಹುದು, ಅಷ್ಟೇ, ನಿಜವಾಗಿ ಆಸೆ ಸಾಯುವುದೇ ಇಲ್ಲ. ಯಾವುದೋ ವಸ್ತುವಿನ ಬಯಕೆ, ಪೂರೈಸಿಕೊಳ್ಳಲು ಸಾಧ್ಯವಾದರೆ ಸರಿ. ಇಲ್ಲವಾದರೆ ಆಸೆ ಕೊನೆಯಾಗುವುದೇ ಇಲ್ಲ. ಇಂದು ಸಿಗದಿದ್ದರೆ ಮತ್ತೆ ನಾಳೆ ಪ್ರಯತ್ನ. ಈ ಪ್ರಯತ್ನ ನಿರಂತರವಾಗಿ ಸಾಗುತ್ತದೆ. ಒಂದು ಆಸೆ ಪೂರೈಸಿಕೊಳ್ಳಲಾಗದಿದ್ದರೆ, ಮತ್ತೊಂದು ಆಸೆ ಚಿಗುರೊಡೆಯುತ್ತದೆ. ಆಸೆ ತೀರದೆ ಹೋದರೆ ಅದು ಸುಪ್ತವಾಗಿ ಮನದ ಯಾವುದೋ ಮೂಲೆಯಲ್ಲಿ ಬಿದ್ದುಕೊಂಡಿರುತ್ತದೆ. ಮತ್ತೆ ಅನುಕೂಲ ಸ್ಥಿತಿ ಬಂದರೆ, ಆಸೆ ಚಿಗುರಿ ಅದನ್ನು ಪೂರೈಸಿಕೊಳ್ಳುವ ಪ್ರಯತ್ನ ನಡೆಯುತ್ತದೆ. ಇದು ಮನುಷ್ಯನ ಸಹಜ ಸ್ವಭಾವ.

ಮನುಷ್ಯನ ಆಸೆಗಳಿಗೆ ಮಿತಿಯೇ ಇರುವುದಿಲ್ಲ. ಒಂದು ಪೂರ್ಣವಾದರೆ ಮತ್ತೊಂದು ಮೊಳಕೆಯೊಡೆಯುತ್ತದೆ. 'ಇಷ್ಟಾದರೆ ಮತ್ತಷ್ಟರ ಆಸೆ. ಇದಾದರೆ ಇನ್ನೊಂದರ ಆಸೆ" ಎನ್ನುವುದು ಎಲ್ಲರಿಗೂ ತಿಳಿದ ವಿಷಯವಲ್ಲವೇ. ನಾವೆಲ್ಲರೂ ಅದೇ ಸ್ಥಿತಿಯಲ್ಲಿರುವವರು. ವಾಚಕರೆ, ಇದನ್ನು ತಾವು ಇದು ಸಹಜ ಗುಣವಾದ್ದರಿಂದ ತಪ್ಪೇನು? ಎಂದರೆ, ಖಂಡಿತ ತಪ್ಪಿಲ್ಲ. ಹಾಗಿದ್ದರೆ ಆಸೆ ತಪ್ಪು' ಎಂದು ಹಲವಾರು ಜನ ಏಕೆ ವಿಶ್ಲೇಷಣೆ ಮಾಡಿದ್ದಾರೆ ಎಂದರೆ, ಆಸೆ ಜೀವನಕ್ಕೆ ಪೂರಕವಾಗಿರಬೇಕು ಎಂದು ಅರ್ಥ.

ವ್ಯಕ್ತಿ, ವಸ್ತು ಮತ್ತು ವಿಷಯಾಸಕ್ತಿ, ಒಂದು ವ್ಯಕ್ತಿಯ ಇಹಲೋಕದ ಜೀವನಕ್ಕೆ ಮತ್ತು ಇಲ್ಲಿನ ತೊಳಲಾಟಕ್ಕೆ ಪೂರಕವಾಗಿರಬಹುದು. ಸತ್ಯವಾದ ಆನಂದಕ್ಕೆ ಸುಖಕ್ಕೆ ಖಂಡಿತ ಅದು ಮಾರಕವೇ ಅಲ್ಲವೇ? ಆಧ್ಯಾತ್ಮಿಕ ಔನ್ನತ್ಯಕ್ಕೆ ಖಂಡಿತ ಮಾರಕ. ಆಸೆಯನ್ನು ಬಿಡುವ ಆಸೆ ಬರಬೇಕು. ಜ್ಞಾನವನ್ನು ಪಡೆದು ಆ ಜ್ಞಾನದ ಬಲದಿಂದ ಈ ಜಗತ್ತು ಮತ್ತು ಇಲ್ಲಿನ ವಸ್ತುಗಳ ಮೇಲೆ ಆಸೆಯನ್ನು ಬಿಡಬೇಕು.

ಆಸೆಯನ್ನು ಬಿಟ್ಟಾಕ್ಷಣ ಜಗತ್ತಿನಿಂದ ನಿರ್ಗಮಿಸಬೇಕು ಎಂದು ಅರ್ಥವಲ್ಲ. ಈ ಜಗತ್ತಿನಲ್ಲಿ ಇದ್ದು, ಜಗತ್ತಿನ ಆಸೆ ತೊರೆದು, ಜಗತ್ತಿನಲ್ಲಿ ವಿರಕ್ತಿ ಹೊಂದಿ ಜಗತ್ಕಾರಕನಲ್ಲಿ ರಕ್ತಿ ಬೆಳೆಸಿಕೊಂಡರೆ, ಸತ್ಯದ ದರ್ಶನವಾಗುತ್ತದೆ. ಸತ್ಯದರ್ಶನವಾದರೆ ತತ್ವ ದರ್ಶನವಾಗುತ್ತದೆ. ನಿಜವಾದ ಆನಂದ ನಮ್ಮದಾಗುತ್ತದೆ. ಹೇಳುವುದು ಬಹಳ ಸುಲಭ. ಪ್ರಯತ್ನ ಪಟ್ಟರೆ ಅಸಾಧ್ಯವಲ್ಲ. “ಸತ್ಯ ಮತ್ತು ತತ್ವದ ಆಸೆ” ಇರುವವರೆಲ್ಲರೂ ಆ ಪ್ರಯತ್ನವನ್ನು ಮಾಡಬೇಕು.

**ಮುಕ್ತಕ-208**

**ಬೆದಕಾಟ ಬದುಕೆಲ್ಲ; ಚಣಚಣವು ಹೊಸಹಸಿವು |**
**ಅದಕಾಗಿ ಇದಕಾಗಿ ಮತ್ತೊಂದಕಾಗಿ ||**
**ಅಧಿಕಾರ ಸಿರಿ ಸೊಗಸು ಕೀರ್ತಿಗಳ ನೆನೆದು |**
**ಕುದಿಯುತಿಹುದಾವಗಂ - ಮಂಕುತಿಮ್ಮ ||**

ಕುದಿಯುತಿಹುದಾವಗಂ=ಕುದಿಯುತಿಹುದು+ಆವಗಂ

ಬೆದಕಾಟ=ಪರದಾಟ, ಚಣಚಣವು=ಪ್ರತಿ ಕ್ಷಣವೂ, ಹಸಿವು=ಆಸೆ, ಕಾಮನೆ, ಆವಗಂ=ಸದಾಕಾಲ.

ಪ್ರತೀ ಕ್ಷಣವೂ ನಾವುಗಳೆಲ್ಲ ಹೊಸ ಹೊಸ ಯೋಜನೆಗಳು, ಯೋಚನೆಗಳು, ಆಸೆಗಳು, ಆಕಾಂಕ್ಷೆಗಳನ್ನು ಹೊತ್ತು, ಇದನ್ನೂ, ಅದನ್ನೊ ಅಥವಾ ಮತ್ಯಾವುದನ್ನೂ ಪಡೆಯುವುದಕ್ಕೆ ಪರದಾಡುತ್ತಿರುತ್ತೇವೆ. ಈ ಪರದಾಟ,

ಅಧಿಕಾರ, ಸಂಪತ್ತು, ಅಂದಚೆಂದ ಅಥವಾ ಕೀರ್ತಿಗಳಂತಹ ವಿಚಾರಗಳನ್ನು ನೆನೆದು ನಮ್ಮ ಮನಸ್ಸು ಕುದಿಯುತ್ತಿರುತ್ತದೆ ಎಂಬ ವಿಷಯವನ್ನು ಮಂಡಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ನಮ್ಮ ಈ ಪರದಾಟ ಬೆದಕಾಟಗಳು ಅಧಿಕಾರ, ಸಿರಿವಂತಿಕೆ, ಅಂದಚೆಂದ, ಕೀರ್ತಿಯ ಆಸೆ ಅಥವಾ ಇನ್ನೂ ಹತ್ತು ಹಲವಾರು ಕಾರಣಗಳಿಗೆ ನಡೆಯುತ್ತಲೇ ಇರುತ್ತದೆ. ಈ ಬೆದಕಾಟಗಳಲ್ಲಿ ಮನುಷ್ಯ ತನ್ನ ಆಸೆಗಳನ್ನು ಪೂರೈಸಿಕೊಳ್ಳುವ ಹಾದಿಯಲ್ಲಿ ಯಾವ ಯಾವ ವೇಷಗಳನ್ನು ಹಾಕುತ್ತಾನೆ, ಎಂತೆಂತಹ ಮಾರ್ಗಗಳನ್ನು ತುಳಿಯುತ್ತಾನೆ, ಹೇಗೆಲ್ಲಾ ತನ್ನ ಬುದ್ಧಿಯನ್ನು ಉಪಯೋಗಿಸುತ್ತಾನೆಂಬುದು ಪ್ರತಿಯೊಬ್ಬರ ಅನುಭವಕ್ಕೂ ಬಂದಿರುತ್ತದೆ. ಈ ಕಾರಣಗಳಿಗಾಗಿಯೇ, ಈ ಜಗತ್ತಿನಲ್ಲಿ ಒಂದು ಕಡೆ, ಪೈಪೋಟಿ, ಹೊಡೆದಾಟ, ಕೊಲೆ, ಕೊಳ್ಳೆ, ದರೋಡೆ, ಬೆದರಿಕೆ, ಅಪಹರಣಗಳಂತಹ ವೈಯಕ್ತಿಕ ಅಪರಾಧಗಳು ಮತ್ತು ಆಕ್ರಮಣ, ಯುದ್ಧ, ಭಯೋತ್ಪಾದನೆ ಮುಂತಾದ ಸಾಮೂಹಿಕ ಅಪರಾಧಗಳಿಂದ ಕೂಡಿದ್ದರೆ ಮತ್ತೊಂದು ಕಡೆ ಪ್ರೇಮ, ಪ್ರೀತಿ,





ಸೌಹಾರ್ದತೆ, ಭ್ರಾತೃತ್ವ, ಮಿತ್ರತ್ವ, ಮುಂತಾದ ಸಕಾರಾತ್ಮಕವಾದ ನಡವಳಿಕೆಗಳಿಂದ ಕೂಡಿದೆ. ಇವೆರಡಕ್ಕೂ ಮಾನವ ಇತಿಹಾಸದಲ್ಲಿ ಹೇರಳವಾದ ಉದಾಹರಣೆಗಳು ದೊರೆಯುತ್ತವೆ.

ಪ್ರತೀ ನಿಮಿಷವೂ ನಮ್ಮಲ್ಲಿ ಹೊಸ ಹೊಸ ಆಸೆಗಳು ಅಲೆಗಳಂತೆ ಹುಟ್ಟುತ್ತಲೇ ಇರುತ್ತವೆ. ನಾವು ಆ ಆಸೆಗಳನ್ನು ಸಾಕಾರಗೊಳಿಸಿಕೊಳ್ಳಲು ಪ್ರಯತ್ನಪಡುತ್ತಲೇ ಇರುತ್ತೇವೆ. ಹಲವು ಬಾರಿ ನಮಗೆ ಯಶಸ್ಸ ದೊರಕುತ್ತದೆ. ಮತ್ತೆ ಹಲವು ಬಾರಿ ನಿರಾಶರಾಗುತ್ತೇವೆ. ನಿತ್ಯವೂ ಆಸೆಗಳನ್ನು ತೀರಿಸಿಕೊಳ್ಳಲು ಪರದಾಡುತ್ತೇವೆ. ಇದನ್ನೇ ಮಾನ್ಯ ಗುಂಡಪ್ಪನವರು ಬೆದಕಾಟ ಬದುಕೆಲ್ಲ; ಚಣಚಣವು' ಎಂದು ನಾವು ಪಡುವ ಪರದಾಟವನ್ನು ಅಣಕವಾಡುತ್ತಾರೆ. ಇದು

ವಸ್ತು ಸ್ಥಿತಿ. ಇದರಲ್ಲೇನೂ ತಪ್ಪಿಲ್ಲ. ಇದು ಈ ಜಗತ್ತಿನಲ್ಲಿ ವಿಧಿಗನುಗುಣವಾಗಿ ಪ್ರತಿಯೊಬ್ಬರ ಕರ್ಮಗಳ ಅನುಸಾರವಾಗಿ ನಡೆಯುತ್ತಿರುತ್ತದೆ.

ಈ ಬೆದಕಾಟವಿದ್ದಷ್ಟು ದಿನವೂ ಮನುಷ್ಯ ಅವಶ್ಯಕವಾಗಿಯೋ ಅಥವಾ ಅನಾವಶ್ಯಕವಾಗಿಯೋ ಈ ಜಗತ್ತಿಗೆ ಅಂಟಿಕೊಂಡು ಸಕ್ರಿಯನಾಗಿರುತ್ತಾನೆ. ಇದೂ ಸಹಜವೇ. ಆದರೆ ಈ ಸಕ್ರಿಯತೆ, ನಾವು ಈ ಜಗತ್ತಿನ ಅಂಟನ್ನು ಕಡಿಮೆ ಮಾಡಿಕೊಳ್ಳಲು, ಜ್ಞಾನ ವೃದ್ಧಿ ಮಾಡಿಕೊಳ್ಳಲು, 'ಆಕಾರ'ಗಳಿಂದ ಸಿಗುವ ಆನಂದಕ್ಕಿಂತ ನಿರಾಕಾರಾನಂದವನ್ನು, ನಿಜಾನಂದವನ್ನು ಪಡೆಯಲು ಬೇಕಾದ ಜ್ಞಾನ ಮತ್ತು ಅನುಭವವನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಪಟ್ಟರೆ ಇಹಕ್ಕೂ ಮತ್ತು ಪರಕ್ಕೂ ಸಹಾಯವಾಗುತ್ತದೆ.

ಈ ಜಗತ್ತು ನಮ್ಮ ಇಂದ್ರಿಯಗಳನ್ನು ಆಕರ್ಷಿಸುತ್ತದೆ ಮತ್ತು ನಾವು ಈ ಇಂದ್ರಿಯಗಳ ಸೆಳೆತಕ್ಕೆ, ಆಕರ್ಷಣೆಗೆ ಒಳಗಾಗುತ್ತೇವೆ. ಈ ಆಕರ್ಷಣೆಯೇ ನಮ್ಮನ್ನು 'ಪರದಾಡುವಂತೆ ಅಥವಾ ಬೆದಕಾಡುವಂತೆ' ಮಾಡುತ್ತದೆ. ನಾವು ಎಷ್ಟು ಕಡಿಮೆ ಈ ಜಗತ್ತಿಗೆ ಅಂಟಿಕೊಂಡರೆ ಅಷ್ಟು ಸುಖ. ಇದನ್ನು ಪ್ರತಿಯೊಬ್ಬರೂ ಅವರವರದೇ ರೀತಿಯಲ್ಲಿ ಅರ್ಥಮಾಡಿಕೊಂಡು ಅಂಟುಕಳಚಿಕೊಳ್ಳುವ ಪ್ರಯತ್ನ ಪಡಬೇಕು. ಪ್ರಯತ್ನ ಪಟ್ಟರೆ ಹಿತ ಇಲ್ಲದಿದ್ದರೆ ಈ ಪರದಾಟ-ಬೆದಕಾಟಗಳೇ ನಮ್ಮ ನಿತ್ಯ ಪರಿಪಾಠವಾಗಿಬಿಡುತ್ತದೆ.

# ಸಾಜದ ಶಿಕ್ಷೆ 209-213

**ಮುಕ್ತಕ – 209**

**ದನ ಸಿಂಗ ಹುಲಿ ಹಕ್ಕಿ ಹಾವುಮೀನ್ ಗಳಿಗೆಲ್ಲ |**
**ಇನಿಸುಣಿಸು, ಬೆದೆ, ಬೆದರು - ಅಷ್ಟೇ, ಜೀವಿತವು ||**
**ಮನುಜನೆಂತನಿತರಿಂ ತೃಪ್ತಿಪಡೆವನವಂಗೆ |**
**ಕ್ಷಣ ಕ್ಷಣವು ಹೊಸ ಹಸಿವು – ಮಂಕುತಿಮ್ಮ ||**

ಇನಿಸುಣಿಸು=ಇನಿಸು+ಉಣಿಸು, ಮನುಜನೆಂತನಿತರಿಂ=ಮನುಜನ್+ಎಂತಂ+ಅನಿತರಿಂ,
ತೃಪ್ತಿಪಡೆವನವಂಗೆ=ತೃಪ್ತಿಪಡೆವನ್+ಅವಂಗೆ
ಉಣಿಸು=ಆಹಾರ, ಬೆದೆ=ಬಿಸಿ, ಬೆದರು=ಹೆದರಿಕೆ, ಅನಿತರಿಂ=ಇಷ್ಟರಿಂದ ಮಾತ್ರ

ದನ, ಸಿಂಹ, ಹುಲಿ, ಹಕ್ಕಿ, ಹಾವು, ಮೀನು ಮುಂತಾದ ಪ್ರಾಣಿಗಳಿಗೆ ಹಸಿವಾದಾಗ ಆಹಾರ, ಸಂತಾನಾಭಿವೃದ್ಧಿ ಮತ್ತು ತಮ್ಮನ್ನು ತಾವು ಕಾಪಾಡಿಕೊಳ್ಳುವುದಕ್ಕೆ ಪೂರಕವಾದ ಅವಶ್ಯಕತೆಗಳನ್ನು ಬಿಟ್ಟರೆ ಬೇರಾವ ಆಸೆಗಳೂ ಇರದು ಮತ್ತು ಅವುಗಳ ಜೀವಿತವು ಅಷ್ಟಕ್ಕೇ ಸೀಮಿತವು. ಆದರೆ ಕೋಟ್ಯಾಂತರ ಆಸೆ ಆಕಾಂಕ್ಷೆಗಳ ಆಗರವೇ ಆದ ಮನುಷ್ಯ ಎಂದಿಗೂ ತೃಪ್ತನಾಗುವುದೇ ಇಲ್ಲ. ಕ್ಷಣಕ್ಷಣವೂ ಅವನ ಆಸೆಗಳ ಹಸಿವು ಅಧಿಕವಾಗುತ್ತಲೇ ಇರುತ್ತದೆ ಎಂಬ ಭಾವವನ್ನು ವ್ಯಕ್ತಪಡಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ನಾವು ಮನುಷ್ಯನನ್ನು ಬಿಟ್ಟು ಬೇರಾವ ಪ್ರಾಣಿ, ಪಕ್ಷಿ, ಕೀಟ, ಜಂತುಗಳನ್ನು ಕೂಲಂಕುಷವಾಗಿ ಅಭ್ಯಸಿಸಿದರೆ ಈ ಪ್ರಾಣಿಗಳ ಬೆದಕಾಟ ಕೇವಲ ಮೂರು ವಿಷಯಗಳಿಗೆ ಸೀಮಿತವಾಗಿರುತ್ತದೆ ಎಂದು ನಮಗೆ ಅರ್ಥವಾಗುತ್ತದೆ, ಆದರೆ ಮನುಷ್ಯನ ಅವಶ್ಯಕತೆಗಳನ್ನು ಪಟ್ಟಿ ಮಾಡಿದರೆ ನಮ್ಮ ಜೀವಮಾನವೆಲ್ಲ ಬರೆಯುತ್ತಾ ಹೋಗಬಹುದು. ಅವುಗಳ ಪರದಾಟ ಕೇವಲ ಮೂರು ಕಾರಣಗಳಿಗಾಗಿ ಆದರೆ ಮನುಷ್ಯನ ಬೆದಕಾಟ 3 ಕೋಟಿ ಕಾರಣಗಳಿಗಾಗಿ, ತನ್ನ ಆಹಾರವನ್ನು ಹುಡುಕಿಕೊಳ್ಳುವುದು, ಸಂತತಿಯನ್ನು ಮುಂದುವರೆಸುವುದು ಮತ್ತು ತನ್ನನ್ನು ಕಾಪಾಡಿಕೊಳ್ಳುವುದನ್ನು ಬಿಟ್ಟರೆ ಈ ಪ್ರಾಣಿ, ಪಕ್ಷಿ, ಕೀಟ ಮತ್ತು ಜಂತು ಸಂಕುಲಕ್ಕೆ ಅನ್ಯ ಅವಶ್ಯಕತೆಗಳೇ ಇರುವುದಿಲ್ಲ. ಆದರೆ ಮನುಷ್ಯನಿಗೆ ಈ ಮೂರೂ ಅವಶ್ಯಕತೆಗಳು ಬಹಳ ಗೌಣವಾಗಿಬಿಟ್ಟಿದೆ. ಇವುಗಳೊಟ್ಟಿಗೆ ಮನುಷ್ಯನ ಆಸೆಗಳು ಮತ್ತು ಅವಶ್ಯಕತೆಗಳು ಹತ್ತಾರು ಪಟ್ಟು ಅಧಿಕವಾಗಿದೆ.

ಮೊದಲಿಗೆ ಈ ಮೂರು ಅವಶ್ಯಕತೆಗಳನ್ನೇ ಹೊಂದಿದ್ದ ಮನುಷ್ಯ. ಈ ಅವಶ್ಯಕತೆಗಳನ್ನು ಸಮರ್ಪಕವಾಗಿ ಅಥವಾ ಸಂಪೂರ್ಣವಾಗಿ ಪೂರೈಸಿಕೊಳ್ಳಲಿಕ್ಕೆ ತನ್ನ ಬುದ್ಧಿಶಕ್ತಿಯನ್ನುಪಯೋಗಿಸಿ ಕಂಡುಕೊಂಡ ಹಲವಾರು ಮಾರ್ಗಗಳಿಂದ ಇವನ ಇತರ ಅವಶ್ಯಕತೆಗಳು ಬೆಳೆಯುತ್ತಾ ಹೋದವು. ಅವುಗಳನ್ನು ಪಡೆಯಲು ಅವನು ತನ್ನ ಸುತ್ತಲಿನ ಪರಿಸರವನ್ನು ಮತ್ತು ಈ ಸೃಷ್ಟಿಯಲ್ಲಿನ ಪ್ರತೀ ವಸ್ತುವನ್ನೂ ತನ್ನ ಉಪಯೋಗಕ್ಕೆ ಬಳಸಿಕೊಳ್ಳುತ್ತಾಹೋದ. ಈ ಪ್ರಯತ್ನದಲ್ಲಿ ಇವನು ವಿಜ್ಞಾನಿಯಾದ.

ಸಾವಿರಾರು ಆವಿಷ್ಕಾರಗಳನ್ನು ಮಾಡುತ್ತಾ ತನ್ನ ಜೀವನವನ್ನು ಉತ್ತಮಗೊಳಿಸಿಕೊಳ್ಳಲು ಇವನ ನಿರಂತರ ಪ್ರಯತ್ನ ನಡೆಯುತ್ತಲೇ ಇದೆ. ಒಂದು ನಿಟ್ಟಿನಲ್ಲಿ ಇದು ಮಾನವನ ಪ್ರಗತಿಯೆಂದೇ ಅಂದುಕೊಂಡರೂ, ಈ ವಿಜ್ಞಾನದ ಆವಿಷ್ಕಾರಗಳು ದುರ್ಬುದ್ಧಿಯ ಮನುಷ್ಯರ ಕೈಗೆ ಸಿಕ್ಕಾಗ ಪರಿಣಾಮ ಏನಾಗುವುದೆಂದು ವಾಚಕರ ಊಹೆಗೆ ಬಿಟ್ಟದ್ದು. ದುಷ್ಟನ ಕೈಯಲ್ಲಿ ದೊಣ್ಣೆ ಸಿಕ್ಕರೆ ಹೇಗಿರುತ್ತದೆಯೋ ಹಾಗೆ. ಇದಕ್ಕೆಲ್ಲ ಪ್ರತೀ ನಿತ್ಯ ಮನುಷ್ಯರ ಮನಸ್ಸುಗಳಲ್ಲಿ ಬುಗ್ಗೆ ಬುಗ್ಗೆಯಾಗಿ ಅಲೆ ಅಲೆಯಾಗಿ ಮೇಲೇಳುವ ಆಸೆಗಳ ಮಹಾಪೂರವೇ ಕಾರಣ.

ಇವನ ಆಸೆಗಳು, ವೈಯಕ್ತಿಕ ಅವಶ್ಯಕತೆಗಳನ್ನು ಮಿತಿಯಲ್ಲಿಟ್ಟುಕೊಂಡು ಒಟ್ಟು ಸಮಾಜದ ಒಳಿತಿಗಾದರೆ ಬಹಳ ಒಳ್ಳೆಯದು. ಆದರೆ ಇವನ ಆಸೆಗಳು ಸ್ವಾರ್ಥಕ್ಕೆ, ಸ್ವಪ್ರತಿಷ್ಠೆಯನ್ನು ಮೆರೆಯುವುದಕ್ಕೆ, ಅನ್ಯರನ್ನು ಮೆಟ್ಟಿ ನಿಲ್ಲುವುದಕ್ಕೆ, ಅನ್ಯರ ನಾಶಕ್ಕೆ, ಸಾವಿರಾರು ವರ್ಷಗಳಿಂದ ಬೆಳೆದುಬಂದ ಸಂಸ್ಕೃತಿ ಸಂಸ್ಕಾರಗಳ ನಾಶಕ್ಕೆ ಆದರೆ ಇದು ಕೆಡುಕಿನ ಆಸೆ. ಇದು ದುರಾಸೆ. ಇಂತಹ ಆಸೆಗಳನ್ನು ನಾವು ಸಂಪೂರ್ಣವಾಗಿ ದೂರವಿಡಬೇಕು





ಮತ್ತು ಅನ್ಯರಲ್ಲಿದ್ದರೆ ವಿರೋಧಿಸಬೇಕು. ಆದರೆ ಇಂದು ಕೇವಲ ಹಣದ ಭಾಷೆ ಮಾತ್ರ ಅರ್ಥವಾಗುತ್ತಿರುವ ಕಾಲದಲ್ಲಿ ಬದಲಾವಣೆ ಬಹಳ ಕಷ್ಟ. ಅದರೂ ಪ್ರಯತ್ನಪಡಬಹುದಲ್ಲವೇ?

**ಮುಕ್ತಕ – 210**

**ತಂಗಳುಣಿಸಾದೊಡಂ ಸಾಕೆನುವವನುಪವಾಸಿ |**
**ಸಿಂಗಾರ ಸಂಗಾತಿ ಬೇಕುಂಡವನಿಗೆ ||**
**ಬಂಗಾರ ಪದವಿ ಪ್ರತಿಷ್ಠೆ ಬೇಕಾ ಬಳಿಕ |**
**ಹಿಂಗದಾಯದೆಚೆಲುಮೆ – ಮಂಕುತಿಮ್ಮ ||**

ತಂಗಳುಣಿಸಾದೊಡಂ=ತಂಗಳು+ಉಣಿಸು+ಆದೊಡಂ,

ಸಾಕೆನುವವನುಪವಾಸಿ=ಸಾಕು+ಎನುವವನು+ಉಪವಾಸಿ, ಬೇಕುಂಡವನಿಗೆ=ಬೇಕು+ಉಂಡವನಿಗೆ,

ಹಿಂಗದಾಯದೆಚೆಲುಮೆ=ಹಿಂಗದು+ಆ+ಎದೆ+ಚೆಲುಮೆ.

ಬಹಳ ಹಸಿವಿನಿಂದಿರುವವನಿಗೆ ತಂಗಳನ್ನವಾದರೂ ತೃಪ್ತಿ ನೀಡುತ್ತದೆ. ಒಂದು ಬಾರಿ ಆ ಹಸಿವು ನೀಗಿದರೆ ಅವನಿಗೆ ಶೃಂಗಾರ, ಬಟ್ಟೆಬರೆ, ಸಂಗಾತಿ ಬೇಕೆನಿಸುತ್ತದೆ. ಅವುಗಳು ಸಿಕ್ಕರೆ ಮುಂದಕ್ಕೆ ಆಸ್ತಿ-ಅಂತಸ್ತು-ಪದವಿ ಬೇಕೆನಿಸುತ್ತದೆ, ಹೀಗೆ ಬಯಕೆಗಳ ಒರತೆ ಮನುಜನ ಮನದಲ್ಲಿ ಎಂದಿಗೂ ಇಂಗದು ಎಂದು ಸ್ಪಷ್ಟಪಡಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

'ಬಡತನಕ್ಕೆ ಉಂಬುವ ಚಿಂತೆ, ಉಂಬುವುದಾದರೆ ಉಡುವ ಚಿಂತೆ, ಉಡುವುದಾದರೆ ಮನೆಯ ಚಿಂತೆ ಮನೆಯದಾದರೆ ಮಡದಿಯ ಚಿಂತೆ' ಎಂದು ಶಿವಶರಣರ ಉಕ್ತಿ, ಪ್ರತೀ ಮನುಷ್ಯನಿಗೂ ಆಸೆಗಳಿರುತ್ತದೆ. ಆ ಆಸೆಗಳೇ ಅವನನ್ನು ಪುರೋಗಾಮಿಯಾಗಿಸುತ್ತದೆ, ಪ್ರಗತಿಯ ಪಥದಲ್ಲಿ ಕೊಂಡುಹೋಗುತ್ತದೆ, ತನ್ನ ಜೀವನವನ್ನು ಸುಧಾರಿಸಿಕೊಳ್ಳಲು ಅನುಕೂಲವಾಗುತ್ತದೆ. ಇದರಲ್ಲಿ ತಪ್ಪೇನೂ ಇಲ್ಲ. ಆದರೆ ಇದಕ್ಕೆ ಕೊನೆಯಲ್ಲಿ. ಯಾರಿಗೂ ಗೊತ್ತಿಲ್ಲ. ಮನುಷ್ಯನಿಗೆ ಆಸೆಪಡುವುದೇ ಗೊತ್ತು, ಅದನ್ನು ನಿಲ್ಲಿಸುವುದು ಹೇಗೆ ಎಂದು ಗೊತ್ತಿಲ್ಲ. ನಮ್ಮ ಜೀವನಗಳು ಒಂದು ಬ್ರೇಕ್ ಇಲ್ಲದ ಗಾಡಿಗಳಂತೆ. ಒಂದು ಸಲ ಓಡಲು ಪ್ರಾರಂಭಿಸಿದರೆ, ಓಡುತ್ತಲೇ ಇರುತ್ತದೆ. ನಿಲ್ಲಿಸಲು ಸಾಧ್ಯವೇ ಇಲ್ಲ. ಇದು ನಿಲ್ಲಬೇಕಾದರೆ ಒಂದು ಇದರಲ್ಲಿನ ಇಂಧನ ಖಾಲಿಯಾಗಬೇಕು ಅಥವಾ ಎಲ್ಲಿಯಾದರೂ ಅಪಘಾತವಾಗಿ ನಿಲ್ಲಬೇಕು.

ಅಂದರೆ ನಮ್ಮ ಆಸೆಗಳ ಬುಗ್ಗೆ, ಒರತೆ, ಊಟೆ ಕಡಿಮೆಯಾಗುವುದೇ ಇಲ್ಲ. ನಿರಂತರ ಮೇಲೇಳುತ್ತಲೇ ಇರುತ್ತದೆ. ಈ ಆಸೆಗಳನ್ನು ಪೂರೈಸಿಕೊಳ್ಳಲು ನಾವು ಪಡುವ ಪಾಡೇ ನಮ್ಮ ಜೀವನ. ಇದಾದರೆ ಅದು, ಅದಾದರೆ ಮತ್ತೊಂದು. ಇಷ್ಟಾದರೆ ಅಷ್ಟು, ಅಷ್ಟಾದರೆ ಮತ್ತಷ್ಟು ಹೀಗೆ ನಡೆದೇ ಇರುತ್ತದೆ ನಮ್ಮ ಓಟ. ಬ್ರೇಕ್ ಇಲ್ಲದ ಗಾಡಿ, ಬ್ರೇಕ್ ಹಾಕಿದರೆ ಅಥವಾ ಓಟದ ವೇಗವನ್ನು ಕಡಿಮೆ ಮಾಡಿದರೆ ಸುಖ. ಆದರೆ ಎಲ್ಲಿ ಬ್ರೇಕ್ ಹಾಕಬೇಕು ಎನ್ನುವುದು ನಮಗೆ ಗೊತ್ತೇ ಇಲ್ಲ. ಅರಿಯುವ ಮಾರ್ಗಗಳು ಹಲವಾರು ಇದ್ದರೂ, ಅನ್ಯರ ಅನುಭವಗಳನ್ನು ನೋಡಿ ತಿಳಿದರೂ, ನಮ್ಮ ಅನುಭವಕ್ಕೆ ಬರದೆ ನಾವು ಏನನ್ನೂ ಮಾಡಲಾರೆವು.

ವಾಚಕರೆ ಇದರ ಬಗ್ಗೆ ಎಷ್ಟು ಪುಟಗಳು ಬರೆದರೂ ಸಾಲದು. ಪ್ರತಿಯೊಬ್ಬರಿಗೂ ತಾವೇನು ಆಸೆ ಪಡತ್ತೀದ್ದೆವೆಂಬ ಪರಿವೆ ಇರಬೇಕು. ಎಷ್ಟು ಆಸೆಪಡಬೇಕೆಂಬ ಅರಿವಿರಬೇಕು. ಸಿಕ್ಕಿದ್ದರಲ್ಲಿ ತೃಪ್ತಿಪಡುವ ಸಂಸ್ಕಾರವಿರಬೇಕು ಮತ್ತು ಇದು ಸಾಕು, ಇಷ್ಟು ಸಾಕು ಎಂದು ಗೆರೆ ಎಳೆಯುವ ಧೈರ್ಯ ಬರಬೇಕು. ಹಾಗಾದಲ್ಲಿ ನಮಗೆ ಸುಖ. ಇಲ್ಲದಿದ್ದರೆ ನಿರಂತರ ಆಶೆಗಳ ಪಾಠದೊಳಗೆ ಬಂಧನ, ಪ್ರಯತ್ನ ಪ್ರತಿಯೊಬ್ಬರ ಇಚ್ಚೆಗೆ ಸೇರಿದ್ದು.

**ಮುಕ್ತಕ-211**

**ಮನಸು ಬೆಳೆದಂತೆಲ್ಲ ಹಸಿವು ಬೆಳೆಯುವುದಯ್ಯ ।**
**ತಣಿಸಲದನೊಗೆಯುವುದು ಬಗೆಬಗೆಯ ಯುಕ್ತಿ ॥**
**ಮನುಜನೇಳಿಗೆಯದರಿನ್, ಆ ಮನಸಿನೇಳಿಗೆಗೆ ।**
**ಕೊನೆಯಲ್ಲಿ? ಚಿಂತಿಸೆಲೊ - ಮಂಕುತಿಮ್ಮ ॥**

ತಣಿಸಲದನೊಗೆಯುವುದು=ತಣಿಸಲು+ಅದನು+ಒಗೆಯುವುದು,
ಮನುಜನೇಳಿಗೆಯದರಿನ್=ಮನುಜನ+ಏಳಿಗೆ+ಅದರಿನ್, ಮನಸಿನೇಳಿಗೆಗೆ-ಮನಸಿನ+ಏಳಿಗೆಗೆ.

ಮನುಷ್ಯನ ಮನಸ್ಸು ಬೆಳೆದಂತೆಲ್ಲ ಅವನ ಮನಸ್ಸಿನ ಹಸಿವೂ ಸಹ ಬೆಳೆಯುತ್ತದೆ. ಆ ಹಸಿವನ್ನು ಇಂಗಿಸಲು ಮನಸ್ಸು ಬಗೆಬಗೆಯ ಉಪಾಯಗಳನ್ನು ಹುಡುಕುತ್ತದೆ. ಈ ರೀತಿಯ ಹಸಿವು ಮತ್ತು ಆ ಹಸಿವಿನ ತಣಿಯುವಿಕೆಯಿಂದ ಮನುಷ್ಯನ ಬಾಹ್ಯ ಜೀವನ ಉತ್ತಮವಾಗಬಹುದು. ಈ ರೀತಿ ಆಸೆ ಪಡುವುದು, ಆ ಆಸೆಗಳನ್ನು ತೀರಿಸಿಕೊಳ್ಳಲು ಹಲವಾರು ಉಪಾಯಗಳನ್ನು ಮಾಡುವುದು ಮತ್ತು ಈ ಉಪಾಯಗಳಿಂದ ಉನ್ನತ ಸ್ಥಾನ ಹೊಂದುವುದು, ಹೀಗೆ ನಡೆಯುವ ಏಳಿಗೆಗೆ ಕೊನೆಯಲ್ಲಿ? ಎಂದು ಒಂದು ಪ್ರಶ್ನೆಯ ಮೂಲಕ ಬಹಳ ಗಹನವಾದ ವಿಚಾರವನ್ನು ಈ ಮುಕ್ತಕದಲ್ಲಿ ಪ್ರಸ್ತುತಪಡಿಸುತ್ತಾರೆ ಮಾನ್ಯ ಗುಂಡಪ್ಪನವರು.

ನಾವು ಚಿಕ್ಕವರಾಗಿದ್ದಾಗಿನಿಂದ ಬೆಳೆದು ಯುವಕರಾಗಿ, ವಯಸ್ಕರಾಗಿ, ವಾರ್ಧಕ್ಯಕ್ಕೆ ಇಳಿದು ಜೀವನ ಅಂತ್ಯವಾಗುವ ತನಕ ಬೇರೆ ಬೇರೆ ವಯಸ್ಸಿನಲ್ಲಿ ಬೇರೆ ಬೇರೆ ರೀತಿಯ ಆಸೆಗಳು ಹುಟ್ಟುತ್ತಲೇ ಇರುತ್ತವೆ. ನಮ್ಮ ಚಿಕ್ಕಂದಿನ ಆಸೆಗಳು ಇಂದು ನಮಗೆ ಬಾಲಿಶವಾಗಿ ಕಾಣಬಹುದು. ನಮ್ಮ ಆಸೆಗಳು ನಮಗೇ ಸೇರಿದ್ದು, ನಮ್ಮ ಆಸೆಗಳಂತೆ ಅನ್ಯರ ಆಸೆಗಳಿರುವುದಿಲ್ಲ ಮತ್ತು ಅನ್ಯರಂತೆ ನಾವು ಆಸೆಪಡಲಾಗುವುದಿಲ್ಲ. ನಮ್ಮದೇ ವಿಧಾನದಲ್ಲಿ ನಮ್ಮ ಆಸೆಗಳನ್ನು ಪೂರೈಸಿಕೊಳ್ಳಲು ಹಲವಾರು ರೀತಿಯಲ್ಲಿ ಯೋಜನೆಗಳನ್ನು ಹಾಕುತ್ತಲೇ ಇರುತ್ತೇವೆ. ಒಂದು ಪ್ರಯತ್ನದಲ್ಲಿ ಸೋತರೆ ಮತ್ತೊಂದು ಯೋಜನೆ ಮಗದೊಂದು ಪ್ರಯತ್ನ, ಹೀಗೆ ನಿರಂತರವಾಗಿ ನಡೆಯುವ ಈ ಆಸೆಪಡುವ ಮತ್ತು ಆ ಆಸೆಗಳನ್ನು ಪೂರೈಸಿಕೊಳ್ಳುವ ಪ್ರಯತ್ನಗಳ ಸರಮಾಲೆಯೇ ನಮ್ಮ ಜೀವನವೋ? ಮನಸ್ಸಿನ ಈ ಆಸೆಪಡುವ ಜಾಣೆಗೆ ಕೊನೆಯಿಲ್ಲವೋ? ಎಂದು ಒಂದು ಸೂಕ್ತ ಪ್ರಶ್ನೆಯನ್ನು ಕೇಳಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ವಾಚಕರೆ, ನಾವು ಹೌದು ಎನ್ನಲೇ ಬೇಕು. ಈ ಭೂಮಿಯ ಮೇಲೆ ಇರುವ ತನಕ ಈ ಆಸೆಗಳ ಪಾಶದ ಹಿಡಿತ ನಮ್ಮನ್ನು ಬಿಡುವುದೇ ಇಲ್ಲ. ಇವುಗಳ ಮಧ್ಯೆ ನಾವು ನಲುಗಿ ಹೋಗುತ್ತೇವೆ. ಜೀವನದ ಅಂತ್ಯದಲ್ಲಿ





ಒಂದು ಬಾರಿ ಹಿಂತಿರುಗಿ ನೋಡಿದರೆ, ತೃಪ್ತಿಯ ಅಥವಾ ಧನ್ಯತೆಯ ಭಾವ ಬರುವುದು ಬಹಳ ಕಡಿಮೆ ಜನಕ್ಕೆ ಬಹಳ ಪಾಲು ಜನಕ್ಕೆ ಕೇವಲ ಒಂದು ವಿಷಾದದ ನಗೆ ಮನದಲ್ಲಿ ಮೂಡುತ್ತದೆ. ಇದರಿಂದ ಪಾರಾಗಬೇಕಾದರೆ ನಾವು ನಮ್ಮ ಆಸೆಗಳ ಗಂಟನ್ನು ಕರಗಿಸಿಕೊಳ್ಳಬೇಕು ಮತ್ತು ಮತ್ತಷ್ಟು ಆಸೆಗಳನ್ನು ಸೇರಿಸಿಕೊಳ್ಳುವುದನ್ನು ಬಿಡಬೇಕು. ಒಂದು ತೃಪ್ತಿಯ ಭಾವ ಬರಬೇಕು. ಅನವಶ್ಯಕ ತುಡಿತದ ಮನಸ್ಸನ್ನು ಶಾಂತಗೊಳಿಸಬೇಕು. ಹಾಗೆ ಮಾಡಲಾದರೆ ನಮಗೆ ನಿರಾಸೆಯ ಭಾವ ಕಡಿಮೆಯಾಗಬಹುದು. ಶಾಂತಿ ನೆಮ್ಮದಿಗಳು ನಮ್ಮದಾಗಬಹುದು. ನಮ್ಮ ಪ್ರಯತ್ನ ನಾವು ಮಾಡಲೇ ಬೇಕು.

**ಮುಕ್ತಕ-212** **ದಿನದಿನವು ಹಳಸುವುವು ದಿನದಿನವು ಕೊಳೆಯುವುವು |**

**ಮನುಜಕುಲದೆಲ್ಲ ಕೃತಿವಿಜಯವಿಭವಗಳು ||**

**ಅನುದಿನವು ಮತ್ತದನು ತೊಳೆದು ಹೊಸತೆನಿಸುವುದೆ |**

**ಮನುಜಸಫಲತೆ ನಿನಗೆ – ಮಂಕುತಿಮ್ಮ ||**

ಮನುಜಕುಲದಲ್ಲ=ಮನುಜ+ಕುಲದ+ಎಲ್ಲ, ಕೃತಿವಿಜಯವಿಭವಗಳು=ಕೃತಿ+ವಿಜಯ+ವಿಭವಗಳು,
ಹೊಸತೆನಿಸುವುದೆ=ಹೊಸತು+ಎನಿಸುವುದೆ.
ಮನುಜಕುಲ=ಮಾನವ ಕುಲ, ವಿಭವಗಳು=ವೈಭವಗಳು, ಅನುದಿನವು=ಪ್ರತಿ ನಿತ್ಯ,
ಮನುಜಸಫಲತೆ-ಮನುಷ್ಯನ ಸಾಧನೆ.

ಮನುಷ್ಯನ ಕೆಲಸಗಳು, ಸಾಧನೆಗಳು ಮತ್ತು ಅದರ ವೈಭವಗಳು ದಿನ ಕಳೆದಂತೆ ಹಳತಾಗುತ್ತಾ ಹೋಗುತ್ತದೆ. ಹಳಸುತ್ತಾ, ಕೊಳೆಯುತ್ತಾ ಹೋಗುತ್ತದೆ. ಅಂತಹ ಹಳಸಿದ ಮತ್ತು ಕೊಳೆತ ಸಾಧನೆಗಳನ್ನು ಮತ್ತೆ ತೊಳೆದು ಹೊಳಪನ್ನು ನೀಡುವುದೇ ನೀನು ಸಾಧಿಸುವ ಸಫಲತೆ, ಹೇ! ಮಾನವ, ಎಂದು ಉದ್ಗಾರ ತೆಗೆಯುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಆದಿಕಾಲದಿಂದ ಮನುಷ್ಯನು ನಿರಂತರವಾಗಿ ಏನೇನನ್ನೋ ಸಾಧಿಸುತ್ತಲೇ ಇದ್ದಾನೆ. ಅವನ ಶೋಧನೆ ಮತ್ತು ಅದರ ಫಲವಾದ ಸಾಧನೆಗಳು ಅಂದಿನಿಂದ ಇಂದಿನವರೆಗೆ ಸಾಗುತ್ತಲೇ ಇದೆ. ಇವನು ಶೋಧಿಸದ ವಸ್ತುವೇ ಇಲ್ಲ. ಭಗವಂತನ ಸೃಷ್ಟಿಯಲ್ಲಿನ ಎಲ್ಲವನ್ನೂ ಇವನು ಪರೀಕ್ಷಿಸಿ, ಶೋಧಿಸಿ, ತನ್ನ ಉಪಯೋಗಕ್ಕೆ ಅದನ್ನು ಸೂಕ್ತವಾಗಿ ಮಾರ್ಪಾಡು ಮಾಡಿಕೊಂಡು 'ನಾ ಸಾಧಿಸಿದೆ, ನಾ ಜಯಿಸಿದೆ' ಎಂದು ಬೀಗುತ್ತಿದ್ದಾನೆ. ಇರುವುದನ್ನು ಮಾರ್ಪಾಡು ಮಾಡಿಕೊಂಡಿದ್ದಾನೆ ಹೊರತು ಇವನಿಂದ ಒಂದು ಅಕ್ಕಿ ಕಾಳನ್ನೂ ಸೃಷ್ಟಿಮಾಡಲು ಆಗಿಲ್ಲ.

ಹಾಗೆ ಇವನು ಆವಿಷ್ಕರಿಸಿದವು ಕೆಲಕಾಲಕ್ಕೆ ಹಳತಾಗಿ ಕೊಳೆತು ಹಳಸಿ ಹೋಗುತ್ತದೆ. ಮತ್ತೆ ಹೊಸ ಪೀಳಿಗೆ ಹೊಸ ಹೊಸ ವಿಷಯ ಮತ್ತು ವಸ್ತುಗಳನ್ನು ಕಂಡು ಹಿಡಿದು ಅವರೂ ಸಹ 'ನಾ ಸಾಧಿಸಿದೆ, ನಾ

ಜಯಿಸಿದೆ' ಎಂದು ಬೀಗುತ್ತಾರೆ. ಕಾಲಾನುಕಾಲಕ್ಕೆ ಅವೂ ಸಹ ಕೊಳೆತು ಹಳತಾಗಿ ಹಳಸಿ ಹೋಗುತ್ತದೆ. ಹೀಗೆ ಈ ಜಗತ್ತಿನಲ್ಲಿ ಪರಮಾತ್ಮನಿಂದ ಸೃಷ್ಟಿಸಲ್ಪಟ್ಟ ವಸ್ತುಗಳನ್ನು ತನ್ನ ಪ್ರಯೋಜನಕ್ಕೆ ತಕ್ಕಂತೆ ಮಾರ್ಪಾಡು ಮಾಡಿಕೊಂಡು ಹೊಸ ಹೊಸತನ್ನು ಕಂಡುಕೊಳ್ಳುತ್ತಲೇ ಇರುತ್ತಾನೆ. ಇಷ್ಟೇ ಇವನ ಸಾಧನೆ ಮತ್ತು ಜಯ.

ವಾಚಕರೆ ನೋಡಿ ಅಂದಿನ 'ಬೆಂಕಿ' ಮತ್ತು 'ಚಕ್ರ' ಎರಡು ಮಾನವನ ಅತೀ ಶ್ರೇಷ್ಠ ಆವಿಷ್ಕಾರಗಳು. ನಂತರದ ವಿದ್ಯುತ್ ಮತ್ತು ಇವನ ಆವಿಷ್ಕಾರಗಳ ಪಟ್ಟಿಯಲ್ಲಿನ ಪ್ರತಿಯೊಂದೂ ಸಹ ಇಂದು ಹೊಸತು, ನಾಳೆ ಹಳತು, ನಾಳಿದ್ದು ಹಳಸಿ ನಾಲ್ಕನೆಯ ದಿನ ಕೊಳೆತು ಹೋಗುತ್ತದೆ. ಅವುಗಳೇ ಮತ್ತೆ ಹೊಸ ರೂಪ ತಾಳಿ ಹೊಸದೆಂಬಂತೆ ಹೊರಬರುತ್ತದೆ. ಇವನ ಹೊಸ ಹೊಸ ವಸ್ತುಗಳ ಹಸಿವು ಇಂಗುವುದೇ ಇಲ್ಲ.

ಆದರೆ ಪರಮಾತ್ಮನ ಸೃಷ್ಟಿಯನ್ನು ನೋಡಿ. ಎಲ್ಲವೂ ನವನವೀನ. ಹಳತಾಗುವ ಸಂಭವವೇ ಇಲ್ಲ. ಎಲ್ಲವೂ ಆನಂದದಾಯಕವೇ. ನೋಡುವ ಹೃದಯವಿರಬೇಕು. ಅನುಭವಿಸುವ ಮನಸ್ಸಿರಬೇಕು. ಪ್ರತಿದಿನ ಮೂಡುವ ಭಾನುತೇಜನ ಹೊಂಗಿರಣಗಳೇ ಇದಕ್ಕೆ ಸಾಕ್ಷಿ. ಆ ಪರಮಾತ್ಮನ ಸೃಷ್ಟಿಯ ಮುಂದೆ ಮಾನವನ ಆವಿಷ್ಕಾರಗಳೆಲ್ಲ ಪೇಲವವಲ್ಲವೇ? ಆದರೂ ಮನುಷ್ಯ ತಾನು ಯಾವುದೋ ಮಹತ್ತದಾದ್ದನ್ನು ಸಾಧಿಸಿದ್ದೇನೆ, ಕಂಡುಹಿಡಿದಿದ್ದೇನೆ, ವಿಜಯವನ್ನು ಪಡೆದಿದ್ದೇನೆ, ವೈಭವದಿಂದ ಮೆರೆದಿದ್ದೇನೆ ಎಂದು ಬೀಗುವುದನ್ನು ನೋಡಿದರೆ...... ಇರಲಿ, ಇವನ ಮಿತಿಯಲ್ಲಿ ಇವನೇನೋ ಸಾಧಿಸಿದ್ದಾನೆ. ಆದರೆ ಆ ಅಪರಿಮಿತ ಶಕ್ತಿಯುಳ್ಳ ಆ ಪರಮಾತ್ಮನ ಸೃಷ್ಟಿಯ ಮುಂದೆ ಇವನ ಸಾಧನೆಯೆಷ್ಟು ಇವನ ವಿಜಯವೆಷ್ಟು?

**ಮುಕ್ತಕ-213**

**ಸಾಜಗುಣವೆಂದುಪೇಕ್ಷಿಪೆಯ ನಿನ್ನವಗುಣವ |**
**ಸಾಜವನು ಬಿಟ್ಟಲುಗದಿಹುದು ಮೃಗಕೀಟ ||**
**ಸಾಜವಂ ಶಿಕ್ಷಿಸುತೆ ಲೋಕಸಂಸ್ಥಿತಿಗದನು |**
**ಯೋಜಿಸದೆ ನರಮಹಿಮ – ಮಂಕುತಿಮ್ಮ ||**

ಸಾಜಗುಣವೆಂದುಪೇಕ್ಷಿಪೆಯ=ಸಾಜಗುಣವೆಂದು+ಉಪೇಕ್ಷಿಪೆಯ, ನಿನ್ನವಗುಣವ=ನಿನ್ನ+ಅವಗುಣವ,

ಬಿಟ್ಟಲುಗದಿಹುದು=ಬಿಟ್ಟು+ಅಲುಗದೆ+ಇಹುದು

ಲೋಕಸಂಸ್ಥಿತಿಗದನು=ಲೋಕ+ಸಂಸ್ಥಿತಿಗೆ+ಅದನು

ಸಾಜಗುಣ=ಸಹಜಗುಣ, ಉಪೇಕ್ಷಿಪೆಯ=ಕಡೆಗಣಿಸತೀಯಾ?, ಅವಗುಣ=ದುರ್ಗುಣ,

ಸಂಸ್ಥಿತಿಗೆ=ಸುವ್ಯವಸ್ಥೆಗೆ, ಯೋಜಿಪುದೆ=ಯೋಜನೆ ಮಾಡುವುದೆ.

ತನ್ನ ಅವಗುಣಗಳನ್ನು ತೀರಾ ಸಾಮಾನ್ಯವೆಂದು ಅಥವಾ ಸಹಜವೆಂದು ಅವುಗಳನ್ನು ಉಪೇಕ್ಷಿಸುತ್ತಾನೆ ಮನುಷ್ಯ. ಆದರೆ ಪ್ರಾಣಿ, ಪಕ್ಷಿ, ಕೀಟಗಳು ತಮ್ಮ ಸಹಜ ಗುಣವನ್ನು ಬಿಡುವುದೇ ಇಲ್ಲ. ಹೀಗೆ ಇವನ





ದುರ್ಗುಣಗಳನ್ನು ದಂಡಿಸುತ ಅಥವಾ ತಿದ್ದುತ್ತಾ ಈ ಜಗತ್ತಿನಲ್ಲಿ ಮಾನವನ ಬದುಕನ್ನು ಒಂದು ವ್ಯವಸ್ಥಿತವಾದ ರೀತಿಯಲ್ಲಿ ಇಡಬೇಕೆಂದು ಯತ್ನಿಸುವುದೇ ನಿರಂತರವಾಗಿ ನಡೆದಿರುವ ಮನುಷ್ಯ ಪ್ರಯತ್ನವೆಂದು ಒಂದು ಗಹನವಾದ ವಿಚಾರವನ್ನು ಮಂಡಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಕಗ್ಗದಲ್ಲಿ.

ಮನುಷ್ಯ ತಾನು ಮಾಡುವ ಕುಕರ್ಮಗಳನ್ನು ಇದೇನು ಮಹಾ, ಇವು ಮನುಷ್ಯನ ಸಹಜ ಗುಣಗಳಲ್ಲವೇ? ಎಂದು ಸಮರ್ಥಿಸಿಕೊಳ್ಳುತ್ತಾನೆ. ಮಾನವ, ಮಾನವತಾ ಪೂರ್ಣವಾದ ಸಹಜ ಗುಣಗಳನ್ನು ಮರೆತೇ ಹೋಗಿದ್ದಾನೆ. ತಾನು ಮಾಡುವ ದುಷ್ಕರ್ಮಗಳಿಗೆ ಸಹಜತೆಯ ಹಣೆಪಟ್ಟಿಯನ್ನು ಕೊಟ್ಟು ತನ್ನನ್ನು ತಾನು ಸಮರ್ಥಿಸಿಕೊಳ್ಳುತ್ತಾನೆ. ಇದಕ್ಕೆ ನಮ್ಮ ಪುರಾಣ ಇತಿಹಾಸಗಳಲ್ಲಿ ಹೇರಳವಾದ ದೃಷ್ಟಾಂತಗಳು ದೊರೆಯುತ್ತವೆ. ಇಡೀ ಭಾಗವತ ಪುರಾಣ, ರಾಮಾಯಣ, ಮಹಾಭಾರತ ಪುರಾಣಗಳೆಲ್ಲವೂ, ಇದು ಸರಿ, ಇದು ತಪ್ಪು, ಹೀಗೆ ಮಾಡಿದರೆ ಇದು ಫಲ ಹಾಗೆ ಮಾಡಿದರೆ ಹಾಗೆ ಫಲ ಎಂದು ಇಡೀ ಜನ ಸಮುದಾಯವನ್ನು ತಿದ್ದಲು ಮತ್ತು ಸಮಾಜವನ್ನು ಒಂದು ವ್ಯವಸ್ಥಿತ ರೀತಿಯಲ್ಲಿ ಇಡಲು ಪ್ರಯತ್ನ ಮಾಡಿವೆ. ಇವುಗಳನ್ನು ಕಂಡುಕೊಂಡದ್ದೇ ಮನುಷ್ಯನ ಒಂದು ಮಹತ್ ಸಾಧನೆ. ಆದರೆ ಪ್ರಾಣಿ ಪಕ್ಷಿ ಕೀಟಗಳು ಇನ್ನೂ ತಮ್ಮ ಸಹಜ ಪ್ರವೃತ್ತಿಯನ್ನೇ ಇಟ್ಟುಕೊಂಡಿವೆ. ಅವುಗಳಿಗಿಂತ ಹೆಚ್ಚು ಮತ್ತು ಉತ್ತಮ

ಜ್ಞಾನವನ್ನು ಪಡೆದ ಮನುಷ್ಯ ಮಾತ್ರ ತನ್ನ ಸಹಜ ಸ್ವಭಾವ ಮತ್ತು ಗುಣಗಳನ್ನು ಬಿಟ್ಟು ತಪ್ಪು ದಾರಿ ಹಿಡಿದು, ಅದನ್ನು ತಿದ್ದಿಕೊಳ್ಳಲು ಹಲವಾರು ಮಾರ್ಗಗಳನ್ನು ಕಂಡು ಹಿಡಿದುಕೊಂಡಿದ್ದಾನೆ.

ಪ್ರಾಣಿಗಳು ಮತ್ತು ಇತರೆ ಜೀವಿಗಳು ಸಹಜತೆಯಿಂದ ಜೀವಿಸುತ್ತವೆ. ಮನುಷ್ಯ ಮಾತ್ರ ತಪ್ಪು ದಾರಿ ಹಿಡಿದಿದ್ದಾನೆ. ಆದರೆ ಅವನ ಮಹತ್ಸಾಧನೆ ಏನೆಂದರೆ ತಾನು ಮಾಡುವುದು ತಪ್ಪು ಎಂದು ಅರಿಯಲು ಮತ್ತು ಅದನ್ನು ತಿದ್ದಿಕೊಳ್ಳಲು ಪ್ರಯತ್ನ ಪಟ್ಟಿದ್ದಾನೆ. ಈ ಪ್ರಯತ್ನದಲ್ಲಿ ಇವನು ವೇದ ಉಪನಿಷತ್ತು, ಪುರಾಣ, ಧ್ಯಾನ, ಯೋಗ, ಸಾಹಿತ್ಯ, ಸಂಗೀತ, ಮುಂತಾದವುಗಳನ್ನು ಕಂಡುಕೊಂಡು ತನ್ನನ್ನು ತಾನು ತಿದ್ದಿಕೊಳ್ಳಲು ಪ್ರಯತ್ನಿಸಿದ್ದಾನೆ. ಇದೆ ಇವನ ಸಾಧನೆ. ಹಾಗೆ ತಾನು ಮಾಡುವುದು ತಪ್ಪು ಎಂದು ಅರಿವು ಮೂಡುವುದು ಎಷ್ಟು ಜನರಿಗೆ ಸಾಧ್ಯ. ಹಾಗೆ ಅರಿವು ಮೂಡಿದವರಲ್ಲಿ, ತಮ್ಮನ್ನು ತಾವು ತಿದ್ದಿಕೊಳ್ಳಲು ಪ್ರಯತ್ನಿಸುವವರು ಎಷ್ಟುಮಂದಿ. ಹಾಗೆ ಪ್ರಯತ್ನಿಸುವವರಲ್ಲಿ ಎಷ್ಟುಜನ ಸಫಲರು ಎಂದು ನೋಡಿದರೆ ನಮಗೆ ಬಹಳ ಕಡಿಮೆ ಜನ ತಿದ್ದಿಕೊಂಡು ಶುದ್ಧರಾದವರು ಸಿಗುತ್ತಾರೆ.

ಸಹಜತೆಯನ್ನು ಉಳಿಸಿಕೊಂಡು, ಕೃತ್ರಿಮತೆಯನ್ನು ಬಿಡಬೇಕು, ದುಷ್ಕರ್ಮಗಳನ್ನು ಬಿಡಬೇಕು, ಶುದ್ಧರಾಗಬೇಕು ಎನ್ನುವ ಅರಿವು ಮೂಡಬೇಕು ಮತ್ತು ಅವುಗಳನ್ನು ನೀಗಿಕೊಳ್ಳಲು ನಿರಂತರ ಪ್ರಯತ್ನವನ್ನು ನಾವು ಮಾಡಬೇಕು. ಹಾಗೆ ಮಾಡಿದರೆ ನಮ್ಮನ್ನು ಈ ಜಗತ್ತಿನಲ್ಲಿ ಸೃಷ್ಟಿಸಿದ ಆ ಪರಮಾತ್ಮನ ಇಚ್ಛೆಗೆ ನ್ಯಾಯ ಮಾಡಿದಂತಾಗುತ್ತದೆ.

# ಸಹಜದಿಗೆ ಕೃತಕಮುಂ 214-218

**ಮುಕ್ತಕ-214** **ಸಹಜ ನಗ್ನತೆ ನಮಗೆ, ಸಹಜ ನಖದಾಡಿಗಳು |**
**ಬಹುಯುಗದ ಸಂಸ್ಕಾರ ವಸ್ತ್ರ ಸಿಂಗಾರ ||**
**ಸಹಜತೆ ನಿರಕ್ಷರತೆ, ವಿದ್ಯೆ ತಾಂ ಕೃತಕವಲ |**
**ಸಹಜದಿನ ಕೃತಕಮುಂ – ಮಂಕುತಿಮ್ಮ ||**

ನಖದಾಡಿಗಳು=ಉಗುರು ಗಡ್ಡಗಳು, ಸಹಜದಿನ್=ಸಹಜತೆಯಿಂದ

ನಗ್ನತೆಯು ಮನುಜನಿಗೆ ಸಹಜ. ಈ ದೇಹದಲ್ಲಿ ಉಗುರುಗಳು ಗಡ್ಡಮೀಸೆಗಳು ಸಹಜ. ಆದರೆ ಸಾವಿರಾರು ವರ್ಷಗಳಕಾಲದ ಸಂಸ್ಕಾರದಿಂದ ಮನುಷ್ಯ ಬಟ್ಟೆ ಹಾಕಿಕೊಳ್ಳುವುದನ್ನು, ತನ್ನನ್ನು ತಾನು ಸಿಂಗರಿಸಿಕೊಳ್ಳುವುದನ್ನು ಕಲಿತಿದ್ದಾನೆ. ಹಾಗೆಯೇ ನಿರಕ್ಷರತೆ ಸಹಜ. ಇವನು ಅಕ್ಷರವನ್ನು ಮತ್ತು ವಿದ್ಯೆಯನ್ನು ಕಲಿತ. ಆ ಸಹಜತೆಯಿಂದ ಬಂದ ಕೃತಕತೆಯೇ ಇದು. ಹಾಗಾಗಿ ಹೊರಕಾಣುವ ಕೃತಕತೆಯು ಸಹಜತೆಯಿಂದಲೇ ಬರುತ್ತದೆ ಎಂದು ಉಲ್ಲೇಖಿಸುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಹಿಂದೆ ಆದಿಕಾಲದಲ್ಲಿ ಮನುಷ್ಯ ಕಾಡುಗಳಲ್ಲಿ ಇದ್ದಾಗ, ಸಹಜವಾಗೇ ನಗ್ನವಾಗಿ ಇರುತ್ತಿದ್ದ. ಕಾಲಾನುಕಾಲಕ್ಕೆ ಸಂಸ್ಕೃತನಾಗುತ್ತ, ಸುಸಂಕೃತನಾಗುತ್ತಾ, ಬಟ್ಟೆ ಹಾಕಿಕೊಳ್ಳುವುದು, ಅಲಂಕಾರ ಮಾಡಿಕೊಳ್ಳುವುದು ಮತ್ತು ಅವುಗಳಲ್ಲಿನ ಹಲವಾರು ವಿನ್ಯಾಸಗಳನ್ನು ಕಂಡುಹಿಡಿದುಕೊಂಡ. ಹಾಗಾಗಿ ನಗ್ನತೆಯು ಸಹಜ ಪ್ರವೃತ್ತಿ. ಅದರ ಮೇಲೆ ಹಾಕಿಕೊಂಡ ಬಟ್ಟೆ ಮತ್ತು ಮಾಡಿಕೊಂಡ ಅಲಂಕಾರಗಳು ಕೇವಲ ಕೃತ್ರಿಮತೆ, ಎಂದು ಗುಂಡಪ್ಪನವರು ಹೇಳುತ್ತಾರೆ.

ಹಾಗೆಯೇ ನಿರಕ್ಷರಕುಕ್ಷಿಯಾದ ಮನುಷ್ಯ ಕಾಲಾನುಕಾಲದಲ್ಲಿ ಮಾಡಿದ ಒಂದೇ ರೀತಿಯ ಶಬ್ದಗಳೇ ಆಡುವ ಭಾಷೆಯಾಯಿತು. ಆಡುವ ಭಾಷೆಯನ್ನು ಕಾಪಾಡಿಕೊಳ್ಳಲು ಅದಕ್ಕೊಂದು ಆಕಾರವನ್ನು ಮನುಷ್ಯ ಕಂಡುಕೊಂಡ. ಆ ಆಕಾರಗಳು ಕ್ರಮ ಕ್ರಮವಾಗಿ ಲಿಪಿಯಾಯಿತು. ಮೂಲ ರೂಪದ ಲಿಪಿಯು ಇಂದು ಬಹಳಷ್ಟು ಬದಲಾಗಿ ಒಂದು ಸುಂದರ ರೂಪವನ್ನು ಕಂಡುಕೊಂಡಿದೆ. ಅಂದರೆ ಅನಕ್ಷರತೆಯು ಸಹಜತೆಯಾದರೆ, ಅಕ್ಷರತೆ ಅದರ ಮೇಲೆ

ತೊಟ್ಟುಕೊಂಡ ಸಿಂಗಾರದ ಉಡುಗೆ ತೊಡುಗೆ. ಈ ಜಗತ್ತಿನಲ್ಲಿ ಎಲ್ಲವೂ ಹಾಗೆಯೇ. ಸಹಜವಾದ ರೂಪ ಭಾವ ಆಲೋಚನೆಗಳಿಗೆ ಒಂದು ಕೃತ್ರಿಮತೆಯ ಲೇಪನವನ್ನು ಕೊಟ್ಟು ಸಹಜತೆಯನ್ನು ಮರೆಸುವುದೇ ಮಾನವನ ಗುಣ.

ನಮ್ಮ ಮನಸ್ಸಿನಲ್ಲಿರುವ ಭಾವ ಒಂದಾದರೆ, ನಾವು ಆಡುವ ಮಾತು, ಮಾಡುವ ಕೃತಿ ಎಲ್ಲವೂ ಬೇರೆ ಬೇರೆ. ಭಾವ ಸಹಜವಾದರೆ, ಮಾತು ಮತ್ತು ಕೃತಿ ಕೃತ್ರಿಮತೆ. ಇದನ್ನೇ ಗುಂಡಪ್ಪನವರು 'ಸಹಜದಿನೆ ಕೃತಕಮುಂ' ಎಂದು ಸಹಜದಿಂದಲೇ ಕೃತಕವೂ ಎಂದು ಮನುಷ್ಯನ ಸ್ವಭಾವವನ್ನು ವಿಶ್ಲೇಷಣೆ ಮಾಡಿದ್ದಾರೆ. ವಾಚಕರೆ





ಈ ಬದಲಾವಣೆಗಳೂ ಸಹಜವಾಗೇ ಮನುಷ್ಯನ ಅವಶ್ಯಕತೆಗಳಿಗನುಗುಣವಾಗಿಯೇ ಆಗಿವೆ ಎಂದರೆ ತಪ್ಪಲ್ಲ. ಏಕೆಂದರೆ ಇದರಿಂದ ಮಾನವನ ಸಮಾಜ ಮತ್ತು ಜೀವನ ಸುಧಾರಿತವಾಗಿದೆ ಎಂದರೆ ಒಳ್ಳೆಯದೇ ಅಲ್ಲವೇ?.

ಆದರೆ, ಇಂದಿನ ಸ್ಥಿತಿಯನ್ನು ನೋಡಿದರೆ ಒಂದು ವಿಷಯ ನಮಗೆ ವೇದ್ಯವಾಗುತ್ತದೆ. ಸಹಜತೆಯಿಂದ ಕೃತಕತೆ ಬಂದಿರಬಹುದು. ಆದರೆ ಸಹಜತೆ ಸಂಪೂರ್ಣ ನಾಶವಾಗಿ ಕೃತಕತೆ, ಕೃತ್ರಿಮತೆಗಳೇ ರಾರಾಜಿಸುತ್ತಿರುವುದು, ಮನುಷ್ಯನ ಜೀವನದ ದೌರ್ಭಾಗ್ಯ ಮತ್ತು ವಿಷಾದನೀಯ. ಕೃತಕತೆ ಅಥವಾ ಕೃತ್ರಿಮತೆಯಿಂದ ಕ್ಲೇಶ ಹೆಚ್ಚು. ಮನಃಸಾಕ್ಷಿ ಎಂಬುದು ಇರುವವರೆಲ್ಲರೂ ತಮ್ಮ ಒಳಗು ಹೊರಗುಗಳ ನಡುವೆ ನಡೆಯುವ ತಿಕ್ಕಾಟದಲ್ಲಿ ಪತನಹೊಂದುತ್ತಾರೆ. ನಾವು ಸಾಧ್ಯವಾದಷ್ಟು ಸಹಜತೆಯನ್ನೇ ನಮ್ಮ ಸ್ವಾಭಾವವಾಗಿಸಿಕೊಂಡು, ಕೃತಕತೆಯನ್ನು ಕೇವಲ ನಮ್ಮ ಬಾಹ್ಯ ಜೀವನಕ್ಕೆಷ್ಟು ಬೇಕೋ ಅಷ್ಟಕ್ಕೇ ಸೀಮಿತಗೊಳಿಸಿದರೆ, ಈ ತಿಕ್ಕಾಟದಿಂದ ಹೊರಬಂದು ನೆಮ್ಮದಿಯಿಂದ ಇರಬಹುದು. ಆಯ್ಕೆ ಅವರವರಿಗೆ ಬಿಟ್ಟದ್ದು.

**ಮುಕ್ತಕ-215**

**ಇಹುದಕಿಂತೊಳಿತಿಹುದು; ಒಳಿತ ಗಳಿಸಲ್ಬಹುದು ।**
**ಸಹಸಿಸುವದಕೆನುವ ಮತಿಯಿನೆ ಪ್ರಗತಿ ॥**
**ರಹಸಿಯದ ಬುಗ್ಗೆಯದು, ಚಿಮ್ಮುತಿಹುದೆಲ್ಲರೊಳು ।**
**ಸಹಜವಾ ಮತಿಕೃತಕ – ಮಂಕುತಿಮ್ಮ ॥**

ಇಹುದಕಿಂತೊಳಿತಿಹುದು=ಇಹುದಕಿಂತ+ಒಳಿತು+ಇಹುದು, ಗಳಿಸಲ್ಬಹುದು=ಗಳಿಸಲು+ಬಹುದು,
ಸಹಸಿಸುವದಕೆನುವ=ಸಹಸಿಸುವ+ಅದಕೆ+ಎನುವ, ಚಿಮ್ಮುತಿಹುದೆಲ್ಲರೊಳು=ಚಿಮ್ಮುತಿಹುದು+ಎಲ್ಲರೊಳು,
ಸಹಜವಾ=ಸಹಜವೂ+ಆ
ಸಹಸಿಸುವೆ=ಸಾಹಸಿಸುವ, ಮತಿಯಿನೆ=ಬುದ್ಧಿಯಿಂದಲೇ, ರಹಸಿಯದ=ರಹಸ್ಯದ, ಬುಗ್ಗೆಯದು=ಚಿಲುಮೆಯದು, ಮತಿಕೃತಕ=ಬುದ್ಧಿ ಕೃತಕ,

ಈಗ ಇರುವ ಸ್ಥಿತಿಗಿಂತ ಇನ್ನೂ ಉತ್ತಮ ಸ್ಥಿತಿ ಇದೆ ಮತ್ತು ಅಂತಹ ಒಳಿತಾದ ಸ್ಥಿತಿಯನ್ನು ಪಡೆಯಬಹುದು. ಅದಕ್ಕಾಗಿ ನಾನು ಸಾಹಸ ಮಾಡುತ್ತೇನೆ ಎನ್ನುವುದೇ ಮನುಷ್ಯ ಬುದ್ಧಿ, ಆ ರೀತಿ ಹೊಮ್ಮುವ ಬುದ್ಧಿಯ ಬುಗ್ಗೆಗಳೇ ಪ್ರಗತಿಗೆ ಹಾದಿ, ಈ ರೀತಿಯ ಯೋಚನೆಗಳು ಬುಗ್ಗೆ ಬುಗ್ಗೆಯಾಗಿ, ಅಲೆ ಅಲೆಯಾಗಿ ಎಲ್ಲರಲ್ಲೂ ಸಹಜವಾಗೇ ಇರುತ್ತದೆ. ಈ ರೀತಿ ಇರುವ ಸಹಜ ಬುದ್ಧಿಯೂ ಸಹ, ಸಹಜದಿಂದ ಉದ್ಭವವಾದ ಕೃತಕತನವೇ ಎಂದು ಪ್ರಸ್ತಾಪಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಕ್ರಿಯಾಶೀಲತೆಯೇ ಮನುಷ್ಯನ ಗುಣ. ಆ ಕ್ರಿಯಾಶೀಲತೆಯೇ ಅವನನ್ನು ಆದಿಮಾನವನ ದೆಶೆಯಿಂದ ಇಂದಿನ ನಾಗರೀಕ ಮಾನವನನ್ನಾಗಿಸಿದೆ. ಮನುಷ್ಯನ ಈ ಸಕ್ರಿಯವಾದ ಮನಸ್ಸು ಬುದ್ಧಿಗಳೇ, ಜಗತ್ತಿನಾದ್ಯಂತ ಹಲವು ರೀತಿಯ ಪ್ರಗತಿಗೆ ಕಾರಣವಾಗಿವೆ. ವೈಜ್ಞಾನಿಕ, ಆರ್ಥಿಕ, ಸಾಂಸ್ಕೃತಿಕ ಮತ್ತು ಸಾಮಾಜಿಕ ಪ್ರಗತಿಗೆ ಈ ಕ್ರಿಯಾಶೀಲತೆಯೇ ಕಾರಣವಲ್ಲವೇ? ಇಂದು ನಾವಿರುವ ಸ್ಥಿತಿಗಿಂತ ಇನ್ನೂ ಉತ್ತಮವಾದ ಸ್ಥಿತಿಯನ್ನು ಹೊಂದುವ ನಿರಂತರ ಪ್ರಯತ್ನ ಜಗತ್ತಿನಲ್ಲಿ ಎಲ್ಲ ಕಡೆಯೂ ಎಲ್ಲ ಮಾನವರ ಮನಸ್ಸುಗಳಲ್ಲಿ ನಡೆದೇ

ಇರುತ್ತದೆ ಮತ್ತು ಅದಕ್ಕೆ ಪೂರಕವಾಗಿ ಅವನ ಬುದ್ಧಿ ಕೆಲಸ ಮಾಡುತ್ತಲೇ ಇರುತ್ತದೆ. ಇದು ಅವನ ಸಹಜ ಗುಣದ ಮೇಲೆ ಹೇರಿಕೊಂಡ ಗುಣವಾದ್ದರಿಂದ ಇದೂ ಕೂಡ ಸಹಜತೆಯಿಂದ ಉದ್ಭವವಾದ ಕೃತಕ ಬುದ್ಧಿಯೇ ಎಂದು ಮಾನ್ಯ ಗುಂಡಪ್ಪನವರು ಅಭಿಪ್ರಾಯಪಡುತ್ತಾರೆ.

ವಾಚಕರೆ, ಮನುಷ್ಯನ ಬುದ್ಧಿ ಪ್ರಗತಿ ಪಥದಲ್ಲಿ ಯೋಚಿಸುತ್ತದೆ ಎನ್ನುವುದನ್ನು ಒಪ್ಪಿಕೊಳ್ಳೋಣ. ಆದರೆ ಈ ಪ್ರಗತಿಯ ಫಲ ಕೇವಲ ಸಜ್ಜನರ ಕೈಯಲ್ಲಿಯೇ ಇದ್ದಿದ್ದರೆ ಚೆನ್ನಾಗಿರುತ್ತಿತ್ತು. ಆದರೆ ದೌರ್ಭಾಗ್ಯವಶಾತ್ ಅದು ದುಷ್ಟ ಜನರ ಕೈಗೂ ಸೇರಿ ಅವರಿಗೆ ತಮ್ಮ ದುಷ್ಟ ಕೆಲಸಗಳನ್ನು ಸಮರ್ಪಕವಾಗಿ ಮಾಡಲು ಸೂಕ್ತ ಸಾಧನಗಳನ್ನು ಮತ್ತು ಅನ್ಯರ ನಾಶಕ್ಕೆ ಸೂಕ್ತ ಆಯುಧಗಳನ್ನೂ ಕೊಟ್ಟಂತಾಗಿದೆ ಅಲ್ಲವೇ? ಇದೇ ವಿಪರ್ಯಾಸ.

ವಿಜ್ಞಾನದ ಪ್ರಗತಿ, ರಾಜಕೀಯ ಪ್ರಗತಿ, ಸಾಮಾಜಿಕ ಮತ್ತು ಆರ್ಥಿಕ ಪ್ರಗತಿ ಎಲ್ಲವೂ ಮನುಷ್ಯನ ಆಸೆಯನ್ನು ಇನ್ನಷ್ಟು ಹೆಚ್ಚಿಸಲು ಕಾರಣವಾಗಿ ಮನುಷ್ಯನಲ್ಲಿ ಸ್ವಾರ್ಥ, ದ್ವೇಷ, ಅಸೂಯೆ, ಅತಿಕೃತ್ರಿಮತೆ, ಅಹಂಕಾರಗಳು ಅಧಿಕವಾಗಲು ಸಹಾಯಮಾಡಿವೆ. ಈ ಪ್ರಗತಿ ಮನುಷ್ಯನನ್ನು ಸಂಪೂರ್ಣ ವಿನಾಶದ ಅಂಚಿಗೆ ತಳ್ಳಿದೆ. ಎಂದಾದರೂ ಒಂದು ದಿನ ಇವೆಲ್ಲವೂ ಕೊನೆಯಾಗಿ, ಎಲ್ಲ ಪ್ರಗತಿಯೂ ಮನುಷ್ಯನಲ್ಲಿ ಮಾನವತೆಯನ್ನು ಮೆರೆಸಲು, ಎಲ್ಲರ ಬದುಕೂ ಆನಂದದಾಯಕವಾಗಲು ಪೂರಕವಾದರೆ, ಅಂದು ಈ ಧರೆಗೆ ಆನಂದದ ದಿನ.

**ಮುಕ್ತಕ-216** **ಸಿರಿ ಸೊಬಗುಗಳ ಬೆದಕು, ಕೆಳೆ ಬಲುಮೆಗಳ ಬೆದಕು |**
**ಪರಬೊಮ್ಮ ನಾಟಕದ ವೇಷ ಚೇಷ್ಟೆಗಳು**
**ಅರಸುತಿಹ ಜೀವ ನಾಯಕನು, ನಾಯಕಿಯವನ |**
**ಕೆರಳಿಸುವ ಮೋಹರುಚಿ - ಮಂಕುತಿಮ್ಮ ||**

ಸಿರಿ=ಐಶ್ವರ್ಯ, ಬೆದಕು=ಹುಡುಕಾಟ, ಅರಸುವಿಕೆ, ಕೆಳೆ=ಸ್ನೇಹ, ಬಲುಮೆ=ಪೌರುಷ, ಪರಬೊಮ್ಮ=ಪರಬ್ರಹ್ಮ, ಮೋಹರುಚಿ=ಆಸೆಯ ಅನುಭವ.

ಮಾನವನಿಗಿರುವ, ಐಶ್ವರ್ಯ ಅಲಂಕಾರಗಳ ಅರಸುವಿಕೆಯ ಆಸೆ, ಸ್ನೇಹ, ಬಂಧನ ಮತ್ತು ಬಲ ಪ್ರದರ್ಶನದ ಆಸೆ, ಇವೆಲ್ಲವುಗಳನ್ನೂ ಮನುಷ್ಯನ ಮನಗಳಲ್ಲಿ ತುಂಬಿ ಹಲವಾರು ವೇಷಗಳನ್ನು ಹಾಕಲು ಹುರಿದುಂಬಿಸುವುದು ಕೇವಲ ಆ ಪರಮಾತ್ಮನ ಜಗನ್ನಾಟಕದ ಒಂದು ಭಾಗವಷ್ಟೇ. ಪರಮ ಚೇತನದ ಅಂಶವಾದ ಈ ಜೀವನು ಈ ನಾಟಕದ ನಾಯಕನು ಮತ್ತು ಇವನನ್ನು ಈ ನಾಟಕದಲ್ಲಿ ಪಾತ್ರವಹಿಸಲು ಪ್ರೇರೇಪಿಸುವ ನಾಯಕಿಯೇ ಹಲವಾರು ರೀತಿಯ ಆಸೆಗಳು ಮತ್ತು ಜಗತ್ತಿನ ಮೋಹಗಳೆಂದು, ಬಹಳ ಸೂಕ್ಷ್ಮವಾದ ವಿಚಾರವನ್ನು ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ ಉಲ್ಲೇಖಿಸಿದ್ದಾರೆ.

ಇದೊಂದು ವಿಚಿತ್ರ ಪ್ರಾಣಿಗಳನ್ನು ಈ ಜಗತ್ತಿನಲ್ಲಿ ಸೃಷ್ಟಿಸಿ, ಅವುಗಳ ಮನಸ್ಸಿನಲ್ಲಿ ಆಸೆಯನ್ನು ಇಟ್ಟು, ಆ ಆಸೆಗಳನ್ನು ಪೂರೈಸಿಕೊಳ್ಳಲು ಚುಂಬಕದಂತಹ ಬಯಕೆಗಳನ್ನು ಕೊಟ್ಟು ಪ್ರತೀ ಜೀವಿಯೂ ತನ್ನ ತನ್ನ





ಪಾತ್ರವನ್ನು ನಿರ್ವಹಿಸಲು ಪ್ರೇರೇಪಿಸುವ ಈ ಮೋಹವನ್ನೂ ಸೃಷ್ಟಿಮಾಡಿ ಈ ಜಗನ್ನಾಟಕವನ್ನು ಆಡಿಸುತ್ತಿದ್ದಾನೆ ಆ ಪರಬ್ರಹ್ಮ. ಇದೆಲ್ಲ ಒಂದು ನಾಟಕ. ಯಾವುದೂ ಸತ್ಯವಲ್ಲ. ಏಕೆಂದರೆ ಯಾವುದು ನಿತ್ಯವೋ ಅದು ಮಾತ್ರ ಸತ್ಯ. ನಿತ್ಯವೆಂದರೆ ನಿರಂತರವಾಗಿ ನಾಶವಾಗದೇ ಇರುವುದು. ಯಾವುದು ನಿತ್ಯವಲ್ಲವೋ ಅದು ಸತ್ಯವೂ ಅಲ್ಲ. ನಿತ್ಯನಾದ ಮತ್ತು ಸತ್ಯನಾದ ಪರಮಾತ್ಮನು ತನ್ನ ಲೀಲಾ ವಿನೋದಕ್ಕೆ ಈ ಅನಿತ್ಯವಾದ, ನಿರಂತರ ಬೇರೆ ಬೇರೆ ವೇಷಗಳನ್ನು ಧರಿಸಿ ನಟಿಸಿ ತನ್ನನ್ನು ರಂಜಿಸಲಿಕೊಳ್ಳಲಿಕ್ಕಾಗಿಯೇ ಈ ಜಗತ್ತನ್ನು ಸೃಷ್ಟಿಸಿಕೊಂಡಿದ್ದಾನೆ.

ಅಂತಹ ಸೃಷ್ಟಿಯಲ್ಲಿ ನಾವು ಕೇವಲ ಪಾತ್ರಧಾರಿಗಳು. ಆದರೂ ಇದು ನಮ್ಮ ಬದುಕು, ನಾವು ಜೀವಿಸುತ್ತಿದ್ದೇವೆ, ನಾವು ಸಾಹಸ ಮಾಡುತ್ತಿದ್ದೇವೆ, ನಾವು ಸಾಧಿಸಿದ್ದೇವೆ ಎಂಬ ಹಲವಾರು 'ನಾವು' ಗಳ ಪಟ್ಟಿಯನ್ನು ಅಂಟಿಸಿಕೊಂಡು ಅಹಂಕಾರದಿಂದ ಮೆರೆಯುತ್ತೇವೆ. ಮತ್ತೊಂದು ನಿಟ್ಟಿನಿಂದ ಯೋಚಿಸಿದರೆ ಈ ಅಹಂಕಾರವನ್ನೂ ಅವನೇ ಕೊಟ್ಟಿದ್ದಲ್ಲವೇ, ಈ ಅಹಂಕಾರದಾಟವೂ, 'ಅವನು' ಬರೆದ ನಾಟಕದ ಚಿತ್ರಕಥೆಯ ಸಾಲುಗಳೇ ಇರಬೇಕು

ಎಂದು ಅನ್ನಿಸುತ್ತದಲ್ಲವೇ? ಇರಲಿ, ಅಹಂಕಾರವು ದುರಹಂಕಾರವಾಗದೆ, ಈ ನಾಟಕದ ಅನ್ಯ ಪಾತ್ರಗಳಿಗೆ ಉಪದ್ರವ ಕೊಡುವಂತಾಗದೆ ನಾವು ನಮ್ಮ ಪಾತ್ರಗಳನ್ನು ನಿರ್ವಹಿಸಿ ನೇಪತ್ಯಕ್ಕೆ ಸರಿದರೆ, ನಮ್ಮ ನಿರ್ಧಾರಿತ ಪಾತ್ರಗಳಿಗೆ ನ್ಯಾಯ ಮಾಡಿದಂತಾಗುತ್ತದೆ ಅಲ್ಲವೇ?

**ಮುಕ್ತಕ-217** **ಆಗಸದ ಬಾಗು, ಚಂದ್ರಮನ ಗುಂಡಿನ ನುಣ್ಪು |**

**ಸಾಗರದ ತೆರವಂಕು, ಗಿಡಬಳ್ಳಿ ಬಳುಕು ||**

**ಮೇಘವರ್ಣಚ್ಛಾಯೆ ಯೀಸೃಷ್ಟಿಯಿಂ ನಮ್ಮೊ |**

**ಳಾಗಿಹುದು ರೂಪರುಚಿ–ಮಂಕುತಿಮ್ಮ ||**

ತೆರವಂಕು=ಅಂಕು ಡೊಂಕಾದ ಅಲೆಗಳು.

ದಿಗಂತದಲ್ಲಿ ಕಾಣುವ ಬಾಗಿದಂತಹ ಮುಗಿಲು, ನುಣುಪಾಗಿ ಮತ್ತು ಗುಂಡಾಗಿ ಕಾಣುವ ಹುಣ್ಣಿಮೆಯ ಚಂದಿರ, ಅಂಕುಡೊಂಕಾದ ಸಾಗರದ ಅಲೆಗಳು, ಚಿತ್ರ ವಿಚಿತ್ರ ವಿನ್ಯಾಸದ ಗಿಡ ಬಳ್ಳಿಗಳ ಬಳುಕು, ಹಲ ವಿದವಾದ ವರ್ಣಗಳನ್ನು ಧರಿಸುವ ಮೋಡಗಳು, ಆ ಮೋಡಗಳ ವಿನ್ಯಾಸದಿಂದ ಭೂಮಿಯಮೇಲೆ ಬೀಳುವ ನೆರಳಿನಾಕಾರಗಳು, ಹೀಗೆ ಸೃಷ್ಟಿಯ ಹಲವಾರು ವಿಚಿತ್ರಗಳೇ ನಮ್ಮೊಳಗಿನ ರೂಪ ಮತ್ತು ರುಚಿಗಳಿಗೆ ಕಾರಣವಾಗಿವೆ ಎನ್ನುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಮಾನವನ ರಸಿಕತೆಗೆ ಇವೆಲ್ಲ ಕಾರಣವಾಗಿದೆಯೆಂದರೆ, ತಪ್ಪಾಗಲಾರದು. ನೀಲಾಕಾಶ, ಆಕಾಶದಲ್ಲಿನ ಚಿತ್ರ ವಿಚಿತ್ರ ವಿನ್ಯಾಸದ ಮೋಡಗಳು, ಹುಣ್ಣಿಮೆಯ ಚಂದಿರ, ಭೋರ್ಗರೆವ ಕಡಲು, ಗಿಡ ಮರ ಬಳ್ಳಿಗಳು, ಹೂ ಹಣ್ಣುಗಳು, ಪ್ರಾಣಿ ಪಕ್ಷಿಗಳು, ಬಣ್ಣ ಬಣ್ಣದ ಚಿಟ್ಟೆಗಳು, ಕ್ರಿಮಿ, ಕೀಟಗಳು ಹೀಗೆ ಪರಮಾತ್ಮನ ಸೃಷ್ಟಿಯೆಲ್ಲವೂ ಮನುಷ್ಯನ ರಸಿಕತೆಗೆ ಪೂರಕವಾಗೇ ಇವೆ. ಕವಿಗಳಿಗೆ, ಪ್ರೇಮಿಗಳಿಗೆ, ವಾಗ್ಗೇಯಕಾರರಿಗೆ, ಚಿತ್ರಕಲಾವಿದರಿಗೆ,

ಮಣ್ಣು ಮರಳಿನಲ್ಲಿ ಬೊಂಬೆ ಮಾಡುವವರಿಗೆ, ಹೀಗೆ ನಮ್ಮ ಸುತ್ತಲಿನ ಎಲ್ಲಕ್ಕೂ ಪ್ರತಿಸ್ಪಂದಿಸುವವರಿಗೆ ಸ್ಫೂರ್ತಿದಾಯಕವಾಗಿಯೇ ಇದೆ.

ಎಲ್ಲವೂ ಎಲ್ಲರನ್ನೂ ಆಕರ್ಷಿಸುವುದಿಲ್ಲ. ಕೆಲವರಿಗೆ ಸ್ಪಂದನವೇ ಇರುವುದಿಲ್ಲ. ಕೆಲವರಿಗೆ ಸ್ಪಂದನವಿರುತ್ತದೆ. ಕೆಲವರು ಆ ಸ್ಪಂದನಕ್ಕೆ ಪ್ರತಿಕ್ರಿಯೆ ನೀಡುತ್ತಾರೆ. ಈ ರೀತಿಯ ಪ್ರತಿಕ್ರಿಯೆಯೇ, ಮನುಷ್ಯನ ಮನಸ್ಸಿನಲ್ಲಿ ಪ್ರೀತಿ ಪ್ರೇಮಗಳನ್ನು, ಆನಂದ ಉಲ್ಲಾಸಗಳನ್ನು ಉಂಟುಮಾಡುತ್ತದೆ. ಇವನ ಪ್ರತಿ ಕ್ರಿಯೆಗೂ ಅವನು ಕಾಣುವ ಕೇಳುವ ಮತ್ತು ಅನುಭವಿಸುವ ವಿಷಯ ವಸ್ತುಗಳಿಂದ ಉಂಟಾದ ಸ್ಪಂದನವೇ ಕಾರಣ.

ಈ ಜಗತ್ತಿನಲ್ಲಿ ಇಂದು ನಾವು ಕಾಣುವ, ಸಾವಿರಾರು ವರ್ಷಗಳಿಂದ ಮನುಷ್ಯ ಸೃಷ್ಟಿಸಿದ, ಸಾಹಿತ್ಯ, ಶಿಲ್ಪ ಮತ್ತು ಚಿತ್ರ ಕಲೆ ಎಲ್ಲವೂ ಈ ರೀತಿಯ ಸ್ಪಂದನದಿಂದ ಉಂಟಾದ ಪ್ರತಿಕ್ರಿಯೆಯೇ ಆಗಿದೆ. ಅಂದಿನ ಕಾಳಿದಾಸ, ಬಾಣ, ಕುಮಾರವ್ಯಾಸ, ಶೇಕ್ಸ್ ಪಿಯರ್ನಂತಹ, ಮಹಾನ್ ಕವಿಗಳು, ಮೈಖೇಲ್ ಅಂಜೆಲೋ, ಪಿಕಾಸೋ, ರಾಜಾ ರವಿವರ್ಮನಂತಹ ಕಲಾವಿದರಿಂದ ಹಿಡಿದು ಇಂದಿನ ಕವಿ ಕಲಾವಿದರ ತನಕ ಎಲ್ಲರಿಗೂ ಈ ಸೃಷ್ಟಿಯ ಆಕರ್ಷಣೆಯೇ ಕಾರಣ.

ಮನುಷ್ಯನ ಪರಸ್ಪರ ಸಂಬಂಧಗಳ ಸಂಕೀರ್ಣತೆಗೂ ಈ ಪರಮಾತ್ಮ ಸೃಷ್ಟಿಯ ಜಗತ್ತಿನ ಪ್ರತಿಯೊಂದೂ ಕಾರಣವಾಗಿದೆ. ನಾವು ನೋಡಬೇಕು, ಒಳ್ಳೆಯದನ್ನು ಅನುಭವಿಸಬೇಕು, ಒಳ್ಳೆಯ ಪ್ರತಿಕ್ರಿಯೆ ನೀಡಬೇಕು. ಪ್ರತಿಕ್ರಿಯೆ ನೀಡುವ ಶಕ್ತಿ, ಅನುಭವಿಸುವ ಬುದ್ಧಿ ಇಲ್ಲದಿದ್ದರೆ ಸುಮ್ಮನೆ ನೋಡಿ ಆಂತರ್ಯದಲ್ಲಿ ಆನಂದಿಸಬೇಕು. ಖಂಡಿತ ನಕಾರಾತ್ಮಕ ಪ್ರತಿಕ್ರಿಯೆ ನೀಡಲೇ ಬಾರದು. ಹಾಗಾದರೆ ಮಾತ್ರ ಹಲವರ ಅದ್ಭುತ ಪ್ರತಿಕ್ರಿಯೆಗಳು ಶಾಶ್ವತವಾಗಿ ಈ ಜಗತ್ತಿನಲ್ಲಿ ಇರಲು ಸಾಧ್ಯ.

**ಮುಕ್ತಕ-218**

**ಪರಿಪರಿಯ ರೂಪಿನಲಿ ಕಾಂತಿಯಲಿ ರಾಗದಲಿ |**
**ನೆರೆಯಿಸುತ ಪರಿಪರಿಯ ರಸಗಳಂ ಪ್ರಕೃತಿ||**
**ಕೆರಳಿಸುತ ಹಸಿವುಗಳ, ಸವಿಗಳನ್ನು ಕಲಿಸುವಳು |**
**ಗುರು ರುಚಿಗೆ ಸೃಷ್ಟಿಯಲ - ಮಂಕುತಿಮ್ಮ ||**

ವಿಧ ವಿಧವಾದ ರೂಪಗಳಲ್ಲಿ, ಕಾಂತಿಗಳಲ್ಲಿ, ಹಲವಾರು ಇಂಪಾದ ದನಿಗಳಲ್ಲಿ, ರಸಭರಿತವಾಗಿ ಪ್ರಕಟಗೊಂಡು, ಪ್ರಕೃತಿ, ನಿಸರ್ಗ ಅವುಗಳಲ್ಲಿ ಈ ಜಗತ್ತಿನ ಜೀವಿಗಳ ಮನಸ್ಸಿನಲ್ಲಿ ಆಸೆ ಹಸಿವು ಬಯಕೆ ಮತ್ತು ರುಚಿಗಳಂಥಾ ಭಾವಗಳನ್ನು ಉಂಟು ಮಾಡುತ್ತದೆ. ಹಾಗಾಗಿ ಸೃಷ್ಟಿಯೇ ರುಚಿಗಳಿಗೆ ಗುರು ಎಂದು ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ ಪ್ರಸ್ತಾಪಮಾಡಿದ್ದಾರೆ.

ಪ್ರಪಂಚದಲ್ಲಿರುವ ಎಲ್ಲವನ್ನೂ ಸಮಗ್ರವಾಗಿ ನಿಸರ್ಗವೆಂದು ಕರೆಯುತ್ತಾರೆ. ಈ ನಿಸರ್ಗದ ಒಂದು ಭಾಗವೇ ಮನುಷ್ಯನ ಜೀವನ, ಪಂಚಭೂತಗಳಿಂದಾದ ಭೂಮಿಯ ಮೇಲಿರುವುದೆಲ್ಲ ಈ ಪಂಚಭೂತಗಳ ಮಿಶ್ರಿತ ರೂಪ. ನಮ್ಮ ಮನುಷ್ಯನೂ ಸಹ ಈ ಪಂಚಭೂತಗಳಿಂದ ಆದವನೇ. ಪಂಚ ಜ್ಞಾನೇಂದ್ರಿಯಗಳು ಮತ್ತು ಪಂಚ ಸ್ಪರ್ಶ ಇಂದ್ರಿಯಗಳಿಂದಾದ ಮನುಷ್ಯನಲ್ಲಿ ಈ ಆಕರ್ಷಣೆ ಸಹಜವಾಗೇ ಇದೆಯಲ್ಲವೇ? ಮನುಷ್ಯ





ಜನ್ಮ ಜನ್ಮಾಂತರದಿಂದಲೂ ಇವುಗಳೆಲ್ಲದರಿಂದ ಆಕರ್ಷಿತನಾಗುತ್ತಿದ್ದಾನೆ. ಇವನಿಗೆ ಇದೇನೂ ಹೊಸದಲ್ಲ. ಆದರೆ ಪ್ರತೀ ಬಾರಿ ಜನ್ಮ ಪಡೆದಾಗಲೂ ಒಂದು ವಿಸ್ಮೃತಿಯಿಂದ ಹುಟ್ಟುತ್ತಾನೆ. ಹಾಗಾಗಿ ಪ್ರತೀ ಬಾರಿಯೂ ಇವೆಲ್ಲ ಇವನಿಗೆ ಹೊಸದಾಗಿ ಕಾಣುತ್ತದೆ. ಇವುಗಳಿಂದ ಆಕರ್ಷಿತನಾಗುತ್ತಾನೆ ಮತ್ತು ಅವುಗಳನ್ನು ಪಡೆಯಬೇಕೆಂಬ ಆಸೆ ಇವನಲ್ಲಿ ಹೊಮ್ಮುತ್ತದೆ.

ಮನುಷ್ಯನ ಆಸೆ ಏಕಮುಖವಾಗೂ ಇರುವುದಿಲ್ಲ. "ಪರಿಪರಿಯ ರೂಪಿನಲಿ ಕಾಂತಿಯಲಿ ರಾಗದಲ್ಲಿ ನೆರೆಯಿಸುತ ಪರಿಪರಿಯ ರಸಗಳಂ ಪ್ರಕೃತಿ" ಎಂಬಂತೆ ಬೇರೆ ಬೇರೆ ರೀತಿಯ ಕಾಂತಿ, ರೂಪ, ರುಚಿ ಮತ್ತು ರಸಗಳಿಂದಾದ ಪ್ರಕೃತಿಯಲ್ಲಿ ಒಬ್ಬೊಬ್ಬರಿಗೆ ಒಂದೊಂದು ರೀತಿಯ ಆಕರ್ಷಣೆಯಿರುತ್ತದೆ. ಪ್ರತಿಯೊಬ್ಬನ ಸ್ವಭಾವಕ್ಕೆ (DNA) ಗೆ ಅನುಗುಣವಾಗಿ ಅವನ ಅಭಿರುಚಿ ಇರುತ್ತದೆ. ಅದನ್ನೇ ಮಾನ್ಯ ಗುಂಡಪ್ಪನವರು 'ಕೆರಳಿಸುತ ಹಸಿವುಗಳ,

ಸವಿಗಳನು' ಎಂದು, ಈ ಪ್ರಕೃತಿ ತನ್ನ ಹಲವಾರು ಬಣ್ಣ ಬಣ್ಣದ ರೂಪಗಳನ್ನು ತೋರುತ್ತಾ ಮನುಷ್ಯರನ್ನು ಹೇಗೆ ತನ್ನೆಡೆಗೆ ಸೆಳೆದು ಅವರುಗಳ ಮನಸ್ಸಿನಲ್ಲಿ ಆಸೆಯನ್ನು ಚಿಗುರಿಸುತ್ತದೆ ಎಂದು ಸ್ಪಷ್ಟಪಡಿಸುತ್ತಾರೆ. ಹಾಗಾಗಿ ಈ ಪ್ರಕೃತಿಯೇ ಮನುಷ್ಯನ ಮನದಲ್ಲಿನ ಆಸೆಗೆ ಮತ್ತು ಹಲವಾರು ರುಚಿ, ಅಭಿರುಚಿಗೆ "ಗುರು" ಎಂದು ಹೇಳುತ್ತಾರೆ.

ಮನುಷ್ಯನ ಮನಸ್ಸಿನಲ್ಲಿರುವ ಈ ಅಭಿರುಚಿಯೇ ಈ ಜಗತ್ತಿನ ವೈವಿಧ್ಯತೆಗೆ ಕಾರಣ. ಇವನ ಅಭಿರುಚಿಗೆ ಸಿಕ್ಕ ಎಲ್ಲವನ್ನೂ ಮನುಷ್ಯ ಸುಂದರವಾಗಿಸಲು ಪ್ರಯತ್ನಿಸಿದ್ದಾನೆ ಮತ್ತು ಆ ಸುಂದರತೆಯನ್ನು ತಾನೂ ಅನುಭವಿಸಲು ಪ್ರಯತ್ನಿಸಿದ್ದಾನೆ. ಶಬ್ದ, ಸ್ಪರ್ಶ, ರೂಪ, ರಸ, ಗಂಧ, ಎಲ್ಲದರ ಮೂಲಕವೂ ಈ ಜಗತ್ತಿನ ಎಲ್ಲವನ್ನೂ ನೋಡಿ ಇಷ್ಟಪಟ್ಟು ಪಡೆದು ಅನುಭವಿಸಿ ಆನಂದಿಸುವ ಭಾಗ್ಯ ಮನುಷ್ಯನಿಗೆ ಮಾತ್ರ ಆ ಪರಮಾತ್ಮ ಕೊಟ್ಟಿದ್ದಾನೆ. ಇಂತಹ ಒಂದು ಗುಣವನ್ನು ಪಡೆದ ನಾವೇ ಧನ್ಯರು. ನಮ್ಮನ್ನು ರಂಜಿಸುವ ಈ ಪ್ರಕೃತಿಗೆ ಮತ್ತು ಅದನ್ನು ರುಚಿಸುತ್ತಾ ಆನಂದ ಪಡುವ ಗುಣ ನಮಗೆ ಕೊಟ್ಟ ಆ ಪರಮಾತ್ಮನಿಗೆ ನಾವು ಮನಸಾರ ವಂದಿಸೋಣ.

# ನಿತ್ಯ ವಿಸ್ಫುರಣ 219-223

**ಮುಕ್ತಕ-219**

**ಅರೆಯರೆಯೆ ನಮಗೆ ತೋರ್ಪೊಲವು ಚೆಲುವುಗಳೆಲ್ಲ ।**
**ಪರಿಪೂರ್ಣ ಸುಖ ಸತ್ತ್ವ ಸಾಗರದ ತೆರೆಗಳ್ ॥**
**ತರಣಿ ದೂರದೊಳಿಹನು; ಕಿರಣ ನಮಗೆಟಕುವುದು ।**
**ತೆರೆಯು ನೆರೆತದ ಕುರುಹೊ- ಮಂಕುತಿಮ್ಮ ॥**

ತರ್ಪೊಲವು=ತೋರ್ಪ+ಒಲವು, ದೂರದೊಳಿಹನು=ದೂರದೊಳು+ಇಹನು,

ನಮಗೆಟಕುವುದು=ನಮಗೆ ಎಟುಕುವುದು

ತರಣಿ=ಸೂರ್ಯ,

ನಮಗೆ ಕಾಣುವ ಒಲವು ಚೆಲುವುಗಳೆಲ್ಲ, ಅರೆ ಬರೆ, ಒಂದು ಪರಿಪೂರ್ಣತೆಯ ಅಪೂರ್ಣ ರೂಪ. ಮಹಾನ್ ಸಾಗರದಲ್ಲಿ ಎದ್ದ ತೆರೆಗಳಂತೆ, ಹೇಗೆ ದೂರದಲ್ಲಿರುವ ಸೂರ್ಯನ ಕಿರಣಗಳನ್ನು ಮಾತ್ರ ನಾವು

ಕಾಣುತ್ತೇವೆಯೋ, ಹೇಗೆ ಉಕ್ಕುವ ಸಾಗರದ ತೆರೆಗಳನ್ನು ಮಾತ್ರ ನಾವು ನೋಡಲಿಕ್ಕಾಗುತ್ತದೆಯೋ, ಹಾಗೆ ಪರಬ್ರಹ್ಮನ ಈ ಸೃಷ್ಟಿಯಲ್ಲಿಯೂ ಸಹ ನಾವು ನೋಡುವುದು ಕೇವಲ ಹೊರನೋಟ ಎಂದು ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ ಉಲ್ಲೇಖ ಮಾಡಿದ್ದಾರೆ.

ಈ ಜಗತ್ತಿನಲ್ಲಿರುವ ಎಲ್ಲವೂ ಆ ಪರಮ ಚೇತನದ ಬಲದಿಂದ ಅಸ್ತಿತ್ವದಲ್ಲಿ ಇವೆ. ಆದರೆ ಆ ಚೇತನ ಎಂದಿಗೂ ತನ್ನ ನಿಜ ಸ್ವರೂಪವನ್ನು ನಮಗೆ ಸಮಗ್ರವಾಗಿ ತೋರುವುದಿಲ್ಲ. ತನ್ನ ಕಾರ್ಯವನ್ನು ಮತ್ತು ತನ್ನ ಇರುವಿಕೆಯನ್ನು, ಕುರುಹುಗಳ ಮೂಲಕ ನಮಗೆ ತಿಳಿಸುತ್ತದೆ. ಎಲ್ಲ ಪ್ರಾಣಿಗಳು, ಮನುಷ್ಯನನ್ನೂ ಸೇರಿ, ಮಾಡುವ ಪ್ರತೀ ಕ್ರಿಯೆಗೂ, ಆ ಪರಮ ಚೇತನದಿಂದಾದ ಸ್ಥೂಲ ರೂಪ (ಜಡ) ಮತ್ತು ಅದನ್ನು ಸಕ್ರಿಯವಾಗಿಡುವ ಸೂಕ್ಷ್ಮ ರೂಪ(ಚೇತನ)ವೇ ಕಾರಣ. ಎಲ್ಲಕ್ಕೂ ಆ ಮಹಾನ್ ಪರಮ ಚೇತನವೇ ಕಾರಣವಾಗಿದ್ದರೂ ಅದರ ಸಮಗ್ರ ರೂಪ ನಮಗೆ ಕಾಣಲು ಸಾಧ್ಯವೇ ಇಲ್ಲವೆಂಬಂತೆ ನಾವು ಅದರ ಕುರುಹುಗಳನ್ನು ಮಾತ್ರ ನೋಡುತ್ತೇವೆ.

ಉದಾಹರಣೆಗೆ, 15.20 ಕೋಟಿ ಕಿಲೋಮೀಟರ್ ದೂರದಲ್ಲಿರುವ ನಮ್ಮ ಸೂರ್ಯನ ಕಿರಣಗಳು ಮತ್ತು ಆ ಕಿರಣಗಳ ಮೂಲಕ ಬರುವ ಶಾಖ ಮಾತ್ರ ಸಕಲ ಚರಾಚರಗಳಿಗೂ ಅನುಭವಕ್ಕೆ ಬರುತ್ತದೆ. ನಾವು ಕೇವಲ ನೋಡುತ್ತೇವೆ ಮತ್ತು ಅನುಭವಿಸುತ್ತೇವೆ ಮತ್ತು ಅದರಿಂದ ಪ್ರಭಾವಿತರಾಗುತ್ತೇವೆ. ಆ ಸೂರ್ಯನ ಎಲ್ಲ ಗುಣಗಳನ್ನೂ ನಾವು ನೋಡಲು, ಪಡೆಯಲು ಮತ್ತು ಅನುಭವಿಸಲು ಸಾಧ್ಯವಿಲ್ಲ. ಒಂದು ಅಗಾಧ ಸಮುದ್ರ ಆ ಸಮುದ್ರದಲ್ಲಿ ಒಳಪ್ರವಾಹಗಳು (under currents) ಹಲವಾರು. ಅವುಗಳನ್ನು ನಾವು ನೋಡಲು ಸಾಧ್ಯವಿಲ್ಲ ಅಲ್ಲವೇ? ನಾವು ನೋಡುವುದು ಕೇವಲ ಶಾಂತ ಸಾಗರ ಅಥವಾ ಆಗಾಗ ಅದರ ಮೇಲೆ ಏಳುವ ಅಲೆಗಳು.

ಗಿಡ ಮರಗಳಲ್ಲಿ, ನದಿ ಸಾಗರಗಳಲ್ಲಿ, ಸಸಿ ಬಳ್ಳಿಗಳಲ್ಲಿ, ಪ್ರಾಣಿ ಪಕ್ಷಿಗಳಲ್ಲಿ, ಕ್ರಿಮಿ ಕೀಟಗಳಲ್ಲಿ, ಹೀಗೆ ಎಲ್ಲದರಲ್ಲಿಯೂ ಆ ಚೇತನವೇ ಸಕ್ರಿಯವಾಗಿದ್ದರೂ ಅದನ್ನು ನಮಗೆ ನೋಡಲಾಗುವುದಿಲ್ಲ. ನಾವು ಕೇವಲ ಬಾಹ್ಯ ರೂಪ ಮತ್ತು ಆ ರೂಪದಲ್ಲಿ ಪ್ರಕಟವಾಗುವ ಕ್ರಿಯೆ ಮತ್ತು ಭಾವಗಳನ್ನು ಮಾತ್ರ ನೋಡುತ್ತೇವೆ. ಅದಕ್ಕೆ ಕಾರಣ ಕೇವಲ ನಮ್ಮ ಜ್ಞಾನದ ಮಿತಿ, ನಮ್ಮ ಮಿತಿಯನ್ನು ಹೆಚ್ಚಿಸಿಕೊಂಡು ಅವುಗಳೆಲ್ಲದರ ಹಿಂದೆ ಅಡಗಿರುವ ಮತ್ತು ಸಕ್ರಿಯವಾಗಿರುವ ಆ ಪರಮ ಚೇತನವನ್ನು ನೋಡಲಾದರೆ, ನಮ್ಮಲ್ಲಿ ಅಡಗಿರುವ ಭೇದ ಭಾವಗಳನ್ನು ಅಳಿಸಬಹುದು.

ಆದರೆ ನಮ್ಮ ಸ್ವಭಾವದಲ್ಲಿ ಒಂದಾಗಿ ಹೋಗಿರುವ ಈ ಭೇದವನ್ನು ತೊಳೆಯಲು ಜ್ಞಾನದ ಹೊಳೆ ಹರಿಯಬೇಕು. ನಾವು ಜ್ಞಾನವನ್ನು ಪಡೆದರೆ, ನಮಗೆ ಇಡೀ ಸೃಷ್ಟಿಯ ಮತ್ತು ಸೃಷ್ಟಿಕರ್ತನ ಸಮಗ್ರ ಚಿತ್ರದ ದರ್ಶನವಾಗಬಹುದು.





**ಮುಕ್ತಕ-220**

**ಸೌಂದರ್ಯ ಬಾಂಧವ್ಯಗಳು ಸತ್ಯವಲ್ಲದೊಡೆ |**
**ಕುಂದುವಡೆಯದ ಸತ್ಯವಿಳೆಯೊಳಿನ್ನೆಲ್ಲಿ ||**
**ಗಂಧಾನಿಲಂಗಳವು ಪರಸತ್ವಪುಷ್ಪದವು |**
**ಸಂದೇಹವೇನೆಲವೋ-ಮಂಕುತಿಮ್ಮ ||**

ಸತ್ಯವಲ್ಲದೊಡೆ=ಸತ್ಯ+ಅಲ್ಲದೊಡೆ, ಕುಂದುವಡೆಯದ=ಕುಂದು+ಅಡೆಯದ,
ಸತ್ಯವಿಳೆಯೊಳಿನ್ನೆಲ್ಲಿ=ಸತ್ಯವು+ಇಳೆಯೊಳು+ಇನ್ನೆಲ್ಲಿ, ಗಂಧಾನಿಲಂಗಳವು=ಗಂಧ+ಅನಿಲಂಗಳು+ಅವು,
ಸಂದೇಹವೇನೆಲವೋ=ಸಂದೇಹವು+ಏನು+ಎಲವೋ
ಕುಂದು=ಕೊರತೆ, ಅಡೆಯದ=ಪಡೆಯದ

ಈ ಜಗತ್ತಿನ ಸೌಂದರ್ಯ, ಬಾಂಧವ್ಯಗಳು ಸತ್ಯವಲ್ಲದಿದ್ದರೆ, ಕುಂದದ, ಕಡಿಮೆಯಾಗದ ಸತ್ಯವು ಈ ಜಗತ್ತಿನಲ್ಲಿ ಎಲ್ಲಿದೆ ಎಂದರೆ ಪುಷ್ಪದಲ್ಲಿ ಉತ್ತಮವಾದ ಸತ್ವದಂತೆ ಬಂದು ಸೇರುವ ಗಂಧದಂತೆ ಈ ಜಗತ್ತಿನಲ್ಲಿ ಪರಮಾತ್ಮ ತತ್ವದಿಂದ ಈ ಸೌಂದರ್ಯ ಬಾಂಧವ್ಯಗಳೆಲ್ಲ ಬಂದು ಸೇರಿವೆ, ಇದರಲ್ಲಿ ಸಂದೇಹವೇನೂ ಇಲ್ಲ ಎಂದು ಹೇಳುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಈ ಪ್ರಕೃತಿಯ ಸೌಂದರ್ಯ, ಚೆಲುವುಗಳು, ಮನುಷ್ಯರ ಅಂದಚೆಂದಗಳು ಹಲವಾರು ವಿನ್ಯಾಸದ, ಬಣ್ಣ ಬಣ್ಣಗಳ ಪ್ರಾಣಿ, ಪಕ್ಷಿ, ಕೀಟ, ಗಿಡ, ಮರ, ಬಳ್ಳಿ ಹೂಗಳು, ವಿಧ ವಿಧವಾದ ರುಚಿಗಳ ಮತ್ತು ಗುಣಗಳ ಸಾವಿರಾರು ಹಣ್ಣು, ಹೂವುಗಳು ಮತ್ತು ಹಣ್ಣು ಬಿಡದೆ ಇದ್ದರೂ ಮನುಷ್ಯನಿಗೆ ಉಪಯೋಗಕ್ಕೆ ಬರುವಂಥಾ ಹಲವಾರು ಔಷದೀಯ ಗುಣಗಳುಳ್ಳ ಗಿಡ ಮರಗಳು, ಎಲ್ಲವೂ ಚೆಂದವಾಗಿವೆ. ಆದರೆ ಈ ಚೆಂದಗಳೆಲ್ಲವೂ ಈ ಭೂಮಿಯಲ್ಲಿ ಶಾಶ್ವತವಲ್ಲ. ಅಂದಗೆಡುತ್ತದೆ, ಬದಲಾಗುತ್ತದೆ ಮತ್ತೆ ಮತ್ತೆ ಚಿಗುರಿ, ಅರಳಿ ಅಂದಗಳನ್ನು ಸೂಸುತ್ತಾ ರುಚಿಗಳನ್ನು ಹೊರಗೆಡುಹುತ್ತಾ, ಜಗತ್ತನ್ನು ರಂಜಿಸುತ್ತಿದೆ. ಇದು ಪ್ರಕೃತಿಯ ನಿಯಮ, ಆ ಪರಮ ಚೇತನವೇ ಪ್ರಕೃತಿಯ ರೂಪದಲ್ಲಿ ಹೀಗೆ ಪ್ರಕಟಗೊಂಡು ಜಗತ್ತನ್ನು ರಂಜಿಸುತ್ತಿದೆ.

ಜಗತ್ತಿನಲ್ಲಿ ಎಲ್ಲಕ್ಕೂ ರುಚಿಯನ್ನು ನೀಡುವ, ಅಂದವನ್ನು ನೀಡುವ ಮತ್ತು ಅವುಗಳನ್ನು ಗುರುತಿಸಿ, ಅನುಭವಿಸುವ ಆಸೆಗಳನ್ನು ಎಲ್ಲ ಪ್ರಾಣಿಗಳಲ್ಲಿ ಉಂಟುಮಾಡಿರುವ ಆ ಪರಮ ಚೇತನವೇ, ಎಲ್ಲ ವಸ್ತುಗಳಲ್ಲಿ ಆಸೆಯಾಗಿ, ಅಂದವಾಗಿ, ರುಚಿಯಾಗಿ ಸೇರಿಕೊಂಡು, ಈ ಜಗತ್ತನ್ನು ಮತ್ತೆ ಮತ್ತೆ ಸ್ವಾಧಿಷ್ಟವಾಗಿ, ಅಂದವಾಗಿ, ಸುಂದರವಾಗಿ ಮಾಡುತ್ತಾ ಇದೆ ಎಂದರೆ ತಪ್ಪಾಗಲಾರದು. ನಾವು ಅದರ ಕ್ರಿಯೆಯ ಪರಿಣಾಮವನ್ನಷ್ಟೇ ತಿಳಿಯಬಲ್ಲೆವು.

ಮಲ್ಲಿಗೆ ಹೂವಿನ ರೂಪವನ್ನು ನೋಡಬಹುದು, ಅದರ ಕೋಮಲತೆಯನ್ನು ಅಭಿನಂದಿಸಬಹುದು, ಅದರ ಸುಗಂಧವನ್ನು ಆಸ್ವಾದಿಸಬಹುದು, ಆದರೆ ಅದಕ್ಕೆ ಸುಂದರ ಆಕಾರ, ಕೋಮಲತೆ ಮತ್ತು ಅದ್ಭುತ ಸುಗಂಧವನ್ನು ನೀಡಿದ ಶಕ್ತಿಯನ್ನು ನೋಡಲು ಸಾಧ್ಯವೇ ಇಲ್ಲ, ಊಹಿಸಿಕೊಳ್ಳಬಹುದು, ಆಂತರ್ಯದಲ್ಲಿ ಅನುಭವಿಸಬಹುದು. ಇವುಗಳನೆಲ್ಲ ನೋಡಿದ ಮೇಲೆ, ಆ ಪರತತ್ವದ ಪರಸತ್ವವನ್ನು ಸಂದೇಹವೇನೆಲವೋ, ಸಂದೇಹಿಸಲು ಸಾಧ್ಯವೇ?

ಈ ಜಗತ್ತಿನಲ್ಲಿ ನಾವು ಆ ಪರತತ್ವದ ಪರ ಸತ್ವವನ್ನು ಮತ್ತು ಅದರ ಸಂಪೂರ್ಣ ಕ್ರಿಯೆಯನ್ನು ನೋಡಿ ಅಭಿನಂದಿಸಿ ಮತ್ತು ಆನಂದ ಪಡುವುದು ಬಿಟ್ಟರೆ ನಮಗೆ ಬೇರೆ ಮಾರ್ಗ ಉಂಟೆ. ಎಲ್ಲರೂ ಯೋಚಿಸಲೇ ಬೇಕಾದ ವಿಷಯವಿದು. ನಮ್ಮ ಅಂತರಂಗದಲ್ಲಿ ವಿಶ್ಲೇಷಣೆ ಮಾಡಬೇಕಾದ ವಿಚಾರವಲ್ಲವೇ?

**ಮುಕ್ತಕ-221**

**ಅರೆಗಳಿಗೆಯನುಭವವೆ ಮಾನಸವ ಕರಗಿಸದೆ? |**
**ಪರಿಪಕ್ವಗೊಳಿಸದೇನದು ಜೀವರಸವ? |**
**ಉರಿ ತನಪುಗಳಿನಾತ್ಮ ಸಂಸ್ಕಾರಗಳನೆಸೆಪ |**
**ಪುರುಳ ಪುಸಿಯನ್ನುವೆಯಾ-ಮಂಕುತಿಮ್ಮ ||**

ಅರೆಗಳಿಗೆಯನುಭವವೆ=ಅರೆಗಳಿಗೆಯ+ಅನುಭವವೆ,
ಪರಿಪಕ್ವಗೊಳಿಸದೇನದು=ಪರಿಪಕ್ವಗೊಳಿಸದೇನು+ಅದು, ತನಿಪುಗಳಿನಾತ್ಮ=ತಣಿಪುಗಲಿನ್+ಆತ್ಮ,
ಸಂಸ್ಕಾರಗಳನೆಸೆಪ=ಸಂಸ್ಕಾರಗಳನು+ಎಸೆಪ, ಪುಸಿಯನ್ನುವೆಯಾ=ಪುಸಿ+ಎನ್ನುವೆಯಾ? ತನಿಪು=ಶೀತಲ,
ಎಸೆಪ=ಎಸಗುವ, ಪುಸಿ=ಹುಸಿ, ಸುಳ್ಳು,

ಜೀವನದಲ್ಲಿ ಒಂದು ಅರೆಗಳಿಗೆಯಲ್ಲಿ ಆಗುವ ಅನುಭವವು ನಮ್ಮ ಮನಸ್ಸನ್ನು ಕರಿಗಿಸದೆ? ನಮ್ಮಲ್ಲಿ ಹರಿಯುವ ಜೀವರಸವನ್ನು ಪರಿಪಕ್ವಗೊಳಿಸದೇನು ಅದು? ಉರಿ ಮತ್ತು ಶೀತಲತೆಗಳು ಆತ್ಮವನ್ನು ಸಂಸ್ಕರಿಸುವ ಆ ತಿರುಳನ್ನು, ಸತ್ವವನ್ನು ಹುಸಿಯನ್ನುತೀಯಾ ನೀನು? ಎಂದು ಒಂದು ಪ್ರಶ್ನೆಯನ್ನು ನಮ್ಮ ಮುಂದಿಟ್ಟಿದ್ದಾರೆ ಮಾನ್ಯ ಗುಂಡಪ್ಪನವರು.

ನಮ್ಮ ಜೀವನದಲ್ಲಿ ಸಾವಿರಾರು ಅನುಭವಗಳಾಗುತ್ತವೆ. ಸಾಮಾನ್ಯ ಎಲ್ಲವೂ ಸಾಧಾರಣ ಅನುಭವಗಳಾಗಿರುತ್ತವೆ. ಆದರೆ ಬೆರಳೆಣಿಕೆಯಷ್ಟು ಅನುಭವಗಳು ನಮ್ಮನ್ನು ತೀವ್ರ ಚಿಂತನೆಗೆ ಒಳಪಡಿಸುತ್ತದೆ. ನಮ್ಮ ಮನಸ್ಸು ಬುದ್ಧಿಗಳ ಮೇಲೆ ಅಗಾಧ ಪರಿಣಾಮ ಬೀರುತ್ತದೆ. ಈ ಪರಿಣಾಮ ನಮ್ಮ ದೇಹದಲ್ಲಿ ಉತ್ಪತ್ತಿಯಾಗುವ ಹಲವಾರು ರಸಗಳ ಉತ್ಪತ್ತಿಯ ಪರಿಮಾಣ ಮತ್ತು ಪ್ರಮಾಣದ ಮೇಲೆ ಪ್ರಭಾವ ಬೀರುತ್ತದೆ. ನಾವು ಯೋಚಿಸುವ ರೀತಿಯಲ್ಲಿ ಒಂದು ಮಹತ್ತರ ಬದಲಾವಣೆಗೆ ಅನುವು ಮಾಡಿಕೊಡುತ್ತದೆ. ಆ ಅನುಭವದ, ಅದರಿಂದ ನಮ್ಮಲ್ಲಿ ಮೂಡಿದ

ವಿಚಾರದ ಮತ್ತು ಆ ವಿಚಾರಗಳು ನಮ್ಮ ಮನಸ್ಸು ಬುದ್ಧಿಗಳ ಮೇಲೆ ಮಾಡುವ ಪರಿಣಾಮದಿಂದ ನಾವು ಪಕ್ವವಾಗುತ್ತೇವೆ. ಇದನ್ನೇ ಮಾನ್ಯ ಗುಂಡಪ್ಪನವರು 'ಪರಿಪಕ್ವಗೊಳಿಸದೇನದು ಜೀವರಸವ' ಎಂದಿದ್ದಾರೆ.

'ಉರಿ ತನಿಪುಗಳಿನಾತ್ಮ ಸಂಸ್ಕಾರಗಳನೆಸೆಪ' ಎಂದರೆ ನಮ್ಮ ಜೀವನದಲ್ಲಿ ನಾವು ಅನುಭವಿಸುವ ಕಷ್ಟ ಮತ್ತು ಸುಖಗಳು ನಮ್ಮನ್ನು ಪಕ್ವವನ್ನಾಗಿಸಿ ಆತ್ಮಸಂಸ್ಕಾರಕ್ಕೆ ದಾರಿಯಾಗುತ್ತದೆ ಎಂದು ಅರ್ಥ. ನೋಡಿ ಕೆಲವರ ಜೀವನದಲ್ಲಿ ಈ ಕಷ್ಟ ಸುಖಗಳ ಅನುಭವ ಒಂದುಬಾರಿಯಾಗಬಹುದು. ಕೆಲವರ ಜೀವನದಲ್ಲಿ ಒಂದಕ್ಕಿಂತ





ಹೆಚ್ಚು ಬಾರಿ ಆಗಬಹುದು. ಕೆಲವರ ಜೀವನ ಒಂದು ಬೃಹಚ್ಚಕ್ರದ (roller coaster ride) ಆಟವಾಗಿರಬಹುದು ಮತ್ತೂ ಕೆಲವರಿಗೆ ಇಡೀ ಜೀವನವೇ ಒಂದು ಸುಖದ ಸುಪ್ಪತ್ತಿಗೆಯಾಗಿರಬಹುದು. ಆದರೆ ಯಾರು ಯಾವುದರಿಂದ ಸುಖಪಡುತ್ತಾರೆ ಅಥವಾ ದುಃಖಪಡುತ್ತಾರೆ ಎನ್ನುವುದು ಅವರವರ ಸ್ವಭಾವದ ಮೇಲೆ ಆಧಾರಪಟ್ಟಿರುತ್ತದೆ. ಕೆಲವರಿಗೆ ಹಣದಲ್ಲಿ ಸುಖ ಕೆಲವರಿಗೆ ಗುಣದಲ್ಲಿ ಸುಖ.

ಆದರೆ ನಮ್ಮ ಸನಾತನ ಧರ್ಮದ ಪ್ರಕಾರ ಪ್ರತೀ ಜೀವಿಯೂ ತನ್ನ ಪೂರ್ವ ಕರ್ಮವನ್ನಾಧಾರಿಸಿ ಕಷ್ಟ ಸುಖಗಳನ್ನು ಅನುಭವಿಸುತ್ತಿರುತ್ತಾನೆ. ಹೀಗೆ ಕಷ್ಟ ಸುಖಗಳನ್ನು ಅನುಭವಿಸುವಾಗ, ಸಂಸ್ಕಾರವೂ ಉತ್ತಮವಾಗಿ ಈ ಕಷ್ಟ ಸುಖಗಳ ಅನುಭವದಿಂದ ಮುಕ್ತನಾಗಿ, ಒಂದು ನಿರ್ಲಿಪ್ತಭಾವ ಬಂದರೆ ಮನುಷ್ಯ ಆನಂದವನ್ನು ಅನುಭವಿಸಬಹುದು. ಜೀವನಕ್ಕೆ ಅಂಟಿಕೊಂಡಿದ್ದರೆ ಸುಖ ಅಥವಾ ದುಃಖ. ಅಂಟದೆ ಇದ್ದರೆ ಸುಖ ದುಃಖಗಳ ಭಾವದಿಂದ ಮೇಲೇರಿ ಒಂದು ಮುಕ್ತವಾದ ಆನಂದದ ಅನುಭವ ಪಡೆಯಬಹುದು.

**ಮುಕ್ತಕ-222** **ಆವುದೊ ಒಳಿತೆಂದು ಆವುದೋ ಸೊಗವೆಂದು |**

**ಅವಾವ ದಿಕ್ಕಿನೊಳಮಾವಗಂ ಬೆದಕಿ ||**

**ಜೀವ ಪರಿಧಾವಿಪವೊಲ್ ಆಗಿಪಂತರ್ವೃತ್ತಿ |**

**ಭಾವುಕದ ನೆಲೆಯ ಕರೆ ಮಂಕುತಿಮ್ಮ ||**

ಒಳಿತೆಂದು=ಒಳಿತು+ಎಂದು, ಸೊಗವೆಂದು ಸೊಗ+ಎಂದು, ಅವಾವ=ಆವ+ಆವ,
ದಿಕ್ಕಿನೊಳಮಾವಗಂ=ದಿಕ್ಕಿನೊಳಂ+ಆವಗಂ, ಪರಿಧಾವಿಪವೊಲ್=ಪರಿಧಾವಿಪ+ಒಲ್,
ಆಗಿಪಂತರ್ವೃತ್ತಿ=ಆಗಿಪ+ಅಂತವೃತ್ತಿ.
ಆವುದೋ=ಯಾವುದೋ, ಸೊಗವೆಂದು=ಸೊಗಸು ಎಂದು, ಆವಗಂ=ಯಾವಾಗಲೂ, ಸದಾಕಾಲ,
ಪರಿಧಾವಿಪವೊಲ್=ಓಡುವಂತೆ, ಆಗಿಪ=ಮಾಡುವ, ಅಂತರ್ವೃತ್ತಿ=ಅಂತರಂಗದ ಭಾವ.

ಯಾವುದೋ ಒಳ್ಳೆಯದೆಂದು ಮತ್ಯಾವುದೋ ಸೊಗಸೆಂದು ಬೇರೆ ಬೇರೆ ದಿಕ್ಕಿನಲ್ಲಿ ಸದಾಕಾಲ ಹುಡುಕುತ್ತಾ ಓಡುವಂತೆ ಮಾಡುವ, ನಮ್ಮ ಆಂತರ್ಯಕ್ಕೆ ಇಂಬುನೀಡುವುದು ನಮ್ಮ ಭಾವನೆಯ ಕೂಗು ಎನ್ನುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಮನುಷ್ಯನೂ ಸೇರಿದಂತೆ, ಪ್ರತೀ ಪ್ರಾಣಿಯೂ, ತನಗೆ ಯಾವುದು ಒಳಿತೆನಿಸುತ್ತದೋ, ತನಗೆ ಯಾವುದು ಸೊಗಸೆನಿಸುತ್ತದೋ ಅದನ್ನೇ ಪಡೆಯಲು ಹುಡುಕುತ್ತದೆ. ಹೀಗೆ ಹುಡುಕಲು ಮನಸ್ಸು ಬುದ್ಧಿಗಳನ್ನು ಪ್ರೇರೇಪಿಸಿ ಹಲವಾರು ದಿಕ್ಕುಗಳಲ್ಲಿ ಅದನ್ನು ಓಡಿಸುವುದು ಅದರ ಅಂತರಂಗದ ಭಾವ. ಈ ಅಂತರಂಗದ ಭಾವಕ್ಕೆ ಆಯಾ ವ್ಯಕ್ತಿಯ ಪರಿಸರ, ವಿದ್ಯೆ, ಸಂಸ್ಕಾರಗಳು ಕಾರಣವಾಗುತ್ತವೆ. ಹುಟ್ಟಿನಿಂದ ಸಾವಿನ ತನಕ ಎಲ್ಲರಿಗೂ ಏನೋ ಬೇಕು, ಯಾವುದೋ ಬೇಕು ಅವುಗಳನ್ನು ಪಡೆಯಲು ಎಂದಿಗೂ ನಿಲ್ಲದ ಪ್ರಯತ್ನಗಳ ಸರಮಾಲೆ.

ಒಂದು ವ್ಯಕ್ತಿಯ ಮನದಲ್ಲಿ ಒಂದು ಬಯಕೆ ಹೇಗೆ ಉಂಟಾಗುತ್ತದೆ ಎನ್ನುವುದಕ್ಕೆ ಮಾನ್ಯ ಗುಂಡಪ್ಪನವರು ಸುಂದರವಾದ ವಿಶ್ಲೇಷಣೆ ನೀಡಿದ್ದಾರೆ ಈ ಮುಕ್ತಕದಲ್ಲಿ, ಇಂದ್ರಿಯಗಳ ಮೂಲಕ ಒಂದು ವಸ್ತು, ವ್ಯಕ್ತಿ ಅಥವಾ ವಿಷಯದ ಪರಿಚಯವಾಗುತ್ತದೆ. ಅಂತರ್ಯದಲ್ಲಿ ಇದು ಇಂತಹ ವಸ್ತು, ಇದು ಒಳ್ಳೆಯದು, ಸೊಗಸಾದದ್ದು ಎನ್ನುವ ವಿಶ್ಲೇಷಣೆ ನಡೆಯುತ್ತದೆ. ನಂತರ ಅದನ್ನು ಹೊಂದುವ ಬಯಕೆ ಉಂಟಾಗುತ್ತದೆ. ಅದನ್ನು ಪಡೆಯಲು ನಾನಾ ದಿಕ್ಕಿನಲ್ಲಿ ನಮ್ಮ ಓಟ ನಡೆಯುತ್ತದೆ. ಸಿಕ್ಕರೆ ಸಂತೋಷ ಸಿಗದಿದ್ದರೆ ಅಸಂತೋಷ. 'ದೃಷ್ಯಮಾಣೆ ಭವೇತ್ ಪ್ರೀತಿಃ' ಎಂದರೆ ವಸ್ತುಗಳನ್ನು ನೋಡಿದರೆ ಅವುಗಳನ್ನು ಪಡೆಯಬೇಕೆಂಬ ಆಸೆ ಮನದಲ್ಲುಂಟಾಗುತ್ತದೆ.

ಬಯಕೆ ಉಂಟಾಗುವುದು ಬಹಳ ಸಹಜ ಗುಣ. ನಮ್ಮ ಅಸ್ತಿತ್ವಕ್ಕೆ ಅದು ಪೂರಕವಾಗಿರುತ್ತದೆ. ಆದರೆ ಆ ಅಸ್ತಿತ್ವ ಸುಂದರವಾಗಿರಬೇಕು, ಶಾಂತವಾಗಿರಬೇಕು ಆನಂದದಿಂದಿರಬೇಕು ಎಂದಾಗ ನಮ್ಮ ಬಯಕೆಗಳೂ ಸಹ ಹಾಗೆಯೇ ಇರಬೇಕಲ್ಲವೇ. ನಾವು ಏನನ್ನು ಬಯಸುತ್ತೇವೆಯೋ ಅದನ್ನು ಪಡೆದರೆ, ಅದರಿಂದುಂಟಾಗುವ ಪರಿಣಾಮಗಳನ್ನು ನಾವೇ ಅನುಭವಿಸಬೇಕಲ್ಲವೇ. ಹಾಗಾಗಿ ಬಯಸುವಾಗ ಬಹಳ ಜಾಗರೂಕರಾಗಿರಬೇಕು.

**ಮುಕ್ತಕ-223** **ಒಡೆಯನಾವೆಡೆ ಸಾರ್ದನೆಂದು ಪದವಾಸನೆಯ |**
**ತಡಕಿ ಮೂಸುತ ಶುನಕನಲೆದಾಡುವಂತೆ ||**
**ಬಡಜಗವನೊಳಿತಕೆಂದತ್ತಿ ಪುಡುಕಿಸುವ |**
**ಬೆಡಗು ಶಿವನೊಡವೆಯ-ಮಂಕುತಿಮ್ಮ ||**

ಒಡೆಯನಾವೆಡೆ=ಒಡಯನು+ಆವ+ಎಡೆ, ಸಾರ್ದನೆಂದು=ಸಾರ್ದನು+ಎಂದು,
ಶುನಕನಲೆದಾಡುವಂತೆ=ಶುನಕವು+ಅಲೆದಾಡುವಂತೆ,
ಬಡಜಗವನೊಳಿತಕೆಂದತ್ತಿತ್ತ=ಬಡ+ಜಗವನು+ಒಳಿತಕೆ+ಎಂದು+ಅತ್ತಿಂದಿತ್ತ,
ಶಿವನೊಡವೆಯದೊ=ಶಿವನ+ಒಡವೆಯು+ಅದೊ

ಸಾರ್ದನೆಂದು=ಹೋದನೆಂದು, ಪದವಾಸನೆಯ=ಪಾದದ ವಾಸನೆ, ಶುನಕ=ನಾಯಿ, ಪುಡುಕಿಸುವ=ಹುಡುಕಿಸುವ, ಬೆಡಗು=ಆಕರ್ಷಣೀಯವಾದದು.

ತನ್ನ ಒಡೆಯ ಎತ್ತ ಹೋದನೆಂದು ಅವನ ಕಾಲಿನ ವಾಸನೆಯನ್ನು ಮೂಸುತ್ತಾ ಅಲೆಯುವ ನಾಯಿಯಂತೆ, ಈ ಜಗತ್ತಿನಲ್ಲಿ ತನಗೆ ಒಳಿತಾವುದು ಎಂದು ನಾವು ಹುಡುಕುವಂತೆ ಮಾಡುವ ಈ ಲೋಕಮಾಯೆಯೇ ಆ ಪರಶಿವನ ಅಲಂಕಾರದ ಒಡವೆಯೋ ಎಂದು ಒಂದು ಉದ್ಗಾರವನ್ನು ತೆಗೆಯುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

"ಬಡಜಗವ' ಎನ್ನುವ ಪದವನ್ನು ಶ್ರೀ ಗುಂಡಪ್ಪನವರು ಬಹಳ ಸುಂದರವಾಗಿ ಉಪಯೋಗಿಸಿದ್ದಾರೆ. ಜಗತ್ತು ಸಕಲ ಸಂಪತ್ತಿನಿಂದ ಕೂಡಿದ್ದರೂ 'ಬಡಜಗವ' ಎಂದು ಪದ ಪ್ರಯೋಗ ಮಾಡಿದ್ದಾರೆ. ಎಲ್ಲವೂ ಇದೆ, ಇರುವುದೆಲ್ಲವೂ ಸುಂದರವಾಗಿದೆ. ಆದರೂ ಏನೋ ಹುಡುಕಾಟ, ಏನೋ ಕೊರತೆಗಳ ಅನುಭವಿಸುವ,





ಇಷ್ಟಿದ್ದರೆ ಇನ್ನೂ ಆಸೆಪಡುವ ಮತ್ತೂ ಬೇಕೆನ್ನುವ ನಮ್ಮಂತಹ 'ಬಡ' ಜನರಿಂದ ತುಂಬಿದ ಈ ಲೋಕ 'ಬಡಜಗತ್ತು' ಅಲ್ಲದೆ ಮತ್ತೇನು ಹೇಳಿ ವಾಚಕರೆ,

ನಮ್ಮದೆಲ್ಲ ತೃಪ್ತಿಯೇ ಇಲ್ಲದ ಜೀವನ. ಎಷ್ಟಿದ್ದರೂ ಸಾಲದು, ಏನಿದ್ದರೂ ಸಾಲದು. ನಾಯಿ ವಾಸನೆ ಹಿಡಿದು ಮೂಸುತ್ತಾ ಸದಾ ಏನನ್ನೋ ಕೆದಕಿ ಹುಡುಕುವಂತೆ ನಮ್ಮ ಬಾಳುಗಳಿವೆ ಎಂದರೆ ತಪ್ಪಾಗಲಾರದು. ನಮ್ಮ ಆಸೆಗಳ ಸರಮಾಲೆಗಳಿಗೆ ಕೊನೆಯೇ ಇಲ್ಲ. ಅನಾದಿಕಾಲದಿಂದ ಸಮಾಜವನ್ನು ಒಂದು ಸರಿದಾರಿಗೆ ತರಬೇಕೆಂದು ಪ್ರಯತ್ನಪಟ್ಟ ಸಂತರೆಲ್ಲಾ ಪ್ರತಿಪಾದಿಸಿದ್ದು 'ಆಸೆಯೇ (ದುರಾಸೆಯೂ ಸೇರಿ) ದುಃಖಕ್ಕೆ ಮೂಲ' ಎಂದು.

ಪುಸ್ತಕದಲ್ಲಿ ಓದುತ್ತೇವೆ, ಪ್ರವಚನ ಕೇಳುತ್ತವೆ. ಕೆಲ ಕ್ಷಣ ನಮಗೆ 'ಹೌದಲ್ಲ, ಇದೇ ಸರಿ' ಎಂದು ಅನಿಸಿದರೂ, ಮರುಕ್ಷಣವೇ ನಾಯಿ ಬಾಲದಂತೆ ನಮ್ಮ ಬುದ್ಧಿ ಮತ್ತೇನನ್ನೋ ಹುಡುಕುತ್ತದೆ. ಇದು ಜಗತ್ತಿನ ಮೇಲೆ ಮಾಯೆಯ ಪ್ರಭಾವ. ಈ ಮಾಯೆ ಎನ್ನುವ ವಸ್ತು ಇಲ್ಲದಿದ್ದಿದರೆ ಈ ಜಗತ್ತಿನ ರೂಪರೇಷೆಗಳೇ ಬೇರೆಯಾಗಿರುತ್ತಿತ್ತು, ಅಲ್ಲವೇ?

ಹಾಗಾಗಿ ಈ ಜಗದ್ವ್ಯಾಪಾರವನ್ನು ನಡೆಸಲಿಕ್ಕಾಗಿಯೇ ಆ ಪರಮಾತ್ಮ ಈ ಮಾಯೆಯನ್ನೂ ಸೃಷ್ಟಿಸಿ, ನಮ್ಮನ್ನೂ ಸೃಷ್ಟಿಸಿ, ನಮ್ಮಿಬ್ಬರ ನಡುವೆ ಒಂದು ಬಾಂಧವ್ಯವನ್ನು ಇಟ್ಟು, ನಾಟಕವಾಡಿಸುತ್ತಿದ್ದಾನೆ.

ವಾಚಕರೆ, ಆಸೆ ಬೇಕು, ಆದರೆ ದುಃಖವಿರಬಾರದೆಂದರೆ ಆಸೆಯ ಮಿತಿಯನ್ನು ನಾವು ಅರಿತಿರಬೇಕು. ಹಾಗಾದರೆ ನಮ್ಮ ಕಷ್ಟಗಳನ್ನು ದುಃಖವನ್ನು ಕಡಿಮೆ ಮಾಡಿಕೊಳ್ಳಬಹುದು ಮತ್ತು ಅವುಗಳನ್ನು ತಡೆದುಕೊಳ್ಳುವ ಶಕ್ತಿಯನ್ನು ಪಡೆದುಕೊಳ್ಳಬಹುದು. ಆಯ್ಕೆಯ ಅಧಿಕಾರವನ್ನು ಪರಮಾತ್ಮ ನಮಗೆ ಕೊಟ್ಟಿದ್ದಾನಲ್ಲವೇ?

# ಪ್ರಗತಿ ತತ್ವ 224-228

**ಮುಕ್ತಕ-224**

**ಅದು ಬೇಕು ಇದು ಬೇಕು ಮತ್ತೊಂದು ಬೇಕು |**
**ಬೆದಕುತಿರುವುದು ಲೋಕ ಸೊಗದಿರವನೆಳಸಿ ||**
**ಹೃದಯಗುಹೆಯಾ ಸುಖಧ್ಯಾನದೂಟೆಯೆ ಸಾಕ್ಷಿ |**
**ಮುದಗಳಮಿತದ ನಿಧಿಗೆ-ಮಂಕುತಿಮ್ಮ ||**

ಬೆದಕುತಿರುವುದು=ಬೆದಕುತ+ಇರುವುದು, ಸೊಗದಿರವನೆಳಸಿ=ಸೊಗದ+ಇರವನು+ಎಳಸಿ,
ಸುಖಧ್ಯಾನದೂಟೆಯೆ=ಸುಖ+ಧ್ಯಾನದ+ಊಟೆಯ, ಮುದಗಳಮಿತದ=ಮುದಗಳ+ಅಮಿತದ.
ಊಟೆಯ=ಒರತೆಯ, ಚಿಲುಮೆ, ಮುದಗಳ-ಸುಖಗಳ.

ಮನುಷ್ಯರ ಹೃದಯಗಳಲ್ಲಿ ಮಿತಿಯಿಲ್ಲದ ಸುಖಗಳ ಆಸೆಯ ಒರತೆ ಅಥವಾ ಊಟೆ ಬತ್ತುವುದೇ ಇಲ್ಲ. ಸದಾಕಾಲ ಮನಸ್ಸು "ಅದು ಬೇಕು ಇದು ಬೇಕು ಮತ್ತೊಂದು ಬೇಕು" ಎಂದು ಮತ್ತು ಅದು "ಎಲ್ಲಿ ಸಿಗುತ್ತದೆ' ಎಂದು ಹುಡುಕಾಡುತ್ತಲೇ ಇರುತ್ತದೆ ಎಂದು ಹೇಳುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಎಂದಿಗೂ, ಸದಾಕಾಲ ಆನಂದದಿಂದ ಇರಬೇಕೆನ್ನುವುದೇ ಮನುಷ್ಯನ ಆಸೆ. ಆದರೆ ಆನಂದವೆಂದರೇನು ಎನ್ನುವುದು ಯಾರಿಗೂ ಅರ್ಥವಾಗಿಲ್ಲ. ಯಾವುದರಿಂದ ತನಗೆ ಆನಂದ ಸಿಗುತ್ತದೆ ಎಂದೂ ಅರಿತಿಲ್ಲ. ಇದರೊಳಗೋ, ಅದರೊಳಗೋ, ಮತ್ಯಾವುದರೊಳಗೋ ಗೊತ್ತಿಲ್ಲ. ಹಾಗಾಗಿ, ಗುಂಡಪ್ಪನವರು ಹೇಳುವಂತೆ "ಬೆದಕುತಿರುವುದು ಲೋಕ ಸೊಗದಿರವನೆಳಸಿ". ಇಡೀ ಲೋಕದ ಜನ ಆ ಸೊಗಸು, ಆನಂದಕ್ಕೆ ಕಾರಣವಾದ ವಸ್ತು ಎಲ್ಲಿದೆ ಎಂದು ಹುಡುಕುತ್ತಲೇ ಇರುತ್ತಾರೆ.

ಒಂದು ವಸ್ತುವನ್ನೋ ವಿಷಯವನ್ನೋ ಅಥವಾ ವ್ಯಕ್ತಿಯನ್ನೋ ಕಂಡಾಗ, ಮೇಲ್ನೋಟಕ್ಕೆ ಪರಿಚಯವಾದಾಗ, ಅದರ ಸಂಗ ಮಾಡುವ ಬಯಕೆ ಉಂಟಾಗಬಹುದು. ಆ ಬಯಕೆ ಗುಂಡಪ್ಪನವರು ಹೇಳುವಂತೆ "ಹೃದಯಗುಹೆಯಾ ಸುಖಧ್ಯಾನದೂಟೆಯೆ ಸಾಕ್ಷಿ" ಹೃದಯಾಂತರಾಳದಲಿ ಒಸರುತ್ತದೆ. ಹಾಗೆ ಬಯಸಿದ್ದನ್ನು ಪಡೆಯಲು ಪ್ರಯತ್ನ ನಡೆಯುತ್ತದೆ. ಪ್ರಯತ್ನ ಫಲಕಾರಿಯಾದರೆ "ಹಾ ಇದರಿಂದ ನನಗೆ ಆನಂದ" ಎನ್ನುವ ಭಾವ ಮನದಲ್ಲಿ ಮೂಡುತ್ತದೆ. ಹಾಗೆ ಮೂಡಿದ ಭಾವ ಕ್ಷಣಕಾಲ ಇದ್ದು ಮಾಯವಾಗುತ್ತದೆ. ಮತ್ತೆ ಮತ್ತೊಂದು ಬಯಕೆ ಒಸರುತ್ತದೆ, ಮತ್ತದೇ ಪ್ರಯತ್ನ. ಇದನ್ನೇ ಮಾನ್ಯ ಗುಂಡಪ್ಪನವರು "ಮುದಗಳಮಿತದ ನಿಧಿ" ಎನ್ನುತ್ತಾರೆ. ಮಿತಿಯೇ ಇಲ್ಲದ ಬಯಕೆಗಳ ಸರಮಾಲೆಯನ್ನು ಹೊತ್ತು ಜೀವನ ಸಾಗಿಸುವ ಈ ನರಪ್ರಾಣಿಯ ಬಯಕೆಗಳು ತೀರುವುದೆಂತು?

ಈ ಬಯಕೆಗಳಿಂದ ವಾಂಛೇ ತೀರಬಹುದು, ಆದರೆ ಸತ್ಯವಾದ ಆನಂದ ಎಂದಿಗೂ ಸಿಗುವುದಿಲ್ಲ ಎಂದು ಮನುಷ್ಯನಿಗೆ ಎಂದು ಸತ್ಯವಾಗಿ ಅರ್ಥವಾಗುತ್ತದೆಯೋ, ಹಾಗೆ ಅರ್ಥವಾದ ವಿಷಯ ಯಾವತ್ತು ದೃಢವಾಗಿ ಮನದಲ್ಲಿ ಬೇರೂರುತ್ತದೆಯೋ, ಹಾಗೆ ಬೇರೂರಿದ ವಿಷಯವನ್ನು ಮನುಷ್ಯ ಎಂದು ತನ್ನ ಸ್ವಾಭಾವವಾಗಿಸಿಕೊಳ್ಳುತ್ತಾನೋ, ಅಂದು ಅವನು ಈ ಬಯಕೆಗಳ ಜಪಮಣಿಮಾಲೆಯನ್ನು ಕಿತ್ತೊಗೆದು, ಸತ್ಯವಾದ, ನಿಜವಾದ ಮತ್ತು ಶಾಶ್ವತವಾದ ಆನಂದವನ್ನು ಪಡೆಯುತ್ತಾನೆ. ಅಂತಹ ಪ್ರಯತ್ನವನ್ನು ನಾವೂ ಮಾಡೋಣವೆ?

**ಮುಕ್ತಕ-225**

**ಶರಧಿಯೊಳಗಣ ವಸ್ತುಗಳನಳಚಿ ಜಾಲಿಸುವ |**
**ತೆರೆಯಂತೆ ವಿಶ್ವಸತ್ವದ ಲಹರಿ ನಮ್ಮ ||**
**ಹೊರಗೊಳಗುಗಳಲಿ ಸಂತತ ನೆರೆದು ಹರಿಯುತ್ತ |**
**ಭರಿಸುತಿರುವುದು ಬಾಳ - ಮಂಕುತಿಮ್ಮ ||**

ಶರಧಿಯೊಳಗಣ=ಶರಧಿ+ಒಳಗಣ, ವಸ್ತುಗಳನಳಚಿ=ವಸ್ತುಗಳನು+ಅಳಚಿ,

ಹೊರಗೊಳಗುಗಳಲಿ=ಹೊರಗೆ+ಒಳಗುಗಳಲಿ,

ಶರಧಿ=ಸಾಗರ, ಅಳಚಿ=ಕೇರಿ (ಮೊರದಲ್ಲಿ ಧಾನ್ಯವನ್ನು ಕೇರುವುದು ಅಥವಾ ವಿಂಗಡಿಸುವುದು).

ಸಮುದ್ರದೊಳಗಿರುವ ವಸ್ತುಗಳನ್ನು ಕೇರಿ ಜಾಲಿಸುವ ಸಾಗರದ ತೆರೆಗಳಂತೆ, ಈ ಜಗತ್ತಿನ ಸೃಷ್ಟಿಯ ತತ್ವಗಳು ನಮ್ಮ ಒಳಗು ಹೊರಗುಗಳಲ್ಲಿ ತುಂಬಿ ಹರಿಯುತ್ತಾ ನಮ್ಮ ಜೀವನವನ್ನು ಭರಿಸುತ್ತಿದೆ ಎಂದು ಪ್ರಸ್ತಾಪಮಾಡುತ್ತಾರೆ, ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.





ನಮ್ಮ ಭಾವನೆಗಳೂ ಸಹ ಈ ಸಮುದ್ರದ ಅಲೆಗಳಿಗಿಂತ ಯಾವ ರೀತಿಯಲ್ಲೂ ಭಿನ್ನವಲ್ಲ. ಪ್ರತೀ ಪ್ರಾಣಿಯ ಮನದಲ್ಲೂ ಭಾವನೆಯ ಅಲೆಗಳು ಏಳುತ್ತಲೇ ಇರುತ್ತವೆ. ಈ ಎಲ್ಲ ಭಾವನೆಗಳಿಗೆ ಹಲವಾರು ಕಾರಣಗಳಿರುತ್ತವೆ. ಅನುವಂಶಿಕ ಗುಣಗಳು, ನಮ್ಮ ಪರಿಸರ, ನಾವಿರುವ ಸಮಾಜ, ನಾವು ಕಲಿತ ವಿದ್ಯೆ, ನಮ್ಮ ಸ್ನೇಹಿತರ ವೃತ್ತ, ನಮ್ಮ ಬಂಧು ಬಳಗ, ಹೀಗೆ ನಮ್ಮ ಸುತ್ತಲಿರುವ ಎಲ್ಲವೂ ನಮ್ಮ ಮೇಲೆ ಪ್ರಭಾವ ಬೀರಿ ಮಾನ್ಯ ಗುಂಡಪ್ಪನವರು ಹೇಳುವಂತೆ "ಹೊರಗೊಳಗುಗಳಲಿ ಸಂತತ ನೆರೆದು ಹರಿಯುತ್ತ", ನಮ್ಮ ಹೊರ ನಡತೆ ಮತ್ತು ನಮ್ಮ ಆಂತರ್ಯದಲ್ಲಿ ನಡೆಯುವ ಭಾವ ಮಂಥನಕ್ಕೂ ಕಾರಣವಾಗುತ್ತದೆ. ಈ ಎಲ್ಲ ಭಾವಗಳನ್ನೂ ಧರಿಸಿ ನಾವು, ಸಮಯಕ್ಕೆ ಸರಿಯಾಗಿ ಅವುಗಳನ್ನು ಸಮುದ್ರದ ತೆರೆಗಳಂತೆ ಪ್ರಕಟಿಸುತ್ತಿರುತ್ತೇವೆ.

ಇವೆಲ್ಲವೂ ನಮಗೆ ಪರತತ್ವದಿಂದ ನಿರ್ಮಿತವಾದ ಈ ವಿಶ್ವತತ್ವದಿಂದಲೇ ಸಿಗುತ್ತದೆಯಾದ್ದರಿಂದ, ಆ ಪರತತ್ವಕ್ಕೂ ನಮ್ಮ ಈ ವಿಶ್ವತತ್ವಕ್ಕೂ ನಿಕಟ ಸಂಬಂಧವಿರುತ್ತದೆ. ಈ ಜಗತ್ತಿನ ಎಲ್ಲವೂ ಒಂದಕ್ಕೊಂದು ಹೆಣೆದುಕೊಂಡು ಪ್ರಭಾವಿತವಾಗಿರುತ್ತದೆ. ಆದರೆ ನಮ್ಮ ಅರಿವಿಗೆ ಅದು ಬರುವುದೇ ಇಲ್ಲ. ಸದಾಕಾಲ ನಾವು ನಮ್ಮದೇ

ಬಲದಿಂದ 'ನಾವಾಗಿದ್ದೇವೆ' ಎಂದುಕೊಳ್ಳುತ್ತಿರುತ್ತೇವೆ. ನಮ್ಮ ಅಹಂಕಾರವು, ಈ ಪರತತ್ವ ಮತ್ತು ವಿಶ್ವತತ್ವಗಳು ನಮ್ಮ ಮೇಲೆ ಪ್ರತಿಫಳಿಗೆಯೂ ಬೀರುವ ಪ್ರಭಾವವನ್ನು ಅರಿತುಕೊಳ್ಳಲು ಬಿಡುವುದಿಲ್ಲ. ಅರಿವಿಗೆ ಬಂದರೂ ಒಪ್ಪಿಕೊಳ್ಳುವುದಿಲ್ಲ ಮತ್ತು ಒಪ್ಪಿಕೊಂಡರೂ ಅಳವಡಿಸಿಕೊಳ್ಳುವುದಿಲ್ಲ. 'ಭರಿಸುತಿರುವುದು ಬಾಳ' ಎಂಬ ಈ ಮುಕ್ತಕದ ಉಕ್ತಿಯಂತೆ ಈ ಭಾವಗಳು ನಮ್ಮ ಬಾಳನ್ನು ಭರಿಸುತ್ತಿದ್ದರೂ ನಾವು ಅಜ್ಞಾನದಿಂದ ಎಲ್ಲವನ್ನೂ ನಾವೇ ಮಾಡುತ್ತಿದ್ದೇವೆ ಎಂದು ಕೊಳ್ಳುತ್ತೇವೆ. ಬಹುಶಃ ನಾವು ಈ ಪರತತ್ವದ ಮತ್ತು ವಿಶ್ವತತ್ವದ ಪ್ರಭಾವವನ್ನು ಒಪ್ಪಿಕೊಂಡರೆ ನಮ್ಮ ಭಾವಗಳು ತೆರೆಗಳಿಲ್ಲದ ಸಾಗರದಂತೆ ಶಾಂತವಾಗಿ ಆನಂದದ ಅನುಭವವಾಗಬಹುದು.

**ಮುಕ್ತಕ-226**

**ಉಸಿರವೊಲನುಕ್ಷಣಂ ಪುರುಷನೊಳವೊಗುತವನ |**
**ಹೊಸಬನಂಗೆಯ್ದು ದೈವಿಕಸತ್ವಮವನುಂ ||**
**ಪೊಸತನವನ್ ಉಳಿದ ಲೋಕಕೆ ನೀಡೆ ದುಡಿವಂತೆ |**
**ಬೆಸಸುತಿಹುದೇಗಳುಂ – ಮಂಕುತಿಮ್ಮ ||**

ಉಸಿರವೊಲನುಕ್ಷಣಂ=ಉಸಿರ+ಒಲು+ಅನುಕ್ಷಣಂ,
ಪುರುಷನೊಳವೊಗುತವನ=ಪುರುಷನ+ಒಳ+ಒಗುತ+ಅವನ,
ದೈವಿಕಸತ್ವಮವನುಂ=ದೈವಿಕಸತ್ವವಂ+ಅವನುಂ, ಬೆಸಸುತಿಹುದೇಗಳು=ಬೆಸಸುತಿಹುದು+ಏಗಳುಂ.
ಬೆಸಸುತಿಹುದು=ಬೆಸೆಯುತಿಹುದು, ಏಗಳುಂ=ಯಾವಾಗಲೂ.

ಉಸಿರು ನಮ್ಮ ದೇಹದೊಳಕ್ಕೆ ಹೊಕ್ಕು, ಪ್ರತಿ ಉಸಿರಾಟದಲ್ಲೂ ಒಂದು ಹೊಸತನವನ್ನು ನೀಡುವಂತೆ ಆ ಪರಮಾತ್ಮ ತತ್ವವು ಮನುಷ್ಯನ ಒಳಹೊಕ್ಕು ಅವನಿಗೆ ಹೊಸತನವನ್ನು ನೀಡಿ ಲೋಕಕ್ಕೆ ಹೊಸತನವನ್ನು ನೀಡಲು ದುಡಿಯುವಂತೆ ಪ್ರೇರೇಪಿಸುತ್ತದೆ. ಈ ರೀತಿಯ ಪರಸ್ಪರ ಬೆಸುಗೆ ಪರಮಾತ್ಮ ತತ್ವಕ್ಕೂ ಮನುಷ್ಯನಿಗೂ ಸದಾಕಾಲ ಇರುತ್ತದೆ ಎಂದು ಪ್ರತಿಪಾದಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಒಂದು ಉಸಿರು ನಮ್ಮೊಳಗೆ ಹೋಗಿ ಹೊರ ಬಂದರೆ ಮತ್ತೊಂದು ಹೊಸತನ. ಒಳಗೆ ಹೋದ ಉಸಿರು ಹೊರಬರದೆ ಇದ್ದರೆ ಅಥವಾ ಹೊರಗೆ ಬಂದ ಉಸಿರು ಮತ್ತೆ ಒಳಗೆ ಹೋಗದಿದ್ದರೆ ನಮ್ಮ ಅಸ್ತಿತ್ವವೇ ಕೊನೆಯಾಗುತ್ತದೆ, ಅಲ್ಲವೇ? ಹಾಗಾಗಿ ನಮ್ಮ ಪ್ರತಿಕ್ಷಣದ ಬದುಕು ಈ ಉಸಿರಿನ ಮೇಲೆಯೇ ನಿಂತಿದೆ. ಆದರೆ ಆ ಉಸಿರನ್ನು ಎಳೆದುಕೊಳ್ಳುವ ಅಥವಾ ಹೊರಹಾಕುವ ಉಚ್ಛಾಸ-ನಿಶ್ವಾಸ' ಗಳಿಗೆ ಕಾರಣವಾದ ದೈವೀ ಶಕ್ತಿಯೇ ನಮ್ಮೊಳಗೆ ಪ್ರತಿಕ್ಷಣವೂ ಹೊಸತನವನ್ನು ತುಂಬಿ ನಮ್ಮನ್ನು ಕಾರ್ಯೋನ್ಮುಖರನ್ನಾಗಿಸಿ, ಕ್ರಿಯಾಶೀಲರನ್ನಾಗಿಸಿ ಈ ಜಗತ್ತಿಗೆ ಹೊಸತಾಗಿ ಏನಾದರೂ ನೀಡುವ ಶಕ್ತಿಯನ್ನೂ ಸಹ ನೀಡಿದೆ ಅಲ್ಲವೇ?

"ಪುರುಷ" ಎಂದರೆ "ಪುರೇ ಷೇತಿ ಇತಿ ಪುರುಷಃ" ಎಂದು ಅರ್ಥ. ಅಂದರೆ ನವರಂಧ್ರಗಳಿಂದಾದ ಶರೀರವನ್ನು (ಪುರವನ್ನು) ಧಾರಣೆಮಾಡುವುದು ಎಂದು ಅರ್ಥ. ಇದೇ ಅರ್ಥದಲ್ಲಿ "ಪುರಂದರ" ಎನ್ನುವ ಪದವೂ ಸಹ ಪ್ರಯೋಗದಲ್ಲುಂಟು. ಎಂದರೆ ಈ ದೇಹವನ್ನು ಧರಿಸಿರುವುದು ಎಂದು ಅರ್ಥ. ಈ ದೇಹವನ್ನು ಧರಿಸಿರುವುದು ಪರಮಾತ್ಮ ಸ್ವರೂಪವಾದ ಆತ್ಮ. ಹಾಗಾಗಿ ದೇವರ ಹಲವಾರು ಹೆಸರುಗಳಲ್ಲಿ "ಪುರಂದರ" ಎನ್ನುವುದೂ ಒಂದು.

ಪ್ರತೀ ಪ್ರಾಣಿಯನ್ನೂ ಈ ಜಗತ್ತಿನಲ್ಲಿ ಕ್ರಿಯಾಶೀಲತೆಯಿಂದ ಸಕ್ರಿಯವಾಗಿ ಈ ಜಗತ್ತಿಗೆ ಏನಾದರೂ ಕೊಡುವಂತೆ ಮಾಡುವುದು ಕೇವಲ, ಗುಂಡಪ್ಪನವರು ಹೇಳಿದಂತೆ "ದೈವಿಕಸತ್ವಮವನುಂ ಪೊಸತನವನ್ ಉಳಿದ ಲೋಕಕೆ ನೀಡೆ ದುಡಿವಂತೆ" ಈ ಆತ್ಮ ಶಕ್ತಿಯೇ, ನಮ್ಮ ಆತ್ಮ ಶಕ್ತಿಯನ್ನು ಸ್ವಪ್ರಯತ್ನದಿಂದ ಎಷ್ಟೆಷ್ಟು ಹೆಚ್ಚಿಸಿಕೊಂಡರೆ ಅಷ್ಟಷ್ಟು, ಹೆಚ್ಚೆಚ್ಚು ಈ ಜಗತ್ತಿಗೆ ನೀಡಬಹುದು ಮತ್ತು ಹೊಸತನವನ್ನು ಬೆಳೆಸಿಕೊಳ್ಳುತ್ತಾ ಉಳಿಸಿಕೊಳ್ಳಬಹುದು. ನಮ್ಮ ಪ್ರಯತ್ನ ಅನುದಿನವೂ ಈ ನಿಟ್ಟಿನಲ್ಲಿ ಇದ್ದರೆ, ಈ ಜಗತ್ತಿಗೆ ಹೆಚ್ಚು ಪ್ರಸ್ತುತರಾಗುತ್ತೇವೆ.

**ಮುಕ್ತಕ-227**

**ನೂತ್ನತೆಯ ಪೂರ್ಣತೆಯವನ್ಯೂನತೆಯ ಗಳಿಪ ।**
**ಯತ್ನಮೇ ಪೌರುಷಪ್ರಗತಿ; ಅದೆ ಪ್ರಕೃತಿ ॥**
**ವಿಜ್ಞಾನ ಶಾಸ್ತ್ರ ಕಲೆ ಕಾವ್ಯ ವಿದ್ಯೆಗಳೆಲ್ಲ ।**
**ಧನ್ಯತೆಯ ಬೆದಕಾಟ-ಮಂಕುತಿಮ್ಮ ॥**

ಪೂರ್ಣತೆಯನನ್ಯೂನತೆಯ=ಪೂರ್ಣತೆಯನು+ಅನೂನ್ಯತೆಯ.

ನೂತ್ನತೆ=ಹೊಸತನ, ಅನೂನ್ಯತೆ=ಕುಂದಿಲ್ಲದ್ದು, ಬೆದಕಾಟ=ಹುಡುಕಾಟ.

ಹೊಸತನವನ್ನು ಪೂರ್ಣತೆಯನ್ನು ಕುಂದಿಲ್ಲದ್ದನ್ನು ಗಳಿಸುವ ಪ್ರಯತ್ನವೇ ಪುರುಷನ ಪ್ರಗತಿಯ ಪ್ರತೀಕ. ಪ್ರಕೃತಿಯನ್ನು ಆರಾಧಿಸುವುದು, ವಿಜ್ಞಾನ, ಕಲೆ, ಕಾವ್ಯ, ಸಾಹಿತ್ಯ, ಸಂಗೀತ ಮುಂತಾದ ವಿದ್ಯೆಗಳೆಲ್ಲವೂ ಮನುಷ್ಯ ಪರಿಪೂರ್ಣತೆಯಡೆಗೆ ನಡೆಯಲು ಬೇಕಾದ ಸಾಧನಗಳು ಮತ್ತು ಅವುಗಳ ಮೂಲಕವೇ ಪರಿಪೂರ್ಣತೆಯ ಸಾಧನೆ ಸಾಧ್ಯವೆಂದು ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ ಉಲ್ಲೇಖಮಾಡಿದ್ದಾರೆ.





ಪೂರ್ಣತೆಯೆಂದರೆ, ಸಂಪೂರ್ಣ ಮತ್ತು ಅಂತಿಮ ಸತ್ಯವನ್ನು ಅರಿಯುವುದು. ಪರತತ್ವವನ್ನು ಅರಿಯುವುದು. ಅದನ್ನು ಅರಿಯಲು ಈ ವಿಶ್ವತತ್ವದ ಮೂಲಕವೇ ಕಲಿಯಬೇಕು. ತೈತ್ತರೀಯ ಉಪನಿಷತ್ತಿನಲ್ಲಿ ತಪಸಾ ಬ್ರಹ್ಮ ವಿಜಿಜ್ಞಾಸಸ್ವ' ಎಂದು ಹೇಳಲ್ಪಟ್ಟಿದೆ. 'ತಪಸ್ಸಿನಿಂದಲೇ ಬ್ರಹ್ಮನನ್ನು ಅರಿತುಕೊಳ್ಳಬೇಕು' ಎಂದು. ವಾಚಕರೆ, ತಪಸ್ಸೆಂದರೆ ಕೇವಲ ಕಾಡಿನಲ್ಲಿ ಕುಳಿತು ಕಣ್ಣು ಮುಚ್ಚಿ ಆಂತರ್ಯದಲ್ಲಿ ಪರಬ್ರಹ್ಮನನ್ನು ಧ್ಯಾನ ಮಾಡುವುದಷ್ಟೇ ಅಲ್ಲ. ಈ ಜಗತ್ತಿನಲ್ಲಿರುವ ಯಾವುದೇ ವಿದ್ಯೆಯನ್ನು ಪೂರ್ಣತಃ ಕಲಿಯಬೇಕೆಂದರೆ ತಪಸ್ಸನ್ನು ಮಾಡಬೇಕು. ತಪ ಎಂದರೆ ಅಜ್ಞಾನವನ್ನು ಹೋಗಲಾಡಿಸಿಕೊಂಡು ಜ್ಞಾನವನ್ನು ಉದ್ದೀಪನಗೊಳಿಸುವುದು. ತಪನ ಎಂದರೆ ದಾಹ ಎಂದರ್ಥ. ಜ್ಞಾನ ದಾಹದಿಂದ ಅರಿಯುವ ತೀವ್ರವಾದ ಆಸ್ಥೆಗೂ ತಪಸ್ಸೆಂದೇ ಹೇಳಬಹುದು. ಬೇರೆ ಬೇರೆ ವಿದ್ಯೆಗಳ ಸಾಧಕರೆಲ್ಲರೂ ಅವರವರ ಕ್ಷೇತ್ರದಲ್ಲಿಯೇ ಮಾಡುವ ಸಾಧನೆಯಲ್ಲಿ ಪರಿಪೂರ್ಣತೆಯನ್ನು, ಪರತತ್ವವನ್ನು, ಪರಮಾತ್ಮನನ್ನು ಕಂಡುಕೊಂಡಿದ್ದಾರೆ.

ಕಲಾವಿದ, ವಿಜ್ಞಾನಿ, ಕವಿ, ವೈದ್ಯ, ಉಪಾಧ್ಯಾಯ.... ಹೀಗೆ ಎಲ್ಲರೂ ತಮ್ಮ ತಮ್ಮ ಕಾರ್ಯಕ್ಷೇತ್ರಗಳಲ್ಲಿ ತೀವ್ರವಾಗಿ ತೊಡಗಿಸಿಕೊಂಡಾಗ ಮತ್ತು ಕೆಲಸದಲ್ಲಿ ಪರಿಪೂರ್ಣ ಫಲಿತಾಂಶವನ್ನು ಪಡೆಯಲು ಅವಿರತ

ಪ್ರಯತ್ನಟ್ಟಾಗ, ತಪಸ್ಸಿನಂತಹ ಅನುಭವವನ್ನೇ ಪಡೆಯುತ್ತಾರೆ. ಉದಾಹರಣೆಗೆ ಒಬ್ಬ ಸಂಗೀತಗಾರ ಒಂದು ರಾಗವನ್ನು ಪರಿಪೂರ್ಣವಾಗಿ ಸಿದ್ಧಿಸಿಕೊಳ್ಳಬೇಕಾದರೆ ತಪಸ್ಸಿನಂಥ ಅಭ್ಯಾಸ ಮಾಡಬೇಕು.

ಒಬ್ಬ ಗೃಹಿಣಿ ತಾನು ಹುಟ್ಟಿದ ಮನೆಯಿಂದ ಹೊರಬಂದು ಮತ್ತೊಂದು ಮನೆಯನ್ನು ತನ್ನದಾಗಿಸಿಕೊಂಡು ಅಲ್ಲಿರುವವರನ್ನೆಲ್ಲ ತನ್ನವರರನ್ನಾಗಿಸಿಕೊಂಡು ಮನೆಯ ಎಲ್ಲರ ಅಭ್ಯುದಯಕ್ಕೆ ಹೋರಾಡುವುದು ಮತ್ತು ಆ ಹೋರಾಟದಲ್ಲಿ ಯಶಸ್ಸನ್ನು ಪಡೆಯುವುದೂ ಸಹ ಒಂದು ತಪಸ್ಸಲ್ಲವೇ? ಇದನ್ನೇ ಮಾನ್ಯ ಗುಂಡಪ್ಪನವರು 'ಪೂರ್ಣತೆಯವನ್ಯೂನತೆಯ ಗಳಿಪ ಯತ್ನವೇ ಪೌರುಷ ಪ್ರಗತಿ' ಎಂದಿದ್ದಾರೆ.

ಯಾವ ಕುಂದು-ಕೊರತೆಯೂ ಇಲ್ಲದೆ, ಯಾವುದೇ ಕ್ಷೇತ್ರದಲ್ಲಿ ಪರಿಪೂರ್ಣತೆಯನ್ನು ಪಡೆಯುವುದೆಂದರೆ ಪರಬ್ರಹ್ಮನನ್ನೇ ಅನುಭವಕ್ಕೆ ತಂದುಕೊಂಡಂತೆ ಆಗುತ್ತದೆ. ವಾಚಕರೆ ನಾವೂ ಸಹ ನಮ್ಮ ನಮ್ಮ ಕ್ಷೇತ್ರದಲ್ಲಿ ತಪಸ್ಸಿನಂತಹ ತೀವ್ರ ಸಾಧನೆಯನ್ನು ಮಾಡಿದರೆ, ಪೂರ್ಣತ್ವವನ್ನು ಪಡೆದು, ಬ್ರಹ್ಮಾನಂದವನ್ನು ಪಡೆಯಬಹುದು.

ಮುಕ್ತಕ-228

ಮತಿಯು ತಾಂ ಸತ್ಯಶುಭಗಳ ನವನವಾಂಶಗಳ ।
ಗತಿಯನರಸುತ ನಡೆಯೆ ಪೌರುಷಪ್ರಗತಿ ॥
ಮತಿ ನೀತಿ ಶಾಸ್ತ್ರಗಳು ರಾಜ್ಯಸಂಧಾನಗಳು ।
ಮತಿಯ ಕಿಂಚಿದ್ವಿಜಯ - ಮಂಕುತಿಮ್ಮ ॥

ಗತಿಯನರಸುತ=ಚಲನೆಯನು+ಅರಸುತ, ಕಿಂಚಿದ್ವಿಜಯ=ಕಿಂಚಿತ್ತು+ವಿಜಯ್. ಮತಿಯು=ಬುದ್ಧಿಯು, ನವನವಾಂಶಗಳ=ಹೊಸಹೊಸ ಅಂಶಗಳ, ಗತಿಯನರಸುತ=ಚಲನೆಯನ್ನು (ಜಾಡನ್ನು) ಹುಡುಕುತ್ತಾ, ಕಿಂಚಿತ್ತು=ಸ್ವಲ್ಪಮಾತ್ರ

ಮನುಷ್ಯ ತನ್ನ ಬುದ್ಧಿಶಕ್ತಿಯನ್ನು ಹೊಸ ಹೊಸ ವಿಚಾರಗಳನ್ನು ಹೊಸಹೊಸ ವಿಷಯ ವಸ್ತುಗಳನ್ನು ಹುಡುಕಲು ಉಪಯೋಗಿಸಿ ನಡೆದರೆ ಪುರುಷ ಪ್ರಗತಿ. ಆ ರೀತಿಯ ಪ್ರಯತ್ನದಲ್ಲಿ ಲಭಿಸಿದ ಅಲ್ಪಮಾತ್ರ ವಿಜಯವೇ ವಿಜ್ಞಾನ, ನೀತಿ ಶಾಸ್ತ್ರಗಳು, ಅವನು ಕಟ್ಟಿದ ರಾಜ್ಯಗಳು ಮುಂತಾದವುಗಳು ಎಂದು ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ ಹೇಳುತ್ತಾರೆ.

ಪ್ರತಿದಿನವೂ ಏನಾದರೂ ಹೊಸದನ್ನು ಹುಡುಕುವ ಅಥವಾ ಮಾಡುವ ಬೆದಕಾಟದ ಪ್ರಾಣಿ ನಮ್ಮ ಮನುಷ್ಯ. ಜಗತ್ತಿನ ಸೃಷ್ಟಿಯಲ್ಲಿರುವ ಸಕಲ ಪ್ರಾಣಿಗಳಲ್ಲಿ ಮನುಷ್ಯನೊಬ್ಬನೇ ಅಲ್ಲವೇ ಅತ್ಯಧಿಕ ಬುದ್ಧಿಶಕ್ತಿಯ ಪ್ರಾಣಿ. ತಾನು ಕಾಣುವ ಪ್ರತಿಯೊಂದರಲ್ಲೂ ಏನಾದರೊಂದು ಹೊಸತನ್ನು ಹುಡುಕುವ ಇವನ ಪ್ರಯತ್ನ ಅನಾದಿ ಕಾಲದಿಂದಲೂ ನಡೆಯುತ್ತಲೇ ಇದೆ. ಸುತ್ತು ಪರಿಸರದಲ್ಲಿ ಇರುವ ಎಲ್ಲವನ್ನೂ ಕೆದಕಿ 'ಹೊಸತೇನಾದರೂ ಸಿಗುವುದೋ ಅಥವಾ ಸಿಕ್ಕಿದ್ದರಲ್ಲಿ ಹೊಸತೇನಾದರೂ ಮಾಡಬಹುದೇ' ಎಂದು ಪರೀಕ್ಷಿಸುತ್ತಲೇ ಇರುತ್ತಾನೆ.

ಇಂತಹ ಹುಡುಕಾಟಗಳಲ್ಲೇ ಮನುಷ್ಯ ಕಂಡುಕೊಂಡದ್ದು ಈಗಿರುವ ಅಪರಿಮಿತವಾದ ಲೋಕಜ್ಞಾನ. ಈ ಸೃಷ್ಟಿಯಲ್ಲಿ ಎಷ್ಟು ವಿಷಯಗಳಿವೆಯೋ, ಎಲ್ಲದರಲ್ಲೂ ಇವನ ಹುಡುಕಾಟ, ಹೊಸತನದ ಅವಿಷ್ಕಾರದ ದಾಹ ನಿರಂತರ. ಇವನ ಅಸ್ತಿತ್ವದಷ್ಟೇ ಹಳೆಯದು, ಇವನ ಬೆದಕಾಟದ ಚರಿತ್ರೆ ಇದರ ಫಲವಾಗಿಯೇ ವೇದಗಳು, ಉಪನಿಷತ್ತುಗಳು, ಪುರಾಣಗಳು, ವೈದ್ಯ ಶಾಸ್ತ್ರ, ಜ್ಯೋತಿಷ್ಯ, ಜ್ಯೋತಿರ್ಶಾಸ್ತ್ರ, ಅರ್ಥಶಾಸ್ತ್ರ, ನೀತಿ ಸಂಹಿತೆಗಳು, ರಾಜಕೀಯ ಶಾಸ್ತ್ರದಂತಹ ಅಪರಿಮಿತ ಜ್ಞಾನ ಭಂಡಾರ ಲಭ್ಯವಿದೆ. ಇಂತಹ ಪ್ರಯತ್ನ ಮನುಷ್ಯನಿಂದ ಜಗತ್ತಿನಾದ್ಯಂತ ನಡೆದಿದೆ ಇವುಗಳ ಬಲದ ಮೇಲೆ ದೇಶಗಳನ್ನು, ರಾಜ್ಯಗಳನ್ನು ಕಟ್ಟಿಕೊಂಡ. ಇವೆಲ್ಲ ಇವನ ಪ್ರಗತಿಯ ಪ್ರತೀಕ. ಅದರೂ ಗುಂಡಪ್ಪನವರು 'ಮತಿಯ ಕಿಂಚಿದ್ವಿಜಯ' ಎಂದು ಈ ಮುಕ್ತಕದಲ್ಲಿ ಹೇಳಿದ್ದಾರೆ.

ಹೌದು ವಾಚಕರೆ, ಇಂದ್ರಿಯ ಸಂಬಂಧವಾದ ವಸ್ತುಗಳನ್ನು ನೋಡಿ ಬೆದಕಾಟದಿಂದ ಕೆದಕಿ ಅರ್ಥೈಸಿಕೊಂಡು ಹೊಸ ಹೊಸ ವಿಷಯಗಳನ್ನು ಇವನು ಕಂಡು ಹಿಡಿದಿರಬಹುದು. ಆದರೆ ಇವನ್ನೆಲ್ಲ ಮಾಡಲು ಒಂದು ಶಕ್ತಿಯನ್ನು, ಚೈತನ್ಯವನ್ನು ಕೊಟ್ಟ ಆ ಪರಮ ಚೈತನ್ಯವನ್ನು ಇವನಿಗೆ ಅರಿತುಕೊಳ್ಳಲು ಆಗಲೇ ಇಲ್ಲ. ಹಾಗೆ ಆಗಿದ್ದಿದ್ದರೆ, ಆ ಪರಮಾತ್ಮನ ಬಗ್ಗೆ (ನಾಲ್ಕಕ್ಕೆ ನಾಲ್ಕನ್ನು ಸೇರಿಸಿದರೆ ಎಂಟಾಗುತ್ತದೆ ಎನ್ನುವಂತೆ) ಒಂದು ನಿಖರವಾದ ಉತ್ತರವಿದ್ದಿರುತ್ತಿತ್ತು.

ಜರ್ಮನ್ ದೇಶದ ಬರ್ಲಿನ್ ನಗರದಲ್ಲಿ ಒಂದು ಸಂಗೀತ ಕಾರ್ಯಕ್ರಮ. ಬಹಳ ಕಟ್ಟುನಿಟ್ಟಾದ ವಿಧಿಗಳು, ಇಂತಹುದೇ ದಿರಿಸು, ಇಷ್ಟು ಗಂಟೆಗೆ ಪ್ರಾರಂಭ, ಆ ಸಮಯ ಮೀರಿದರೆ ಪ್ರವೇಶವಿಲ್ಲ, ನಿಶ್ಯಬ್ದ ವಾತಾವರಣ. ವಯೊಲಿನ್ ನುಡಿಸುವುದಕ್ಕೆ ಬಂದದ್ದು 13 ವರ್ಷದ ಬಾಲಕ 'ಯಹೂದಿ ಮೆನುಹಿನ್', ಕಾರ್ಯಕ್ರಮದಲ್ಲಿ ಪ್ರಖ್ಯಾತ ವಿಜ್ಞಾನಿ, ನೋಬಲ್ ವಿಜೇತ ಅಲ್ಬರ್ಟ್ ಅಯ್ನೆನ್‌ಸ್ಟೀನ್ ಕುಳಿತಿದ್ದ. ಒಂದೂವರೆಗಂಟೆಗಳ ಕಾಲ ಅದ್ಭುತ ಕಾರ್ಯಕ್ರಮ ನಡೆದ ಮೇಲೆ ಎಲ್ಲ ನಿರ್ಬಂಧಗಳನ್ನೂ ನಿರ್ಲಕ್ಷಿಸಿ ಅಯ್ನೆನ್‌ಸ್ಟೀನ್ ವೇದಿಕೆಯಮೇಲೆ ಹೋಗಿ ಆ ಬಾಲಕನನ್ನು ತಬ್ಬಿ ಹಿಡಿದು 'ನಾನು ಇಂದು ದೇವರಿದ್ದಾನೆಂದು ನಂಬುತ್ತೇನೆ' ಎಂದನಂತೆ. ಅಲ್ಲಿ





ಅವನಿಗೆ ಪರತತ್ವದ ಅನುಭವ ಆಗಿರಬೇಕು, ಅದು ಅವನ ಅನುಭವಕ್ಕೆ ಬಂದ ವಿಷಯ. ಎಲ್ಲರಿಗೂ ಅದನ್ನು ಅರಿಯುವುದು ಅಷ್ಟು ಸುಲಭವಲ್ಲ. ಏಕೆಂದರೆ ಅದು ಕೇವಲ ಅನುಭವ ವೇದ್ಯ, ಪ್ರತಿಯೊಬ್ಬರೂ ಅದನ್ನು ಅನುಭವಿಸಬೇಕು. ಆಂತರ್ಯದಲ್ಲಿ ಕಂಡುಕೊಳ್ಳಬೇಕು. ಹಾಗಾದಲ್ಲಿ ಗುಂಡಪ್ಪನವರು ಹೇಳಿದ ಕಿಂಚಿತ್ತು ಜ್ಞಾನ ಬೃಹತ್ತಾಗುತ್ತದೆ, ಸರ್ವವ್ಯಾಪಿಯಾಗುತ್ತದೆ. ಅಂತಹ ಪ್ರಯತ್ನವನ್ನು ನಾವೂ ಸಹ ಮಾಡೋಣವೆ?

# ಜೀವನದ ಧರ್ಮ 229-233

**ಮುಕ್ತಕ-229**

**ತೊರೆಯ ತೆರೆಯಸಾಲ್ಗಳೇಳುತ ಬೀಳುತಿರುವಂತೆ |**
**ಪರಿಯುತಿರ್ಪುದು ಪುರುಷಚೈತನ್ಯಲಹರಿ ||**
**ಅರಿಯದದು ನಿಲುಗಡೆಯ ತೊರೆಯದದು ಚಲಗತಿಯ |**
**ಪರಬೊಮ್ಮನುಯ್ಯಲದು ಮಂಕುತಿಮ್ಮ ||**

ತೆರೆಯಸಾಲ್ಗಳೇಳುತ=ತೆರೆಯ+ಸಾಲುಗಳು+ಏಳುತ,  ಪರಿಯುತಿರ್ಪುದು=ಪರಿಯುತ+ಇರ್ಪುದು,

ಅರಿಯದದು=ಅರಿಯದು+ಅದು, ತೊರೆಯದದು=ತೊರೆಯದು+ಅದು,

ಪರಬೊಮ್ಮನುಯ್ಯಲದು=ಪರಬೊಮ್ಮನ+ಉಯ್ಯಲ+ಅದು

ಪರಿಯುತ=ಹರಿಯುತ, ಪರಬೊಮ್ಮನ=ಪರಬ್ರಹ್ಮನ, ಉಯ್ಯಲ=ಉಯ್ಯಾಲೆ

ಪುರುಷ ಚೈತನ್ಯ, ನದಿಯ ತೆರೆಯಂತೆ ಏಳುತ್ತಾ ಬೀಳುತ್ತಾ ಹರಿಯುತ್ತಿದೆ. ಅದಕ್ಕೆ ತನ್ನ ನಿಲುವೆಲ್ಲಿ ಎಂದು ಗೊತ್ತಿಲ್ಲ, ತನ್ನ ಚಲನೆಯ ಗತಿಯೂ ಗೊತ್ತಿಲ್ಲ. ಈ ಜಗತ್ತಿನಲ್ಲಿ ಹರಿಯುವ ಪರಮ ಚೈತನ್ಯದ ಚಲನೆ ಆ ಪರಮಾತ್ಮನ ಉಯ್ಯಾಲೆಯಂತಿದೆ ಎಂದು ಬಹಳ ಗಹನ ತತ್ವದ ಪ್ರತಿಪಾದನೆಯನ್ನು ಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಈ ಜಗತ್ತಿನಲ್ಲಿ ನಡೆಯುವ ಪ್ರತಿಯೊಂದು ಕ್ರಿಯೆಗೂ ಆ ಪರಮ ಚೈತನ್ಯವೇ ಕಾರಣ ಎಂದು ಒಪ್ಪಿಕೊಂಡಾಗಿದೆ. ಅದು ಮಾನವರ ಪರಿಭಾಷೆಯಲ್ಲಿ ಉತ್ಕೃಷ್ಟವಾಗಿಯೂ, ಕೆಟ್ಟದ್ದಾಗಿಯೂ, ಉಗ್ರವಾಗಿಯೂ, ಶಾಂತವಾಗಿಯೂ, ಅಂದವಾಗಿಯೂ, ಕುರೂಪವಾಗಿಯೂ ಹೀಗೆ ಹಲವಾರು ಬಗೆಗಳಲ್ಲಿ ಪ್ರಕಟವಾಗುತ್ತದೆ. ನದಿಯ ತೆರೆಗಳಂತೆ ಮೇಲೇಳುತ್ತಾ ಕೆಳಬೀಳುತ್ತಾ ಇರುತ್ತದೆ. ಅದರ ಗುಣಗಳನ್ನು ಅನುಭವಿಸುವುದು ನಮ್ಮ ಭಾವವಷ್ಟೇ. ಈ ಭಾವವೇ ಬದಲಾಗುತ್ತಾ ಇಡೀ ಜಗತ್ತನ್ನು ವೈವಿಧ್ಯಮಯವಾಗಿ ಕಾಣುವ ಪರಿಪಾಟ ನಮ್ಮ ಮಾನವನಿಗೆ. ಇದಕ್ಕೆ ಒಂದು ಆದಿಯೂ ಇಲ್ಲ ಅಥವಾ ಒಂದು ಅಂತ್ಯವೂ ಇಲ್ಲ. ಹುಟ್ಟಿದಾರಭ್ಯ ಸಾಯುವತಕ ನಮ್ಮ ಮನಸ್ಸುಗಳಲ್ಲಿ ಈ ರೀತಿಯ ಭಾವಗಳ ತೆರೆಗಳು ಏಳುತ್ತಲೇ ಇರುತ್ತವೆ.

"ಆದರೆ ಈ ಭಾವಗಳು ನಮ್ಮ ಭಾವಗಳೇ?" ಎಂದು ಯೋಚಿಸಿದಾಗ ನಮ್ಮ ಅರಿವಿಗೆ ಬರುವುದು ಹೀಗೆ, ಈ ಜಗತ್ತೆಲ್ಲವೂ ಆ ಪರಮಾತ್ಮನಿಂದಲೇ ವ್ಯಾಪಕವಾಗಿ ಆವೃತವಾಗಿದೆ ಎನ್ನುವುದನ್ನು ನಿಸ್ಸಂಶಯವಾಗಿ ಒಪ್ಪಿಕೊಂಡರೆ ತಾನೇ ಸೃಷ್ಟಿಮಾಡಿದ ನಮ್ಮ ದೇಹ ಮನಸ್ಸು ಬುದ್ಧಿಗಳಂತಹ ಉಪಕರಣಗಳನ್ನು ಉಪಯೋಗಿಸಿಕೊಂಡು,

ತಾನೇ ಈ ಭಾವಗಳನ್ನು ಅನುಭವಿಸುತ್ತಾ ಆನಂದಿಸುತ್ತಾ ಒಂದು ಉಯ್ಯಾಲೆಯಂತಹ ಆಟವನ್ನು ಆಡುತ್ತಿದ್ದಾನೆ ಆ ಪರಮಾತ್ಮ.

ಈ ಜಗತ್ತಿನಲ್ಲಿ ನಡೆಯುವ ಪ್ರತಿಯೊಂದು ವಿದ್ಯಮಾನವೂ ಅವನಾಟವೆಂದು ಒಪ್ಪಿಕೊಳ್ಳಲು ಆಧ್ಯಾತ್ಮಿಕ ಸಾಧನೆ ಬೇಕು. ಆಧ್ಯಾತ್ಮಿಕ ಔನ್ನತ್ಯದ ಸ್ಥರದಲ್ಲಿ ಈ ಪರಮಾತ್ಮ ತತ್ವ ಸ್ಥಿರವಾಗುತ್ತದೆ. ಎಲ್ಲಿಯ ತನಕ ನಾವು ನಮ್ಮ ದೇಹ ಮನಸ್ಸು ಬುಧ್ಧಿಗಳೊಂದಿಗೆ ನಮ್ಮನ್ನು ಗುರುತಿಸಿಕೊಳ್ಳುತ್ತೇವೆಯೋ ಅಲ್ಲಿಯ ತನಕ ನಮಗೆ ಸತ್ಯದ, ಸತ್ವದ ಮತ್ತು ತತ್ವದ ದರ್ಶನವಾಗುವುದಿಲ್ಲ. ಅಂತಹ ಪ್ರಾಕೃತ ಭಾವದಿಂದ ನಾವು ಮೇಲೇರಲು ಪ್ರಯತ್ನ ಪಡಬೇಕು. ಪ್ರಯತ್ನದಿಂದ ಹಂತ ಹಂತವಾಗಿ ಸಾಧನೆಯಿಂದ ಔನ್ನತ್ಯವನ್ನು ಸಾಧಿಸಬಹುದು.

**ಮುಕ್ತಕ-230**

**ತೆರೆಯೇಳುವುದು ದೈವಸತ್ವ ನರನೊಳು ನೆರೆಯೆ ।**
**ತೆರೆ ಬೀಳುವುದು ಕರ್ಮವಿಧಿಯಿದಿರು ಪರಿಯೆ ॥**
**ತೆರೆಯನಾನುತೆ ತಗ್ಗು, ತಗ್ಗುನಾನುತಲಿ ತೆರೆ ।**
**ತೆರೆತಗ್ಗುಗಳಿನೆ ತೊರೆ-ಮಂಕುತಿಮ್ಮ ॥**

ತೆರೆಯೇಳುವುದು=ತೆರೆಯು+ಏಳುವುದು, ಕರ್ಮವಿಧಿಯಿದಿರು=ಕರ್ಮ+ವಿಧಿಯ+ಎದಿರು,
ತೆರೆಯನಾನುತೆ=ತೆರೆಯನು+ಆನುತೆ, ತಗ್ಗುನಾನುತಲಿ=ತಗ್ಗನು+ಆನುತಲಿ.
ಆನುತೆ=ಅನುಗುಣವಾಗಿ, ಹೊಂದಿಕೊಂಡಂತೆ, ತೆರೆಯೇಳುವುದು=ಭಾವ ಲಹರಿ ಏಳುವುದು.

ಮನುಷ್ಯನ ಮನಸ್ಸಿನಲ್ಲಿ ಆ ಪರಮಾತ್ಮ ತತ್ವ ತುಂಬಿದಾಗ ಒಂದು ಆಧ್ಯಾತ್ಮಿಕ ಭಾವ ಉನ್ನತವಾಗಿರುತ್ತದೆ. ಆದರೆ ಬದುಕಿನ ಕೆಲಸಕಾರ್ಯಗಳಲ್ಲಿ ಮಗ್ನರಾದಾಗ ಆ ಭಾವ ಮರೆಯಾಗಿ ನಾವು ಮತ್ತೆ ಪ್ರಾಪಂಚಿಕ ವಿಷಯಗಳಲ್ಲಿ ಬೀಳುತ್ತೇವೆ. ಮತ್ತೆ ಆ ಪಾರಮಾರ್ಥಿಕ ಭಾವ ಮನದಲ್ಲಿ ತುಂಬಿಕೊಂಡಾಗ ಮತ್ತೆ ಮೇಲೇಳುತ್ತೇವೆ ಹೀಗೆ ಏಳುತ್ತಾ ಬೀಳುತ್ತಾ ಸಾಗುವುದೇ ಜೀವನದ ಪ್ರಯಾಣ ಎಂದು ಒಂದು ಸುವಿಚಾರವನ್ನು ಪ್ರಸ್ತಾಪಮಾಡುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಆಕಾಶದಿಂದ ಬಿದ್ದ ಒಂದೊಂದು ಮಳೆಯ ಹನಿಯೂ ತನ್ನ ಗಮ್ಯವಾದ ಸಾಗರವನ್ನು ಸೇರಲು ಬೇರೆ ಹನಿಗಳೊಂದಿಗೆ ಕೂಡಿ ಒಂದು ಝರಿಯಾಗಿ ತೊರೆಯಾಗಿ ನದಿಯಾಗಿ ಹರಿಯುತ್ತದೆ. ಹಾಗೆ ಹರಿಯುವಾಗ, ಹಳ್ಳಗಳಲ್ಲಿ ಬಿದ್ದು ಮತ್ತೆ ಮೇಲೇರಿ ಮತ್ತೆ ತೊರೆಯಾಗಿ ಹೇಗಾದರೂ ಸರಿ ಸಮುದ್ರವನ್ನು ಸೇರುವ ತನ್ನ ಪ್ರಯತ್ನವನ್ನು ಮುಂದುವರೆಸುವಂತೆ ಆತ್ಮವೂ ಸಹ ತನ್ನ ಮೂಲವಾದ ಪರಮಾತ್ಮನನ್ನು ಸೇರಲು ಹವಣಿಸುವಾಗ ಆಧ್ಯಾತ್ಮಿಕ ಭಾವ ಬರುತ್ತದೆ. ಆದರೆ ಈ ಜಗತ್ತಿನಲ್ಲಿ ಹುಟ್ಟಿದಮೇಲೆ ಬದುಕಿನ ಹೋರಾಟದಲ್ಲಿ ಆ ಭಾವ ಆಗಾಗ 'ಅಭಾವ'ವಾಗಿಬಿಡಬಹುದು. ಹಾಗಾದಾಗ ಮತ್ತೆ ಜೀವನದ ಜಂಜಾಟದಲ್ಲಿ ಬೀಳಬಹುದು. ಹೋರಾಟದ ತೀವ್ರತೆ ಕಡಿಮೆಯಾದಾಗ ಮತ್ತೆ ಆ ಪಾರಮಾರ್ಥಿಕ ಭಾವ ಅಧಿಕವಾಗಬಹುದು. ಒಂದು ಹಾವು-





ಏಣಿಯಾಟದಂತೆ, ಮೇಲೆ ಹೋಗಿ, ಕೆಳಗೆ ಬಿದ್ದು ಮತ್ತೆ ಮೇಲೆ ಹೋಗುವ ಮತ್ತೆ ಬೀಳುವ ಪರಿಪಾಟ ನಡೆದೇ ಇರುತ್ತದೆ ಎನ್ನುವುದೇ ಈ ಮುಕ್ತಕದ ಹೂರಣ.

ಆಧ್ಯಾತ್ಮದ ಭಾವ ಬಂದು ಬಿಟ್ಟರೆ ಬದುಕಿನ ಅಂಟು ಬಿಡುತ್ತದೆ. ಬದುಕಿನ ಅಂಟು ಬಿಟ್ಟರೆ ಆಧ್ಯಾತ್ಮ ಅಧಿಕವಾಗುತ್ತದೆ. ಇದು 'ಮದುವೆಯಾಗದ ಹೊರತು ಹುಚ್ಚು ಬಿಡದು, ಹುಚ್ಚು ಬಿಡದ ಹೊರತು ಮದುವೆಯಾಗದು' ಎನ್ನುವಂತೆ ಇದೆ. ನಾವು ಏನು ಮಾಡಬೇಕೆಂದರೆ ಬದುಕಿನ ಜಂಜಾಟವನ್ನೂ ಅರಿಯಬೇಕು ಪರಮಾರ್ಥವನ್ನೂ ಅರಿಯಬೇಕು. ಇವೆರಡರ ಪ್ರಯೋಜನವನ್ನು ಅರಿಯಬೇಕು. ನಮಗೆ ಪರಮಾರ್ಥದ ಹಿತವು ಅರ್ಥವಾಗಬೇಕು. ಅದನ್ನು ಹಿಡಿದುಕೊಳ್ಳಬೇಕು. ಆಗ ನಮ್ಮ ಜೀವ ನದಿಯ ಪ್ರಯಾಣ ಹಳ್ಳವಿಲ್ಲದ ಮತ್ತು ಹಳ್ಳದಲ್ಲಿ ಬೀಳದ ಪ್ರಯಾಣವಾಗುತ್ತದೆ. ವಾಚಕರೆ, ನಮಗೆ ಯಾವುದು ಬೇಕೋ ಅದನ್ನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯ ನಮಗೆ ಉಂಟಲ್ಲವೇ?

**ಮುಕ್ತಕ-231** **ಇಂದೆದ್ದ ತೆರೆ ನಾಳೆ ಬೀಳುವುದು; ಮರುವಗಲು ।**
**ಮುಂದೆ ತಾನೇಳುವುದು ಬೇರೆ ಗಾತ್ರದಲಿ ॥**
**ಇಂದು ನಾಳೆಗಳನೆಲ್ಲವ ಕೂಡಿ ನೋಡಿದೊಡೆ ।**
**ಮುಂದಹುದು ಬೆರಗೊಂದೆ - ಮಂಕುತಿಮ್ಮ ॥**

ಇಂದೆದ್ದ ಇಂದು+ಎದ್ದ, ಮರುವಗಲು=ಮರು+ಹಗಲು, ತಾನೇಳುವುದು=ತಾನು+ಏಳುವುದು, ನಾಳೆಗಳನೆಲ್ಲವ=ನಾಳೆಗಳನು+ಎಲ್ಲವ, ಮುಂದಹುದು-ಮುಂದು+ಅಹುದು.

ಇಂದು ಎದ್ದ ತೆರೆ ನಾಳೆ ಬೀಳುವುದು ಮತ್ತೆ ಮರುದಿವಸ ಇನ್ನೊಂದು ತೆರೆ ಬೇರೆ ಗಾತ್ರದಲ್ಲಿ ಏಳುವುದು. ಹಾಗೆ ಇಂದು ನಾಳೆಗಳ ಬೇರೆ ಬೇರೆ ಗಾತ್ರದ ತೆರೆಗಳನ್ನೆಲ್ಲ ಒಟ್ಟುಗೂಡಿಸಿದರೆ ಅದರ ಹಿಂದೆ ನಮಗೆ ಒಂದು ವಿಶಾಲವಾದ ಕಡಲು ಕಾಣುವಂತೆ, ನಮ್ಮ ಮನಸ್ಸುಗಳಲ್ಲಿ ಬೇರೆ ಬೇರೆ ರೀತಿಯಲ್ಲಿ, ರೂಪದಲ್ಲಿ, ಗಾತ್ರದಲ್ಲಿ ಮತ್ತು ಬೇರೆ ಸಮಯದಲ್ಲಿ, ಬೇರೆ ಬೇರೆ ಕಾರಣಗಳಿಗೆ ಎದ್ದಂತಹ ಪರತತ್ವದ ಭಾವಗಳನ್ನೆಲ್ಲ ಒಟ್ಟು ಮಾಡಿದರೆ ನಮಗೆ ಆ ಪರತತ್ವದಿಂದ ಪ್ರತಿರೂಪವಾದ ಪರಮಾತ್ಮನ ಅರಿವು ಮೂಡುತ್ತದೆ ಎಂದು ಒಂದು ಗಹನವಾದ ವಿಚಾರವನ್ನು ಈ ಮುಕ್ತಕದ ಮೂಲಕ ಮಾನ್ಯ ಗುಂಡಪ್ಪನವರು ಮಂಡಿಸಿದ್ದಾರೆ.

ನಮ್ಮ ಮನಸ್ಸಿನಲ್ಲಿ ಶ್ರದ್ದೆಯಿಂದಲೋ, ಭಕ್ತಿಯಿಂದಲೋ, ಭಯದಿಂದಲೋ, ಸಂಪ್ರದಾಯದ ಪಾಲನೆ ಮಾಡುವಾಗಲೋ, ಗುಂಪಿನಲ್ಲಿ ಒಂದಾಗಿಯೋ ಆ ದೇವರ ಧ್ಯಾನ ಉಂಟಾಗಬಹುದು. ಕೆಲವು ಬಾರಿ ಅದು ಸುಮ್ಮನೆ ಬಂದುಹೋಗುವ ಭಾವವಿರಬಹುದು ಅಥವಾ ತೀವ್ರತೆಯಿಂದ ಕೂಡಿದ ಚಿಂತನೆಯಾಗಿರಬಹುದು. ಕ್ಷಣಿಕವಾದ ಭಾವವಾಗಿರಬಹುದು ಅಥವಾ ದೀರ್ಘ ಧ್ಯಾನದ ಸ್ಥಿತಿಯಾಗಿರಬಹುದು. ಹೀಗೆ ಬಂದುಹೋಗುವ ಭಾವಗಳು ನಮ್ಮಲ್ಲಿ ಸ್ಥಾಯೀ ರೂಪದಲ್ಲಿ ಇರುವುದಿಲ್ಲ. ಅದಕ್ಕೆ ಕಾರಣ ನಾವಿರುವ ಜಗತ್ತಿನ ಇಂದ್ರಿಯ ಜನ್ಯವಾದ ಸೆಳೆತಗಳು ನಮ್ಮನ್ನು ಮತ್ತೆ ಮತ್ತೆ ಸೆಳೆದು ಈ ಜಗತ್ತಿನ ಆಕರ್ಷಣೆಗೆ ತಳ್ಳುತ್ತದೆ, ಅಲ್ಲವೇ? ಒಂದು

ಕಡೆ ಜಗತ್ತಿನ ಮತ್ತು ಜಗತ್ಸಂಬಂಧವಾದ ಚಿಂತನೆಗಳು, ಮತ್ತೊಂದು ಕಡೆ ಜಗತ್ತಿನ ಸೃಷ್ಟಿಕರ್ತನಾದ, ಸರ್ವಕಾರಕನಾದ, ಸರ್ವನಿಯಾಮಕನಾದ, ಸರ್ವವ್ಯಾಪಕನಾದ ಆ ಪರಮ ಚೈತನ್ಯದ ಚಿಂತೆ, ಪ್ರಮಾಣ ಮತ್ತು ಪರಿಮಾಣ ಭೇದವಿದ್ದರೂ, ಭಾವಗಳೆರಡೂ ನಮ್ಮಲ್ಲಿ ಬಂದು ಹೋಗುತ್ತವೆ.

ಪ್ರತಿಯೊಬ್ಬರಲ್ಲೂ ಪ್ರಮಾಣ ಭೇದವಿದ್ದರೂ ಹೀಗೆ ಬಂದು ಹೋಗುವ ಈ ಭಕ್ತಿಯ ಅಥವಾ ಧ್ಯಾನದ ಭಾವಗಳನ್ನು ಒಂದು ಕಡೆ ಕೇಂದ್ರೀಕರಿಸಿದರೆ ಅಥವಾ ಒಟ್ಟು ಸೇರಿಸಿದರೆ ಅವರವರ ಮಟ್ಟಿಗೆ ಅವರವರು ಏನು ಮತ್ತು ಎಷ್ಟು ಕಾಣಲು ಸಾಧ್ಯವೋ ಅಷ್ಟರ ಸಮಗ್ರ ಚಿತ್ರಣ ಕಾಣುತ್ತದೆ. ಕಡಲ ತೀರದಲ್ಲಿ ನಿಂತು ನೋಡಿದರೆ ನಮಗೆ ಕಡಲ ವೈಶಾಲ್ಯ ಕಾಣುತ್ತದೆ. ಆದರೆ ನಾವು ನೋಡುವುದು ನಮ್ಮ ದೃಷ್ಟಿ ಎಷ್ಟು ನೋಡಬಹುದೋ ಅಷ್ಟು ಮಾತ್ರ. ಅದಕ್ಕೂ ಆಚೆ ಕಡಲಿಲ್ಲವೇ ? ನಮ್ಮ ದೃಷ್ಟಿ ವಿಶಾಲವಾದರೆ ಕಡಲು ಇನ್ನೂ ವಿಸ್ತಾರವಾಗುತ್ತದೆ.

ಹಾಗೆಯೇ ನಮ್ಮ ಕ್ಷಮತೆಗೆ ಅನುಸಾರವಾಗಿ ನಾವು ಆ ಪರಮಾತ್ಮ ತತ್ವವನ್ನು ಭಾವಿಸುತ್ತೇವೆ ಮತ್ತು ಅನುಭವಿಸುತ್ತೇವೆ. ನಮ್ಮ ಮಟ್ಟಿಗೆ ಅದು ನಮ್ಮ ಅನುಭವ, ಹೆಚ್ಚು ಭಾವಿಸಿದರೆ ಹೆಚ್ಚು ಮತ್ತು ವಿಶಾಲವಾದ ಅನುಭವ ಆಗುತ್ತದೆ. ನಮ್ಮ 'ನೋಡುವ ಕ್ಷಮತೆಯನ್ನು ಹೆಚ್ಚಿಸಿಕೊಂಡರೆ ಭಾವನೆಯೂ ಹೆಚ್ಚಾಗಿ ಪರಮಾತ್ಮ ತತ್ವದ ಮತ್ತು ಸತ್ವದ ಭಾವ ಮತ್ತು ಅನುಭವವೂ ಹೆಚ್ಚಾಗುತ್ತದೆ. ನಮ್ಮ ದೃಷ್ಟಿಯನ್ನು ವಿಶಾಲವಾಗಿಸಿಕೊಳ್ಳುವ ಪ್ರಯತ್ನ ಮಾಡಬೇಕು. ಸೃಷ್ಟಿಯ ಹಿಂದಿರುವ ಆ ಪರಮ ಚೇತನದ ಸಮಗ್ರ ಚಿತ್ರವನ್ನು ಕಾಣುವ ಪ್ರಯತ್ನ ಮಾಡಬೇಕು. ಅಂತಹ ಪ್ರಯತ್ನವನ್ನು ಮಾಡೋಣವೆ?

**ಮುಕ್ತಕ-232** **ಬೀಳುವುದ ನಿಲ್ಲಿಸುದು, ಬಿದ್ದುದನು ಕಟ್ಟುವುದು |**
**ಹಾಲೊಡೆಯೆ ಕಡೆದದನು ತಕ್ರವಾಗಿಪುದು ||**
**ಹಾಳ ಹಾಳಾಗಿಪುದು ಹಳದ ಹೊಸದಾಗಿಪುದು |**
**ಬಾಳಿಗಿದೆ ಚಿರಧರ್ಮ – ಮಂಕುತಿಮ್ಮ||**

ಹಾಲೊಡೆಯೆ=ಹಾಲು+ಒಡೆಯೆ, ಕಡೆದದನು=ಕಡೆದು+ಅದನು, ಹಾಳಾಗಿಪುದು=ಹಾಳು+ಆಗಿಪುದು, ಹೊಸದಾಗಿಪುದು=ಹೊಸತು+ಆಗಿಪುದು, ಬಾಳಿಗಿದೆ=ಬಾಳಿಗೆ+ಇದೆ

ತಕ್ರ=ಮಜ್ಜಿಗೆ.

ಬೀಳುವುದನ್ನು ಎತ್ತಿ ನಿಲ್ಲಿಸುವುದು, ಬಿದ್ದುದ್ದನ್ನು ಕಟ್ಟಿ ನಿಲ್ಲಿಸುವುದು, ಹಾಲು ಒಡೆದರೆ (ಮೊಸರಾದರೆ) ಅದನ್ನು ಕಡೆದು ಮಜ್ಜಿಗೆಯನ್ನಾಗಿಸುವುದು, ಯಾವುದಾರೂ ವಸ್ತು ಹಾಳಾದರೆ ಹಾಗೆಯೇ ಬಿಡುವುದು, ಹಳತನ್ನು ಹೊಸದಾಗಿಸುವುದು, ಮುಂತಾದ ಕೆಲಸಗಳನ್ನು ಮಾಡುವುದೇ ಮಾನವನ ಬಾಳಿಗೆ ಶಾಶ್ವತ ಧರ್ಮ ಎನ್ನುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಧರ್ಮವೆಂದರೆ ಸ್ವಭಾವ. ಈ ಜಗತ್ತಿನಲ್ಲಿ ಸೃಷ್ಟಿಯಾದ ಪ್ರತಿ ವಸ್ತುವಿಗೂ, ಪ್ರತಿ ಪ್ರಾಣಿಗೂ ಒಂದೊಂದು ಭಿನ್ನವಾದ ಸ್ವಭಾವ ಎಂದರೆ, ಧರ್ಮವಿದೆ. ಮನುಷ್ಯನಿಗೆ ಮಾನವನಾಗಿರುವುದೇ ಸ್ವಭಾವ. ಮಾನವ





ಮಾನವತೆಯನ್ನು ಬೆಳಗುವ ಜೊತೆಗೆ ತನ್ನ ಕಾರ್ಯ ಕ್ಷೇತ್ರಕ್ಕೆ ಸಾವಿರಾರು ಆಯಾಮಗಳನ್ನು ಸೇರಿಸಿಕೊಂಡಿದ್ದಾನೆ. ಇದರ ಪ್ರತಿಫಲವೇ ಅನ್ಯ ಯಾವ ಪ್ರಾಣಿಗೂ ಇಲ್ಲದ ಕಾರ್ಯಕ್ಷಮತೆ ಇವನದು. ಹೊಸ ಹೊಸ ವಸ್ತು ವಿಷಯಗಳನ್ನು ಕಂಡು ಹಿಡಿದುಕೊಳ್ಳುವುದು, ಅದು ಹಳತಾದರೆ ಹೊಸ ಹೊಸ ವಸ್ತುಗಳನ್ನು ಸೃಜಿಸುವುದು, ಇರುವ ವಸ್ತು ಹಾಳಾದರೆ ಸರಿಪಡಿಸುವುದು. ಯಾವುದಾದರೂ ವಸ್ತುವಿನ ರೂಪ ಕೆಟ್ಟರೆ, ಹೊಸ ರೂಪ ಕೊಡುವುದು, ಹೀಗೆ ಪ್ರತಿ ವಸ್ತುವನ್ನೂ ತನ್ನ ಉಪಯೋಗಕ್ಕೆ ತಂದುಕೊಳ್ಳುವುದು ಮಾನವನ ಸಹಜ ಗುಣ. ಇದುವೇ ಮಾನ್ಯ ಗುಂಡಪ್ಪನವರು ಹೇಳುವ ಮಾನವನ ನಿರಂತರ ಧರ್ಮ.

ಇಂತಹ ಅದ್ಭುತ ಶಕ್ತಿಯನ್ನು ಆ ಪರಮಾತ್ಮನಿಂದ ಪಡೆದ ಮನುಷ್ಯ ಇಡೀ ಜಗತ್ತಿನಲ್ಲಿ ಹೊಸತನ್ನು ಸೃಷ್ಟಿಮಾಡುವ ಭರದಲ್ಲಿ, ಮನುಕುಲಕ್ಕೆ ಮಾರಕವಾದ ವಸ್ತುಗಳನ್ನು ಹೇರಳವಾಗಿ ಸೃಷ್ಟಿಮಾಡಿಬಿಟ್ಟಿದ್ದಾನೆ. ಇನ್ನೂ

ಮಾಡುತ್ತಲೇ ಇದ್ದಾನೆ. ಇವನು ಸೃಜಿಸಿದಾಗ ಉದ್ದೇಶವೇನೋ ಬೇರೆಯೇ ಇರುತ್ತದೆ. ಆದರೆ ಆವಿಷ್ಕಾರದ ಉಪಯೋಗ ದುರ್ಜನರ ಕೈಯಲ್ಲಿ ಬಿದ್ದು, ಜಗತ್ತಿಗೆ, ಬದುಕಿಗೆ ಮಾರಕವಾಗಿದೆ. ಇದರಿಂದ ಅನಾಹುತ ಖಂಡಿತ. ಭಸ್ಮಾಸುರನ ಕೈಯಲ್ಲಿ "ಬೂದಿಯಾಗಿಸುವ ವರವನ್ನು ಕೊಟ್ಟಹಾಗೆ, ಇಂತಹ ಭಸ್ಮಾಸುರರು ನಮ್ಮ ನಡುವೆ ಬಹಳಷ್ಟು ಜನರಿದ್ದಾರೆ. ಅವರು ತಮ್ಮ ಕೆಲಸದ "ದುರ್ಭಾರ'ದಲ್ಲಿ ತಾವೇ ನಾಶವಾಗುವ ಮುಂಚೆ ಜಗತ್ತಿಗೆ ಸಾಕಷ್ಟು ನಷ್ಟ ಮಾಡಿ ಹೋಗುತ್ತಾರೆ. ನಾವು ನಮ್ಮ ಪರಿಧಿಯೊಳಗಿನ ಸಮಾಜವನ್ನು ಸೂಕ್ತ ಮತ್ತು ಸುಮುಖವಾಗಿಸಿಕೊಂಡರೆ ಒಳಿತಲ್ಲವೇ?

**ಮುಕ್ತಕ-233**

**ಸೃಷ್ಟಿಯ ವಿಧಾನದಲ್ಲಿ ಸೊಟ್ಟುಗಳು ನೂರಿಹವು |**
**ನೆಟ್ಟಗಿಪೆನ್ ಅವನ್ ಎಂದು ನರರ ಚಿರದೀಕ್ಷೆ ||**
**ಇಷ್ಟಗಳನನ್ಯೋನ್ಯವವರೇಕೆ ಬಗೆದಿರರು? |**
**ನಿಷ್ಠುರಪ್ರಿಯರವರು - ಮಂಕುತಿಮ್ಮ ||**

ನೂರಿಹವು=ನೂರು+ಇಹವು, ನೆಟ್ಟಗಿಪೆನ್=ನೆಟ್ಟಗೆ+ಇಪೆನ್,
ಇಷ್ಟಗಳನನ್ಯೋನ್ಯವವರೇಕೆ=ಇಷ್ಟಗಳನ+ಅನ್ಯೋನ್ಯವ+ಅವರು+ಏಕೆ, ಬಗೆದಿರರು=ಬಗೆದು+ಇರರು,
ನಿಷ್ಠುರಪ್ರಿಯರವರು=ನಿಷ್ಠುರ+ಪ್ರಿಯರು+ಅವರು
ಸೊಟ್ಟುಗಳು=ನೇರವಲ್ಲದ್ದು, ನೆಟ್ಟಗಿಪೆನ್=ನೆಟ್ಟಗಾಗಿಸುತ್ತೇನೆ, ಅನ್ಯೋನ್ಯವ=ಅನ್ಯೋನ್ಯತೆಯ,
ನಿಷ್ಠುರಪ್ರಿಯರವರು=ನಿಷ್ಠುರ ಕಟ್ಟಿಕೊಳ್ಳಲು ಬಯಸುವವರು.

ಈ ಜಗತ್ತಿನ ಸೃಷ್ಟಿಯ ವಿಧಾನದಲ್ಲಿ ನೂರಾರು ಸೊಟ್ಟಗಳು ಅಂದರೆ ಅಂಕು ಡೊಂಕುಗಳು ಇವೆ. ಅದನ್ನು ನೇರವಾಗಿಸಬೇಕೆನ್ನುವುದೇ ಮಾನವನ ಸದಾಕಾಲದ ಇಚ್ಛೆ, ಆದರೆ ಮನುಷ್ಯ, ಪರಸ್ಪರ ಇಚ್ಛೆಗಳನ್ನು ಅರಿಯಲು ವಿಫಲನಾಗುತ್ತಾನೆ. ಜಗತ್ತಿನ ಸೊಟ್ಟಗಳನ್ನು ಸರಿಪಡಿಸಲು ಮನುಷ್ಯ ಮಾಡುವ ಪ್ರಯತ್ನದಲ್ಲಿ ತಾನೂ ನಿಷ್ಠುರನಾಗಿ, ಅನ್ಯರೊಡನೆ ಹಗೆತನವನ್ನು ಕಟ್ಟಿಕೊಳ್ಳುತ್ತಾನೆ ಎಂದು ಉಲ್ಲೇಖ ಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಪರಮಾತ್ಮನ ಸೃಷ್ಟಿಯ ವಿಧಾನಕ್ಕೆ ಆ ಪರಮಾತ್ಮನದೇ ಒಂದು ಕಾರಣವಿದೆ. ತನಗೆ ಹೇಗೆ ಬೇಕೋ ಹಾಗೆ ತನ್ನ ಜಗತ್ತನ್ನು ಸೃಷ್ಟಿಸಿಕೊಂಡಿದ್ದಾನೆ. ಆದರೆ ಮನುಷ್ಯ 'ಈ ಜಗತ್ತು ನನಗಾಗಿ ಸೃಷ್ಟಿಸಲ್ಪಟ್ಟಿದೆ' ಎಂಬ ದುರ್ಭಾವದಿಂದ ಈ ಜಗತ್ತಿನಲ್ಲಿರುವುದೆಲ್ಲವೂ ತನ್ನ ಉಪಯೋಗಕ್ಕಾಗಿ, ತನ್ನ ಪ್ರಯೋಜನಕ್ಕಾಗಿ ಸೃಷ್ಟಿಸಲ್ಪಟ್ಟಿದೆ ಎಂದು ಯೋಚಿಸುತ್ತಾನೆ. ಹೀಗೆ ಯೋಚಿಸುವಾಗ ಯಾವುದಾದರೂ ವಿಷಯ ಅಥವಾ ವಸ್ತು ಇವನ ಇಂದ್ರಿಯ ಪ್ರಚೋದಿತ ಇಷ್ಟ ಅಥವಾ ಅಪೇಕ್ಷೆಗೆ ಅನುಗುಣವಾಗಿ ಇಲ್ಲದಿದ್ದರೆ, ಇದು ಸರಿಯಿಲ್ಲ. ಅದು ಸರಿಯಿಲ್ಲ, ಎಂದು ಪರಮಾತ್ಮನ ಸೃಷ್ಟಿಗೆ ವ್ಯಾಖ್ಯಾನ ಬರೆಯುವ ಕುಚೇಷ್ಟೆಯನ್ನು ಮಾಡುತ್ತಾನೆ. ನೈಸರ್ಗಿಕ ವಿಧಾನಗಳನ್ನು ತನ್ನ ಬುದ್ಧಿಶಕ್ತಿಯಿಂದ ತಿದ್ದಲು, ಬದಲಾಯಿಸಲು ಪ್ರಯತ್ನಪಡುತ್ತಾನೆ. ಉದಾಹರಣೆಗೆ 'ಜೆನೆಟಿಕ್ ಇಂಜಿನಿಯರಿಂಗ್' ಎನ್ನುವ ವಿಜ್ಞಾನದಿಂದ ಹಲವಾರು ಸ್ವಾಭಾವಿಕ ಗಿಡ, ಮರ, ಹೂ, ಹಣ್ಣು, ಪ್ರಾಣಿಗಳನ್ನೂ ಇವನೇ ತನಗಿಷ್ಟಬಂದಂತೆ ಬದಲಾಯಿಸಿ ಅಹಂಕಾರದ ನಗೆ ನಗುತ್ತಾನೆ. 'ಕ್ಲೋನಿಂಗ್' ಎಂಬ ವಿಧಾನದಿಂದ ಮನುಷ್ಯನನ್ನೇ ನಕಲು ಮಾಡಲು ಪ್ರಯತ್ನಿಸಿದ್ದಾನೆ. ಇದು ಸರಿಯೋ ತಪ್ಪೋ ಗೊತ್ತಿಲ್ಲ. ಆದರೆ, ಮನುಷ್ಯ ಮಾತ್ರ ಪರಮಾತ್ಮನ ಸೃಷ್ಟಿಯನ್ನು ತಿದ್ದಲು ಪ್ರಯತ್ನಪಡುತ್ತಿದ್ದಾನೆ. ಇವನು ಯೋಚನೆ ಮಾಡುವುದೇ ಸೊಟ್ಟ. ಹಾಗಾಗಿ ಇವನಿಗೆ ಎಲ್ಲವೂ ಸೊಟ್ಟಗೆ ಕಾಣುತ್ತದೆ. ನೋಡುವ ರೀತಿಯ ದೋಷವಲ್ಲದೆ ಮತ್ತೇನು?

ಇನ್ನು ಪರಸ್ಪರ ಅನ್ಯೋನ್ಯತೆಯ ವಿಚಾರದಲ್ಲಿ ಗುಂಡಪ್ಪನವರು ಹೇಳಿರುವ "ಇಷ್ಟಗಳನನ್ಯೋನ್ಯವವರೇಕೆ ಬಗೆದಿರರು" ವಿಷಯವನ್ನು ನೋಡೋಣ. ಎರಡು ವ್ಯಕ್ತಿಗಳು ಸೇರಿದರೆ ಮೂರು ಅಭಿಪ್ರಾಯವಿರುತ್ತದೆ, ಎನ್ನುವ ಮಾತು ಸರ್ವವಿದಿತ. ಒಬ್ಬರ ವಿಚಾರ, ನಡತೆ, ಅಭಿಪ್ರಾಯ ಮತ್ತೊಬ್ಬರಿಗೆ ಸಂಪೂರ್ಣವಾಗಿ ಹಿಡಿಸುವುದೇ ಇಲ್ಲ. ಎಲ್ಲೋ ಒಂದು ಭೇದವಿರುತ್ತದೆ 'ತಾನು ಹೇಳುವುದೇ ಸರಿ' ಎಂದು ಪ್ರತಿಪಾದಿಸಿ ತನ್ನ ಮತವನ್ನು ಮತ್ತು ಅಭಿಮತವನ್ನು ದೃಢಪಡಿಸಬೇಕೆಂಬ ಹಂಬಲ ಪ್ರತಿಯೊಬ್ಬರಲ್ಲೂ ಇರುತ್ತದೆ. ಹಾಗೆ ತಮ್ಮ ಮತವನ್ನು ಮತ್ತೊಬ್ಬರ ಮೇಲೆ ಹೇರುವ ಪ್ರಯತ್ನದಲ್ಲಿ ಹಲವರಲ್ಲಿ ನಿಷ್ಠುರವನ್ನು ಕಟ್ಟಿಕೊಳ್ಳುತ್ತಾನೆ. ಇದಕ್ಕೆ ಕಾರಣವೇ ಅವನ ಅಹಂಕಾರ, ಈ ಅಹಂಕಾರದಿಂದ, "ನಾನು ಹೇಳಿದ್ದು ಸರಿ. ನಾನು ಹೇಳಿದ್ದು ಉತ್ತಮ. ಎಲ್ಲರೂ ನನ್ನನ್ನು ಒಪ್ಪಿಕೊಳ್ಳಬೇಕು. ಅನ್ಯರ ವಿಚಾರ ಮತ್ತು ಅಭಿಪ್ರಾಯ ಉತ್ತಮವಲ್ಲ. ಅದನ್ನು ನಾನು ಗೌರವಿಸಬೇಕಿಲ್ಲ" ಎನ್ನುವಂತಹ ಹತ್ತು ಹಲವಾರು ದುರ್ಭಾವಗಳು ಇವನಲ್ಲಿ ಬೇರೂರಿಬಿಟ್ಟಿದೆ. ಇದರಿಂದಾಗಿ ಬದುಕು ಇವನ ಸುಖಜೀವನಕ್ಕೆ ಮಾರಕವಾದ, ಕೋಪ, ದ್ವೇಷ, ಅಸೂಯೆಗಳಂತಹ ವಿಷಯಗಳಿಂದ ತುಂಬಿಹೋಗಿವೆ.

ಇಂತಹ ದುರ್ಭಾವಗಳನ್ನು ಬಿಟ್ಟು ಅನ್ಯರ ಅಭಿಪ್ರಾಯಕ್ಕೂ ಗೌರವನೀಡುತ್ತಾ, "ತನ್ನಂತೆ ಪರರ ಬಗೆದೊಡೆ ಕೈಲಾಸ ಬಿನ್ನಾಣವಕ್ಕು" ಎಂಬ ಸರ್ವಜ್ಞ ವಚನದಂತೆ ಇದ್ದರೆ ಪರಮಾತ್ಮನ ಸೃಷ್ಟಿಯನ್ನು ಅಭಿನಂದಿಸಿದ ಹಾಗೆ ಅಲ್ಲವೇ? ಅಂತಹ ಮನಃಸ್ಥಿತಿಯಲ್ಲಿ ನಮಗೆ ಯಾವುದೂ ಸೊಟ್ಟಗೆ ಕಾಣದೆ, ಎಲ್ಲರನ್ನೂ ಗೌರವಿಸುವ ಮತ್ತು ಯಾರನ್ನೂ ದ್ವೇಷಿಸದ ಮನೋಭಾವ ಬೆಳೆದೀತು.





# ಸೃಷ್ಟಿಯಲ್ಲಿ ಜನವಾಕು 234-238

**ಮುಕ್ತಕ-234**

**ಕಣ್ಣೆರಡದೇಕೆರಡುವೊಂದೆ ಪಕ್ಕದೊಳೇಕೆ? ।**
**ಬೆನ್ನೊಳೊಂದೆದೆಯೊಳೊಂದಿರಲು ಸುಕರವಲ? ॥**
**ಅನ್ಯಾಯ ವಿಕಟಗಳೆನಿತೋ ಸೃಷ್ಟಿಕ್ರಮದಿ ।**
**ಸೊನ್ನೆ ಜನವಾಕ್ಕಲ್ಲಿ - ಮಂಕುತಿಮ್ಮ ॥**

ಕಣ್ಣೆರಡದೇಕೆರಡುವೊಂದೆ=ಕಣ್ಣು+ಎರಡು+ಅದೇಕೆ+ಎರಡು+ಒಂದೆ, ಪಕ್ಕದೊಳೇಕೆ=ಪಕ್ಕದೊಳು+ಏಕೆ,
ಬೆನ್ನೊಳೊಂದದೆಯೊಳೊಂದಿರಲು=ಬೆನ್ನೊಳು+ಎದೆಯಲಿ+ಒಂದು+ಇರಲು,
ವಿಕಟಗಳೆನಿತೋ=ವಿಕಟಗಳು+ಎನಿತೋ, ಜನವಾಕ್ಕಲ್ಲಿ=ಜನ+ವಾಕ್ಕು+ಅಲ್ಲಿ.
ಸುಕರವಲ=ಸುಲಭವಲ, ಜನವಾಕ್ಕು=ಜನರ ಅಭಿಮತ.

ನಮಗೆ ಎರಡು ಕಣ್ಣುಗಳು ಇವೆ. ಅವರೆಡೂ ಮುಖದಲ್ಲಿ ಪಕ್ಕ ಪಕ್ಕದಲ್ಲಿ ಇವೆ. ಅದು ಏಕೆ ಹಾಗಿದೆ? ಮುಖದಲ್ಲಿ ಒಂದು, ಬೆನ್ನಲ್ಲಿ ಒಂದು ಇದ್ದಿದ್ದಿದ್ದರೆ ಸುಲಭವಾಗಿ ಹಿಂದೆ ಮುಂದೆ ಎರಡೂ ಕಡೆ ನೋಡಲು ಆಗುತ್ತಿತ್ತಲ್ಲ, ಎಂದು ಮನುಷ್ಯ ಯೋಚಿಸುತ್ತಾನೆ. ಆದರೆ ಹೀಗೆ ಸೃಷ್ಟಿ ಕ್ರಮದಲ್ಲಿ ಎಷ್ಟೋ ವಿಚಿತ್ರಗಳು ಇವೆ. ಈ ರೀತಿಯ ಸೃಷ್ಟಿಯ

ವಿಚಿತ್ರಗಳನ್ನು ಪ್ರಶ್ನಿಸುವ ಅಧಿಕಾರ ಮನುಷ್ಯನಿಗೆ ಇಲ್ಲ ಎಂಬ ಮಾನ್ಯ ಗುಂಡಪ್ಪನವರ ಭಾವವೇ ಈ ಮುಕ್ತಕದ ಹೂರಣ.

ತನ್ನ ಸುತ್ತಲೂ ಇರುವ ಜಗತ್ತನ್ನು, ಒಂದೇ ಬಾರಿ ನೋಡಲು, ಮುಖದಲ್ಲಿ ಒಂದು, ಬೆನ್ನಲ್ಲಿ ಒಂದು ಕಣ್ಣು ಇದ್ದಿದ್ದರೆ ಸುಲಭವಾಗಿರುತ್ತಿತ್ತಲ್ಲವೇ? ಎಂದು ಯೋಚಿಸುವ ಮನುಷ್ಯರು ಹಲವರು. ಆದರೆ ಹಾಗೆ ಇದ್ದಿದ್ದರೆ ಮತ್ತೇನು ತೊಂದರೆಗಳಾಗುತ್ತಿತ್ತೋ ಯಾರಿಗೆ ಗೊತ್ತು. ಬಹುಶಃ ಕಣ್ಣು ಕಾಣುವ ವಸ್ತುವತ್ತ ಗಮನ ಕೊಡಲು ಕತ್ತನ್ನು ತಿರುಗಿಸಿ ತಿರುಗಿಸಿ ಗೋಣು ಮುರಿಯುತ್ತಿತ್ತೋ ಏನೋ? ಅಷ್ಟೇ, ಅಲ್ಲದೆ ಈ ಕಣ್ಣುಗಳು ರುಂಡದಲ್ಲಿರುವುದರಿಂದ ಮತ್ತು ಬೇರೆ ಎಲ್ಲಾ ಅಂಗಗಳಿಗೂ ಸೂಕ್ತವಾದ ಸಂಪರ್ಕದೊಡನೆ ಇರುವುದರಿಂದ, ಹಾಗೇನಾದರೂ ಕಣ್ಣು ಹಿಂದೊಂದು, ಮುಂದೊಂದು ಇದ್ದಿದ್ದರೆ, ಬಹುಶಃ ಬೇರೆಲ್ಲಾ ಅಂಗಗಳ ವಿನ್ಯಾಸವನ್ನು ಮತ್ತು ಜೋಡಣಾ ಕ್ರಮವನ್ನು ಬದಲಾಯಿಸಬೇಕಿತ್ತು. ಇದು ಪರಮಾತ್ಮನ ಸೃಷ್ಟಿ. ಅದಕ್ಕೊಂದು ಕ್ರಮವಿದೆ. ಈ ಜಗತ್ತಿನ ಪ್ರತೀ ಸೃಷ್ಟಿಗೂ ಒಂದು ಸಮರ್ಪಕವಾದ ಕಾರಣ ಮತ್ತು ಉದ್ದೇಶ್ಯವಿದೆ. ಅದನ್ನು ಅರ್ಥ ಮಾಡಿಕೊಳ್ಳುವುದು ಅಸಾಧ್ಯ.

ಅನ್ಯಾಯ ವಿಕಟಗಳೆನಿತೋ ಸೃಷ್ಟಿಕ್ರಮದಿ' ಎಂದು ಸೃಷ್ಟಿಯಲ್ಲಿ ಇರುವ ವಿಚಿತ್ರಗಳನ್ನು ಉಲ್ಲೇಖಿಸಿದ ಮಾನ್ಯ ಗುಂಡಪ್ಪನವರು, ಅದರ ಹಿಂದೆಯೇ 'ಸೊನ್ನೆ ಜನವಾಕ್ಕಲ್ಲಿ' ಎಂದೂ ಹೇಳುತ್ತಾರೆ. ಎಂದರೆ ಈ ಸೃಷ್ಟಿಯ ಎಷ್ಟೋ ವಿಷಯಗಳು, ಮನುಷ್ಯ ತನಗೆ ಹೇಗೆ ಬೇಕೋ ಹಾಗೆ ಇಲ್ಲವೆಂದೂ, ಆ ಪರಮಾತ್ಮನ ಸೃಷ್ಟಿಯಲ್ಲೇ ಒಂದು ಅನ್ಯಾಯವಿದೆಯೆಂದೂ ಅಂದುಕೊಳ್ಳುತ್ತಾನೆ.

ಅದಕ್ಕೆ ಕಾರಣವೇನೆಂದರೆ ಇವನು ಎಲ್ಲವೂ ತನ್ನ ಇಚ್ಛೆಗನುಸಾರವಾಗಿ ತನ್ನ ಪ್ರಯೋಜನಕ್ಕೆ ಸರಿಯಾಗುವಂತೆ ಇರಬೇಕು ಎಂದು ತಿಳಿಯುವುದು. ಹಾಗಾಗಿ ಇರುವುದು ಸರಿಯಿಲ್ಲ ಎಂದುಕೊಳ್ಳುತ್ತಾನೆ. ಇವನ ಯೋಚನೆಯೇ ಅನ್ಯಾಯವೆಂದು ಅವನಿಗೆ ಅರಿವಾಗುವುದೇ ಇಲ್ಲ. ಪರಮಾತ್ಮನ ಸೃಷ್ಟಿಯೆಲ್ಲವೂ ಸಮರ್ಪಕವಾಗೇ ಇದೆ. ಪ್ರತಿಯೊಂದನ್ನೂ ಬಹಳ ಸೂಕ್ತವಾಗೆ ನಿರ್ಮಿಸಿದ್ದಾನೆ ಆ ಪರಮಾತ್ಮ. ಇದರಲ್ಲಿ ಎಲ್ಲೂ ಒಂದೇ ಒಂದು ಲೋಪವೂ ಇಲ್ಲ. ಈ ಜಗತ್ತಿನ ಪ್ರತಿವಸ್ತುವನ್ನೂ ಒಂದಕ್ಕೊಂದಕ್ಕೆ ಪೂರಕವಾಗಿ ಸೃಷ್ಟಿಸಿದ್ದಾನೆ. ಅವನ ಈ ಸೃಷ್ಟಿಯಲ್ಲಿ ಯಾವುದೇ ದೋಷವನ್ನು ಕಂಡು ಹಿಡಿಯಲು ಸಾಧ್ಯವಿಲ್ಲ. ಹಾಗೇನಾದರೂ ದೋಷಕಂಡರೆ ಅದು ನೋಡುವವರ ದೃಷ್ಟಿಯ ದೋಷವಲ್ಲದೆ ಮತ್ತೇನು. ಇವನಿಗೆ ಪರಮಾತ್ಮನ ಜಗದೃಷ್ಟಿಯ ವಿಷಯದಲ್ಲಿ ಚಕಾರವೆತ್ತಲು ಯಾವ ಅಧಿಕಾರವೂ ಇಲ್ಲ, ಅಲ್ಲವೇ?

ವಾಚಕರೆ, ಪ್ರಜ್ಞಾವಂತರಾದವರು ಯಾರೂ ಪರಮಾತ್ಮನ ಸೃಷ್ಟಿಯ ವಿಧಿಯನ್ನು ಪ್ರಶ್ನಿಸುವುದಿಲ್ಲ. ಅವರು ಅದನ್ನು ನೋಡಿ ವಿಸ್ಮಯಗೊಳ್ಳುತ್ತಾರೆ, ಸಂತೋಷಪಡುತ್ತಾರೆ, ಅಭಿನಂದಿಸುತ್ತಾರೆ, ಆನಂದಿಸುತ್ತಾರೆ ಮತ್ತು ಇಂತಹ ಒಂದು ಸೃಷ್ಟಿಯಲ್ಲಿ ಜೀವಿಸಲು ನಮಗೊಂದು ಅವಕಾಶ ನೀಡಿದ್ದಕ್ಕಾಗಿ ಆ ಪರಮಾತ್ಮನಿಗೆ ಕೃತಜ್ಞತೆಯನ್ನು ಸಲ್ಲಿಸುತ್ತಾರೆ. ಅಂತಹ ಕೃತಜ್ಞತಾ ಭಾವದಿಂದ ನಮ್ಮ ಜೀವನವನ್ನು ಆನಂದದಿಂದ ಕಳೆಯಬೇಕು. ನಮ್ಮ ಪ್ರಯತ್ನವೂ ಅದೇ ರೀತಿಯಲ್ಲಿ ಇರಲಿ ಎಂದು ಆಶಿಸುತ್ತೇನೆ.

**ಮುಕ್ತಕ-235**

**ಧರೆ ಸಸ್ಯಫಲಧಿ ಜೀವಿಗೆ ಪುಷ್ಟಿಯಿತ್ತೊಡೇಂ।**
**ಮರಳಿ ತಾಂ ಪಡೆಯಳೇನ್ ಅವನಿನರ್ಧವನು ||**
**ಧರಣಿಗೀ ನಮ್ಮೊಡಲು ಹುಯ್ದುಡುಬು ತಪ್ಪಲೆಯೋ |**
**ಪರಮೇಷ್ಠಿ ಯುಕ್ತಿಯದು - ಮಂಕುತಿಮ್ಮ ||**

ಪುಷ್ಟಿಯಿತ್ತೊಡೇಂ=ಪುಷ್ಟಿ+ಯಿತ್ತೊಡೆ+ಏಂ, ಪಡೆಯಳೇನ್=ಪಡೆಯಳ+ಏನ್,
ಅವನಿನರ್ಧವನು=ಅವನಿನ+ಅರ್ಧವನು, ಧರಣಿಗೀ=ಧರಣಿಗೆ+ಈ

ಪುಷ್ಟಿಯಿತ್ತೊಡೇಂ=ಶಕ್ತಿ ಕೊಟ್ಟರೇನು, ಪಡೆಯಳೇನ್=ಪಡೆಯುವುದಿಲ್ಲವೇನು, ಅವನಿನ=ಅವನ, ಹುಯ್ದುಡುಬು=ಆವಿ ಅಥವಾ ಹಬೆಯಿಂದ ತಯಾರಾದ ಇಡ್ಲಿ, ತಪ್ಪಲೆಯೋ=ಪಾತ್ರೆಯೋ, ಪರಮೇಷ್ಠಿ=ಸೃಷ್ಟಿಕರ್ತ.

ಭೂಮಿ ತಾಯಿ ಈ ಸೃಷ್ಟಿಯಲ್ಲಿರುವ ಎಲ್ಲ ಪ್ರಾಣಿಗಳಿಗೂ ಪುಷ್ಟಿಕರವಾದ ಆಹಾರವನ್ನು ಇತ್ತು, ಇತ್ತುದರ ಅರ್ಧವನ್ನು ಮತ್ತೆ ಪಡೆದು ಬಿಡುತ್ತಾಳೆ. 'ತನಗೆ ಬೇಕಾದ್ದನ್ನು ನಮ್ಮಲ್ಲಿ ಬೇಯಿಸಿಕೊಳ್ಳಲಿಕ್ಕೆ ನಮ್ಮ ದೇಹವನ್ನೇನಾದರೂ ಹಬೆಯಿಂದ ಮಾಡುವ ಇಡ್ಲಿ ಪಾತ್ರೆಯಂತೆ ಸೃಷ್ಟಿಕರ್ತ ಉಪಯೋಗಿಸುತ್ತಾನೋ?? ಎಂದು ಒಂದು ಪ್ರಶ್ನೆಯನ್ನು ಕೇಳಿದ್ದಾರೆ, ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಒಂದು ಮರದಲ್ಲಿ ಚಿಗುರು, ಹೂ, ಕಾಯಿ, ಹಣ್ಣು ಮತ್ತು ಬೀಜ ಉತ್ಪತ್ತಿಯಾಗಬೇಕಾದರೆ, ಆ ಮರ ತನ್ನ ಬೇರುಗಳ ಮೂಲಕ ಧರೆಯಿಂದ ಸತ್ವವನ್ನು ಹೀರಿಕೊಳ್ಳುತ್ತದೆ. ಆ ಮರದ ಎಲೆಗಳನ್ನು ಶರದೃತುವಿನಲ್ಲಿ





ಉದುರುವಂತೆ ಮಾಡಿ, ಅವು ಮತ್ತೆ ಗೊಬ್ಬರದ ರೂಪದಲ್ಲಿ ಭೂಮಿಗೆ ಸತ್ವವಾಗುವುದರ ಮೂಲಕ, ಎಲೆಗಳಿಗೆ ತಾನಿತ್ತ ಸತ್ವದ ಅರ್ಧವನ್ನು ತಾನೇ ಪಡೆದು ಮತ್ತೆ ತನ್ನಲ್ಲಿ ಆ ಮರಕ್ಕೆ ಸಾರವನ್ನು ನೀಡುವ ಕ್ಷಮತೆಯನ್ನು ಭೂಮಿ ಬೆಳೆಸಿಕೊಳ್ಳುತ್ತದೆ.

ಸಮುದ್ರದ ನೀರು ತನ್ನ ಸತ್ವವನ್ನು ಆವಿಯ ರೂಪದಲ್ಲಿ ಗಗನಕ್ಕೆ ಕಳುಹಿಸಿ ಎಲ್ಲವನ್ನೂ ನೀರ ರೂಪದಲ್ಲಿ ಸುರಿಸಿ ಅರ್ಧದಷ್ಟನ್ನು ಧರಣಿಯ ಎಲ್ಲ ಗಿಡ ಮರಗಳಿಗೆ, ಪ್ರಾಣಿಪಕ್ಷಿಗಳಿಗೆ, ಕ್ರಿಮಿ ಕೀಟಗಳಿಗೆ ಉಣಬಡಿಸಿ ಮತ್ತಷ್ಟನ್ನು, ನದೀ ರೂಪದಲ್ಲಿ ತನ್ನ ಒಡಲಿಗೆ ಸೇರಿಸಿಕೊಳ್ಳುತ್ತದೆಯಲ್ಲವೇ? ಅದೇ ರೀತಿ ಭೂಮಿಯಲ್ಲಿ, ಅದರ ಸಾರವನ್ನು ಹೀರಿ, ಬೆಳೆಯುವ ಹಲವಾರು ಹೂ ಹಣ್ಣು ಕಾಯಿ, ಸೊಪ್ಪು ಮುಂತಾದವುಗಳೆಲ್ಲವೂ ಪ್ರಾಣಿಗಳ ದೇಹವನ್ನು ಆಹಾರದ

ರೂಪದಲ್ಲಿ ಸೇರಿ, ಪಚನವಾಗಿ ಸತ್ವವನ್ನು ಮತ್ತು ಶಕ್ತಿಯನ್ನೂ ಆ ದೇಹಗಳಿಗೆ ನೀಡುತ್ತದೆ. ಹಾಗೆ ದೇಹಗಳ ಸೇರಿದ ಆಹಾರದ ಅನುಪಯುಕ್ತ ಭಾಗವು ತ್ಯಾಜ್ಯವಾಗಿ ಮತ್ತೆ ಧರಣಿಗೆ ಸೇರಿ ಭೂಸತ್ವವಾಗುತ್ತದೆ ಎಂಬುದು ಎಲ್ಲರಿಗೂ ತಿಳಿದ ವಿಷಯವೇ ಅಲ್ಲವೇ?

ಹೀಗೆ ಪ್ರಕೃತಿ ತನಗೆ ಹೇಗೆ ಬೇಕೋ ಹಾಗೆ, ಏನು ಬೇಕೋ ಅದನ್ನು ಪಡೆದುಕೊಳ್ಳಲು ಒಂದು ಕ್ರಮವನ್ನು ನಿಯಮಿಸಿಕೊಂಡಿದೆ. ಇದು ಸೃಷ್ಟಿಕರ್ತನ ವೈಜ್ಞಾನಿಕ ಪ್ರಕ್ರಿಯೆ. ನಾವು 'ನಾನು ತಿನ್ನುತ್ತೇನೆ' ಎಂದು ಹೇಳಿಕೊಳ್ಳುತ್ತೇವೆ. ಆದರೆ ವಾಸ್ತವದಲ್ಲಿ ಈ ದೇಹವನ್ನು ಧಾರಣೆ ಮಾಡಿದ ಆತ್ಮಗಳ ಸಮಗ್ರ ರೂಪವಾದ ಆ ಪರಮಾತ್ಮನು ತನಗೆ ಬೇಕಾದ್ದನ್ನು, ಬೇಕಾದಷ್ಟನ್ನು ಬೇಕಾದ ಕಡೆಯಿಂದ ತೆಗೆದುಕೊಳ್ಳುವ ಒಂದು ವ್ಯವಸ್ಥೆಯನ್ನು ತಾನೇ ಸೃಷ್ಟಿಸಿಕೊಂಡು, ಅದನ್ನು ತಾನೇ ನಡೆಸುತ್ತಾ, ಆನಂದದಿಂದ ಅನುಭವಿಸುತ್ತಿದ್ದಾನೆ.

ಹಾಗಾಗಿ ಸತ್ವವನ್ನು ಕೊಡುವಿಕೆ ಮತ್ತು ಪಡೆದುಕೊಳ್ಳುವಿಕೆಯ, ಈ ನೈಸರ್ಗಿಕ ಮತ್ತು ವೈಜ್ಞಾನಿಕ ಚಕ್ರವನ್ನು ಪರಮಾತ್ಮ ಸೃಷ್ಟಿಸಿ, ಎಲ್ಲವೂ ಸಮರ್ಪಕವಾಗಿರುವಂತೆ ಮಾಡಿ ತಾನೇ ಅದರೊಳಗೆ ಇದ್ದು ಅನುಭವಿಸುತ್ತಿದ್ದಾನೆ. ನಾವೆಲ್ಲಾ ಅವನ ಈ ಪ್ರಕ್ರಿಯೆಗೆ ನಿಮಿತ್ತ ಮಾತ್ರರು. ನಾವೆಲ್ಲಾ ಉಪಕರಣಗಳು ಅಷ್ಟೇ. ನಾವೂ ಈ ಚಕ್ರದ ಒಂದು ಭಾಗವಾಗಿದ್ದೇವೆ ಎಂದು, ಪರಮಾತ್ಮನಿಗೆ ತುಂಬು ಹೃದಯದ ಕೃತಜ್ಞತೆಯನ್ನು ತೋರಬೇಕು.

**ಮುಕ್ತಕ-236**

**ತರುಜಾತಿ ಖಗಜಾತಿ ಮೃಗಜಾತಿಗಳು ನೂರು ।**
**ನರಜಾತಿ ಮಿಕ್ಕ ಜಾತಿಗಳಿಂದ ಬೇರೆ ॥**
**ನರರೋಟೋರೋರ್ವನುಂ ತಾನೊಂದು ಬೇರೆ ಜಗ ।**
**ಬೆರಕೆ ಸಾಮ್ಯಾಸಾಮ್ಯ – ಮಂಕುತಿಮ್ಮ ॥**

ನರರೋಳೋರೊರ್ವನುಂ=ನರರ+ಒಳು+ಓರೋರ್ವನು, ಸಾಮ್ಯಾಸಾಮ್ಯ=ಸಾಮ್ಯ+ಅಸಾಮ್ಯ

ಗಿಡಗಳ ಜಾತಿ, ಪಕ್ಷಿಗಳ ಜಾತಿ, ಪ್ರಾಣಿಗಳ ಜಾತಿಗಳು ನೂರಾರು ಇವೆ ಆದರೆ ಮನುಷ್ಯ ಜಾತಿ ಇವೆಲ್ಲಕ್ಕಿಂತ ಭಿನ್ನ. ಪ್ರತಿಯೊಬ್ಬ ಮನುಷ್ಯನೂ ಒಂದು ಜಗದಂತೆ ಇದ್ದಾನೆ. ಇವನು ಸಾಮ್ಯದ ಮತ್ತು ಅಸಾಮ್ಯದ ಬೆರಕೆ ಎಂದು ಉಲ್ಲೇಖಮಾಡಿದ್ದಾರೆ, ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಗಿಡಮರಗಳ, ಪಕ್ಷಿಗಳ, ಜಲಚರಗಳ, ಕ್ರಿಮಿ, ಕೀಟಗಳ ಮತ್ತು ಪ್ರಾಣಿಗಳ ಪ್ರಭೇಧಗಳು ಸಾವಿರಾರು ಉಂಟು. ಒಂದೊಂದಕ್ಕೆ ಒಂದೊಂದು ವೈಚಿತ್ರ್ಯವನ್ನಿಟ್ಟು, ಆ ಪರಮಾತ್ಮ ಈ ಜಗತ್ತನ್ನು ನಯನ ಮನೋಹರವಾಗಿ ಮಾಡಿದ್ದಾನೆ. ಎಷ್ಟೊಂದು ವಿಧಗಳು, ಪ್ರಭೇಧಗಳು, ಬಣ್ಣಗಳು, ಆಕಾರಗಳು. ಆಹಾ! ಅವನೊಬ್ಬ ಅದ್ಭುತ ಕಲಾವಿದ ಎನ್ನಲಿಕ್ಕೆ ಸಂದೇಹವೇ ಇಲ್ಲ. ಪ್ರಕೃತಿಯ ಸೌಂದರ್ಯವನ್ನು ಅತ್ಯದ್ಭುತವಾಗಿ ನಿರ್ಮಿಸಿ, ಚೇತನದ ರೂಪದಲ್ಲಿ ಸೃಷ್ಟಿಯ ಎಲ್ಲದರಲ್ಲೂ ತಾನು ನುಸುಳಿ ಅವುಗಳ ವೈವಿಧ್ಯತೆಯನ್ನು ತಾನೂ ಅನುಭವಿಸುತ್ತಾ ಆನಂದದಿಂದಿದ್ದಾನೆ.

ಈ ಎಲ್ಲ ಸೃಷ್ಟಿಯಲ್ಲಿ ಮನುಷ್ಯ ಮಾತ್ರ ಮಿಕ್ಕ ಎಲ್ಲದಕ್ಕಿಂತ ಭಿನ್ನ ಎನ್ನುತ್ತಾರೆ ಮಾನ್ಯ ಗುಂಡಪ್ಪನವರು. ಇಲ್ಲಿ ನಾವು ನೋಡಬೇಕಾದ ಅಂಶವೆಂದರೆ ಪ್ರತಿ ಜೀವಿಗೂ 'ನಾಲ್ಕು ಅಂಶಗಳಲ್ಲಿ ಸಾಮ್ಯ ಉಂಟು. ಒಂದು- ದೇಹ, ಎರಡು-ಮನಸ್ಸು, ಮೂರು-ಬುದ್ಧಿ, ನಾಲ್ಕು-ಜೀವ ಅಥವಾ ಚೇತನ. ದೇಹದ ಆಕಾರ, ಮನಸ್ಸು ಬುದ್ಧಿಗಳ ವಿಕಾಸದಲ್ಲಿ ವ್ಯತ್ಯಾಸ. ಆತ್ಮದಲ್ಲಿ ಸಂಪೂರ್ಣ ಸಾಮ್ಯ, ಅನ್ಯ ಜೀವಿಗಳಿಗೂ ಮನುಷ್ಯನಿಗೂ ವ್ಯತ್ಯಾಸವೇನೆಂದರೆ, ಬೇರೆಲ್ಲ ಜೀವಿಗಳೂ ಭೂಮಿಗೆ ಸಮಾನಾಂತರವಾಗಿದ್ದರೆ (parallel) ಮನುಷ್ಯ ಮಾತ್ರ ಲಂಬವಾಗಿದ್ದಾನೆ (Perpendicular), ಅನ್ಯಪ್ರಾಣಿಗಳಿಗಿಂತ ಮನಸ್ಸು ಬುದ್ದಿಗಳ ವಿಕಾಸದಲ್ಲಿ ಬಹಳ ಮುಂದಿದ್ದಾನೆ. ಇವನ ಆಲೋಚನೆಗಳೆಲ್ಲ ಊರ್ಧ್ವಮುಖವಾಗಿವೆ. ಮೂಲ ಸೃಷ್ಟಿಯನ್ನು ಬಿಟ್ಟರೆ ಇಲ್ಲಿರುವುದೆಲ್ಲ, ಅಂದರೆ, ಮಾತು, ಭಾಷೆ, ಕಲೆ ಸಂಗೀತ, ಸಾಹಿತ್ಯ ಮುಂತಾದವುಗಳೆಲ್ಲ, ಈ ನಮ್ಮ ಮನುಷ್ಯನ ಸೃಷ್ಟಿಯೇ ಅಲ್ಲವೇ?

"ನರರೋಳೋರೊರ್ವನುಂ ತಾನೊಂದು ಬೇರೆ ಜಗ" ಎಂದು ಗುಂಡಪ್ಪನವರು ಈ ಮುಕ್ತಕದಲ್ಲಿ ಹೇಳಿದ ಹಾಗೆ, ಪ್ರತಿ ಮಾನವನೂ ಒಂದೊಂದು ಭಿನ್ನ ವ್ಯಕ್ತಿತ್ವವನ್ನು ಹೊತ್ತೇ ಈ ಜಗಕ್ಕೆ ಬರುತ್ತಾನೆ. ಪ್ರತಿಯೊಬ್ಬನ ಯೋಚನೆಯೂ ಭಿನ್ನ, ಪ್ರತಿಯೊಬ್ಬನ ಕ್ರಿಯಾಶೀಲತೆಯೂ ಭಿನ್ನ, ಹಲವರು ಅತಿಕ್ರಿಯಾಶೀಲರು, ಹಲವರು ಸೋಂಭೇರಿಗಳು. ಆದರೆ ಪ್ರತಿಶತ ಹೆಚ್ಚು ಜನರ ಹುಟ್ಟು, ಜೀವನ ಮತ್ತು ಅಂತ್ಯ ಗಣನೆಗೆ ಬರದೆ, ಅವರ ಚರಿತ್ರೆ ದಾಖಲಾಗದೆಯೇ ಮುಗಿಯುತ್ತದೆ. ಕೇವಲ ಕೆಲವರು ತಮ್ಮ ಒಳ್ಳೆಯ ಅಥವಾ ಕೆಟ್ಟ ಕಾರ್ಯಗಳಿಂದ ಜಗದ್ವಿಖ್ಯಾತರಾಗುತ್ತಾರೆ.

ಈ ರೀತಿಯ ವಿಕಾಸದ ಹಲವಾರು ಹಂತಗಳಲ್ಲಿರುವ ಸೃಷ್ಟಿಯ ಒಂದೊಂದು ಪ್ರಭೇಧವೂ ಕೆಲವು ಕಡೆ ಸಾಮ್ಯತೆಯನ್ನೂ ಕೆಲವು ಕಡೆ ಭಿನ್ನವಾಗಿಯೂ ಇದೆ. ಇದೆಲ್ಲ ಆ ಪರಮಾತ್ಮನ ಅದ್ಭುತ ಕಲಾತ್ಮಕ ಕೃತಿ. ಇಂತಹ ಜಗದಲ್ಲಿ ನಾವಿದ್ದೇವೆ ಎನ್ನುವುದೇ ಸಮಾಧಾನ. ಇದನ್ನು ಕಾಪಾಡುವ ಹೊಣೆ, ಕ್ರಿಯಾಶೀಲತೆಯಿಂದ ಕೂಡಿದ ಬುದ್ಧಿವಂತಿಕೆಯ ಮಾನವರದು ಅಲ್ಲವೇ?





**ಮುಕ್ತಕ-237**

**ನೆಲವೊಂದೆ, ಹೊಲ ಗದ್ದೆ ತೋಟ ಮರಳೆರೆ ಬೇರೆ |**
**ಜಲವೊಂದೆ, ಸಿಹಿಯುಪ್ಪು ಜವುಗೂಟೆ ಬೇರೆ ||**
**ಕುಲವೊಂದರೊಳೆ ಸೋದರವ್ಯಕ್ತಿಗುಣ ಬೇರೆ |**
**ಹಲವುಮೊಂದುಂ ಸಾಜ – ಮಂಕುತಿಮ್ಮ||**

ನೆಲವೊಂದೆ=ನೆಲವು+ಒಂದೆ, ಮರಳೆರೆ=ಮರಳು+ಎರೆ, ಜಲವೊಂದೆ=ಜಲವು+ಒಂದೆ, ಜವುಗೂಟೆ=ಜವುಗು+ಊಟೆ, ಕುಲವೊಂದರೊಳೆ=ಕುಲವು+ಒಂದರೊಳೆ,

ಹಲವುಮೊಂದುಂ=ಹಲವು+ಒಂದುಂ.

ಎರೆ+ಫಲವತ್ತಾದ ಭೂಮಿ, ಜವುಗೂಟೆ=ನೀರ ಒರತೆ, ಸಾಜ=ಸಹಜ.

ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ ಜಗತ್ತಿನ ವೈವಿಧ್ಯತೆಯ ಒಂದು ಆಯಾಮವನ್ನು ನಮಗೆ ಪರಿಚಯ ಮಾಡುತ್ತಾರೆ. ಇಲ್ಲಿ ನೆಲವೊಂದೆ ಆದರೂ ಅದನ್ನು ಹೊಲ, ಗದ್ದೆ, ತೋಟ ಎಂದು ಅಲ್ಲಿನ ಮಣ್ಣಿನ ಗುಣ, ದೊರಕುವ ನೀರಿನ ಗುಣ, ಮತ್ತು ಪ್ರಮಾಣಗಳ ಆಧಾರದ ಮೇಲೆ ವಿಂಗಡಿಸುತ್ತಾರೆ. ಒಂದೇ ನೆಲವಾದರೂ ಒಂದೇ ರೀತಿಯ ವಾತಾವರಣವಿದ್ದರೂ, ಅಲ್ಲಿ ಬೆಳೆಯುವ ಬೆಳೆಗಳ ಮತ್ತು ಗಿಡಗಳ ವೈವಿಧ್ಯತೆ ಬಹಳ ಅದ್ಭುತ. ಇದು ಸೃಷ್ಟಿಯ

ವೈವಿಧ್ಯತೆ. ಒಂದೇ ನೆಲ, ಒಂದೇ ಜಲ ಮತ್ತು ಒಂದೇ ವಾತಾವರಣವನ್ನು ಹಂಚಿಕೊಂಡರೂ ಒಂದು ಮಾವು ಮತ್ತೊಂದು ಬೇವು. ಇದೇ ರೀತಿ ಒಂದೇ ನೆಲವನ್ನು ಹಂಚಿಕೊಂಡ, ಒಂದೇ ನೀರನ್ನು ಕುಡಿವ, ಒಂದೇ ಗಾಳಿಯನ್ನು ಸೇವಿಸುವ ಮನುಷ್ಯರಲ್ಲಿ ಎಷ್ಟೊಂದು ಭೇದ ಎಂಬ ವಿಚಾರವನ್ನು ಸುಂದರವಾಗಿ ಪ್ರಸ್ತಾಪಮಾಡಿದ್ದಾರೆ ಮಾನ್ಯ ಡಿ.ವಿ.ಜಿ.ಯವರು.

ಮಾನವರ ವಿಚಾರವನ್ನು ತೆಗೆದುಕೊಳ್ಳೋಣ. ಒಂದು ತಾಯಿಯ ಗರ್ಭವನ್ನು ಹಂಚಿಕೊಂಡು ಜನಿಸಿದ ಮಕ್ಕಳಲ್ಲಿ ಎಷ್ಟೊಂದು ಭೇದ. ಬಣ್ಣದಲ್ಲಿ, ಆಕಾರದಲ್ಲಿ, ರೂಪದಲ್ಲಿ, ಬುದ್ಧಿಯಲ್ಲಿ, ಸಂಸ್ಕಾರಗಳಲ್ಲಿ ಒಬ್ಬರಿದ್ದಂತೆ ಒಬ್ಬರಿಲ್ಲದಿರುವುದು ಬಹಳ ಸ್ವಾಭಾವಿಕ. ಸಣ್ಣ ವಯಸ್ಸಿನಲ್ಲಿ ಒಂದೇ ರೀತಿ ಕಂಡರೂ ಬೆಳೆಬೆಳೆಯುತ್ತಾ ಭಿನ್ನವಾಗಿ ಬಿಡುತ್ತಾರೆ. ಅದಕ್ಕೆ ಅವರರವರು ಬೆಳೆಯುವ ವಾತಾವರಣ, ಕಲಿಯುವ ವಿದ್ಯೆ, ಸ್ನೇಹಿತರ ಮತ್ತು ಬಂಧುಗಳ ಗುಂಪು ಹೀಗೆ ಹತ್ತು ಹಲವಾರು ವಿಷಯಗಳ ಪ್ರಭಾವವೇ ಕಾರಣ. ಇದೂ ಕೂಡ ಸಹಜವೇ.

ಮನುಷ್ಯನಿಗೆ ಮಾತ್ರ ತನ್ನ ಗುಣಗಳನ್ನು ಉತ್ತಮಗೊಳಿಸಿಕೊಳ್ಳಲು, ಸು-ಸಂಸ್ಕಾರಗಳನ್ನು ಪಡೆದುಕೊಳ್ಳಲು, ಚಿಂತನೆ, ಆಲೋಚನೆಗಳಿಂದ ತನ್ನ ಮತ್ತು ಇತರರ ಜೀವನವನ್ನು ಸುಂದರವಾಗಿಸಲು ಸಾಧ್ಯವಿದೆ. ವೈವಿಧ್ಯತೆ ಸಹಜವಾದರೂ ಸಾಮ್ಯತೆಯನ್ನು ತರುವ ಸಾಧ್ಯತೆ ಇದೆ. ಇಡೀ ಜಗತ್ತಿನಲ್ಲಿ ಈ ರೀತಿಯ ಕ್ಷಮತೆ ಇರುವುದು ಕೇವಲ ಮಾನವನಿಗೆ, ಅನ್ಯ ಪ್ರಾಣಿಗಳಿಗೆ ಅದು ಸಾಧ್ಯವಿಲ್ಲ. ಮಾನವನ ಬಳಿ ತನ್ನ ಮತ್ತು ಇತರರ ಜೀವನವನ್ನು, ಅದರರಿಂದಾಗಿ ಒಟ್ಟು ಸಮುದಾಯವನ್ನು ಸುಂದರವನ್ನಾಗಿಸಲು ವೇದ, ಉಪನಿಷತ್ತು, ಪುರಾಣ, ಇತಿಹಾಸ, ಸಾಹಿತ್ಯ, ಕಲೆ ಮುಂತಾದ ಸಾಮಗ್ರಿಗಳು ಸಾಕಷ್ಟು ಇವೆ. ಆದರೆ ಇಂದಿನ ಮಾನವ ಅವುಗಳನ್ನೆಲ್ಲ ಬಿಟ್ಟು ಕೇವಲ ಧನ ದಾಹದಿಂದ, ಸ್ವಾರ್ಥದಿಂದ ಸ್ವಾಭಾವಿಕವಾಗಿರುವ ಸಾಮ್ಯತೆಯನ್ನೂ ಸಹ ಹಾಳುಗೆಡವಿ, ಭೇದಗಳನ್ನು ಅಧಿಕಗೊಳಿಸಿ ಇಡೀ ಜಗತ್ತನ್ನೇ ವಿನಾಶದ ಅಂಚಿಗೆ ಕೊಂಡು ಹೋಗುತ್ತಿದ್ದಾನೆ.

ವಾಚಕರೆ ನಮ್ಮ ನಮ್ಮ ವೃತ್ತದಲ್ಲಿ ಸಾಧ್ಯವಾದ ಮಟ್ಟಿಗೆ ಸಹಜತೆಯಿಂದ 'ಸಂ ಗಚ್ಚತ್ವಂ, ಸಂ ವದತ್ವಂ' ಎನ್ನುವ ರೀತಿಯಲ್ಲಿ ನಮ್ಮಲ್ಲಿರುವ ಕೃತಕ ಭೇದಗಳನ್ನು ತೊರೆದರೆ ಬಾಳು ಸುಂದರವಾದೀತು. ಅಂತಹ ಪ್ರಯತ್ನವನ್ನು ಎಲ್ಲರೂ ಮಾಡಬೇಕು.

**ಮುಕ್ತಕ-238**

**ಮನುಜಕುಲವೊಂದೊಬ್ಬನಿನ್ನೊಬ್ಬನಂತಿಲ್ಲ |**
**ತನುವಂಗಗಳೊಳೊಂದು ರೂಪ ಗುಣ ಬೇರೆ ||**
**ಮನದೊಳೊಬ್ಬೊಬ್ಬನೊಂದೊಂದು ಪ್ರಪಂಚವಿಂ |**
**ತನುವೇಕದೊಳ್ ಬಹಳ - ಮಂಕುತಿಮ್ಮ ||**

ಮನುಜಕುಲವೊಂದೊಬ್ಬನಿನ್ನೊಬ್ಬನಂತಿಲ್ಲ=ಮನುಜಕುಲ+ಒಂದು+ಒಬ್ಬನು+ಇನೊಬ್ಬನಂತೆ+ಇಲ್ಲ,
ತನುವಂಗಗಳೊಳೊಂದು=ತನು+ಅಂಗಗಳು+ಒಂದು,
ಮನದೊಳೊಬ್ಬೊಬ್ಬನೊಂದೊಂದು=ಮನದೊಳು+ಒಬ್ಬಬ್ಬನದು+ಒಂದೊಂದು,
ಪ್ರಪಂಚವಿಂತನುವೇಕದೊಳ್=ಪ್ರಪಂಚವು+ಇಂತು+ಅನುವು+ಏಕದೊಳ್.
ಅನುವು+ಅನೇಕವು.

ಮನುಷ್ಯರಲ್ಲಿ ಒಬ್ಬನಿದ್ದಂತೆ ಇನ್ನೊಬ್ಬನಿಲ್ಲ. ದೇಹದ ಅಂಗಾಂಗಗಳೆಲ್ಲ ಒಂದೇ ರೀತಿ ಇದ್ದರೂ ರೂಪ ಬೇರೆ ಮತ್ತು ಗುಣಗಳೂ ಬೇರೆ ಬೇರೆ. ಮನದೊಳಗೆ ಪ್ರತಿಯೊಬ್ಬನದೂ ಒಂದೊಂದು ವಿಚಾರ. ಅದೇ ಒಂದು ಬೇರೆ ಪ್ರಪಂಚವಿದ್ದಂತೆ. ಇಡೀ ಜಗತ್ತೇ ಅನೇಕತೆಯಲ್ಲಿ ಏಕತೆಯ ರೂಪ ಎಂಬ ವಿಚಾರವನ್ನು ಪ್ರಸ್ತಾಪಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಮನುಷ್ಯಕುಲದಲ್ಲಿ ಒಬ್ಬರಿದ್ದಂತೆ ಮತ್ತೊಬ್ಬರಿರುವುದಿಲ್ಲ. ಎಲ್ಲರಿಗೂ ಅವೇ ಕೈ ಕಾಲುಗಳು, ಕಣ್ಣು ಮೂಗುಗಳಿದ್ದರೂ, ಪ್ರತಿಯೊಬ್ಬರ ರೂಪ, ಅಕಾರ, ಬಣ್ಣ ಬೇರೆ ಬೇರೆ ಅಲ್ಲವೇ? ಇದು ಬಾಹ್ಯ ವ್ಯತ್ಯಾಸಗಳು. ಆಂತರಿಕವಾಗಿ ಗುಣ ವ್ಯತ್ಯಾಸವು ಅತ್ಯಧಿಕ. ಹೊರ ರೂಪದಲ್ಲಿ ಎಷ್ಟು ಭಿನ್ನತೆ ಉಂಟೋ ಅದರ ಸಾವಿರ ಪಟ್ಟು ಆಂತರಿಕ ಗುಣ ವ್ಯತ್ಯಾಸವುಂಟು. ಈ ಜಗತ್ತಿನಲ್ಲಿರುವ ಬೇರೆ ಬೇರೆ ಪ್ರದೇಶದಲ್ಲಿರುವ ಜನರಲ್ಲಿ ಸ್ವಭಾವ, ಗುಣ,

ರೂಪದ ವ್ಯತ್ಯಯಗಳು ಆಯಾ ಪ್ರದೇಶದ ವಾತಾವರಣ, ಅಲ್ಲಿನ ಸಾಮಾಜಿಕ ಬೆಳವಣಿಗೆ, ಸಂಸ್ಕೃತಿಯ ವಿಕಾಸ ಮುಂತಾದವುಗಳ ಮೇಲೆ ನಿರ್ಭರವಾಗಿರುತ್ತದೆ. ನೋಡಲು ಒಂದೇ ರೀತಿ ಕಂಡರೂ ವ್ಯಕ್ತಿ ವ್ಯಕ್ತಿಗಳಲ್ಲಿ ವಿಪರೀತವಾದ ವ್ಯತ್ಯಾಸಗಳು ಇರುತ್ತವೆ. ಇವೆಲ್ಲ ಬಾಹ್ಯ ರೂಪ ಅಥವಾ ಶಾರೀರಿಕ ವಿಷಯಗಳಿಗೆ ಅನ್ವಯವಾಗುವಂಥಾ ವಿಚಾರಗಳು.

ಇನ್ನು ಮಾನಸಿಕ ಮತ್ತು ಭೌದ್ಧಿಕ ವಿಚಾರಗಳನ್ನು ನೋಡಿದರೆ, ರೂಪದಲ್ಲಾದರೂ ಸಾಮ್ಯ ಇರುವ ವ್ಯಕ್ತಿಗಳು ಸಿಗಬಹುದು. ಆದರೆ ಸ್ವಭಾವ ಸಾಮ್ಯತೆ ಇರುವ ವ್ಯಕ್ತಿಗಳು ಸಿಗುವುದೇ ಇಲ್ಲ. ಏಕೆಂದರೆ ಒಬ್ಬಬ್ಬ ವ್ಯಕ್ತಿಯೂ ಭಿನ್ನ ವಿಚಾರಗಳ, ಯೋಚನೆಗಳ ಮತ್ತು ಆಲೋಚನೆಗಳ ಒಂದು ಬೃಹತ್‌ದ್ವೀಪ. ರೂಪ ಸೌಂದರ್ಯವಿದ್ದವರಲ್ಲಿ ಭಾವ ಸೌಂದರ್ಯವಿಲ್ಲದಿರಬಹುದು. ರೂಪವಿಲ್ಲದಿರುವವರಲ್ಲಿ ಸುಂದರ ಮನಸ್ಸು ಇರಬಹುದು. ರೂಪಕ್ಕೂ





ಮನಸ್ಸಿನ ಸುಂದರತೆಗೂ ಯಾವ ಸಂಬಂಧವೂ ಇಲ್ಲ ಅಲ್ಲವೇ? ಆದರೆ ಪ್ರತಿಯೊಬ್ಬರ ವಿಚಾರವೂ ಭಿನ್ನ ಭಿನ್ನ, ಪ್ರೀತಿಯ, ಸ್ನೇಹದ, ಕರುಣೆಯ, ಕೋಪದ, ದ್ವೇಷದ, ಮೋಸದ, ಕ್ರೌರ್ಯದ, ಅನುಕಂಪ ಮುಂತಾದ ಭಾವಗಳ ಸಮಗ್ರ ರೂಪವೇ ಎಲ್ಲ ಮಾನವರ ಮನಸ್ಸೂ. ಅದೇ ಒಂದು ಲೋಕ. ಲೋಕದಲ್ಲಿ ಇರುವ ಭಿನ್ನತೆಯು ಪ್ರತಿಮಾನವರಲ್ಲೂ ಪ್ರತಿಬಿಂಬಿಸುತ್ತದೆ ಮತ್ತು ಮಾನವರ ಮನಸ್ಸಿನ ಭಾವಗಳು ಲೋಕದಲ್ಲಿ ಪ್ರತಿಬಿಂಬಿಸುತ್ತದೆ. ಇದು ಪರಸ್ಪರ.

ನಮ್ಮ ಮನಸ್ಸುಗಳಲ್ಲಿ ಶುದ್ಧ ವಿಚಾರಗಳಿದ್ದರೆ ಅವನ್ನು ನಾವು ಜಗತ್ತಿಗೆ ಹಾಗೇ ಬಿಂಬಿಸಬಹುದು. ಅಂದರೆ ಅನೇಕರಿಂದ ಕೂಡಿದ ಒಟ್ಟು ಸಮುದಾಯದ ಸಂಸ್ಕಾರಗಳು ಮತ್ತು ಸಂಸ್ಕೃತಿ, ಆ ಸಮುದಾಯದಲ್ಲಿರುವ ಜನರ ವೈಯಕ್ತಿಕ ಸಂಸ್ಕಾರ ಮತ್ತು ಸಂಸ್ಕೃತಿಗಳ ಮೇಲೆ ನಿರ್ಭರವಾಗಿರುತ್ತದೆ. ನಮ್ಮ ಸಮಾಜ ಉತ್ತಮವಾಗಿರಬೇಕೆಂದು ಆಶಿಸಿದರೆ ಮೊದಲು ನಾವು ಆಂತರಿಕ ಶುದ್ಧತೆಯನ್ನು ಸಾಧಿಸಬೇಕು ಮತ್ತು ಆ ಶುದ್ಧತೆಯನ್ನು ಸಮಾಜಕ್ಕೆ

ಬಿಂಬಿಸಬೇಕು. ಆಗ ಇಡೀ ಸಮುದಾಯವೇ ಶುದ್ಧತೆಯನ್ನು ಪ್ರತಿಬಿಂಬಿಸುತ್ತದೆ ಅಂತಹ ಪ್ರಯತ್ನವನ್ನು ನಾವೂ ಮಾಡೋಣವೆ?

# ಸಮತಾ ತತ್ತ್ವ 239-243

**ಮುಕ್ತಕ-239**

**ಸಮವಿಲ್ಲ ಸೃಷ್ಟಿಯಲ್ಲಿ ನರನಂತೆ ನರನಿಲ್ಲ।**
**ಕ್ಷಮೆಯುಮವಳೊಳಗಿಲ್ಲ, ಕರ್ಮದಂತೆ ಫಲ ॥**
**ಕ್ರಮವೊಂದ ನೀಮಾಗಿಸಿರಿ ನೋಳ್ಪೆನಾನೆನುತೆ।**
**ನಮಗವಳ್ ಪ್ರಸ್ಪರ್ಧಿ – ಮಂಕುತಿಮ್ಮ ॥**

ಸಮವಿಲ್ಲ=ಸಮವು+ಇಲ್ಲ, ಕ್ಷಮೆಯುಮವಳೊಳಗಿಲ್ಲ=ಕ್ಷಮೆಯುಂ+ಅವಳೊಳಗೆ+ಇಲ್ಲ,
ನೀಮಾಗಿಸಿರಿ=ನೀಮ+ಆಗಿಸಿರಿ, ನೋಳ್ಪೆನಾನೆನುತೆ=ನೋಳ್ಪೆ+ನಾನು+ಎನುತೆ,
ನಮಗವಳ್=ನಮಗೆ+ಅವಳ್.
ನೀಮ-ನಿಯಮ, ನೋಳ್ಪೆ=ನೋಡುತ್ತೇನೆ, ಪ್ರಸ್ಪರ್ಧಿ=ಪ್ರತಿಸ್ಪರ್ಧಿ

ಅಸಮತೆಯೇ ಸೃಷ್ಟಿಯ ಗುಣ. ಹಾಗಾಗಿ ಸೃಷ್ಟಿ ಸಮವಿಲ್ಲ ಅಥವಾ ಸೃಷ್ಟಿಯಲ್ಲಿ ಸಮಾನತೆ ಇಲ್ಲ. ಒಬ್ಬ ಮನುಷ್ಯ ಮತ್ತೊಬ್ಬ ಮನುಷ್ಯನಂತೆ ಇಲ್ಲ. ಪ್ರತಿಯೊಬ್ಬನೂ ಅವನವನ ಕರ್ಮಾನುಸಾರವಾಗಿ ತನ್ನ ಕರ್ಮಫಲವನ್ನು ಅನುಭವಿಸುತ್ತಾನೆ. ಹಾಗೇನಾದರೂ ಪ್ರಕೃತಿಗೆ ವಿರುದ್ಧವಾಗಿ ನಡೆಯುತ್ತೇನೆಂದು ಸೃಷ್ಟಿಗೆ ಒಂದು ಸ್ಪರ್ಧೆಯನ್ನು ಕೊಟ್ಟರೆ, ಸೃಷ್ಟಿಯೇ ನಮಗೆ ಪ್ರತಿಸ್ಪರ್ಧಿಯಾಗುತ್ತದೆ ಎಂದು ಮಾನ್ಯ ಗುಂಡಪ್ಪನವರು ನಮಗೆ ಅರುಹುತ್ತಾರೆ ಈ ಮುಕ್ತಕದಲ್ಲಿ.

ಈ ಜಗತ್ತು ಒಂದೇ ರೀತಿಯಲ್ಲಿ ಇಲ್ಲ. ಕೋಟ್ಯಾಂತರ ಭಿನ್ನತೆಗಳ ಒಟ್ಟು ಸಮೂಹವೇ ಈ ಜಗತ್ತು. ರೂಪ ಭಿನ್ನತೆಯಿಂದ ಸೃಷ್ಟಿಯಲ್ಲಿ ಕೋಟಿ ಕೋಟಿ ಭಿನ್ನತೆಗಳನ್ನು ನಾವು ನೋಡುತ್ತೇವೆ. ಆದರೆ ಒಂದೊಂದು ರೂಪದಲ್ಲೂ ಆಂತರಿಕ, ಭಾವ, ಯೋಚನೆ, ಆಲೋಚನೆ, ಗುಣ, ಸ್ವಭಾವ ಮುಂತಾದವುಗಳ ಅಪಾರ

ಭಿನ್ನತೆ ನಮಗೆ ಗೋಚರವಾಗುತ್ತದೆ. "ಏಕ"ನಾಗಿದ್ದ ತಾನು "ಬಹಳವಾಗಿ ಪ್ರಕಟವಾಗಬೇಕು ಎಂದು ಪ್ರಕೃತಿಯ ರೂಪವನ್ನು ಹೊತ್ತು, ಪರಮಾತ್ಮನೇ ಪ್ರಕಟವಾದಮೇಲೆ, ಇಲ್ಲಿ ಭಿನ್ನತೆಯು ಸಹಜವಲ್ಲವೇ? ಈ ರೀತಿಯ ಭಿನ್ನತೆಯನ್ನೆಲ್ಲ ಸೇರಿಸಿ ಮಾನ್ಯ ಗುಂಡಪ್ಪನವರು "ಸಮವಿಲ್ಲ ಸೃಷ್ಟಿಯಲ್ಲಿ ನರನಂತೆ ನರನಿಲ್ಲ" ಎಂದಿದ್ದಾರೆ. ಪ್ರಾಣಿಗಳು ಪಕ್ಷಿಗಳು ಗಿಡಗಳು, ಮರಗಳು ಹೂಗಳು ಹಣ್ಣುಗಳು ಕೀಟಗಳು, ಕಲ್ಲು ಗುಡ್ಡಗಳು, ಪಂಚಭೂತಗಳು ಹೀಗೆ ಎಲ್ಲದರಲ್ಲೂ ಆ ಪರಮಾತ್ಮನೇ, ಪ್ರಕಟವಾಗಿದ್ದಾನೆ. ಅಷ್ಟೇ ಅಲ್ಲ, ಪ್ರಕೃತಿಯ ಸಹಾಯದಿಂದ ತನ್ನ ರೂಪವನ್ನು ಬದಲಾಯಿಸಿಕೊಳ್ಳುತ್ತಿದ್ದಾನೆ. ಏಕತೆಯೂ ಅವನೇ, ಭಿನ್ನತೆಯೂ ಅವನೇ. ತನ್ನದೇ ಒಂದು ನಿಯಮವನ್ನು ಸೃಷ್ಟಿಸಿಕೊಂಡಿದ್ದಾನೆ. ಅದನ್ನು ಪ್ರಶ್ನಿಸಲು ನಮಗೆ ಅಧಿಕಾರವೂ ಇಲ್ಲ ಯೋಗ್ಯತೆಯೂ ಇಲ್ಲ.

ನಮ್ಮನ್ನೂ ಸೇರಿಸಿ ಈ ಜಗತ್ತಿನಲ್ಲಿರುವುದೆಲ್ಲ ಪ್ರಕೃತಿಯ ನಿಯಮಗಳಿಗೆ ಅಧೀನವಾಗಿ ಬಾಳಬೇಕು. ಇದಕ್ಕೆ ಯಾವ ರೀತಿಯ ರಿಯಾಯತಿಯೂ ಇಲ್ಲ. ಪ್ರತಿಯೊಬ್ಬರೂ ಅವರವರ ಕರ್ಮಫಲವನ್ನು ಅನುಭವಿಸಬೇಕು. ಕರ್ಮಫಲವೆಂದರೆ, ಒಂದು ಕ್ರಿಯೆಗೆ ಒಂದು ಪ್ರತಿಕ್ರಿಯೆ. ಇದು ಕರ್ಮ ಫಲ. ನಾವು ಎಂದೋ ಮಾಡಿದ ಕ್ರಿಯೆಯ ಪ್ರತಿಫಲ ಅಂದೇ ಸಿಕ್ಕಿರಬಹುದು, ಇಂದು ಸಿಗಬಹುದು ಅಥವಾ ಎಂದೋ ಸಿಗಬಹುದು. ಇದು ಬ್ರಹ್ಮ(ಸೃಷ್ಟಿಯ) ರಹಸ್ಯ. ನಮಗೆ ಸುಲಭದಲ್ಲಿ ಅರ್ಥವಾಗದು.

ಹಾಗೆ ನಾವು ಪ್ರಕೃತಿ ನಿಯಮಕ್ಕೆ ವಿರುದ್ಧವಾಗಿ ಹೋದರೆ ಪ್ರಕೃತಿಯೇ ನಮ್ಮನ್ನು ತನ್ನ ದಾರಿಗೆ ಕೊಂಡು ಹೋಗುತ್ತದೆ ಉದಾ: ಎಷ್ಟು ಆಹಾರ ತಿನ್ನಬೇಕೋ ಅಷ್ಟನ್ನೇ ತಿಂದರೆ, ಅದು ಪ್ರಕೃತಿ, ಅಧಿಕವಾಗಿ ತಿಂದರೆ ಅದು ವಿಕೃತಿ. ಆಗ ಹೊಟ್ಟೆ ನೋವಾಗುತ್ತದೆ. ಹಸಿವಾಗುವುದಿಲ್ಲ, ಏನೂ ತಿನ್ನಲು ಮನಸಾಗುವುದಿಲ್ಲ. ದೇಹ ತನ್ನ ಪ್ರಕೃತಿಯನ್ನು ತಾನೇ ಸರಿಪಡಿಸಿಕೊಳ್ಳುತ್ತದೆ. ಏಕೆಂದರೆ ನಾವೆಲ್ಲಾ ಪ್ರಕೃತಿ ಸೃಷ್ಟಿಸಿದ ಯಂತ್ರ ಮಾನವರು (Robot) ನಾವು ಯಂತ್ರಗಳಾದರೆ, ಪ್ರಕೃತಿ ನಮ್ಮ "ನಿಯಂತಕ". ನಾವು ಪ್ರಕೃತಿಯ ವಿರುದ್ಧವಾಗಿ ಹೋದರೆ ಅದು ನಮಗೆ ಪ್ರತಿಸ್ಪರ್ಧಿಯಾಗಿ ತನ್ನ ದಾರಿಗೆ ನಮ್ಮನ್ನು ಎಳೆದುಕೊಳ್ಳುತ್ತದೆ. ಸಾಧ್ಯವಾಗದಿದ್ದರೆ ನಮ್ಮನ್ನು ನಾಶಮಾಡಿ ತನ್ನ ನಿಯಮವು ಸುಸ್ಥಿರವಾಗಿರುವಂತೆ ನೋಡಿಕೊಳ್ಳುತ್ತದೆ. ಮನುಷ್ಯ ಪ್ರಕೃತಿಯ ವಿರುದ್ಧವಾಗಿ ನಡೆದಾಗ ಆಗುವ ವಿಕೋಪಗಳು ಎಲ್ಲರಿಗೂ ತಿಳಿದ ವಿಷಯವೇ. ಹಾಗಾಗಿ ನಾವು ಪ್ರಕೃತಿಯ ನಿಯಮಗಳಿಗೆ ಅನುಸಾರವಾಗಿ ಬಾಳಿದರೆ ಜೀವನ, ಇಲ್ಲದಿದ್ದರೆ ನಾಶ.

**ಮುಕ್ತಕ-240** **ಬೆರಳುಗಳ ನೋಡುವುಗಳೊಂದರಂತೊಂದಿಲ್ಲ।**
**ಕರಧರ್ಮಕುಚಿತವಾ ಹೆಚ್ಚು ಕಡಿಮೆಗಳು॥**
**ಪುರುಳ ಪಿಡಿವುದೆ ಬೆರಳ್ಗಳೆಲ್ಲವೊಂದುದ್ದಮಿರೆ।**
**ಸರಿಯಹುದು ಕಾರ್ಯದಲಿ- ಮಂಕುತಿಮ್ಮ॥**

ನೋಡುವುಗಳೊಂದರಂತೊಂದಿಲ್ಲ=ನೋಡು+ಅವುಗಳು+ಒಂದರಂತೆ+ಒಂದಿಲ್ಲ,
ಕರಧರ್ಮಕುಚಿತವಾ=ಕರ+ಧರ್ಮಕೆ+ಉಚಿತವು+ಆ,
ಬೆರಳ್ಗಳೆಲ್ಲ ಮೊಂದುದ್ದಮಿರೆ=ಬೆರಲ್ಗಳು+ಎಲ್ಲಂ+ಒಂದು+ಉದ್ದಂ+ಇರೆ, ಸರಿಯಹುದು=ಸರಿ+ಅಹುದು





ಕರಧರ್ಮಕೆ=ಕೈಗಳು ಮಾಡಬೇಕಾದ ಕೆಲಸಕ್ಕೆ, ಪುರುಳ=ವಸ್ತುವನ್ನು, ಪಿಡಿವುದೆ=ಹಿಡಿಯುವುದೇ.

ನಮ್ಮ ಕೈ ಬೆರಳುಗಳು ಒಂದೇ ಉದ್ದವಿಲ್ಲ. ಕೈಗಳು ಮಾಡಬೇಕಾದ ಕೆಲಸಕಾರ್ಯಗಳಿಗೆ ಅವುಗಳ ಉದ್ದದಲ್ಲಿರುವ ಹೆಚ್ಚು ಕಡಿಮೆಗಳು ಸರಿಯಾಗೇ ಇದೆ. ಹಾಗೇನಾದರೂ ಎಲ್ಲ ಬೆರಳುಗಳೂ ಒಂದೇ ಉದ್ದ ಇದ್ದಿದ್ದಿದ್ದರೆ, ನಾವು ಕೈಬೆರಳುಗಳಿಂದ ಯಾವ ವಸ್ತುವನ್ನಾದರೂ ಹಿಡಿಯಲು ಆಗುತ್ತಿತ್ತೇ? ಹಾಗಾಗಿ ಈ ಅಸಮತೆಯು ಕೈಗಳ ಕೆಲಸ ಕಾರ್ಯಗಳಿಗೆ ಸರಿಯಾಗೇ ಇದೆ ಎಂದು ಉಲ್ಲೇಖಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಹೌದಲ್ಲವೇ, ನಮ್ಮ ಕೈ ಬೆರೆಳುಗಳೇನಾದರೂ ಒಂದೇ ಅಳತೆಯದಾಗಿದ್ದರೆ ನಮ್ಮ ಕೈಯಲ್ಲಿ ಮಾಡಬೇಕಾದ ಕೆಲಸಗಳಿಗೆ ತೊಂದರೆ ಆಗುತ್ತಿರುತ್ತಿತ್ತಲ್ಲವೇ? ಹಾಗಾಗಿ ಜಗತ್ಸೃಷ್ಟಿಯಲ್ಲಿ ಯಾವ ಲೋಪವೂ ಇಲ್ಲ. ಎಲ್ಲವೂ ಸಮರ್ಪಕವಾಗೆ ಇದೆ. ಅಷ್ಟೇ ಅಲ್ಲ ಈ ಜಗತ್ತಿನಲ್ಲಿರುವ ಎಲ್ಲ ಅಸಮತೆಗಳು, ಸಮತೆಗಳು, ಆಕಾರ, ರೂಪ, ವರ್ಣ,

ಗುಣ, ಭೇದಗಳನ್ನು ಸೃಷ್ಟಿಸುವಾಗ ಆ ಪರಮಾತ್ಮ, ಸಕಾರಣವಾಗೇ, ಎಲ್ಲವನ್ನೂ ತನಗೆ ಹೇಗೆ ಬೇಕೋ ಹಾಗೆ ಸೃಷ್ಟಿಸಿಕೊಂಡು ಎಲ್ಲದರಲ್ಲೂ ತಾನೇ ಇದ್ದುಕೊಂಡು ಎಲ್ಲ ಚಿತ್ರ ವಿಚಿತ್ರ ರೂಪಗಳನ್ನೂ ಮತ್ತು ಎಲ್ಲ ವೈವಿಧ್ಯಮಯ ಗುಣಗಳನ್ನೂ ತಾನೇ ಅನುಭವಿಸುತ್ತಾ ಆನಂದದಿಂದ ಇದ್ದಾನೆ ಎನ್ನುವುದನ್ನು ನಾವು ಈಗಾಗಲೇ ಮನಗಂಡಿದ್ದೇವೆ.

ವಾಚಕರೆ, ನೋಡಿ ಈ ಜಗತ್ತಿನಲ್ಲಿರುವ ಎಲ್ಲ ಮನುಷ್ಯರು, ಪ್ರಾಣಿಗಳು, ಕ್ರಿಮಿ ಕೀಟಗಳು, ನಭೋಚರಗಳು, ಜಲಚರಗಳು, ಗಿಡ ಮರಗಳು, ಹೂಗಳು, ಹಣ್ಣುಗಳು ಎಲ್ಲವೂ ಒಂದೇ ರೂಪ, ಆಕಾರ, ಬಣ್ಣ, ವಾಸನೆ, ರುಚಿಯ, ಬುದ್ಧಿಗಳ, ಮನಸ್ಸಿನದಾಗಿದ್ದಿದ್ದರೆ, ಏಕತಾನತೆಯಿಂದ ನಮಗೆ ಈ ಜಗತ್ತು ಬೇಸರವಾಗುತ್ತಿತ್ತು. ಹಾಗಾಗಿಯೇ ಈ ವೈವಿಧ್ಯತೆ. ನಾವೂ ಸಹ ಈ ವೈವಿಧ್ಯತೆಯ ಒಂದು ಅಂಗವಲ್ಲವೇ. ಜಗತ್ತನ್ನು ಸೃಷ್ಟಿಸಿದ ಆ ಪರಮಾತ್ಮನಿಗೆ ಧನ್ಯವಾದವನ್ನು ಅರುಹೋಣ, ಅಭಿನಂದಿಸೋಣ, ಆನಂದಿಸೋಣ.

**ಮುಕ್ತಕ-241**

**ಅಸಮದಲಿ ಸಮತೆಯನು ವಿಷಮದಲ್ಲಿ ಮೈತ್ರಿಯನ್ನು |**
**ಅಸಮಂಜಸದಿ ಸಮನ್ವಯ ಸೂತ್ರ ನಯವ ||**
**ವೆಸನಮಯ ಸಂಸಾರದಲ್ಲಿ ವಿನೋದವ ಕಾಣ್ಬ|**
**ರಸಿಕತೆಯೇ ಯೋಗವೆ ಮಂಕುತಿಮ್ಮ ||**

ವಸನ=ವ್ಯಸನ, ಕಷ್ಟ.

ಸಮವಲ್ಲದ ವಿಷಯದಲ್ಲಿ ಸಮತೆಯನ್ನು ಕಾಣುವುದು, ವಿಷಮದಲ್ಲಿ ಸ್ನೇಹವನು ಕಾಣುವುದು, ಸಮಂಜಸ ವಲ್ಲದರಲ್ಲಿ ಸಮನ್ವಯದ ಸೂತ್ರವನ್ನು ಹೆಣೆಯುವುದು, ಸಂಕಷ್ಟಗಳೇ ತುಂಬಿರುವ ಈ ಸಂಸಾರದಲ್ಲಿ ವಿನೋದವನ್ನು, ನಗೆಯನ್ನು ಕಾಣುವಂಥಾ ರಸಿಕತೆಯೇ, ಯೋಗವೆಂದು ತಿಳಿಯಬೇಕು ಎಂದು ಒಂದು ಆದೇಶವನ್ನು ನೀಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಹಲವಾರು ಅಸಮತೆಗಳಿಂದ ಕೂಡಿರುವುದೇ ಈ ಸೃಷ್ಟಿಯ ವೈಶಿಷ್ಟ್ಯ. ಇದು ಪರಮಾತ್ಮನ ಸೃಷ್ಟಿ, ನಮಗೆ ಇಲ್ಲಿರುವ ಎಷ್ಟೋ ಅಸಮತೆಗಳು ಇಷ್ಟವಾಗುವುದಿಲ್ಲ. ಎಷ್ಟೋ ವಿಷಯಗಳು "ಸರಿಯಿಲ್ಲ" ಎನ್ನುವ ಅಭಿಪ್ರಾಯ ಇರುತ್ತದೆ. ಸಹಜವಾಗಿ ಸಾಮಾನ್ಯ ಮನುಷ್ಯರೆಲ್ಲಾ ಯೋಚನೆ ಮಾಡುವುದೇ ಹೀಗೆ, ಯಾರೊಟ್ಟಿಗಾದರೂ ನಮಗೆ ವೈರವುಂಟಾದರೆ, ಅದನ್ನು ಆಜೀವ ಪರ್ಯಂತ ಸಾಧಿಸುತ್ತೇವೆ. ಆ ವೈರದಿಂದ ಪ್ರತೀ ಸಣ್ಣ ಅವಕಾಶದಲ್ಲೂ ವೈರಿಯನ್ನು ಮಣಿಸಲು ಮತ್ತು ಸೋಲಿಸಲು ಪ್ರಯತ್ನಿಸುತ್ತೇವೆ. ದ್ವೇಷದ ಅಗ್ನಿ ನಮ್ಮನ್ನು ಸುಡುತ್ತಿರುತ್ತದೆ. ಆದರೆ ವೈರದ ಭಾವಗಳು ನಮ್ಮ ಮನಸ್ಸಿನಲ್ಲಿ ಉಂಟಾಗುವ ಸಂಭವವಿದ್ದಾಗ್ಯೂ, ಶಾಂತರಾಗಿ, ಸುಮನಸ್ಕರಾಗಿ ವೈರಿಗೂ ಸ್ನೇಹದ ಹಸ್ತವನ್ನು ನೀಡಿದರೆ ನಿಮ್ಮ ವೈರಿಯಲ್ಲೂ ಸ್ನೇಹದ ಭಾವ ಉಂಟಾಗಬಹುದು.

ಇನ್ನು ಒಂದಕ್ಕೊಂದು ಹೊಂದಿಕೊಳ್ಳದ ಅಂದರೆ ಸಮಂಜಸವಲ್ಲದ ವಿಷಯಗಳು ಅಥವಾ ಸಂಧರ್ಭಗಳಲ್ಲಿ ಎಲ್ಲ ಭಿನ್ನತೆಗಳನ್ನೂ ಒಂದು ಕಡೆ ಸೇರಿಸಿ, ಒಂದಕ್ಕೊಂದು ಸಮನ್ವಯವಾಗುವಂತೆ ಮಾಡುವುದು ಸಾಹಸವೇ ಸರಿ. ಹಲವಾರು ಸಂಕಷ್ಟಗಳ ವ್ಯಸನ ಮತ್ತು ನೋವಿನಿಂದ ಕೂಡಿದ ಈ ಜಗತ್ತಿನಲ್ಲಿ ಅವುಗಳನ್ನೆಲ್ಲ ಆಂತರ್ಯದಲ್ಲಿ ಅನುಭವಿಸುತ್ತಿದ್ದರೂ, ತಾನೂ ನಗುತ್ತಾ ಎಲ್ಲರನ್ನೂ ನಗಿಸುತ್ತಾ ವಿನೋದದಿಂದ ಕಳೆಯುವ ಪ್ರವೃತ್ತಿ ಯಾರಿಗೋ ಲಕ್ಷಕ್ಕೊಬ್ಬನಿಗೆ ಇರಬಹುದು.

ಹೀಗೆ, ಅಸಮತೆಯಲ್ಲಿ ಸಮತೆಯನ್ನು ಕಾಣುವುದು ಅಥವಾ ಅಸಮತೆಯನ್ನು ಸಮವಾಗಿಸುವುದು, ವೈರಿಯಲ್ಲೂ ಮಿತ್ರತ್ವವನ್ನು ತೋರುವುದು ಸಮಂಜಸವಲ್ಲದ್ದನ್ನು ಸಮನ್ವಯಗೊಳಿಸುವುದು, ಕಷ್ಟಗಳಲ್ಲಿಯೂ ಸಂತೋಷವಾಗಿರುವುದು, ಈ ರೀತಿಯ ಗುಣಗಳು ಇದ್ದಲ್ಲಿ ಅವನನ್ನು ಯೋಗಿ ಎನ್ನಬಹುದು ಎನ್ನುತ್ತಾರೆ ಮಾನ್ಯ ಡಿ.ವಿ.ಜಿ. ಆದರೆ ಪ್ರಕೃತಿಯಲ್ಲಿ ಎಲ್ಲವೂ ಉಂಟು. ನಾವು ಈ ಇಂದ್ರಿಯಪ್ರಚೋದಿತವಾದ ದೇಹ, ಮನಸ್ಸು, ಬುದ್ಧಿಗಳನ್ನು ಹೊತ್ತಿರುವಾಗ ಈ ರೀತಿಯ ಸಮಭಾವಗಳು ಬರುವುದು ಕಷ್ಟ ಆದರೆ ಅಸಾಧ್ಯವಲ್ಲ. ಸತ್ಸಂಗ, ಅಧ್ಯಯನಗಳಿಂದ, ಆಂತರ್ಯದಲ್ಲಿ ಸದ್ಭಾವಗಳನ್ನು ಬೆಳೆಸಿಕೊಂಡಲ್ಲಿ "ಆತ್ಮವತ್ ಸರ್ವಭೂತೇಷು" ಎನ್ನುವಂತೆ ಎಲ್ಲದರಲ್ಲೂ ಒಳ್ಳೆಯದನ್ನು, ಸಮಭಾವವನ್ನು, ಪ್ರೀತಿಯನ್ನು, ಆನಂದವನ್ನು ಕಾಣುವಂತಹ ಮನೋಭಾವ ಬೆಳೆಸಿಕೊಳ್ಳಬಹುದು. ಅಂತಹ ಪ್ರಯತ್ನಕ್ಕೆ ಯೋಗವೆನ್ನುತ್ತಾರೆ ಮಾನ್ಯ ಗುಂಡಪ್ಪನವರು. ಅಂತಹ ಪ್ರಯತ್ನವನ್ನು ನಾವೂ ಮಾಡಿದರೆ, ನಾವೂ ಯೋಗಿಗಳಾಗಬಹುದು.

**ಮುಕ್ತಕ-242** ಐಕ್ಯ ನಾನಾತ್ವಗಳು ನಿಯತಿ ಸ್ವತಂತ್ರಗಳು ।
ತರ್ಕ್ಯ  ನಿಸ್ತರ್ಕ್ಯಗಳು ಬೆರೆತು ಚಿತ್ರದಲಿ ।
ಶಕ್ಯಮುಂ ಪುರುಷತಂತ್ರಕ್ಕಶಕ್ಯಮುವಾದ ।
ಸಿಕ್ಕುಗಳ ಕತೆ ಜಗ – ಮಂಕುತಿಮ್ಮ ॥

ಪುರುಷತಂತ್ರಕ್ಕಶಕ್ಯಮುಮಾದ=ಪುರುಷ+ತಂತ್ರಕ್ಕೆ+ಆಶಕ್ಯಮುಂ+ಆದ.





ಐಕ್ಯ=ಒಂದಾದ, ನಾನಾತ್ವ=ಬೇರೆ ಬೇರೆಯಾದ, ನಿಯತಿ=ನಿಯಮಕ್ಕೊಳಗಾದ,
ತರ್ಕ್ಯ-ತರ್ಕಕ್ಕೆ ಒಳಪಡುವಂತ, ನಿಸ್ತರ್ಕ್ಯ=ತರ್ಕದ ಪರಿಧಿಯೊಳಗಿಲ್ಲದ, ಶಕ್ಯಮುಂ=ಸಾಧ್ಯವಾದ,
ಪುರುಷತಂತ್ರಕ್ಕೆ=ಜೀವಿಗಳ ಪ್ರಯತ್ನಕ್ಕೆ, ಆಶಕ್ಯಮುಂಆದ=ಅಸಾಧ್ಯವಾದ, ಸಿಕ್ಕುಗಳ=ಗಂಟುಗಳ,

ನಮ್ಮ ಜಗತ್ತು ಒಟ್ಟಾದ, ಬೇರೆ ಬೇರೆಯಾದ, ನಿಯಂತ್ರಕ್ಕೊಳಗಾದ, ಸ್ವತಂತ್ರವಾದ, ತರ್ಕಿಸಬಹುದಾದ, ತರ್ಕಕ್ಕೆ ನಿಲುಕದ ವಿಷಯಗಳು ಚಿತ್ರವಿಚಿತ್ರವಾಗಿ ಸಮ್ಮಿಶ್ರವಾಗಿ ಮತ್ತು ಮಾನವರಿಗೆ ಸಾಧ್ಯವಾದ ಮತ್ತು ಅಸಾಧ್ಯವಾದ ವಿಷಯ ಮತ್ತು ಕಾರ್ಯಗಳಿಂದ ಕೂಡಿದ ಒಗಟು ಒಗಟಾದ, ಗಂಟು ಗಂಟಾದ ವಿಷಯಗಳಿಂದ ಕೂಡಿದೆ ಎಂದು ಹಲವು ವೈವಿಧ್ಯತೆಗಳನ್ನು ಈ ಮುಕ್ತಕದಲ್ಲಿ ಪ್ರಸ್ತಾಪ ಮಾಡಿದ್ದಾರೆ ಮಾನ್ಯ ಗುಂಡಪ್ಪನವರು.

ಈ ಜಗತ್ತಿನಲ್ಲಿ ಇರುವುದು, ಪ್ರಾಣಿಸಂಕುಲ, ಕೀಟ ಜಗತ್ತು, ಸಸ್ಯವರ್ಗ, ಪಕ್ಷಿಗಳ ಗುಂಪು, ಪುಷ್ಪ ಸಮೂಹ ಮತ್ತು ಜಲಚರಗಳ ಗುಂಪು. ಇವೆಲ್ಲವನ್ನೂ ಒಟ್ಟಾರೆ ತೆಗೆದುಕೊಂಡರೆ ಒಂದೊಂದೂ ಒಂದೊಂದು ಗುಂಪಿನಂತೆ. ಆದರೆ ಒಂದೊಂದು ಗುಂಪಿನಲ್ಲೂ ಆಕಾರದ, ಬಣ್ಣದ, ಸ್ವಭಾವದ ವೈವಿಧ್ಯತೆ ಇರುವುದರಿಂದ ಒಂದು ಮತ್ತೊಂದರಿಂದ ಬೇರೆ

ಬೇರೆಯಾಗಿ ತೋರುತ್ತದೆ. ಇವೆಲ್ಲವೂ ಪ್ರಕೃತಿಯ ನಿಯಂತ್ರಣದಲ್ಲಿ ಇದ್ದರೂ ಸೃಷ್ಟಿಯ ಪ್ರತಿಯೊಂದಕ್ಕೂ ಕಿಂಚಿತ್ ಸ್ವಾತಂತ್ರ್ಯವನ್ನು ಕೊಟ್ಟಿದ್ದಾನೆ, ಆ ಪರಮಾತ್ಮ.

ಸೃಷ್ಟಿಯ ಕೆಲವನ್ನು ವಿಚಾರದಿಂದ, ತರ್ಕದಿಂದ ನಾವು ಅರಿತುಕೊಳ್ಳಬಹುದು. ಉದಾಹರಣೆಗೆ, ವಸ್ತು ವಿಷಯಗಳ ಪರಿಚಯ ನಮಗೆ ಮೇಲ್ನೋಟಕ್ಕೆ ಆಗುತ್ತದೆ. ಅವುಗಳ ಸ್ವಭಾವ ಮತ್ತು ಉಪಯೋಗಗಳು ವಿಚಾರದಿಂದ ತಿಳಿಯುತ್ತದೆ. ಆದರೆ "ಅವು ಏಕೆ ಹೀಗೇ ಇವೆ", "ಹಾಗೇಕೆ ಇಲ್ಲ" ಎಂಬ ಪ್ರಶ್ನೆ ಬಂದಾಗ, ಅದು ನಮ್ಮ ತರ್ಕ ಮತ್ತು ವಿಚಾರದ ಪರಿಧಿಯನ್ನು ದಾಟಿ ಹೋಗುತ್ತದೆ. ಆಗ ಅದು ಗುಂಡಪ್ಪನವರು ಹೇಳುವಂತೆ 'ನಿಸ್ತರ್ಕ್ಯ' ಆಗಿಬಿಡುತ್ತದೆ.

ಈ ಜಗತ್ತು ಎಷ್ಟು ಚಿತ್ರ ವಿಚಿತ್ರಗಳಿಂದ ಕೂಡಿದೆ ಎಂದರೆ, ನಾವು ಎಷ್ಟು ದೂರ ಬೇಕಾದರೂ ಯೋಚಿಸಬಹುದು. ಏನನ್ನಾದರೂ ಮಾಡಬಹುದೆಂದು ಯೋಜನೆ ಹಾಕಬಹುದು. ಆದರೆ ನಮ್ಮ ಸಾಧನೆಗೆ ಒಂದು ಮಿತಿಯಿರುತ್ತದೆ. ಅದನ್ನು ದಾಟಿ ನಾವು ಮುಂದಕ್ಕೆ ಹೋಗಲಾರೆವು. ಮನುಷ್ಯ ಪ್ರಯತ್ನಕ್ಕೂ ಒಂದು ಮಿತಿಯಿರುತ್ತದೆ. ಪ್ರತಿ ಮನುಷ್ಯನಿಗೂ ಅವನವನದೇ ಆದ ಮಿತಿಯಿರುತ್ತದೆ. ಇದಕ್ಕೆ ಕಾರಣಗಳು ಹತ್ತು ಹಲವಾರು. ದೇಹಬಲ, ಮನೋಬಲ, ಸ್ವಭಾವ, ಬುದ್ಧಿಬಲಗಳ ಮೇಲೆ ಒಂದು ವ್ಯಕ್ತಿಯ ಸಾಧನೆಯ ಮಿತಿ ಇರುತ್ತದೆ. ಇದು ಅನ್ಯ ಪ್ರಾಣಿ ಮತ್ತು ಇತರೆ ಗುಂಪುಗಳಿಗೂ ಅನ್ವಯವಾಗುತ್ತದೆ. ಸೃಷ್ಟಿಯ ಎಲ್ಲಕ್ಕೂ ಒಂದು ಮಿತಿ ಇದೆ. ನಮ್ಮ ಪರಿಮಿತ ಮತಿಯಿಂದ ಇಲ್ಲಿರುವುದನ್ನೆಲ್ಲ ಅರ್ಥಮಾಡಿಕೊಳ್ಳುವುದು ಅಸಾಧ್ಯ.

ಆದರೆ ಸೃಷ್ಟಿಕರ್ತನಿಗೆ ಮಿತಿಯಿಲ್ಲದ ಸಾಮರ್ಥ್ಯ. ಅಂತಹ ಮಿತಿಯಿಲ್ಲದ ಸಾಮರ್ಥ್ಯದಿಂದ ಹಲವಾರು ಮಿತಿಗಳಿಂದ, ರಹಸ್ಯಗಳಿಂದ, ವೈವಿಧ್ಯತೆಯಿಂದ ಕೂಡಿದ ವರ್ಣಮಯವಾದ ಈ ಜಗತ್ತನ್ನು ಸೃಷ್ಟಿಸಿದ,

ಮತ್ತು ಈ ಎಲ್ಲ ವೈವಿಧ್ಯತೆಗಳನ್ನೂ ನೋಡುತ್ತಾ ಅನುಭವಿಸುತ್ತಾ, ನಮ್ಮ ಇತಿಮಿತಿಗಳಲ್ಲೇ ಸಾಧನೆ ಮಾಡುತ್ತಾ ಆನಂದದಿಂದ ಜೀವಿಸಲು ಅನುವು ಮಾಡಿಕೊಟ್ಟ ಆ ಪರಮಾತ್ಮನಿಗೆ ನಮಿಸೋಣ.

**ಮುಕ್ತಕ-243**

**ಸಮವರ್ತಿಗಳು ಜಗದೊಳಿಬ್ಬರೇ ದಿಟವರಿಯೆ।**
**ಯಮರಾಜನೊಬ್ಬ ಜಾಠರರಾಜನೊಬ್ಬ ॥**
**ಶ್ರಮವನನುದಿನಮುಮಾಗಿಪನೊಬ್ಬನೆಲ್ಲವನು।**
**ಶಮಿಸಿ ಮುಗಿಸುವನೊಬ್ಬ - ಮಂಕುತಿಮ್ಮ ॥**

ಜಗದೊಳಿಬ್ಬರೇ=ಜಗದೊಳು+ಇಬ್ಬರೇ, ದಿಟವರಿಯೆ=ದಿಟವ+ಅರಿಯೆ,
ಶ್ರಮವನನುದಿನಮುಮಾಗಿಪನೊಬ್ಬನೆಲ್ಲವನು=ಶ್ರಮವನು+ಅನುದಿನಮುಂ+ಆಗಿಪನು+ಒಬ್ಬನು+ಎಲ್ಲವನು,
ಮುಗಿಸುವನೊಬ್ಬ=ಮುಗಿಸುವವನು+ಒಬ್ಬ.

ದಿಟವ=ಸತ್ಯವನು, ಅರಿಯೆ=ತಿಳಿದುಕೋ, ಜಾಠರ=ಜಠರ, ಹೊಟ್ಟೆ, ಶ್ರಮವನು=ದುಡಿಮೆಯನು,
ಅನುದಿನಮುಂ=ಪ್ರತಿನಿತ್ಯವೂ, ಆಗಿಪನು=ಆಗುವಂತೆ ಮಾಡುವನು, ಶಮಿಸಿ=ಶಮನಗೊಳಿಸಿ.

ಈ ಜಗದಲ್ಲಿ ಸಮಭಾವವಿರುವವರು ಇಬ್ಬರೇ. ಒಬ್ಬ ಜಠರರಾಜ. ಇನ್ನೊಬ್ಬ ಯಮರಾಜ. ಒಬ್ಬ ನಮ್ಮೆಲ್ಲರನ್ನೂ ಹೊಟ್ಟೆಯ ಹಸಿವನ್ನು ನೀಗಿಸಿಕೊಳ್ಳಲು ಪ್ರತಿನಿತ್ಯ ಶ್ರಮಪಡುವಂತೆ ಪ್ರೇರಿಪಿಸುವ, ಜಠರದಲ್ಲಿ ಅಡಗಿರುವ ರಾಜ, "ವೈಶ್ವಾನರ" ಮತ್ತು ನಮ್ಮ ಜೀವನದ ಶ್ರಮವನ್ನೆಲ್ಲ ಶಮನಗೊಳಿಸಿ ಜೀವ ಮತ್ತು ದೇಹದ ಸಂಬಂಧವನ್ನು ಅಂತ್ಯಗೊಳಿಸುವವನು ಆ ಯಮರಾಜ, ಈ ಸತ್ಯವನ್ನು ನಾವು ಅರಿತುಕೊಳ್ಳಬೇಕು ಎಂದು ಒಂದು ಜಗತ್ ಸೂಕ್ಷ್ಮವನ್ನು ಪ್ರಸ್ತಾಪಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಪ್ರತಿಯೊಬ್ಬ ಜೀವಿಯೂ ತನ್ನ ದೇಹಧಾರಣೆಗೆ ಆಹಾರವನ್ನು ಸೇವಿಸಲೇಬೇಕು. ಆ ಆಹಾರವನ್ನು ಪಡೆಯಲು ಶ್ರಮಪಡಲೇಬೇಕು. ಭಗವದ್ಗೀತೆಯಲ್ಲಿ ಶ್ರೀ ಕೃಷ್ಣ ಜೀವಿಗಳ ಜಠರದಲ್ಲಿ ನಾನು "ವೈಶ್ವಾನರ" ರೂಪದಲ್ಲಿ ಇದ್ದೇನೆ ಎಂದಿದ್ದಾನೆ. ಜಠರದಲ್ಲಿರುವುದು ಒಂದು ಪ್ರಬಲ ಆಮ್ಲ (concentrated ಹೈಡ್ರೋಕ್ಲೋರಿಕ್ ಆಸಿಡ್), ಅದನ್ನು

ಜಠರಾಗ್ನಿ ಎನ್ನುತ್ತಾರೆ. ನಾವು ಊಟಮಾಡುವುದು ಒಂದು ಯಜ್ಞ ಪ್ರಕ್ರಿಯೆ. ಆ ಜಠರಾಗ್ನಿಗೆ ಆಹುತಿಯಂತೆ ಆಹಾರವನ್ನು ಕೊಟ್ಟಾಗ, ಆ ಅಗ್ನಿ ಆಹಾರವನ್ನು ಜೀರ್ಣವಾಗಿಸಿ, ಉತ್ಪತ್ತಿಯಾದ ಸತ್ವವನ್ನು ಶಕ್ತಿಯಂತೆ ನಮ್ಮ ದೇಹದ ಎಲ್ಲಾ ಭಾಗಗಳಿಗೂ ಕಳುಹಿಸುತ್ತದೆ, ಹೋಮದಲ್ಲಿ ಅಗ್ನಿಯ ಮೂಲಕ ದೇವತೆಗಳಿಗೆ ಹವಿಸ್ಸನ್ನು ಸಮರ್ಪಿಸಿದಂತೆ. ಇದನ್ನೇ ಮಾನ್ಯ ಗುಂಡಪ್ಪನವರು "ಜಠರರಾಜ" ನೆಂದಿದ್ದಾರೆ. ಆ ಆಹಾರ ಸಂಪಾದನೆಗೆ, ಮೇಲು ಕೀಳೆಂಬ ಭಾವವಿಲ್ಲದೆ, ಸಮತೆಯಿಂದ ಎಲ್ಲರೂ ಪ್ರತಿನಿತ್ಯ ಶ್ರಮವಹಿಸಬೇಕು. ಹಾಗಾಗಿ ಈ ಅಗ್ನಿ ಸಮತೆಯನ್ನು ಹರಡುವ "ಸಮವರ್ತಿ" ಎಂದು ಸೂಕ್ತವಾಗಿ ಹೇಳಿದ್ದಾರೆ.

ಮತ್ತೊಬ್ಬ ಸಮವರ್ತಿ ಯಮ. ಯಮನೆಂದರೆ ಕಾಲ. ಈ ಸೃಷ್ಟಿಯಲ್ಲಿ ಜನಿಸಿದ ಪ್ರತಿಯೊಂದು ಜೀವಿಗೂ ಒಂದು ನಿರ್ಧಿಷ್ಟವಾದ ಆಯಸ್ಸು ಉಂಟು. ಅದು ಮುಗಿದಮೇಲೆ ಎಲ್ಲರ ಜೀವನವೂ ಕೊನೆಯಾಗಲೇಬೇಕು.





ಈ ಯಮನು, ಪ್ರತಿಯೊಂದು ಜೀವಿಯನ್ನೂ, ಬಡವ-ಬಲ್ಲಿದ, ಸ್ತ್ರೀ-ಪುರುಷ, ಜ್ಞಾನಿ-ಅಜ್ಞಾನಿ, ಮನುಷ್ಯ- ಪ್ರಾಣಿ, ಎಂಬ ಭೇದಭಾವವಿಲ್ಲದೆ ಶುದ್ಧ ನಿಸ್ಪೃಹತೆಯಿಂದ, ಕಾಲ ಬಂದಾಗ, ನಮ್ಮ ಜೀವನವನ್ನು "ಶಮನ" ಮಾಡುತ್ತಾನೆ. ಅಂದರೆ ಅಂತ್ಯಗೊಳಿಸುತ್ತಾನೆ. ಹಾಗಾಗಿ ಅವನೂ ಒಬ್ಬ "ಸಮವರ್ತಿ".

ಹೀಗೆ ಜಗತ್ತಿನ ಹಲವಾರು ಅಸಮತೆಗಳಲ್ಲಿ ಈ ಇಬ್ಬರು "ಸಮವರ್ತಿ"ಗಳನ್ನು ಗುರುತಿಸಿದ್ದಾರೆ ಮಾನ್ಯ ಗುಂಡಪ್ಪನವರು.ಈ ಸತ್ಯವನ್ನು ಅರಿತುಕೊಳ್ಳಬೇಕು ಎಂದು ಆದೇಶವನ್ನೂ ಮಾಡಿದ್ದಾರೆ. ನಮ್ಮ ವೇದಾಧಾರಿತ ಗ್ರಂಥಗಳಲ್ಲಿ ಇದರ ಉಲ್ಲೇಖ ವಿಫುಲವಾಗಿ ಸಿಗುತ್ತದೆ.

# ಆತ್ಮ ವಿಸ್ತರಣ 244-248

**ಮುಕ್ತಕ-244**

**ಒಲ್ಲೆನೆನುವುದದಾರ್ ಅಹಿಂಸೆತತ್ವದ ಸೊಬಗ।**
**ಸಲ್ಲಿಸುವೆನಾ ವ್ರತವನೆನಲೊಂದು ತೊಡಕು॥**
**ಹುಲ್ಲೆಯನು ತಿನುವ ಹುಲಿಯೊಣ ಹುಲ್ಲನುಣಲಹುದೆ।**
**ಎಲ್ಲಿ ಸೃಷ್ಟಿಯಲಿ ದಯೆ ? ಮಂಕುತಿಮ್ಮ॥**

ಒಲ್ಲೆನೆನುವುದದಾರ್=ಒಲ್ಲೆನು+ಎನುವುದು+ಅದು+ಯಾರ್, ಸಲ್ಲಿಸುವೆನಾ=ಸಲ್ಲಿಸುವೆ+ನಾ,
ವ್ರತವನೆನಲೊಂದು=ವ್ರತವನು+ಎನಲು+ಒಂದು, ಹುಲಿಯೊಣ-ಹುಲಿ+ಒಣ,
ಹುಲ್ಲನುಣಲಹುದೆ=ಹುಲ್ಲನು+ಉಣಲು+ಅಹುದೇ.
ಒಲ್ಲೆನು=ಬೇಡ, ತೊಡಕು=ತೊಂದರೆ, ಹುಲ್ಲೆ=ಜಿಂಕೆ

ಅಹಿಂಸೆಯ ಪ್ರತಿಪಾದನೆಯನ್ನು ಬೇಡವೆನ್ನುವವರು ಯಾರು. ಆದರೆ ಅಹಿಂಸಾ ವ್ರತ ಪಾಲನೆಯಲ್ಲಿ ತೊಡಕಿದೆ. ತನ್ನ ಆಹಾರಕ್ಕೆ ಜಿಂಕೆ ಮತ್ತಿತರರ ಮೇಲೆ ಆಧಾರ ಪಟ್ಟಿರುವ, ಹುಲಿಯು ಹುಲ್ಲ ತಿಂದು ಜೀವಿಸಲಿಕ್ಕೆ ಆಗುತ್ತದೆಯೇ, ಈ ಸೃಷ್ಟಿಯಲಿ ದಯೆ ಎಲ್ಲಿದೆ? ಎಂದು ಪ್ರಶ್ನೆಯನ್ನು ಕೇಳುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಬಹುಶಃ ಈ ಜಗತ್ತಿನಲ್ಲಿರುವ ಸಕಲ ಪ್ರಾಣಿಗಳಿಗೂ ನಿಗದಿತ ಆಹಾರವನ್ನು ಆ ಪರಮಾತ್ಮ ಸೃಷ್ಟಿಸಿದ್ದಾನೆ. ಬೇರೆ ಬೇರೆ ಪ್ರಾಣಿಗಳ ಆಹಾರ ಪದ್ಧತಿಯನ್ನು ನೋಡಿದರೆ ನಮಗೆ ಬಹಳ ಸೋಜಿಗವೆನಿಸುತ್ತದೆ. ನೋಡಿ ಬೃಹತ್ತಾದ ಆನೆ ತಿನ್ನುವುದು ಸೊಪ್ಪು ಸೊದೆ. ಒಂದು ಪುಟ್ಟ ಹಲ್ಲಿ ತಿನ್ನುವುದು ಹುಳ-ಹುಪ್ಪಟೆ, ಕೀಟ- ಕ್ರಿಮಿಗಳನ್ನು, ಸ್ವಾಭಾವಿಕವಾಗಿ ವಿಧಿಸಲ್ಪಟ್ಟ ಆಹಾರವನ್ನು ತಿನ್ನುವುದು ಆಯಾ ಪ್ರಾಣಿಗಳಿಗೆ ಸಹಜವಾಗೇ ಇದೆ. ಅಂತಹ ಆಹಾರವನ್ನು ಸಂಪಾದಿಸಲು ಆ ಪ್ರಾಣಿಗಳು ಮಾಡುವ ಪ್ರಾಮಾಣಿಕ ಪ್ರಯತ್ನವನ್ನು ಹಿಂಸೆ ಎಂದರೆ ಅದು ಧರ್ಮವಲ್ಲ. ಏಕೆಂದರೆ ಮಾನ್ಯ ಗುಂಡಪ್ಪನವರು ಹೇಳುವಂತೆ ಜಿಂಕೆ ಹುಲ್ಲು ತಿನ್ನುತ್ತದೆ. ಹಾಗೆಂದು ಹುಲಿಯೂ ಹುಲ್ಲ ತಿನ್ನಲಾಗುವುದೇ? ಸಮುದ್ರದಲ್ಲಿನ ದೊಡ್ಡಮೀನುಗಳು ತಮಗಿಂತ

ಸಣ್ಣಮೀನುಗಳನ್ನು ತಿಂದೇ ಜೀವಿಸಬೇಕು. ಏಕೆಂದರೆ ಅವಕ್ಕೆ ಬೇರೆ ಆಹಾರವನ್ನು ಆ ಪರಮಾತ್ಮ ಸೃಷ್ಟಿಸಿಯೇ ಇಲ್ಲ ಅದನ್ನು ಹಿಂಸೆ ಎನ್ನಲಾಗುವುದೇ? ಹಾಗಾಗಿ ನೈಸರ್ಗಿಕವಾಗಿ ಯಾವ ಪ್ರಾಣಿಗೆ ಸ್ವಾಭಾವಿಕವಾಗಿ ಯಾವುದು ಆಹಾರವೋ ಅದನ್ನು ಪಡೆಯುವ ಪ್ರಯತ್ನವನ್ನು "ಹಿಂಸೆ" ಎನ್ನಲಾಗದು.

"ಅಹಿಂಸಾ ಪರಮೋ ಧರ್ಮಃ" ಎನ್ನುವುದು ಎಲ್ಲರಿಗೂ ಗೊತ್ತಿರುವ ಒಂದು ಪರಮೋಚ್ಚ ಉಕ್ತಿ. ಆದರೆ ಹಿಂಸೆ ಎಂದರೇನು? ಇದು ಜಿಜ್ಞಾಸೆಗೆ ಒಳಪಡುವಂಥಾ ವಿಚಾರ. ಮಾನವ ಪ್ರಪಂಚದಲ್ಲಿ ಮಾತ್ರ ಈ "ಹಿಂಸೆ" "ಅಹಿಂಸೆ" ಎಂಬ ಪದಗಳಿಗೆ ಬಹಳ ಮಹತ್ವ ಉಂಟು. ಮನುಷ್ಯ ಸಂಘ ಜೀವನವನ್ನು ಶುರುಮಾಡಿದ ಮೇಲೆ, ಹೆಚ್ಚು ಹೆಚ್ಚು ಸುಸಂಸ್ಕೃತನಾದ ಹಾಗೆ, ಮನುಷ್ಯ ಪ್ರಪಂಚದಲ್ಲಿ ಶಾಂತಿಯನ್ನು ಕಾಪಾಡಲು "ಅಹಿಂಸೆಯ" ಪಾತ್ರ ಹೆಚ್ಚುತ್ತಾ ಹೋಯಿತು. ತನ್ನ ಕ್ರೌರ್ಯ ತನಗೆ ಅಸಹ್ಯವೆನಿಸಿದಾಗ ಮಾನವ ಅಹಿಂಸೆಯನ್ನು ಪ್ರತಿಪಾದಿಸುತ್ತಾ ಹೋದ. ಆದರೆ ಹಿಂಸೆಯಂದರೆ ಕೇವಲ ದೈಹಿಕ ಹಿಂಸೆಗೆ ಮಾತ್ರ ಸೀಮಿತಗೊಳಿಸಬಾರದು. ಜಾತಿ, ಧರ್ಮ, ಭಾಷೆ, ವರ್ಣ ಮುಂತಾದ ವಿಷಯಗಳಿಗೆ ಸಂಬಂಧಪಟ್ಟ ಮಾನಸಿಕ, ಸಾಂಸ್ಕೃತಿಕ ಅತ್ಯಾಚಾರವನ್ನೂ "ಹಿಂಸೆ" ಯೆಂದೇ ಪರಿಗಣಿಸಬೇಕು.

ದೌರ್ಭಾಗ್ಯವೆಂದರೆ ಎಲ್ಲ ಪ್ರಾಣಿಗಳಿಗಿಂತ ಸಂಸ್ಕಾರಗಳಲ್ಲಿ ಬುದ್ಧಿಶಕ್ತಿಯಲ್ಲಿ ಕ್ರಿಯಾಶೀಲತೆಯಲ್ಲಿ ಔನ್ನತ್ಯವನ್ನು ಪಡೆದ ಪ್ರಾಣಿಯಾದ ನಮ್ಮ ಮನುಷ್ಯ, ರಾಕ್ಷಸ ಪ್ರವೃತ್ತಿಯಿಂದ, ಈ ಜಗತ್ತಿನಲ್ಲಿರುವುದೆಲ್ಲವೂ ನನಗೆ ಆಹಾರವಾಗಿದೆ ಎಂದು ಬೀಗಿ, ಎಲ್ಲ ಪ್ರಾಣಿಗಳನ್ನೂ ತಿನ್ನುವ ಅಭ್ಯಾಸ ಮಾಡಿಕೊಂಡಿದ್ದಾನೆ. ಅಷ್ಟೇ, ಅಲ್ಲ ಅವುಗಳ ಎಲ್ಲ ಭಾಗಗಳನ್ನೂ ಹಲವಾರು ರೀತಿಯ ಉಪಯೋಗಕ್ಕೆ ಬಳಸಿಕೊಂಡಿದ್ದಾನೆ. ಹಾಗಾಗಿ ಪ್ರಾಣಿ ಸಂಕುಲದ ಸಂಖ್ಯೆ ಕಡಿಮೆಯಾಗುತ್ತಿದೆ. ಇವನು ಮಾಡುವುದು ಹಿಂಸೆ, ಆದರೆ ತನ್ನ ಅತೀ ಬುದ್ಧಿವಂತಿಕೆಯಿಂದ ತಾನು ಮಾಡುವ ಕ್ರೌರ್ಯಕ್ಕೆ ಸಮರ್ಥನೆಯನ್ನು ನೀಡುವ ಹಲವಾರು ವಿಧಾನಗಳು ಇವನಿಗೆ ಗೊತ್ತು. ಈ ಜಗತ್ತಿನಲ್ಲಿ ಎಲ್ಲ ಪ್ರಾಣಿಗಳಿಗಿಂತ ಮನುಷ್ಯನೇ ಅತೀ ದುಷ್ಟ ಏಕೆಂದರೆ ಅನ್ಯ ಪ್ರಾಣಿಗಳು ತಮ್ಮ ಅಸ್ತಿತ್ವಕ್ಕೆ ಹಿಂಸೆಯಲ್ಲಿ ತೊಡಗಿದರೆ ಮನುಷ್ಯ ಮಾತ್ರ ಅವಶ್ಯಕತೆ ಇಲ್ಲದಿದ್ದರೂ ತನ್ನ ಸ್ವಾರ್ಥಸಾಧನೆಗೆ ಹಿಂಸೆಯಲ್ಲಿ ತೊಡಗುತ್ತಾನೆ ಪ್ರಾಣಿಗಳ ಹಿಂಸೆ "ಅಧರ್ಮ"ವಲ್ಲ ಆದರೆ ಮನುಷ್ಯನ ಹಿಂಸೆ ಶುದ್ಧ "ಅಧರ್ಮ."

ನಮ್ಮಿಂದ ಯಾರಿಗೂ ಹಿಂಸೆಯಾಗದಂತೆ, ಪ್ರತಿ ಹೆಜ್ಜೆಯನ್ನೂ ಎಚ್ಚರಿಕೆಯಿಂದ ಇಟ್ಟು ನಡೆದರೆ, ನಮ್ಮ ಜೀವನ ಸಾರ್ಥಕವಾಗುತ್ತದೆ.

**ಮುಕ್ತಕ-245**

**ಕೊಲೆಗಡಿಕನೆನಿಪ ಹುಲಿ ಸಲಹದೇಂ ಮರಿಗಳನು?।**
**ಒಲುಮೆಕರುಳಡಗಿಹುದು ಪಗೆತನದ ಪೊಡೆಯೊಳ್॥**
**ನಲುಮೆಯನು ಹೊರಹೊಮ್ಮಿಸುವುದು ನರನುನ್ನಿತಿಕೆ।**
**ಒಲವಾತ್ಮ ವಿಸ್ತರಣ - ಮಂಕುತಿಮ್ಮ॥**

ಕೊಲೆಗಡಿಕನೆನಿಪ=ಕೊಲೆಗಡುಕನು+ಎನಿಪ, ಒಲುಮೆಕರುಳಡಗಿಹುದು=ಒಲುಮೆ+ಕರುಳಲಿ+ಅಡಗಿಹುದು, ನರನುನ್ನಿತಿಕೆ=ನರನ+ಉನ್ನತಿಕೆ, ಒಲವಾತ್ಮ=ಒಲವು+ಆತ್ಮ,





ಪೊಡೆಯೊಳ್=ಹೊಟ್ಟೆಯಲ್ಲಿ.

ಕೊಲೆಗಡುಕ ಪ್ರಾಣಿಯೆಂದು ಹೆಸರು ಪಡೆದ ಹುಲಿ, ಪ್ರೀತಿಯಿಂದ ತನ್ನ ಮರಿಗಳನ್ನು ಸಲಹುವುದಿಲ್ಲವೇ? ಆದ್ದರಿಂದ ಒಲುಮೆ ಮತ್ತು ಹಗೆತನ ಎರಡೂ ಆಂತರ್ಯದಲ್ಲಿರುತ್ತದೆ. ಅವರವರ ಅವಶ್ಯಕತೆಯಂತೆ ಭಾವಗಳನ್ನು ಹೊರಗೆ ವ್ಯಕ್ತಪಡಿಸುವುದು ಸಹಜ. ಹಾಗೆ ನಲುಮೆಯನ್ನು ವ್ಯಕ್ತಪಡಿಸುವುದು ನರನ ಔನ್ನತ್ಯ. ಆತ್ಮದ ಗುಣವೇ ಆನಂದವಾದ್ದರಿಂದ ಒಲವನ್ನು ತೋರುವುದು ಆತ್ಮದ ಗುಣ ಎನ್ನುತ್ತಾರೆ ಮಾನ್ಯ ಗುಂಡಪ್ಪನವರು.

ಅನ್ಯ ಪ್ರಾಣಿಗಳೇ ಹುಲಿಗೆ ಆಹಾರವಾಗಿರುವುದರಿಂದ, ಅವುಗಳನ್ನು ಕೊಲ್ಲಲು ಬೇಕಾದಷ್ಟು ಕ್ರೌರ್ಯವನ್ನು ಅದು ತೋರಲೇಬೇಕು ಅಲ್ಲವೇ? ಅದು ಅದರ ಜೀವಿಕೆಗೆ ಬೇಕೇ ಬೇಕು. ಇದು ಪ್ರಕೃತಿ ನಿಯಮ. ಅಂಥಹ ಕ್ರೂರ ಪ್ರಾಣಿಯಾದ ಹುಲಿ ತನ್ನ ಮಕ್ಕಳಲ್ಲಿ ಅನುರಾಗ ತೋರುವುದಲ್ಲವೇ? ಅದೂ ಸಹ ಪ್ರಕೃತಿಯ ಸಹಜ ನಿಯಮ. ಅಂದರೆ, ಪ್ರಾಣಿಗಳಲ್ಲೂ ಸಹ, ಕರುಣೆ, ವಾತ್ಸಲ್ಯ, ಪ್ರೀತಿ, ಪ್ರೇಮ, ರಾಗ, ದ್ವೇಷಗಳು, ಕ್ರೌರ್ಯ ಮತ್ತು ದುಷ್ಟತನಗಳು ಇರುತ್ತವೆ

ಎಂಬುದೇ ಈ ಮುಕ್ತಕದ ಹೂರಣ. ಬೇರೆ ಬೇರೆ ಪ್ರಾಣಿಗಳಲ್ಲಿ ಬೇರೆ ಬೇರೆ ಪ್ರಮಾಣದಲ್ಲಿ ಇರುತ್ತದೆ. ಅವುಗಳ ಜೀವಿಕೆಗೆ ಏನು ಅಗತ್ಯವಿದೆಯೋ, ಎಷ್ಟು ಅಗತ್ಯವಿದೆಯೋ ಅಷ್ಟು ಅವುಗಳಲ್ಲಿ ಸಹಜವಾಗಿ ಇದೆ.

ಮನುಷ್ಯನಲ್ಲೂ ಸಹ ಇವೆರಡೂ ಭಾವಗಳು ಇವೆ. ಆದರೆ ಪ್ರಾಣಿಗಳಲ್ಲಿ ಇರುವ "ಗುಣ ಸಮಾನತ್ವ" ಮನುಷ್ಯನಲ್ಲಿ ಇಲ್ಲ. ಸಹಜವಾಗಿ ಇರಬೇಕಾದ ಗುಣಗಳ ಸ್ಥಾನದಲ್ಲಿ ಇವನು ಕಲಿತುಕೊಂಡ ಗುಣಗಳು ಮನೆಮಾಡಿವೆ. "ಗುಣ ಸಮಾನತ್ವ'ದ ಬದಲು ಇವನಲ್ಲಿ "ಗುಣ ಪ್ರಮಾಣ ಭೇದವಿದೆ" ಯಾರಲ್ಲಿ ಯಾವ ಗುಣ ಅಧಿಕವಾಗಿದೆಯೋ ಅವನನ್ನು "ಒಳ್ಳೆಯವ, ಪ್ರೇಮಮಯಿ, ಕ್ರೂರಿ, ದುಷ್ಟ" ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ಇವನಿಗೆ ಸದ್ಗುಣಗಳನ್ನು ಮತ್ತು ದುರ್ಗುಣಗಳನ್ನು ಬೆಳೆಸಿಕೊಳ್ಳಲು ಸಮಾನ ಅವಕಾಶ ಇದೆ. ಅವನು ಯಾವ ಗುಣಗಳನ್ನು ಬೆಳೆಸಿಕೊಳ್ಳುತ್ತಾನೋ ಅವನು "ಅದೇ" ಆಗುತ್ತಾನೆ.

ಆದರೆ ಆತ್ಮವು ಆನಂದ ಸ್ವರೂಪವೆಂದು ಹೇಳುತ್ತಾರೆ. ಹಾಗೆ ಮನಸ್ಸು ಬುದ್ಧಿಗಳಲ್ಲಿ ಸುಗುಣಗಳನ್ನು ಬೆಳೆಸಿಕೊಂಡವ ಆತ್ಮದಿಂದ ಒಲುಮೆಯನ್ನು ಹೊರಸೂಸುತ್ತಾ ಜಗತ್ತಿನಲ್ಲಿ ಎಲ್ಲರ ಹಿತವನ್ನು ಬಯಸುತ್ತಾನೆ. "ಯೇ ಹಿತಾಃ ಸರ್ವಜನ್ಮನಾಂ ಗತಾಸೂಯಾ ಅಮತ್ಸರಾಃ ವಶಿನೋ ನಿಸ್ಪೃಹಃ ಶಾಂತಸ್ತೆ ವೈ ಭಾಗವತೋತ್ತಮಾಃ" ಎಂದು "ಯಾರು ಎಲ್ಲರ ಹಿತವನ್ನೂ ಬಯಸುತ್ತಾರೋ, ಅಸೂಯೆ, ಮತ್ಸರವಿಲ್ಲದೆ, ನಿಸ್ಪೃಹತೆಯನ್ನು ತೋರುತ್ತಾ ಶಾಂತವಾಗಿರುತ್ತಾರೆ, ಅವರನ್ನು ಶ್ರೇಷ್ಠ ಭಗವದ್ ಭಕ್ತರೆನ್ನುತ್ತಾರೆ' ಎಂದು ಭಗವದ್ಭಕ್ತರ ಗುಣಗಳನ್ನು ಉಲ್ಲೇಖಿಸಿದ್ದಾರೆ. ಅಂತಹ ಗುಣಗಳನ್ನು ಹೊಂದಿರುವವರು "ಉತ್ತಮಾತ್ಮ" ರೆಂದು ಕರೆಸಿಕೊಂಡು ಎಲ್ಲರಲ್ಲೂ "ಒಲುಮೆಯನ್ನೇ" ತೋರುತ್ತಾ ಔನ್ನತ್ಯವನ್ನು ಪ್ರದರ್ಶಿಸುತ್ತಾರೆ. ಜಗತ್ತಿನಲ್ಲಿ ಎಲ್ಲರ ಗುಣಗಳೂ ಹಾಗಾದರೆ ಈ ಭುವಿಯೇ ಸ್ವರ್ಗವಾದೀತು. ಆದರೆ ಇಂದಿನ ಸ್ಥಿತಿಯೇ ಬೇರೆಯಾಗಿದೆ. ಸ್ವಾರ್ಥವೇ ತುಂಬಿ ತುಳುಕುತ್ತಿರುವಾಗ

ಅಂತಹ ವ್ಯಕ್ತಿಗಳು ಕೋಟಿಯಲ್ಲಿ ಒಬ್ಬನು ಸಿಗುವುದೂ ಸಹ ಸಾಧ್ಯವಿಲ್ಲದಾಗಿದೆ. ಇರಲಿ ನಾವು ಸದ್ಗುಣಗಳನ್ನು ರೂಢಿಸಿಕೊಂಡು ಉತ್ತಮಾತ್ಮರಾಗಲು ಪ್ರಯತ್ನವನ್ನು ಪಡಬಹುದು.

**ಮುಕ್ತಕ-246**

**ಪ್ರೇಮಬೀಜಗಳಿಹವು ವೈರಬೀಜಗಳವೊಲೆ।**
**ಸೌಮ್ಯಮುಂ ಸಂಶೋಭೆಯಂತೆ ಪ್ರಕೃತಿಯಲಿ॥**
**ಭ್ರಾಮಕದ ಸೃಷ್ಟಿಯಾ ವಿಷಮಲಕ್ಷಣಗಳಲಿ।**
**ಸಾಮರಸ್ಯವನರಸೋ - ಮಂಕುತಿಮ್ಮ।**

ವೈರಬೀಜಗಳವೊಲೆ=ವೈರ+ಬೀಜಗಳ+ವೊಲೆ, ಸಾಮರಸ್ಯವನರಸೋ=ಸಾಮರಸ್ಯವನು+ಅರಸೋ. ಸಂಭೆ-ಪ್ರಕ್ಷುಬ್ದತೆ, ಭ್ರಾಮಕದ=ಭ್ರಮೆಯ ಭಾವಗಳು, ವಿಷಮಲಕ್ಷಣಗಳಲಿ=ಒಂದಕ್ಕೊಂದು ವಿರುದ್ಧವಾದ ಲಕ್ಷಣಗಳಲ್ಲಿ, ಸಾಮರಸ್ಯವನು=ಸಮರಸವನ್ನು, ಅರಸೋ=ಹುಡುಕೋ.

ಈ ಪ್ರಕೃತಿಯಲಿ, ಸೌಮ್ಯ ಮತ್ತು ಸಂಕ್ಷೋಭೆಯ ಭಾವಗಳಿರುವಂತೆ, ಪ್ರೇಮಕ್ಕೆ ಮತ್ತು ದ್ವೇಷಕ್ಕೂ ಕಾರಣಗಳಿವೆ. ಭ್ರಮೆಯನ್ನುಂಟುಮಾಡುವಂಥಾ ಸೃಷ್ಟಿಯ ಬೇರೆ ಬೇರೆ ಲಕ್ಷಣಗಳಲ್ಲಿ, ನೀನು ಸಮರಸವನ್ನು ಹುಡುಕು ಎಂದು ಒಂದು ಆದೇಶವನ್ನು ಮಾಡಿದ್ದಾರೆ, ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಮನುಷ್ಯನ ಪರಸ್ಪರ ಸಂಬಂಧಗಳಲ್ಲಿ ಎಲ್ಲ ರೀತಿಯ ಭಾವಗಳೂ ಉಂಟು. ಕೆಲವರಲ್ಲಿ ಪ್ರೇಮ, ಸ್ನೇಹ, ಅನುರಾಗ, ಕರುಣೆ, ಅನುಕಂಪಗಳಂಥ ಸುಂದರ ಭಾವಗಳಿದ್ದರೆ ಮತ್ತೆ ಕೆಲವರಲ್ಲಿ ಬೇಸರ, ಅಸಹ್ಯ, ಅಸೂಯೆ, ದ್ವೇಷ, ಕೋಪ, ಜಿಗುಪ್ಸೆಯಂಥಾ ಭಾವಗಳು ಸಹಜವಾಗೇ ಇರುತ್ತದೆ. ಇದಕ್ಕೆ ಒಂದು ಉಪಮೆಯನ್ನು ಕೊಡುತ್ತಾರೆ ಮಾನ್ಯ ಗುಂಡಪ್ಪನವರು. ಪ್ರಕೃತಿಯಲ್ಲಿ ಎಷ್ಟು ಸುಂದರತೆ ಇದೆಯೋ ಅಷ್ಟೇ, ಕ್ರೂರತೆಯೂ ಇದೆ.

ಒಂದು ಕಡೆ ಜನರ ಜೀವನಕ್ಕೆ ಹೇತುವಾಗಿ ಸದಾ ಜೀವಿಕೆಗೆ ಇಂಬುಕೊಡುವ ಪಂಚಭೂತಗಳು ಮತ್ತು ಅವುಗಳಿಂದಾದ ಸುಂದರ ಪ್ರಕೃತಿ ಮತ್ತು ಅದರಿಂದಾದ ಈ ಸುಂದರ ನಿಸರ್ಗ, ತನ್ನ ಪ್ರತಿ ರೂಪದಲ್ಲೂ ಮನುಷ್ಯನಿಗೆ ಸಂತಸವನ್ನು ಕೊಡುತ್ತವಲ್ಲವೇ? ಇದು ಪ್ರಕೃತಿಯ ಒಂದು ರೂಪವಾದರೆ, ಇನ್ನೊಂದು ರೂಪದಲ್ಲಿ ಅದು ತನ್ನ

ರುದ್ರತೆಯನ್ನು ತೋರುತ್ತದೆ. ಭೂಕಂಪ, ಅತೀವೃಷ್ಟಿ, ಅನಾವೃಷ್ಟಿ, ಬರ, ಕಾಳ್ಗಿಚ್ಚು, ಅಗ್ನಿಪರ್ವತಗಳಂಥ ಅನಾಹುತಗಳಿಂದ ಮನುಷ್ಯ ಜೀವನವನ್ನು ಕಾಡುವ ಪ್ರಕೃತಿಯು ರುದ್ರ ತಾಂಡವ ರೂಪದ ದರ್ಶನ ನಮಗೆ ಆಗುತ್ತವೆ ಅಲ್ಲವೇ? ಪ್ರಕೃತಿ ಸ್ವತಂತ್ರವಾಗಿ ತನ್ನಲ್ಲಾಗುವ ಅಸಮತೆಯನ್ನು ಸಮತೋಲನಕ್ಕೆ ತಂದುಕೊಳ್ಳುವ ಕ್ಷಮತೆಯನ್ನು ಹೊಂದಿದೆಯಲ್ಲವೇ? ಆದ್ದರಿಂದಲೇ ಈ ರೂಪ ಭಿನ್ನತೆಗಳು.

"ಭ್ರಾಮಕದ ಸೃಷ್ಟಿಯಾ ವಿಷಮಲಕ್ಷಣಗಳಲಿ" ಎಂದು ಗುಂಡಪ್ಪನವರು ಹೇಳುವಂತೆ, ಈ ಜಗತ್ತಿನ ಚಿತ್ರವಿಚಿತ್ರಗಳು ಮನುಷ್ಯನನ್ನು ಒಂದು ರೀತಿಯ "ಭ್ರಮೆ" ಗೆ ತಳ್ಳುತ್ತದೆ. ಇದು ಉತ್ತಮವೋ? ಅದು ಉತ್ತಮವೋ? ಇದು ಸರಿಯೋ? ಅದು ಸರಿಯೋ? ಇದು ಸುಂದರವೋ ? ಅದು ಸುಂದರವೋ? ಯಾವುದನ್ನು ಪಡೆಯುವುದು?





ಯಾವುದನ್ನು ಬಿಡುವುದು? ಎಂದು, ಮನುಷ್ಯ ಪರದಾಡುವಂತೆ ಆಗಿದೆ. ಈ ಭ್ರಮೆಯಲ್ಲಿ ಅವನಿಗೆ ವಸ್ತು, ವಿಷಯ ಮತ್ತು ವ್ಯಕ್ತಿಗಳ ಸತ್ಯ ಸ್ವರೂಪ ಅರ್ಥವಾಗುವುದೇ ಇಲ್ಲ. ಈ ಭ್ರಮೆಯಲ್ಲಿ ಅವನು ಸರಿ ತಪ್ಪುಗಳ ವಿವೇಚನೆಯನ್ನು ಕಳೆದುಕೊಳ್ಳುವ ಸಾಧ್ಯತೆ ಇದೆ. ಹಾಗಾಗಿ ಶ್ರೀ ಡಿ.ವಿ.ಜಿ ಯವರು "ಸಾಮರಸ್ಯವನರಸೋ" ಎಂದು ಆದೇಶಮಾಡಿದ್ದಾರೆ.

ಜೀವನದಲ್ಲಿ ಶಾಂತಿ ಸುಖ, ನೆಮ್ಮದಿ ಮತ್ತು ಒಂದು ಸೌಹಾರ್ಧತೆಯನ್ನು ಕಂಡುಕೊಳ್ಳಬೇಕಾದರೆ, ಮನುಷ್ಯ ಸಾಮರಸ್ಯವನ್ನು ಕಂಡುಕೊಳ್ಳಲೇ ಬೇಕು. "ಸಮರಸ"ದ ಜೀವನಕ್ಕೆ ಪರಸ್ಪರ ಸಾಮಾಜಿಕ, ಭಾವನಾತ್ಮಕ ಹೊಂದಾಣಿಕೆ ಅಗತ್ಯ. ಸ್ವಾರ್ಥ ಬಿಡಬೇಕು. ದುರಹಂಕಾರ ಬಿಡಬೇಕು. ಪರರಿಂದ ಏನನ್ನೂ ಅಪೇಕ್ಷೆ ಪಡದಂಥಾ ಪರಸ್ಪರ ಸ್ನೇಹದ ಭಾವ ಉಂಟಾಗಬೇಕು. ಪರಮಾತ್ಮನ ಸೃಷ್ಟಿಯೆಲ್ಲವನ್ನೂ ಪ್ರೀತಿಸಬೇಕು. 'ಆತ್ಮವತ್ ಸರ್ವಭೂತೇಷು' ಎನ್ನುವಂತೆ ಇದ್ದರೆ ಸಮರಸ ಮತ್ತು ಸಾಮರಸ್ಯವನ್ನು ಕಾಣಬಹುದು. ಸಮರಸವನ್ನು ಕಂಡುಕೊಂಡು

ನಮ್ಮ ಬದುಕುಗಳು ಸಾಮರಸ್ಯದಿಂದ ಇರುವಂತಾದರೆ ನಮ್ಮ ಜೀವನಗಳೂ ಸುಧಾರಿಸುತ್ತವೆ. ನಮಗೆಲ್ಲರಿಗೂ ಸಂತೋಷದ ಬಾಳು ಸಿಗುತ್ತದೆ. ಅಂತಹ ಪ್ರಯತ್ನವನ್ನು ನಾವೆಲ್ಲರೂ ಮಾಡಬೇಕು.

**ಮುಕ್ತಕ-247**

**ಮನದಿಂದ ಮನಕೆ ಪಾರ್ಮದು ಬಾಳಿನುರಿಯ ಕಿಡಿ |**
**ಮನೆಯಿಂದ ಮನೆಗಲೆವ ಗಾಳಿ ಹೊಗೆಯಂತೆ ||**
**ಮನುಜರ ಪರಸ್ಪರೋದ್ರೇಕ ಜಗದ ವಿಲಾಸ |**
**ಮನವೆ ಪರಮಾದ್ಭುತವೋ- ಮಂಕುತಿಮ್ಮ ||**

ಬಾಳಿನುರಿಯ=ಬಾಳಿನ+ಉರಿಯ, ಮನೆಗಲೆವ=ಮನೆಗೆ+ಅಲೆವ, ಪರಸ್ಪರೋದ್ರೇಕ=ಪರಸ್ಪರ+ಉದ್ರೇಕ,
ಪರಮಾದ್ಭುತವೋ=ಪರಮ ಅದ್ಭುತವೋ?
ಪಾರ್ಮದು=ಹಾರುವುದು.

ಒಂದು ಮನೆಯಲ್ಲಿ ಹಚ್ಚಿದ ಒಲೆಯ ಹೊಗೆ ಮತ್ತೊಬ್ಬರ ಮನೆಗೂ ನುಗ್ಗುವಂತೆ, ಒಬ್ಬರ ಮನಸ್ಸಿನ ಬೇಗೆ ಮತ್ತೊಬ್ಬರ ಮನಸ್ಸಿಗೆ ತಾಗುತ್ತದೆ. ಹೀಗೆ ಜಗತ್ತಿನಲ್ಲಿನ ಮನುಷ್ಯರ ಪರಸ್ಪರ ಉದ್ರೇಕಗಳ ವಿಲಾಸಕ್ಕೆ ಕಾರಣವಾದ ಮನುಷ್ಯನ ಮನಸ್ಸು ಪರಮಾತ್ಮನ ಅದ್ಭುತ ಸೃಷ್ಟಿಗಳಲ್ಲಿ ಒಂದು, ಎಂದು ಪ್ರಸ್ತಾಪಮಾಡುತ್ತಾರೆ, ಮಾನ್ಯ ಗುಂಡಪ್ಪನವರು.

ಇಡೀ ಜಗತ್ತಿನ ಸೃಷ್ಟಿಯಲ್ಲಿ ಮನುಷ್ಯನ ಮನಸ್ಸು ಬಹಳ ಅದ್ಭುತವಾದದ್ದು. ಮಾನವನ ಸಕಲ ಕಾರ್ಯಗಳಿಗೆ ಕಾರಸ್ಥಾನವೇ ಈ ಮನಸ್ಸು, ಎಲ್ಲ ಆಲೋಚನೆಗಳೂ, ಯೋಜನೆಗಳೂ ಈ ಮನಸ್ಸಿನಲ್ಲೇ ಸಿದ್ಧವಾಗುತ್ತವೆ. ಈ ಜಗತ್ತೂ ಪರಮಾತ್ಮನ ಮನಸ್ಸಿನ ಸಂಕಲ್ಪದಿಂದಲೇ ಆಗಿದೆ ಎನ್ನುವ ಅರ್ಥದಲ್ಲಿ "ಮನೋ ಬ್ರಹ್ಮೇತಿವ್ಯಜಾನಾತ್"

ಎಂದು ವೇದದಲ್ಲಿ ಉಲ್ಲೇಖವಾಗಿದೆ. ಹಾಗೆಯೇ ಯತೋ ಮನಃ ತತೋ ಭಾವಃ, ಯತೋ ಭಾವಃ ತತೋ ಕಾರ್ಯಃ, ಯತೋ ಕಾರ್ಯಃ ತತೋ" ಫಲಃ" ಎನ್ನುವ ಒಂದು ಉಕ್ತಿಯೂ ಇದೆ. ಅರ್ಥಾತ್,ಮನದ ಭಾವವೇ ಕಾರ್ಯರೂಪಕ್ಕೆ ಬಂದು ಫಲ ನೀಡುತ್ತದೆ ಎಂದು. ಹಾಗಾಗಿ ಮನದ ಭಾವ ಹೇಗಿದ್ದರೆ ಹಾಗೆಯೇ ನಮಗೆ ಸಿಗುವ ಫಲಗಳೂ ಇರುತ್ತವೆ.

ಈ ಮನಸ್ಸು ಒಂದು ವಿಚಿತ್ರ ಸದಾ ಕಾಲ ಆಲೋಚನೆಗಳ ಮಹಾಪೂರವೆ ಇಲ್ಲಿ ಹರಿಯುತ್ತಿರುತ್ತದೆ. ಬೇಕಾದ, ಬೇಡದ, ಸಾಧ್ಯವಾದ, ಅಸಾಧ್ಯವಾದ, ಒಳ್ಳೆಯ, ಕೆಟ್ಟ-ಕೆಟ್ಟ, ಆಲೋಚನೆಗಳ ಪ್ರವಾಹ ಮನಸ್ಸಿನಲ್ಲಿ ಹರಿಯುತ್ತಿರುತ್ತದೆ. ಆದರೆ ಇಲ್ಲಿ ಏಳುವ ಆಲೋಚನೆಗಳು ಅಲ್ಲಿಯೇ ಇರುವುದಿಲ್ಲ. ಮನದಿಂದ ಮನಕ್ಕೆ ಹರಡುತ್ತದೆ. ಇದರೊಳಗೆ ಉಂಟಾದ ಆಲೋಚನೆಗಳು ಕಾಳ್ಗಿಚ್ಚಿನಂತೆ ಅನ್ಯರ ಮನಗಳಿಗೂ ಹರಡಿಬಿಡುತ್ತದೆ. ಅದು "ಸಂತೋಷ"ದ ವಿಷಯವಾದರೆ, ಅನ್ಯರ ಮನಸ್ಸುಗಳಿಗೆ ಹರಡಿ, ಅವರಲ್ಲಿ ಬಹುಪಾಲು ಅಸೂಯೆಯ ಭಾವವನ್ನು ಉಂಟುಮಾಡುತ್ತದೆ, ಕಿಚ್ಚು ಹಚ್ಚುತ್ತದೆ.

ಏಕೆಂದರೆ ಇಂದು ಪರರ ಸಂತಸದಲ್ಲಿ ಸಂತಸಪಡುವವರ ಸಂಖ್ಯೆ ಬಹಳ ಕಡಿಮೆ. ಇನ್ನು ದುಃಖದ ವಿಚಾರವಾದರೆ ಸಾಂತ್ವನವನ್ನು ಯಾಚಿಸುವಂತೆ ಅದು ಅನ್ಯರ ಮನಗಳಿಗೆ ಖಂಡಿತ ಹರಡುತ್ತದೆ. ಆಗಲೂ, ಅನ್ಯರ ಮನಗಳಲ್ಲಿ, "ಸಹಾಯ ಮಾಡಬೇಕಲ್ಲ', "ಇಂಥವನಿಗೆ ಹೀಗೇ ಆಗಬೇಕು", "ಅಯ್ಯೋ ಹೀಗಾಯಿತಲ್ಲ", "ಇದೆಲ್ಲ ನಮಗ್ಯಾಕೆ" ಎನ್ನುವ, ಅಸಹಾಯಕತೆಯ, ಒಂದು ದುಷ್ಟ ತೃಪ್ತಿಯ, ದುಃಖದ ಅಥವಾ ಅಸಡ್ಡೆಯ ಕಿಚ್ಚು, ಹರಡುತ್ತದೆ. ನಮ್ಮ ಮನಸ್ಸಿನ ಭಾವ ಎರಡೂ ಸಂದರ್ಭದಲ್ಲಿ ಪರರ ಮನದೊಳಗೆ ಕಿಚ್ಚನ್ನೇ ಹಚ್ಚುತ್ತದೆ. ಇದಕ್ಕೆ ಅಲ್ಪ ಪ್ರಮಾಣದಲ್ಲಿ ಅಪವಾದಗಳಿರಬಹುದು. ಆದರೆ ಸಾಮಾನ್ಯವಾಗಿ ಹೀಗೇ ಆಗುತ್ತದೆ. ಇದನ್ನೇ ಮಾನ್ಯ ಗುಂಡಪ್ಪನವರು "ಮನದಿಂದ ಮನಕೆ ಪಾರ್ಮದು ಬಾಳಿನುರಿಯ ಕಿಡಿ' ಎಂದಿದ್ದಾರೆ.

ಇಂತಹ ಮನಸ್ಸು ಪರಮಾತ್ಮನ ಸೃಷ್ಟಿಯಲ್ಲಿ ಒಂದು ಅದ್ಭುತ. ಈ ಮನಸ್ಸಿನಲ್ಲಿ ಪ್ರೇಮದ, ಸಂತಸದ, ಪ್ರೀತಿಯ, ಕರುಣೆಯಂತಹ ನೂರಾರು ಮಧುರ ಭಾವಗಳನ್ನೂ, ದ್ವೇಷ, ಅಸೂಯೆ, ಕ್ರೋಧ, ಕೋಪದಂಥಾ ಕ್ರೂರ ಭಾವಗಳನ್ನೂ ಒಳಗೊಂಡಂತೆ ಭರದಿಂದ ಸುತ್ತುವ ಮಡುವಿದೆ. ಈ ಎಲ್ಲ ಭಾವಗಳೂ ಅಲ್ಲೇ ಸುತ್ತುವುದಿಲ್ಲ, ಸುತ್ತುವಾಗ ಸಿಡಿಯುತ್ತದೆ. ಸಿಡಿದು ಎಲ್ಲರಿಗೂ ಹರಡುತ್ತದೆ. ಹರಡಿ ಅನ್ಯರ ಮನಸ್ಸನ್ನೂ ಕೆಡಿಸುತ್ತದೆ ಅಥವಾ

ಸುಂದರವನ್ನಾಗಿಸುತ್ತದೆ. ಹೀಗೆ ಮನಸ್ಸು ತನ್ನ ಪ್ರಭಾವವನ್ನು ಬೀರದೆ ಇರುವುದೇ ಇಲ್ಲ. ಮನಸ್ಸು ನಮ್ಮ ವ್ಯಕ್ತಿತ್ವವನ್ನು ಬಿಂಬಿಸುತ್ತದೆ. ಎಲ್ಲರ ವ್ಯಕ್ತಿತ್ವಗಳೇ ಸಮಾಜದ ಗುಣವಾಗಿ ಬಿಂಬಿಸುತ್ತದೆ. ಸಮಾಜವು ಹೇಗಿರುತ್ತದೋ ನಮ್ಮ ಜೀವನಗಳೂ ಹಾಗೆಯೇ ಇರುತ್ತದೆ. ಹಾಗಾಗಿ ನಮ್ಮ ಮನಸ್ಸುಗಳನ್ನು ಶುದ್ಧವಾಗಿಟ್ಟುಕೊಂಡರೆ, ಅನ್ಯರ ಮನಗಳಿಗೆ ಹರಡುವುದು ಕಿಚ್ಚು ಆಗದೆ ಮೆಚ್ಚು ಆಗಿ ಇಡೀ ಸಮಾಜದ ಮನೋಭಾವವೇ ಉತ್ತಮವನ್ನಾಗಿಸುವ ಪ್ರಯತ್ನವನ್ನು ಮಾಡಬಹುದಲ್ಲವೇ?





**ಮುಕ್ತಕ-248**

**ತೆರಿಗೆಗಳು ಹಲವುಂಟು ಪ್ರಕೃತಿಗೂ ಸಲ್ಲುವುವು।**
**ತೆರದೆ ನೀಂ ಮರೆಯೆ ದಂಡಿಪಳಾಕೆ ಮುನಿದು॥**
**ಕರಣಂಗಳಾಕೆಯವು ಮಿತದೊಳವುಗಳ ಬಳಸಿ।**
**ತೆರು ಸಲುವ ಬಾಡಿಗೆಯ - ಮಂಕುತಿಮ್ಮ॥**

ಹಲವುಂಟು-ಹಲವು+ಉಂಟು, ದಂಡಿಪಳಾಕೆ=ದಂಡಿಪಳು+ಆಕೆ,
ಕರಣಂಗಳಾಕೆಯವು=ಕರಣಂಗಳು+ಆಕೆಯವು, ಮಿತದೊಳವುಗಳ=ಮಿತದೊಳು+ಅವುಗಳ,
ಸಲ್ಲುವುವು=ಕಟ್ಟಬೇಕಾದವು, ಮರೆಯೆ=ಮರೆತುಹೋದರೆ, ದಂಡಿಪಳಾಕೆ-ಶಿಕ್ಷಿಸುತ್ತಾಳೆ,
ಮುನಿದು=ಕೋಪಗೊಂಡು, ಕರಣಂಗಳು=ಉಪಕರಣಗಳು, ಆಕೆಯವು=ಪ್ರಕೃತಿಗೆ ಸೇರಿದ್ದು,

ನಾವು ಈ ಜಗತ್ತಿನಲ್ಲಿ ವಾಸಿಸುವಾಗ ತೆರಬೇಕಾದ ತೆರಿಗೆಗಳು ಹಲವಾರು ಉಂಟು. ಅವುಗಳಲ್ಲಿ ಪ್ರಕೃತಿಗೂ ಕೆಲವು ಸಲ್ಲುವವು. ಅವುಗಳನ್ನೇನಾದರೂ ಸಲ್ಲಿಸದೆ ಇದ್ದರೆ ಪ್ರಕೃತಿ ವಿಧಿಸುವ ಶಿಕ್ಷೆಗೆ ಗುರಿಯಾಗಬೇಕು. ಪ್ರಕೃತಿ ದತ್ತವಾದ ಎಲ್ಲವೂ ನಮಗೆ ಜೀವಿಸುವುದಕ್ಕೆ ಉಪಕರಣಗಳಿದ್ದಂತೆ. ಅವುಗಳನ್ನು ಮಿತವಾಗಿ ಬಳಸಿಕೊಳ್ಳಬೇಕು ಮತ್ತು

ಅದಕ್ಕೆ ಸಲ್ಲಬೇಕಾದ ಬಾಡಿಗೆಯನ್ನು ನೀಡಲೇಬೇಕು ಎಂದು ಈ ಜಗತ್ತಿನಲ್ಲಿ ನಮ್ಮ ಜೀವನ ಹೇಗಿರಬೇಕೆಂದು ಮಾನ್ಯ ಗುಂಡಪ್ಪನವರು ಸೂಚಿಸಿದ್ದಾರೆ ಈ ಮುಕ್ತಕದಲ್ಲಿ.

ನಾವು ಈ ಪ್ರಕೃತಿಯ ಒಂದು ಅವಿಭಾಜ್ಯ ಅಂಗ. ಪ್ರಕೃತಿಯಿಂದ ಹುಟ್ಟಿ, ಪ್ರಕೃತಿಯಲ್ಲಿ ಬೆಳೆದು, ಪ್ರಕೃತಿಯಿಂದ ಪಡೆದು, ಪ್ರಕೃತಿಗೆ ಕೊಟ್ಟು, ಪ್ರಕೃತಿಯಲ್ಲೇ ಲೀನವಾಗುವುದು ನಮ್ಮ ಜೀವನ. ಹಾಗಾಗಿ ನಾವು ಪ್ರಕೃತಿಯಿಂದ ಪಡೆದುಕೊಳ್ಳುವುದು ಅಧಿಕ. ಪಡೆದುಕೊಂಡದ್ದಕ್ಕೆ ಒಂದು ಸುಂಕ, ತೆರಿಗೆ ಕಟ್ಟಬೇಕು. ನಾವು ಹುಟ್ಟಿದ, ಬೆಳೆದ ಮತ್ತು ನಮ್ಮ "ಎಲ್ಲವನ್ನೂ ಪಡೆದುಕೊಂಡ ಆ ಪ್ರಕೃತಿಯನ್ನು ಕಾಪಾಡುವುದೇ ನಾವು ಅದಕ್ಕೆ ಕೊಡಬೇಕಾದ ತೆರಿಗೆ. ಅದನ್ನು ಕೊಡದೆ ಇದ್ದರೆ ಪ್ರಕೃತಿ ಮುನಿದು ನಮ್ಮನ್ನು ದಂಡಿಸುತ್ತಾಳೆ ಎನ್ನುತ್ತಾರೆ ಮಾನ್ಯ ಗುಂಡಪ್ಪನವರು. ಇದನ್ನು ನಾವು ಚೆನ್ನಾಗಿ ಅರಿತಿದ್ದೇವೆ. ಆದರೂ ನಮಗೆ ಬುದ್ಧಿ ಬಂದಿಲ್ಲ.

ಎಲ್ಲೆಂದರಲ್ಲಿ ಅಭಿವೃದ್ಧಿಯ ಹೆಸರಿನಲ್ಲಿ, ಔದ್ಯೋಗೀಕರಣದ ಹೆಸರಿನಲ್ಲಿ, ಧನದಾಸೆಯಿಂದ ಪ್ರಕೃತಿಯ ನಾಶ. ಕಾಡು ನದಿ, ಭೂಮಿ, ಬೆಟ್ಟ ಗುಡ್ಡ, ಹೀಗೆ ಎಲ್ಲವನ್ನು ತನ್ನ ದುರಾಸೆಗೆ ಉಪಯೋಗಿಸಿಕೊಳ್ಳುವ ಮನುಷ್ಯ ಮತ್ತು ಇಂತಹ ಮನುಷ್ಯರಿಂದ ಕೂಡಿದ ಸಮಾಜ, ಕಟ್ಟ ಬೇಕಾದ ತೆರಿಗೆಯ ಮೊತ್ತ ಬಹಳ ದೊಡ್ಡದಾಗಿದೆ. ಇದನ್ನು ನಾವು ಈಗಾಗಲೇ ಬಹಳಷ್ಟು ಬಾರಿ ಪ್ರಕೃತಿಯ ವಿಕೋಪದ ರೂಪದಲ್ಲಿ ಕಂಡಿದ್ದೇವಲ್ಲವೇ?

ಹಾಗಲ್ಲದೆ ಪ್ರಕೃತಿಯ ಎಲ್ಲವೂ, ಸೃಷ್ಟಿಯಲ್ಲಿರುವ ಸಕಲ ಪ್ರಾಣಿಗಳ ಬದುಕಿಗೂ ಪೂರಕವಾಗಿರುವ ಉಪಕರಣಗಳು (ಕರಣಂಗಳಾಕೆಯವು) ಎಂದು ನೆನೆದು ಅವುಗಳನ್ನು ಕಾಪಾಡುತ್ತಾ ಉಪಯೋಗಿಸಿಕೊಂಡು, ಮುಂದೆ ಈ ಜಗತ್ತಿಗೆ ಬರುವ ಪ್ರತೀ ಜೀವಿಗೂ, ಅದನ್ನು ನಾವು, ಪಡೆದ ಹಾಗೆಯೇ ಬಿಟ್ಟು ಹೋದರೆ, ಅದು ನಾವು ಪ್ರಕೃತಿಗೆ ಕೊಡಬೇಕಾದ ನ್ಯಾಯವಾದ ತೆರಿಗೆ. ಇದು ಪ್ರಕೃತಿಯ ಸ್ಥೂಲ ರೂಪ.

ಇನ್ನು ಇದೇ ತತ್ವವನ್ನು ಸೂಕ್ಷ್ಮರೂಪದಿಂದ ನೋಡಿದರೆ, ಈ ಪ್ರಕೃತಿಯನ್ನು ಸೃಷ್ಟಿಸಿದ ಪರಮಾತ್ಮನ ಒಂದು ಅಂಶವನ್ನೇ ಹೊತ್ತು, ಈ ಜಗತ್ತಿಗೆ ಬಂದ ಪ್ರತೀ ಚೇತನವೂ ಪ್ರಕೃತಿಯಲ್ಲಿ ಸೃಷ್ಟಿಸಲ್ಪಟ್ಟ ದೇಹವನ್ನು ಧಾರಣೆ ಮಾಡುತ್ತದೆ. ಈ ದೇಹದ ಪ್ರತೀ ಅಂಗವೂ, ಈ ಜಗತ್ತಿನಲ್ಲಿ ಬದುಕಲು ಸಹಾಯ ಮಾಡುತ್ತದೆ. ಆದರಿಂದ ಪರಮಾತ್ಮ, ಜೀವಿ ಮತ್ತು ಪ್ರಕೃತಿಯ ಸಂಬಂಧ ಅವಿಭಾಜ್ಯ. ಸ್ವತಂತ್ರವಾಗಿ ಯೋಚಿಸುವ ಭಾಗ್ಯವನ್ನು ಪಡೆದ ನಾವು ನಮ್ಮ ದೇಹಗಳನ್ನು, ಸುತ್ತಲಿರುವ ಪ್ರಕೃತಿಯನ್ನು ಕಾಪಾಡುವಂತೆ ಕಾಪಾಡಿ, ಮನಸ್ಸು ಬುದ್ಧಿಗಳನ್ನು ಶುದ್ಧವಾಗಿಟ್ಟುಕೊಂಡು, ತನ್ಮೂಲಕ ದೇಹದ ಆರೋಗ್ಯವನ್ನು ಕಾಪಾಡಿಕೊಂಡು, ಜೀವ ತನ್ನ ಎಲ್ಲ ಪೂರ್ವ ಕರ್ಮಗಳನ್ನೂ ಕಳೆದುಕೊಳ್ಳಲು ಒಂದು ಸದವಕಾಶವನ್ನು ಮಾಡಿಕೊಂಡರೆ, ಆತ್ಮ ಮುಕ್ತವಾಗುತ್ತದೆ.

ಹಾಗಲ್ಲದೆ ದೇಹ ಪ್ರಕೃತಿಯನ್ನು ಕೆಡಿಸಿಕೊಂಡು, ರೋಗ ರುಜಿನಗಳಿಗೆ ತುತ್ತಾಗಿ, ಮನಸ್ಸು ಬುದ್ಧಿಗಳ ಆರೋಗ್ಯವನ್ನು ಕೆಡಿಸಿಕೊಂಡರೆ, ಆತ್ಮ ಸೊರಗುತ್ತದೆ. ಹಾಗಾಗಿ ನಮ್ಮ ಹೊರಗಿನ ಮತ್ತು ಒಳಗಿನ ಪ್ರಕೃತಿಯನ್ನು ಕಾಪಾಡಿಕೊಳ್ಳಬೇಕು, ಮಿತಿಯನರಿತು ಬಳಸಿಕೊಳ್ಳಬೇಕು. ಇಲ್ಲದಿದ್ದರೆ ನಮಗೆ ಇಹದಲ್ಲೂ ಸುಖವಿಲ್ಲ, ಪರದಲ್ಲೂ ಸುಖವಿಲ್ಲ, ತೆರಬೇಕಾದ ತೆರಿಗೆಗೆ ಮಿತಿಯಿರುವುದಿಲ್ಲ. ಇದನ್ನೇ ಮಾನ್ಯ ಬಸವಣ್ಣನವರು "ಅಂತರಂಗ ಶುದ್ಧಿ ಬಹಿರಂಗ ಶುದ್ಧಿ, ನಮ್ಮ ಕೂಡಲಸಂಗಮ ದೇವನ ಒಲಿಸುವ ಪರಿ" ಎಂದಿದ್ದಾರೆ.

# ಜೀವನವೇ ಪರಮೈಶ್ವರ್ಯ 249-253

**ಮುಕ್ತಕ-249**

**ಹಾಳು ಹಾಳೆಲ್ಲ ಬಾಳೆನ್ನುತಿರ್ದೊಡೆಯುಮದ |**
**ರೂಳಿಗವ ತಪ್ಪಿಸುವ ಜಾಣನೆಲ್ಲಿಹನು? ||**
**ಊಳಿಗವೋ ಕಾಳಗವೋ ಕೂಳ್ಕರೆಯೊ ಗೋಳ್ಕರೆಯೊ |**
**ಬಾಳು ಬಾಳದೆ ಬಿಡದು - ಮಂಕುತಿಮ್ಮ ||**

ಬಾಳೆನ್ನುತಿರ್ದೊಡೆಯುಮದರೂಳಿಗವ=ಬಾಳು+ಎನ್ನುತ+ಇರ್ದೊಡೆಯುಂ+ಅದರ+ಊಳಿಗವ, ಜಾಣನೆಲ್ಲಿಹನು=ಜಾಣನು+ಎಲ್ಲಿಹನು, ಕೂಳ್ಕರೆಯೊ=ಕೂಳ+ಕರೆಯೊ, ಗೋಳ್ಕರೆಯೊ=ಗೋಳ+ಕರೆಯೊ

ಈ ಜಗತ್ತಿನಲ್ಲಿ ಇರುವ ಮನುಷ್ಯರೆಲ್ಲಾ ಯಾವುದಾದರೂ ಒಂದು ರೀತಿಯ ಸಂಕಷ್ಟಗಳಿಗೆ ಸಿಕ್ಕು 'ಅಯ್ಯೋ ಈ ಬಾಳೆಲ್ಲ ಹಾಳು' ಎಂದು ಈ ಜೀವನವನ್ನು ಹಳಿಯುತ್ತಿದ್ದರೂ, ಈ ಜಂಜಡದ ಬದುಕಿನಲ್ಲಿ ಜೀವಿಸುವುದನ್ನು ತಪ್ಪಿಸಿಕೊಂಡಂಥಾ ಜಾಣನೆಲ್ಲಿಹನು? ಪರರಿಗೆ ಊಳಿಗವನ್ನೋ, ಕಾಳಗವನ್ನೋ ಮಾಡುತ್ತಾ ಹೊಟ್ಟೆಪಾಡಿಗಾಗಿ ಗೋಳಾಡುತ್ತಲಾದರೂ ಈ ಜಗತ್ತಿನ ಪ್ರತೀ ಜೀವಿಯೂ ಬಾಳಲೇ ಬೇಕು ಎಂದು ಬದುಕಿನ ಒಂದು ಅನಿವಾರ್ಯತೆಯನ್ನು ಉಲ್ಲೇಖಿಸಿದ್ದಾರೆ ಮಾನ್ಯ ಗುಂಡಪ್ಪನವರು.

ನಾವು ಈ ಜಗತ್ತಿಗೆ ಬಂದ ತಕ್ಷಣ ಪಡೆಯುವುದು ಒಂದು ಉಸಿರು. ಈ ಜಗತ್ತನ್ನು ಬಿಟ್ಟು ಹೊರಡುವಾಗ ಕಟ್ಟ ಕಡೆಗೆ ಬಿಟ್ಟುಕೊಡುವುದು ಒಂದು ಉಸಿರು. ಮೊದಲ ಮತ್ತು ಕೊನೆಯ ಉಸುರಿನ ನಡುವಿನ ಜೀವನದ





ಕಥೆ ಚಿತ್ರ ವಿಚಿತ್ರಗಳಿಂದ ಕೂಡಿದ್ದಾಗಿರುತ್ತದೆ. ಏನೋ ಮಾಡಬೇಕೆಂಬ ತವಕ, ಸಾಧಿಸುವ ಛಲ, ಸಾಧಿಸಿದ ಹಮ್ಮು, ಸೋಲಿನ ಗೋಳು, ಬದುಕಿಗಾಗಿ, ಉಳಿವಿಗಾಗಿ, ಪದವಿಗಾಗಿ, ಸಂಪತ್ತಿಗಾಗಿ, ಅಹಂಕಾರದ ಪ್ರದರ್ಶನಕ್ಕಾಗಿ ಹೋರಾಟ, ಸಂತೋಷವನ್ನು ಅರಸುವ ವ್ಯರ್ಥ ಪ್ರಯತ್ನ, ಅರಿವಿನ, ಮೌಢ್ಯದ, ಮೂರ್ಖತೆಯ, ಪ್ರೀತಿ ಪ್ರೇಮ, ಮೋಹ ಕಾಮ, ಕೋಪ ತಾಪ, ದ್ವೇಷ ಅಸೂಯೆ, ಹೀಗೇ ನೂರಾರು ಭಾವಗಳನ್ನು ಹೊತ್ತು ನಡೆಯುತ್ತದೆ ನಮ್ಮ ಬದುಕಿನ ಪ್ರಯಾಣ. ಇಂತಹ ಭಾವಗಳನ್ನು ಹೊತ್ತೇ ಬದುಕಬೇಕು. ಸಮಿಶ್ರ ಭಾವಗಳೊಂದಿಗಿನ ನಮ್ಮ ಜೀವನದ ಪ್ರಯಾಣದಲ್ಲಿ ಯಾವುದರ ಪ್ರಮಾಣ ಅಧಿಕವಾಗಿರುತ್ತದೋ ಹಾಗೇ ಇರುತ್ತದೆ ನಮ್ಮ ಜೀವನ.

"ಈಸಬೇಕು ಇದ್ದು ಜಯಿಸಬೇಕು" ಎನ್ನುವುದು ದಾಸರ ಉಕ್ತಿ. ಮನುಷ್ಯ ತಾನೆಂತಹುದೇ ಸ್ಥಿತಿಯಲ್ಲಿರಲಿ, ಬದುಕನ್ನು ಬಿಡಲಾಗದು. ಬದುಕಲೇ ಬೇಕು. ಧನಿಕನಾಗಲಿ,ಬಡವನಾಗಲಿ, ಬದುಕಲೇ ಬೇಕು. ಇದರಿಂದ ಯಾರಿಗೂ ಮುಕ್ತಿ ಇಲ್ಲ. ಬದುಕಿನಿಂದ ಹೊರಗೆ ಒಂದು ಬದುಕಿಲ್ಲ. ಇದನ್ನೇ ಮಾನ್ಯ ಗುಂಡಪ್ಪನವರು ಅದರೊಳಿಗವ ತಪ್ಪಿಸುವ ಜಾಣನೆಲ್ಲಿಹನು?' ಎಂದು ಕೇಳುತ್ತಾರೆ.

ಈ ಬದುಕಿನಿಂದ ಬೇರೆಯಾಗಿ ಜೀವಿಸಲು ಯಾರಿಗೂ ಸಾಧ್ಯವೇ ಇಲ್ಲ. ಇಲ್ಲಿ ಹುಟ್ಟಿದವರೆಲ್ಲರೂ ಯಾವುದೋ ಒಂದು ರೀತಿಯ ಬದುಕನ್ನು ಬದುಕಲೇ ಬೇಕು. ಹಾಗೆ ಬದುಕುವಾಗ ನಮ್ಮ ಆಗು ಹೋಗುಗಳಿಗೆ ಬಾಳನ್ನು ದೂಷಿಸದೆ, ಹೆಚ್ಚು ಏರುಪೇರಿಲ್ಲದ, ತೃಪ್ತ, ಶಾಂತ ಮತ್ತು ನಿರ್ಲಿಪ್ತ ಜೀವನ ನಮ್ಮದಾದರೆ ಬದುಕು ಸುಂದರವಾಗಿರುತ್ತದೆ.

ಮೊಸರನ್ನು ಕಡೆದರೆ ಬೆಣ್ಣೆ ಬರುತ್ತದೆ. ಅಂದರೆ ಮೊಸರಿನಿಂದಲೇ ಹೊರಬಂದಿದ್ದರೂ, ಬೆಣ್ಣೆಗೆ ಅಧಿಕ ಮಹತ್ವ ಹಾಗೆಯೇ ನಾವು ಈ ಜೀವನದಲ್ಲಿ ಇದ್ದು ಸಂಸಾರದ ಅನುಭವಗಳ ಕಡಗೋಲಿಂದ ಕಡೆದ ಬೆಣ್ಣೆಯಂತೆ ಹೊರಬಂದು ನಿರ್ಲಿಪ್ತರಾಗಿ ನಮ್ಮ ಜೀವನದ ಮೌಲ್ಯವನ್ನು ಹೆಚ್ಚಿಸಿಕೊಳ್ಳಬೇಕು. ಅದೇ ಸಾರ್ಥಕ ಬದುಕು.

**ಮುಕ್ತಕ-250**

**ಜೀವನವದೊಂದು ಪರಮೈಶ್ವರ್ಯ ಬೊಮ್ಮನದು |**
**ಸೇವೆಯದನೂರ್ಜಿತಂಗೊಳುಸುವೆಲ್ಲೆಸಕ |**
**ಈವರಾರ್ ಕೊಳುವರಾರೆಲ್ಲರೊಂದಾಗಿರಲು? |**
**ನೈವೇಧ್ಯಭಾಗಿ ನೀಂ - ಮಂಕುತಿಮ್ಮ ||**

ಜೀವನವದೊಂದು=ಜೀವನವು+ಒಂದು, ಪರಮೈಶ್ವರ್ಯ=ಪರಮ+ಐಶ್ವರ್ಯ,
ಸೇವೆಯದನೂರ್ಜಿತಂಗೊಳುಸುವೆಲ್ಲೆಸಕ =ಸೇವೆಯು+ಅದನು+ಊರ್ಜಿತಗೊಳಿಸುವ+ಎಲ್ಲ+ಎಸಕ,
ಈವರಾರ್=ಈವರು+ಆರ್, ಕೊಳುವರಾರೆಲ್ಲರೊಂದಾಗಿರಲು = ಕೊಳುವರು+ಆರು+ಎಲ್ಲರು+ಒಂದಾಗಿರಲು.
ಎಸಕ=ಕರ್ತವ್ಯ.

ಈ ಜಗತ್ತು ಮತ್ತು ಇಲ್ಲಿ ನಡೆಯುವ ಜೀವನವು ಆ ಪರಮಾತ್ಮ ತನ್ನ ವಿನೋದಕ್ಕಾಗಿ ಸೃಷ್ಟಿಸಿಕೊಂಡ ಸಂಪತ್ತು. ಇದು ಅವನಿಗೆ ಸೇರಿದ್ದು, ಇಲ್ಲಿರುವ ಎಲ್ಲ ಜೀವಿಗಳೂ ಈ ಜಗತ್ತಿನಲ್ಲಿ ಇದ್ದು ಅನುಭವಿಸಿ, ತಮ್ಮ ಎಲ್ಲ ಕೆಲಸಗಳನ್ನೂ ಅದನ್ನು ಊರ್ಜಿತಗೊಳಿಸುವುದರಲ್ಲಿ ತೊಡಗಿಸಿಕೊಳ್ಳಬೇಕು. ಎಲ್ಲವೂ ಅವನದೇ ಆಗಿ ಎಲ್ಲವೂ ಅವನೇ ಆಗಿರುವಾಗ ಇಲ್ಲಿ ಕೊಡುವವನೂ ಮತ್ತು ತೆಗೆದುಕೊಳ್ಳುವವನೂ ಬೇರೆ ಬೇರೆ ಅಲ್ಲ. ಜಗತ್ತಿನ ಸಕಲ ಪ್ರಾಣಿಗಳ ಜೀವನವನ್ನು ಸಮಗ್ರ ಬಾಳಿನ ನೈವೇದ್ಯದಂತೆ ಆ ಪರಮಾತ್ಮನಿಗೆ ನಿವೇದನೆ ಮಾಡುತ್ತಿರುವಾಗ ನಾವೆಲ್ಲಾ ಅದರೊಳಗೆ ಒಂದು ಭಾಗವನ್ನು ಹಂಚಿಕೊಂಡಿದ್ದೇವೆ ಎನ್ನುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ

ಈ ಜಗತ್ತೇ ಒಂದು ಉತ್ಸವ, ಉತ್ಸವ ಮೂರ್ತಿ ಆ ಪರಮಾತ್ಮ, ಈ ಉತ್ಸವವನ್ನು ಆಯೋಜಿಸಿರುವವನೂ ಅವನೇ. ಇಂತಹ ಮಹೋತ್ಸವದಲ್ಲಿ ನಾವು ಸೇರಿಕೊಂಡು, ಅವನ ಶಕ್ತಿಯನ್ನು ಪಡೆದೇ ಪಾಲ್ಗೊಂಡು ಆ ಶಕ್ತಿ ನಮ್ಮಲ್ಲಿರುವ ತನಕ, ಕುಣಿದು, ನಲಿದು, ಹಾಡಿ, ಪಾಡಿ, ಕೂಗಾಡಿ, ಕಿರುಚಾಡಿ, ಅತ್ತು, ಗೋಳಾಡಿ ಅವನು ವಿಧಿಸಿದ ರೀತಿಯಲ್ಲಿ ಅವನ ಇಚ್ಛೆಯಂತೆ ನಡೆಯಬೇಕು, ಬದುಕಬೇಕು. ಇದನ್ನು ಆ ಪರಮಾತ್ಮನಿಗೆ ಸಲ್ಲಿಸುವ ಸೇವೆಯಂತೆ ಮಾಡಬೇಕು. ನಮ್ಮ ಬದುಕು ಜಗತ್ತಿಗೆ ಪೂರಕವಾಗಿರಬೇಕು. ನಾವು ಬಾಳಿನಲ್ಲಿ ಪಡೆದ ಎಲ್ಲವೂ ಈ ಮಹಾ ಉತ್ಸವದಲ್ಲಿ ಪರಮಾತ್ಮನಿಗೆ ನೈವೇದ್ಯ ಮಾಡಿದ ಪ್ರಸಾದದಲ್ಲಿ ಒಂದು ಭಾಗವನ್ನು ಹಂಚಿಕೊಂಡಂತೆ ಭಾವಿಸಬೇಕು, ಬಾಳಬೇಕು.

ಈ ಜಗತ್ತನ್ನು ಸಮಗ್ರವಾಗಿ ನೋಡಿದಾಗ, ಆ ಪರಮ ಚೇತನದ ಸೃಷ್ಟಿಯಾದ ಜಗತ್ತಿನಲ್ಲಿರುವ ಎಲ್ಲವೂ, ಲೌಕಿಕ ಬದುಕಿನಲ್ಲಿ ತಮ್ಮನ್ನು ತಾವು ಕಾಪಾಡಿಕೊಳ್ಳುತ್ತಾ, ಆಹಾರ ತಿನ್ನುತ್ತಾ, ತಮ್ಮ ವಂಶಗಳನ್ನು ಬೆಳೆಸುತ್ತಾ ಬದುಕಬೇಕು. ಇಲ್ಲಿ ಮನುಷ್ಯ ಸ್ವತಂತ್ರವಾಗಿ ಏನನ್ನೂ ಮಾಡಲಾರ ಏನೇ ಮಾಡಿದರೂ ಅದಕ್ಕೆ ಆ ಪರಮಾತ್ಮನ ಶಕ್ತಿಯನ್ನು ಉಪಯೋಗಿಸಿಕೊಂಡೇ ಮಾಡಬೇಕು. ಏನನ್ನಾದರೂ ಮಾಡಬೇಕು ಎಂದು ಮನದಲ್ಲಿ ಸಂಕಲ್ಪವಾಗುವುದೂ ಸಹ ಆ ಪರಮಾತ್ಮನ ಶಕ್ತಿಯಿಂದಲೇ!! ರೂಪಭೇದದಿಂದ ನಮಗೆ ಜಗತ್ತಿನ ಸೃಷ್ಟಿಯು, ಮನುಷ್ಯ, ಗಂಡು, ಹೆಣ್ಣು ಪ್ರಾಣಿ, ಪಕ್ಷಿ, ಮೀನು, ಗಿಡ, ಮರ, ಬಳ್ಳಿ, ಹೂ ಇತ್ಯಾದಿಯಾಗಿ ಕಾಣುತ್ತದೆ. ಆದರೆ ಇಲ್ಲಿ ಪ್ರಕಟವಾಗಿರುವುದೆಲ್ಲವೂ ಆ ಪರಮಾತ್ಮನೇ ಅಲ್ಲವೇ. ಹಾಗಾಗಿ ಕೊಡುವವನೂ ಅವನೇ, ಇರುವವನೂ ಅವನೇ, ಅನುಭವಿಸುವವನೂ ಅವನೇ ಎಂದಾದ ಮೇಲೆ ಇಲ್ಲಿ ಕೊಡುವವರು ಪಡೆದುಕೊಳ್ಳುವವರು ಬೇರೆ ಬೇರೆ ಅಲ್ಲ.

ಹಾಗಾದರೆ 'ನಾನು' ಯಾರು ಎಂದು ಒಂದು ಸಂದೇಹ ಉದ್ಭವವಾಗುವುದು ಸಹಜ. ವಾಚಕರೆ ನಾವು ಎಲ್ಲಿಯ ತನಕ ಅಹಂಕಾರದಿಂದ 'ನಾನು' ಎಂದು ಗುರುತಿಸಿಕೊಳ್ಳುತ್ತೇವೆಯೋ ಅಲ್ಲಿಯ ತನಕ ಆ ಪರಮಾತ್ಮನ ಲೀಲಾ ವಿನೋದದ ಸಮಗ್ರ ಚಿತ್ರವನ್ನು ಕಾಣಲಾಗುವುದಿಲ್ಲ. ಯಾವತ್ತು ಆ ಸಮಗ್ರ ಚಿತ್ರವನ್ನು ಕಾಣುತ್ತೇವೆಯೋ ಅಂದು ನಮ್ಮ ಬಾಳು ಈ ಜಗದುತ್ಸವದಲ್ಲಿ ಸೇರಿ ಮೆರವಣಿಗೆಯಲ್ಲಿ ಹೋಗಿ ಪ್ರಸಾದ ಹಂಚಿಕೊಂಡಂತೆ ಆಗುತ್ತದೆ.





**ಮುಕ್ತಕ-251**

**ತಲೆಯ ಮೇಗಡೆ ಬೇರು, ಕೆಳಗೆ ಕೊಂಬೆಲೆ ಚಿಗುರು।**
**ಬಿಳಲೂರೆಗಳ ಲೆಕ್ಕಕ್ಕಿಲ್ಲ ಕೊನೆ ಮೊದಲು॥**
**ಬೆಳೆವುದೀ ಪರಿಯರಳಿಮರದಂತೆ ನರಕೋಟಿ।**
**ನಲಿವನದರಲಿ ಬೊಮ್ಮ - ಮಂಕುತಿಮ್ಮ॥**

ಕೊಂಬೆಲೆ=ಕೊಂಬೆ+ಎಲೆ, ಬಿಳಲೂರೆಗಳ=ಬಿಳಲ+ಊರೆಗಳ, ಬೆಳೆವುದೀ=ಬೆಳೆವುದು+ಈ,
ಪರಿಯರಳಿಮರದಂತೆ=ಪರಿ+ಅರಳಿ+ಮರದಂತೆ, ನಲಿವನದರಲಿ=ನಲಿವನು+ಅದರಲಿ
ಮೇಗಡೆ=ಮೇಲುಗಡೆ, ಬಿಳಲು=ಅರಳೀ ಮರದಲ್ಲಿ ಕೊಂಬೆಗಳಿಂದ ಕೆಳಗಿಳಿವ ಬೇರಿನಂಥ ಇಳುವುಗಳು, ಬೊಮ್ಮ=ಪರಬ್ರಹ್ಮ.

ಒಂದು ಅರಳಿ ಮರದ ಕೊಂಬೆಯಿಂದ ಬಿಳಲುಗಳು ಹೊರಟು ಭೂಮಿಯನ್ನು ಮುಟ್ಟಿ, ಮತ್ತೆ ಭೂಮಿಯೊಳಕ್ಕೆ ನುಸುಳುತ್ತದೆ. ಇದು ಮೇಲಿನ ಬೇರು ಆ ಬೇರು ಮೇಲಿದ್ದು ಕೊಂಬೆಗಳು, ಎಲೆಗಳು ಮತ್ತು ಚಿಗುರು, ಅರಳೀ ಮರದಲ್ಲಿ ಕೆಳಗಿರುತ್ತದೆ. ಅದೇ ರೀತಿ ಜೀವ ಧರಿಸಿದ ದೇಹ ಹಳತಾಗುತ್ತದೆ, ಮೇಲಿದ್ದರೂ ಮುಂದೆ ವಂಶದಲ್ಲಿನ ಅನ್ಯ ಶಾಖೆಗಳಿಗೆ ಮತ್ತು ಚಿಗುರಿನಂತಹ ಮಕ್ಕಳು, ಮೊಮ್ಮಕ್ಕಳಿಗೆ ಬೇರಿನಂತೆ ಆಧಾರವಾಗಿರುತ್ತದೆ. ಇಂತಹ ಕೋಟಿ ಕೋಟಿ ಮರಗಳ

ಬೇರುಗಳ, ಕೊಂಬೆಗಳ ಮತ್ತು ಚಿಗುರುಗಳ ಪ್ರತಿರೂಪವಾದ ಕೋಟಿ ಕೋಟಿ ನರರಿರುವ ಈ ಜಗತ್ತಿನಲ್ಲಿ ಪರಮಾತ್ಮ ಆನಂದದಿಂದ ನಲಿಯುತ್ತಾನೆ ಎಂದು ಪ್ರಸ್ತಾಪಮಾಡುತ್ತಾರೆ ಮಾನ್ಯ ಗುಂಡಪ್ಪನವರು.

ಸಾಮಾಜಿಕ ಜೀವನ, ಸಂಸ್ಕೃತಿ, ಸಂಸ್ಕಾರಗಳು ಮನುಷ್ಯರಲ್ಲಿ ಒಂದು ತಲೆಮಾರಿನಿಂದ ಮತ್ತೊಂದಕ್ಕೆ ಅನೂಚಾನವಾಗಿ ಹರಿದು ಬಂದಿರುವ ರೀತಿ ಬಹಳ ಅದ್ಭುತವಾದದ್ದು. ನಮ್ಮ ಪೂರ್ವಜರ ಜೀವನ ಮತ್ತು ಬೋಧನಗಳು, ಅವರು ನಮ್ಮ ಹಿಂದಿನವರಾದರೂ, ಇಂದಿನ ಜೀವನಕ್ಕೆ ಬೇರಿನಂತೆ ಆಧಾರವಾಗಿದೆ. ಹೀಗೆ ಕೋಟಿ ಕೋಟಿ ಮಾನವರ ಸಂತತಿಯಿಂದ ಹರಿದುಬಂದ ಹಲವಾರು ವಿಚಾರಧಾರೆಗಳನ್ನು, ಸಂಸ್ಕೃತಿ ಸಂಸ್ಕಾರಗಳನ್ನು ಗಳಿಸಿ, ಬೆಳೆಸಿ, ಉಳಿಸಿ, ಹರಡುತ್ತಾ ಹರಡುತ್ತಾ ಮಾನವ ಕುಲ ಒಂದು ದೊಡ್ಡ ವಟ ವೃಕ್ಷದಂತೆ ಆಗಿದೆ.

ಈ ಸಂಸ್ಕಾರ ಸಂಸ್ಕೃತಿಗಳು ವಿಕಾಸವಾಗುತ್ತಾ ಪೀಳಿಗೆಯಿಂದ ಪೀಳಿಗೆಗೆ ಹರಿದುಬರುತ್ತದೆ. ಹಾಗೆ ಹರಿದು ಬರುವಾಗ ಕಾಲ ಬದಲಾದಂತೆ, ಬದಲಾಗುತ್ತಾ, ಹೊಸ ಹೊಸ ರೂಪಗಳನ್ನು ತಾಳುತ್ತದೆ. ಹೊಸ ಹೊಸ ವಿಚಾರಗಳು, ಭಾಷೆಗಳು, ಕಲೆಗಳು ಸಾಹಿತ್ಯಗಳು ಹುಟ್ಟಿಕೊಂಡು, ಬಾಳಿ, ಹೊಸದಕ್ಕೆ ಎಡೆಮಾಡಿಕೊಡುತ್ತಾ ನೇಪಥ್ಯಕ್ಕೆ ಸರಿಯುತ್ತದೆ. ಯಾವುದು ಹೆಚ್ಚು ಬಲವಾಗಿರುತ್ತದೆಯೋ ಅದು ಬಹುಕಾಲ ಈ ಜಗತ್ತಿನಲ್ಲಿ ಉಳಿಯುತ್ತದೆ. ಉದಾಃ ವೇದ, ಉಪನಿಷತ್ತುಗಳು, ಭಗವದ್ಗೀತೆ. ಆದರೆ ಹೊಸತನ್ನು ಹುಡುಕುವ ಮಾನವನ





ಪ್ರವೃತ್ತಿಯಿಂದ ಅವು ಜನಮಾನಸದಲ್ಲಿ ಮೌಲ್ಯಗಳನ್ನು ಕಳೆದುಕೊಳ್ಳುತ್ತಾ ಹೋಗುತ್ತವೆ. ಮತ್ತೆ ಆ ಮೌಲ್ಯಗಳು ಪುನರಜೀವನವಾಗಲು ಒಂದು ಸಾಮೂಹಿಕ ಪ್ರಯತ್ನವೇ ಆಗಬೇಕು.

ಇಲ್ಲಿ ನಾವೆಲ್ಲಾ ನಿಮಿತ್ತ ಮಾತ್ರರು. ಎಲ್ಲವೂ ಆ ಪರಮಾತ್ಮನಿಂದ ಆಗಿ, ಎಲ್ಲದರಲ್ಲೂ ಅವನೇ ಇದ್ದು, ಎಲ್ಲವನ್ನೂ ಅವನೇ ಅನುಭವಿಸುತ್ತಿದ್ದಾನೆ ಎಂದಮೇಲೆ, ನಮ್ಮ ಪ್ರಮೇಯ ಕಡಿಮೆ. ಅದನ್ನೇ ಮಾನ್ಯ ಗುಂಡಪ್ಪನವರು "ನಲಿವನದರಲಿ ಬೊಮ್ಮ" ಎಂದು ಹೇಳುತ್ತಾರೆ. ನಾವು ನಮ್ಮ ಪರಿಮಿತ ಮಿತಿಗಳಲ್ಲಿ ಅದನ್ನು ಕಾಪಾಡಲು, ಬೆಳೆಸಲು, ಸತ್ವವನ್ನು ಅರಿಯಲು ಪ್ರಯತ್ನವನ್ನು ಪಡಬೇಕು.

**ಮುಕ್ತಕ-252**

**ಒಂದು ಕೊಂಬೆಯು ಬಾಡಲಿನ್ನೊಂದು ಚಿಗುರುವುದು।**
**ಸಂದಿಹುದು ಚಿರನವತೆಯಶ್ವಥಮರಕೆ॥**
**ಎಂದೆಂದುಮಂತಿರುವುದೀ ವಿಶ್ವವೃಕ್ಷವದ।**
**ರೊಂದು ರೆಂಬೆಯೋ ನೀನು-ಮಂಕುತಿಮ್ಮ॥**

ಬಾಡಲಿನ್ನೊಂದು=ಬಾಡಲು+ಇನ್ನೊಂದು, ಚಿರನವತೆಯಶ್ವಥಮರಕೆ=ಚಿರ+ನವತೆ+ಅಶ್ವಥ್+ಮರಕೆ,
ಎಂದೆಂದುಮಂತಿರುವುದೀ=ಎಂದೆಂದುಂ+ಅಂತಿರುವುದೀ,
ವಿಶ್ವವೃಕ್ಷವದರೊಂದು=ವಿಶ್ವ+ವೃಕ್ಷ+ಅದರ+ಒಂದು.
ಚಿರನವತೆ=ನಿತ್ಯ ನೂತನತೆ.

ಅಶ್ವತ್ಥಮರದ ಒಂದು ಕೊಂಬೆ ಒಣಗಿದರೆ ಮತ್ತೊಂದು ಚಿಗುರುತ್ತದೆ. ಹೇಗೆ ಆ ಮರವು ತನ್ನ ಚಿರನೂತನತೆಯನ್ನು ಕಾಪಾಡಿಕೊಳ್ಳುತ್ತದೋ, ಹಾಗೆಯೇ ಸಕಲ ಜೀವರಾಶಿಗಳಿಂದ ಕೂಡಿದ ಈ ಜಗತ್ತೆಂಬ ವಿಶ್ವವೃಕ್ಷವೂ ಎಂದೆಂದೂ ಬಾಡದೆ ಇರುತ್ತದೆ. ಅಂತಹ ವಿಶ್ವವೃಕ್ಷದ, ಒಂದು ರೆಂಬೆ ನೀನೆಂದು ತಿಳಿ, ಎಂದು ಒಂದು ಆದೇಶವನ್ನು ನೀಡುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ

ನೂರಾರು ವರ್ಷಗಳು ಜೀವಂತವಾಗಿರುವ ಒಂದು ವಿಶಾಲವಾದ ಅಶ್ವತ್ಥ ವೃಕ್ಷವು ನೂರಾರು ರೆಂಬೆ ಕೊಂಬೆಗಳಿಂದ ಕೂಡಿರುತ್ತದೆ. ಋತುಚಕ್ರದ ದಾಳಿಗೊಳಗಾಗಿ ಹಲವು ಕೊಂಬೆಗಳು ಬಾಡಿ ಒಣಗಿದರೂ ಮತ್ತೆ ಅಕ್ಕ ಪಕ್ಕಗಳಿಂದ ಹೊಸ ಚಿಗುರೊಡೆದು, ಹೊಸ ಕೊಂಬೆಗಳಿಗೆ ಎಡೆ ಮಾಡಿಕೊಟ್ಟು ಆ ಮರದ ನಿತ್ಯ ನೂತನತೆಯನ್ನು ಕಾದುಕೊಳ್ಳುತ್ತದೆ. ಇದು ಆ ಮರದ ಪ್ರಕೃತಿ ಅಥವಾ ಸ್ವಭಾವ. ಇದೇ ಸ್ವಭಾವವನ್ನು ಪಡೆದ ಹಲವಾರು ಗಿಡ ಮರಗಳು ನಮಗೆ ನಿಸರ್ಗದಲ್ಲಿ ಸಿಗುತ್ತವೆ. ನೋಡಿ ಬೇಸಿಗೆಯ ಬಿಸಿಲಿಗೆ ಒಣಗಿ ಸುಟ್ಟು, ನಾಮಾವಶೇಷವಾಗಿ ಹೋದ ಹುಲ್ಲಿನ

ಬೇರು, ನಮಗೆ ಕಾಣದಿದ್ದರೂ ಭೂಮಿಯೊಳಗಿದ್ದು, ನಾಲ್ಕು ಹನಿ ಮಳೆ ಬಿದ್ದೊಡನೆಯೇ ಚಿಗುರಿ ಧರೆಗೆ ಹಸಿರ ಹಾಸಿಗೆಯನ್ನೇ ಹಾಸುವುದಿಲ್ಲವೇ? ಅದೇ ರೀತಿ ಪ್ರಕೃತಿಯ ಎಲ್ಲವೂ.

ಇದನ್ನೇ ಇಡೀ ಜಗತ್ತಿಗೆ ಹೋಲಿಸಿದರೆ, ಜೀವಿಗಳು ಈ ಭುವಿಗೆ ಬೇರೆ ಬೇರೆ ರೂಪಗಳನ್ನು ಧರಿಸಿ ಬರುತ್ತವೆ, ಹೊಸ ಚಿಗುರಿನ ರೂಪದಲ್ಲಿ, ನಾವು ಪುಟ್ಟ ಪುಟ್ಟ ಮಕ್ಕಳನ್ನು ನೋಡಿದರೆ ನಮಗೆ ಒಂದು





ಆನಂದ, ಸಂತೋಷ ಆಗುತ್ತದೆ ಅಲ್ಲವೇ? ಏಕೆಂದರೆ ಅವು ಮಾನವ ಪ್ರಪಂಚದಲ್ಲಿ, ಹೊಸ ಚಿಗುರಿನಂತೆ ನಳನಳಿಸುತ್ತವೆ. ಹೊಸ ಚಿಗುರು, ಹೊಸ ಹೂವು, ಹೊಸ ಸುಗಂಧ, ಹೊಸ ಕಾಯಿ, ಹೊಸ ಹಣ್ಣು ಹೀಗೆ ಎಲ್ಲವೂ ನಮಗೆ ಮುದವನ್ನು ನೀಡುತ್ತವೆ. ಒಂದು ಪುಟ್ಟ ಹಕ್ಕಿ, ಒಂದು ಪುಟ್ಟ ನಾಯಿ ಮರಿ ಅಥವಾ ಹಂದಿ ಮರಿ, ಒಂದು ಹಾವಿನ ಪಿಳ್ಳೆ, ಒಂದು ಕೋತಿ ಮರಿ ಹೀಗೆ ಈ ಜಗತ್ತಿಗೆ ಬಂದ ಹೊಸದರಲ್ಲಿ ಎಲ್ಲವೂ ಆಕರ್ಷಣೀಯವಾಗಿರುತ್ತದೆ ಮತ್ತು ಸಂತೋಷಕ್ಕೆ ಕಾರಣವಾಗಿರುತ್ತದೆ.

ಕಾಲಾನುಕಾಲಕ್ಕೆ ಅವುಗಳಿಗೆ ವಯಸ್ಸಾಗಿ, ಬಲಿತು, ಮಾಗಿ, ಒಣಗಿ, ಉದುರಿ ಹೋಗುತ್ತದೆ. ಅದರ ಸ್ಥಳದಲ್ಲಿ ಮತ್ತೊಂದು ಹುಟ್ಟಿಕೊಳ್ಳುತ್ತದೆ. ಹಾಗೆ ಹುಟ್ಟಿಕೊಂಡದ್ದು ಮತ್ತೆ ಅದೇ ಚಕ್ರಕ್ಕೆ ಬಲಿಯಾಗುತ್ತದೆ ಮತ್ತೆ ಮತ್ತೆ ಹುಟ್ಟುತ್ತದೆ. ಹಾಗಾಗಿ ಈ ವಿಶ್ವವೃಕ್ಷಕ್ಕೆ ಎಂದಿಗೂ ಅಳಿವಿಲ್ಲ. ನಮ್ಮ ಪ್ರಾಣಿ ಪ್ರಪಂಚಲ್ಲಿನ ಪ್ರತಿಯೊಂದು "ಸಂಕುಲವನ್ನೂ (ಪ್ರಭೇದ) ಒಂದೊಂದು ವೃಕ್ಷವೆಂದು ಪರಿಗಣಿಸಿದರೆ, ಆ ಸಂಕುಲದಲ್ಲಿರುವ ಪ್ರತೀ ಪ್ರಾಣಿಯೂ ಆ ವೃಕ್ಷದ ಶಾಖೆಯಂತೆಯೇ ಅಲ್ಲವೇ? ಹಾಗೆಯೇ ಮನುಷ್ಯ ಸಂಕುಲದಲ್ಲಿ "ಪ್ರತೀ ಮಾನವನೂ ಒಂದೊಂದು ರೆಂಬೆಯನ್ನುತ್ತಾರೆ ಮಾನ್ಯ ಗುಂಡಪ್ಪನವರು. ಲಕ್ಷಾಂತರ ವರ್ಷಗಳಿಂದ ಈ ಮಾನವ ಸಂಕುಲದ ಕೋಟಿ ಕೋಟಿ ರೆಂಬೆಗಳು ಒಣಗಿ ಉದುರಿಹೋಗಿವೆ ಮತ್ತು ಹೊಸ ಹೊಸ ರೆಂಬೆಗಳು ಹುಟ್ಟುತ್ತಲೇ ಇವೆ.

ಇಂದು ಬದುಕಿರುವ ನಾವೂ ಸಹ ಈ ಪರಮಾತ್ಮನ ಸೃಷ್ಟಿಯಾದ ಜಗತ್ತಿನಲ್ಲಿ ಮಾನವ ಸಂಕುಲವೆಂಬ ಒಂದು ಬೃಹತ್ ವೃಕ್ಷದಲ್ಲಿನ "ರೆಂಬೆಗಳೇ ತಾನೇ? ತನ್ನಿಂದಲೇ ಸೃಷ್ಟಿಸಿಕೊಂಡ, ತಾನೇ ನಡೆಸುತ್ತಿರುವ ಮತ್ತು ತಾನೇ ವಾಸಿಸುತ್ತಿರುವ ಈ ಜಗತ್ತೆಂಬ ವೃಕ್ಷವನ್ನು ತನಗೆ ಹೇಗೆ ಬೇಕೋ ಹಾಗೆ ಸೃಷ್ಟಿಕೊಂಡಿದ್ದಾನೆ, ಆ ಪರಮಾತ್ಮ. ಇಂತಹ ಸುಂದರ ಜಗತ್ತಿನಲ್ಲಿ ನಮಗೂ ವಾಸಿಸಲು ಮತ್ತು ಇದರ ಸಕಲ ಸೊಬಗನ್ನೂ ಆಸ್ವಾದಿಸಲು, ಕೃಪೆ ತೋರಿ ಅನುವುಮಾಡಿಕೊಟ್ಟಿದ್ದಾನೆಂದು ನಾವೆಲ್ಲಾ ಆ ಪರಮ ಚೇತನಕ್ಕೆ ಭಕ್ತಿಯಿಂದ ಕೃತಜ್ಞತೆಯನ್ನು ತೋರುವುದಲ್ಲದೆ ಬೇರೇನನ್ನು ತಾನೇ ಮಾಡಲು ಸಾಧ್ಯ?.

**ಮುಕ್ತಕ-253** **ಅಂದಂದಿಗಾದನಿತು ಬುಡ ಕಟ್ಟಿ ಕಳೆ ತೆಗೆದು |**
**ಚೆಂದಳಿರು ದಿನದಿನಮುಮೊಗೆಯೆ ನೀರೆರೆದು ||**
**ಸಂದ ಬಲದಿಂದ ಜಗದಶ್ವತ್ಥ ಸೇವೆಯಲಿ ||**
**ನಿಂದಿರುವುದಲೆ ಧರ್ಮ - ಮಂಕುತಿಮ್ಮ ||**

ಅಂದಂದಿಗಾದನಿತು=ಅಂದಂದಿಗೆ+ಆದ+ಇನಿತು, ಚೆಂದಳಿರು=ಚೆಂದ+ತಳಿರು,
ದಿನದಿನಮುಮೊಗೆಯಾ=ದಿನದಿನಮುಂ+ಒಗೆಯ, ನೀರೆರೆದು=ನೀರು+ಎರೆದು, ಜಗದಶ್ವತ್ಥ=ಜಗದ+ಅಶ್ವತ್ಥ,
ನಿಂದಿರುವುದಲೆ=ನಿಂದಿರುವುದು+ಅದಲೇ.
ಮೊಗೆಯ=ಬೊಗಸೆಯ

ಇದು ನಮಗೆ ಜೀವಿಸುವ ಬಗೆಯ ತತ್ವವನ್ನು ಬೋಧಿಸುವ ಮುಕ್ತಕ, ಒಂದು ಸಣ್ಣ ಅರಳೀ ಸಸಿಯನ್ನು ತಂದು, ಭೂಮಿಯಲ್ಲಿ ಗುಣಿ ತೋಡಿ, ಸಸಿ ನೆಟ್ಟು, ಪ್ರತಿನಿತ್ಯ ಬೊಗಸೆ ಬೊಗಸೆಯಲ್ಲಿ ನೀರನ್ನು ಎರೆದು, ಕಳೆ

ತೆಗೆದು ಅದನ್ನು ಕಾಪಾಡಿ ಒಂದು ಬೃಹತ್ ವೃಕ್ಷವನ್ನಾಗಿಸಿದಂತೆ, ಈ ಜಗದಶ್ವತ್ಥದ ಸೇವೆಯಲಿ ನಿಲ್ಲುವುದೇ ಧರ್ಮವೆನ್ನುತ್ತಾರೆ ಮಾನ್ಯ ಗುಂಡಪ್ಪನವರು.

ನಮ್ಮ ತಾಯ ಗರ್ಭದಲ್ಲಿ ಬೀಜಾಂಕುರವಾಗಿ, ನಾವು ಈ ಭುವಿಗೆ ಒಂದು ಸಣ್ಣ (ಸಸಿಯಾಗಿ) ಶಿಶುವಾಗಿ ಬರುತ್ತೇವೆ. ಹಾಗೆ ಬಂದ ನಾವೇ ಒಂದು ಮರದಂತೆ ಬೆಳೆದು ನಮ್ಮ ವಂಶದ ಶಾಖೆಗಳನ್ನು ಹರಡಿ ಕೊಳ್ಳುತ್ತೇವೆ. ಇಲ್ಲಿ ನಾವು ಮರವಾದರೆ ನಮ್ಮಿಂದ ಹೊರಡುವುದೆಲ್ಲ ನಮ್ಮ ಶಾಖೆಗಳು ಅಥವಾ ಕೊಂಬೆಗಳಲ್ಲವೇ? ಹಾಗೆ ನಾವೂ ಸಹ ಯಾವುದೋ ಮರದ ಕೊಂಬೆಗಳಾಗಿರುತ್ತೇವೆ. ಹೀಗೆ ಎಲ್ಲ ಕೊಂಬೆಗಳಿಂದಾದ ಈ ಜಗತ್ತೇ ಒಂದು ವೃಕ್ಷದಂತೆ ಅಲ್ಲವೇ? ಈ ವೃಕ್ಷವನ್ನು ನಾವು ಸಂರಕ್ಷಿಸಬೇಕು, ಬೆಳೆಸಬೇಕು, ಕಳೆ ಕೀಳಬೇಕು ಮತ್ತು ಇದರ ಸೇವೆ ಮಾಡಬೇಕು. ಇದೇ ಧರ್ಮ ಎಂದು ಹೇಳುತ್ತಾರೆ ನಮ್ಮ ಗುಂಡಪ್ಪನವರು.

ಇಡೀ ಮನುಕುಲವೇ ಒಂದು ಬೃಹತ್ ವೃಕ್ಷ. ಈ ಭೂಮಿಯ ಮೇಲೆ ಮಾನವನ ಅಸ್ತಿತ್ವದ ಇತಿಹಾಸದ ಮೂಲಕ್ಕೆ ಹೋದರೆ, ಒಂದೇ ಒಂದು ಬೀಜದಿಂದ ಬೆಳೆದ ಒಂದು ಬೃಹತ್ ವೃಕ್ಷದಂತೆ, ಒಂದೇ ಮೂಲದಿಂದ ಹೊರಟ ಮಾನವ ಹಲವಾರು ದಿಕ್ಕುಗಳಿಗೆ, ಗುಂಪು ಗುಂಪಾಗಿ ತೆರಳಿ, ಇಡೀ ಭೂಮಂಡಲದಲ್ಲೆಲ್ಲಾ ವ್ಯಾಪಿಸಿಕೊಂಡಿರುವ ಒಂದು ಮಹಾನ್ “ಮಾನವ ಸಮೂಹ ವೃಕ್ಷದಂತೆ ಬೆಳೆದುಕೊಂಡಿದ್ದಾನೆ.

ಬೇರೆ ಬೇರೆ ದಿಕ್ಕುಗಳಲ್ಲಿ ಹೊರಟ ಒಂದೊಂದು ಸಮೂಹವೂ ಈ ಮಾನವ ಸಮೂಹ ವೃಕ್ಷದ ಒಂದೊಂದು ಕೊಂಬೆಯಂತೆ ಗೋಚರವಾಗುತ್ತದೆ. ಮೂಲದಲ್ಲಿದ್ದ ಗುಣಗಳು, ಸಂಸ್ಕಾರಗಳು, ಸಂಸ್ಕೃತಿಗಳು ಬದಲಾಗುತ್ತಾ, ಇವನ ಭಾಷೆ, ವೇಷ, ಅಚಾರ ವಿಚಾರಗಳು, ಕಾಲ ಬದಲಾದಂತೆ, ಸ್ಥಳ ಬದಲಾದಂತೆ ಬದಲಾಗುತ್ತಾ ಬೇರೆಯದೇ ರೂಪವನ್ನು ತಳೆದುಕೊಳ್ಳುತ್ತಾ ಹೋಗಿದೆ. ಮನುಷ್ಯ ಹೋದ ಕಡೆಯಲ್ಲೆಲ್ಲ ಒಂದು ಹೊಸ ಸಂಸ್ಕೃತಿ ಕಲೆ ಸಾಹಿತ್ಯಗಳ ಉಗಮವಾಯಿತು. ಕಾಲಾನುಕಾಲದಲ್ಲಿ ಮೂಲವನ್ನು ಮರೆತು, ತನ್ನ ಸ್ವಂತಿಕೆಯಿಂದಲೇ ಮೆರೆಯಲು ಶುರುವಾಯಿತು. ಹೀಗೆ ಹಲವಾರು ರೀತಿಯ ಭಾಷೆಗಳು, ಕಲೆ ಸಾಹಿತ್ಯಗಳು, ಉಡುಗೆ ತೊಡುಗೆಗಳು, ಆಹಾರ ಪದ್ಧತಿಗಳು, ಸಾಮಾಜಿಕ ಮೌಲ್ಯಗಳು ಇತ್ಯಾದಿಯಾಗಿ, ಒಂದೊಂದು ಶಾಖೆಯೂ ವಿಶಾಲವಾಗಿ ಹರಡಿ ನಿಂತಿದೆ ಈ ಜಗದ್ವೃಕ್ಷದಲ್ಲಿ.

ನಾವುಗಳು ಅಂತಹ ಜಗದ್ವೃಕ್ಷದ ಒಂದು ಶಾಖೆಯ ಒಂದು ಕೊಂಬೆಯಾಗಿಯೋ, ರೆಂಬೆಯಾಗಿಯೂ, ಎಲೆಯಾಗಿಯೋ, ಹೂ ಕಾಯಿ, ಹಣ್ಣಾಗಿಯೋ ಇದ್ದೇವೆ. ನಾವು ಈ ವೃಕ್ಷದ ಅಂದವನ್ನು ಹೆಚ್ಚಿಸಲು, ಇದರ ಸತ್ವಯುತ ಮೌಲ್ಯಗಳನ್ನು, ಕಾಪಾಡುತ್ತಾ, ಇಲ್ಲಿರುವ ದುರಾಚಾರದ ಕಳೆಯನ್ನು ಕಿತ್ತೊಗೆಯುತ್ತಾ, ಕೊಳೆತು ನಾರುತ್ತಾ, ಇಡೀ ವೃಕ್ಷಕ್ಕೆ ಹಾನಿ ಉಂಟುಮಾಡಬಹುದಾದ ಭಾಗಗಳನ್ನು ಕತ್ತರಿಸಿ ಬಿಸುಡುತ್ತಾ, ಹೊಸ ಚಿಗುರಿನಿಂದ ನಳನಳಿಸುತ್ತಾ ಈ ಜಗತ್ ವೃಕ್ಷದ ಅನ್ಯ ಶಾಖೆಗಳೊಂದಿಗೆ ಸೌಹಾರ್ದಯುತವಾದ ಬಾಳು ಬಾಳುತ್ತಾ, ಇದರ ಸೌಂದರ್ಯಕ್ಕೆ ಚ್ಯುತಿಬಾರದಂತಹ ಕೆಲಸವನ್ನು ಸೇವಾ ರೂಪದಲ್ಲಿ ಮಾಡಬೇಕಾಗಿರುವುದೇ ನಮ್ಮ ಇಂದಿನ ಧರ್ಮವೆಂದು ಮಾನ್ಯ ಗುಂಡಪ್ಪನವರು ಆದೇಶ ಮಾಡಿದ್ದಾರೆ.





ಆದರೆ ಪ್ರಸಕ್ತ ವಸ್ತು ಸ್ಥಿತಿಯೇ ಬೇರೆ ಇದೆ. ಅಂತಃಕರಣವಿರುವ ಪ್ರತಿಯೊಬ್ಬನಿಗೂ ಖೇದವಾಗುವಂತಹ, ಜಗತ್ತಿನ ಮೇಲೆ ಜಿಗುಪ್ಸೆ ಬರುವಂಥಾ ಸ್ಥಿತಿ ಉಂಟಾಗಿದೆ. ಇದನ್ನು ಸರಿಪಡಿಸಲು ಪ್ರಯತ್ನಪಡಬೇಕಾದುದೇ ನಮ್ಮ ಇಂದಿನ ಧರ್ಮವೆಂಬುದೇ ಈ ಮುಕ್ತಕದ ಹೂರಣ. ನಾವೂ ಸಹ ನಮ್ಮ ವೃತ್ತಗಳಲ್ಲಿ, ಈ ಜಗತ್ತೆಂಬ ವೃಕ್ಷದ ಸುಂದರತೆಗಾಗಿ ಶ್ರಮಿಸಬೇಕಲ್ಲವೇ?

# ಬ್ರಹ್ಮ ನಾಟಕ 254-258

**ಮುಕ್ತಕ-254**

**ನಾಟಕವ ನೋಡು ಬ್ರಹ್ಮಾಂಡ ರಂಗಸ್ಥಳದಲಿ ।**
**ಕೋಟಿ ನಟರಾಂತಿಹರು ಚಿತ್ರ ಪಾತ್ರಗಳ ॥**
**ಆಟಕ್ಕೆ ಕಥೆಯಿಲ್ಲ ಮೊದಲಿಲ್ಲ ಕಡೆಯಿಲ್ಲ ।**
**ನೋಟಕರು ಮಾಟಕರೆ - ಮಂಕುತಿಮ್ಮ ॥**

ನಟರಾಂತಿಹರು=ನಟರು+ಇಂತು+ಇಹರು.

ಇಡೀ ಬ್ರಹ್ಮಾಂಡವೇ ಒಂದು ರಂಗಸ್ಥಳ. ಈ ರಂಗಸ್ಥಳದಲ್ಲಿ ನಡೆಯುವ ನಾಟಕವ ನೋಡು. ಈ ನಾಟಕದಲ್ಲಿ ಚಿತ್ರ ವಿಚಿತ್ರ ಪಾತ್ರಗಳ ಧರಿಸಿ ಕೋಟಿ ಕೋಟಿ ನಟರು ತಮ್ಮ ತಮ್ಮ ಪಾತ್ರಗಳ ಧರಿಸಿದ್ದಾರೆ. ಈ ನಾಟಕಕ್ಕೆ ಕಥೆಯಿಲ್ಲ ಮತ್ತು ಪ್ರತಿಯೊಂದೂ ಅಂಕಕ್ಕೂ, ಮೊದಲಿಲ್ಲ, ಕೊನೆಯಿಲ್ಲ. ಎಲ್ಲರೂ ಪಾತ್ರಧಾರಿಗಳಾಗಿಯೂ ಪ್ರೇಕ್ಷಕರಾಗಿಯೂ ಇದ್ದಾರೆ ಎನ್ನುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಹೌದಲ್ಲವೇ ವಾಚಕರೆ!! ಈ ಜಗತ್ತೇ ಒಂದು ನಾಟಕ ಮಂದಿರ. ಇಲ್ಲಿರುವ ಎಲ್ಲರೂ ಕೇವಲ ಪಾತ್ರಧಾರಿಗಳು. ಇದು ಕೇವಲ ಮನುಷ್ಯರಿಗೆ ಮಾತ್ರವೇ ಅನ್ವಯಿಸುವುದಿಲ್ಲ. ಪರಮಾತ್ಮನ ಸೃಷ್ಟಿಯ ಸಕಲ ಜೀವರಾಶಿಗಳಿಗೂ ಅನ್ವಯಿಸುತ್ತದೆ. ಎಲ್ಲ ಜೀವಿಗಳಿಗೂ ಒಂದೊಂದು ಪಾತ್ರ ವಿಧಿತ. ಪ್ರತೀ ಜೀವಿಯೂ ಒಂದೊಂದು ವೇಷ(ರೂಪ)ಧರಿಸಿ ಈ ಜಗನ್ನಾಟಕದಲ್ಲಿ ನಟಿಸುತ್ತಾರೆ. ಇಲ್ಲಿ ನಡೆಯುವ ನಾಟಕಕ್ಕೆ ಕಥೆಯಿಲ್ಲ. ಇದು ಎಂದು ಶುರುವಾಯಿತೋ ಗೊತ್ತಿಲ್ಲ, ಎಂದು ಕೊನೆಯಾಗುವುದೋ ಗೊತ್ತಿಲ್ಲ. ಎಲ್ಲ ಪಾತ್ರಧಾರಿಗಳೂ ತಾವು ಹಿಂದಿನಿಂದ ಹೊತ್ತು ತಂದ ಪಾತ್ರವನ್ನು, ಗುಣ ಮತ್ತು ಸ್ವಭಾವ ಜನ್ಯವಾದ ಮಾತುಗಳನ್ನು ಆಡುತ್ತಾ ನಟನೆಯನ್ನು ಮಾಡುತ್ತಾ ನೇಪತ್ಯಕ್ಕೆ ಸರಿದು, ಮತ್ತೊಂದು ರೂಪ ಧರಿಸಿ ಮತ್ತೆ ರಂಗ ಪ್ರವೇಶ ಮಾಡುತ್ತಾರೆ.

ಇದು ನಾಟಕವಾದರೆ, ಈ ನಾಟಕವನ್ನು ನೋಡುವವರು ಯಾರು? ಆ ನೋಡುವವರೂ ಇಲ್ಲಿ ಪಾತ್ರಮಾಡುತ್ತಿರುವ ನಟರೆ ಅಲ್ಲವೇ? ಇಲ್ಲಿ ಪ್ರದರ್ಶಿಸಲ್ಪಡುವ ನಾಟಕವನ್ನು ನೋಡಿ, ಇದನ್ನೇ ನಿಜವೆಂದು ನಂಬಿರುವವರು ಇಲ್ಲಿನ ಪಾತ್ರಧಾರಿಗಳು. ಆದರೆ ಈ ಜಗನ್ನಾಟಕದ ಸೂತ್ರಧಾರಿಯಾದ ಆ ಪರಮಾತ್ಮನೂ ಮತ್ತು ಅವನ ಪ್ರತಿನಿಧಿಯಾದ ಆತ್ಮನೂ ಈ ನಾಟಕವನ್ನು ಕೇವಲ ಸಾಕ್ಷಿಗಳಂತೆ ನೋಡುತ್ತಾರೆ.

ಆದರೆ ಇಲ್ಲಿನ ವಿಚಿತ್ರವೇನೆಂದರೆ ಪಾತ್ರಧಾರಿ ಮೊದಲೊಂದು ಮುಗ್ಧ ಪಾತ್ರವಾಗಿ, ಇದೇ ರಂಗದಲ್ಲೇ ತಾಲೀಮು ಪಡೆದು ಏನೇನನ್ನೋ ಕಲಿತು, ಅರಿತು ಬೆಳೆದು ಒಬ್ಬ ಪ್ರೌಢ ಪಾತ್ರವಾಗಿ, ಹಾಗೆ ಕಲಿತು ಅರಿತದ್ದನ್ನೆಲ್ಲಾ ಇಲ್ಲಿಯೇ ಪ್ರದರ್ಶಿಸಿ ಜಗದ ಮೆಚ್ಚುಗೆಗೋ, ತಾಟಸ್ಥ್ಯಕ್ಕೋ, ನಿಂದೆಗೋ, ಅಪವಾದಕ್ಕೋ ಅಥವಾ ಅಪನಿಂದೆಗೋ ಗುರಿಯಾಗಿ, ತಾನು ಕಲಿತದ್ದನ್ನು ಅನ್ಯರಿಗೆ ಕಲಿಸಿ, ತಾನು ಕಲಿತದ್ದನ್ನೆಲ್ಲಾ ಜರಡಿಯಾಡಿಸಿ, ಸಾರವನ್ನು ಹೊತ್ತುಕೊಂಡು ಮತ್ತೊಂದು ಪ್ರದರ್ಶನಕ್ಕೆ ಅಣಿಯಾಗಿ ಮತ್ತೆ ರಂಗ ಪ್ರವೇಶ ಮಾಡುತ್ತಾನೆ. ಇಷ್ಟೆಲ್ಲಾ ಪಾತ್ರಗಳನ್ನೂ ಧರಿಸಿದರೂ ಇವನಿಗೆ ಇದು ಒಂದು ಕೊನೆಮೊದಲಿಲ್ಲದ ನಾಟಕ ಎಂದು ಅರ್ಥವಾಗುವುದೇ ಇಲ್ಲ.

ಹೀಗೆ ಹಲವಾರು ಪಾತ್ರಗಳ ಧರಿಸಿ, ಪ್ರತೀ ಪ್ರವೇಶದಲ್ಲೂ "ತಾನೊಂದು ಪಾತ್ರ, ನನ್ನ ಜೀವನವೆನ್ನುವುದು ಕೇವಲ ನಾಟಕ. ಇದು ನನ್ನ ಮನೆಯಲ್ಲ, ನಾನು ಸ್ವಸ್ಥಾನ ಸೇರಬೇಕಾದರೆ ಈ ನಾಟಕದಿಂದ ಶಾಶ್ವತವಾಗಿ ನೇಪತ್ಯಕ್ಕೆ ಸರಿಯಬೇಕು" ಎಂದು ಅರಿತಾಗ ಕ್ರಮೇಣ, ದಿರಿಸ ಸರಿಸಿ, ಬಣ್ಣ ಕಳಚಿ ಈ ನಾಟಕದಿಂದ ಮುಕ್ತಿ ಪಡೆಯಬಹುದು.

**ಮುಕ್ತಕ-255**

**ನಾಟಕದೊಳನುವಿಂದ ಬೆರೆತದನು ಮೆಚ್ಚೆನಿಸಿ ।**
**ನೋಟಕನುವಾಗಿ ತಾಂ ನಲಿದು ನಲಿಯಿಸುವಾ ॥**
**ಪಾಠವನು ಕಲಿತವನೆ ಬಾಳನಾಳುವ ಯೋಗಿ ।**
**ಆಟಕಂ ನಯವುಂಟು - ಮಂಕುತಿಮ್ಮ ॥**

ನಾಟಕದೊಳನುವಿಂದ=ನಾಟಕದೊಳು+ಅನುವಿಂದ, ಬೆರೆತದನು=ಬೆರೆತು+ಅದನು,
ಮೆಚ್ಚೆನಿಸಿ=ಮೆಚ್ಚು+ಎನಿಸಿ, ನೋಟಕನುಮಾಗಿ=ನೋಟಕನುಂ+ಆಗಿ.
ಅನುವಿಂದ=ಸಿದ್ಧನಾಗಿ, ಆಟಕಂ=ಆಟಕ್ಕೆ, ನಯವುಂಟು=ನಿಯಮವುಂಟು.

ಈ ಜಗನ್ನಾಟಕದಲ್ಲಿ ಪಾತ್ರಧಾರಿಗಳಾದ ನಾವುಗಳು ಸಿದ್ಧರಾಗಿ ಪಾತ್ರ ಧರಿಸಿ, ಪಾತ್ರವನ್ನು ಮೆಚ್ಚಿಕೊಂಡು, ನಟನಾಗಿಯೂ ಪ್ರೇಕ್ಷಕನಾಗಿಯೂ ಪಾತ್ರವನ್ನು ನಿಭಾಯಿಸಿ ಆ ಪಾತ್ರದಲ್ಲಿ ತಾನೂ ನಲಿದು ಅನ್ಯರಿಗೂ ಸಂತಸವನ್ನು ನೀಡುವಂಥಾ ಪಾಠವನ್ನು ಕಲಿತರೆ ಯೋಗಿಗಳಾಗಬಹುದು. ಈ ಜಗನ್ನಾಟಕಕ್ಕೂ ಒಂದು ನಿಯಮ ಉಂಟು ಎಂದು ಮನುಷ್ಯರ ಬಾಳನ್ನು ಬಹಳ ಸುಂದರವಾಗಿ ವಿಶ್ಲೇಷಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಒಬ್ಬ ವ್ಯಕ್ತಿ ತನ್ನ 10-12ನೇ ವಯಸ್ಸಿಗೆ ಈ ಜಗದ ಪಾತ್ರವನ್ನು ಧರಿಸಿ ನಟಿಸಲು ಬೇಕಾದ, ವಿದ್ಯೆ, ಸುವಿದ್ಯೆ, ಕುವಿದ್ಯೆ, ದುರ್ವಿದ್ಯೆಗಳಂತಹ ಬುದ್ಧಿಗಳನ್ನು ಕಲಿಯಲು ಸಮರ್ಥನಾಗಿ ರೂಪುಗೊಳ್ಳುತ್ತಾನೆ. "ಮಕ್ಕಳಿಗೆ ತಂದೆ ಬಾಲ್ಯದೊಳಕ್ಕರ ವಿದ್ಯೆಗಳನರಿಪದಿರ್ದೊಡೆ ಕೊಂದಂ, ಲಕ್ಕಧನಮಿರಲು ಕೆಡುಗುಂ, ಚಿಕ್ಕಂದಿನ ವಿದ್ಯೆ ಪೊರಗು - ಚೂಡಾರತ್ನ" ಎಂಬಂತೆ ತಂದೆ ತಾಯಿಗಳು ಆ ಮಕ್ಕಳಿಗೆ ಸರಿಯಾದ ವಿದ್ಯೆಯನ್ನು ಕಲಿಸಿಕೊಟ್ಟಾಗ, ಅವರು ಈ ಜಗನ್ನಾಟಕದ ಪಾತ್ರಧರಿಸಲು ಯೋಗ್ಯರಾಗಿ ರೂಪುಗೊಳ್ಳಲು ಸಾಧ್ಯವಾಗುತ್ತದೆ. ಹಾಗೆ ಕಲಿತ





ವಿದ್ಯೆಗಳ ಆಧಾರದಮೇಲೆ ಒಬ್ಬಬ್ಬರದೊಂದೊಂದು ಪಾತ್ರ ಆದರೆ ಹೀಗೆ ಪಾತ್ರ ಧರಿಸುವಾಗ, ತನ್ನ ಪಾತ್ರವೇನು, ತನ್ನ ಬಾಧ್ಯತೆಗಳೇನು ಎಂದು ಅರಿತು ತನ್ನ ಪಾತ್ರ ನಿರ್ವಹಿಸಿದರೆ, ಆಗ ತಾನೂ ಸಂತಸದಿಂದ ಇದ್ದು ನಾಟಕದ ಅನ್ಯ ಪಾತ್ರಧಾರಿಗಳಿಗೂ ಸಂತಸವನ್ನು ನೀಡುವಂಥಾ ಭಾಗ್ಯ ನಮ್ಮದಾಗಬಹುದು. ಹಾಗೆ ಅರಿತು ಬಾಳ ನಾಟಕದ ಪಾತ್ರ ಧರಿಸುವವನನ್ನು ಯೋಗಿ ಎಂದು ಕರೆಯಬಹುದು.

ಆದರೆ ಈ ಜಗತ್ತಿನಲ್ಲಿ ಬಹುತೇಕ ಮಂದಿಗೆ, ತಾವು ಯಾರು, ತಮ್ಮ ಪಾತ್ರವೇನು, ಈ ಜಗತ್ತಿನ ನಿಯಮವೇನು, ಆ ನಿಯಮಗಳನ್ನು ತಾನು ಹೇಗೆ ಪಾಲಿಸಬೇಕು ಎಂಬ ಕಿಂಚಿತ್ ಪರಿಜ್ಞಾನವೂ ಇರುವುದಿಲ್ಲ. ಅದರಲ್ಲಿ ಅವರ ತಪ್ಪಿಲ್ಲ, ಏಕೆಂದರೆ ಅವರು "ಅರಿಯುವಂತೆ" ರೂಪುಗೊಳ್ಳಲಿಲ್ಲ. ಅಂಥವರು ತಮ್ಮ ತಮ್ಮ ಪಾತ್ರಗಳನ್ನು ಸರಿಯಾಗಿ ಧರಿಸಲಾಗದಂತವರಾಗುತ್ತಾರೆ. ಇನ್ನು ಕೆಲವರು ಅರಿತರೂ, ಅದನ್ನು ಕೇವಲ ತಮ್ಮ ಸ್ವಾರ್ಥ ಸಾಧನೆಗೆ ಉಪಯೋಗಿಸುತ್ತಾ ತಾವು ಸಂತಸಿಸುತ್ತಾ, ಅನ್ಯರನ್ನು ಪೀಡಿಸುತ್ತಾ ಪರರ ನೋವಿಗೆ ಕಾರಣರಾಗುತ್ತಾರೆ. ಇವರು ಈ ನಾಟಕದ ಖಳನಾಯಕರು, ಕೇವಲ ಬೆರಳೆಣಿಕೆಯಷ್ಟು ಜನ ತಾವೂ ಸಂತಸಪಟ್ಟು ಅನ್ಯರಿಗೆ ಸಂತಸ ಕೊಡುವವರು ಮತ್ತೆ ತಾನು ನೋವುಂಡರೂ ಪರರಿಗೆ ಸಂತಸವನ್ನು ನೀಡುವವರೂ ಆಗಿರುತ್ತಾರೆ. ಅಂಥಹವರು ಯೋಗಿಗಳು. ಕೆಲವರು ತಮ್ಮ ಪಾತ್ರದ ಬಗ್ಗೆ ಯೋಚಿಸದೆ, ಸುಮ್ಮನೆ ನಟಿಸುತ್ತಾ ಒಂದು ನಿಷ್ಪ್ರಯೋಜಕ ಪಾತ್ರವಾಗಿ ಬಿಡುತ್ತಾರೆ.

ನಮಗೆ ವಿವೇಚನೆಯಿದೆ. ಅದನ್ನು ಉಪಯೋಗಿಸಿಕೊಂಡು ನಮ್ಮ ಪಾತ್ರವನ್ನರಿತು, ಆ ಪಾತ್ರಕ್ಕೆ ತಕ್ಕಂತಹ ಮಾತು, ಹಾವ, ಭಾವ ಮತ್ತು ನಟನೆ ಮಾಡಿದರೆ ಒಂದು ಸಾರ್ಥಕ ಪಾತ್ರವನ್ನು ಮಾಡಿ ಮುಂದಿನ ಪಾತ್ರಗಳಿಗೆ ಒಂದು ಭದ್ರ ಅಡಿಪಾಯವನ್ನು ಹಾಕಿಕೊಳ್ಳಬಹುದು. ಉತ್ತಮ ನಟರೆನಿಸಿಕೊಳ್ಳಬಹುದು.

**ಮುಕ್ತಕ-256**

**ಪರದಮೇಲ್ಕಣ್ಣಿಟ್ಟು ಧರೆಯ ತುಚ್ಛವೆನುತ್ತ |**
**ತೊರೆದಾಯಸಂಗೊಳ್ಳೆ ದೊರೆವ ಫಲವೇನು? ||**
**ಸುರಧನುವಿಗೇಣಿಯಿಡಹೊರಟು ನಿನ್ನಂಗಳದ |**
**ಕಿರಿಹೂವ ಮರೆಯುವೆಯ - ಮಂಕುತಿಮ್ಮ ||**

ಪರದಮೇಲ್ಕಣ್ಣಿಟ್ಟು=ಪರದ+ಮೇಲೆ+ಕಣ್ಣಿಟ್ಟು, ತುಚ್ಛವೆನುತ್ತ=ತುಚ್ಛ+ಎನುತ,
ತೊರೆದಾಯಸಂಗೊಳ್ಳೆ=ತೊರೆದು+ಆಯಸಂ+ಗೊಳ್ಳೆ,
ಸುರಧನುವಿಗೇಣಿಯಿಡಹೊರಟು=ಸುರಧನುವಿಗೆ+ಏಣಿ+ಇಡ+ಹೊರಟು, ನಿನ್ನಂಗಳದ=ನಿನ್ನ+ಅಂಗಳದ.
ಪರದ=ಉತ್ತಮವಾದ ಲೋಕ ಅರ್ಥಾತ್ ಸ್ವರ್ಗದ, ಧರೆಯ=ಈ ಭೂಮಿಯ, ತುಚ್ಛವೆನುತ=ಕೀಳೆನ್ನುತ್ತ, ತೊರೆದು=ಬಿಟ್ಟು, ಆಯಸಂಗೊಳ್ಳೆ=ಆಯಾಸಪಟ್ಟರೆ, ಸುರಧನು=ಕಾಮನಬಿಲ್ಲು, ನಿನ್ನಂಗಳದ=ಮನೆಯ ಮುಂದಿನ ಹೂದೋಟ.

ಈ ಜಗತ್ತಿನಲ್ಲಿ ಹುಟ್ಟಿ, ಇದು ಕಳಪೆಯಾಗಿದೆ, ಇದು ಕೀಳು, ಎನ್ನುತ್ತಾ, ನಮಗೆ ಗೊತ್ತಿಲ್ಲದ ಆ ಸ್ವರ್ಗಕ್ಕೆ ಅಥವಾ ಸುರಲೋಕಕ್ಕೆ ಆಸೆಪಟ್ಟು, ಇದನ್ನು ತೊರೆದರೆ ಏನು ಫಲ? "ಆಕಾಶದಲ್ಲಿನ ಕಾಮನ ಬಿಲ್ಲಿಗೆ ಆಸೆಪಟ್ಟು ನಿನ್ನ ಮನೆಯ ಅಂಗಳದಲ್ಲಿ ಅರಳಿದ ಒಂದು ಸಣ್ಣ, ಆದರೂ ಸುಂದರ ಹೂವನ್ನು ಕಡೆಗಣಿಸುವೆಯಾ?" ಎಂದು ಒಂದು ಪ್ರಶ್ನೆಯನ್ನು ಕೇಳುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

"ಈ ಜಗತ್ತು ಮಿಥ್ಯ" " ಸಂಸಾರ ಸಾಗರಂ ಅನಂತ ಘೋರಂ" ಇತ್ಯಾದಿಯಾಗಿ ಹಲವಾರು ಮಹಿಮಾನ್ವಿತರು ಹೇಳಿದ್ದಾರೆ. ಆದ್ದರಿಂದ "ಅಯ್ಯೋ ಈ ಜಗತ್ತಿನಲ್ಲಿ ಏನಿದೆ, ಇಲ್ಲಿರುವುದೆಲ್ಲ ಎಂದಾದರೂ ಒಂದು ದಿನ ಕೊನೆಯಾಗಲೇ ಬೇಕು. ಇಂತಹ ನಶ್ವರವಾದ ಪ್ರಪಂಚದಲ್ಲಿ ಎಷ್ಟು ದಿನ ಬದುಕಿದರೂ ಒಂದು ದಿನ ಇದನ್ನೆಲ್ಲಾ ಬಿಟ್ಟು ಹೋಗಲೇ ಬೇಕಲ್ಲವೇ' ಎಂದು, ಇನ್ನೂ ಹಲವಾರು ಬಗೆಯಲ್ಲಿ ಈ ಜಗತ್ತನ್ನು ಹಳಿಯುವ ಮತ್ತು ಒಣ ವೇದಾಂತದ ಮಾತುಗಳನ್ನು ಆಡುವ ಜನರನ್ನು ನಾವು ಬಹಳ ಬಾರಿ, ಬಹಳಷ್ಟು ಕಡೆ ಕಾಣುತ್ತೇವೆ. ಇದನ್ನು ಬಿಟ್ಟು ಬೇರೆ ಏನಿದೆಯೋ ನಾ ಕಾಣೆ ಇಲ್ಲಿರುವಾಗ ಚೆನ್ನಾಗಿ ಅನುಭವಿಸಿ ಬಿಡಬೇಕು" ಎಂದು ಹೇಳುವವರನ್ನೂ ನಾವು ಕಾಣುತ್ತೇವೆ. ಹೀಗೆ ಈ ಇಹ-ಪರದ ಯುದ್ಧ ಮುಗಿಯುವುದೇ ಇಲ್ಲ. ಆದರೆ ಈ ಇಹವೂ ಮತ್ತು ಪರವೂ, ಆ ಪರಮಚೇತನದ ಕೃತಿಯಾದ್ದರಿಂದ ಒಂದನ್ನು ಮೆಚ್ಚುವ ಇನ್ನೊಂದನ್ನು ಹಳಿಯುವ ಬುದ್ಧಿ ಕೇವಲ ಅನಾಗರೀಕವಲ್ಲವೇ?

ಬಹಳಷ್ಟು ಜನ ಸತ್ಯವನ್ನರಿಯದೆ, ಈ ಜಗತ್ತಿನ ಮೇಲೆ ಆಸೆಯಿಲ್ಲದಂತೆ ನಟಿಸಿ ಪರಕ್ಕಾಗಿ ಮಂತ್ರ, ತಂತ್ರ, ಜಪ, ನೇಮ, ವ್ರತ ಹೋಮ, ಹವನ, ಭಜನೆ ಎಂದು ನಾನಾ ರೀತಿಯಲ್ಲಿ ಪರದ ಆಸೆಯಲ್ಲಿ ಇಹವನ್ನು ಮರೆತಂತೆ ತೋರುತ್ತಾರೆ. ಇಹದ ಆಸೆ ಸಾಯುವುದೇ ಇಲ್ಲ, ಆದರೂ ಕೈಗೆಟುಕದ ಪರದ ಚಿಂತೆಯಲ್ಲಿ ಇಹವನ್ನು ಜೀವಿಸದೆ ಇಲ್ಲೂ ಇಲ್ಲದೆ, ಅಲ್ಲೂ ಸಲ್ಲದೆ ಒಂದು "ಎಡಬಿಡಂಗಿ" ಸ್ಥಿತಿಯಲ್ಲಿದ್ದಾರೆ. ನಾವು ಬಂದದ್ದೇ ಪರದಿಂದ, ಇದು ಸತ್ಯ. ನಾವು ಸೇರಬೇಕಾದ್ದೂ ಪರವೇ. ಇದೂ ಸತ್ಯ. ಇಹದ ಸಂಸರ್ಗದಲ್ಲೇ ಅದರ ಸಹಾಯದಿಂದಲೇ ಪರವನ್ನು ಸೇರಬೇಕು.

"ದೇಹಾನಂದ"ವನ್ನು "ಇಹದ" ಆನಂದವೆಂದುಕೊಂಡರೆ, "ಆತ್ಮಾನಂದ"ವನ್ನು "ಪರ"ದ ಆನಂದವೆಂದು ಅರಿಯಬೇಕು. ಆದರೆ ದೇಹದಲ್ಲಿ ಆತ್ಮವಿದ್ದರೆ ಮಾತ್ರ ಇಂದ್ರಿಯ ಸುಖವನ್ನನುಭವಿಸಬಹುದು. ಹಾಗೆಯೇ ಆತ್ಮಕ್ಕೆ ಪರವನ್ನು ಸೇರಲು ಈ ದೇಹವೊಂದು ಉಪಕರಣ. ಆದ್ದರಿಂದ ಇಹವು ಮತ್ತು ಪರವು ಪರಸ್ಪರ ಪೂರಕ, ಆಕಾಶದಲ್ಲಿ ಕಾಣುವ ಕಾಮನ ಬಿಲ್ಲಿಗೆ ಏಣಿಯನ್ನು ಹಾಕದೆ, ನಮ್ಮ ಮನೆಯ ಅಂಗಳದಲ್ಲಿ ಬೆಳೆದ ಬಣ್ಣ ಬಣ್ಣದ ಹೂಗಳನ್ನು ನೋಡಿ

ಆನಂದಿಸಬೇಕು. ಆ ಆನಂದದಲ್ಲಿ ಕಾಮನ ಬಿಲ್ಲಿನ ಏಳೂ ಬಣ್ಣಗಳ ಸುಖವನ್ನು ಅನುಭವಿಸಬೇಕು. ಕೈಲಿರುವುದನ್ನು ಬಿಟ್ಟು, ಕೈಗೆಟುಕದ್ದಕ್ಕೆ ಆಸೆಪಟ್ಟು ಇಹವನ್ನೂ ಮತ್ತು ಪರವನ್ನೂ ಹಾಳುಗೆಡವಿ ಜೀವನವನ್ನು ಕೊರತೆಗಳ ಕೂಪದಲಿ ತಳ್ಳುವುದಕ್ಕಿಂತ ಇರುವುದರಲ್ಲಿ ಬಾಳಿ ಆನಂದಿಸುವುದೇ ಒಳಿತಲ್ಲವೇ?





**ಮುಕ್ತಕ-257**

**ಪರಕಿಹವೆ ಸೋಪಾನವೆಂದು ನೀನೊಪ್ಪುವೊಡೆ।**
**ಪರಕಿಂತಲಿಹವೆಂತು ಜೊಳ್ಳದಾದೀತು ?**
**ಹೊರಲೆಬೇಕಂತಾದೊಡಿಹದ ಹೊರೆಗಳನ್ನೆಲ್ಲ।**
**ಜರೆವುದೇಕಿನ್ನದನು ? – ಮಂಕುತಿಮ್ಮ ||**

ಪರಕಿಹವೆ=ಪರಕೆ+ಇಹವೆ, ಸೋಪಾನವೆಂದು=ಸೋಪಾನವು+ಎಂದು,
ನೀನೊಪ್ಪುವೊಡೆ=ನೀನು+ಒಪ್ಪುವೊಡೆ, ಪರಕಿಂತಲಿಹವೆಂತು=ಪರಕಿಂತ+ಇಹವು+ಎಂತು,
ಜೊಳ್ಳದಾದೀತು=ಜೊಳ್ಳು+ಅದು+ಆದೀತು,
ಹೊರಲೆಬೇಕಂತಾದೊಡಹದ=ಹೊರಲೇ+ಬೇಕು+ಅಂತ+ಆದೊಡೆ+ಇಹದ,
ಹೊರೆಗಳನ್ನೆಲ್ಲ=ಹೊರೆಗಳನ್ನು+ಎಲ್ಲ, ಜರೆವುದೇಕಿನ್ನದನು=ಜರೆವುದು+ಏಕೆ+ಇನ್ನು+ಅದನು.
ಜೊಳ್ಳು=ಪೊಳ್ಳು, ಸತ್ವಹೀನ.

ಪರವನ್ನು ಸೇರಲು ಇಹವೆ ಮೆಟ್ಟಿಲು ಎಂದು ನೀನು ಒಪ್ಪುವುದಾದರೆ, ಇಹವು ಪರಕ್ಕಿಂತ ಜೊಳ್ಳಾಗುವುದೆಂತು? ಈ ಜಗತ್ತಿನಲ್ಲಿ ನಾವು ಬಂದಮೇಲೆ, ನಮ್ಮ ಬದುಕಿನ ಹೊರೆಗಳನ್ನು ಹೊರಲೇಬೇಕು

ಎಂದಾದರೆ ಈ ಇಹದ ಬದುಕನ್ನು ಹಳಿಯುವುದು ಏಕೆ? ಎನ್ನುತ್ತಾ ಒಂದು ಬದುಕಿನ ಸೂಕ್ಷ್ಮ ವಿಚಾರವನ್ನು ವಿಮರ್ಶೆ ಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಇಹವೆಂದರೆ ಈ ಜಗದ ಬದುಕು. ಪರವೆಂದರೆ, ನಾವು ನಂಬಿರುವಂತೆ ಸ್ವರ್ಗವೋ, ನರಕವೋ, ಮುಕ್ತಿಯೋ ಅಥವಾ ಇನ್ನೊಂದು ಜನ್ಮವೋ!! ಒಂದು ಬಾರಿ ಜನ್ಮವೆತ್ತಿದರೆ ಅದು ಈ ಜಗತ್ತಿನಲ್ಲೇ ಆಗಬೇಕು. ಈ ಜಗತ್ತಿನಲ್ಲೇ ಬದುಕಬೇಕು. ನಮ್ಮ ಎಲ್ಲ ಅನುಭವಗಳನ್ನೂ ಈ ಜಗತ್ತಿನಲ್ಲಿ ಪಂಚ ಭೂತ ಪ್ರೇರಿತ ಇಂದ್ರಿಯಗಳ ಸಂಸರ್ಗದಿಂದಲೇ ಆಗಬೇಕು. "ಬೇರೆ ದಾರಿಯಿಲ್ಲ" ಎಂಬುದು ನಮಗೆಲ್ಲರಿಗೂ ಗೊತ್ತು ಮತ್ತು ನಾವು ಅದನ್ನು ಸಂಪೂರ್ಣ ಒಪ್ಪುತ್ತೇವೆ.

"ಪೂರ್ಣಮದಃ ಪೂರ್ಣಮಿದಂ" ಎನ್ನುವುದು ಈಶಾವಾಸ್ಯದ ಶಾಂತಿ ಮಂತ್ರ ಮೇಲಿರುವ ಪರಬ್ರಹ್ಮವಸ್ತುವೂ ಪೂರ್ಣವಾಗಿದೆ. ಅದರಿಂದ ಸೃಷ್ಟಿಸಲ್ಪಟ್ಟ ಇದಂ" ಎಂದರೆ ಈ ಜಗತ್ತೂ ಪೂರ್ಣವಾಗೇ ಇದೆ ಎಂದಮೇಲೆ, ಇಹ ಮತ್ತು ಪರಗಳೆರಡೂ ಪೂರ್ಣವಾದುದರಿಂದ, ಒಂದು ಮೇಲು ಮತ್ತೊಂದು ಕೀಳು ಎಂದು ಹೇಳುವುದು ತಪ್ಪಲ್ಲವೇ? ''ಇದಗುಂ? ಸರ್ವಮಸೃಜತ ಯದಿದಂ ಕಿಂ ಚ ತತ್ ಸೃಷ್ಟ್ವಾ ತದೇವಾನುಪ್ರಾವಿಶತ್ ತದನುಪ್ರವಿಶ್ಯ ಎಂದರೆ ಆ ಪರಬ್ರಹ್ಮನು ಇಲ್ಲಿರುವ ಪ್ರತಿಯೊಂದನ್ನೂ ಸೃಷ್ಟಿಮಾಡಿ, ತಾನು ಅದರೊಳಕ್ಕೆ ಪ್ರವೇಶ ಮಾಡಿ, ಎಂದು ಅರ್ಥ. ಹಾಗೆ ಪ್ರವೇಶ ಮಾಡಿದ ಆ ಪರಮವಸ್ತುವು ಈ ಜಗತ್ತಿನ ಎಲ್ಲ ಕ್ರಿಯೆಗಳಿಗೆ ತಾನೇ ಕರ್ತವೂ, ಕರಣವೂ ಮತ್ತು ಕಾರಣನಾಗಿರುವಾಗ ಇದು ಸರಿಯಿಲ್ಲ ಎಂದರೆ ಆ ಪರಮಾತ್ಮನ ಕ್ರಿಯೆಯನ್ನೇ ಸರಿಯಿಲ್ಲ ಎಂದ ಹಾಗಾಗುತ್ತದಲ್ಲವೇ?

ಈ ಭೂಮಿಯಮೇಲೆ ಜನಿಸಿದ ನಾವು ಈ ಜಗತ್ತಿನ ಪೂರ್ಣತೆಯನ್ನು ಕಾಣಲು ಅಸಮರ್ಥರಾಗಿ ಇಲ್ಲಿ ಕೊರತೆಗಳನ್ನು ಕಾಣುತ್ತೇವೆ ಮತ್ತು ಇಲ್ಲಿನ ಕಾರ್ಪಣ್ಯಗಳನ್ನು ಅನುಭವಿಸಲು ಕಷ್ಟಪಡುತ್ತೇವೆ. ಇದರಿಂದ ಮುಕ್ತಿಯೇ ಇಲ್ಲ. ಇದನ್ನು ಅನುಭವಿಸಿಯೇ ತೀರಬೇಕು ಎಂದ ಮೇಲೆ, ನಮ್ಮ ಬದುಕಿನ ತೊಡಕುಗಳನ್ನು ಹೊರಲೇಬೇಕಾದ ಅನಿವಾರ್ಯತೆಯನ್ನು ಒಪ್ಪಿಕೊಂಡು ಅನುಭವಿಸಲೇ ಬೇಕು. ಈ ಇಹದ ಸೃಷ್ಟಿಯ ಪ್ರತಿಯೊಂದರಲ್ಲೂ ಪರವನ್ನು ನೋಡಲು ಪ್ರಯತ್ನಪಡಲು ಬೇಕು. ಎಲ್ಲವನ್ನೂ ಪ್ರೀತಿಯಿಂದ, ಸಹೃದಯತೆಯಿಂದ, ಸಮಾನತೆಯಿಂದ ನೋಡುತ್ತಾ ಇಹವನ್ನು ಸಮರ್ಪಕವಾಗಿ ಜೀವಿಸಿದರೆ ಪರವನ್ನು ಪಡೆಯುವ ನಮ್ಮ ಪ್ರಯತ್ನ ಸುಗಮವಾದೀತು. ಪರದ ಆಸೆ ಪಡಬೇಕು, ಅದನ್ನು ಪಡೆಯಲು ಇಹವನ್ನು ಸಮರ್ಪಕವಾಗಿ ಜೀವಿಸಬೇಕು. ವಾಚಕರೆ ಇದೇ "ಮುಕ್ತಿಗೆ ಮಾರ್ಗವೆಂದು ನಂಬಬೇಕು. ಅಂತಹ ಪ್ರಯತ್ನವನ್ನು ನಾವೂ ಮಾಡಬೇಕು.

**ಮುಕ್ತಕ-258**

**ಒಲ್ಲೆನೆನದಿರ್ ಬಾಳನ್ ಒಲವದೇನೆನ್ನದಿರು |**
**ಉಲ್ಲ ಸಕೆಡೆಮಾಡು ನಿನ್ನಿನಾದಿನಿತು ||**
**ನಿಲ್ಲು ಕೆಚ್ಚೆದೆಯಿಂದಲನ್ಯಾಯಗಳನಳಿಸೆ |**
**ಎಲ್ಲಕಂ ಸಿದ್ಧನಿರು- ಮಂಕುತಿಮ್ಮ ||**

ಒಲ್ಲೆನೆನದಿರ್=ಒಲ್ಲೆನು+ಎನದೆ+ಇರು, ಒಲವದೇನೆನ್ನದಿರು=ಒಲವು+ಅದೇನು+ಎನ್ನದಿರು,
ಉಲ್ಲಸಡೆಮಾಡು=ಉಲ್ಲಸಕೆ+ಎಡೆಮಾಡು, ನಿನ್ನಿನಾದಿನಿತು=ನಿನ್ನಿನ+ಆದ+ಇನಿತು.

ಕೆಚ್ಚೆದೆಯಿಂದಲನ್ಯಾಯಗಳನಳಿಸೆ=ಕೆಚ್ಚೆದೆಯಿಂದಲಿ+ಅನ್ಯಾಯಗಳನು+ಅಳಿಸಿ, ಒಲ್ಲೆ=ಬೇಡ, ಒಲವು=ಪ್ರೀತಿ,
ಉಲ್ಲಸಕೆ=ಸಂತೋಷಕ್ಕೆ, ನಿನ್ನಿನ ನಿನ್ನಿಂದ, ಕೆಚ್ಚೆದೆಯಿಂದಲಿ=ಧೈರ್ಯದಿಂದಲಿ,

ಈ ಬಾಳನ್ನು ಬೇಡ ಎನ್ನದಿರು. "ಈ ಜೀವನದ ಮೇಲೆ ಏಕಿಷ್ಟು ಒಲವು" ಎನ್ನದಿರು, ನಿನ್ನ ಮನಸ್ಸಿನಲ್ಲಿ ಸಂತೋಷಕ್ಕೆ ಎಡೆಮಾಡಿಕೊಡು. ನಿನ್ನ ಕೈಲಾದಷ್ಟು ಸ್ಥಿರವಾಗಿ, ಧೈರ್ಯವಾಗಿ ನಿಂತು ಜಗತ್ತಿನ ಅನ್ಯಾಯಗಳನ್ನು ಅಳಿಸಲು, ಎಲ್ಲ ರೀತಿಯ ಪರಿಸ್ಥಿತಿಗಳನ್ನೂ ಎದುರಿಸಲು ಸದಾ ಸಿದ್ಧನಿರು ಎಂದು ಒಂದು ಸ್ಪಷ್ಟ ಆದೇಶವನ್ನು ನೀಡುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಬಹಳಷ್ಟು ಜನರಿಗೆ, ಈ ಜೀವನದ ಸಂಕಷ್ಟಗಳನ್ನು ಅನುಭವಿಸಿ, ನೊಂದು, ಬೆಂದು, ಸಾಕಪ್ಪಾ ಈ ಬಾಳು ಎನ್ನುವಂಥಾ ಭಾವ ಮೂಡುತ್ತದೆ. ಆದರೆ ಈ ಬಾಳನ್ನು ಬಾಳದೆ ಅನ್ಯ ಮಾರ್ಗವಿಲ್ಲವಾದ್ದರಿಂದ, ಬಾಳಲೇ ಬೇಕು ಅಲ್ಲವೇ? ಆದ್ದರಿಂದ, "ಈ ಬಾಳು ಬೇಡ, ಈ ಬಾಳಿನ ಮೇಲೆ ಮೋಹವೇತಕ್ಕೆ ಬೇಕು" ಎಂದು ಅನ್ನದೆ, ನಮ್ಮ ಪಾಲಿಗೆ ಬಂದ ಜೀವನವನ್ನು ಬಾಳುವಾಗ, ಮನಸ್ಸಿನಲ್ಲಿ ಒಂದಿಷ್ಟು ಸಂತೋಷವನ್ನು ತಂದುಕೊಂಡು ಬಾಳಿದರೆ ಚೆನ್ನ. ಈ ಬಾಳಿನಿಂದ ದೂರ ಎಲ್ಲಿಯೂ ಓಡಿ ಹೋಗಲು ಆಗದೆ ಇರುವಾಗ, ತಂದಿಟ್ಟುಕೊಂಡ ಸಂತೋಷದಿಂದಲಾದರೂ ಈ ಬಾಳಿನಲ್ಲಿ ನಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡು ಬಾಳಿದರೆ, ಬಾಳು ಕೊಡುವ ನೋವಿನಂಶ ಕಡಿಮೆಯಾಗುತ್ತದೆ.





ನಮ್ಮ ಸಂಪರ್ಕದಲ್ಲಿರುವವರಿಗೆಲ್ಲ, ಒದಗುತ್ತಾ ಪರಸ್ಪರ ಸ್ನೇಹವನ್ನು ಬೆಸೆದುಕೊಂಡು, ಉತ್ಸಾಹದಿಂದ, ಬಾಳಬೇಕು. ಹಾಗೆ ಬಾಳುವಾಗ ಈ ಜಗತ್ತಿಗೆ ಅಂಟದೆ, ತಾವರೆ ಎಲೆಯಮೇಲಿನ ನೀರ ಹನಿಯಂತೆ ಬದುಕಿದರೆ, ವೈಯಕ್ತಿಕವಾಗಿ ನಮಗೆ ಯಾವ ನೋವೂ ಆಗುವುದಿಲ್ಲ. ಧೈರ್ಯವಾಗಿ ಬಾಳಬೇಕು, ಸಾಧ್ಯವಾದಷ್ಟು ಈ ಜಗತ್ತಿನಲ್ಲಿ ನಡೆಯುವ ಅನ್ಯಾಯಗಳನ್ನು ಅಳಿಸಲು ಪ್ರಯತ್ನಪಡಬೇಕು.

ನೋಡಿ, ನಾವು ಯಾವುದಕ್ಕಾದರೂ ಅಂಟಿಕೊಂಡರೆ ಮಾತ್ರ ನಮ್ಮದು ಅಥವಾ ನನ್ನದು ಎನ್ನುವಂತಹ ಮಮಕಾರ ಹುಟ್ಟಿ, ಪಕ್ಷಪಾತ ರಹಿತವಾಗಿರಲು ಅಸಾಧ್ಯವಾಗುತ್ತದೆ. ಆದರೆ ಯಾವುದಕ್ಕೂ ಅಂಟದೆ ಇದ್ದರೆ ನಿರ್ಭೀತಿಯಿಂದ, ಎಲ್ಲದಕ್ಕೂ ಸಿದ್ಧನೆಂಬಂತೆ ಬಾಳಿ, ಸಾಧ್ಯವಾದಷ್ಟು ಮಟ್ಟಿಗೆ ಜಗತ್ತಿನ ಅನ್ಯಾಯಗಳನ್ನು ಅಳಿಸಲು ಪ್ರಯತ್ನಪಡು, ಅದು ಸಾರ್ಥಕ ಬದುಕಿಗೆ ಮಾರ್ಗ ಎಂದು ಒಂದು ಆದೇಶವನ್ನು ಮಾಡಿದ್ದಾರೆ, ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ, ಯೋಗ್ಯನಾದ ಯಾವುದೇ ವ್ಯಕ್ತಿಯೂ ಈ ಆದೇಶವನ್ನು ಪಾಲಿಸಲೇ ಬೇಕು. ಅದರಂತೆ ನಡೆದರೆ ಬದುಕಿನಲ್ಲಿ ತೃಪ್ತಿ ಸಿಗುವುದರಲ್ಲಿ ಸಂದೇಹವೇ ಇಲ್ಲ.

# ಇಹ-ಪರ ಸಮನ್ವಯ 259-263

**ಮುಕ್ತಕ-259**

**ಕಡಲ ಕಡೆದರು ಸುರಾಸುರರು ನಿಜಬಲದಿಂದ |**
**ಕುಡಿದನದನು ತಪಸಿನಿಂದ ಕುಂಬಜನು ||**
**ಕಡಿಮೆಜನ ಪಾರಗಾಂಬರೆ ಗಾಸಿಯನ್ನು ಪಡದೆ |**
**ಪೊಡವಿ ಬಾಳ್ವೆಯುಮಂತು - ಮಂಕುತಿಮ್ಮ ||**

ಸುರಾಸುರರು=ಸುರ+ಅಸುರರು, ಕುಡಿದನದನು=ಕುಡಿದನು+ಅದನು, ಪಾರಗಾಂಬರೆ=ಪಾರ+ಕಾಂಬರೆ,
ಬಾಳ್ವೆಯುಮಂತು=ಬಾಳ್ವೆಯುಂ+ಅಂತು.
ಕುಂಬಜನು+ಅಗಸ್ತ್ಯನು (ಮುನಿ), ಪಾರ=ಆ ದಡವ, ಗಾಸಿಯನು=ಕಷ್ಟವನು, ಪೊಡವಿ=ಈ ಭೂಮಿ.

ಅಮೃತವನ್ನು ಪಡೆಯಲು ಸುರರು ಮತ್ತು ಅಸುರರು ಸಮುದ್ರಮಂಥನವನ್ನು ಮಾಡಿದರು. ಅದು ದೈವೀ ಶಕ್ತಿ, ಆದರೆ ತನ್ನ ತಪಸ್ಸಿನ ಶಕ್ತಿಯಿಂದ ಅಗಸ್ತ್ಯನು ಆ ಸಮುದ್ರವನ್ನು ಒಂದೇ ಗುಟುಕಿಗೆ ಕುಡಿದುಬಿಟ್ಟನು. ಆದರೆ ಮಾನವ ಶಕ್ತಿಯನ್ನು ಹೊಂದಿದ ಹುಲುಮಾನವರಾದ ನಾವು ಕಷ್ಟ ಪಡದೆ ಈ ಭವಸಾಗರವನ್ನು ದಾಟಿ ಆ ದಡವನ್ನು ಸೇರಲಾಗುವುದೇ? ಹೇಗೆ ಕಷ್ಟಪಟ್ಟು ಜೀವಿಸುವುದೇ ಈ ಬಾಳಿನ ಸ್ವಭಾವ, ಎಂಬ ವಾಸ್ತವವನ್ನು ನಮ್ಮೆದುರಿಗೆ ಇಡುತ್ತಾರೆ ಮಾನ್ಯ ಗುಂಡಪ್ಪನವರು.

ದೇವತೆಗಳಿಗೆ ದೈವೀ ಶಕ್ತಿ. ರಾಕ್ಷಸರಿಗೆ ಅಸುರೀ ಶಕ್ತಿ. ಅವರುಗಳು ಸಾಮಾನ್ಯ ಮಾನವರು ಕಷ್ಟಪಟ್ಟರೂ ಮಾಡಲಾಗದ ಕೆಲಸ ಕಾರ್ಯಗಳನ್ನು ಅತೀ ಸುಲಭವಾಗಿ ಮಾಡಿಬಿಡುತ್ತಾರೆ. ಇದರ ದೃಷ್ಟಾಂತಗಳು ನಮಗೆ ನಮ್ಮ ಪುರಾಣಗಳಲ್ಲಿ ಮತ್ತು ವೇದೋಪನಿಷತ್ತಿನಲ್ಲಿ ಹೇರಳವಾಗಿ ಸಿಗುತ್ತದೆ. ಇನ್ನು ಋಷಿ ಮುನಿಗಳು, ಮಾನವರಾಗಿ ಹುಟ್ಟಿದ್ದರೂ ತಮ್ಮ ತಪಃ ಶಕ್ತಿಯಿಂದ, ದೈವ ಬಲವನ್ನು ಸಂಪಾದಿಸಿ ಅಥವಾ ದೇವತೆಗಳಿಂದ

ವರಗಳನ್ನು ಪಡೆದು, ಸಾಮಾನ್ಯ ಮಾನವರಿಗೆ ಅಸಾಧ್ಯವಾದ ಕೆಲಸಗಳನ್ನು ಸಾಧಿಸುತ್ತಾರೆ. ಉದಾಃ ಅಗಸ್ತ್ಯ , ಭಗೀರಥ, ವಿಶ್ವಾಮಿತ್ರ, ವಾಮದೇವ,

ಆದರೆ ಹುಲು ಮಾನವರು ಈ ಜಗತ್ತಿನಲ್ಲಿ ಬಹಳ ಕಷ್ಟಪಟ್ಟೆ ಜೀವನ ಸಾಗಿಸಬೇಕು ಎಂಬುದು ಎಲ್ಲರಿಗೂ ತಿಳಿದಿರುವ ವಿಚಾರವೇ ಅಲ್ಲವೇ? ಇದು ಸಹಜ. ಏಕೆಂದರೆ ಮಾನವನಿಗೆ ದೇವತೆಗಳು ಮತ್ತು ಋಷಿ ಮುನಿಗಳಿಗೆ ಹೋಲಿಸಿದರೆ, ಶಕ್ತಿ ಕಡಿಮೆ. ಹಾಗಾಗಿ ಇವನಿಗೆ ಕಷ್ಟಪಡುವ ಯೋಗ ತಾನೇ ತಾನಾಗಿ ಬಂದಿದೆ. ಕೆಲವರಿಗೆ ಬದುಕಿನ್ನುದ್ದಕ್ಕೂ ಯಾವು ತಪ್ಪನ್ನೂ ಮಾಡದಿದ್ದರೂ ಹೋರಾಡುವ ಯೋಗವೇ ಇರುತ್ತದೆ.

ಆದರೆ ಕೆಲವರ ಜೀವನ ತುಂಬಾ ಸುಲಭವಾಗಿ ನಡೆದು ಹೋಗುತ್ತದೆ. ಅದು ಅವರವರು ಪಡೆದು ಬಂದ ಭಾಗ್ಯ. ಆದರೆ ಎಲ್ಲ ಜೀವಿಗಳೂ ಯಾವುದಾದರೂ ಒಂದು ರೀತಿಯಲ್ಲಿ ಹೋರಾಡಿಯೇ ಈ ಜಗತ್ತಿನ ಬದುಕಿನ ಸಾಗರವನ್ನು ದಾಟಬೇಕಲ್ಲವೇ? ಕೆಲವರು ಬಂದ ಕಷ್ಟಗಳನ್ನು ತುಂಬಾ ಸಹಜವಾಗಿ ಸ್ವೀಕರಿಸಿ ಅನುಭವಿಸುತ್ತಾರೆ. ಕೆಲವರು ಬಂದ ಕಷ್ಟಗಳನ್ನು ಗೋಳಾಡುತ್ತಾ, ದುಃಖಿಸುತ್ತಾ ಮತ್ತು ಆ ದುಃಖವನ್ನು ಪರರಿಗೂ ಹಂಚುತ್ತಾ ಬಹಳವಾಗಿ ಪರದಾಡುತ್ತಾ ಅನುಭವಿಸುತ್ತಾರೆ. ಇನ್ನೂ ಕೆಲವರು ತಮಗೆ ಕಷ್ಟ ಬಂದಿದೆ ಎಂದುಕೊಳ್ಳದೆ ಆ ಕಷ್ಟಗಳನ್ನು ಅನುಭವಿಸುವುದೂ ಸಹಜವೆಂಬಂತೆ ಅನುಭವಿಸುತ್ತಾರೆ.

ಪೂರ್ವ ಕರ್ಮದಿಂದ ಮತ್ತು ಪ್ರಸ್ತುತ ಕರ್ಮದಿಂದ ನಮಗೆ ಬಂದೊದಗುವ ಕಷ್ಟಗಳನ್ನು ಸಹಜವಾಗಿ ಸ್ವೀಕರಿಸಿ, ಇದನ್ನು ತೀರಿಸಿಯೇ ಮುಂದಕ್ಕೆ ಹೋಗಬೇಕು ಎಂಬ ನಿರ್ಲಿಪ್ತಭಾವದಿಂದ ಬಂದ ಅನಿವಾರ್ಯ ಕಷ್ಟಗಳನ್ನು ಆನಂದದಿಂದ ಅನುಭವಿಸಿ ತೃಪ್ತಿಯಿಂದ ಇದ್ದು, ಈ ಜಗತ್ತನ್ನು ಅದೇ ತೃಪ್ತಿಯಿಂದ ಬಿಡಬೇಕು. ಹೇಳುವುದು ಬಹಳ ಸುಲಭ, ಪಾಲಿಸುವುದು ಕಷ್ಟ ಆದರೆ ಅಸಾಧ್ಯವಲ್ಲ.

**ಮುಕ್ತಕ-260**

**ದ್ರಾಕ್ಷಿರಸವೇನಲ್ಲ ಜೀವನದ ತಿರುಳಾರ್ಗುಂ ।**
**ಇಕ್ಕುದಂಡದವೊಲದು ಭೋಜನವೆ ॥**
**ದಕ್ಷತೆಯಿನಿಡಿಯುವಂಗೊಂದೆರಡು ಗುಟುಕು ರಸ ।**
**ಮಾಕ್ಷಿಕರು ಮಿಕ್ಕೆಲ್ಲ - ಮಂಕುತಿಮ್ಮ ॥**

ದ್ರಾಕ್ಷಿರಸವೇನಲ್ಲ=ದ್ರಾಕ್ಷಿ+ರಸವು+ಏನಲ್ಲ, ತಿರುಳಾರ್ಗುಂ=ತಿರುಳು+ಆರುಗುಂ,

ಇಕ್ಷುದಂಡದವೊಲದು=ಇಕ್ಷು+ದಂಡದ+ವೊಲು+ಅದು,

ದಕ್ಷತೆಯಿನಿಡಿಯುವಂಗೊಂದೆರಡು=ದಕ್ಷತೆಯನು+ಇಡಿಯುವಂಗೆ+ಒಂದೆರಡು,

ಇಕ್ಷುದಂಡ=ಕಬ್ಬಿನ ಜಲ್ಲೆ, ಮಾಕ್ಷಿಕರು=ನೊಣದಂತವರು.

ಬಾಯಿಗಿಟ್ಟ ತಕ್ಷಣ ಸಿಗುವ ದ್ರಾಕ್ಷಿಹಣ್ಣಿನ ರಸದ ರುಚಿಯಂತೆ ಅಲ್ಲ, ಅದು ಕಬ್ಬಿನ ಜಲ್ಲೆಯನ್ನು ಬಾಯಲ್ಲೇ ಸಿಪ್ಪೆ ತೆಗೆದು ಜಗಿದಾಗ ಮಾತ್ರ ಸಿಗುವ ಸಿಹಿರಸದ ಎರಡು ಹನಿಯಂತೆ, ಈ ಜೀವನದ ಸ್ವಾರಸ್ವವು





ಯಾರಿಗೂ ಸುಲಭವಾಗಿ ಲಭ್ಯವಾಗುವುದಿಲ್ಲ ಕಷ್ಟಪಡಬೇಕು. ಹಾಗೆ ಪಡೆದಿದ್ದ ಪಕ್ಷದಲ್ಲಿ, ಕಬ್ಬಿನ ಜಲ್ಲೆಯ ಮೇಲೆ ಕುಳಿತ ನೊಣಗಳಿಗೆ ಹೇಗೆ ರಸ ಸಿಗುವುದಿಲ್ಲವೋ ಹಾಗೆ, ಬದುಕಿನ ಅನುಭವ, ಸ್ವಾರಸ್ಯ ಯಾವುದೂ ಸಿಗುವುದಿಲ್ಲ ಎಂದು ಪ್ರಸ್ತಾಪಿಸುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಕಬ್ಬಿನ ಜಲ್ಲೆಯನ್ನು ಹಲ್ಲಿನಿಂದ ಕಡಿದು ಸಿಪ್ಪೆಯನ್ನು ಕಿತ್ತು ಒಳಗಿನ ತಿರುಳನ್ನು ಜಗಿದಾಗ ಅದರ ರಸದ ಸವಿಯನ್ನು ಪಡೆಯಬಹುದು. ಕೇವಲ ಕೈಯಲ್ಲಿಟ್ಟುಕೊಂಡರೋ ಅಥವಾ ಕೇವಲ ನೆಕ್ಕಿದರೂ ಅದರ ರುಚಿ ಬರುವುದಿಲ್ಲ. ಜೀವನವೂ ಹಾಗೆಯೇ, ಘಟನೆಗಳಿಗೆ ನಮ್ಮನ್ನು ನಾವು ಒಡ್ಡಿಕೊಳ್ಳಬೇಕು, ಆಳಕ್ಕೆ ಇಳಿಯಬೇಕು, ಅನುಭವಿಸಬೇಕು. ಹಾಗಾದಾಗ ಮಾತ್ರ ನಮಗೆ ಜೀವನದ ನಿಜ ಅನುಭವವಾಗುತ್ತದೆ. ನಂತರ ರಕ್ತಿಯೋ, ಮೋಹವೋ, ವ್ಯಾಮೋಹವೋ ಅಥವಾ ನಿರ್ಲಿಪ್ತತೆಯೋ, ವಿರಕ್ತಿಯೋ, ವೈರಾಗ್ಯವೋ ಉಂಟಾಗಬಹುದು. ಅನುಭವವೇ ಆಗದಿದ್ದರೆ, ಯಾವುದನ್ನೂ ಪಡೆಯದಿದ್ದರೆ, ಬಿಡುವುದು ಏನನ್ನು? ಹಾಗಾಗಿ ಬದುಕನ್ನು ಕೇವಲ ಸುಲಭವಾಗಿ ದ್ರಾಕ್ಷಿ ಹಣ್ಣನ್ನು ತಿಂದಹಾಗೆ ಸವಿಯದೆ, ಕಷ್ಟಪಟ್ಟು ಕಡಿದು ಜಗಿದು ರಸಾಸ್ವಾದನೆ ಮಾಡುವ ಕಬ್ಬಿನ ಜಲ್ಲೆಯನ್ನು ತಿಂದಹಾಗೆ ಬದುಕಬೇಕು.

ಒಂದು ನೊಣ ಆ ಕಬ್ಬಿನ ಜಲ್ಲೆಯಮೇಲೆ ಕುಳಿತುಕೊಂಡರೆ ಅದಕ್ಕೆ ಆ ಕಬ್ಬಿನ ಸಿಹಿರಸದ ಸವಿ ಸಿಗುವುದೇ? ಖಂಡಿತ ಇಲ್ಲ. ಅದೇ ರೀತಿ ನಮಗೂ ಸಹ ಜೀವನದ ಸತ್ಯವಾದ ಅನುಭವ ಆಗಬೇಕಾದರೆ ನಾವು ನಮ್ಮನ್ನು ಈ ಜೀವನದಲ್ಲಿ ತೊಡಗಿಸಿಕೊಂಡಾಗ ಮಾತ್ರ ಸಾಧ್ಯ. ಕೆಲವರಿಗೆ ಈ ತೊಡಗಿಸಿಕೊಳ್ಳುವ ಭಾಗ್ಯ ಬಯಸದೆಯೇ ಬರುತ್ತದೆ. ಕೆಲವರಿಗೆ ಸಂದರ್ಭಗಳ ಒತ್ತಡದಿಂದ ಬರುತ್ತದೆ. ಕೆಲವರಿಗೆ ಬರುವುದೇ ಇಲ್ಲ. ಎಷ್ಟೆಷ್ಟು ತಮ್ಮನ್ನು ತಾವು ತೊಡಗಿಸಿಕೊಂಡರೆ ಅವರವರಿಗೆ ಅಷ್ಟಷ್ಟು ಅನುಭವ ಸಿಗುತ್ತದೆ.

ಕಬ್ಬಿನ ಜಲ್ಲೆಯ ಮೇಲಿನ ನೊಣದಂತೆ ಇದ್ದರೆ ಯಾವ ಅನುಭವವೂ ಆಗದೆ ಹೇಗೆ ಬಂದೆವೋ ಹಾಗೆಯೇ ಈ ಜಗತ್ತಿನಿಂದ ನಿರ್ಗಮಿಸಬೇಕಾಗುತ್ತದೆ. ಇರಬೇಕು, ಇದ್ದಂತೆ ಇರಬೇಕು, ಅನುಭವವನ್ನು ಪಡೆಯಬೇಕು. ಕಬ್ಬಿನ ರಸವನ್ನು ಮಾತ್ರ ನುಂಗಿ, ಸಾರವನ್ನು ಒಳಗೆಳೆದುಕೊಂಡು, ಸಿಪ್ಪೆಯನ್ನು ಉಗಿದರೆ, ಸುಖ, ಹಾಗೆಯೇ ಜೀವನದ ರಸಾನುಭವ ಪಡೆಯಬೇಕು, ಸ್ವಾರಸ್ಯವನ್ನು ಅನುಭವಿಸಬೇಕು, ಅಷ್ಟೇ, ಸಾರವನ್ನೆಳುದುಕೊಂಡು ಸಿಪ್ಪೆಯನ್ನು ಉಗಿದಹಾಗೆ ಬದುಕಿನ ಸಂಪೂರ್ಣ ಸ್ವಾರಸ್ಯವನ್ನು ಅನುಭವಿಸಿ, ಮತ್ತೊಂದು ಜಲ್ಲೆಯನ್ನು ಹುಡುಕುತ್ತಾ ಹೊರಟುಬಿಡಬೇಕು. ಪ್ರಯತ್ನ ಪಡಬೇಕು. ಖಂಡಿತ ರಸಾನುಭವ ಸಿಗುತ್ತದೆ.

**ಮುಕ್ತಕ-261** **ಆಟವೋ ಮಾಟವೋ ಕಾಟವೋ ಲೋಕವಿದು |**
**ಊಟ ಉಪಚಾರಗಳ ಬೇಡವೆನ್ನದಿರು ||**
**ಪಾಟವವು ಮೈಗಿರಲಿ ನೋಟ ತತ್ವದೊಳಿರಲಿ |**
**ಪಾರಿಸು ಸಮನ್ವಯವ - ಮಂಕುತಿಮ್ಮ. ||**

ಮೈಗಿರಲಿ=ಮೈಗೆ+ಇರಲಿ, ತತ್ವದೊಳಿರಲಿ=ತತ್ವದೊಳು+ಇರಲಿ.
ಪಾಟವವು=ಪಟುತ್ವ, ದೇಹಾರೋಗ್ಯ,

ಈ ಜಗತ್ತಿನಲ್ಲಿ ನೀನು ಬಂದಮೇಲೆ ಜೀವನವನ್ನು ಒಂದು ಆಟವಾಗಿಯೋ, ಶ್ರಮವಾಗಿಯೋ, ಹಿಂಸೆಯಾಗಿಯೋ ಅನುಭವಿಸಲೇ ಬೇಕು. ಬೇರೆ ದಾರಿಯಿಲ್ಲ, ಇದೇ ಪ್ರಪಂಚ. ಇದು ನನಗೆ ಇಷ್ಟವಿಲ್ಲ ಎಂದು ನೀನು ನಿರಾಹಾರನಾಗಿ ದೇಹವನ್ನು ದಂಡಿಸಬೇಡ, ದೇಹ ದೃಢವಾಗಿರಲಿ, ಮನಸ್ಸು ಬುದ್ಧಿಗಳು ಪರಮಾತ್ಮನನ್ನು ಚಿಂತಿಸುತ್ತ ಇಹ ಮತ್ತೆ ಪರಗಳೆರಡರ ನಡುವೆ ಒಂದು ಸಮನ್ವಯವನ್ನು ಸಾಧಿಸು, ಎಂದು ಒಂದು ಆದೇಶ ನೀಡುತ್ತಾರೆ ಮಾನ್ಯ ಗುಂಡಪ್ಪನವರು.

ದೇಹವೊಂದು ಉಪಕರಣ (tool) ಮನಸ್ಸು ಬುದ್ಧಿಗಳ ಅವಾಸಸ್ಥಾನ. "ಒಂದು ಸದೃಢ ದೇಹದಲ್ಲಿ ಒಂದು ಸದೃಢ ಮನಸ್ಸು" (A healthy mind in a Healthy body) ಎಂದು ನಾವೆಲ್ಲಾ ಕೇಳಿದ್ದೇವೆ. ಹಾಗೆ ನಾವು ಏನೇ ಕೆಲಸಮಾಡುತ್ತಿದ್ದರೂ, ಶ್ರಮಪಡುತ್ತಿದ್ದರೂ, ಹಿಂಸೆಪಡುತ್ತಿದ್ದರೂ, ಸುಖಪಡುತ್ತಿದ್ದರೂ, ದುಃಖವನ್ನೋ ಅಥವಾ ಆನಂದವನ್ನೂ ಅನುಭವಿಸುತ್ತಿದ್ದರೂ ದೇಹವನ್ನು ಆರೋಗ್ಯವಾಗಿ ಇಟ್ಟುಕೊಳ್ಳಬೇಕು. ಏಕೆಂದರೆ ದೇಹವೊಂದು ಉಪಕರಣವಾಗಿರುವಾಗ ಮತ್ತು ಎಲ್ಲ ಭಾವನೆಗಳನ್ನು ಈ "ಇಂದ್ರಿಯಗಳಿಂದ ಕೂಡಿದ ದೇಹದ ಮೂಲಕವೇ ಅನುಭವಿಸಬೇಕಾಗಿರುವುದರಿಂದ, ದೇಹ ಆರೋಗ್ಯವಾಗಿರಲೇ ಬೇಕು.

ಮನಸ್ಸಿನ ಒಂದು ಭಾಗದಲ್ಲಿ ದೇಹವನ್ನು ಕಾಪಾಡಿಕೊಳ್ಳುವ ವಿಚಾರವನ್ನು ಸೀಮಿತವಾಗಿಟ್ಟುಕೊಂಡು, ಸಂಪೂರ್ಣವಾಗಿ ಪರಮಾತ್ಮ ಚಿಂತನೆಯಲ್ಲಿ ಕಳೆಯಬೇಕು ಎನ್ನುವುದೇ ಈ ಮುಕ್ತಕದ ಹೂರಣ. ಮನಸ್ಸು ಬುದ್ಧಿಗಳು ಪ್ರಕಟಗೊಳ್ಳುವುದೇ ಈ ದೇಹದ ಮೂಲಕ. ಹಾಗಾಗಿ ಈ ದೇಹ ಮನಸ್ಸು ಬುದ್ಧಿ ಎಲ್ಲವೂ ಆನ್ನೋದ್ಧಾರಕ್ಕೆ ಪೂರಕವಾದ ಉಪಕರಣಗಳು ಎಂದು ಅರಿಯಬೇಕು. ಇವು ಇಹದಲ್ಲಿ ನಮಗೆ ಪರವನ್ನು ತಲುಪಲು ಸಹಾಯಮಾಡುವಂಥಾ ಉಪಕರಣಗಳು. ಇವುಗಳನ್ನು ಶುದ್ಧವಾಗಿಟ್ಟುಕೊಳ್ಳಬೇಕು. ತತ್ವ ಚಿಂತನೆಯಲ್ಲಿ ಮತ್ತು ತತ್ವವನ್ನು ಅರಿತು, ಸತ್ಯವನ್ನು ಅರಿತು ಜೀವನವನ್ನು ಸಾರ್ಥಕ್ಯದಿಂದ ಕಳೆಯಬೇಕು. ನಮ್ಮ ಇಂದಿನ ಬದುಕನ್ನು ಸರಿಯಾಗಿ ಬದುಕಿ, ಈ ಬದುಕಿನ ಮೂಲಕವೇ, ಬದುಕಿನಾಚೆಗಿನ ಪರವನ್ನು ಸಾಧಿಸಿ, ಇಹ ಮತ್ತು ಪರಗಳ ನಡುವೆ ಒಂದು ಸಮನ್ವಯವನ್ನು ಸಾಧಿಸಬೇಕು ಎನ್ನುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ. ಅಂತಹ ಪ್ರಯತ್ನವನ್ನು ನಾವೆಲ್ಲರೂ ಮಾಡಲೇಬೇಕು.

**ಮುಕ್ತಕ-262** **ಒಂದು ಕಣ್ಣಳುವಂದು ಮತ್ತೊಂದ ತಳ್ಕೈಸಿ |**
**ಅಂದ ಚೆಂದಗಳ ಜನವರಸುವುದು ಬಾಳೊಳ್ ||**
**ಬಂದು ಮೋಹವೊ ಯಶವೂ ವೈರವೋ ವೈಭವವೋ |**
**ಬಂದಿಪುದು ಜಗಕವರ ಮಂಕುತಿಮ್ಮ. ||**

ಕಣ್ಣಳುವಂದು=ಕಣ್ಣ+ಅಳುವ+ಅಂದು.

ತಳ್ಕೈಸಿ=ತಬ್ಬಿಕೊಂಡು, ಜನವರಸುವುದು=ಜನರು ಹುಡುಕುವುದು.

ಒಬ್ಬರು ಅಳುತ್ತಿದ್ದರೆ ಮತ್ತೊಬ್ಬರು ಅವರನ್ನು ತಬ್ಬಿಕೊಂಡು ಸಂತೈಸಿ ಸಾಂತ್ವನಗೊಳಿಸುತ್ತಾರೆ. ಇದು ಒಂದು ರೀತಿಯ ಬಂಧ. ಹೀಗೆಯೇ ಜನರು ಬಾಳಿನಲ್ಲಿ ಅಂದ ಚೆಂದಗಳ ಅರಸುತ್ತಾರೆ. ಮೋಹ, ಯಶಸ್ಸು,





ಪರಾಭವ, ದ್ವೇಷ ಮುಂತಾದ ಭಾವನೆಗಳಿಂದ ಒಬ್ಬರಿಗೊಬ್ಬರು ಬಂಧಿತರಾಗಿ ತನ್ಮೂಲಕ ಈ ಜಗತ್ತಿಗೆ ಅಂಟಿಕೊಂಡಿರುತ್ತಾರೆ, ಈ ಜಗದ ಮನುಜರು ಎನ್ನುತ್ತಾರೆ ಮಾನ್ಯ ಗುಂಡಪ್ಪನವರು.

ಹುಟ್ಟಿನಿಂದ ತಂದೆ ತಾಯಿ ಮತ್ತು ಮನೆ ಮಂದಿಯೆಲ್ಲರೊಂದಿಗೆ ನಂಟು. ಪರಸ್ಪರ ಪ್ರೀತಿ ಮತ್ತು ಇತರೆ ಭಾವನೆಗಳ ಬಂಧ. ಬೆಳೆಬೆಳೆಯುತ್ತಾ ಸಮಾಜ, ಪರಿಸರ, ಊರು, ದೇಶದೊಂದಿಗೆ ಬಂಧ. ಹತ್ತಿರದವರೊಡನೆ ನಿಕಟ ಬಂಧ. ಅನ್ಯರೊಡನೆ ಸಾಮಾಜಿಕ ಬಂಧ. ಹೀಗೆ ಹತ್ತು ಹಲವಾರು ರೀತಿಯಲ್ಲಿ ನಾವು ಈ ಜಗತ್ತಿನ ಎಲ್ಲದರೊಂದಿಗೆ ಸಂಪರ್ಕವನ್ನು ಇಟ್ಟುಕೊಂಡಿರುತ್ತೇವೆ. ಈ ರೀತಿಯ ಬಂಧನಗಳು ಇಲ್ಲದ ವ್ಯಕ್ತಿ ನಮಗೆ ಎಲ್ಲೂ ಕಾಣಸಿಗುವುದಿಲ್ಲ. ನಮಗೆ ಬೇಕೋ ಬೇಡವೋ, ಒಳ್ಳೆಯದೋ ಕೆಟ್ಟದೋ, ಅರಿತೋ ಅರಿವಿಲ್ಲದೆಯೇ, ಇಷ್ಟಪಟ್ಟೋ ಇಷ್ಟವಿಲ್ಲದೆಯೋ

ನಾವು ಹೊಸ ಹೊಸ ಸಂಬಂಧಗಳನ್ನು ಅರಸುತ್ತೇವೆ ಮತ್ತು ಕಟ್ಟಿಕೊಳ್ಳುತ್ತೇವೆ. ಮೊದಮೊದಲು ಸುಂದರವಾಗಿರುವ ಸಂಬಂಧಗಳು ಕಾಲಾಂತರದಲ್ಲಿ ಕೆಟ್ಟು ಹೋಗುತ್ತವೆ. ಹಾಗೆ ಕೆಡಲು ಕಾರಣ, ಕೇವಲ ನಮ್ಮ "ಸ್ವಾರ್ಥ" ಭಾವನೆ.

ಏನಾದರಾಗಲಿ, ಈ ಜಗತ್ತಿನೊಂದಿಗೆ ನಮಗೆ ಸೂಕ್ಷ್ಮವಾದ ಅಥವಾ ಸ್ಥೂಲವಾದ, ವೈಯಕ್ತಿಕ, ಭಾವನಾತ್ಮಕ, ಸಾಮಾಜಿಕ ಸಂಬಂಧಗಳು ಇರುತ್ತವೆ. ಜಗತ್ತಿನೊಂದಿಗಿನ ಈ ಸಂಬಂಧಗಳೇ ನಂಟನ್ನು ಉಂಟುಮಾಡಿ ವ್ಯಾಮೋಹವನ್ನು ನಮ್ಮ ಮನಸ್ಸುಗಳಲ್ಲಿ ಹುಟ್ಟಿಸುತ್ತದೆ, ಎಂಬುವುದೇ ಈ ಮುಕ್ತಕದ ಹೂರಣ. ಆದರೆ ನಮ್ಮ ಬದುಕು, ನಾವು ಈ ಜಗತ್ತಿನೊಂದಿಗೆ ಎಂತಹ ರೀತಿಯ ಸಂಬಂಧವನ್ನು ಇಟ್ಟುಕೊಂಡಿದ್ದೇವೆ, ಎನ್ನುವುದರ ಮೇಲೆ ಅಧಾರಪಟ್ಟಿರುತ್ತದೆ. ಆತ್ಮಾವಲೋಕನಕ್ಕೆ ನಾವು ತೊಡಗಿಕೊಂಡಾಗ, “ನಮ್ಮ ಅರಿವು” ಆಗುತ್ತದೆ. ಸುಧಾರಣೆಗೆ ಅವಕಾಶವಿದ್ದರೆ, ಸುಧಾರಿಸಿಕೊಳ್ಳಲು ಮಾರ್ಗವಾಗುತ್ತದೆ.

**ಮುಕ್ತಕ-263**

**ಬಾಳು ಪಾಳೆನ್ನುವರ ಬಿಟ್ಟಿಹುದೇ ಬೆದಕಾಟ?**
**ತಾಳಿದರೆ ಬಾಳನಂತಹರುಮ್ ಆಶೆಯಲಿ ||**
**ಕಾಲವಿನ್ನಿರದಿಂತು ನಾಳೆ ನೋಡುವೆನೆನುತ |**
**ಮೇಲನೆ ನಿರೀಕ್ಷಿಪರು - ಮಂಕುತಿಮ್ಮ ||**

ಪಾಳೆನ್ನುವರ=ಪಾಳು+ಎನ್ನುವರ, ಬಾಳನಂತಹರುಮ್=ಬಾಳನ್+ಅಂತಹರುಮ್,
ಕಾಲವಿನ್ನಿರದಿಂತು=ಕಾಲವು+ಇನ್ನು+ಇರದು+ಇಂತು, ನೋಡುವೆನುತ=ನೋಡುವೆಮ್+ಎನುತ,

ಈ ಜೀವನ ಜಂಜಾಟಗಳ ಆಗರ, ಇದು ಹಾಳು ಎಂದು ಹೇಳುವವರನ್ನೂ ಈ ಬಾಳಿನ ಬೆದಕಾಟ ಬಿಟ್ಟಿಲ್ಲ ಅಲ್ಲವೇ? ತಾಳಿದರೆ ಬಾಳುವೆನು ಎನ್ನುವಾಶೆಯಲಿ ಬಾಳಿದರೆ, ಒಳ್ಳೆಯದು. ಏಕೆಂದರೆ ಕಾಲವು ಎಂದಿಗೂ ಹೀಗೇ ಇರುವುದಿಲ್ಲ. ಇಂದು ಇರುವುದಕ್ಕಿಂತ ಉತ್ತಮ ಕಾಲವನ್ನು ನಿರೀಕ್ಷಿಸುತ್ತಾ ಎಲ್ಲರೂ ಬದುಕುತ್ತಾರೆ, ಎಂದು ಜೀವನದ ಒಂದು ಸತ್ಯವನ್ನು ಅರುಹುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಹೌದು ಈ ಜೀವನವೇ ಒಂದು ಜಂಜಾಟದ ಹಂದರ. ಇದರೊಳಕ್ಕೆ ನಾವೆಲ್ಲಾ ಸಿಕ್ಕಿಹಾಕಿಕೊಂಡುಬಿಟ್ಟಿದ್ದೇವೆ. ನಾವಿರುವ ಸ್ಥಿತಿ ಸರಿಯಿಲ್ಲ. ಥೂ! ಹಾಳು ಜೀವನ ಎನ್ನುವವರನ್ನು ಈ ಜೀವನದ ತಾಪ ಬಿಡುವುದಿಲ್ಲ ಅಷ್ಟೇ, ಅಲ್ಲ, ಹಾಗೆನ್ನುವವರೂ ಇದರಿಂದ ಬಿಟ್ಟು ಓಡಲೂ ಸಾಧ್ಯವಿಲ್ಲ. ಇಂದಿನ ಪರಿಸ್ಥಿತಿಯನ್ನು ತಾಳಿಕೊಂಡರೆ, ಮುಂದೆ ಒಂದು ದಿನ ಒಳ್ಳೆಯಕಾಲ ಬಂದೇ ಬರುತ್ತದೆ ಎನ್ನುವ ಆಶಾಭಾವನೆಯಲ್ಲೇ ಬದುಕ ದೂಡಬೇಕು. ತಮ್ಮ ಜೀವನವನ್ನು, ತಮಗಿರುವ ಪರಿಸ್ಥಿತಿಯನ್ನು ಹಳಿದುಕೊಳ್ಳುವ ಜನರನ್ನು ಜೀವನದಲ್ಲಿ ನೋಡುತ್ತಿರುತ್ತೇವೆ. ಎಷ್ಟೇ ಬಯ್ದುಕೊಂಡರೂ ಇದರಿಂದ ಮುಕ್ತಿಯಂಬುದು ಖಂಡಿತ ಇಲ್ಲ, ಬದುಕ ಬದುಕಲೇ ಬೇಕು, ಅನ್ಯ ದಾರಿಯೇ ಇಲ್ಲ. ಆದರೆ ಕೆಲವರು ತೀರ ಹೇಡಿಗಳು ಬದುಕಿನ ಸಂಕಷ್ಟಗಳನ್ನು ತಾಳಲಾರದೆ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಪಾಪ ಅವರಿಗೆ ಗೊತ್ತಿಲ್ಲ "ಆತ್ಮಹತ್ಯೆಗೆ ಬೇಕಾದಷ್ಟು ಧೈರ್ಯದ ಹತ್ತರ ಒಂದು ಪಾಲು ಧೈರ್ಯ, ಕಷ್ಟಪಟ್ಟಾದರೂ ಬದುಕಲು ಸಾಕು" ಎಂದು.

'ಇಂದು ಇರುವ ಸ್ಥಿತಿ ಹೀಗೇ ಇರುವುದಿಲ್ಲ ಮುಂದೆ ಎಂದಾದರೂ ಒಳ್ಳೆಯ ದಿನಗಳು ಬರುತ್ತವೆ ಇಂದಿಗಿಂತ ಉತ್ತಮ ಸ್ಥಿತಿ ಬರುತ್ತದೆ, ಅಂದು, ನಾವು ಇಂದು ಬಯಸುತ್ತಿರುವ ಸುಖ ಮತ್ತು ಆನಂದವನ್ನು ಪಡೆಯಬಹುದು" ಎಂದು ಎಲ್ಲರೂ ಆಲೋಚಿಸಬೇಕು. "ಕಾಲಾನುಕಾಲಕ್ಕೆ ತಾಂ ಬಡವ ಬಲ್ಲಿದನಾಗನೆ - ಹರಹರಾ ಶ್ರೀಚೆನ್ನಸೋಮೇಶ್ವರಾ" ಎಂದು ಸೋಮೇಶ್ವರ ಶತಕದಲ್ಲಿ ಉಲ್ಲೇಖವಾಗಿದೆ. ಅಷ್ಟೇ, ಅಲ್ಲ ಇದು ಎಲ್ಲರ ಅರಿವಿಗೂ ಇರುವ ಜೀವನದ ಪರಮ ಸತ್ಯ. ಕೇವಲ ತಾಳ್ಮೆಯ ಅಭಾವದಿಂದ ನಮ್ಮ ಆಲೋಚನೆಗಳು ವಿಚಿತ್ರವಾಗಿರುತ್ತದೆ ಅಷ್ಟೇ. "ತಾಳಿದವನು ಬಾಳಿಯಾನು" ಎನ್ನುವುದನ್ನು ಕೇಳಿಲ್ಲವೇ? ನಮ್ಮ ಇಂದಿನ ಸ್ಥಿತಿ ನಮಗಿಷ್ಟವಿಲ್ಲದಿದ್ದರೂ ಜೀವನವನ್ನು ಸಾಗಿಸಲೇ ಬೇಕು ಮತ್ತು ತಾಳ್ಮೆಯಿಂದ ಉತ್ತಮ ದಿನಗಳಿಗೆ ಕಾಯಬೇಕು.

# ನಾಚಿಕೆಯದೇಕೆ 264-268

**ಮುಕ್ತಕ-264**

**ಗೋಳಾಡಲುಂ ಬೇಡ, ಲೋಲಾಪ್ತಿಯುಂ ಬೇಡ।**
**ಬಾಳು ಪರಚೇತನದ ಕೇಳಿಯೆಂದೆಣಿಸಿ॥**
**ಪಾಲಿಗನು ನೀನದರೊಳೆನಿಪಂತೆ ಬಾಳುತಿರು।**
**ಕೇಳಿಯುಂ ಧರ್ಮವೆಲೋ ಮಂಕುತಿಮ್ಮ॥**

ಕೇಳಿಯೆಂದೆಣಿಸಿ-ಕೇಳಿ+ಎಂದು+ಎಣಿಸಿ, ನೀನದರೊಳೆನಿಪಂತೆ=ನೀನು+ಅದರೊಳು+ಎನಿಪಂತೆ, ಧರ್ಮವೆಲೋ=ಧರ್ಮವು+ಎಲೋ.

ಲೋಲಾಪ್ತಿಯುಂ=ಅತಿ ಆಸಕ್ತಿ, ಕೇಳಿ=ಆಟ, ಪಾಲಿಗನು=ಪಾಲಿಸುವವನು, ಕೇಳಿಯುಂ=ಆಟವೂ.

ಈ ಜಗತ್ತಿನ ಬದುಕು ಸರಿಯಿಲ್ಲವೆಂಬ ಗೋಳಾಟವೂ ಬೇಡ ಅಥವಾ ಅತಿಯಾದ ಆಸಕ್ತಿಯೂ ಬೇಡ. ಈ ನಮ್ಮ ಬಾಳು ಆ ಪರಮಾತ್ಮನ ಆಟ ಮತ್ತು ನಾವು ಅದರೊಳಗಿನ ಒಂದು ಪಾಲನ್ನು ಹಂಚಿಕೊಂಡು ನಮ್ಮ





ಪಾತ್ರವನ್ನು ನಿರ್ವಹಿಸುತ್ತಿದ್ದೇವೆ ಮತ್ತು ಬಾಳುತ್ತಿದ್ದೇವೆ ಎಂದು ಅಂದುಕೊಳ್ಳಬೇಕು. "ಹಾಗೆ ಬಾಳುವುದು ಧರ್ಮ' ಎಂದು, ಹೇಗೆ ಜೀವಿಸಬೇಕೆಂಬ ಒಂದು ಸತ್ಯವನ್ನು ಪ್ರತಿಪಾದಿಸುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ನಮ್ಮ ಬಾಳು ಆ ಪರಮಾತ್ಮನ ಲೀಲಾವಿನೋದದ ನಾಟಕದ ಒಂದು ಪಾತ್ರವಾದರೂ, ನಾವು ನಮ್ಮ ನಿರ್ದೇಶಕನನ್ನು ಮರೆತು, ನಮ್ಮ ಬದುಕನ್ನು ಸ್ವತಂತ್ರವಾಗಿ ಬದುಕಬೇಕೆಂಬ ಹಂಬಲದಿಂದ, ಅಹಂಕಾರದಿಂದ ಈ ಬದುಕಿನ ಜಂಜಾಟವನ್ನು ಹಳಿಯುತ್ತಲೋ ಅಥವಾ ಇದೇ ಸುಖದ ಅಥವಾ ಆನಂದದ ತಾಣ ಎಂದು ಇದರೊಳಕ್ಕೆ ಅತಿಯಾಗಿ ನಮ್ಮನ್ನು ತೊಡಗಿಸಿಕೊಂಡು ಈ ಜಗತ್ತಿನಲ್ಲೇ ಲೀನವಾಗಿಬಿಡುತ್ತೇವೆ, ಅಲ್ಲವೇ? ಈ ಜಗತ್ತೇ ಸತ್ಯ ಮತ್ತು ನಮ್ಮ ಬಾಳು ನಿತ್ಯ ನಿರಂತರವೆಂದು ನಂಬಿ ಇಲ್ಲಿ ನಮ್ಮನ್ನು ನಾವು ಸಂಪೂರ್ಣ ತೊಡಗಿಸಿಕೊಂಡುಬಿಡುತ್ತೇವೆ, ಅಲ್ಲವೇ? ಅಥವಾ ನಮಗೆ ಈ ಜೀವನದಲ್ಲಿ ಬರುವ ಕಷ್ಟಗಳನ್ನು ಕುರಿತು ಟೀಕಾ ಪ್ರಹಾರವನ್ನು ಮಾಡುತ್ತಾ, ಈ ಜಗತ್ತನ್ನೂ, ನಮ್ಮಂತೆ ಇರುವ ಇತರರನ್ನೂ ಮತ್ತು ಈ ಜಗತ್ತನ್ನು ಸೃಷ್ಟಿಸಿದ ಆ ಪರಮಾತ್ಮನನ್ನೂ ಸೇರಿ ನಾವು

ಹಳಿಯುತ್ತೇವೆ. ಎರಡೂ ವಿಧದಲ್ಲಿ ನಾವು ಈ ಜಗತ್ತಿಗೆ ಅಂಟಿಕೊಂಡಿದ್ದೇವೆ. ಇದು ಸರಿಯಲ್ಲ ಎನ್ನುತ್ತಾರೆ ಮಾನ್ಯ ಗುಂಡಪ್ಪನವರು.

ನಮ್ಮ ಬದುಕು ಅಶಾಶ್ವತ. ನಾವು ಕೇವಲ ಪಾತ್ರಧಾರಿಗಳು, ಪ್ರತೀ ಹೆಜ್ಜೆಯಲ್ಲೂ "ನಿರ್ದೇಶಕನ ಆದೇಶಕ್ಕೆ ಓಗೊಟ್ಟು" ನಮ್ಮ ಪಾತ್ರಗಳನ್ನು ಚೊಕ್ಕವಾಗಿ ನಿರ್ವಹಿಸಿ ಹೋಗಬೇಕೆಂಬ ಭಾವ ನಮ್ಮಲ್ಲಿ ಗಟ್ಟಿಯಾಗಿ ನಿಲ್ಲಬೇಕು. ಬದುಕಲ್ಲಿ ಇದ್ದು, ಬದುಕಿಗೆ ಅಂಟದೆ ನಮ್ಮ ಪಾತ್ರದಂತ್ಯದಲ್ಲಿ, ಎಲ್ಲ ನಟನೆ, ಎಲ್ಲ ಸಂಭಾಷಣೆಗಳನ್ನೂ ಇಲ್ಲೇ ತೊರೆದು ನೇಪತ್ಯಕ್ಕೆ ಸರಿಯಬೇಕು. ಹಾಗೆ ಮಾಡಿದರೆ ನಮಗೆ ಆ ಪರಮಾತ್ಮ ಇತ್ತ ಪಾತ್ರವನ್ನು ನ್ಯಾಯವಾಗಿ ಮತ್ತು ಚೆನ್ನಾಗಿ ನಿರ್ವಹಿಸಿದಂತಾಗುತ್ತದೆ. "ಕೇಳಿಯುಂ ಧರ್ಮವೆಲೋ" ಎಂದು ಹೇಳುತ್ತಾ "ಹೀಗೆ ತಾಟಸ್ಥ್ಯ ಮನೋಭಾವದಿಂದ ಬದುಕನ್ನು ಸ್ವೀಕರಿಸಿ, ಇದಕ್ಕೆ ಅಂಟದೆ, ಇದನ್ನು ಹೊಗಳುವುದೋ ಅಥವಾ ತೆಗಳುವುದೋ ಮಾಡದೆ ಜೀವನವನ್ನು ನಡೆಸುವುದೇ ಧರ್ಮ ಎಂದು ಹೇಳುತ್ತಾರೆ ನಮ್ಮ ಗುಂಡಪ್ಪನವರು.

"ತಾವರೆ ಎಲೆಯ ಮೇಲಿನ ನೀರ ಹನಿಯಂತಿರಬೇಕು ಬದುಕು" ಎಂದು ಗೀತಾಚಾರ್ಯ ಹೇಳಿದಂತೆ ಇದ್ದೂ ಇಲ್ಲದಂತೆ ಇದ್ದರೆ ಬದುಕನ್ನು ಸುಲಭವಾಗಿ ಬಾಳಿ ಮುಗಿಸಬಹುದು.

**ಮುಕ್ತಕ-265**

**ಬಾಳ ಸಿರಿ ಸೊಗಸುಗಳ ಪೆರ್ಚಿಪನು ಖೇಲಕನು।**
**ಕೀಳದೆನಿಪವನೊರಟ, ಮಂಕ, ಕಲ್ಲೆದೆಗ॥**
**ತೋಳಿಂದೆ ತಿಳಿವಿಂದೆ ನುಡಿಯಿಂದ ಜಗದಿರವ।**
**ಮೇಲೆನಿಪವನೆ ರಸಿಕ – ಮಂಕುತಿಮ್ಮ॥**

ಕೀಳದೆನಿಪವನೊರಟ=ಕೀಳು+ಅದು+ಎನಿಪವನ್+ಒರಟ, ಜಗದಿರವ=ಜಗದ+ಇರವ,
ಮೇಲೆನಿಪವನೆ=ಮೇಲ್+ಎನಿಪವವನೆ.

ಖೇಲಕನು=ಆಟವಾಡಿಸುವವನು, ತಿಳಿವಿಂದೆ=ಬುದ್ಧಿಶಕ್ತಿಯಿಂದ, ಜಗದಿರವ=ಜಗತ್ತಿನ ಬದುಕ.

ಈ ಜಗತ್ತಿನ ಸುಂದರತೆಯನ್ನು ಹೆಚ್ಚಿಸುತ್ತಲೇ ಇರುತ್ತಾನೆ, ಜಗನ್ನಾಟಕ ಸೂತ್ರಧಾರಿ. ಇದನ್ನು ಕೀಳು ಎಂದು ಎನ್ನುವವನು ಒರಟ, ಮಂಕ ಮತ್ತು ಕಲ್ಲು ಮನದವನು, ತನ್ನ ಬಾಹುಬಲದಿಂದ, ಅರಿವಿನ ಬಲದಿಂದ ಮತ್ತು ಮಾತಿನ ಚಮತ್ಕಾರದಿಂದ, ಈ ಜಗತ್ತಿನ ಬದುಕನ್ನು ಉತ್ತಮವಾಗಿಸುವವನೆ, ರಸಿಕ ಎಂದು ಉಲ್ಲೇಖಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಈ ಜಗತ್ತು ಪ್ರತಿನಿತ್ಯ ಬದಲಾಗುತ್ತಲೇ ಇರುತ್ತದೆ. ಪರಮಾತ್ಮ ಈ ಜಗತ್ತಿನ ಸೊಬಗನ್ನು ನಿರಂತರವಾಗಿ ಹೆಚ್ಚಿಸುತ್ತಲೇ ಇರುತ್ತಾನೆ. ಅದನ್ನು ಕಾಣಲು ಸಂಸ್ಕಾರ, ಹೃದಯ ಮತ್ತು ಮನಸ್ಸು ಬೇಕು. ಹೊಸ ಚಿಗುರು, ಹೂ ಹಣ್ಣು, ಪ್ರಾಣಿ ಪಕ್ಷಿಗಳು, ಗಿಡ ಮರಗಳು, ಮಕ್ಕಳು ಹೀಗೆ ಸಕಲವನ್ನೂ ಹೊಸದಾಗಿಸಿ ಈ ಜಗದ ಸುಂದರತೆಯನ್ನು ಹೆಚ್ಚಿಸುವ ಕಲೆ ಕೇವಲ ಆ ಪರಮಾತ್ಮನಿಗೆ ಇದೆ. ನೋಡಿ, ನಮ್ಮ ಮನೆಯ ಹಿತ್ತಲಲ್ಲಿ ಒಂದು ಹೂ ಅರಳಿದರೆ ಅಥವಾ ನಮ್ಮ ಮನೆಯಲ್ಲಿ ಒಂದು ಪುಟ್ಟ ಮಗು ನಲಿದಾಡಿದರೆ ನಮಗೆ ಸಂತೋಷವಾಗಬೇಕು. ಆದರೆ ಅದನ್ನು ನೋಡಿ ಆನಂದಿಸುವ ಗುಣ ನಮಗೆ ಇಲ್ಲ. ನಮಗೆ ಇಲ್ಲಿರುವ ಹೊಸತನಕ್ಕಿಂತ, ನಮ್ಮ ಕೊರತೆಗಳೇ ಅಧಿಕವಾಗಿ ಕಾಣುತ್ತವೆ. ಹೊಸತನ್ನು ಕಾಣಲಾಗದೆ 'ಅಯ್ಯೋ ಈ ಜಗತ್ತು, ಬೇಸರ ತರುತ್ತಿದೆ' ಎನ್ನುವವರು ಅರಸಿಕರು.

ಈ ಜಗತ್ತಿನಲ್ಲಿ ಹಲವರಿಗೆ ಬಾಹುಬಲವೋ, ಬುದ್ಧಿಬಲವೋ ವಾಕ್ಚಾತುರ್ಯವೋ ಅಧಿಕವಾಗಿರುತ್ತದೆ. ಅಂಥಹವರು ನಾಯಕರೋ, ನಿರ್ವಾಹಕರೋ, ನಿರ್ದೇಶಕರೋ, ಕಲೋಪಾಸಕರೋ, ಕಲಾವಿದರೋ ಸಮಾಜ ಸೇವಕರೋ, ಸುಧಾರಕರೋ ಆಗಿ ಈ ಜಗತ್ತನ್ನು ಉತ್ತಮವಾಗಿಸಲು ಪ್ರಯತ್ನ ಪಡುತ್ತಾರೆ. ಮತ್ತೆಲ್ಲರೂ ತೀರ ಸಾಮಾನ್ಯರಾಗಿರುತ್ತಾರೆ. ಕೆಲವೇ ಜನರ ಪ್ರಯತ್ನದಿಂದ ಸಾವಿರಾರು ಜನರು ಪ್ರಯೋಜನ ಪಡೆದು ಸುಖವನುಭವಿಸುತ್ತಾರೆ. ಉದಾಃ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು. ಅಂತಹವರು ಈ ಜಗತ್ತಿನಲ್ಲಿ ಉತ್ತಮರು ಮತ್ತು ಜೀವನವನ್ನು ಸಂಪೂರ್ಣವಾಗಿ ಅಸ್ವಾದಿಸುತ್ತಾರೆ.

ಆ ಪರಮಾತ್ಮ ನಮಗೆ ಕೊಟ್ಟ ಶಕ್ತಿಯಿಂದ ಈ ಜಗತ್ತನ್ನು ಉತ್ತಮಗೊಳಿಸಲು ಪ್ರಯತ್ನ ಪಟ್ಟರೆ ನಮ್ಮ ಜೀವನ ಸಾರ್ಥಕವಾಗುತ್ತದೆ. ನಮ್ಮನ್ನು ನಾವು ಉತ್ತಮರಾಗಿಸಿಕೊಂಡರೆ, ಈ ಜಗತ್ತನ್ನು ಉತ್ತಮವಾಗಿಸಿದಂತೆ.

**ಮುಕ್ತಕ-266** **ಬಾಳ ಹಳಿವುದದೇಕೆ? ಗೋಳ ಕರೆವುದದೇಕೆ?**

**ಬಾಳಿದಲ್ಲದೆ ತಪ್ಪದೇನ ಮಾಡಿದೊಡಂ ||**

**ಕೇಳಿಯದು ಬೊಮ್ಮನಾಡಿಪನು ನೀನದರೊಳಗೆ |**

**ಪಾಲುಗೊಳಲಳಬೇಡ - ಮಂಕುತಿಮ್ಮ ||**

ಹಳಿವುದದೇಕೆ=ಹಳಿವುದು+ಅದು+ಏಕೆ, ಕರೆವುದದೇಕೆ=ಕರೆವುದು+ಅದು+ಏಕೆ,

ಬಾಳಿದಲ್ಲದೆ=ಬಾಳು+ಇದು+ಅಲ್ಲದೆ, ತಪ್ಪದೇನ=ತಪ್ಪುದು+ಅದು+ಏನ,





ಬೊಮ್ಮನಾಡಿಪನು=ಬೊಮ್ಮನು+ಆಡಿಪನು, ನೀನದರೊಳಗೆ=ನೀನು+ಅದರೊಳಗೆ,

ಪಾಲುಗೊಳಲಳಬೇಡ=ಪಾಲುಗೊಳಲು+ಅಳಬೇಡ.

ಕೇಳಿಯದು=ಅದು ನಾಟಕವು.

ಈ ಬಾಳನ್ನು ಏಕೆ ಹಳಿಯತ್ತೀರಾ? ಇಲ್ಲಿ ಏಕೆ ಗೋಳಾಡತೀರಾ? ಏನೇ ಮಾಡಿದರೂ ಬದುಕುವುದು ತಪ್ಪುವುದಿಲ್ಲ. ಅದು ಪರಬ್ರಹ್ಮನಾಡಿಸುವ ಜಗನ್ನಾಟಕ, ಆ ನಾಟಕದಲ್ಲಿ ಪಾಲುಗೊಳ್ಳಲು ಅಳಬೇಡಿ, ಎಂದು ವಿಶದಿಕರಿಸುತ್ತಾರೆ, ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ನಮ್ಮ ನಿಮ್ಮ ಸುತ್ತಮುತ್ತಿನಲ್ಲಿ, ತಮ್ಮ ಜೀವನವನ್ನು, ಬದುಕನ್ನು ಹಳಿಯುವ ಜನರ ನಮಗೆ ಹೇರಳವಾಗಿ ಸಿಗುತ್ತಾರೆ. ನಾವೂ ಸಹ ನಮ್ಮ ಕಷ್ಟ ಸಮಯದಲ್ಲಿ "ಛೇ! ಎಂತಹ ಬದುಕು", " ನಮ್ಮದು ಎಂತಹ ಬಾಳು" ಎಂದು ನಮ್ಮ ಬಾಳನ್ನು ಹಳಿಯುವ ಭಾವವನ್ನು ತಳೆಯುತ್ತೇವಲ್ಲವೇ? ಏಕೆ ಹೀಗೆ ಎಂದು ಯೋಚಿಸಿದರೆ, ಉತ್ತರ ಸ್ಪಷ್ಟ. ನಾವು ನಮ್ಮ ಬದುಕನ್ನು "ನಾವು" ಬದುಕುತ್ತಿದ್ದೇವೆ ಎಂದು ಬಲವಾಗಿ ನಂಬುತ್ತೇವೆ. ಹೀಗೆ ಯೋಚಿಸುವುದು ತಪ್ಪು ಎಂದು

ಹೇಳಲಾಗದು. ಜೀವನದಲ್ಲಿ ಹಲವಾರು ಆಗುಹೋಗುಗಳಿಗೆ ನಮಗೆ ಕಾರಣಗಳೇ ಸಿಗುವುದಿಲ್ಲ. ಹಾಗೆ ನಾವು ಕಂಡುಕೊಳ್ಳುವ ಕಾರಣಗಳು, ನಮ್ಮದೇ ಪರಿಭಾಷೆಯಾಗಿ, ಸತ್ಯಕ್ಕಿಂತ ದೂರವಾಗಿರುತ್ತದೆ. ಆ ಕಾರಣಗಳನ್ನು ಕೊಡುತ್ತಾ ನಾವು ಗೋಳಾಡುತ್ತೇವೆ, ಪರಿತಪಿಸುತ್ತೇವೆ ಮತ್ತು ಪಶ್ಚಾತ್ತಾಪ ಪಡುತ್ತೇವೆ. ಸತ್ಯವನ್ನು ಕಾಣುವ ಶಕ್ತಿ ನಮಗಿಲ್ಲ ಕಂಡರೂ ಒಪ್ಪಿಕೊಳ್ಳುವ ಧೈರ್ಯವಿರುವುದಿಲ್ಲ. ಹಾಗಾಗಿ ಗೋಳಾಡುತ್ತೇವೆ. ಕಷ್ಟ ಬಂದಾಗ ಕಾರಣಗಳನ್ನು ಹುಡುಕುವ ನಾವು, ಜಯಗಳಿಸಿದಾಗ, ಸುಖಬಂದಾಗ ಅದಕ್ಕೆ ಕೇವಲ ನಮ್ಮ ಕ್ಷಮತೆಯನ್ನು ಕಾರಣವನ್ನಾಗಿಸುತ್ತೇವೆ. ಎಂತಹ ವಿಪರ್ಯಾಸ. ಇದು ಜಗತ್ತಿನ ಪರಿ.

ಆದರೆ ಹುಟ್ಟುವಾಗ ಇಂತಹ ಕಡೆ ಹುಟ್ಟಬೇಕೆಂದಾಗಲೀ, ಹೀಗೇ ಬಾಳಬೇಕೆಂದಾಗಲೀ ಮೊದಲೇ ನಿರ್ಧರಿಸಿ ಹುಟ್ಟಲಾಗುವುದಿಲ್ಲ. ಈ ಬಾಳು ಆ ಪರಬ್ರಹ್ಮನಾಡಿಸುವ ನಾಟಕ, ನಾವು ಈ ನಾಟಕದಲ್ಲಿ ಕೇವಲ ಪಾತ್ರಧಾರಿಗಳು. ಇಂತಹ ನಾಟಕದಲ್ಲಿ ನಮಗೆ ಇಷ್ಟ ಬಂದ ಪಾತ್ರವನ್ನು ಧರಿಸಲು ಅಥವಾ ನಟಿಸಲು ನಮಗೆ ಯಾವ ಸ್ವಾತಂತ್ರ್ಯವೂ ಇಲ್ಲ. ಎಲ್ಲವೂ ಪೂರ್ವ ನಿರ್ಧಾರಿತ, ಕಷ್ಟವೋ, ಸುಖವೋ, ದುಃಖವೋ, ಸಿರಿತನವೋ, ದಾರಿದ್ರವೋ ಹೇಗೋ ಒಂದು ರೀತಿಯಲ್ಲಿ ನಾವು ಬಾಳಲೇ ಬೇಕು. ಅನ್ಯಥಾ ದಾರಿಯೇ ಇಲ್ಲ. ಹಾಗಾಗಿ ನಾವು ಬದುಕನ್ನು ಹಳಿಯದೆ, ಬದುಕಲು ಗೋಳಾಡದೆ, ಬದುಕಬೇಕು ಎನ್ನುವುದೇ ಈ ಮುಕ್ತಕದ ಹೂರಣ.

ನಮ್ಮ ಬದುಕು, ಆ ಪರಮಾತ್ಮ ನಮಗೆ ಕೊಟ್ಟ ಪಾತ್ರ ಇದನ್ನು ಅವನಿಚ್ಛೆಯಂತೆ ನಿರ್ವಹಿಸುತ್ತಿದ್ದೇನೆ" ಎನ್ನುವಂತೆ ಬಾಳಬೇಕು. ನಮ್ಮ ಬದುಕಿನ ಪ್ರತಿಯೊಂದನ್ನೂ ಆ ಪರಮ ಚೇತನದ ಕ್ರಿಯೆಯೆಂದು ಅರಿತು, ಎಲ್ಲವನ್ನೂ ಅದಕ್ಕೆ ಸಮರ್ಪಿಸಿಬಿಟ್ಟರೆ, ಬದುಕು, ಒಂದು ರೀತಿಯ ನಿರಾಳವಾಗುತ್ತದೆ. ಪುಟಗಟ್ಟಲೆ ಬರೆದು ಹೇಳುವುದು ಸುಲಭ ಆದರೆ ಪಾಲಿಸುವುದು ಕಷ್ಟ, ಆದರೆ ಅಸಾಧ್ಯವಲ್ಲ. ಪ್ರಯತ್ನಪಟ್ಟರೆ, ಪ್ರಯತ್ನಪಟ್ಟಷ್ಟು ನಮಗೆ ಲಭ್ಯವಾಗುತ್ತದೆ.

**ಮುಕ್ತಕ-267**

**ಲೀಲೆಯೇಂ ಬಾಳೆಲ್ಲ? ಛೀ ತಳ್ಳು ಹಾಸ್ಯವನು |**
**ಬಾಲರೇಂ ನಾವಿನ್ನುಮೆನುತ ಪಲ್ಕಡಿದು ||**
**ಖೇಲನವ ಬೇಡವೆನುವರನು ವಿಧಿರಾಯನವ- |**
**ಹೇಳಿಪನು ಸೆರೆವಿಡಿದು - ಮಂಕುತಿಮ್ಮ ||**

ನಾವಿನ್ನುಮೆನುತ=ನಾವಿನ್ನುಂ+ಎನುತ, ಪಲ್ಕಡಿದು=ಪಲ್+ಕಡಿದು,
ಬೇಡವೆನುವರನು=ಬೇಡ+ಎನುವವರನು, ವಿಧಿರಾಯನವಹೇಳಿಪನು=ವಿಧಿರಾಯನು+ಅವಹೇಳಿಪನು.

ಲೀಲೆಯೆಂ=ಆಟವೇನು?, ಬಾಲರೇಂ=ಚಿಕ್ಕ ಮಕ್ಕಳೇನು? ಖೇಲನವ-ಆಟವನು,
ವಿಧಿರಾಯ=ವಿಧಿಗೊಡೆಯ.

ನಾವೇನು ಚಿಕ್ಕಮಕ್ಕಳೇನು? ಈ ಜಗತ್ತು ಮತ್ತು ಈ ಜಗತ್ತಿನ ಬದುಕು ಒಂದು ನಾಟಕ ಮತ್ತು ಇದು ಆ ಜಗನ್ನಾಟಕ ಸೂತ್ರಧಾರಿಯಾಡಿಸುವ ಆಟ ಎಂದು, ಇದಕ್ಕೆ ನಮ್ಮನ್ನು ನಾವು ಚಕಾರವೆತ್ತದೆ ತೊಡಗಿಸಿಕೊಳ್ಳಬೇಕು ಎಂದು ಹೇಳತ್ತೀರಾ? ತಮಾಷೆ ಮಾಡಬೇಡಿ, ಹಾಗೇನೂ ಇಲ್ಲ!! ಎಂದು ಈ ಜಗತ್ತನ್ನು ಅವಹೇಳನ ಮಾಡುವವರನ್ನು ಈ ಜೀವನ ಬೇಡವೆನ್ನುವವರನ್ನೂ ಸಹ ಆ ವಿಧಿರಾಯ ಸೆರೆಹಿಡಿದು ಬದುಕಲೇ ಬೇಕೆಂದು ವಿಧಿಸುತ್ತಾನೆ ಎಂದು ಪ್ರಸ್ತಾಪಮಾಡುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ನಮ್ಮ ಅಹಂಕಾರ "ನಾನು, ನಾವು, ನಮ್ಮ" ಮುಂತಾದ ಪದಗಳನ್ನು ನೆನೆಪಿಸುತ್ತಾ ನಮ್ಮನ್ನು ಆಡಿಸುತ್ತದೆ. ಹಾಗಾಗಿ ಪರಮಾತ್ಮನ ಪ್ರಮೇಯವಿಲ್ಲದೆ ನಾನು ಸ್ವಾತಂತ್ರನಾಗಿದ್ದೇನೆ ಎನ್ನುವ ಒಂದು ಹಮ್ಮು ಬಂದುಬಿಡುತ್ತದೆ. ನಾವು "ನಾವೇ" ಎನ್ನುವಂಥಾ ಭಾವದಿಂದ, ಈ ಜಗತ್ತಿನಲ್ಲಿ ನಾವು ಏನು ಬೇಕಾದರೂ ಮಾಡಬಹುದು ಎಂಬ ಭಾವನೆ ಮೂಡುತ್ತದೆ. ಅದರೊಳಗೂ ನಾವು ಮಾಡುವ ಕೆಲಸಕಾರ್ಯಗಳು ಜಯಪ್ರದವಾಗಿ ನಡೆಯುತ್ತಿರುವಾಗ, ನಮಗೆ ಪರಮಾತ್ಮ, ವಿಧಿರಾಯ ಎಂಬುವನು ಒಬ್ಬನಿದ್ದಾನೆ, ನಾವವನ ಅಧೀನ ಎನ್ನುವುದು ಸಂಪೂರ್ಣ ವಿಸ್ಮರಣೆಯಾಗಿಬಿಡುತ್ತದೆ. ಆ ಸಮಯದಲ್ಲಿ ಯಾರಾದರೂ ಬುದ್ಧಿವಾದ ಹೇಳಲು ಹೋದರೆ, ಅವರನ್ನು ತಿರಸ್ಕಾರಭಾವದಿಂದ ನೋಡುವುದು ಸಹಜ. ಹೀಗಿರುವವರನ್ನು ಎಲ್ಲ ಕಡೆಯೂ ಕಾಣುತ್ತೇವೆ.

ನಮ್ಮ ಪರಿಸ್ಥಿತಿ ಸ್ವಲ್ಪ ಹದಗೆಟ್ಟರೆ, ಆಗ ನಮಗೆ ದೇವರು ಜ್ಞಾಪಕಕ್ಕೆ ಬರುತ್ತಾನೆ. 'ಸಂಕಟ ಬಂದಾಗ ವೆಂಕಟರಮಣ" ಎನ್ನುವಂತೆ, ಆ ದೇವರಿಗೂ ಲಂಚಕೊಟ್ಟು ನಮ್ಮ ಸ್ಥಿತಿಯನ್ನು ಸರಿಪಡಿಸಿಕೊಳ್ಳಲು ಪ್ರಯತ್ನಪಡುತ್ತೇವೆ. "ತಿಮ್ಮಪ್ಪನಿಗೆ ವಜ್ರದ ಕಿರೀಟವನ್ನು ಕೊಡುವುದಕ್ಕೂ ನಾವು ತಯಾರು. ಆದರೆ ನಮ್ಮ ಆಗುಹೋಗುಗಳೆಲ್ಲ ನಮ್ಮ ಪೂರ್ವಕರ್ಮದಂತೆ, ಆ ವಿಧಿರಾಯನ ಬರಹದಂತೆ, ಪರಮಾತ್ಮನ ಲೀಲಾ ವಿನೋದದಂತೆ ನಡೆಯುತ್ತದೆ ಎನ್ನುವುದನ್ನು ಮರೆತೇ ಬಿಟ್ಟಿರುತ್ತೇವೆ. ನಂತರ ಪರಿತಾಪ ಪಡುತ್ತೇವೆ.

ವಾಚಕರೆ ಈ ಜಗತ್ತಿನಲ್ಲಿ ಎಲ್ಲವೂ ಒಂದು ಸೂತ್ರದಂತೆ ನಡೆಯುತ್ತದೆ. ಕಣ್ಣಿಗೆ ಕಾಣದ ಸೂತ್ರದ ಬಂಧನದಿಂದ ನಡೆಯುತ್ತದೆ. ಅದರಿಂದ ನಾವು ಬೇರೆಯಾಗಲು ಸಾಧ್ಯವೇ ಇಲ್ಲ, ನಾವೂ ಸಹ ಅದರ ಪ್ರಭಾವಕ್ಕೊಳಗಾಗಿದ್ದೇವೆ.





ಒಪ್ಪುತ್ತೇವೆಯೋ, ಇಲ್ಲವೋ ಅಥವಾ ನಂಬುತ್ತೇವೆಯೋ, ಇಲ್ಲವೋ ಪರಿಣಾಮಗಳನ್ನು ಮಾತ್ರ ಅನುಭವಿಸಲೇಬೇಕು. ಇದರಿಂದ ಯಾರಿಗೂ ಮುಕ್ತಿಯಿಲ್ಲ. ಅದನ್ನು ಕಡೆಗಣಿಸಿ, ಅಹಂಕಾರದಿಂದ ಮೆರೆದು ನಂತರ ಕಷ್ಟಪಡುವುದಕ್ಕಿಂತ, ಮೊದಲೇ ಶರಣಾಗಿ ಪರಮಾತ್ಮನ 'ಇಚ್ಛೆಯಂತೆ" ನಾನು ಬಾಳು ನಡೆಸುತ್ತೇನೆ ಎಂದರೆ, ಜೀವನದ ಹೋರಾಟದ ತೀವ್ರತೆ ಕಡಿಮೆಯಾಗುತ್ತದೆ. ಅಲ್ಲವೇ?

**ಮುಕ್ತಕ-268**

**ನಾಚಿಕೆಯದೇಕೆ ನೀಂ ಬದುಕಿನಲ್ಲಿ ಸೊಗವಡಲು? |**
**ಚಾಚುತಿಹುದಾತ್ಮ ನಾಲಗೆಯ ದೆಸೆದೆಸೆಗೆ ||**
**ಬಾಚಿಕೊಳಲಮೃತಕಣಗಳನೆಲ್ಲ ತನ್ನೆಡೆಗೆ |**
**ಸಾಜ ಸೊಗವಾತ್ಮಂಗೆ - ಮಂಕುತಿಮ್ಮ ||**

ನಾಚಿಕೆಯದೇಕೆ=ನಾಚಿಕೆಯು+ಅದೇಕೆ, ಚಾಚುತಿಹುದಾತ್ಮ=ಚಾಚುತ+ಇಹುದು+ಆತ್ಮ,

ಬಾಚಿಕೊಳಲಮೃತಕಣಗಳನೆಲ್ಲ=ಬಾಚಿಕೊಳ್ಳಲು+ಅಮೃತ+ಕಣಗಳನು+ಎಲ್ಲ,

ಸೊಗವಾತ್ಮಂಗೆ=ಸೊಗವು+ಆತ್ಮಂಗೆ.

ಸೊಗವು=ಸಂತೋಷ-ಆನಂದ, ದೆಸೆದೆಸೆಗೆ=ಎಲ್ಲ ದಿಕ್ಕುಗಳಿಗೂ.

ಬದುಕಿನಲಿ ಸುಖಪಡಲು ನೀನೇಕೆ ನಾಚಿಕೊಳ್ಳುತ್ತೀಯ? ನಿನ್ನಾತ್ಮವು ಈ ಜೀವನದ ಸುಖವನ್ನು ಪಡೆಯಲು, ಸುಖದ ಪ್ರತಿಫಳಿಗೆಯನ್ನೂ ತನ್ನೆಡೆಗೆ ಸೆಳೆದುಕೊಳ್ಳಲು, ನಾಲ್ಕೂ ದಿಕ್ಕುಗಳಿಗೆ ತನ್ನನ್ನು ತಾನು ಚಾಚಿಕೊಂಡಿದೆ. ಆನಂದಪಡುವುದೇ ಆತ್ಮದ ಸಹಜ ಗುಣ ಎಂದು ವೇದಂತದ ಒಂದು ವಿಚಾರವನ್ನು ಮಂಡಿಸುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಪ್ರತೀ ಜೀವಿಯೂ ಆನಂದದಿಂದ ಇರಲು ಇಷ್ಟಪಡುತ್ತಾನೆ ಮತ್ತು ಆನಂದವನ್ನು ತನ್ನದಾಗಿಸಿಕೊಳ್ಳಲು ನಿರಂತರ ಪ್ರಯತ್ನ ಪಡುತ್ತಾನೆ. ಇದು ಸಹಜ ಗುಣ. 'ಅನಂದೋ ಬ್ರಹ್ಮತಿವ್ಯಜಾನಾತ್" ಎನ್ನುತ್ತದೆ ತೈತ್ತರೀಯ. ಹಾಗಾಗಿ ಆನಂದದಿಂದ ಕೂಡಿದ ಸುಖವನ್ನು ಪಡೆಯಲು ಮಾಡುವ ಪ್ರಯತ್ನವನ್ನು ಧೈರ್ಯದಿಂದ ಮಾಡಬೇಕು ಮತ್ತೆ ಅದನ್ನು ಮಾಡಲು ನಾಚಿಕೆ ಪಡಬಾರದು. ಏಕೆಂದರೆ ಆನಂದದಿಂದಿರುವುದೇ ಆತ್ಮನ ಸಹಜ ಗುಣ.

ಒಪ್ಪಿಕೊಳ್ಳೋಣ. ಆದರೆ ಆನಂದವೆಂದರೇನು? ಸುಖವೆಂದರೇನು? ಜೀವಿ ಎಲ್ಲಿಯತನಕ ತನ್ನನ್ನು ತಾನು ಮನಸ್ಸು ಬುದ್ಧಿ ದೇಹಗಳೊಂದಿಗೆ ಗುರುತಿಸಿಕೊಳ್ಳುತ್ತಾನೋ ಅಲ್ಲಿಯ ತನಕ ಅವನು ಪಡೆಯುವುದು "ಇಂದ್ರಿಯ ಸುಖ ಮತ್ತು ಇಂದ್ರಿಯಾನಂದ" ಇದು ಕ್ಷಣಿಕಾನಂದ, ಏಕೆಂದರೆ ನಶ್ವರವಾದ ಮನಸ್ಸು ಬುದ್ಧಿ ದೇಹಗಳ ಸಂಸರ್ಗದಲ್ಲಿ ಪಡೆಯುವ ಆನಂದವೂ ನಶ್ವರವೇ.

ಹಾಗೆಂದು ಮನಸ್ಸು ಬುದ್ಧಿಗಳನ್ನು ಕಡೆಗಣಿಸುವುದೂ ಸಹ ಸರಿಯಲ್ಲ. ಏಕೆಂದರೆ ನಾವು ಹೇಳುವ ಆ ನಿರಂತರವಾದ ಸತ್ಯವಾದ ಮತ್ತು ನಿತ್ಯವಾದ ಆನಂದವನ್ನು ಪಡೆಯಲು ಈ ಮನಸ್ಸು ಬುದ್ಧಿ ದೇಹಗಳೇ

ಉಪಕರಣಗಳು, ಉಪಕರಣಗಳಿಲ್ಲದೆ ಸಾಧನೆ ಸಾಧ್ಯವಿಲ್ಲ. ಆದರೆ ಜಗತ್ತಿನ ಜನರಿಗೆ ಮೇಲೆ ಹತ್ತುವಾಗ, "ಮೆಟ್ಟಿಲೇ ಮಹಡಿ" ಯಂತೆ ಭಾಸವಾದರೆ ಅದು ಭ್ರಮೆ. ಹಾಗೆಯೇ ಇಂದ್ರಿಯಗಳಿಂದ ಪಡೆದ ಆನಂದವನ್ನೇ ಸತ್ಯವಾದ ಆನಂದವೆಂಬ ಭ್ರಮೆಯಲ್ಲಿದ್ದಾರೆ.

ಆತ್ಮವು ಆನಂದವನ್ನು ಅರಸುತ್ತದೆ. ಅದು ಅರಸುವುದು ಆತ್ಮಾನಂದ. ನಾವು ಅದನ್ನು ಇಂದ್ರಿಯಾನಂದಗಳ ಮೆರವಣಿಗೆಯಲ್ಲಿ ಸುತ್ತಿಸಿ, ಅದು ಮತ್ತೆ ಮತ್ತೆ ಅತ್ಮಾನಂದವನ್ನು ಪಡೆಯುವ ಪ್ರಯತ್ನವನ್ನು ಮಾಡುವ ಹಾಗೆ ಮಾಡುತ್ತೇವೆ. ಗುಂಡಪ್ಪನವರು ಹೇಳಿದ ಹಾಗೆ ಆನಂದವನ್ನು ಪಡೆಯಲು ನಾಚಿಕೆ ಪಡಬಾರದು. ಆದರೆ ನಾವು ಬಯಸುವ ಆನಂದ ಆತ್ಮಾನಂದವಾಗಿರಬೇಕು. ಅದನ್ನು ಪಡೆಯಲು, ಸರಿಯಾದ ಜ್ಞಾನ, ಶ್ರದ್ಧೆ, ಭಕ್ತಿ, ಗುರು ಕೃಪೆ, ದೃಢವಾದ ನಂಬಿಕೆ ಮತ್ತು ಸಾಧನೆ ಬೇಕು. ನಿರಂತರ ಪ್ರಯತ್ನ ಇದ್ದರೆ ಸಾಧಿಸಬಹುದು.

# ಬ್ರಹ್ಮ ಸಂಸಾರಿ 269-273

**ಮುಕ್ತಕ-269**

**ಸುಂದರವನೆಸಗು ಜೀವನದ ಸಾಹಸದಿಂದೆ।**
**ಕುಂದಿಲ್ಲವದಕೆ ಸಾಹಸಭಂಗದಿಂದ ॥**
**ಮುಂದಕದು ಸಾಗುವುದು ಮರಳಿ ಸಾಹಸದಿಂದೆ।**
**ಚೆಂದ ಧೀರೋದ್ಯಮವೆ - ಮಂಕುತಿಮ್ಮ ॥**

ಸುಂದರವನೆಸಗು=ಸುಂದರವನು+ಎಸಗು, ಕುಂದಿಲ್ಲವದಕೆ=ಕುಂದು+ಇಲ್ಲವು+ಅದಕೆ,
ಮುಂದಕದು=ಮುಂದಕೆ+ಅದು, ಧೀರೋದ್ಯಮವೆ=ಧೀರ+ಉದ್ಯಮವೆ.
ಎಸಗು=ಮಾಡು, ಕುಂದು=ನ್ಯೂನತೆ, ಧೀರೋದ್ಯಮವೆ=ಧೈರ್ಯದಿಂದ ಮಾಡಿದ ಕೆಲಸ.

ಸಾಹಸದಿಂದ ನಿನ್ನ ಜೀವನದಲ್ಲಿ ಒಳ್ಳೆಯ ಕೆಲಸವನ್ನು ಮಾಡು. ನಿನ್ನ ಸಾಹಸದ ಪ್ರಯತ್ನದಲ್ಲಿ ಭಂಗ ಉಂಟಾದರೆ ತೊಂದರೆಯಿಲ್ಲ. ಏಕೆಂದರೆ ಮರಳಿ ಯತ್ನವನ್ನು ಮಾಡಲು ಅದು ಪ್ರೇರಕವಾಗುತ್ತದೆ. ಹೀಗೆ ಧೈರ್ಯದಿಂದ

ಒಳ್ಳೆಯ ಕೆಲಸಗಳನ್ನು ಮಾಡಲು ಬದುಕಿನಲ್ಲಿ ಸಾಹಸ ಮಾಡುವುದೇ ಚೆಂದ ಎಂದು ಒಳ್ಳೆಯ ಬದುಕಿನ ಮಾರ್ಗವನ್ನು ಸೂಚಿಸಿದ್ದಾರೆ ಮಾನ್ಯ ಗುಂಡಪ್ಪನವರು, ಈ ಮುಕ್ತಕದಲ್ಲಿ.

ನಮ್ಮಲ್ಲಿ ಕೆಲವರು ಇದ್ದಾರೆ. ಎದ್ದ-ತಿಂದ-ಮಲಗಿದ, ಎನ್ನುವ ರೀತಿಯಲ್ಲಿ, ಜೀವನದಲ್ಲಿ ಯಾವುದೇ ಸಾಹಸವಿಲ್ಲದೆ ಎಲ್ಲಾ ಪರಮಾತ್ಮನಿಚ್ಚೆ ಎಂದು ತಮ್ಮ ಇಡೀ ಜೀವಮಾನವನ್ನೇ ಕಳೆದು ಬಿಡುತ್ತಾರೆ. ನಮ್ಮ ನಿಮ್ಮ ಸುತ್ತಮುತ್ತಲ್ಲಿ ಅಂತಹ ಜನರನ್ನು ನೋಡುತ್ತೇವೆ. ಅದು ತಪ್ಪಲ್ಲ. ಪುರುಷ ಪ್ರಯತ್ನಕ್ಕೂ ಅವಕಾಶವಿದೆ ಎಂದು ಅವರಿಗೆ ಅನ್ನಿಸುವುದೇ ಇಲ್ಲ ಅಥವಾ ಹಾಗೆ ಯೋಚಿಸಿದರೆ, ಕೆಲಸ ಮಾಡಬೇಕಲ್ಲಾ ಎಂಬ ಸೋಮಾರಿತನದ ಭಾವವೂ ಇರುತ್ತದೆ. ಅವರ ಜೀವನದಲ್ಲಿ ಒಂದು ಸಾರ್ಥಕ್ಯ ಕಾಣುವುದಿಲ್ಲ. ಯಾವ ರೀತಿಯ ಸಾಹಸವೂ





ಇಲ್ಲದ ಜೀವನದಿಂದ, ಜಗತ್ತಿನಲ್ಲಿ ಬದುಕಿ ಸಾಯಬಹುದು, ಆದರೆ ಜಗತ್ತಿಗೆ ಏನನ್ನೂ ನೀಡದೆ ನಿರ್ಗಮಿಸಬೇಕು ಅಲ್ಲವೇ?

ಒಂದು ಕೆಲಸವನ್ನು, ಅಯ್ಯೋ ಇದು ಆಗೋಲ್ಲ ಎಂದು ಆರಂಭಮಾಡುವ ಮೊದಲೇ ಪರಿಣಾಮಕ್ಕೆ ಹೆದರಿ ಆರಂಭ ಮಾಡದೆ ಇರುವವನು "ಅಧಮ ಅಥವಾ ನೀಚ". ಬಹಳ ಹುಮ್ಮಸ್ಸಿನಿಂದ ಕೆಲಸ ಶುರು ಮಾಡಿ ಮಧ್ಯದಲ್ಲಿ ತೊಡಕುಗಳು ಬಂದಾಗ "ಅಯ್ಯೋ ನನ್ನ ಕೈಲಿ ಆಗೋಲ್ಲ" ಎಂದು ಕೆಲಸವನ್ನು ಅರ್ಧಕ್ಕೆ ಬಿಡುವವನು ಮಧ್ಯಮ. "ಏನಾದರಾಗಲೀ ನೋಡೇ ಬಿಡೋಣ. ಕೊನೆ ಮುಟ್ಟಿಸಲೇ ಬೇಕು" ಎಂದು ಕೆಲಸವನ್ನು ಸಂಪೂರ್ಣಗೊಳಿಸಿ, ಧನ್ಯತೆಯನ್ನು ಕಾಣುವವನು ಉತ್ತಮ ವ್ಯಕ್ತಿ ಎಂದು ಹೇಳಲ್ಪಟ್ಟಿದೆ.

ಹಾಗಾಗಿ ಡಿ.ವಿ.ಜಿ.ಯವರು ಹೇಳುವಂತೆ ಸಾಹಸ ಮಾಡಬೇಕು. ತಮ್ಮ ಯೋಗ್ಯತಾನುಸಾರ ಪ್ರಯತ್ನಪಡಬೇಕು. ಏನಾದರೂ ಹೊಸತನ್ನು ಮಾಡಿ ಈ ಜಗತ್ತಿನ ಸುಂದರತೆಗೆ ನಮ್ಮ ಕಿಂಚಿತ್ ಸೇವೆಯನ್ನು ಮಾಡಬೇಕು. ಹಾಗೆ ಮಾಡಿದರೆ ಜೀವನಾಂತ್ಯದಲ್ಲಿ ಒಂದು ಸಾರ್ಥಕತೆಯ ಭಾವ ನಮ್ಮಲ್ಲಿ ಮೂಡುತ್ತದೆ. ಇಂತಹ ಸಾಹಸ ಮಾಡುವಾಗ ಮಧ್ಯದಲ್ಲಿ ಬರುವ ತೊಡಕು, ತೊಂದರೆಗಳಿಗೆ ಹೆದರದೆ ಮತ್ತೆ ಮತ್ತೆ ಪ್ರಯತ್ನ ಪಡುತ್ತಾ ಧೈರ್ಯದಿಂದ ಮುನ್ನುಗ್ಗಿ ಏನನ್ನಾದರೂ ಸಾಧಿಸುವುದೇ ಚೆಂದ ಎಂದು ಮಾನ್ಯ ಗುಂಡಪ್ಪನವರು ಸ್ಪಷ್ಟವಾಗಿ ಹೇಳಿದ್ದಾರೆ. ನಾವೂ ಸಹ ಹಾಗೆ ಕೆಲಸಮಾಡುವ ಮನೋಭಾವವನ್ನು ಬೆಳೆಸಿಕೊಂಡು ಈ ಜಗತ್ತಿನ ಸುಂದರತೆಯನ್ನು ಹೆಚ್ಚಿಸಲು ನಮ್ಮ ಪ್ರಯತ್ನವನ್ನು ಮಾಡಿದರೆ "ಈ ಜಗತ್ತಿನಿಂದ ಪಡೆದುಕೊಂಡಿದ್ದರ ಋಣ ತೀರಿಸಿದಂತಾಗುತ್ತದೆ."

**ಮುಕ್ತಕ-270**

**ಎಲ್ಲರಿಗವಾಗಿ ತಾನ್, ಎಲ್ಲರುಂ ತನಗಾಗಿ।**
**ನಿಲ್ಲುವೇಕಾತ್ಮತೆಯ ಬಾಳ್ವೆಯಿಂ ಕಲಿಯಲ್॥**
**ಸಲ್ಲುವುಪಕರಣಗಳು ಮನೆ ರಾಜ್ಯ ಸಂಸಾರ-।**
**ವಲ್ಲಗಳೆಯದಿರದನು – ಮಂಕುತಿಮ್ಮ॥**

ಎಲ್ಲರಿಗಮಾಗಿ=ಎಲ್ಲರಿಗುಂ+ಆಗಿ, ನಿಲ್ಲುವೇಕಾತ್ಮತೆಯ=ನಿಲ್ಲುವ+ಏಕ+ಆತ್ಮತೆಯ,
ಸಲ್ಲುವುಪಕರಣಗಳು=ಸಲ್ಲುವ+ಉಪಕರಣಗಳು,
ಸಂಸಾರವಲ್ಲಗಳೆಯದಿರದನು=ಸಂಸಾರವು+ಅಲ್ಲಗಳೆಯದೆ+ಇರು+ಅದನು.

ಈ ಜಗತ್ತಿನಲ್ಲಿ ಎಲ್ಲರಿಗಾಗಿ ನಾನು, ಎಲ್ಲರೂ ನನಗಾಗಿ ಎಂದು ಬಾಳಬೇಕು. ಈ ರೀತಿ ಬಾಳಿನಲ್ಲಿ ಏಕಾತ್ಮ ಭಾವವನ್ನು ಕಲಿಯಲು ನಮಗೆ ಸಿಗುವ ಉಪಕರಣಗಳೇ ಮನೆ, ರಾಜ್ಯ ಮುಂತಾದವುಗಳು. ಅವುಗಳನ್ನು ಅಲ್ಲಗಳೆಯದಿರು ಎಂದು ಒಂದು ಆದೇಶವನ್ನು ನೀಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ,

ಬದುಕಿನಲ್ಲಿ ಒಂಟಿಯಾಗಿರಲು ಸಾಧ್ಯವೇ ಇಲ್ಲ. ನಾವು ಸಮಾಜಮುಖಿಯಾಗೇ ಬದುಕಬೇಕು. ಎಲ್ಲರೊಳಗೆ ಒಂದಾಗಿ ಎಲ್ಲರಿಂದ ಪಡೆಯುತ್ತಾ ಮತ್ತು ಎಲ್ಲರಿಗೆ ನೀಡುತ್ತಾ ಬದುಕಬೇಕು. ಮನುಷ್ಯ ಸಂಘ ಜೀವನವನ್ನು ಶುರುಮಾಡಿ ಲಕ್ಷಾಂತರ ವರ್ಷಗಳಾಗಿವೆ. ಅಲೆಮಾರಿಯಾಗಿದ್ದ ಮನುಷ್ಯ ಸ್ಥಿರವಾಗಿ ಸಂಘವನ್ನು ಕಟ್ಟಿಕೊಂಡ

ಮೇಲೆ ತನ್ನ ಅವಶ್ಯಕತೆಗಳಿಗೆ ಸಮಾಜದ ಮೇಲೆ ಅಧಾರಪಡುವುದು ಮತ್ತು ತನ್ನ ಕ್ಷಮತೆಗೆ ಅನುಸಾರವಾಗಿ ಏನನ್ನಾದರೂ ಕೊಡುವುದು, ನಡೆದುಕೊಂಡೇ ಬಂದಿದೆ. ಹೀಗೆ ಕಟ್ಟಿಕೊಂಡದ್ದೇ ಮನೆ, ಸಂಸಾರ, ಕುಲ, ಜಾತಿ, ಊರು, ನಾಡು, ರಾಜ್ಯ, ದೇಶ ಮುಂತಾದವುಗಳೆಲ್ಲ. ಇವುಗಳೆಲ್ಲ ಸಹಬಾಳ್ವೆ ಮತ್ತು ಸಹಜೀವನವನ್ನು ಕಲಿಯಲು ನಮಗೆ ಸಲಕರಣೆಗಳು ಅಥವಾ ಉಪಕರಣಗಳು, ಹಾಗಾಗಿ ಇಲ್ಲೇ ಬದುಕ ಬೇಕು, ಇಲ್ಲೇ ಕಲಿಯಬೇಕು ಇದನ್ನು ಅಲ್ಲಗಳೆಯುವಹಾಗಿಲ್ಲ.

ಮನುಷ್ಯ ಸಂಸ್ಕಾರಗಳನ್ನು, ಜ್ಞಾನವನ್ನು ಮತ್ತು ವಿದ್ಯೆಯನ್ನು ಬೆಳೆಸಿಕೊಂಡು ಸುಸಂಸ್ಕೃತನಾಗುತ್ತಾ ಹೋದಂತೆ ವಿವೇಕ ಮೂಡಿದರೆ ಆ ಬೃಹತ್ ಚೇತನದ ಕೋಟ್ಯಾಂತರ ರೂಪಗಳೇ ಈ ಜಗತ್ತಿನ ಜೀವಿಗಳೆಲ್ಲಾ. ಕೇವಲ ರೂಪ ಭೇಧದಿಂದ ನಾವು ಬೇರೆ ಬೇರೆಯಾಗಿ ಗುರುತಿಸಿಕೊಳ್ಳುತ್ತಿದ್ದೇವೆ. ಬಾಹ್ಯ ರೂಪದಲ್ಲಿ ಬೇರೆ ಬೇರೆಯಾಗಿ ಕಂಡರೂ ಆಂತರ್ಯದಲ್ಲಿ ಸಕಲ ಪ್ರಾಣಿಗಳೂ ಒಂದೇ ಎಂದು ಮನಗಾಣಬೇಕು. ಆತ್ಮವತ್ ಸರ್ವ ಭೂತೇಷು, ಎಂದರೆ ನಾನು ಹೇಗೋ ಪರರೂ ಹಾಗೆ ಎಂದು ಯೋಚಿಸಬೇಕು. ಇದನ್ನೇ ತನ್ನಂತೆ ಪರರ ಬಗೆದೊಡೆ ಕೈಲಾಸ ಬಿನ್ನಾಣವಕ್ಕು ಎಂದು ಸರ್ವಜ್ಞ ವಚನ ಹೇಳುತ್ತದೆ. ನನಗೆ ನೋವಾದ ಹಾಗೆ ಪರರಿಗೂ ನೋವಾಗುತ್ತದೆ ನಾನು ಸಂತೋಷಪಟ್ಟರೆ ಸಾಲದು ಪರರೂ ಸಂತೋಷಪಡಲಿ ಎಂದು ಈ ಜಗತ್ತಿನ ಎಲ್ಲರೂ ಆಲೋಚಿಸಿದಾಗ, ಈ ಭುವಿಯೇ ಸ್ವರ್ಗವಾಗುವುದರಲ್ಲಿ ಸಂದೇಹವೇ ಇಲ್ಲ ಅಲ್ಲವೇ? ವಾಚಕರೆ.

ಇದನ್ನೇ ಮಾನ್ಯ ಗುಂಡಪ್ಪನವರು "ನಿಲ್ಲುವೇಕಾತ್ಮತೆಯ ಬಾಳ್ವೆಯಿಂ" ಎಂದು ನೀನು ಈ ಜಗತ್ತಿನಲ್ಲಿ ಏಕಾತ್ಮಭಾವದಿಂದ ನಿಲ್ಲು ಎಂದು ಆದೇಶಿಸುತ್ತಾರೆ. ಆದರೆ ವಿಪರ್ಯಾಸವೆಂದರೆ, ವಾಚಕರೆ ಇಂದಿನ ಸ್ಥಿತಿ ಇದಕ್ಕೆ ಭಿನ್ನವಾಗಿದೆ. ಬಣ್ಣ ಜಾತಿ ಭಾಷೆ, ಧರ್ಮ, ನೆಲ, ನೀರು ಹೀಗೆ ಹತ್ತು ಹಲವಾರು ಕಾರಣಗಳಿಂದ ಈ ಜಗತ್ತಿನ ಜನರನ್ನು ತುಂಡು ತುಂಡಾಗಿಸಿ, ಪರಸ್ಪರ ನಿರಂತರ ಕಾದಾಟದಲ್ಲಿ ಮುಳುಗಿಸಿಬಿಟ್ಟಿದೆ. ಮತ್ತೆ ಸುದಿನಗಳು ಬರುವ ಸೂಚನೆಗಳು ಕ್ಷೀಣಿಸಿವೆ. ನಾವೆಲ್ಲಾ ಡಿ.ವಿ.ಜಿಯವರ ಆಶಯದಂತೆ ಏಕಾತ್ಮತೆಯನ್ನು ಬೆಳೆಸಿಕೊಂಡರೆ ಮತ್ತೆ ಈ ಜಗತ್ತು ಬದುಕಲು ಯೋಗ್ಯವಾದ ಸ್ಥಾವರವಾಗಬಹುದು.

**ಮುಕ್ತಕ-271** **ವ್ಯರ್ಥವೀ ಜೀವನದ ಬಡಿದಾಟವೆನ್ನದಿರು।**
**ಅರ್ಥವಹುದು ನಿನಗೆ ಪೂರ್ಣದರ್ಶನದಿಂ॥**
**ನರ್ತಿಪನು ಜಡಜೀವರೂಪಂಗಳಲಿ ಬೊಮ್ಮ।**
**ಪೂರ್ತಿಯಿದನರಿಯೆ ಸೊಗ - ಮಂಕುತಿಮ್ಮ॥**

ವ್ಯರ್ಥವೀ=ವ್ಯರ್ಥವು+ಈ, ಪೂರ್ತಿಯಿದನರಿಯೆ=ಪೂರ್ತಿ+ಇದನು+ಅರಿಯೆ.

ಈ ಜೀವನದ ಹೋರಾಟವನ್ನು ವ್ಯರ್ಥ ಎನ್ನದಿರು. ಈ ಸೃಷ್ಟಿಯ ಸಂಪೂರ್ಣ ದರ್ಶನವಾದಾಗ ನಿನಗೆ ಈ ಜಗತ್ತಿನ ಸಾರ್ಥಕತೆ ಅರ್ಥವಾಗುತ್ತದೆ. ಜೀವ ಮತ್ತು ಜಡ ರೂಪದಲ್ಲಿ ಆ ಪರಮಾತ್ಮನ ಲೀಲಾ ನರ್ತನ ನಡೆಯುತ್ತಿದೆ. ಇದರ ಸಂಪೂರ್ಣ ರೂಪ ನೋಡಿದರೆ ಸೊಗಸು ಎಂದು ಜಗತ್ಸೃಷ್ಟಿಯ ವಿಶೇಷವನ್ನು ಅರುಹಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.





ಅಗಾಧವಾದ ಮತ್ತು ಅತೀ ವಿಶಾಲವಾದ ಸೃಷ್ಟಿಯ ಸಂಪೂರ್ಣ ರೂಪವನ್ನು ನಮ್ಮ ಇಂದ್ರಿಯಗಳ ಸಹಾಯದಿಂದ ನೋಡಲು ಸಾಧ್ಯವಿಲ್ಲ. ಹಾಗಾಗಿ ಸಂಪೂರ್ಣ ನೋಡಲಾಗದಿದ್ದ ಮೇಲೆ, ಈ ಬದುಕಿನ ಹೋರಾಟ ವ್ಯರ್ಥ, ಆ ಪರಮಾತ್ಮ ಇಂತಹ ವ್ಯರ್ಥ ಜಗತ್ತನ್ನು ಏಕೆ ಸೃಷ್ಟಿಸಬೇಕಾಗಿತ್ತು? ಎಂದು ಅನ್ನಬಾರದು. ಯಾವುದೇ ವಸ್ತು, ವಿಚಾರ ಅಥವಾ ವ್ಯಕ್ತಿಯ ಬಗ್ಗೆ ನಮಗೆ ಸಂಪೂರ್ಣ ಮಾಹಿತಿಯಿಲ್ಲದೆ ಅದನ್ನು ವ್ಯಾಖ್ಯಾನಮಾಡುವುದು, ಕೇವಲ ತಪ್ಪಷ್ಟೇ ಅಲ್ಲ, ಮೂರ್ಖತನವೂ ಹೌದು.

ಆ ಪರಮಚೇತನ 'ತಾನು' ಬಹುವಾಗಿ ಪ್ರಕಟಗೊಳ್ಳಬೇಕೆಂದು 'ತನ್ನ ಇಚ್ಛೆಯಿಂದ' ಜಡವಾಗಿ ಪ್ರಕಟಗೊಂಡು, ಮತ್ತೆ ತಾನೇ ಆ ಜಡದಲ್ಲಿ ಚೇತನವಾಗಿ ಸೇರಿಕೊಂಡು, ಈ ಜಗತ್ತನ್ನು ಸೃಷ್ಟಿಸಿಕೊಂಡು, ತನ್ನ ಶಕ್ತಿಯಿಂದಲೇ ಈ

ಜಗತ್ತನ್ನು ನಿಯಂತ್ರಿಸುತ್ತಾ, ಕೋಟಿ ಕೋಟಿ ರೂಪದಲ್ಲಿ ನಮಗೆ ಕಾಣುತ್ತಿದೆ. ಇಲ್ಲಿರುವ ಪ್ರತೀ ಚರಾಚರವೂ ಆ ಜಡ ಮತ್ತು ಚೇತನದ ರೂಪದಲ್ಲಿರುವ, ಪರಮಾತ್ಮನ ಪ್ರತಿರೂಪವೇ, ಇದು ಸತ್ಯ. ಈ ಆಕಾಶ, ಈ ಆಕಾಶದಲ್ಲಿನ ಪ್ರತೀ ನಕ್ಷತ್ರ ಗ್ರಹ ಮತ್ತು ಎಲ್ಲ ಆಕಾಶಕಾಯಗಳು ಮತ್ತು ಪ್ರತಿಯೊಂದು ಆಕಾಶಕಾಯದಲ್ಲಿರುವ ಸಕಲವೂ, ಕೇವಲ ಆ ಪರಮಚೇತನದ ಜಡ-ಜೀವ ರೂಪವೇ!! ಇದರ ಸಮಗ್ರತೆಯನ್ನು ನಾವು ಕಾಣಬೇಕು.

ಆದರೆ ನಮ್ಮ ಅರಿವಿನ ಮತ್ತು ಕ್ಷಮತೆಯ ಮಿತಿಯಿಂದ ಇದನ್ನು ಸಂಪೂರ್ಣವಾಗಿ ನೋಡಲಾಗುವುದಿಲ್ಲ. ಹಾಗೆ ನೋಡಬೇಕಾದರೆ ನಮ್ಮ ಅರಿವು ಮತ್ತು ಕ್ಷಮತೆ ಎರಡೂ ಬೆಳೆಯಬೇಕು. ನಮ್ಮ ದೃಷ್ಟಿ ವಿಶಾಲವಾಗಬೇಕು. ಅದಕ್ಕೆ ಅಂತರಂಗದಲ್ಲಿ ಸಾಧನೆಯಾಗಬೇಕು. ಆ ಸಾಧನೆಯಿಂದ, ಎಂದು ನಮಗೆ ಈ ಜಗತ್ತಿನ ಮತ್ತು ಸೃಷ್ಟಿಕರ್ತನ ಲೀಲಾವಿನೋದದ ಸಮಗ್ರ ದರ್ಶನವಾಗುತ್ತದೋ, ಅಂದು ನಾವು ಈ ಜಗತ್ತನ್ನು ವ್ಯರ್ಥವೆನ್ನದೆ, ನಾವು ಕೇವಲ ಇದರ ಒಂದು ಅಂಗ ಅಥವಾ ಒಂದು ಪಾತ್ರವೆಂದು ಅರಿವಾಗಿ, ಇದರ ಸೊಗಸನ್ನು ಸವಿಯಲು ಸಾಧ್ಯವಾಗುತ್ತದೆ. ನಾವೂ ಸಹ ಈ ಜಗತ್ಸೃಷ್ಟಿಯ ಸಮಗ್ರತೆಯನ್ನು ಅರಿತುಕೊಳ್ಳುವ ಪ್ರಯತ್ನವನ್ನು ಮಾಡೋಣವೆ?

**ಮುಕ್ತಕ-272** **ಬೊಮ್ಮನೇ ಸಂಸ್ಕೃತಿಯ ಕಟ್ಟಿಕೊಂಡುತ್ಸಹಿಸೆ |**
**ಸುಮ್ಮನರೆಚಣವಿರದೆ ಪ್ರಕೃತಿ ತೊಡಗುತಿರೆ ||**
**ಜನ್ಮ ಸಾಕೆನುವುದೇಂ? ದುಮ್ಮಾನಪಡುವುದೇಂ |**
**ಚಿಮ್ಮುಲ್ಲಸವ ಧರೆಗೆ- ಮಂಕುತಿಮ್ಮ ||**

ಕಟ್ಟಿಕೊಂಡುತ್ಸಹಿಸೆ=ಕಟ್ಟಿಕೊಂಡು+ಉತ್ಸಹಿಸೆ, ಸುಮ್ಮನರೆಚಣವಿರದೆ=ಸುಮ್ಮನೆ+ಅರೆ+ಚಣವು+ಇರದೆ, ಸಾಕೆನುವುದೇಂ=ಸಾಕು+ಎನುವುದು+ಏಂ, ದುಮ್ಮಾನಪಡುವುದೇಂ=ದುಮ್ಮಾನಪಡುವುದು+ಏಂ, ಚಿಮ್ಮುಲ್ಲಸವ=ಚಿಮ್ಮು+ಉಲ್ಲಸವ, ಬೊಮ್ಮನೇ=ಆ ಪರಬ್ರಹ್ಮನೇ, ಸಂಸ್ಕೃತಿಯ=ಸಂಸಾರವ, ಅರೆಚಣ=ಅರೆ ಕ್ಷಣ, ಉಲ್ಲಸವ=ಉತ್ಸಾಹವ.

ಈ ಜಗತ್ತೆಂಬ ಸಂಸಾರವನ್ನು ಕಟ್ಟಿಕೊಂಡು ಆ ಪರಮಾತ್ಮನೇ ಇಷ್ಟೊಂದು ಉತ್ಸಾಹದಿಂದ ಇರುವಾಗ, ಅವನ ಸೃಷ್ಟಿಯಾದ ಪ್ರಕೃತಿಯು ಒಂದು ಅರೆಕ್ಷಣವೂ ಸುಮ್ಮನಿರದೆ ತನ್ನ ಕೆಲಸದಲ್ಲಿ ನಿರತವಾಗಿರುವಾಗ, ನನಗೆ ಈ ಜನ್ಮ ಸಾಕು, ನಾನೇಕೆ ಬದುಕ ಬೇಕು? ಎನ್ನುವಂತ ದುಮ್ಮಾನಗಳು ನಿನಗೇಕೆ? ಬದುಕಿರುವಾಗ ಉತ್ಸಾಹದಿಂದ ಬದುಕಿ, ಈ ಜಗತ್ತಿಗೂ ಉತ್ಸಾಹವನ್ನು ನೀಡು ಎಂದು ಬುದ್ಧಿವಾದವನ್ನು ಹೇಳುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಹೌದಲ್ಲವೇ!! ನಮ್ಮದು ಗಂಡ ಹೆಂಡತಿ ಮಕ್ಕಳು ಎನ್ನುವ ಚಿಕ್ಕ ಸಂಸಾರ. ಆದರೆ ಆ ಪರಮಾತ್ಮನದೋ! ಈ ಜಗತ್ತೇ ಅವನ ಸಂಸಾರ. ಎಲ್ಲರ ಹಿತಾಹಿತಗಳನ್ನು ನೋಡಿಕೊಳ್ಳುವವನೂ ಅವನೇ. ಹಾಗಾಗಿಯೇ ಅಲ್ಲವೇ ಎಲ್ಲರೂ ಆ ಪರಮಾತ್ಮನಿಗೆ ಮೊರೆಹೋಗುವುದು? ಅವನು ಜಗತ್ ಪಿತ. ಅವನಿಗಿರುವ ಹೊಣೆ ಅತ್ಯಧಿಕ. ನಾವಾದರೆ ಬದುಕಿನಲ್ಲಿ ಯಾರನ್ನಾದರೂ ನಮ್ಮ ಸಹಾಯಕ್ಕೆ ಕರೆದುಕೊಳ್ಳಬಹುದು. ಆದರೆ ಅವನಿಗೆ ಸಹಾಯ ಮಾಡುವವರು ಯಾರು?

ಅವನು ಸರ್ವ ಸ್ವತಂತ್ರ ಕೋಟಿ ಕೋಟಿ ಜೀವಿಗಳ ಹೊಣೆ ಹೊತ್ತವನಾದ ಅವನು ಎಂದಾರೂ "ಸಾಕಪ್ಪಾ ಸಾಕು" ಎಂದು ಜಗತ್ತನ್ನು ಮತ್ತು ಈ ಜಗತ್ತಿನ ನಾಟಕವನ್ನು ಕೊನೆಗಾಣಿಸಲಿಲ್ಲವಲ್ಲ!! ಅಷ್ಟೇ, ಅಲ್ಲ ಅವನು ತಾನೇ ಸೃಷ್ಟಿಮಾಡಿದ ಈ ಪ್ರಕೃತಿಗೂ ಒಂದರೆಕ್ಷಣವೂ ಸಮಯಕೊಡದೆ, ಕೆಲಸಮಾಡಿಸುತ್ತಲೇ ಇದ್ದಾನೆ. ಪ್ರಕೃತಿಯ ಕೆಲಸವೂ ಸಹ ಎಂದೂ ನಿಲ್ಲುವುದೇ ಇಲ್ಲ. ಹಾಗಿರುವಾಗ ಕಾಲದಿಂದ, ಕ್ಷಮತೆಯಿಂದ, ನಿರೀಕ್ಷಣೆಯಿಂದ ಮಿತವಾದ ಪಾತ್ರವನ್ನು ಹೊತ್ತ ನಮಗೆ, ಆನಂದದಿಂದ ಬಾಳು ಎಂದರೆ, ಈ ಜನ್ಮ ಏಕೆ ಬಂತೋ? ನಾನೇಕೆ ಬದುಕ ಬೇಕು? ಈ ಬದುಕು ಹಾಳು!!, ಎಂದು ನಾವೇಕೆ ಗೋಳಾಡಬೇಕು.

ನಾವೆಷ್ಟೋ ಜನರನ್ನು ನೋಡಿದ್ದೇವೆ. ಅವರಿಗೆ ಏನೋ ಬೇಸರ, ಅವರದು ಏನೋ ಗೋಳು, ಅವರಿಗೆ ಏನು ಬೇಕು ಎಂದು ಅವರಿಗೇ ಗೊತ್ತಿಲ್ಲ. ಸದಾ ಕಾಲ ಯಾವುದೋ ಅಪೇಕ್ಷೆ. ಅವರು ತಾವೂ ಸಂತೋಷವಾಗಿರುವುದಿಲ್ಲ, ಮತ್ತೊಬ್ಬರ ಸಂತೋಷ ಕಂಡರೆ ಸಂತೋಷಪಡುವುದಿರಲಿ, ಕರುಬುತ್ತಾರೆ. ಅವರಿಗೆ ಉತ್ಸಾಹವೇ ಇರುವುದಿಲ್ಲ. ಇಂಥಹವರು ಪರರ ಸಂತೋಷವನ್ನೂ ಹಾಳುಮಾಡುತ್ತಾರೆ. ಇದೊಂದು ರೀತಿಯ ಮನೋರೋಗ. ಇದಕ್ಕೆ ಮದ್ದೇ ಇಲ್ಲ.

ಇಂತಹವರನ್ನು ಕಂಡೇ ಮಾನ್ಯ ಗುಂಡಪ್ಪನವರು ನಮಗೆ ಒಂದು ಸೂಚನೆಯನ್ನು ನೀಡಿದ್ದಾರೆ, ಈ ಮುಕ್ತಕದಲ್ಲಿ. "ಚೆಮ್ಮುಲ್ಲಸವ ಧರೆಗೆ" ಎಂದು ಹೇಳುತ್ತಾ, ನಿನ್ನ ಬದುಕಿನಲ್ಲಿ ನೀನು ಯಾವುದೇ ಕೆಲಸ ಮಾಡುತ್ತಿರು, ಅದನ್ನು ಉತ್ಸಾಹದಿಂದ ಮಾಡು ಎನ್ನುತ್ತಾರೆ. ಬದುಕನ್ನು ಉತ್ಸಾಹದಿಂದ ಬಾಳು ಮತ್ತು ಆ ನಿನ್ನ ಉತ್ಸಾಹವನ್ನು ಜಗತ್ತಿಗೆ ನೀಡಿ ಜಗತ್ತಿನ ಉತ್ಸಾಹವನ್ನೂ ಹೆಚ್ಚಿಸಲು ಪ್ರಯತ್ನಪಡು ಎನ್ನುತ್ತಾರೆ. "ಉತ್ಸಾಹವೇ ಜೀವನ, ನಿರುತ್ಸಾಹವೇ ಮರಣ".





ವಾಚಕರೆ, ನಾವೆಲ್ಲಾ ಉತ್ಸಾಹವನ್ನು ಹೆಚ್ಚಿಸಿಕೊಂಡರೆ, ನಮ್ಮ ಪರಿಸರ ಮತ್ತು ಸಮಾಜವೆಲ್ಲ ಉಲ್ಲಸಿತವಾಗಿ ನಮಗೂ ಸುಖವಾಗಿ ಬಾಳಲು ಸುಗಮವಾಗುತ್ತದೆ, ಅಲ್ಲವೇ?

**ಮುಕ್ತಕ-273**

**ಕೋಟಿ ದೆಸೆಯುಸಿರು, ಕೋಟಿ ರಸದಾವಿಗಳು।**
**ಕೋಟಿ ಹೃದಯದ ಹೋಹೋ ಹಾಹಾಕಾರಗಳು॥**
**ಕೂಟ ಕೂಡಿಹುವಂತರಿಕ್ಷದಲ್ಲಿ ನೀನದರಿನ್।**
**ಓಟ ಓಡುವುದೆತ್ತ ? ಮಂಕುತಿಮ್ಮ॥**

ರಸದಾವಿಗಳು=ರಸದ+ಆವಿಗಳು, ಕೂಡಿಹುವಂತರಿಕ್ಷದಲಿ ಕೂಡಿಹವು+ಅಂತರಿಕ್ಷದಲಿ,
ನೀನದರಿನ್=ನೀನು+ಅದರಿನ್, ಓಡುವುದೆತ್ತ=ಓಡುವುದು+ಎತ್ತ.

ಕೋಟಿ ಕೋಟಿ ಜೀವಿಗಳ ಉಸಿರಾಟದ ಭಾವ, ಜಗತ್ತಿನ ಕೋಟಿ ಕೋಟಿ ವಸ್ತುಗಳ ರಸದ ಆವಿ, ಕೋಟಿ ಕೋಟಿ ಹೃದಯಗಳ ಸಂತಸದ ಮತ್ತು ಕಾರ್ಪಣ್ಯದ ನಿಟ್ಟುಸಿರು ಎಲ್ಲವೂ ಕೂಡಿದ ಭಾವವೆಲ್ಲ ಅಂತರಿಕ್ಷದಲ್ಲಿ

ತುಂಬಿಕೊಂಡಿರುವಾಗ, ನೀನು ಅದರಿಂದ ತಪ್ಪಿಸಿಕೊಂಡು ಓಡುವುದಾದರೂ ಎಲ್ಲಿಗೆ? ಎಂದು ಒಂದು ಪ್ರಶ್ನೆಯನ್ನು ಕೇಳುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಜನಗಳ ಮನಸ್ಸಿನ ಭಾವದಂತೆಯೇ ಪರಿಸರಕ್ಕೂ ಒಂದು ಭಾವ ಉಂಟು. ಆ ಪರಿಸರದ ಭಾವ, ಎಲ್ಲ ಪ್ರಾಣಿಗಳ, ಎಲ್ಲ ಜನರ, ಎಲ್ಲ ಕೀಟಗಳ, ಎಲ್ಲ ಪಕ್ಷಿಗಳ, ಗಿಡ ಮರಗಳ, ಹೂಗಳ, ಸುಖದ, ಆನಂದದ, ಸಂತಸದ, ದುಃಖದ, ದುಮ್ಮಾನದ, ಬೇಸರದ, ಸಂಕಟದ, ನೋವಿನ, ಭಾವದ, ಭಾಷೆಯ ಒಟ್ಟಾರೆ ಕಲಬೆರಕೆಯ ಭಾವವಾಗಿರುತ್ತದೆ. ಅದೇ ಭಾವ ಮತ್ತೆ ಜೀವಿಗಳ ಮೇಲೆ ಪ್ರಭಾವ ಬೀರಿ ಅವರ ಮನಸ್ಸು ಬುದ್ಧಿಗಳನ್ನು ಪ್ರಚೋದಿಸುತ್ತದೆ. ಹೀಗೆ ವ್ಯಕ್ತಿಗಳ ಮತ್ತು ಪರಿಸರದ ಭಾವ ಪರಸ್ಪರರ ಭಾವದ ಮೇಲೆ ಆಧಾರಪಟ್ಟಿರುತ್ತದೆ. ಇದು ಸೂಕ್ಷ್ಮ ವಿಚಾರ. ಇದು ಕಣ್ಣಿಗೆ ಕಾಣದಿದ್ದರೂ ತನ್ನ ಕೆಲಸವನ್ನು ಮಾಡೇ ಮಾಡುತ್ತದೆ. ಇದೂ ಸಹ ಆ ಪರಮ ಚೇತನದ ಜಗನ್ನಾಟಕದ ಸಂವಾದದ ಒಂದು ಅಂಗ. ನಾವೆಲ್ಲಾ ಪಾತ್ರಧಾರಿಗಳಾದ್ದರಿಂದ ನಾವೂ ಸಹ ಇದರ ಭಾಗಸ್ವಾಮಿಗಳು. ಇದರಿಂದ ನಾವು ತಪ್ಪಿಸಿಕೊಂಡು ಎಲ್ಲೂ ಹೋಗಲು ಸಾಧ್ಯವೇ ಇಲ್ಲ ಎಂದು ಸ್ಪಷ್ಟಪಡಿಸಿದ್ದಾರೆ ಮಾನ್ಯ ಗುಂಡಪ್ಪನವರು.

ನಮ್ಮ ಭಾವ ಸುಂದರವಾಗಿದ್ದರೆ, ನಾವು ಹೊರಸೂಸುವ ಭಾವನೆ ಸುಂದರವಾಗಿದ್ದರೆ, ನಾವೆಲ್ಲರೂ ಅಂತಹ ಭಾವ ಹೊರಸೂಸಿದರೆ, ಪರಿಸರದ ಭಾವವೂ ಸುಂದರವಾಗಿರುತ್ತದೆ ಅಲ್ಲವೇ? ಆದರೆ ದುರಂತವೆಂದರೆ ಬಹಳಷ್ಟು ಜನರು ಅಹಂಕಾರದಿಂದ, ಸ್ವಾರ್ಥದಿಂದ, ಅಸೂಯೆಯಿಂದ ಹೊರಸೂಸುವ ಭಾವವು ಸ್ವಲ್ಪ ಸ್ವಲ್ಪವಾಗಿ ಸಜ್ಜನರ ಸುಭಾವವನ್ನು ನುಂಗುತ್ತಾ ಪರಿಸರವೆಲ್ಲ ದುರ್ಭಾವವೇ ತುಂಬಿಕೊಂಡು ಬಿಡುತ್ತದೆ. ಆ ಪರಿಸರದ ದುರ್ಭಾವ ಎಲ್ಲ ಜೀವಿಗಳ ಮೇಲೂ ಪ್ರಭಾವ ಬೀರಿ ಜನಮಾನಸವನ್ನು ಮತ್ತಷ್ಟು ಕೆಡಿಸುತ್ತದೆ. ಹೀಗೆ ಇಡೀ ಜಗತ್ತೇ ದುರ್ಭಾವದಿಂದ ತುಂಬಿಹೋಗುತ್ತದೆ. ಇದೊಂದು ವಿಷವೃತ್ತ. ಇದರಿಂದ ಮುಕ್ತಿಯೇ

ಇಲ್ಲವೆನ್ನುವಂಥಾ ಪರಿಸ್ಥಿತಿ ಉಂಟಾಗಿದೆ, ಅಲ್ಲವೇ? ನಾವೂ ಸಹ ಈ 'ದುರ್ಭಾವದ ಮಡುವಿನಲ್ಲಿ" ಸಿಕ್ಕು ನಮಗೆ ಮುಕ್ತಿ ಇಲ್ಲದಂಥಹ ಸ್ಥಿತಿಗೆ ತಲುಪಿದ್ದೇವೆ.

ನಾವೆಲ್ಲಾ ನಮ್ಮ ಭಾವವನ್ನು ಶುದ್ಧವಾಗಿಸಿಕೊಂಡರೆ, ನಮ್ಮ ವೃತ್ತದಲ್ಲಿರುವವರೂ ತಮ್ಮ ತಮ್ಮ ಭಾವಶುದ್ಧತೆಗೆ ಬದ್ಧರಾದರೆ ಮತ್ತು ಅಂತಹ ವೃತ್ತಗಳು ಅಧಿಕವಾಗಿ ಇಡೀ ಸಮಾಜವೇ ಶುದ್ಧವಾದರೆ, ಪರಿಸರ ಶುದ್ಧವಾಗಿ, ಜೀವಿಗಳ ಮತ್ತು ಪರಿಸರದ ಪರಸ್ಪರ ಭಾವ ವಿನಿಮಯದಿಂದ ಜಗತ್ತೇ ಶುದ್ಧವಾಗಬಹುದು. ಆದರೆ ಮೊದಲು ನಾವು ಕೊಟ್ಟರೆ ಅದನ್ನೇ ಪರಿಸರದಿಂದ ಪಡೆದು ಜಗತ್ತನ್ನೇ ಸುಂದರವಾಗಿಸಬಹುದು. ಇದಕ್ಕೆ ಆಂತರ್ಯದ ಶುದ್ದೀಕರಣದ ಕಾರ್ಯಕ್ರಮ ಆಗಬೇಕು. ಎಲ್ಲರೂ ಅದಕ್ಕಾಗಿ ಪ್ರಯತ್ನ ಪಡಬೇಕು.

# ಜೀವ ಪೂಜೆ 274-278

**ಮುಕ್ತಕ-274**

**ನಯದಿಂದ ಸೋಕು ನೀಂ ದಯೆಯಿಂದ ನೋಡದನು।**
**ಬಯದಿನೋಲಗಿಸು ನೀಂ ಪೂಜೆಗೈಯದನು॥**
**ಸ್ವಯಮಂಕುರಿತ ಸಕಲ ವಿಶ್ವಸತ್ವವೋ ಜೀವ।**
**ಪ್ರಿಯತಮವೋ ಸೃಷ್ಟಿಯಲಿ -ಮಂಕುತಿಮ್ಮ॥**

ಬಯದಿನೋಲಗಿಸು=ಬಯದಿನೆ+ಓಲಗಿಸು, ಪೂಜೆಗೈಯದನು=ಪೂಜೆ+ಗೈ+ಅದನು,
ಸ್ವಯಮಂಕುರಿತ=ಸ್ವಯಂ+ಅಂಕುರಿತ,
ಓಲಗಿಸು=ಓಲೈಸು, ಲಾಲಿಸು, ಗೈ=ಮಾಡು, ಅಂಕುರಿತ=ಹುಟ್ಟಿದ.

ಈ ಜೀವವೆನ್ನುವುದು ಸಮಸ್ತ ಸೃಷ್ಟಿಯಲಿ ಅತೀ ಪ್ರಿಯತಮವು. ಅದು ತಾನೇ ತಾನಾಗಿ 'ಆಗಿ ಸೃಷ್ಟಿಯ ಸಮಗ್ರ ಸತ್ವದಿಂದ ಕೂಡಿದೆ. ಹಾಗಾಗಿ ಅದನ್ನು ನಯದಿಂದ ಸ್ಪರ್ಶಿಸು, ದಯೆಯಿಂದ ನೋಡು, ಭಯದಿಂದ ಓಲೈಸು ಮತ್ತು ಸದಾಕಾಲ ಅದನ್ನು ಪೂಜೆ ಮಾಡು, ಎಂದು ಆತ್ಮ ತತ್ವವಾದ ವಿಚಾರ ಮಂಡಿಸಿದ್ದಾರೆ. ಮಾನ್ಯ ಗುಂಡಪ್ಪನವರು.

ಪರಮಾತ್ಮನನ್ನು 'ಸ್ವಯಂಭೂ' ಎನ್ನುತ್ತಾರೆ. ಎಂದರೆ 'ತಾನೇ ತಾನಾಗಿ' ಆದದ್ದು ಎಂದು ಅರ್ಥ. ಅಷ್ಟೇ, ಅಲ್ಲ ಅದು "ಪರಮ" ಆತ್ಮ ಎಂದರೆ ಎಲ್ಲ ಆತ್ಮಗಳಿಗೂ ಮಿಗಿಲಾಗಿ ಉನ್ನತ ಸ್ಥಾನದಲ್ಲಿರುವುದೇ ಪರಮಾತ್ಮ. ಆ ಪರಮಾತ್ಮನ ಒಂದಂಶವೇ ಈ ಜೀವಾತ್ಮ ಹಾಗಾಗಿ ಆತ್ಮವೂ ಪೂಜಾರ್ಹ, ಪೂರ್ವ ಸಂಚಿತ ಕರ್ಮಗಳನ್ನು ದೇಹದಿಂದ ದೇಹಕ್ಕೆ ತೆಗೆದುಕೊಂಡು ಹೋಗುವ ವಾಹಕವಿದು. ಇದು ಎಷ್ಟು ಶುದ್ಧವಾಗಿದ್ದರೆ ನಮ್ಮ ಪ್ರಯಾಣ ಅಷ್ಟು ಸುಗಮವಾಗಿರುತ್ತದೆ. ಇದನ್ನು ನಯ, ವಿನಯ ಮತ್ತು ಭಯದಿಂದ ನೋಡಿಕೊಳ್ಳಬೇಕು ಎನ್ನುವುದೇ ಈ ಮುಕ್ತಕದ ಹೂರಣ.

| 90 |
|---|

| ಕಗ್ಗ ರಸಧಾರೆ-2 | ಜೀವ ಪೂಜೆ 274-278 |
|---|---|

ಭಗವದ್ಗೀತೆಯಲ್ಲಿ ಶ್ರೀ ಕೃಷ್ಣ, ನಮ್ಮ ಬದುಕನ್ನು "ರಥಂ ವಿದ್ಧಿ" ಎನ್ನುತ್ತಾನೆ. ಈ ರಥದ ಯಜಮಾನ ಅಥವಾ ರಥಿಕನೇ 'ಆತ್ಮ'. ಸಾರಥಿಯೇ 'ಬುದ್ಧಿ' ಮತ್ತು ಅವನ ಕೈಲಿರುವ ಲಗಾಮೇ 'ಮನಸ್ಸು'. ಈ ರಥವನ್ನು ಎಳೆಯುವ ಕುದುರೆಗಳೇ ಕಾಮ ಕ್ರೋಧ ಲೋಭ ಮೋಹ ಮದ ಮಾತ್ಸರ್ಯ'ಗಳಾದ ಅರಿಷಡ್ವರ್ಗಗಳು.

ಎಲ್ಲಿಯತನಕ ಈ ಕುದುರೆಗಳು ಮನಸ್ಸೆಂಬ ಲಗಾಮಿನ ಮೂಲಕ, ಬುದ್ಧಿಯೆಂಬ ಸಾರಥಿಯ ಹಿಡಿತದಲ್ಲಿ ಇರುತ್ತದೆಯೋ ಅಲ್ಲಿಯ ತನಕ ಯಜಮಾನನಾದ 'ಆತ್ಮ' ತನ್ನ ಗಮ್ಯವನ್ನು ಸುಲಭವಾಗಿ ಸೇರಿಕೊಳ್ಳುತ್ತದೆ. ಆದರೆ ಸಾರಥಿಯಾದ ಬುದ್ಧಿಯ ಹಿಡಿತವಿಲ್ಲದೆ ಕುದುರೆಗಳು ಹಿಡಿತಕ್ಕೆ ಸಿಗದೇ ಓಡಿದರೆ, ಆಗ ಕುದುರೆಗಳು ಎಲ್ಲಿಗೆ ಎಳೆದುಕೊಂಡು ಹೋಗುತ್ತವೆಯೋ ಅಲ್ಲಿಗೆ ರಥ ಓಡುತ್ತದೆ ಆಗ ಆತ್ಮ ಸೊರಗುತ್ತದೆ. ಕರ್ಮದ ಭಾರ ಹೊತ್ತು ಸೊರಗುತ್ತದೆ.

ಸದ್ವಸ್ತುಗಳನ್ನು, ಸತ್ಸಂಗ ಸದ್ವಿಚಾರಗಳನ್ನು, ಸದ್ಸಂಸ್ಕಾರಗಳನ್ನು ಬೆಳೆಸಿಕೊಂಡು ನಮ್ಮ ಬದುಕಿನ ಒಡೆಯನಾದ 'ಆತ್ಮ'ನನ್ನು ಪರಮಾತ್ಮನೇ ಎಂದು ಅರಿತು ಈ ಎಲ್ಲ ಸದ್ವಸ್ತು, ಸತ್ಸಂಗ, ಸದ್ವಿಚಾರ,

ಸದ್ಸಂಸ್ಕಾರಗಳಿಂದ ಅದನ್ನು ಅಲಂಕರಿಸಿ ಪೂಜಿಸಬೇಕು. ಶುದ್ಧವಾಗಿಟ್ಟುಕೊಳ್ಳಬೇಕು. ಆಗ ಬದುಕಿನ ರಥ ಸರಿಯಾದ ದಿಕ್ಕಿನಲ್ಲಿ ಓಡಿ ಆತ್ಮನೆಲ್ಲಿ ಸೇರಬೇಕೋ ಅಲ್ಲಿಗೆ ಹೋಗಲು ಸುಗಮವಾಗುತ್ತದೆ. ನಮ್ಮ ಪ್ರಯತ್ನ, ಗುರುಕೃಪೆ ಮತ್ತು ಪರಮಾತ್ಮನ ದಯೆಯಿಂದ ಅದು ಸಾಧ್ಯವೆಂದು ಅನಿಸುತ್ತದೆ. ನಮ್ಮ ಆತ್ಮವನ್ನು ಶುದ್ಧವಾಗಿಟ್ಟುಕೊಳ್ಳುವ, ಪ್ರಯತ್ನವನ್ನು ನಾವೇ ಮಾಡಬೇಕು.

**ಮುಕ್ತಕ-275**

**ಸರ್ವರುಂ ಸಾಧುಗಳ ಸರ್ವರುಂ ಬೋಧಕರೆ।**
**ಜೀವನ ಪರೀಕ್ಷೆ ಬಂದಿದಿರು ನಿಲುವನಕ ॥**
**ಭಾವಮರ್ಮಂಗಳೇಳುವುವಾಗ ತಳದಿಂದ।**
**ದೇವರೇ ಗತಿಯಾಗ ಮಂಕುತಿಮ್ಮ ॥**

ಭಾವಮರ್ಮಂಗಳೇಳುವುವಾಗ=ಭಾವ+ಮರ್ಮಂಗಳು+ಏಳುವುವು+ಆಗ,

ಈ ಜಗತ್ತಿನಲ್ಲಿ ಎಲ್ಲರೂ ಒಳ್ಳೆಯವರಂತೆ, ಬೋಧಕರಂತೆ ಕಾಣುತ್ತಾರೆ. ಆದರೆ ಎಲ್ಲರೂ ಹಾಗಾಡುವುದು, ಜೀವನ ಅವರನ್ನು ವಿಷಮ ಸ್ಥಿತಿಯಲ್ಲಿ ನಿಲ್ಲಿಸಿ ಪರೀಕ್ಷೆಗೆ ಒಡ್ಡುವತನಕ ಮಾತ್ರ ಹಾಗೆ ಪರೀಕ್ಷೆಗೆ ಒಳಗಾದ ಪ್ರತಿಯೊಬ್ಬನಿಗೂ ತನ್ನಂತರಂಗದಲ್ಲಿ ಸತ್ಯದರಿವಾದಾಗ ಅವನನ್ನು ದೇವರೇ ಕಾಪಾಡಬೇಕು ಎಂದು ಒಂದು ಪರಮ ಸತ್ಯವನ್ನು ವಿಡಂಬನಾತ್ಮಕವಾಗಿ ಪ್ರಸ್ತುತಪಡಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಕಗ್ಗದಲ್ಲಿ.

ವಾಚಕರೆ ಈ ಜಗತ್ತಿನಲ್ಲಿ ಅತೀ ಸುಲಭವಾಗಿ ಮತ್ತು ಖರ್ಚಿಲ್ಲದೆ ಮಾಡಬಹುದಾದ ಎರಡು ಕೆಲಸಗಳೆಂದರೆ, ಪರರು ಮಾಡಿದ ಕೆಲಸದಲ್ಲಿ ದೋಷವನ್ನು ಎತ್ತಿ ತೋರುವುದು ಮತ್ತು ಪರರಿಗೆ ಪುಗಸಟ್ಟೆ ಸಲಹೆಗಳನ್ನು ನೀಡುವುದು.

ನಮ್ಮ ಸುತ್ತಲಿರುವ ಪ್ರತಿಯೊಬ್ಬರೂ ಹಾಗೆ ಮಾಡುವುದನ್ನು ನೋಡಿಲ್ಲವೇ? ಅವರಿಗೆ ಇಂತಹ ಅಂತಹ ವಿಷಯವೇ ಆಗಬೇಕೆಂದಿಲ್ಲ, ಯಾವ ವಿಷಯವನ್ನಾದರೂ ಕೊಡಿ, ಅನುಭವವಿರಲಿ, ಇಲ್ಲದಿರಲಿ, ಲೀಲಾಜಾಲವಾಗಿ ಸಲಹೆಗಳನ್ನು ಕೊಡುತ್ತಾರೆ, ದೋಷಗಳನ್ನು ಎತ್ತಿ ತೋರುತ್ತಾರೆ.

ಆದರೆ ಅವರೇ ಒಂದು ವಿಷಮ ಸ್ಥಿತಿಯಲ್ಲಿ ಸಿಕ್ಕಿಕೊಂಡಾಗ ಅವರಿಗೆ ಅನ್ಯರ ಕುಹಕ ಮತ್ತು ಸಲಹೆಗಳನ್ನು ಕೇಳಬೇಕಾದಾಗ ಮತ್ತು ಯಾರ ಸಲಹೆಯಿಂದಲೂ ಅವರ ಸಮಸ್ಯೆ ಪರಿಷ್ಕಾರವಾಗದಿರುವಾಗ "ಹೇ ಪರಮಾತ್ಮ ಕಾಪಾಡು' ಎಂದು ಬೇಡುತ್ತಾರಲ್ಲವೇ? ಇದು ನಮ್ಮ ನಿಮ್ಮೆಲ್ಲರ ಅನುಭವವೂ ಆಗಿರಬಹುದು. ಈ ವಿಷಯವನ್ನೇ ಮಾನ್ಯ ಗುಂಡಪ್ಪನವರು 'ದೇವರೇ ಗತಿಯಾಗ' ಎಂದಿದ್ದಾರೆ. ಆದ್ದರಿಂದ ಯಾರಾದರೂ ಸಂಕಷ್ಟದಲ್ಲಿದ್ದರೆ, ಪಾತ್ರರಾದರೆ, ನಾವು ಅವರಿಗೆ ಸುಮ್ಮನೆ ಸಲಹೆಗಳನ್ನು ಕೊಡದೆ ಮೌನವಾಗಿ ಏನಾದರೂ ಸಹಾಯ ಮಾಡಲಾದರೆ, ಮಾಡಬೇಕು ಇಲ್ಲದಿದ್ದರೆ ಸುಮ್ಮನಿರಬೇಕು ಅಥವಾ ಅವರ ಸಂಕಷ್ಟ ಪರಿಹಾರಕ್ಕಾಗಿ ಒಂದು ಪ್ರಾರ್ಥನೆಯನ್ನು ಆ ಪರಮಾತ್ಮನಲ್ಲಿ ಸಲ್ಲಿಸಬೇಕು.

ಇನ್ನೊಬ್ಬರ ತಪ್ಪನ್ನು ಎತ್ತಿ ತೋರುವುದು ಮತ್ತು ಅನ್ಯರಿಗೆ ಸುಮ್ಮನೆ ಸಲಹೆ ನೀಡುವುದು ಎರಡೂ ಸಲ್ಲ. ನಾವೇ ಅಂತಹ ಪರಿಸ್ಥಿತಿಗೆ ಸಿಕ್ಕಾಗ ನಮ್ಮೊಡನೆಯೂ ಯಾರಾದರೂ ಹಾಗೆ ವರ್ತಿಸಿದ್ದಲ್ಲಿ ನಮಗೆ ನೋವಾಗುತ್ತದಲ್ಲವೇ? ನಮಗಾಗುವಂತಹ ನೋವನ್ನು, ನಾವು ಪರರಿಗೂ ಕೊಡಬಾರದಲ್ಲವೇ? ವಿವೇಚನೆಯಿಂದ ವರ್ತಿಸಿ ಸಾಧ್ಯವಾದರೆ ಪರರ ನೋವನ್ನು ಹಂಚಿಕೊಳ್ಳಬೇಕು. ಇದು ಮಾನವನ ಸಹಜ ಧರ್ಮ.

**ಮುಕ್ತಕ-276**

**ಎಲ್ಲರುಂ ಜಿತಮನಸ್ಕರೆ ದೈವ ವಿಧಿ ಮಾಯೆ।**
**ಚೆಲ್ವುರೂಪಿಂ ಬಂದು ಕಣ್ಕುಕ್ಕುವನಕ।**
**ವಲ್ಲುರೂಪ ಸುಭದ್ರೆ ಕಣ್ಮುಂದೆ ಸುಳಿವನಕ।**
**ಫಲ್ಗುಣನು ಸಂನ್ಯಾಸಿ - ಮಂಕುತಿಮ್ಮ॥**

ಚೆಲ್ವುರೂಪಿಂ=ಚೆಲ್ವ+ರೂಪಿಂ, ಕಣ್ಕುಕ್ಕುವನಕ=ಕಣ್ಣು+ಕುಕ್ಕುವ+ತನಕ,
ಜಿತಮನಸ್ಕರೆ=ಮನಸ್ಸನ್ನು ಗೆದ್ದವರೆ, ವಲ್ಲುರೂಪೆ=ಸುಂದರ ರೂಪಿಣಿ, ಫಲ್ಗುಣನು=ಅರ್ಜುನನು.

ತನ್ನ ಅಣ್ಣನ ಆದೇಶದ ಮೇಲೆ, ಒಂದು ವರ್ಷ ಕಾಲ ಸನ್ಯಾಸಿಯಾಗಿದ್ದ ಅರ್ಜುನನೂ ಸಹ ಕಣ್ಣು ಕೋರೈಸುವ ಸುಂದರಿಯಾದ ಸುಭದ್ರೆ ಕಣ್ಣ ಮುಂದೆ ಸುಳಿಯಲು, ಮನಸ್ಸಿನ ಸ್ಥಿಮಿತವನ್ನು ಕಳೆದುಕೊಂಡು, ಅವಳಲ್ಲಿ ಅನುರಕ್ತನಾಗಲಿಲ್ಲವೇ? ಹಾಗೆಯೇ ಈ ಜಗತ್ತಿನ ಎಲ್ಲರೂ, ತಾವು ಯಾವುದಕ್ಕೂ ಆಸೆಪಡದ, ಮನಸ್ಸನ್ನು ಗೆದ್ದವರಂತೆ ಇದ್ದರೂ, ದೈವ ನಿಯಮಿತ ವಿಧಿ, ಮಾಯೆಯ ರೂಪದಲ್ಲಿ ನಮ್ಮ ಕಣ್ಣ ಮುಂದೆ ಬಂದು ನಿಂತಾಗ ವಿಚಲಿತರಾಗುತ್ತೇವೆ, ಎಂದು ಒಂದು ಜಗತ್ಸತ್ಯವನ್ನು ಪ್ರಸ್ತಾಪಮಾಡಿದ್ದಾರೆ, ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.





ಜಿತಮನಸ್ಕರು ಎಂದರೆ, ತಮ್ಮ ಮನಸ್ಸನ್ನು ಗೆದ್ದವರು ಎಂದರ್ಥ. ನಮ್ಮ ಸಮಾಜದಲ್ಲಿ ಬಹಳಷ್ಟು ಜನ ಹಾಗೆ ವರ್ತಿಸುತ್ತಾರೆ. ಯಾವುದೋ ವೈರಾಗ್ಯ ಆವರಿಸಿಕೊಂಡಂತೆ ನಟಿಸುತ್ತಾರೆ. ಆದರೆ ತಾವು ಇಷ್ಟ ಪಡುವಂತಹ, ತಮ್ಮನ್ನು ಆಕರ್ಷಿಸುವಂತಹ ಯಾವುದಾದರೂ ವಸ್ತು, ವ್ಯಕ್ತಿ, ಅಥವಾ ವಿಷಯ ಕಂಡ ತಕ್ಷಣ ಮೋಹವುಂಟಾಗಿ ಆ ವಸ್ತುವನ್ನು ಪಡೆಯಲೋ, ಆ ವ್ಯಕ್ತಿಯೊಡನೆ ಸಂಬಂಧ ಬೆಳೆಸಿಕೊಳ್ಳಲೋ ಅಥವಾ ಆ ವಿಷಯದಲ್ಲಿ ಆಸಕ್ತಿಯನ್ನು ತೋರಲೋ ಹಾತೊರೆಯುತ್ತಾರೆ. ಇದು ಸರ್ವೇಸಾಮಾನ್ಯ. ಇದರಲ್ಲೇನೂ ತಪ್ಪಿಲ್ಲ. ಆ ರೀತಿಯ ಮೋಹದಿಂದ ಉಂಟಾದ ಆಸಕ್ತಿಯೇ ಮನುಷ್ಯರನ್ನು ಈ ಜೀವನದಲ್ಲಿ ತೊಡಗಿಸಿಕೊಳ್ಳುವಂತೆ ಮಾಡುತ್ತದೆ. ಆದ್ದರಿಂದಲೇ ಜಗದ್ವ್ಯಾಪಾರ ನಡೆಯುತ್ತದೆ.

ಆದರೆ ಸತ್ಯಕ್ಕೆ ದೂರವಾಗಿ, ಇಲ್ಲದ ವೈರಾಗ್ಯವನ್ನು ತೋರುವುದು ತಪ್ಪು. ಅದು ತಾತ್ಕಾಲಿಕವಾಗಿ ನಮ್ಮ ಮನಸ್ಸುಗಳಲ್ಲಿ ಬಂದು ಹೋಗುವ ಭಾವ. ಶ್ರೀ ಗುಂಡಪ್ಪನವರು ಈ ಮುಕ್ತಕದಲ್ಲಿ ಹೇಳುವ 'ದೈವ ವಿಧಿ ಮಾಯೆ' ನಮಗೆ ಈ ವಸ್ತು ವಿಷಯ ಮತ್ತು ವ್ಯಕ್ತಿಗಳೊಡನೆ, ನಮ್ಮ ಪೂರ್ವ ಕರ್ಮದನುಸಾರವಾಗಿ ಸಂಬಂಧ ಕಲ್ಪಿಸುತ್ತದೆ. ಎಲ್ಲಿಯ ತನಕ ನಮ್ಮ ಮನಸ್ಸಿನಲ್ಲಿ ಇವುಗಳಲ್ಲಿ ಕಿಂಚಿತ್ ಆಸೆ ಇದ್ದರೂ ಅವುಗಳು ನಮ್ಮನ್ನು ಬಂದು ಸೇರಿ ಸಂತಸವನ್ನೋ ಪೀಡೆಯನ್ನೋ ಕೊಡುತ್ತಲೇ ಇರುತ್ತದೆ. ಅದರಿಂದ ಇಲ್ಲಿರುವ ತನಕ ಮುಕ್ತಿಯಿಲ್ಲ. ಆದರೆ ಇಲ್ಲಿ ಇದ್ದೂ ಇವುಗಳ

ಸಂಪರ್ಕದಲ್ಲಿ ಇದ್ದರೂ ಅವುಗಳಿಗೆ ಅಂಟದೆ ಇದ್ದರೆ ಸಾಕಷ್ಟು ಮಟ್ಟಿಗೆ ನೆಮ್ಮದಿಯಿಂದ ಇರಬಹುದು. ಆದರೂ ನಿಜವಾದ ಮತ್ತು ದೃಢವಾದ ವೈರಾಗ್ಯ ಬರಬೇಕಾದರೆ ನಿರಂತರ ಸಾಧನೆ ಬೇಕು.

**ಮುಕ್ತಕ-277** **ಧಾರುಣೀಸುತೆಯವೊಲು ಧೃಡಮನಸ್ಕರದಾರು? |**
**ಮಾರೀಚಹರಿಣವಡ್ಡಾಡಲೇನಾಯ್ತು ? ||**
**ವಾರಿಧಿಯೊಳಡಗಿ ನಿದ್ರಿಪ ಬಾಡವವೋ ತೃಷ್ಣೆ |**
**ಆರದನು ಕೆರಳಿಪರೋ - ಮಂಕುತಿಮ್ಮ ||**

ಧಾರುಣೀಸುತೆಯವೊಲು=ಧಾರುಣೀಸುತೆಯ+ಒಲು,
ಧೃಡಮನಸ್ಕರದಾರು=ಧೃಢಮನಸ್ಕರು+ಅದು+ಯಾರು,
ಮಾರೀಚಹರಿಣವಡ್ಡಾಡಲೇನಾಯ್ತು=ಮಾರೀಚ+ಹರಿಣವು+ಅಡ್ಡಾಡಲು+ಏನಾಯ್ತು,
ವಾರಿಧಿಯೊಳಡಗಿ=ವಾರಿಧಿಯೋಳು+ಅಡಗಿ, ಆರದನು-ಆರು+ಅದನು.
ಧಾರುಣೀಸುತೆ=ಸೀತೆ, ಹರಿಣ=ಜಿಂಕೆ, ವಾರಿಧಿ=ಸಮುದ್ರ, ಬಾಡವ=ಅಗ್ನಿ, ಆರು=ಯಾರು.

ಕೇವಲ ರಾಮನನ್ನೇ ಅಪೇಕ್ಷಿಸಿದ ಸೀತೆಯಂತೆ ದೃಢ ಮನಸ್ಕರು ಯಾರು. ಅಂತಹವಳ ಮನಸ್ಸೂ ಆ ಮಾರೀಚನೆಂಬ ರಾಕ್ಷಸ, ಚಿನ್ನದ ಜಿಂಕೆಯ ರೂಪದಲ್ಲಿ ಕಣ್ಣ ಮುಂದೆ ಸುಳಿಯಲು, ಅದಕ್ಕೆ ಆಸೆಪಡಲಿಲ್ಲವೇ? ಹಾಗೆಯೇ ನಮ್ಮ ಮನಸ್ಸುಗಳಲ್ಲಿನ ಆಸೆಯೂ ಸಹ ಸಮುದ್ರದ ಆಂತರ್ಯದಲ್ಲಿ ಅಡಗಿರುವ ಅಗ್ನಿಪರ್ವತಗಳಂತೆ.

ಸುಪ್ತವಾಗಿರುವುದನ್ನು ಯಾರು ಯಾರು ಕೆರಳಿಸುತ್ತಾರೋ ಎಂದು ಪ್ರಸ್ತಾಪಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

"ಹರಿದಾಡುವಂತಾ ಮನವ ನಿಲಿಸುವುದು ಬಲು ಕಷ್ಟ", ಎಂದು ದಾಸರು ಅಪ್ಪಣೆ ಕೊಡಿಸಿಲ್ಲವೇ? ಎಂತೆಂಥಾ ಮಹಾಮಹಿಮಾನ್ವಿತರಿಗೇ ಈ ಮನಸ್ಸೆಂಬುದನ್ನು ಹಿಡಿದು ನಿಲ್ಲಿಸಲು ಕಷ್ಟ. ಎಲ್ಲೋ ಸುಪ್ತವಾಗಿರುವ ನಮ್ಮ ಬಯಕೆಗಳು ಯಾವುದೋ ಸಮಯದಲ್ಲಿ, ಯಾವುದೋ ಕಾರಣಕ್ಕೆ ಮತ್ತೆ ಬುಗ್ಗೆ ಬುಗ್ಗೆಯಾಗಿ ಮೇಲೇಳುತ್ತದೆ. ಕೆಲವು ಬಾರಿ ವಿವೇಕ "ಇದು ಸರಿಯಿಲ್ಲ' ಎಂದು ಎಚ್ಚರಿಸುತ್ತಿದ್ದರೂ, ಅದರ ಬುದ್ಧಿವಾದವನ್ನು ಕಡೆಗಣಿಸಿ ಮನಸ್ಸು ಆಸೆಯ ಬೆನ್ನು ಹತ್ತಿ ಸಂಕಷ್ಟಗಳಲ್ಲಿ ಸಿಕ್ಕಿಕೊಳ್ಳುವುದನ್ನು, ನಾವು ಅನುಭವಿಸಿದ್ದೇವಲ್ಲವೇ? ಇದು ಮನಸ್ಸಿನ ಸಹಜವಾದ ಗುಣ. ಆದರೆ ಮನಸ್ಸನ್ನು, ಅದು ಹೋದಂತೆಲ್ಲ ಹರಿಯಬಿಡುವುದು ಸಮಗ್ರ ವ್ಯಕ್ತಿತ್ವದ ಬೆಳವಣಿಗೆಗೆ ಒಳ್ಳೆಯದಲ್ಲ.

ಮನಸ್ಸನ್ನು ಒಂದು ನಿಯಂತ್ರಣದಲ್ಲಿ ಇಡುವುದಕ್ಕಾಗಿಯೇ, ವಿದ್ಯೆ, ಜ್ಞಾನ, ಧ್ಯಾನ, ಪೂಜೆ, ಭಜನೆಯಂತಾ ವಿಷಯಗಳಲ್ಲಿ ಮನುಷ್ಯ ತನ್ನನ್ನು ತಾನು ತೊಡಗಿಸಿಕೊಳ್ಳಲು ಪ್ರಯತ್ನ ಪಡುವುದು. ಏಕೆಂದರೆ ಮನಸ್ಸನ್ನು ನಿಯಂತ್ರಣದಲ್ಲಿ ಇಡದಿದ್ದರೆ, ಧನಿಕನಾಗಲಿ, ಬಡವನಾಗಲಿ, ವಿದ್ಯಾವಂತನಾಗಲಿ, ಅವಿದ್ಯಾವಂತನಾಗಲಿ ಪತನ ಖಂಡಿತ. ಹಾಗಾಗಿ ನಮ್ಮ ಮನಸ್ಸುಗಳು, ವಸ್ತು ವಿಷಯ ಮತ್ತು ವ್ಯಕ್ತಿಗಳಿಂದ ಅತೀ ಆಕರ್ಷಣೆಗೆ ಒಳಗಾಗದೆ, ವಿವೇಕದ ಮಾತನ್ನು ಕೇಳುವಂತೆ ಮತ್ತು ಅದರಿಂದ ಸುಮನಸ್ಕರಾಗಿ ಇರಲು ಆಗುವಂತೆ ತಿದ್ದಿಕೊಂಡರೆ ಈ ಜಗತ್ತಿನ ಕ್ಲಿಷ್ಟ ಬದುಕಿನಲ್ಲಿ ಹೇಗೋ ಒಂದು ರೀತಿಯಲ್ಲಿ ನೆಮ್ಮದಿಯಿಂದಿರಬಹುದು. ನಾವೆಲ್ಲಾ ಅಂತಹ ಪ್ರಯತ್ನವನ್ನು ಪಡಲೇ ಬೇಕಲ್ಲವೇ?

**ಮುಕ್ತಕ-278**

**ಆನೆಗಾರ್ ಇರುವೆಗಾರ್ ಕಾಗೆಗಾರ್ ಕಪ್ಪೆಗಾರ್**
**ಕಾಣಿಸುವರನ್ನವನು? ಹಸಿವವರ ಗುರುವು ||**
**ಮಾನವನುಮಂತುದರಶಿಷ್ಯನವನಾ ರಸನೆ |**
**ನಾನಾವಯವಗಳಲಿ - ಮಂಕುತಿಮ್ಮ ||**

ಕಾಣಿಸುವರನ್ನವನು=ಕಾಣಿಸುವರು+ಅನ್ನವನು, ಹಸಿವವರ=ಹಸಿವು+ಅವರ,

ಮಾನವನುಮಂತುದರಶಿಷ್ಯನವನಾ=ಮಾನವನುಂ+ಅಂತು+ಉದರ+ಶಿಷ್ಯನ್+ಅವನ+ಆ,

ನಾನಾವಯವಗಳಲಿ=ನಾನಾ+ಅವಯವಗಳಲಿ,

ರಸನೆ=ನಾಲಿಗೆ, ಅವಯವಗಳು=ಅಂಗಾಂಗಗಳು,

ಆನೆಗೆ, ಇರುವೆಗೆ, ಕಾಗೆಗೆ, ಕಪ್ಪೆಗೆ ಆಹಾರವನ್ನು ಯಾರು ತೋರುತ್ತಾರೆ? ಅವುಗಳಿಗೆ ಹಸಿವಾದಾಗ ತಮ್ಮ ಆಹಾರವನ್ನು ತಾವೇ ಹುಡುಕಿಕೊಂಡು ಹೋಗುತ್ತವಲ್ಲವೇ? ಹಾಗಾಗಿ ಹಸಿವೇ ಅವುಗಳಿಗೆ, ಆಹಾರ ಹುಡುಕಲು ಗುರು. ಅದೇ ರೀತಿಯೇ ಮನುಷ್ಯನೂ ಸಹ, ಅವನ ಹೊಟ್ಟೆ ಹಸಿವಿಗೆ ಅವನು ಶರಣಾದರೂ ಅವನ ಹಸಿವನ್ನು ಇಂಗಿಸುವಲ್ಲಿ ಅವನ ನಾಲಿಗೆ ತನ್ನ ಪ್ರಭಾವ ತೋರಿ ಅವನನ್ನು ನಾನಾ ದಿಕ್ಕುಗಳಲ್ಲಿ ಓಡುವಂತೆ





ಮಾಡುತ್ತದೆ ಎಂದು ಒಂದು ವಾಸ್ತವಿಕ ವಿಷಯವನ್ನು ಪ್ರಸ್ತಾಪಮಾಡುತ್ತಾರೆ ಮಾನ್ಯ ಗುಂಡಪ್ಪನವರು, ಈ ಮುಕ್ತಕದಲ್ಲಿ.

ಜಗತ್ತಿನ ಎಲ್ಲ ಪ್ರಾಣಿಗಳಿಗೂ ಹಸಿವಾಗುತ್ತದೆ. ಅದನ್ನು ಇಂಗಿಸಲು ಪ್ರತೀ ಪ್ರಾಣಿಯೂ ತನ್ನದೇ ರೀತಿಯಲ್ಲಿ ಆಹಾರವನ್ನು ಹುಡುಕಿಕೊಳ್ಳುತ್ತದೆ. ಹಾಗಾಗಿ ಆಹಾರ ಹುಡುಕುವುದಕ್ಕೆ ಹಸಿವೆ ಗುರುವು. ಮನುಷ್ಯನೂ ಸಹ ಈ ಗುಂಪಿಗೆ ಸೇರುತ್ತಾನೆ. "ಎಲ್ಲರು ಮಾಡುವುದು ಹೊಟ್ಟೆಗಾಗಿ, ತುತ್ತು ಹಿಟ್ಟಿಗಾಗಿ, ಗೇಣು ಬಟ್ಟೆಗಾಗಿ" ಎಂದು ದಾಸರು ಹೇಳಿಲ್ಲವೇ? ಆದರೆ ಇವನು ತನ್ನ ವಿಕಸಿತ ಬುದ್ಧಿವಂತಿಕೆಯಿಂದ ಸಾವಿರಾರು ವಿಧಗಳನ್ನು ಆಹಾರಕ್ಕಾಗಿ ಕಂಡುಕೊಂಡಿದ್ದಾನೆ. ಇಂದು, ಜಗತ್ತಿನಾದ್ಯಂತ ಆಹಾರವನ್ನು ತಯಾರುಮಾಡುವ 'ಪಾಕಶಾಸ್ತ್ರವೇ? ಪಾರಮಾರ್ಥಕ್ಕೆ ಬೇಕಾದ ಎಲ್ಲ ಶಾಸ್ತ್ರಗಳಿಗೂ ಮೀರಿ ಬೆಳೆದಿದೆ. ಇದಕ್ಕೆ ಇವನ ನಾಲಿಗೆಯೇ ಕಾರಣ. ಎಷ್ಟು ರುಚಿಕಂಡರೂ ಅದಕ್ಕೆ ತೃಪ್ತಿಯೇ ಆಗದು. ಮನುಷ್ಯ ಅದರ ದಾಸನಾಗಿದ್ದಾನೆ.

ಪ್ರಾಣಿಗಳಿಗೆ ಕೇವಲ ಆಹಾರದ ಹಸಿವಾಗುತ್ತದೆ. ಆದರೆ ಮನುಷ್ಯನಿಗೋ ಎಷ್ಟು ವಿಧವಾದ ಹಸಿವಿದೆ ನೋಡಿ, ಹೊಟ್ಟೆ ಹಸಿವು, ದುಡ್ಡಿನ ಹಸಿವು, ಕೀರ್ತಿಯ ಹಸಿವು, ಕುರ್ಚಿಯ ಹಸಿವು, ದೈಹಿಕ ಹಸಿವು, (ಈಗ ಕ್ಷೀಣಿಸಿರುವ) ಜ್ಞಾನದ ಹಸಿವು, ದೇಶ ಸುತ್ತುವ ಹಸಿವು, ಇನ್ನೊಬ್ಬರನ್ನು ಹಾಳುಮಾಡಿ ಆನಂದಪಡುವ ಹಸಿವು. ಹೀಗೆ ಬರೆಯುತ್ತಾ ಹೋದರೆ ಪಟ್ಟಿ ಉದ್ದವಾಗುತ್ತದೆ.

ಪ್ರಾಣಿಗಳಿಗೆ ಕೇವಲ ದೈಹಿಕ ಅಸ್ತಿತ್ವದ ಒತ್ತಡ. ಅವುಗಳು ಹೊಟ್ಟೆಯ ಹಸಿವು ತೀರಿದೊಡನೆ ತೃಪ್ತಿ ಹೊಂದುತ್ತವೆ. ಆದರೆ ಮನುಷ್ಯನಿಗೆ ಅವನ ಅಸ್ತಿತ್ವದ ಪ್ರತೀ ಒಂದು ಆಯಾಮಕ್ಕೂ ಹಲವಾರು ಮುಖಗಳಿದ್ದು ಪ್ರತೀ ಮುಖಕ್ಕೂ ಅವನಿಗೆ ತೀರದ ಹಸಿವಿದೆ. ಇದು ಸಹಜವಾಗೇ ಇದೆ. ಹಾಗೆ ಹಸಿವಿದ್ದರೆ ಮಾತ್ರ ಅವನು ಕ್ರಿಯಾಶೀಲನಾಗಿರಲು ಸಾಧ್ಯ. ಆದರೆ ಅತಿ ಸರ್ವತ್ರ ವರ್ಜ್ಯೇತ್ ಎನ್ನುವಹಾಗೆ ಅವನ ಹಸಿವೂ ಸಹ ಮಿತವಾಗಿದ್ದರೆ ಹಿತವಾಗಿರುತ್ತದೆ. ಮಿತಿಮೀರಿದರೆ ಇವನಿಗೆ ಅಧೋಗತಿ, ವಾಚಕರೆ, ಪ್ರತಿಯೊಬ್ಬರೂ ತಮ್ಮ ಯೋಗ್ಯತೆಯನ್ನರಿತು, ಮಿತಿಯನ್ನರಿತು ಆಸೆ ಪಡಬೇಕು, ತೃಪ್ತಿಯಿಂದಿರಬೇಕು, ಅದೇ ಹಿತ

## ತಿಳಿದು ಹಳಿಯುವೊಡೆ ಹಳಿ 279-283

**ಮುಕ್ತಕ-279**

**ಯಮನಿಗೇಕಪಕೀರ್ತಿ? ನರರು ಬಲು ಕರುಣಿಗಳೇ? |**
**ಮಮತೆಯಿನೊ ರೋಷದಿನೊ ಹಾಸ್ಯದಿನೊ ||**
**ನಿಮಿಷನಿಮಿಷಮುಮೊರ್ವನಿನ್ನೊರ್ವನನು ತಿಕ್ಕಿ |**
**ಸಮೆಯಿಸುವನಾಯುವನು - ಮಂಕುತಿಮ್ಮ**

ಯಮನಿಗೇಕಪಕೀರ್ತಿ=ಯಮನಿಗೆ+ಏಕೆ+ಅಪಕೀರ್ತಿ,

ನಿಮಿಶನಿಮಿಶಮುಮೊರ್ವನಿನ್ನೊರ್ವನನು=ನಿಮಿಷ+ನಿಮಿಷಮುಂ+ಒರ್ವನ್+ಇನ್ನೋರ್ವನನು,

ಸಮೆಯಿಸುವನಾಯುವನು=ಸವೆಯಿಸುವನು+ಆಯುವನು.

ನರರು=ಮನುಷ್ಯರು, ಸಮೆಯಿಸುವನು=ಕಳೆಯುವನು, ಆಯುವನು=ಆಯಸ್ಸನ್ನು,

ಯಮ ಎಂದರೆ ಸಾವನ್ನು ತರುವವನು. ಅವನ ಲೋಕ ತೀವ್ರವಾದ ಕಷ್ಟಗಳನ್ನು ಅನುಭವಿಸಬೇಕಾದ ನರಕ, ಎಂಬ ಅಪಕೀರ್ತಿ ಮನುಜ ಲೋಕದಲ್ಲಿ ಇದೆಯಲ್ಲವೇ? ಅದು ಏಕೆ? ಇಲ್ಲಿರುವ ಕಾಲದಲ್ಲೇ ಪ್ರೀತಿಯಿಂದಲೋ ದ್ವೇಷದಿಂದಲೋ ಅಥವಾ ಹಾಸ್ಯದಿಂದಲೋ ಪ್ರತೀ ನಿಮಿಷವೂ ಒಬ್ಬೊಬ್ಬರೂ ಮತ್ತೊಬ್ಬರೊಡನೆ ಹೊಡೆದಾಡಿ, ಹೋರಾಡಿ ತಮ್ಮ ಆಯಸ್ಸನ್ನು ಕಳೆಯುತ್ತಿಲ್ಲವೇ. ಹಾಗಾಗಿ ಇಲ್ಲಿರುವ ನರರೂ ಸಹ ಕರುಣಾಮಯಿಗಳೇನಲ್ಲ, ಎಂದು ಜಗತ್ತಿನಲ್ಲಿ ಮನುಷ್ಯರ ಬಾಳಿನ ಒಂದು ಪರಿಯನ್ನು ವಿಶ್ಲೇಷಣೆ ಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಈ ಜಗತ್ತಿನಲ್ಲಿರುವ ಪ್ರಾಣಿಗಳಲ್ಲಿ ಮನುಷ್ಯನನ್ನೊಬ್ಬನನ್ನು ಬಿಟ್ಟು ಮಿಕ್ಕೆಲ್ಲ ಪ್ರಾಣಿಗಳೂ ಸಹ ತಮ್ಮ ಆಹಾರ ಸಂಪಾದನೆಗೆ, ತಮ್ಮ ಮಕ್ಕಳನ್ನು ಕಾಪಾಡಲು ಮತ್ತು ಆತ್ಮರಕ್ಷಣೆಗೆ ಮಾತ್ರ ಮತ್ತೊಂದು ಪ್ರಾಣಿಯೊಡನೆ ಸಂಘರ್ಷಕ್ಕೆ ಇಳಿಯುತ್ತದೆ. ಆದರೆ ಮಾನವನ ಜೀವನದಲ್ಲಿ ಈ ಕಾರಣಗಳು ಬಹಳ ಕ್ಷುಲ್ಲಕ ಮತ್ತು ಆ ಕಾರಣಗಳಿಗಾಗುವ ಹೋರಾಟಗಳು ಹೆಚ್ಚು ನೋವನ್ನುಂಟುಮಾಡುವುದಿಲ್ಲ. ಮಾನವ ಜನಾಂಗದ ಚರಿತ್ರೆಯನ್ನು ನೋಡಿದರೆ, ಮೊದಲ ಕೆಲವು ಸಾವಿರ ವರ್ಷಗಳು ಅವನು ಈ ಕಾರಣಗಳಿಗಾಗಿಯೇ ಹೋರಾಡಿದ್ದರೂ, ಇವನು ಸಂಘ ಜೀವಿಯಾಗತೊಡಗಿದ ಮೇಲೆ ಇವನ ಹೋರಾಟದ ಕಾರಣಗಳೇ ಬದಲಾಗುತ್ತಾ ಹೋದವು. ಭೂ ವಿಸ್ತರಣೆಗಾಗಿ ಆಕ್ರಮಣ, ಯುದ್ಧ, ಹೋರಾಟ, ಆ ಸಮಯದಲ್ಲಿ ಆಗಾಧ ಸಾವು, ನೋವು, ಸುಲಿಗೆ, ಲೂಟಿ ನಡೆಯತೊಡಗಿದವು. ಡಾರ್ವಿನ್‌ನ ಸಿದ್ಧಾಂತದಂತೆ ಶಕ್ತಿವಂತನದೇ ಮೇಲುಗೈ ಆಗಿತ್ತು. ಅದು ಒಂದು ಗುಂಪು ಮತ್ತೊಂದು ಗುಂಪಿನಮೇಲೆ ನಡೆಸಿದ ಮತ್ತು ನಡೆಸುತ್ತಿರುವ ಹೋರಾಟದ ಅಥವಾ ಯುದ್ಧದ ಸ್ವರೂಪ. ಅಲ್ಲಿ ಆಕ್ರಮಣಕಾರರು ತೋರಿದ ಕ್ರೌರ್ಯ ಯಾವ ಯಮನಿಗೂ ಕಡಿಮೆಯಿರಲಿಲ್ಲ.. ಪಾಪ! ಯಮನೆಂದೂ ಕ್ರೌರ್ಯವನ್ನು ತೋರಲೇ ಇಲ್ಲ. ಆದರೂ ಅವನಿಗೆ ಕೆಟ್ಟ ಹೆಸರು.

ಈ ಹೋರಾಟಗಳ ಕಾರಣಗಳು ರೂಪಾಂತರಗೊಳ್ಳುತ್ತಾ, ಜಾತಿ, ಭಾಷೆ, ಧರ್ಮ, ನೆಲ, ಜಲ, ಸಂಪತ್ತು ಮುಂತಾದ ಕಾರಣಗಳಿಗಾಗಿ ದೇಶ ದೇಶಗಳ ನಡುವೆ ಹೋರಾಟವಾಗುತ್ತಿವೆ ಮತ್ತು ಆಗುತ್ತಿರುತ್ತವೆ. ಆದರೆ ನಾವಿಲ್ಲ ನೋಡಬೇಕಾಗಿರುವುದು, ವ್ಯಕ್ತಿಗತವಾಗಿ ಮನುಷ್ಯ ಮನುಷ್ಯರ ನಡುವೆ ನಡೆಯುವ ತಿಕ್ಕಾಟಗಳು. ವ್ಯಕ್ತಿ ವ್ಯಕ್ತಿಗಳ ಮಧ್ಯೆ ಹಲವಾರು ಕಾರಣಗಳಿಗೆ ಪ್ರತೀ ನಿಮಿಷವೂ ತಿಕ್ಕಾಟ ನಡೆದೇ ಇರುತ್ತದೆ. ಅದಕ್ಕೆ ಕಾರಣ ಸ್ವಾರ್ಥ ಪ್ರೇರಿತವಾದ

ಅರಿಷಡ್ವರ್ಗಗಳು. ಇಂದಿನ ಪರಿಸ್ಥಿತಿಯನ್ನು ನೋಡಿದರೆ ದಿನೇ ದಿನೇ ಸ್ವಾರ್ಥ ಅಧಿಕವಾಗಿ ತಿಕ್ಕಾಟಗಳೂ ಅಧಿಕವಾಗಿ ಕ್ಷುಲ್ಲಕ ಕಾರಣಗಳಿಗೆ ಹೊಡೆದಾಡುವುದು, ಕಿತ್ತಾಡುವುದು, ಕೊಲೆ, ಸುಲಿಗೆ, ಮಾನಭಂಗ, ಅತ್ಯಾಚಾರ, ಪೋಲೀಸ್ ಸ್ಟೇಶನ್, ಕೋರ್ಟು, ಕಚೇರಿಗಳ ಸುತ್ತಾಟ, ಎಲ್ಲ ಸೇರಿ ಪ್ರತಿನಿತ್ಯ ಜೀವನ ಕರ್ಷ್ಟಕರವಾಗಿ "ಥ ಜೀವನ ನರಕವಾಗಿಬಿಟ್ಟಿದೆ" ಎಂಬುದನ್ನು ಹಲವರ ಬಾಯಲ್ಲಿ ಕೇಳುತ್ತೇವೆ, ನಮ್ಮನ್ನು ಕೊಂಡು ಹೋಗಲು ಯಮನೇ ಬರಬೇಕಿಲ್ಲ, ನಮ್ಮ ಪಾಪ ತೊಳೆಯಲು ನಾವು ಸತ್ತು ನರಕಕ್ಕೆ ಹೋಗಬೇಕಿಲ್ಲ. ಏಕೆಂದರೆ ನಾವೇ ಆಗಾಗ ಯಮನ ರೂಪ ತಾಳಿ, ನಮ್ಮ ನರಕವನ್ನು ನಾವೇ ಸೃಷ್ಟಿಸಿಕೊಂಡು ಘೋರವನ್ನು ಅನುಭವಿಸುತ್ತಿದ್ದೇವೆ. ನಮ್ಮ ಆಯಸ್ಸನ್ನು ವೃಥಾ ಇಂತಹ ಹೋರಾಟಗಳಲ್ಲಿ





ಸವೆಸುತ್ತಿದ್ದೇವೆ. ಇನ್ನು ನಮಗೆ ಬೇರೆ ಯಮನೇಕೆ, ನಾವೇ ಸೃಷ್ಟಿಸಿದ ಯಾತನಾಭರಿತ ಈ ಜಗತ್ತಿಗಿಂತ, ಬೇರೆ ನರಕವೇಕೆ?

ವಾಚಕರೇ, ನಮ್ಮೆಲ್ಲ ಸಮಸ್ಯೆಗಳ ಮೂಲ ನಮ್ಮ ಮನಸ್ಸು. ಎಲ್ಲ ಹೋರಾಟವೂ ನಮ್ಮ ಮನಸ್ಸುಗಳಲ್ಲಿ ಮೊದಲಾಗಿ, ಮನದ ಭಾವ, ಕಾರ್ಯ ರೂಪದಲ್ಲಿ ಹೊರಬಂದು ನರಕವನ್ನೋ ಸ್ವರ್ಗವನ್ನೂ ಸೃಷ್ಟಿಸುತ್ತದೆ. ಮನಸ್ಸು ನಿರ್ಮಲವಾಗಿದ್ದರೆ ನಮಗೆ ಸ್ವರ್ಗ ಇಲ್ಲದಿದ್ದರೆ ನರಕ. ಇದನ್ನೇ ಬಸವಣ್ಣನವರು “ಆಚಾರವೇ ಸ್ವರ್ಗ, ಅನಾಚಾರವೇ ನರಕ”ಎಂದಿದ್ದಾರೆ. ನಮ್ಮ ಪ್ರವೃತ್ತಿ ಮತ್ತು ಪ್ರಯತ್ನ ಹೇಗಿದ್ದರೆ ಹಾಗೆ ಹಾಗೆ.

**ಮುಕ್ತಕ-280** **ದೋಷಿಯವನಿವನು ಪಾಪಿಯನುತ್ತ ಗಳಹದಿರು।**

**ಆಶೆಯೆನಿತವನು ಸಹಿಸಿದನೋ, ದಹಿಸಿದನೋ।**

**ವಾಸನೆಗಳವನನೇನೆಳೆದವೋ ಬಲವೇನೋ।**

**ಪಾಶಬದ್ಧನು ನರನು - ಮಂಕುತಿಮ್ಮ॥**

ದೋಷಿಯವನಿವನು=ದೋಷಿ+ಅವನು+ಇವನು, ಪಾಪಿಯನುತ್ತ=ಪಾಪಿ+ಎನುತ್ತ,

ಆಶೆಯೆನಿತವನು=ಆಶೆ+ಎನಿತು+ಅವನು,

ವಾಸನೆಗಳವನನೇನೆಳೆದವೋ=ವಾಸನೆಗಳು+ಅವನನ್+ಏನ್+ಎಳೆದವೋ,

ಪಾಶಬದ್ಧನು=ಭವದ ಬಂಧನದಿಂದ ಬಂಧಿಸಲ್ಪಟ್ಟವನು.

ಜಗತ್ತಿನಲ್ಲಿ ಯಾರನ್ನೂ ಅವನು ದೋಷಿ, ಇವನು ಪಾಪಿಯೆಂದು ಹೇಳುತ್ತಾ ಇರಬೇಡ. ಪಾಪ ಅವನು ಎಷ್ಟೊಂದು ಆಸೆಗಳನ್ನು ಹೊತ್ತು, ತೀರಿಸಿಕೊಳ್ಳಲಾಗದೆ ಸಹಿಸಿದ್ದಾನೋ, ಹಾಗೆ ತೀರಿಸಿಕೊಳ್ಳಲಾಗದ ಎಷ್ಟೊಂದು ಆಸೆಗಳನ್ನು ಸುಟ್ಟಿದ್ದಾನೋ ನಿನಗೆ ಗೊತ್ತಿಲ್ಲವಲ್ಲ. ಅವನ ಪಾಪ-ದೋಷಗಳೆಲ್ಲವೂ ಅವನು ಹೊತ್ತು ತಂದ ವಾಸನೆಗಳು, ಅವನನ್ನು ತನ್ನ ಪಾಶದಲ್ಲಿ ಬಂಧಿಸಿ, ಬಲವಾಗಿ ತನ್ನ ಸೆಳೆತದಲ್ಲಿ ಸಿಕ್ಕಿಸಿಕೊಂಡಿದ್ದರಿಂದ ಆದದ್ದು ಎಂದು, ವಿಧಿವಿಲಾಸದ ವಿಷಯವನ್ನು ಪ್ರಸ್ತಾಪಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಪ್ರತಿಯೊಬ್ಬನಿಗೂ ಅವನು ಮಾಡುವ ಕೆಲಸಕ್ಕೆ ಅವನದೇ ವಿಶಿಷ್ಟ ಕಾರಣಗಳಿರುತ್ತದೆ. ಆ ಕಾರಣಗಳು ಕೆಲವು ವಾಸನಾ ರೂಪದಲ್ಲಿ ಅವನಿಗೆ ಹುಟ್ಟಿನಿಂದ ಬಂದಿರುತ್ತವೆ. ಅವುಗಳನ್ನು ಪ್ರತೀ ಜೀವಿಯೂ ಒಂದು ದೇಹದಿಂದ ಮತ್ತೊಂದು ದೇಹಕ್ಕೆ ಹೋಗುವಾಗ ಒಂದು ಸೂಕ್ಷ್ಮ ಶರೀರದೊಡನೆ ಹೊತ್ತು ತಂದಿರುತ್ತದೆ, ಎಂದು ಹೇಳುತ್ತದೆ ಸನಾತನ ಸಿದ್ಧಾಂತ.

ಅವನ ವ್ಯಕ್ತಿತ್ವ, ಇಲ್ಲಿ ಅವನು ಹುಟ್ಟಿದ ಪರಿಸರ, ಕಲಿತ ವಿದ್ಯೆ, ಬೆಳೆಸಿಕೊಂಡಂತ ಸಂಗ ಹೀಗೆ ಹತ್ತು ಹಲವಾರು ಕಾರಣಗಳಿಂದ ರೂಪುಗೊಳ್ಳುತ್ತವೆ. ಹಾಗಾಗಿ ಯಾರೊಬ್ಬರನ್ನೂ, 'ಅವನು ಹೀಗೇ' ಎಂದು ತೀರ್ಮಾನಿಸಿ ಹೇಳುವುದು ತಪ್ಪಾಗುತ್ತದೆ. ಏಕೆಂದರೆ ಬಹುಶಃ ಅವನಿಗೆ ಬೇರೆ ಪರಿಸರ, ಒಳ್ಳೆಯ ವಿದ್ಯೆ, ಒಳ್ಳೆಯ ಸಂಗ ಎಲ್ಲವೂ ಸಿಕ್ಕಿದ್ದಿದ್ದರೆ ಅವನು ಬೇರೆ ರೀತಿಯ ವ್ಯಕ್ತಿಯಾಗಿ ನಿಮ್ಮ ಹೊಗಳಿಕೆಗೆ ಪಾತ್ರನಾಗುತ್ತಿದ್ದನೋ

ಏನೋ, ಯಾರಿಗೆ ಗೊತ್ತು!!!. ನಾವೂ ಸಹ ನಮ್ಮ ಜೀವನದಲ್ಲಿ ಪಡೆದುಕೊಂಡು ಬಂದದ್ದನ್ನು ಅನುಭವಿಸಿಯೇ ತೀರಬೇಕು. ಹಾಗಾಗಿ ಅನ್ಯರನ್ನು ದೂಷಿಸುವುದು ತಪ್ಪಲ್ಲವೇ?

ಯಾರೇ ಆಗಲಿ ತಮ್ಮ ಪೂರ್ವ ವಾಸನೆಗಳಿಂದ ಮತ್ತು ಅವುಗಳ ಪ್ರಭಾವದಿಂದ ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ. ಇದನ್ನೇ ಮಾನ್ಯ ಡಿ.ವಿ.ಜಿ.ಯವರು "ಪಾಶಬದ್ಧನು ನರನು" ಎಂದಿದ್ದಾರೆ. ನಮ್ಮ ವ್ಯಕ್ತಿತ್ವ ರೂಪುಗೊಳ್ಳುವುದರಲ್ಲಿ, ನಮ್ಮ ಪೂರ್ವಕರ್ಮ, ಪೂರ್ವ ವಾಸನೆ, ಇಲ್ಲಿರುವ ಪರಿಸರ, ವಿದ್ಯೆ, ಸಂಗ ಮುಂತಾದವುಗಳ ಪಾತ್ರ ಮತ್ತು ಆ ಪರಮಾತ್ಮನ ಕೃಪೆ ಎಲ್ಲವೂ ತಮ್ಮ ಪ್ರಭಾವ ಬೀರಿಯೇ ಬೀರುತ್ತದೆ.

ಆದರೆ ನಮಗೆ ವಿವೇಕ ಎಂಬುದೊಂದು ಇದೆ. ಅದನ್ನುಪಯೋಗಿಸಿ, ಸಾಧ್ಯವಾದಷ್ಟು ಮಟ್ಟಿಗೆ, ನಮ್ಮ ಹಿರಿಯರು ತೋರಿದ ಮಾರ್ಗಗಳನ್ನು ಅನುಸರಿಸಿ, ನಮ್ಮನ್ನು ನಾವು, ಉತ್ತಮಗೊಳಿಸಿಕೊಳ್ಳಲು ಪ್ರಯತ್ನಪಟ್ಟರೆ ಎಲ್ಲರೂ ಉತ್ತಮಗೊಂಡು ಇಡೀ ಸಮಾಜವೇ ಉತ್ತಮಗೊಳ್ಳುವುದರಲ್ಲಿ ಸಂದೇಹವೇ ಇಲ್ಲ. ಆಗ ನಾವು ಪರರನ್ನು ಮತ್ತು ಅವರ ಪರಿಸ್ಥಿತಿಯನ್ನು ಸರಿಯಾಗಿ ಅರ್ಥಮಾಡಿಕೊಳ್ಳುವ ಗುಣ ಮತ್ತು ಪ್ರವೃತ್ತಿಯನ್ನು ಬೆಳೆಸಿಕೊಳ್ಳಬಹುದು. ಅಂತಹ ಸ್ಥಿತಿಯಲ್ಲಿ ನಾವು ಯಾರನ್ನೂ ದೋಷಿಗಳೆಂದೋ, ಪಾಪಿಗಳೆಂದೋ ಪರಿಗಣಿಸುವ ಅಥವಾ ದೂರುವ ಪ್ರಮೇಯವೇ ಬರುವುದಿಲ್ಲ ಅಲ್ಲವೇ?

**ಮುಕ್ತಕ-281**

**ಪಾತಕಿಯೊಳಾಗ್ರಹವ ತೋರೆ ನಿರ್ಮಲನಾರು? |**
**ಆತುಮದ ಪರಿಕಥೆಯನರಿತವರೆ ನಾವು? |**
**ಸೋತ ದುರ್ಬಲಿಗೆ ಸಲ್ಲುವುದು ನಮ್ಮನುಕಂಪೆ |**
**ನೀತಿ ನಿಂದೆಯೊಳಿರದು-ಮಂಕುತಿಮ್ಮ ||**

ಪಾತಕಿಯೊಳಾಗ್ರಹವ=ಪಾತಕಿಯೊಳು+ಆಗ್ರಹವ, ನಿರ್ಮಲನಾರು=ನಿರ್ಮಲನು+ಯಾರು,
ಪರಿಕಥೆಯನರಿತವರೆ=ಪರಿಕಥೆಯನು+ಅರಿತವರೆ, ನಿಂದೆಯೊಳಿರದು=ನಿಂದೆಯೊಳು+ಇರದು,
ಪಾತಕಿ=ಪಾಪ ಮಾಡಿದವನು, ಆತುಮದ=ಆತ್ಮದ.

ಯಾರೋ ಒಬ್ಬನನ್ನು 'ಇವನು ಪಾಪಿ, ಪಾತಕಿ' ಎಂದು ಬೆರಳು ತೋರಲು ಇಲ್ಲಿ ಯಾರೂ ಸಂಪೂರ್ಣ ನಿರ್ಮಲರು ಇಲ್ಲವಲ್ಲ! ಮತ್ತೊಬ್ಬರ ಆಂತರ್ಯವನ್ನು ಸಂಪೂರ್ಣವಾಗಿ ಅರಿತವರು ಯಾರಿದ್ದಾರೆ ಹೇಳಿ? ಸೋತವರಿಗೆ ಅಥವಾ ಕೆಳಗೆ ಬಿದ್ದವರಿಗೆ ನಮ್ಮ ಅನುಕಂಪವಿರಬೇಕು, ನಿಂದೆಯಲ್ಲ ಎಂದು ಹೇಳುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಭಾರತದ ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿದ್ದ ಡಾ. ಮೊಹಮದ್ ಕರೀಂ ಚಾಗ್ಲರವರು ಒಂದು ಬಾರಿ ಗಲ್ಲು ಶಿಕ್ಷೆಗೆ ಗುರಿಯಾದ ಒಬ್ಬ ಅಪಾದಿತನಿಗೆ ಶಿಕ್ಷೆಯನ್ನು ಖಾಯಂ ಮಾಡುತ್ತಾ “ಮತ್ತೊಬ್ಬರನ್ನು





ನಿರ್ಧರಿಸುವುದು ಬಹಳ ಕಠಿಣ ಮತ್ತು ಕ್ರೂರವಾದ ಕೆಲಸ. ಏಕೆಂದರೆ ಆ ಸಂದರ್ಭದಲ್ಲಿ ಅದೇ ಪರಿಸ್ಥಿತಿಯಲ್ಲಿ ನಾನೇ ಇದ್ದಿದ್ದರೆ ಏನು ಮಾಡುತ್ತಿದ್ದೆನೋ ನನಗೆ ಗೊತ್ತಿಲ್ಲ” ಎಂದು ಹೇಳುತ್ತಾರೆ. ಎಂತಹ ಉದಾತ್ತತೆ!! ಮತ್ತೊಬ್ಬರನ್ನು ಟೀಕಿಸುವುದು, ತಪ್ಪನ್ನೆತ್ತಿ ತೋರುವುದು, ಅಪಾದನೆ ಮಾಡುವುದು ಮುಂತಾದ ಕುಚೇಷ್ಟೆಗಳು ಸುಸಂಸ್ಕೃತ ಮನುಷ್ಯನ ಲಕ್ಷಣಗಳಲ್ಲ.

ಸಂಪೂರ್ಣ ಹಿನ್ನೆಲೆ ಅರಿಯದೆ ನಾವು ಮತ್ತೊಬ್ಬರನ್ನು ಟೀಕೆಮಾಡಬಾರದು. ಅರಿಯಲು ಪ್ರಯತ್ನ ಪಡಬೇಕು ಅಥವಾ ಸುಮ್ಮನಿರಬೇಕು. ಆದರೆ ನಮ್ಮಲ್ಲಿ ಬಹಳಷ್ಟು ಜನ ಕಂಡ ಕಂಡ ವಿಷಯಕ್ಕೆಲ್ಲ ತಮ್ಮ ಅಜ್ಞಾನದ ವ್ಯಾಖ್ಯಾನ

ಸುನಾಯಾಸವಾಗಿ ಹರಿಬಿಡುತ್ತಾರೆ. ಅಂತಹವರನ್ನು ಕಂಡೇ ನಮ್ಮ ಪುರಂದರದಾಸರು ಆಚಾರವಿಲ್ಲದ ನಾಲಿಗೆ, ನಿನ್ನ ನೀಚ ಬುದ್ಧಿಯ ಬಿಡು ನಾಲಿಗೆ, ವಿಚಾರವಿಲ್ಲದೆ ಪರರ ದೂಷಿಸುವುದಕೆ ಚಾಚಿಕೊಂಡಿರುವಂಥಾ, ನಾಲಿಗೆ, ಎಂದು ಎಂದೋ ಹಾಡಿದ್ದಾರೆ. ನಾವೂ ಕೇಳುತ್ತೇವೆ, ಅರ್ಥವೂ ಆಗುತ್ತದೆ, ಆದರೆ ನಮ್ಮ ನಾಯಿ ಬಾಲದಂಥಾ ಬುದ್ಧಿಯನ್ನು ನಾವು ಬಿಡುವುದೇ ಇಲ್ಲ.

ಮಿತ್ರರೇ, ಪರರನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳುವುದು ಸಾಧ್ಯವಿಲ್ಲ. ಎಲ್ಲರೂ ಅವರವರ ಪೂರ್ವ ಕರ್ಮಾನುಸಾರ ಕೆಲಸಗಳನ್ನು ಮಾಡುತ್ತಾರೆ ಮತ್ತು ಅದರ ಅನುಗುಣವಾಗಿ ಫಲಗಳನ್ನು ಪಡೆಯುತ್ತಾರೆ. ಅನ್ಯರು ಮಾಡುವ ಕೆಲಸವನ್ನು ವಿಶ್ಲೇಷಣೆ ಮಾಡುವುದು ತಪ್ಪು. ಯಾರಾದರೂ ತಾವು ಮಾಡಿದ ಕೆಲಸದಿಂದ ಕಷ್ಟದಲ್ಲಿದ್ದರೆ, ಅನುಕಂಪ ತೋರಬೇಕು, ಸಾಧ್ಯವಾದರೆ ಸಹಾಯ ಮಾಡಬೇಕು, ದುರ್ಬಲರನ್ನು ಕಂಡು ಅವರನ್ನು ನಿಂದಿಸದೆ, ಸಾಂತ್ವನ ತೋರಬೇಕು. ಅದೇ ನೀತಿ. ಅದೇ ನಿಯಮ. ನಾವೂ ಸಹ ಅಂತಹ ಗುಣವನ್ನು ಬೆಳೆಸಿಕೊಳ್ಳಬೇಕು.

**ಮುಕ್ತಕ-282** **ಪಾಪವೆಂಬುದದೇನು ಸುಲಭಸಾಧನೆಯಲ್ಲ।**
**ತಾಪದಿಂ ಬೇಯದವನ್ ಅದ ಸಪನಲ್ಲ॥**
**ವಾಪಿಯಾಳವ ದಡದಿ ನಿಂತಾತನರಿವನೇಂ?।**
**ಪಾಪಿಯದೆಯೊಳಕಿಳಿಯೋ - ಮಂಕುತಿಮ್ಮ॥**

ಪಾಪವೆಂಬುದದೇನು=ಪಾಪವೆಂಬುದು+ಅದು+ಏನ್, ಅದನೆಸಪನಲ್ಲ=ಅದನ್+ಎಸೆಪನಲ್ಲ,
ವಾಪಿಯಾಳವ=ವಾಪಿಯ+ಆಳವ, ನಿಂತಾತನರಿವನೇಂ=ನಿಂತಾತನು+ಅರಿವನೇನ್,
ಪಾಪಿಯೆದೆಯೊಳಕಿಳಿಯೋ=ಪಾಪಿಯ+ಎದೆಯ+ಒಳಕೆ+ಇಳಿಯೋ.
ತಾಪದಿಂ=ಶಾಖದಿಂ, ಜೀವನದ ತಾಪಗಳಿಂದ, ವಾಪಿ=ಬಾವಿ, ಎಸೆಪ=ಮಾಡುವ,

ಪಾಪ ಮಾಡುವುದು ಸುಲಭ ಸಾಧನೆಯಲ್ಲ. ಬದುಕಿನ ತಾಪದಿಂದ ಬೆಂದು ಬೆಂಡಾಗಿ ಹೋಗದ ಹೊರತು ಪಾಪಗಳನ್ನು ಮಾಡಲಾಗುವುದಿಲ್ಲ. ಬಾವಿಯ ದಡದಲ್ಲಿ ನಿಂತಿರುವವನಿಗೆ ಬಾವಿಯಾಳವು ತಿಳಿಯುವುದೇ?

ಅದೇ ರೀತಿ ಪಾಪಿಯ ಹೃದಯದಾಳಕ್ಕಿಳಿದು ಅವನಂತರಾಳವನ್ನು ಅರಿತಿಕೋ ಎಂದು ಒಂದು ಆದೇಶವನ್ನು ನೀಡುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಈ ಜಗತ್ತಿನಲ್ಲಿ ಹುಟ್ಟುವವರಾರೂ ಪಾಪಿಗಳಾಗಿ ಹುಟ್ಟುವುದಿಲ್ಲ. ಮಕ್ಕಳಾಗಿ ಹುಟ್ಟಿ, ದೇವರಂತೆ ಇದ್ದು, ಬೆಳೆಯುತ್ತಾ ಹೋದಂತೆ ಹಿಂದಿನಿಂದ ಹೊತ್ತು ತಂದ ವಾಸನೆಗಳು ವಿಕಸಿತಗೊಳ್ಳುತ್ತಾ ಹೋಗುತ್ತವೆ. ಅವು ಕೆಟ್ಟ ವಾಸನೆಗಳಾದರೆ ಮತ್ತು ಅವುಗಳು ಬೆಳೆಯಲು ಪೂರಕವಾದ ಪರಿಸರ ದೊರೆತರೆ, ಅವನು ಕೆಟ್ಟ ಮನುಷ್ಯನಾಗಿ ರೂಪುಗೊಳ್ಳುತ್ತಾನೆ. ಒಳ್ಳೆಯ ಪರಿಸರ ದೊರೆತರೆ ಬಹುಶಃ ಆ ಕೆಟ್ಟ ವಾಸನೆಗಳ ಪ್ರಭಾವ ಕಡಿಮೆಯಾಗಿ ಅವನೂ ಸಹ ಒಳ್ಳೆಯವನಾಗಿ ಬದುಕಬಹುದು. ಉತ್ತಮ ವಾಸನೆಗಳನ್ನು ಹೊತ್ತು ತಂದು ಉತ್ತಮ ಪರಿಸರ ದೊರಕಿದರೆ, ಉತ್ತಮ ವ್ಯಕ್ತಿಯಾಗಿ ರೂಪುಗೊಳ್ಳುತ್ತಾನೆ. ಎಲ್ಲರೂ ಅವರವರು ಹೊತ್ತು ತಂದ ಮತ್ತು ಈ ಬದುಕಿನಲ್ಲಿ ಪಡೆದುಕೊಂಡದ್ದವುಗಳಿಂದ, ಅನುಭವ ಪಡೆದು, ನೊಂದು, ಬೆಂದು ರೂಪುಗೊಳ್ಳುತ್ತಾರೆ. ಹಾಗಾಗಿ ಒಬ್ಬ ಪಾಪಿ ಎಂದು ಕರೆಯಲ್ಪಟ್ಟರೆ, ಅವನು ಮೂಲತಃ ಪಾಪಿಯಲ್ಲ, ಆದರೆ 'ಪಾಪಿ'ಯಾಗಲ್ಪಟ್ಟಿದ್ದಾನೆ ಎಂದು ಅರ್ಥ. ಅವನು ಮಾಡಿದ ಸಂಗ, ಕಲಿತ ವಿದ್ಯೆ, ಅನುಭವಿಸಿದ ನೋವು, ಹಿಂಸೆ ಎಲ್ಲವೂ ಅವನು 'ಪಾಪ' ಮಾಡಲು ಕಾರಣವಾಗುತ್ತದೆ. ಅಚಾನಕವಾಗಿ, ಪರಿಸ್ಥಿತಿಗಳ ಒತ್ತಡದಿಂದ, ಪಾಪ ಮಾಡುವ ಉದ್ದೇಶವಿಲ್ಲದೆ, ಕ್ಷಣಿಕ ಅತಿಭಾವುಕತೆಯಿಂದ ಅವನು ಪಾಪ ಮಾಡಿರುತ್ತಾನೆ.

ಹಾಗಾಗಿ ನಾವು ಯಾರನ್ನಾದರೂ ಪಾಪಿ ಎಂದು ಕರೆಯುವ ಮುಂಚೆ, ಅವನ ಪೂರ್ವವನ್ನು ಅರಿಯಬೇಕು. ಅವನ ಅಂತರಾಳಕ್ಕೆ ಇಳಿಯಬೇಕು. ಆಗ ಸತ್ಯವರ್ಥವಾಗುತ್ತದೆ. ಅವನ ಪಾಪದ ಮೂಲವು ಅರ್ಥವಾಗುತ್ತದೆ. ಪಾಪಕ್ಕೆ ಕ್ಷಮೆಯಿಲ್ಲ. ಆದರೆ ಪಾಪದ ಮೂಲವನ್ನು ಅರಿತರೆ ಬಹುಶಃ ಆ ವ್ಯಕ್ತಿಯ ಬಗ್ಗೆ ನಮ್ಮ ಅಭಿಪ್ರಾಯ ಬದಲಾಗಬಹುದು. ಬಾವಿಯ ದಡದಲ್ಲಿ ನಿಂತು ಬಾವಿಯ ಆಳವನ್ನು ಅರಿಯಲಾಗುವುದೇ?

ಆದರೆ ಇಂದಿನ ಸಮಾಜದಲ್ಲಿ ಕೇವಲ ಧನದಾಸೆಯಿಂದ, ಸ್ವಾರ್ಥದಿಂದ, ಲಾಲಸೆಯಿಂದ, ದುರಾಚಾರದ ಪಾಪ ಎಸಗುವವರ ಸಂಖ್ಯೆ ಹೆಚ್ಚಿದೆ. ಇದಕ್ಕೆ ಒಟ್ಟು ಸಮಾಜದ ಸಂಸ್ಕಾರದ ಕ್ರಮೇಣ ಅವನತಿಯೇ ಕಾರಣ. ಒಂದು ಸಾಂಕ್ರಾಮಿಕ ರೋಗದಂತೆ ಹಬ್ಬುತ್ತಿರುವ ಈ ದುರಾಚಾರದ ಪಾಪವನ್ನು ಕೇವಲ ಒಟ್ಟು ಸಮಾಜದ ಮನೋಭಾವವನ್ನು ಶುದ್ಧೀಕರಿಸುವುದರಿಂದಲೇ ಸಾಧ್ಯ.

ನಾವೆಲ್ಲಾ ಸಮಾಜದ ಸದಸ್ಯರಾಗಿ ಸಾಮೂಹಿಕವಾಗಿ ಅದರ ಆರೋಗ್ಯವನ್ನು ಸುಧಾರಿಸಲು ಪ್ರಾಮಾಣಿಕ ಪ್ರಯತ್ನ ಪಡಬೇಕು. ಒಬ್ಬ ವ್ಯಕ್ತಿ ಪಾಪ ಮಾಡಿದ ಮೇಲೆ ಅವನನ್ನು ಹಳಿಯುವುದಕ್ಕಿಂತ ಅವನು ಪಾಪವನ್ನೇ ಮಾಡದಂತ ಅಥವಾ ಮಾಡಲಾಗದಂತಾ ರೀತಿಯಲ್ಲಿ ಪರಿಸ್ಥಿತಿ ಬದಲಾಗಬೇಕು. ನಮ್ಮೆಲ್ಲರ ದೀರ್ಘಕಾಲದ ಪ್ರಯತ್ನದಿಂದಲೇ ಈ ಸುಧಾರಣೆ ಸಾಧ್ಯ.





**ಮುಕ್ತಕ-283**

**ರಾವಣನ ಹಳಿವವನೆ, ಜೀವವನ ಬಿಸುಡಿಸುವ।**
**ಲಾವಣ್ಯವೆಂತಹುದೋ? ನೋವದೆಂತಹುದೋ?॥**
**ಬೇವಸವ ಪಟ್ಟು ತಿಳಿ, ತಿಳಿದು ಹಳಿಯುವೊಡೆ ಹಳಿ।**
**ಗಾವಿಲನ ಗಳಹೇನು? - ಮಂಕುತಿಮ್ಮ॥**

ಹಳಿವವನೆ=ಹಳಿವ+ಅವನೆ, ಲಾವಣ್ಯವೆಂತಹುದೋ=ಲಾವಣ್ಯವು+ಎಂತು+ಅಹುದೋ,
ನೋವದೆಂತಹುದೋ=ನೋವು+ಅದು+ಎಂತು+ಅಹುದೋ, ಗಳಹೇನು=ಗಳಹು+ಏನು.
ಬಿಸುಡಿಸುವ=ಸೆಳೆಯುವ, ಲಾವಣ್ಯ=ಸೌಂದರ್ಯ, ಬೇವಸವ=ಶ್ರಮಪಟ್ಟು, ಗಾವಿಲ=ಅರಿಯದವ.

ರಾವಣಾಸುರ ಸೀತೆಯನ್ನು ಅಪಹರಿಸಿದ್ದಕ್ಕೆ ಅವನನ್ನು ಕೆಟ್ಟವ ಎಂದು ಜನರೆಲ್ಲಾ ಅವನನ್ನು ಬಯ್ಯುತ್ತಾರೆ. ಆದರೆ ಪರಸ್ತ್ರೀಯನ್ನು ಹೊತ್ತುಕೊಂಡು ಹೋಗುವಂಥಾ ಹೇಯ ಕೃತ್ಯ ಮಾಡಲು ಪ್ರೇರೇಪಿಸಿದ ಆ ಸೀತೆಯ ಸೌಂದರ್ಯವೆಷ್ಟಿತ್ತೋ? ಮತ್ತು ಅವಳನ್ನು ಪಡೆಯಬೇಕೆಂಬ ಉತ್ಕಟ ಅಪೇಕ್ಷೆಯ ಯಾತನೆಯೆಷ್ಟಿತ್ತೋ? ಕಾರಣವ ಶ್ರಮಪಟ್ಟು ಅರಿತುಕೊ, ಅರಿತು ಮಾತನಾಡಿದರೆ ಸರಿ, ಅರಿಯದೆ ಏಕೆ ಮಾತನಾಡುವೆ? ಎಂದು ಕೇಳುತ್ತಾರೆ ಮಾನ್ಯ ಗುಂಡಪ್ಪನವರು.

ರಾವಣಾಸುರ, ಕಶ್ಯಪ ಬ್ರಹ್ಮನ ಮಗ, ಅರವತ್ನಾಲ್ಕು ವಿದ್ಯೆಗಳಲ್ಲಿ ಪಾರಂಗತ, ಮಹಾನ್ ಪಂಡಿತ, ಲಂಕಾಧೀಶ. ಅಂತಹ ಉನ್ನತ ವ್ಯಕ್ತಿತ್ವವುಳ್ಳವನು ಸೀತೆಯನ್ನು ಅಪಹರಿಸುವಂಥಾ ಕೆಲಸ ಮಾಡಬೇಕಾದರೆ, ಅವಳೆಷ್ಟು ಸುಂದರಿಯಾಗಿರಬೇಕು. ಅಥವಾ ಬೇರೆ ಏನೋ ಕಾರಣವಿರಬೇಕು!! ಬೇಡವೆಂದು ಯಾರು ಎಷ್ಟು ಹೇಳಿದರೂ ಕೇಳದೆ, ತನ್ನ ಹಠವನ್ನು ಸಾಧಿಸಿ, ಇಡೀ ಕುಲದ ಕ್ಷಯಕ್ಕೆ, ನಾಶಕ್ಕೆ ಕಾರಣನಾದವನನ್ನು, ಏನೆಂದು ಹೇಳುವುದು. ಎಲ್ಲರೂ ಹೇಳುವುದು "ರಾವಣ ದುಷ್ಟ, ಸೀತೆಯನ್ನು ಮೋಹಿಸಿ, ಅಪಹರಿಸಿ, ಯಾರ ಬುದ್ಧಿವಾದವನ್ನೂ ಕೇಳದೆ ರಾಮನೊಡನೆ ಹೋರಾಡಿ ತಾನೂ ಸತ್ತು ತನ್ನ ಕುಲದ ನಾಶಕ್ಕೂ ಕಾರಣನಾದ, ನೀಚ" ಎಂದು. ಆದರೆ ಮೂಲ ಕಾರಣವೇನು ಎಂದು ಯಾರೂ ಯೋಚಿಸಲು ಹೋಗುವುದಿಲ್ಲ?

ಪುರಾಣದ ಪ್ರಕಾರ, ಜಯ ವಿಜಯರೆಂಬ ವೈಕುಂಠದ ದ್ವಾರಪಾಲಕರು ಶಾಪಗ್ರಸ್ತರಾಗಿ ವಿಷ್ಣುವಿನಿಂದ ದೂರಾಗಿ, ಭುವಿಯಲ್ಲಿ ದುಷ್ಟರಾಗಿ ಹುಟ್ಟಿ, ಅ ವಿಷ್ಣುವಿನಿಂದಲೇ ಹತರಾಗಿ ಮತ್ತೆ ವೈಕುಂಠ ಸೇರುವ ಕಥೆ. ಆ ರಾವಣ ಅಷ್ಟೊಂದು ಹಠ ಮಾಡದೆ ಯುದ್ಧವನ್ನು ಮೈಮೇಲೆ ತಂದುಕೊಳ್ಳದೆ ಹೋಗಿದ್ದಿದ್ದರೆ ಅವನ ನಾಶವೂ ಆಗುತ್ತಿರಲಿಲ್ಲ ಅವನಿಗೆ ಮುಕ್ತಿಯೂ ಸಿಗುತ್ತಿರಲಿಲ್ಲ. ಅವನ ದುಷ್ಟತನಕ್ಕೆ ಮೂಲ ಕಾರಣ ಅದು. ಅದನ್ನರಿಯದೆ ನಾವು ರಾವಣ ನೀಚ, ಕೆಟ್ಟವ ಎಂದು ಗಾವಿಲರಂತೆ ವಿಶ್ಲೇಷಣೆ ಮಾಡುತ್ತಾ ಇರುತ್ತೇವೆ.

ಅದೇ ರೀತಿ ನಾವು ಪರರು ಮಾಡುವ ಪಾಪ ಅಥವಾ ತಪ್ಪುಗಳನ್ನು ಕಂಡಾಗ, ತಕ್ಷಣ ನಮಗೆ ಅವರು ಕೆಟ್ಟವರು, ನೀಚರು, ಪಾಪಿಗಳು ಎಂದೆಲ್ಲ ಆರೋಪಮಾಡುವ ಮನಸ್ಸಾಗಬಹುದು. ಆದರೆ ಸ್ವಲ್ಪ ಶ್ರಮಪಟ್ಟು, ಸರಿಯಾಗಿ ವಿಷಯವನ್ನು ತಿಳಿದುಕೊಂಡಾಗ, ನಮಗೆ ಸತ್ಯದ ಅರಿವಾದಾಗ, ನಮ್ಮ ಅಭಿಪ್ರಾಯವೇ ಬೇರೆಯಾಗಬಹುದು ಅಲ್ಲವೇ?. ಹಾಗಾಗಿ ನಾವು ಯಾವುದನ್ನೂ ಅರಿಯದೆ ಮಾತನಾಡಬಾರದು, ಅರಿತಾಗ ಸತ್ಯ ಗೊತ್ತಾಗುತ್ತದೆ. ಅರಿತು ಮಾತನಾಡಿದಾಗ ನಮ್ಮ ಅಭಿಪ್ರಾಯವು, ಸತ್ಯದ ಆಧಾರದ

ಮೇಲಾಗಿರುತ್ತದೆಯಾದ್ದರಿಂದ ಶುದ್ಧವಾಗಿರುತ್ತದೆ. ಯಾವುದೇ ವಿಷಯದಲ್ಲಾಗಲೀ, ಅಂತಹ 'ಶುದ್ಧ' ಅಭಿಪ್ರಾಯಗಳನ್ನು ಬೆಳೆಸಿಕೊಳ್ಳಲು, ನಮಗೆ ಒಂದು ದೃಷ್ಟಾಂತದ ಮೂಲಕ, ಆದೇಶ ನೀಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಪ್ರತೀ ಬಾರಿ ನಾವು ನಮ್ಮ ಅಭಿಪ್ರಾಯಗಳನ್ನು ಹೇಳುವಾಗ, ಅದು 'ಸತ್ಯಕ್ಕೆಷ್ಟು ಹತ್ತಿರ' ವಾಗಿದೆ ಎಂದು ಯೋಚಿಸಬೇಕು.

# ನೀತಿ ನಿರ್ಣಯ 284-290

**ಮುಕ್ತಕ - 284**

**ಜೀವಋಣಗಳ ಲೆಕ್ಕದಾದಿಯರಿಯದ ನಾವು |**
**ಅವುದನು ಸರಿಯೆನುವ? ತಪ್ಪಾವುದೆನುವ? ||**
**ಓವೋ ಬಿಡು ಕಡುಕಷ್ಟ ನೀತಿನಿರ್ಣಯದ ಹೊರೆ |**
**ದೈವವದ ಹೊರಲಿ ಬಿಡು – ಮಂಕುತಿಮ್ಮ ||**

ಲೆಕ್ಕದಾದಿಯರಿಯದ=ಲೆಕ್ಕದ+ಆದಿ+ಅರಿಯದ, ಸರಿಯೆನುವ=ಸರಿ+ಎನುವ,
ತಪ್ಪಾವುದೆನುವ=ತಪ್ಪು+ಆವುದು+ಎನುವ, ದೈವವದ=ದೈವವು+ಅದ.

ಈ ಜಗತ್ತಿನಲ್ಲಿ ಜನಿಸುವ ಎಲ್ಲ ಜೀವಿಗಳು ತಮ್ಮ ಜನ್ಮದಿಂದ ಹೊತ್ತು ತರುವ ಋಣದ ಭಾರವೆಷ್ಟು, ಅದರ ರೂಪವೇನು, ಅದರಿಂದ ಜೀವಿಗಳು ತಮ್ಮ ಜೀವನದಲ್ಲಿ ಏನೆಲ್ಲಾ ಅನುಭವಿಸಬೇಕು, ಹಾಗೆ ಅನುಭವಿಸುವಾಗ ಅವರು ಮಾಡುವ ತಪ್ಪುಗಳೆಷ್ಟು ಮತ್ತು ಸರಿಗಳೆಷ್ಟು ಎಂಬ ಲೆಕ್ಕಾಚಾರವನ್ನು ಮಾಡುವುದು ಬಹಳ ಕಷ್ಟ. ಅದನ್ನು ನಾವು ವಿಚಾರಮಾಡದೆ ಅದರ ನಿರ್ಣಯವನ್ನು ಆ ಪರಮಾತ್ಮನಿಗೇ ಬಿಟ್ಟುಬಿಡುವುದು ಲೇಸು ಎಂದು ಹುಟ್ಟು ಮತ್ತು ಜೀವನದ ಲೆಕ್ಕಾಚಾರವನ್ನು ಪ್ರಸ್ತಾಪ ಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಪ್ರತೀ ಜೀವಿಯೂ ಹುಟ್ಟಿನಿಂದ ಸಾವಿನವರೆಗೆ ಬದುಕನ್ನು ಸಾಗಿಸಲೇಬೇಕು. ಹಾಗೆ ಸಾಗಿಸುವಾಗ ಪೂರ್ವ ಜನ್ಮದಿಂದ ಹೊತ್ತು ತಂದಂತಹ ಪೂರ್ವ ಕರ್ಮದ ವಾಸನೆಯನುಗುಣವಾಗಿಯೇ ಇಲ್ಲಿನ ಸುಖ, ದುಃಖ, ನೋವು,

ನಲಿವುಗಳನ್ನೂ ಅನುಭವಿಸುತ್ತವೆ ಎಂದು ಸಾರುತ್ತದೆ ನಮ್ಮ ಸನಾತನ, ಹಾಗೆ, ಪಡೆದುಕೊಂಡು ಬಂದದ್ದೆಷ್ಟು, ಇಲ್ಲಿ ಗಳಿಸಿಕೊಂಡು ಕೂಡಿಸಿಕೊಂಡದ್ದೆಷ್ಟು, ಅನುಭವಿಸಿ ಕಳೆದುಕೊಂಡದ್ದೆಷ್ಟು ಎಂಬ ಲೆಕ್ಕಾಚಾರ ಮಾನವನ ಬುದ್ಧಿಗೆ ಎಟುಕುವುದಿಲ್ಲ. ನಾವು ಅರಿಯುವ ಪ್ರಯತ್ನ ಪಟ್ಟರೂ, ಲೆಕ್ಕ ಹಾಕಿ ಉತ್ತರ ಕಂಡುಕೊಳ್ಳುವುದು ಸಾಧ್ಯವಿಲ್ಲ.

(102)

ನೀತಿ ನಿರ್ಣಯ 284-290 ಕಗ್ಗ ರಸಧಾರೆ-2

ಆದರೂ ನಾವು 'ಹಾಗೆ ಮಾಡಿದ್ದರಿಂದ ಹೀಗಾಯಿತು' ಮತ್ತು 'ಹೀಗೆ ಮಾಡಿದ್ದಿದ್ದರೆ ಹಾಗೆ ಆಗುತ್ತಿತ್ತು' ಎಂದು ಎಲ್ಲ ಜೀವಿಗಳ ಕರ್ಮಗಳಿಗೆ ಒಂದು ವ್ಯರ್ಥ ವ್ಯಾಖ್ಯಾನವನ್ನು ಮಾಡುತ್ತಲೇ ಇರುತ್ತೇವೆ. ಇದು ಕೇವಲ ಅಜ್ಞಾನ, ಲೌಕಿಕ ಜೀವನದಲ್ಲಿ ಎಷ್ಟೇ ವ್ಯಾಖ್ಯಾನ ಮಾಡಿದರೂ, ಪಾರಮಾರ್ಥಿಕವಾಗಿ ನೋಡಿದಾಗ ನಮ್ಮೆಲ್ಲ ಊಹೆ, ಕಲ್ಪನೆ ಮತ್ತು ಅದರನುಗುಣವಾದ ವಿಮರ್ಶೆ ಎಲ್ಲ ಪೊಳ್ಳು ಎನಿಸುತ್ತದೆ. ಒಳ್ಳೆಯ ಕೆಲಸ ಮಾಡುವವನು ಅಂತಹ ಗುಣಗಳನ್ನು ಹೊತ್ತು ತಂದು, ಬೆಳೆಸಿಕೊಂಡು ಉಳಿಸಿಕೊಳ್ಳುತ್ತಾನೆ. ಹಾಗೆಯೇ ಕೆಟ್ಟ ಕೆಲಸ ಮಾಡುವವನು ಅಂತಹ ಗುಣಗಳನ್ನೇ ಹೊತ್ತುತಂದು, ಬೆಳೆಸಿಕೊಂಡು ಉಳಿಸಿಕೊಂಡು ಬಾಳುತ್ತಾನೆ.

ಆದರೆ ಈ 'ಜೀವ'ನ ಬುದ್ಧಿಗೆ ಕಾರಣವಾದ ಆ 'ಮೊದಲ ಕರ್ಮ' ಎಂದು ಆರಂಭವಾಯಿತು ಎಂದು ಹೇಳುವುದು ಸಾಧ್ಯವಿಲ್ಲ. ಲಕ್ಷಾಂತರ ಜನ್ಮಗಳ ಸಂಚಯನವಲ್ಲವೇ? ಹಾಗಾಗಿ ನಮಗರ್ಥವಾಗುವುದಿಲ್ಲ ಆದ್ದರಿಂದ ಪ್ರತಿಯೊಬ್ಬರ ಬಾಳಿನ ಸರಿ-ತಪ್ಪುಗಳ ಲೆಕ್ಕಾಚಾರವನ್ನು ಆ ಪರಮಾತ್ಮನಿಗೆ ಬಿಡುವುದೇ ಲೇಸು ಎಂದು ಹೇಳುತ್ತಾರೆ ಮಾನ್ಯ ಗುಂಡಪ್ಪನವರು.

'ಬುದ್ಧಿಃ ಕರ್ಮಾನುಸಾರಿಣಿ' ಎಂದು ಹೇಳುತ್ತಾರೆ. ಮೊದಲು ಪೂರ್ವ ಕರ್ಮ, ಅದನ್ನನುಸರಿಸಿ ಬುದ್ಧಿ, ಮತ್ತೆ ಆ ಬುದ್ಧಿಯನ್ನನುಸರಿಸಿ ಅವನ ಕರ್ಮ, ಹೀಗೆ ಇದು ಒಂದು ವಿಷವೃತ್ತ. ಇದರಿಂದ ಬಿಡಿಸಿಕೊಳ್ಳಬೇಕಾದರೆ, 'ಸತ್'ನ ಸಂಗದಿಂದಲೇ ಸಾಧ್ಯ. ಅಂತಹ ಸತ್ಸಂಗದಿಂದ, ಕರ್ಮಶೇಷವಿಲ್ಲದಂತಾದಾಗ, ಜೀವ ಮುಕ್ತನಾಗುತ್ತಾನೆ ಎಂಬುದು ಸಿದ್ಧಾಂತ. ಆದ್ದರಿಂದ ನಾವೂ ಸಹ ಆ ಸತ್ಸಂಗದ ಪ್ರಯತ್ನ ಮಾಡಬೇಕು.

**ಮುಕ್ತಕ-285**

**ನಾಚಿಕೆಯನಾಗಿಪುವು ನಮ್ಮ ಸುಖದಾತುರದ।**
**ಯೋಚನೆಗಳವನು ಮರುವಗಲು ಪರಿಕಿಸಲು॥**
**ಚಾಚಿದ್ದ ರಸನೆ ತಾನೊಳಸೇದಿಕೊಳ್ಳುವುದು।**
**ರೇಚನವದಾತ್ಮಕ್ಕೆ - ಮಂಕುತಿಮ್ಮ॥**

ನಾಚಿಕೆಯನಾಗಿಪುವು=ನಾಚಿಕೆ+ಆಗಿಸುವು, ಸುಖದಾತುರದ=ಸುಖದ+ಆತುರವು,
ಯೋಚನೆಗಳವನು=ಯೋಚನೆಗಳ+ಅವನು, ತಾನೊಳಸೇದಿಕೊಳ್ಳುವುದು=ತಾನು+ಒಳ+ಸೇದಿಕೊಳ್ಳುವುದು,
ರೇಚನವದಾತ್ಮಕ್ಕೆ=ರೇಚನವು+ಅದು+ಆತ್ಮಕ್ಕೆ.
ಮರುವಗಲು=ಮತ್ತೊಂದು ದಿನ, ಪರಿಕಿಸಲು-ಪರೀಕ್ಷಿಸಲು, ರಸನೆ=ನಾಲಿಗೆ, ರೇಚನ=ಹೊರಹಾಕುವುದು.

ನಾವು ಇಂದು ಸುಖಪಡಲು ಆತುರಪಡುವುದನ್ನು ನಾವೇ ನಾಳೆ ಯೋಚಿಸಿದರೆ, ನಮಗೆ ನಾಚಿಯಾಗುತ್ತದೆ. ಲಾಲಸೆಯಿಂದ ಆತುರ ಪಡುವ ಮನಸ್ಸನ್ನು ಹಿಂತೆಗೆದುಕೊಂಡರೆ, ಒಳಗಿದ್ದ ಹೊಲಸನ್ನು ಹೊರಹಾಕಿ, ಆತ್ಮ ಶುದ್ಧಿಯಾದಂತೆ, ಎಂದು ಮನುಷ್ಯನ ಆಸೆಗಳ ವಿಷಯವನ್ನು ಪ್ರಸ್ತಾಪಮಾಡಿದ್ದಾರೆ, ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಮನುಷ್ಯನ ಆಸೆಗಳಿಗೆ ಕೊನೆ ಮೊದಲಿಲ್ಲ ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯವೇ!! ಸಿಕ್ಕಸಿಕ್ಕದ್ದಕ್ಕೆಲ್ಲ, ಕಂಡಕಂಡದ್ದಕ್ಕೆಲ್ಲಾ ಆಸೆಪಡುತ್ತದೆ ಮನುಷ್ಯನ ಮನಸ್ಸು. ಆದರೆ ಆಸೆಪಟ್ಟದ್ದನ್ನೆಲ್ಲಾ ಪಡೆಯಲಾಗುವುದಿಲ್ಲ. ಹಾಗೆ ಪಡೆದ ಎಲ್ಲದರಿಂದಲೂ ಸುಖ ಪಡಲಾಗುವುದಿಲ್ಲ. ಸುಖ ಪಟ್ಟರೂ, ಅದು ಶಾಶ್ವತ ಸುಖವಾಗುವುದಿಲ್ಲ. ಪುನಃ ಯಾವುದೋ ಕೊರತೆ ಮನಸ್ಸನ್ನು ಕಾಡುತ್ತಲೇ ಇರುತ್ತದೆ. ಆಸೆಪಡುವುದರ ಪರಿಣಾಮವೇನು ಎಂದು ಅರ್ಥವಾದರೂ, ಚಂಚಲ ಮನಸ್ಸು ಆಸೆ ಪಡುವುದನ್ನೇನೂ, ಬಿಡುವುದಿಲ್ಲವಲ್ಲ!!

ನಾವು ಪಟ್ಟ ಆಸೆಯನ್ನು ಮತ್ತೊಮ್ಮೆ ಆಲೋಚಿಸಿದರೆ ನಮಗೆ "ಛೇ! ಎಂತಹ ಕ್ಷುಲ್ಲಕ, ಹೀನ ವಸ್ತುವಿಗೆ ನಾ ಆಸೆಪಟ್ಟೆನಲ್ಲಾ!' ಎಂದು ನಮಗೆ ನಾಚಿಕೆ ಆಗಬಹುದು. ಹಾಗಾದಾಗ, ನಾವು ಆ ಆಸೆಯನ್ನು ಬಿಡಬಹುದು. ಹಾಗೆ ಬಿಟ್ಟಾಗ, ಆ ಆಸೆಪಡುವುದರಿಂದ ನಾವು ಮಾಡಬಹುದಾಗಿದ್ದ ಕೆಲಸದಿಂದ ದೂರ ಸರಿದು, ಆತ್ಮಕ್ಕೆ ಉಂಟಾಗಬಹುದಾಗಿದ್ದ ತೊಂದರೆಯನ್ನು ತಪ್ಪಿಸಿಕೊಳ್ಳಬಹುದು. ಆದರೆ ಹಾಗೆ ಆಗುವುದು, ಮನಸ್ಸಿನಲ್ಲಿ ಆಸೆಪಟ್ಟು, ಆ ಬಯಕೆಯನ್ನು ತೀರಿಕೊಳ್ಳಲು ಪ್ರಯತ್ನಪಡುವ ಮುನ್ನ ಕಿಂಚಿತ್ ಆಲೋಚಿಸದರೆ ಮಾತ್ರ ಬಯಸಿದಾಕ್ಷಣ ಪಡೆದುಕೊಂಡುಬಿಟ್ಟರೆ ಆಗುವ ಪರಿಣಾಮವನ್ನು ತಪ್ಪಿಸಲು ಸಾಧ್ಯವೇ ಇಲ್ಲ.

ನಮ್ಮ ಯಾವುದೇ ಆಸೆಯನ್ನು ಪೂರೈಸಿಕೊಳ್ಳಲು ಮಾಡುವ ಪ್ರಯತ್ನಕ್ಕೆ ಮುನ್ನ ಒಂದೆರಡು ಕ್ಷಣ ಆಲೋಚಿದರೆ, ಅದು ನಮಗೆ ಯೋಗ್ಯವೇ? ನಾವು ಅದಕ್ಕೆ ಯೋಗ್ಯರೇ? ಅದು ಸರಿಯೇ? ಒಳ್ಳೆಯದೇ? ಮುಂತಾದ ಪ್ರಶ್ನೆಗಳು ಮನಸ್ಸಿನಲ್ಲಿ ಉಂಟಾದರೆ, ಯುಕ್ತಾಯುಕ್ತತೆಯನ್ನು ನಿರ್ಧಾರಮಾಡುವ ಸಮಯ ಸಿಗುತ್ತದೆ. ಆಗ ನಮ್ಮ ಬಯಕೆಯಿಂದ ಹಿಂದೆ ಸರಿಯಲು ಅವಕಾಶವಾಗುತ್ತದೆ. ನಮಗೆ ಏನು ಬೇಕೋ ನಮಗೆ ಯಾವುದು ಯುಕ್ತವೋ ಅದನ್ನಷ್ಟೇ ಪಡೆಯುವ ಸಾಧ್ಯತೆಯಿರುತ್ತದೆ. ಸುಮ್ಮನೆ ಬೇಡದ 'ಕಸ' ತುಂಬಿಕೊಳ್ಳುವುದರಿಂದ ತಪ್ಪಿಸಿಕೊಳ್ಳಬಹುದು. ಇದರಿಂದ ಮನಸ್ಸು, ಬುದ್ಧಿ, ದೇಹದ ಶುದ್ಧತೆಯನ್ನು ಕಾಪಾಡಿಕೊಂಡು, ಆತ್ಮಕ್ಕೆ ಕೇಶವು ಅಂಟದೆ ಇರುವಂತೆ ಕಾಪಾಡಿಕೊಳ್ಳಬಹುದು.

ವಾಚಕರೆ, ಹಾಗಾಗಿ ಆಸೆ ಪಡಿ, ಆದರೆ ಅದನ್ನು ಪೂರೈಸಿಕೊಳ್ಳುವ ಪ್ರಯತ್ನ ಮಾಡುವ ಮುನ್ನ ಸ್ವಲ್ಪ ಆಲೋಚನೆ ಮಾಡಿ ಎಂದು ಸೂಚಿಸಿದ್ದಾರೆ ಮಾನ್ಯ ಡಿ.ವಿ.ಜಿ ಯವರು ಈ ಮುಕ್ತಕದಲ್ಲಿ.

**ಮುಕ್ತಕ-286**

**ಸನ್ನಿಹಿತ ಮನುಜನಲಿ ದೈವಪಾಶವವೆರಡು।**
**ಪುಣ್ಯ ಪಾಪದ ಮಿಶ್ರವವನ ಸ್ವಭಾವ॥**
**ಕಣ್ಣೊಮ್ಮೆಯಾಗಸದ ಬೆಳಕಿನೊಡನಾಡುವುದು।**
**ಮಣ್ಣೊಳುರುಳುವುದೊಮ್ಮೆ - ಮಂಕುತಿಮ್ಮ॥**

ದೈವಪಾಶವವೆರಡು=ದೈವ+ಪಾಶವವು+ಎರಡು, ಮಿಶ್ರವವನ=ಮಿಶ್ರವು+ಅವನ,
ಕಣ್ಣೊಮ್ಮೆಯಾಗಸದ=ಕಣ್ಣೊಮ್ಮೆ+ಆಗಸದ, ಬೆಳಕಿನೊಡನಾಡುವುದು=ಬೆಳಕಿನ+ಒಡನೆ+ಆಡುವುದು,
ಮಣ್ಣೊಳುರುಳುವುದೊಮ್ಮೆ=ಮಣ್ಣೊಳು+ಅರಳುವುದು+ಒಮ್ಮೆ.
ಪಾಶವ=ಪಶು ಗುಣ.





ಮನುಷ್ಯನ ಸ್ವಭಾವ ದೈವಗುಣ ಮತ್ತು ಪಶುಗುಣಗಳ ಮಿಶ್ರಣ. ಹಾಗಾಗಿ ಅವನು ಕೆಲವು ಬಾರಿ ಪುಣ್ಯವನ್ನು ಮಾಡುತ್ತಾನೆ ಮತ್ತೆ ಕೆಲವು ಬಾರಿ ಪಾಪ ಮಾಡುತ್ತಿರುತ್ತಾನೆ, ಎಂದು ಆಗಸ ಮತ್ತು ಮಣ್ಣಿನ ಉಪಮೆಗಳನ್ನು ನೀಡುತ್ತಾ, ಮನುಷ್ಯ ಸ್ವಭಾವವನ್ನು ವಿಶ್ಲೇಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಪೂರ್ವ ವಾಸನೆಗಳನ್ನು ಹೊತ್ತು ತಂದಿರುವ ಮನುಷ್ಯನ ಗುಣಗಳಲ್ಲಿ ದೈವೀಕ ಗುಣಗಳು ಮತ್ತು ಪಾಶವೀ ಗುಣಗಳು ಮಿಶ್ರಿತವಾಗಿವೆ. ಯಾವುದರ ಪ್ರಮಾಣ ಎಷ್ಟು ಎನ್ನುವುದರ ಮೇಲೆ ಆ ಮನುಷ್ಯನ ವರ್ತನೆ ಇರುತ್ತದೆ. ಹೆಚ್ಚು ದೈವೀಕ ಗುಣಗಳಿದ್ದರೆ ಅವನಲ್ಲಿ ದಯೆ, ಕರುಣೆ, ಪ್ರೀತಿ, ಸಹನೆ, ಅನುರಾಗ ಮುಂತಾದ ಶಾಂತರಸ ಭರಿತ ಗುಣಗಳು ಅಧಿಕವಾಗಿದ್ದು, ಅವನ ಮನೋಭಾವ ಆಕಾಶದಷ್ಟು ವಿಶಾಲವಾಗಿದ್ದು, ಅಂತಹವರು ಈ ಜಗತ್ತಿನಲ್ಲಿ ಅಧಿಕವಾಗಿದ್ದರೆ,

ಜಗತ್ತು ಸುಂದರ. ಪಾಶವೀ ಗುಣಗಳ ಪ್ರಮಾಣ ಅಧಿಕವಾಗಿದ್ದರೆ, ಕ್ರೋಧ, ಕಾಮ, ಅಸಹನೆ, ಕ್ರೌರ್ಯ, ನಿರ್ದಯೆ, ದ್ವೇಷ ಮುಂತಾದ ಕ್ರೂರರಸ ಭರಿತ ಭಾವಗಳೇ ಅಧಿಕವಾಗಿದ್ದು ಜಗತ್ತಿನಲ್ಲಿ ಕೇವಲ ಕಾದಾಟವೇ ಇರುತ್ತದೆ.

ಆದರೆ ಮನುಷ್ಯನ ಗುಣಗಳಲ್ಲಿ ಇವೆರಡೂ ಮಿಶ್ರಣವಾಗಿದೆಯಾದ್ದರಿಂದ, ಇವನು ಕೆಲ ಸಮಯದಲ್ಲಿ ಸಾಧುವಂತೆಯೂ, ಬಹಳ ಒಳ್ಳೆಯ ಗುಣಗಳಿಂದ ಇಡೀ ಜಗತ್ತಿಗೇ ಪ್ರೀತಿಯನ್ನು ಹಂಚುವ ಉದಾತ್ತನಂತೆ ಕಾಣುತ್ತಾನೆ. ಅದು ದೈವೀ ಗುಣಗಳ ಪ್ರಭಾವ, ಅದೇ ಮನುಷ್ಯ ಬೇರೆ ಸಮಯದಲ್ಲಿ ಸ್ವಾರ್ಥ ಮತ್ತು ಕ್ರೌರ್ಯದಿಂದ ಕೂಡಿ ಜಗತ್ತನ್ನೇ ದಹಿಸಿ ಬಿಡುವಂತಹ ದಾನವನಂತೆ ಕಾಣುತ್ತಾನೆ. ಅದು ಪಾಶವೀ ಗುಣಗಳ ಪ್ರಭಾವ.

ಇನ್ನು ಕೆಲ ಗೋಮುಖ ವ್ಯಾಘ್ರಗಳಿದ್ದಾರೆ. ಜಗತ್ತಿಗೆ ತೋರಲು ಬಹಳ ಸಾಧುಗಳಂತೆ, ಸದಾಕಾಲ ಜಗತ್ತಿನ ಒಳಿತನ್ನೇ ಬಯಸುವವರಂತೆ ತೋರಿಸಿಕೊಂಡು ಆಂತರ್ಯದಲ್ಲಿ ಕೇವಲ ಸ್ವಾರ್ಥ, ದ್ವೇಷ, ನಿಷ್ಕರುಣೆಯಂಥ ದಾನವೀ ಪ್ರವೃತ್ತಿಯನ್ನು ತೋರುತ್ತಾರೆ. ಇಂತಹವರು ಸಮಾಜಕ್ಕೆ ಹೆಚ್ಚು ಅಪಾಯಕಾರಿ.

ವಾಚಕರೆ, ಇತ್ತೀಚೆಗಂತೂ, ಹಣಕ್ಕೆ ಮತ್ತು ಐಹಿಕ ಭೋಗಕ್ಕೆ ಹೆಚ್ಚು ಪ್ರಾಮುಖ್ಯತೆಯಾಗಿ ಮಾನವೀಯತೆ ಎಂಬ ಪದಕ್ಕೆ ಅರ್ಥವೇ ಇಲ್ಲವಾಗಿದೆ, ಸ್ವಾರ್ಥ ಹೆಚ್ಚಾಗಿ ಯಾರಲ್ಲೂ ಒಂದು ಸಾಮಾಜಿಕ ದಾಯಿತ್ವವಿಲ್ಲದೆ, ಪಾಶವೀ ಪ್ರವೃತ್ತಿ ಹೆಚ್ಚುತ್ತಿದೆ. ಹೀಗೇ ಬೆಳೆದು ಬೆಳೆದು ಸ್ವಲ್ಪ ಕೆಟ್ಟದ್ದು ಪೂರ್ಣ ಕೆಡುವಂತಾಗಿದೆ. ಹೀಗಾಗಲು ಹತ್ತಾರು ಕಾರಣಗಳಿದ್ದರೂ ಒಟ್ಟಾರೆ ಸಮಾಜ ಹಾಳಾಗುತ್ತಿದೆ. ಇದಕ್ಕೆ ಇದೇ ಕಾರಣವೆಂದು ಬೆರಳು ತೋರಿಸಿ ಹೇಳುವಂತಿಲ್ಲ. ಬಹಳ ಕಾಲದಿಂದ ಬೆಳೆದುಕೊಂಡು ಬಂದಂತಹ ಬದಲಾವಣೆ, ನಮಗೆ ಅರಿವಿಲ್ಲದಂತೆಯೇ ಸಮಾಜದ ಮತ್ತು ಈ ಜಗತ್ತಿನ ರೂಪ ಬದಲಾಗಿಬಿಟ್ಟಿದೆ.

ನಾವೆಲ್ಲಾ ಇದನ್ನು ಆಲೋಚಿಸಿ ಮೊದಲು ನಮ್ಮನ್ನು ನಾವು ತಿದ್ದಿಕೊಂಡು, ನಮ್ಮ ಪರಿಸರ ಮತ್ತು ಒಟ್ಟು ಸಮಾಜದ ಬದಲಾವಣೆಗೆ ಪ್ರಯತ್ನಪಟ್ಟರೆ ಮತ್ತು ಹಲವಾರು ಜನರ ದೀರ್ಘಕಾಲದ ಪರಿಶ್ರಮವಾದರೆ ಮುಂದಿನ ಪೀಳಿಗೆಗೆ ಒಂದು ಶಾಂತ ಸುಸಂಸ್ಕೃತ ಸಮಾಜವನ್ನು ಕೊಡಬಹುದು. ಇಲ್ಲದಿದ್ದರೆ ಅಧೋಗತಿಯೇ!!

**ಮುಕ್ತಕ-287**

**ನರರ ಸ್ವಭಾವ ವಕ್ರಗಳನೆಣಿಸುವುದೇಕೆ? ।**
**ಗಿರಿ ಕಣಿವೆಗಳ ಗಣಿಸಿ ರೋಷಗೊಳ್ಳುವೆಯೇಂ ॥**
**ಸುರೆ ಗರಲ ಸುಧೆಗಳ ಅಬ್ಧಿಯಲಿ ಸೋದರರಲ್ತೆ? ।**
**ಅರಿತೊಗ್ಗು ಸಾಜಕ್ಕೆ - ಮಂಕುತಿಮ್ಮ ॥**

ವಕ್ರಗಳನೆಣಿಸುವುದೇಕೆ ವಕ್ರಗಳನು+ಎಣಿಸುವುದು+ಏಕೆ,
ರೋಷಗೊಳ್ಳುವೆಯೇಂ=ರೋಷಗೊಳ್ಳುವೆ+ಯೇಂ, ಸೋದರರಲ್ತೆ=ಸೋದರರು+ಅಲ್ತೆ.
ಅಲ್ತೆ=ಅಲ್ಲವೇ.

ಮನುಷ್ಯರ ಸ್ವಭಾವಗಳ ವಕ್ರಗಳನ್ನು ಏಕೆ ನೀನು ಎಣಿಸುತ್ತೇಯೆ? ಭೂಮಿಯ ಮೇಲಿರುವ ಬೆಟ್ಟ, ಗುಡ್ಡ, ಕಣಿವೆಗಳ ಕಂಡು ನೀ ಕೋಪಗೊಳ್ಳುವೆಯಾ? ಸಮುದ್ರದಲ್ಲಿ ಹಾಲಾಹಲವೆಂಬ ವಿಷ ಮತ್ತು ಅಮೃತ, ಸಹೋದರರಲ್ಲವೇ ಎಂದು, ಕ್ಷೀರಸಾಗರದ ಗರ್ಭದಿಂದ ಸಮುದ್ರ ಮಂಥನ ಕಾಲದಲ್ಲಿ ವಿಷ ಮತ್ತು ಅಮೃತವು ಸಹೋದರರಂತೆ ಹೊರಬಂದಿದ್ದನ್ನು ನೆನಪಿಸುತ್ತಾರೆ. ಈ ಏರುತಗ್ಗುಗಳು ಈ ಜಗತ್ತಿನಲ್ಲಿ ಸಹಜವಾಗೇ ಇವೆ, ಅದನ್ನು ಅರಿತು ಒಗ್ಗಿಕೊಳ್ಳುವುದೇ ಸಹಜ, ಎಂದು ಪ್ರಸ್ತಾಪ ಮಾಡಿದ್ದಾರೆ ಮಾನ್ಯ ಗುಂಡಪ್ಪನವರು.

ಮನುಷ್ಯ ಹಲವಾರು ಗುಣಗಳ ಗಣಿ, ಅವನಲ್ಲಿ ಎಲ್ಲವೂ ಇದೆ. ವಕ್ರ ಬುದ್ಧಿ, ಉದಾತ್ತ ಬುದ್ಧಿ, ಪ್ರೇಮ ಭರಿತ ಭಾವ, ತಮಾಷೆ, ಕುಚೇಷ್ಟೆ, ವಿನೋದ, ದ್ವೇಷ, ಅಸೂಯೆ, ಕೋಪ, ಕ್ರೋಧ, ಅನುರಾಗ, ಅನುಕಂಪ, ಹೀಗೆ ಎಲ್ಲವೂ ಇವೆ. ಆದರೆ ಎಲ್ಲ ಗುಣಗಳ ಪ್ರಮಾಣ (ratio) ಬೇರೆ ಬೇರೆ. ಎಲ್ಲ ಗುಣಗಳ ಪ್ರಮಾಣದ ರೇಖಾಚಿತ್ರವನ್ನು (graphic representation) ಎಳೆದರೆ, ಒಬ್ಬೊಬ್ಬರದು ಒಂದೊಂದು ಚಿತ್ರ ಇದು ಸ್ವಾಭಾವಿಕವಾಗಿಯೇ ಇರುವುದು. ಇದು ಸರಿ-ಇದು ತಪ್ಪು ಎಂದು ವಿಶ್ಲೇಷಣೆ ಮಾಡುವುದು ಅಥವಾ ಮಾನವರ ಗುಣಗಳಿಗೆ ನಮ್ಮದೇ ಆದ ವ್ಯಾಖ್ಯಾನವನ್ನೋ, ಪರಿಭಾಷೆಯನ್ನೂ ಕೊಡುವುದು ತಪ್ಪು. ಹೇಗೆ ಕ್ಷೀರಸಾಗರದ ಗರ್ಭದಿಂದ ಅಮೃತ ಮತ್ತು ಹಾಲಾಹಲವು ಹುಟ್ಟಿತೋ ಹಾಗೆಯೇ ಒಬ್ಬನೇ ಮನುಷ್ಯನಲ್ಲಿ ಬೇರೆ ಬೇರೆ ಗುಣಗಳು ಇರುತ್ತವೆ.

ಸಹಜವಾಗಿರುವ ಇವನ ಹಲವಾರು ಗುಣಗಳು ಬೇರೆ ಬೇರೆ ಸಮಯದಲ್ಲಿ ಬೇರೆ ಬೇರೆ ರೀತಿಯಲ್ಲಿ ಪ್ರಕಟವಾಗುತ್ತದೆ. ಒಂದೇ ವ್ಯಕ್ತಿ ಸಮಯಕ್ಕನುಗುಣವಾಗಿ, ತನ್ನಲ್ಲಿರುವ ಭಿನ್ನ ಭಿನ್ನವಾದ ಗುಣಗಳನ್ನು ವ್ಯಕ್ತಪಡಿಸುತ್ತಾನೆ. ಹಲಬಾರಿ ಇವನು ಧೀರನಂತೆಯೂ, ಉದಾತ್ತನಂತೆಯೂ ಕಂಡರೆ ಅದೇ ವ್ಯಕ್ತಿ ಬೇರೆ ಸಮಯದಲ್ಲಿ ಪುಕ್ಕಲನಂತೆಯೂ, ಜಿಪುಣನಂತೆಯೂ ಕಾಣುತ್ತಾನೆ. ಪ್ರೇಮ, ಪ್ರೀತಿಗಳ ಪುತ್ಥಳಿಯಂತೆ ಕಂಡವನೇ ದ್ವೇಷ ಕ್ರೋಧದ ಮೂರ್ತಿಯಂತೆ ಕಾಣುತ್ತಾನೆ.

ಪ್ರತೀ ಮನುಷ್ಯನಲ್ಲಿರುವ ಗುಣ ಮತ್ತು ಅವಗುಣಗಳು ತಮ್ಮ ಪ್ರಮಾಣದ ಆಧಾರದ ಮೇಲೆ ಒಂದು ವ್ಯಕ್ತಿಯ ವ್ಯಕ್ತಿತ್ವವನ್ನು ನಿರ್ಧರಿಸುತ್ತದೆ. ಕೆಲವು ವ್ಯಕ್ತಿಗಳಿಗೆ, ತಮ್ಮಲ್ಲಿರುವುದು ಅವಗುಣಗಳು ಎಂದು ಅರಿವೇ





ಆಗುವುದಿಲ್ಲ. ಕೆಲವರಿಗೆ ಅರಿವಾದರೂ, ಒಪ್ಪಿಕೊಳ್ಳುವುದಿಲ್ಲ, ಒಪ್ಪಿಕೊಂಡರೂ ತಿದ್ದಿಕೊಳ್ಳುವುದಿಲ್ಲ. ಹಲವರು ಅರಿತುಕೊಳ್ಳುತ್ತಾರೆ ಆದರೆ ತಮ್ಮ ಅವಗುಣಗಳಲ್ಲಿ ಎಷ್ಟು ಮುಳುಗಿರುತ್ತಾರೆ ಎಂದರೆ, ಹಲವಾರು ಕಾರಣಗಳಿಂದ ಅವರಿಗೆ ಅವುಗಳಿಂದ ಹೊರಬರಲು ಸಾಧ್ಯವಾಗುವುದಿಲ್ಲ. ಕೇವಲ ಕೆಲವರು ತಮ್ಮ ಕೆಟ್ಟಗುಣಗಳನ್ನು ಅರಿತು ಒಪ್ಪಿಕೊಂಡು, ತಮ್ಮನ್ನು ಸುಧಾರಿಸಿಕೊಳ್ಳಲು ಪ್ರಾಮಾಣಿಕ ಪ್ರಯತ್ನ ಪಡುತ್ತಾರೆ ಮತ್ತು ಸಾಕಷ್ಟು ಸಫಲರೂ ಆಗುತ್ತಾರೆ.

ಪ್ರತಿಯೊಬ್ಬರೂ ತಮ್ಮ ಅವಲೋಕನ ಮಾಡಿಕೊಂಡು, ಅವಗುಣಗಳಿದ್ದರೆ, ಅವನ್ನು ಗುರುತಿಸಿ, ಒಪ್ಪಿಕೊಂಡು ತಮ್ಮನ್ನು ಸುಧಾರಿಸಿಕೊಳ್ಳಲು ಪ್ರಯತ್ನ ಮಾಡಿದರೆ ಒಳಿತು. ನಮ್ಮ ಪ್ರಯತ್ನವೂ ಅದೇ ನಿಟ್ಟಿನಲ್ಲಿ ಇದ್ದರೆ ನಾವೂ ಸುಧಾರಿಸಿಕೊಳ್ಳಬಹುದು.

**ಮುಕ್ತಕ-288** ರಾಮನಿರ್ದಂದು ರಾವಣನೊಬ್ಬನಿರ್ದನಲ।
ಭೀಮನಿರ್ದಂದು ದುಶ್ಶಾಸನನದೊರ್ವನ್॥
ಈ ಮಹಿಯೊಳನ್ಯಾಯಕಾರಿಯಿಲ್ಲದುದೆಂದು ?।
ರಾಮಭಟನಾಗು ನೀಂ – ಮಂಕುತಿಮ್ಮ॥

ರಾಮನಿರ್ದಂದು=ರಾಮನ್+ಇರ್ದಂದು, ರಾವಣನೊಬ್ಬನಿರ್ದನಲ=ರಾವಣನ್+ಒಬ್ಬನ್+ಇರ್ದನ್+ಅಲ,
ಭೀಮನಿರ್ದಂದು=ಭೀಮನ್+ಇರ್ದಂದು, ದುಶ್ಶಾಸನನದೊರ್ವನ್=ದುಶ್ಶಾಸನನ್+ಅದು+ಒರ್ವನ್,
ಮಹಿಯೊಳನ್ಯಾಯಕಾರಿಯಿಲ್ಲದುದೆಂದು=ಮಹಿಯೊಳು+ಅನ್ಯಾಯಕಾರಿ+ಇಲ್ಲದುದು+ಎಂದು.
ಮಹಿಯೊಳು=ಭೂಮಿಯೊಳು, ಜಗತ್ತಿನೊಳು.

ಅಂದು ತ್ರೇತಾಯುಗದಲ್ಲಿ ರಾಮನಿದ್ದಾಗಲೇ ರಾವಣನೂ ಇದ್ದನಲ್ಲ! ಹಾಗೆಯೇ, ದ್ವಾಪರದಲ್ಲಿ ಭೀಮನಿದ್ದಾಗ ಒಬ್ಬ ದುಶ್ಶಾಸನನೂ ಇದ್ದನಲ್ಲವೇ? ಈ ಭೂಮಿಯ ಮೇಲೆ ಈ ರೀತಿ ಸಜ್ಜನರಿದ್ದಾಗ, ಅನ್ಯಾಯಗಳನ್ನು ಮಾಡುವವರೂ ಇಲ್ಲದ ಕಾಲವೇ ಇರಲಿಲ್ಲ. ನೀನು ರಾಮನ ಭಂಟನಾಗು ಎಂದು ಒಂದು ಆದೇಶವನ್ನು ನೀಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಪುರಾಣದ ಕಾಲಕ್ಕೆ ದುರ್ಜನರ ಪಟ್ಟಿಯೇ ದೊಡ್ಡದಾಗಿದೆ. ನಾವು ಈಗ ಕಾಲ ಕೆಟ್ಟು ಹೋಯ್ತು ಎನ್ನುತ್ತೇವೆ. ಆದರೆ ಸರ್ವಕಾಲಕ್ಕೂ ಈ ಜಗತ್ತಿನಲ್ಲಿ ದುರ್ಜನರು ಇದ್ದರು. ಅದಕ್ಕೇ "ಜಾಲಿಯ ಮರದಂತೆ ಧರೆಯೊಳು ದುರ್ಜನರು' ಎಂದು ಪುರಂದರದಾಸರು ಎಂದೋ ಹಾಡಿದ್ದಾರೆ. ರಾವಣ, ಕುಂಭಕರ್ಣ, ಮುಂತಾದವರು ತ್ರೇತೆಯಲ್ಲಿ, ದುರ್ಯೋಧನ, ದುಶ್ಶಾಸನ, ಕೀಚಕ, ಕಂಸ ಜರಾಸಂಧ ಮುಂತಾದವರು ದ್ವಾಪರದಲ್ಲಿದ್ದ ದುರ್ಜನರಲ್ಲಿ ಹಲವರು. ಸಜ್ಜನರಲ್ಲಿ, ಶಬರಿ, ಗುಹ, ವಿಭೀಷಣ, ಹನುಮಂತ, ಸುಗ್ರೀವ, ವಿಶ್ವಾಮಿತ್ರ

| ನೀತಿ ನಿರ್ಣಯ 284-290 ಕಗ್ಗ ರಸಧಾರೆ-2 |
|---|

ಮುಂತಾದವರು ತ್ರೇತೆಯಲ್ಲಿಯೂ, ಭೀಷ್ಮ, ವಿಧುರ, ಯುಧಿಷ್ಠಿರ, ವಸುದೇವ, ಅಕ್ರೂರ, ದ್ರುಪದನಂತಹ ಸಜ್ಜನರು ದ್ವಾಪರದಲ್ಲೂ ಇರಲಿಲ್ಲವೇ?

ಹಾಗೆಯೇ ಈ ಜಗತ್ತಿನಲ್ಲಿ ಸಜ್ಜನರು ಮತ್ತು ದುರ್ಜನರು ಸದಾಕಾಲ ಇದ್ದೇ ಇರುತ್ತಾರಲ್ಲವೇ? ಈಗಂತೂ ದುರ್ಜನರರನ್ನು ಹುಡುಕಲೇ ಬೇಕಿಲ್ಲ. ಅವರ ಪಟ್ಟಿಯನ್ನು ಮಾಡಲಾಗುವುದೇ ಇಲ್ಲ. ಪ್ರತಿಯೊಬ್ಬರೂ ಪೈಪೋಟಿಯಲ್ಲಿ ಆ ಪಟ್ಟಿಯಲ್ಲಿ ಸೇರಲು ಕಾತರ ಪಡುತ್ತಿದ್ದಾರೆ. ಸಜ್ಜನರೆಂಬುವರನ್ನು ಹಗಲುಹೊತ್ತು ದರ್ಬೀನು ಹಾಕಿಕೊಂಡು ನೋಡಿದರೂ ಸಿಗುವುದು ವಿರಳ. ಇಲ್ಲವೆಂದಲ್ಲ, ಇಂದಿಗೂ ಸಜ್ಜನರು ಇದ್ದಾರೆ. ಆದರೆ ಅವರ ಸಜ್ಜನಿಕೆಗೆ ಕಿಂಚಿತ್ತೂ ಬೆಲೆಯಿಲ್ಲ ಇಂದು ಸೌಜನ್ಯ ತೋರಿದರೆ, ಇವನಿಗೆಲ್ಲೋ ಹುಚ್ಚು ಎಂಬ ಬಿರುದು ಬರುತ್ತದೆ.

"ಈ ಮಹಿಯೊಳನ್ಯಾಯಕಾರಿಯಿಲ್ಲದುದೆಂದು' ಎಂದು ಅನ್ಯಾಯಕಾರಿಗಳು ಈ ಜಗತ್ತಿನಲ್ಲಿ ಸದಾಕಾಲವೂ ಇದ್ದರು ಮತ್ತು ಇರುತ್ತಾರೆ ಎಂದು ಹೇಳುತ್ತಾ ಮಾನ್ಯ ಗುಂಡಪ್ಪನವರು ರಾಮ ಭಂಟನಾಗು ಎಂದು ಒಂದು ಆದೇಶವನ್ನು ನೀಡಿದ್ದಾರೆ. ಸಾಮಾನ್ಯವಾಗಿ ರಾಮಭಂಟನೆಂದರೆ ಹನುಮಂತ. ಅವನು ಅನ್ಯಾಯದ ವಿರುದ್ಧ ಹೋರಾಡಿದವನಾದ್ದಾರಿಂದ ನೀನೂ ಸಹ ಹಾಗೆಯೇ ಅನ್ಯಾಯದ ವಿರುದ್ಧ ಹೋರಾಡು ಎನ್ನುತ್ತಾರೆ. ಆದರೆ ರಾಮ ಎಂದರೆ 'ರಮಯತೀತಿ ರಾಮಃ' ಎಂದು ಅರ್ಥ. ರಮ ಎಂದರೂ ಅದೇ ಅರ್ಥ. ನಮ್ಮ ಮನಸ್ಸಿಗೆ ರಮ್ಯವಾಗಿ ಹಿತವಾಗಿ ಕಾಣುವುದೇ ರಾಮ ಅಥವಾ ರಮಾ. ಹಾಗಾಗಿ ಇಲ್ಲಿ ರಾಮ ಭಂಟನಾಗು ಎಂದಾಗ ಸರ್ವರ ಮನಸ್ಸಿಗೆ ಹಿತವನ್ನುಂಟುಮಾಡುವಂತಹ ಗುಣಗಳನ್ನು ಮತ್ತು ಅಂತಹ ಸ್ವಭಾವವನ್ನು ಬೆಳೆಸಿಕೋ ಎನ್ನುತ್ತಾರೆ ಮಾನ್ಯ ಗುಂಡಪ್ಪನವರು.

ವಾಚಕರೆ, ಇಂದಿನ ಜಗತ್ತಿನಲ್ಲಿ ಬಹಳ ಒಳ್ಳೆಯವರಾಗಿ ಇರುವುದೇ ಕಷ್ಟ. ಏಕೆಂದರೆ ನಮ್ಮ ಒಳ್ಳೆಯತನವನ್ನು ಉಪಯೋಗಿಸಿಕೊಂಡು ನಮಗೇ ಇರಿಯುವಂತವರೇ ಈ ಜಗತ್ತಿನಲ್ಲಿ ಅಧಿಕವಾಗಿರುವುದರಿಂದ, ನಾವು ನಮ್ಮ ಒಳ್ಳೆಯತನವನ್ನು ಬಿಡದೆ, ಪರರು ನಮ್ಮ ದುರುಪಯೋಗಪಡಿಸಿಕೊಳ್ಳದಂತೆ, ನಮಗೆ ಇರಿಯದಂತೆ ಜಾಗರೂಕರಾಗಿರಬೇಕು ಅಲ್ಲವೇ?

**ಮುಕ್ತಕ-289** **ಆಳನೀಳಗಳ ಕಾಣಲ್ಕಾಗಿಸದೆ ಮೊರೆವ |**

**ಬಾಳ ಕಡಲೊಳು ಮುಳುಗಿ ತಳದಿಂದಲೆದ್ದು ||**

**ಪೇಳುವರದಾರು ನ್ಯಾಯಾನ್ಯಾಯ ವಿವರಗಳ |**

**ಗಾಳಿಗಾಬರಿಯೆಲ್ಲ – ಮಂಕುತಿಮ್ಮ ||**

ಕಾಣಲ್ಕಾಗಿಸದೆ=ಕಾಣಲೆ+ಆಗಿಸದೆ, ತಳದಿಂದಲೆದ್ದು=ತಳದಿಂದಲಿ+ಎದ್ದು, ಪೇಳುವರದಾರು=ಪೇಳುವವರು+ಅದಾರು, ನ್ಯಾಯಾನ್ಯಾಯ=ನ್ಯಾಯ+ಅನ್ಯಾಯ.





ಜೀವನವನ್ನು ಸಾಗರ ಎಂದಿದ್ದಾರೆ. ಹೇಗೆ ಯಾರೂ ಕಡಲ ಒಳಹೊಕ್ಕು ಅದರ ಆಳ, ಉದ್ದ ಮತ್ತು ಅಗಲವನ್ನು ಕಂಡು ಹೇಳಲು ಸಾಧ್ಯವಿಲ್ಲವೋ, ಹಾಗೆಯೇ ಬದುಕೆಂಬ ಸಾಗರದ ಆಳಕ್ಕೆ ಹೊಕ್ಕು ಇದು ನ್ಯಾಯ, ಇದು ಅನ್ಯಾಯ ಎಂದು ಹೇಳುವವರಾರು? ಹಾಗೆ ಯಾರಾದರೂ ಹೇಳಿದರೆ, ಅದು ಕೇವಲ ಊಹಾಪೋಹ ಅಥವಾ ಹೆದರಿಕೆಯಿಂದ ಹೇಳಿದ ಮಾತು ಎಂದು ತಿಳಿಯಬೇಕು ಎಂದು ಪ್ರಸ್ತಾಪಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ನಿರಂತರ ಬದಲಾಗುತ್ತಿರುವ ಮಾನವನ ಬದುಕಿನ ಪರಿಯನ್ನು ಯಾರೂ ಹೀಗೇ ಎಂದು ಖಡಾಖಂಡಿತವಾಗಿ ಹೇಳಲು ಸಾಧ್ಯವಿಲ್ಲ. ಈ ಜೀವನಕ್ಕೆ ರೂಪಕೊಡುವುದು ಏನು, ಎಂದು ನೋಡೋಣ. ಮನುಷ್ಯರ ಮನಸ್ಸಿನಲ್ಲಿ ನಡೆಯುವ ವಿಚಾರಗಳೇ ಈ ಜಗದ್ವ್ಯಾಪಾರವನ್ನು ರೂಪಿಸುತ್ತದೆ. ಅತೀ ಗೋಜಲು ಗೋಜಲಾದ ಮನುಜರ ಮನಸ್ಸುಗಳು ಮತ್ತು ಅಂತಹ ಕೋಟಿ ಕೋಟಿ ಮನುಷ್ಯರ ಮನಸ್ಸುಗಳು ರೂಪಿಸುವ ಈ ಜಗದ್ವ್ಯಾಪಾರ ಇನ್ನೆಷ್ಟು ಗೋಜಲಾಗಿರಬೇಕು. ಅಂತಹ ಸಿಕ್ಕುಸಿಕ್ಕಾದ ಜಗದ್ವ್ಯಾಪಾರವನ್ನೇ ಭವಸಾಗರ ಎಂದಿದ್ದಾರೆ. ಇದನ್ನು ಅರ್ಥ ಮಾಡಿಕೊಳ್ಳುವುದು ಹೇಗೆ? ಸಾಧ್ಯವೇ ಇಲ್ಲ.

ಏಕೆಂದರೆ ಮಿತವಾದ ಜ್ಞಾನ ಮತ್ತು ಬುದ್ಧಿಶಕ್ತಿಯನ್ನು ಹೊಂದಿರುವ ನಾವು ಅಗಾಧವಾದ ಮತ್ತು ಪ್ರತಿ ನಿತ್ಯ ಪ್ರತಿ ಘಳಿಗೆ ಬದಲಾಗುತ್ತಿರುವ ಈ ಬದುಕಿನ ಆಳವನ್ನಾಗಲೀ ಅಗಲವನ್ನಾಗಲೀ ಅಳೆದು ಅರ್ಥಮಾಡಿಕೊಳ್ಳಲು ಸಾಧ್ಯವೇ ಇಲ್ಲ. ಇದು ಅರ್ಥವೇ ಆಗದಿದ್ದ ಮೇಲೆ, ಇದು ಸರಿ ಅಥವಾ ಇದು ತಪ್ಪು ಎಂದು ಹೇಳುವುದು ಹೇಗೆ? ಯಾವುದೂ ಸಂಪೂರ್ಣ ಅರ್ಥವಾಗದೆ, ನಾವೇ ಅಯೋಮಯ ಸ್ಥಿತಿಯಲ್ಲಿದ್ದೇವೆ. ಹಾಗಿದ್ದ ಮೇಲೆ ಇದು ನ್ಯಾಯ, ಅದು ಅನ್ಯಾಯ ಎಂದು ಹೇಳುವುದು ಸರಿಯೇ? ಹಾಗೆ ಏನಾದರೂ ಹೇಳಿದರೆ, ಅದು ಅರೆಬರೆ ತಿಳುವಳಿಕೆಯಿಂದ ಹೇಳುವ, ಯಾರೋ ಹೇಳಿದ ಗಾಳಿ ಮಾತಿನಂತೆ ಇರುತ್ತದೆ. ಇದು ಸರಿಯಲ್ಲ. ಏಕೆಂದರೆ ಅಂತಹ ವಿಚಾರಗಳು ಜನಮಾನಸದಲ್ಲಿ ಗಾಬರಿಯನ್ನು ಉಂಟುಮಾಡುತ್ತದೆ.

ಇಲ್ಲಿ ನಡೆಯುವ ವಿದ್ಯಮಾನಗಳಿಗೆ ಅರೆಬರೆ ತಿಳುವಳಿಕೆಯಿಂದ ವ್ಯಾಖ್ಯಾನವನ್ನು ಮಾಡುವುದು ಬುದ್ಧಿವಂತರ ಲಕ್ಷಣವಲ್ಲ. ನಾವು ನೋಡುವ ಮತ್ತು ಅರಿತುಕೊಳ್ಳುವ ವಿಷಯಕ್ಕೆ ಬೇರೆ ಬೇರೆ ಆಯಾಮಗಳೂ ಇರಬಹುದಲ್ಲವೇ? ಸಮಗ್ರವಾಗಿ ಅರಿಯದೆ ವಿಶ್ಲೇಷಣೆ ಮಾಡುವುದು ತಪ್ಪು ಮತ್ತು ಅದು ಅನರ್ಥಗಳಿಗೆ ಕಾರಣವಾಗುತ್ತದೆ. ವಿಚಾರವನ್ನು ಸಂಪೂರ್ಣ ಅರಿಯಬೇಕು. ನಮ್ಮ ಅನುಭವಕ್ಕೆ ತಂದುಕೊಳ್ಳಬೇಕು ಮತ್ತು ನಮಗೆ ಅದು ಸಂಪೂರ್ಣ ಸತ್ಯವೆಂದು ಅರಿವಾದಾಗ ಮಾತ್ರ ಅದನ್ನು ಹೇಳಬೇಕು. ಅಂತಹ ಪ್ರಯತ್ನ ನಮ್ಮಲ್ಲಿ ಸದಾಕಾಲ ನಡೆಯಬೇಕು.





**ಮುಕ್ತಕ-290**

**ಸಕ್ಕರೆಯ ಭಕ್ಷ್ಯವನು ಮಕ್ಕಳೆದುರಿಗೆ ಕೈಗೆ |**
**ಸಿಕ್ಕಿವಂತಿರಿಸಿ ಕದ್ದರೆ ಗದ್ದರಿಪುದೇಂ ? ||**
**ತಕ್ಕುದಲ್ಲದಪೇಕ್ಷೆಗೇಕೆ ಮದ್ಯವ ಕುಡಿಸು |**
**ತುಕ್ಕಿಸುವನದನು ವಿಧಿ – ಮಂಕುತಿಮ್ಮ ||**

ಮಕ್ಕಳೆದುರಿಗೆ=ಮಕ್ಕಳ+ಎದುರಿಗೆ, ಸಿಕ್ಕಿವಂತಿರಿಸಿ=ಸಿಕ್ಕುವಂತೆ+ಇರಿಸಿ,

ಗದ್ದರಿಪುದೇಂ=ಗದ್ದರಿಪುದು+ಅದೇಂ, ತಕ್ಕುದಲ್ಲದಪೇಕ್ಷೆಗೇಕೆ ತಕ್ಕುದು+ಅಲ್ಲದ+ಅಪೇಕ್ಷೆಗೆ+ಏಕೆ,

ಕುಡಿಸುತುಕ್ಕಿಸುವನದನು=ಕುಡಿಸುತ+ಉಕ್ಕಿಸುವನು+ಅದನು.

ತಕ್ಕುದಲ್ಲದ=ಯೋಗ್ಯವಲ್ಲದ.

ಮಿಠಾಯಿಯನ್ನು ಮಕ್ಕಳ ಎದುರಿಗೆ ಇರಿಸಿ, ಅವರು ಅದನ್ನು ಕದ್ದು ತಿಂದರೆ ಗದರಿಸುವಂತೆ ಯೋಗ್ಯವಲ್ಲದ ಆಸೆಗಳಿಗೆ ನಮ್ಮ ಮನಸ್ಸುಗಳಲ್ಲಿ ಇಂಬುಕೊಡುವಂತೆ ಈ ಜಗತ್ತಿನಲ್ಲಿ ಎಲ್ಲ ವಿಷಯಗಳನ್ನು ಇಟ್ಟು, ಅವುಗಳನ್ನು ಪಡೆಯಲು ನಮ್ಮ ಮನಸ್ಸನ್ನು ಹೆಂಡಕುಡಿದವನಂತೆ ಆಡಿಸುತ್ತಿದೆ 'ವಿಧಿ' ಎಂದು ಜೀವನದ ವಾಸ್ತವವನ್ನು ಪ್ರಸ್ತುತ ಪಡಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಈ ಜಗತ್ತಿನಲ್ಲಿ ಎಲ್ಲ ವಸ್ತುಗಳನ್ನೂ ಸೃಷ್ಟಿಮಾಡಿ, ನಮ್ಮನ್ನೂ ಸೃಷ್ಟಿಮಾಡಿ, ಆ ವಸ್ತುಗಳಲ್ಲಿ ನಮಗೆ ಆಸೆಯನ್ನೂ ಇಟ್ಟು, ಹಾಗೆ ನಾವು ವಸ್ತು ವಿಷಯ ಮತ್ತು ವ್ಯಕ್ತಿಗಳಿಗೆ ಆಸೆಪಟ್ಟಾಗ "ಆಸೆಪಡುವುದು ಸರಿಯಲ್ಲ" "ಆಸೆಯೇ ದುಃಖಕ್ಕೆ ಮೂಲ" "ಕಾಮಾತುರಾಣಾಂ ನ ಭಯಂ ನ ಲಜ್ಜಾ " ಮುಂತಾದವುಗಳಾಗಿ ನಮ್ಮನ್ನು ಹೆದರಿಸುವುದೇತಕ್ಕೆ ಎಂಬುದು ಒಂದು ಗಂಭೀರವಾದ ಪ್ರಶ್ನೆ.

ಆ ಪರಮಾತ್ಮ ಈ ಜಗತ್ತಿನ ಎಲ್ಲ ವಸ್ತುಗಳನ್ನೂ ಸೃಷ್ಟಿಸಿರುವುದು ತನ್ನ ಆನಂದಕ್ಕಾಗಿಯೇ ಎನ್ನುವ ವಾದ ಉಂಟು. ನಮ್ಮನ್ನೂ ಸಹ ಇತರ ಪ್ರಾಣಿಗಳಂತೆ ಅಥವಾ ಜೀವಿಗಳಂತೆ ಸೃಷ್ಟಿಸಿದ್ದಾನೆ. ಎಲ್ಲ ಪ್ರಾಣಿಗಳಲ್ಲಿಯೂ ಆ ಪರಮಾತ್ಮನೇ ಚೈತನ್ಯ ರೂಪದಲ್ಲಿದ್ದು ಈ ಜಗತ್ತಿನ ಎಲ್ಲವನ್ನೂ ಅನುಭವಿಸುತ್ತಿದ್ದಾನೆ. ಇದೇ ಅರ್ಥದಲ್ಲಿಯೇ 'ಈಶಾವಾಸ್ಯಮಿದಂ ಸರ್ವಂ ಯತ್ತಿಂಚಿತ್ ಜಗತ್ಯಾಂ ಜಗತ್? ತೇನ ತ್ಯಕ್ತನ ಭುಂಜೀತಾ ಮಾ ಗೃದಃ ಕಸ್ಯಸಿದ್ಧನಂ" ಎನ್ನುತ್ತದೆ ಈಶಾವಾಸ್ಯೋಪನಿಷತ್ತು.

ಆದರೆ ಮನುಷ್ಯ "ಈ ಜಗತ್ತಿನ ಎಲ್ಲವೂ ತನ್ನ ಉಪಯೋಗಕ್ಕಾಗಿಯೇ ಸೃಷ್ಟಿಸಲ್ಪಟ್ಟಿದೆ' ಎಂದುಕೊಂಡಿದ್ದಾನೆ. ಇದು ಅಹಂಕಾರ ಜನಿತವಾದ ಭಾವ. ಈ ಅಹಂಕಾರವೇ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ ಹೇಳುವ "ಮದ್ಯ". ಹೀಗೆ ಈ ಅಹಂಕಾರವೆಂಬ ಮದ್ಯವನ್ನು ನಮಗೆ ಕುಡಿಸಿ, ಆ 'ವಿಧಿ' ನಮ್ಮನ್ನೆಲ್ಲ ಆಸೆಗಳಿಗೆ ದಾಸರನ್ನಾಗಿಸಿ, ನಮ್ಮನ್ನು ಒಂದು ಬಿಡಿಸಲಾಗದ ಸಂಕೋಲೆಯಲ್ಲಿ ಸಿಕ್ಕಿಸಿಬಿಟ್ಟಿದೆ. ಇದು ಬಹಳ ಭಯಾನಕ.

ಇದರಿಂದ ಹೊರಬರುವ ಪ್ರಯತ್ನವೇ ಒಟ್ಟು ಆಧ್ಯಾತ್ಮದ ಗುರಿ. ನಾವು ಎಲ್ಲವನ್ನೂ ಒಂದು ಸಮರ್ಪಣಾ ಭಾವದಿಂದ ಸ್ವೀಕರಿಸಿ ದಾಗ ಅಹಂಕಾರದ ಪ್ರಭಾವ ಕಡಿಮೆಯಾಗಿ ನಮಗೆ ದುಃಖದ ಕಾರಣವೂ ಇಲ್ಲದಂತಾದಾಗುತ್ತದೆ. ಆಸೆಗಳಿಂದ ಉದ್ಭವವಾಗುವ ದುಃಖದ ಪ್ರಮಾಣ ಮತ್ತು ಪರಿಣಾಮ ಕಡಿಮೆಯಾಗಬೇಕಾದರೆ, ಅಂತಹ ಪ್ರಯತ್ನವನ್ನು ನಾವೆಲ್ಲರೂ ಮಾಡಬೇಕು.

# ವಾಸನೆ ತಾಯಿ-ಸಂದರ್ಭ ತಂದೆ 291-293

**ಮುಕ್ತಕ-291**

**ಬೀಸಿದಲ್ಲದೆ ಬೂದಿಕವಿದ ಕಿಡಿಯುರಿದೀತೆ।**
**ಕೈಸೋಕದಿರೆ ಕೈಯ ಸಪ್ಪುಳಾದೀತೆ॥**
**ವಾಸನೆಯ ಮಾತೆಯಾಶೆಗೆ ಪಿತನು ಸಂದರ್ಭ।**
**ದೋಷವೊಳಗೋ ಹೊರಗೋ ? - ಮಂಕುತಿಮ್ಮ॥**

ಬೀಸಿದಲ್ಲದೆ=ಬೀಸಿದ+ಅಲ್ಲದೆ, ಕಿಡಿಯುರಿದೀತೆ=ಕಿಡಿ+ಉರಿದೀತೆ, ಸಪ್ಪುಳಾದೀತೆ=ಸಪ್ಪಳ+ಆದೀತೆ, ಮಾತೆಯಾಶೆಗೆ=ಮಾತೆಯು+ಆಶೆಗೆ, ದೋಷವೊಳಗೋ-ದೋಷವು+ಒಳಗೋ.

ಬೂದಿ ಮುಚ್ಚಿದ ಕೆಂಡಕ್ಕೆ ಗಾಳಿ ಬೀಸಿದರೆ ಮತ್ತೆ ಉರಿಯುತ್ತದೆ. ಹಾಗೆಯೇ ಎರಡೂ ಕೈಗಳು ಸೋಕಿದರೆ ಸಪ್ಪಳವಾಗುತ್ತದೆ. ಇದರಂತೆಯೇ ನಮ್ಮ ಪ್ರತೀ ಕ್ರಿಯೆಗೂ ನಾವು ಹೊತ್ತು ತಂದ ವಾಸನೆಯೇ ತಾಯಿ ಮತ್ತು ನಾವು ಇರುವ ಸಂದರ್ಭವೇ ತಂದೆ. ಇದರಲ್ಲಿ ದೋಷವು ಹೊತ್ತು ತಂದದ್ದರಲ್ಲೋ ಅಥವಾ ಇಲ್ಲಿ ಗಳಿಸಿಕೊಂಡದ್ದರಲ್ಲೋ ಎಂದು ಒಂದು ಗಹನವಾದ ಪ್ರಶ್ನೆಯನ್ನು ನಮ್ಮ ಮುಂದಿಡುತ್ತಾರೆ ಮಾನ್ಯ ಗುಂಡಪ್ಪನವರು,

ನಮ್ಮ ಬದುಕಿನಲ್ಲಿ ನಡೆಯುವ ಕಾರ್ಯಗಳನ್ನು ವಿಶ್ಲೇಷಿಸುತ್ತಾ, ನಮ್ಮ ಮೂಲ ಸ್ವಭಾವ ಅಥವಾ ಗುಣಗಳು ನಾವು ಪೂರ್ವಜನ್ಮದಿಂದ ಹೊತ್ತು ತಂದಿರುತ್ತೇವೆ ಎನ್ನುತ್ತಾರೆ. ಆ ರೀತಿ ಹೊತ್ತು ತಂದ ವಾಸನೆಗಳೇ ನಮ್ಮ ಮನಸ್ಸುಗಳಲ್ಲಿ ಆಶೆಗಳು ಉದ್ಭವವಾಗಲು ಕಾರಣ, ಹಾಗಾಗಿ ಆ ವಾಸನೆಗಳೇ ನಮ್ಮ ಆಸೆಗಳ ತಾಯಿ. ಹೊತ್ತುಕೊಂಡು ಬಂದಾಕ್ಷಣ ಪ್ರಕಟವಾಗಲು ಸಾಧ್ಯವಿಲ್ಲ. ಅದಕ್ಕೆ ಸರಿಯಾದ ಕ್ಷೇತ್ರ ಬೇಕು. ಆ ಕ್ಷೇತ್ರವೇ ನಮ್ಮ ಬದುಕಿನಲ್ಲಿ ಬರುವ ಸಂದರ್ಭಗಳು. ನಮ್ಮ ಪೂರ್ವ ವಾಸನೆಗಳು ಮತ್ತು ಈಗ ಒದಗುವ ಸಂದರ್ಭಗಳ ಸಂಮಿಲನದಿಂದಾಗುವ ನಮ್ಮ ಕೆಲಸಗಳು. ಹಾಗಾಗಿ ವಾಸನೆ ತಾಯಿ, ಸಂದರ್ಭ ತಂದೆ, ಎಂದು ವಿಶ್ಲೇಷಣೆ ಮಾಡಿದ್ದಾರೆ ಮಾನ್ಯ ಗುಂಡಪ್ಪನವರು.

ಬಹಳಷ್ಟು ಬಾರಿ ನಮ್ಮ ಮನಸ್ಸಿನಲ್ಲಿ ಪ್ರಶ್ನೆಗಳು ಉದ್ಭವವಾಗುತ್ತವೆ. 'ಏಕೆ ಹೀಗೆ' ಎಂಬುದು ಒಂದು ಮುಖ್ಯ ಪ್ರಶ್ನೆ, ಪ್ರತೀ ಬಾರಿಯೂ ಈ ಪ್ರಶ್ನೆಗೆ ಉತ್ತರವಿರುವುದಿಲ್ಲ. ನಮಗೆ ಅರ್ಥವಾಗದ ಪೂರ್ವ ಜನ್ಮದ ವಾಸನೆಗಳು ಮತ್ತು ಈ ಜನ್ಮದಲ್ಲಿ ನಾವು ಹುಟ್ಟಿನಂದಿನಿಂದ ನಡೆದ ಘಟನೆಗಳು ನಮ್ಮ ಮನಸ್ಸಿನ ಮಾಡಿದ ಮೇಲಿನ





ಪ್ರಭಾವ ಮತ್ತು ಇವೆರಡರ ಸಂಮಿಲನದಿಂದಾಗುವ ನಮ್ಮ ಕ್ರಿಯೆ ಅಥವಾ ನಡವಳಿಕೆ, ಹೇಗೆ ಇದನ್ನು ಅರ್ಥಮಾಡಿಕೊಳ್ಳುವುದು, ಸಾಧ್ಯವೇ ಇಲ್ಲ.

ಆದ್ದರಿಂದಲೇ ನಮ್ಮ ಪೂರ್ವಜರು, ಜ್ಞಾನಿಗಳು, ಋಷಿ, ಮುನಿಗಳು ನಾವು ಜೀವನದ ಹಾದಿಯಲ್ಲಿ ಏನು ಮಾಡಬೇಕು, ಏನು ಮಾಡಬಾರದು, ನಮ್ಮನ್ನು ನಾವು ಅರಿತುಕೊಳ್ಳುವುದು ಹೇಗೆ, ನಮ್ಮನ್ನು 'ನಾವೇ' ತಿದ್ದಿಕೊಳ್ಳುವುದು ಹೇಗೆ, ಎಂದು ಒಂದು ಮೇಲ್ಪಂಕ್ತಿಯನ್ನು ಹಾಕಿ ಕೊಟ್ಟಿದ್ದಾರೆ. ನಮ್ಮ ಪೂರ್ವ ವಾಸನೆಗಳನ್ನು

ತಿದ್ದಿಕೊಳ್ಳುವುದು, ಅಳಿಸಿಹಾಕುವುದು, ಹೊಸ ಮತ್ತು ಸೂಕ್ತ ಸ್ವಭಾವವನ್ನು ಹೇಗೆ ಬೆಳೆಸಿಕೊಳ್ಳುವುದು ಎನ್ನುವುದಕ್ಕೆ ಮಾರ್ಗ ತೋರಿದ್ದಾರೆ.

ಆದರೆ ಇಂದು ನಮಗದಾವುದೂ ಬೇಕಿಲ್ಲ. ಯಾಂತ್ರಿಕ ಜೀವನದಲ್ಲಿ ಅದನ್ನೆಲ್ಲಾ ಅರಿತುಕೊಳ್ಳಲು ಯಾರಿಗೂ ಸಮಯವಿಲ್ಲ. ಸಮಯವಿದ್ದರೂ ಅದನ್ನೆಲ್ಲ ಅರಿತುಕೊಳ್ಳಲು ಮನಸ್ಸಿಲ್ಲ. ಇರುವುದನ್ನು ಬದಲಾಯಿಸಿಕೊಳ್ಳಲು ನಮಗೆ ಭಯವಾಗುತ್ತದೆ. ಇರುವುದು ಒಂದು ಬದುಕು, ಚೆನ್ನಾಗಿ ಮಜಾ ಮಾಡಿ ಹೋಗುವಾ ಎನ್ನುವ ಅನಿಸಿಕೆ. ಹಾಗಾಗಿ ಬದಲಾವಣೆ ಸಾಧ್ಯವಿಲ್ಲ. ಸತ್ಯವಾಗಿ ನಮ್ಮನ್ನು ನಾವು ಅರಿತುಕೊಳ್ಳಲು, ಬದಲಾಯಿಸಿಕೊಳ್ಳಲು ಪ್ರಯತ್ನಪಟ್ಟರೆ, ನಾವೂ ಸಹ ಬೂದಿ ಮುಚ್ಚಿದ ಕೆಂಡ ಗಾಳಿ ಬೀಸಿದರೆ ಹೇಗೆ ಪ್ರಜ್ವಲವಾಗಿ ಉರಿಯುತ್ತದೋ, ಹಾಗೆ ಪ್ರಜ್ವಲಿಸಬಹುದು, ಬೆಳಗಬಹುದು.

**ಮುಕ್ತಕ-292**

**ತಿದ್ದಿಕೊಳೊ ನಿನ್ನ ನೀಂ; ಜಗವ ತಿದ್ದುವುದಿರಲಿ।**
**ತಿದ್ದಿಕೆಗಮೊಂದು ಮಿತಿಯುಂಟು ಮರೆಯದಿರು॥**
**ಉದ್ದ ನೀಂ ಬೆರಳನಿತು ಬೆಳೆದೇಯೆ ಸಾವಿಂದ।**
**ಸ್ಪರ್ಧಿಯೇ ತ್ರಿವಿಕ್ರಮಗೆ? - ಮಂಕುತಿಮ್ಮ॥**

ತಿದ್ದುವುದಿರಲಿ=ತಿದ್ದುವುದು+ಇರಲಿ, ತಿದ್ದಿಕೆಗಮೊಂದು=ತಿದ್ದಿಕೆಗೆ+ಒಂದು, ಬೆರಳನಿತು=ಬೆರಳ್+ಇನಿತು, ಮಿತಿಯುಂಟು=ಮಿತಿ+ಉಂಟು.
ಬೆರಳನಿತು=ಬೆರಳಷ್ಟು, ಸಾಮಿಂದ=ಸ್ವಪ್ರಯತ್ನದಿಂದ.

ಪುರಾಣದಲ್ಲಿ ಮಹಾವಿಷ್ಣುವು ವಾಮನಾವತಾರದಲ್ಲಿ ತನ್ನ ಸ್ವಶಕ್ತಿಯಿಂದ ತ್ರಿವಿಕ್ರಮನಾಗಿ ಬೆಳೆದು ಭೂಮ್ಯಾಕಾಶವನ್ನು ಎರಡು ಹೆಜ್ಜೆಗಳಲ್ಲಿ ಅಳೆದು, ಮೂರನೇ ಹೆಜ್ಜೆಯನ್ನು 'ಬಲಿ'ಯ ಶಿರದ ಮೇಲಿರಿಸಿ ಅವನಿಗೆ ಪಾತಾಳದಲ್ಲಿ ಸ್ಥಳ ಕಲ್ಪಿಸಿದ ಕಥೆಯಿದೆ. ನೀನು ಅವನಿಗೆ ಸ್ಪರ್ಧಿಯಾಗಲು ಸಾಧ್ಯವೇ? ಏಕೆಂದರೆ ನೀನು ಎಷ್ಟೇ ಪ್ರಯತ್ನಪಟ್ಟರೂ ಒಂದು ಬೆರಳುದ್ದ ಬೆಳೆಯಬಹುದು. ನಿನ್ನ ಬೆಳವಣಿಗೆಗೆ ಒಂದು ಮಿತಿಯುಂಟು. ನೀನು ನಿನ್ನ ಮಿತಿಯಲ್ಲಿರು. ಜಗತ್ತಿನ ಡೊಂಕನ್ನು ತಿದ್ದಲು ನಿನಗೆ ಸಾಧ್ಯವೇ? ಬದಲಾಗಿ 'ನಿನ್ನನ್ನೇ ನೀನು ತಿದ್ದಿಕೋ' ಎಂದು ಒಂದು ಸ್ಪಷ್ಟ ಆದೇಶ ನೀಡಿದ್ದಾರೆ ಮಾನ್ಯ ಗುಂಡಪ್ಪನವರು ನಮಗೆ ಈ ಮುಕ್ತಕದಲ್ಲಿ.

ಸಾವಿರಾರು ನ್ಯೂನತೆಗಳನ್ನು ನಮಲ್ಲೇ ಇಟ್ಟುಕೊಂಡು ಅನ್ಯರ ದೋಷಗಳನ್ನು ಎತ್ತಿ ತೋರುವುದು ಸರಿಯೇ? 'ಇವನ ಎಲೇಲಿ ಆನೆ ಸತ್ ಬಿದ್ದಿದ್ರೂ ಬೇರೇವ್ರ ಎಲೇಲಿ ನೊಣ ತೋರಿಸ್ತಾನೆ' ಎನ್ನುವ ಮಾತು ನಾವು ಬಹಳಷ್ಟು ಬಾರಿ ಕೇಳುತ್ತೇವೆ. ಕೊರತೆಗಳು ನಮ್ಮಲ್ಲಿಯೇ ಸಾಕಷ್ಟು ಇರುವಾಗ ಅವುಗಳನ್ನು ಸರಿಪಡಿಸಿಕೊಳ್ಳದೆ ಅಥವಾ ಸರಿಪಡಿಸಿಕೊಳ್ಳುವ ಪ್ರಯತ್ನವನ್ನೂ ಮಾಡದೆ ಪರರ ದೋಷಗಳನ್ನು ಎತ್ತಿ ತೋರುವುದು, ಅದರ ಬಗ್ಗೆ ಚರ್ಚೆ ಮಾಡುವುದು ಮತ್ತು ಅವರಿಗೆ ಪುಕ್ಕಟ್ಟೆಯಾಗಿ ಸಲಹೆಗಳನ್ನು ಕೊಡುವುದು ನಮ್ಮೆಲ್ಲರಲ್ಲೂ ಸರ್ವೇ ಸಾಮಾನ್ಯವಾಗಿ ಕಾಣುವಂತಹ ಗುಣ. ಇದು ಖಂಡಿತಾ ಸರಿಯಲ್ಲ.

“ನಿನ್ನನ್ನು ನೀನು ಮೊದಲು ತಿದ್ದಿಕೊಳ್ಳೋ' ಎಂದು ಆದೇಶ ನೀಡಿದ್ದಾರೆ ಇಲ್ಲಿ. ಹೌದು ನಮ್ಮ ಮನಸ್ಸು ಬುದ್ಧಿಗಳನ್ನು ಶುದ್ಧಿಮಾಡಿಕೊಳ್ಳಬೇಕು. ಸದಾಕಾಲ ಆತ್ಮಾವಲೋಕನ ಮಾಡಿಕೊಳ್ಳುತ್ತಿರಬೇಕು. ಈ ಕ್ರಮದಲ್ಲಿ ನಾವು ಆಂತರಿಕವಾಗಿ ಬೆಳೆಯಬೇಕು. ನಾವು ಹುಟ್ಟಿನಿಂದ ಹೊತ್ತು ತಂದ ಗುಣಗಳನ್ನು ಸರಿಪಡಿಸಿಕೊಂಡು ಮತ್ತು ಇಲ್ಲಿ ಸರಿಯಾದ ಗುಣಗಳನ್ನು ನಮ್ಮ ಸ್ವಪ್ರಯತ್ನದಿಂದ ಅರ್ಜಿಸಿದರೆ ನಾವು ಒಂದಿಷ್ಟು ಬೆಳೆಯಬಹುದು. ಆದರೆ ಅದು ಅನ್ಯರ ದೋಷಗಳನ್ನು ಎತ್ತಿತೋರುವುದಕ್ಕಾಗಲೀ ಅಥವಾ ಅವುಗಳನ್ನು ತಿದ್ದುವುದಕ್ಕಾಗಲೀ ಸಾಲದು. ಅದು ಕೇವಲ ನಾವು ಇನ್ನಷ್ಟು ಬೆಳೆಯಲು ಸಹಾಯ ಮಾಡಬೇಕು. ಹಾಗಾಗಿ ನಾವು ಅನ್ಯರ ದೋಷಗಳನ್ನು ಎತ್ತಿತೋರಬಾರದು.

ನಮ್ಮ ದೋಷಗಳನ್ನು ಅರಿತುಕೊಂಡು, ಒಪ್ಪಿಕೊಂಡು, ತಿದ್ದಿಕೊಂಡರೆ ಪೂರ್ವ ವಾಸನೆಯಿಂದ ಬಂದ ದೋಷಗಳನ್ನು ಅಳಿಸಿಹಾಕಿ, ಹೊಸ ಮತ್ತು ಒಳ್ಳೆಯ ಗುಣಗಳನ್ನು ಬೆಳೆಸಿಕೊಳ್ಳಲು ಸಾಧ್ಯವಾಗುತ್ತದೆ. ಎಷ್ಟೇ ನಾವು ಸುಧಾರಿಸಿದ್ದೇವೆ ಎಂದರೂ ಇನ್ನೂ ಎಲ್ಲೋ ದೋಷಗಳು ಎದ್ದು ಕಾಣುತ್ತಲೇ ಇರುತ್ತವೆ. ಹಾಗಾಗಿ ಅನ್ಯರ ದೋಷಗಳನ್ನು ತೋರುವುದಾಗಲೀ, ಅನ್ಯರನ್ನು ವಿಮರ್ಶೆ ಮಾಡುವುದಾಗಲೀ ಸಜ್ಜನರು ಮಾಡುವುದಿಲ್ಲ ಮತ್ತು ಮಾಡಬಾರದು. ನಾವೂ ಸಹ ಅಂತಹ ಸಜ್ಜನರಾಗುವ ಪ್ರಯತ್ನಪಡಬೇಕು.

**ಮುಕ್ತಕ-293** **ದರಿಯಿರದೆ ಗಿರಿಯಿಲ್ಲ, ನೆರಳಿರದೆ ಬೆಳಕಿಲ್ಲ ।**
**ಮರಣವಿಲ್ಲದೆ ಜನನಜೀವನಗಳಿಲ್ಲ ॥**
**ವರಗುಣೋನ್ನತಿಗೆ ನಿಮ್ನಗುಣಂಗಳೊಡವುಟ್ಟು ।**
**ತೆರೆ ಬೀಳದೇಳುವುದೆ – ಮಂಕುತಿಮ್ಮ ॥**

ವರಗುಣೋನ್ನತಿಗೆ=ವರ+ಗುಣ+ಉನ್ನತಿಗೆ, ನಿಮ್ನಗುಣಂಗಳೊಡವುಟ್ಟು=ನಿಮ್ನ+ಗುಣಂಗಳು+ಒಡವುಟ್ಟು, ಬೀಳದೇಳುವುದೆ=ಬೀಳದೆ+ಏಳುವುದೇ.
ವರ=ಉತ್ತಮ, ನಿಮ್ನ=ಕೆಳಮಟ್ಟದ, ದಾರಿ=ಕಣಿವೆ, ಗಿರಿ=ಬೆಟ್ಟ, ಒಡವುಟ್ಟು=ಜೊತೆಯಲ್ಲಿ ಹುಟ್ಟುವುದು, ತೆರೆ=ಸಮುದ್ರದ ನೀರಿನ ತೆರೆ.





ಈ ಭೂಮಿಯಲ್ಲಿ ಕಣಿವೆಗಳಿಲ್ಲದೆ ಬೆಟ್ಟಗಳು ಇರಲು ಸಾಧ್ಯವಿಲ್ಲ. ನೆರಳಿಲ್ಲದೆ ಬೆಳಕಿರಲು ಸಾಧ್ಯವಿಲ್ಲ. ಮರಣವಿಲ್ಲದೆ ಜನನ ಮತ್ತು ಜೀವನಗಳಿಲ್ಲ. ಹಾಗೆಯೇ ಮನುಷ್ಯನೂ ಸಹ ತನ್ನ ಮನಸ್ಸು ಬುದ್ಧಿಗಳಲ್ಲಿ ಕೆಲಬಾರಿ ಒಳ್ಳೆಯ ಗುಣಗಳಿಂದ ಔನ್ನತ್ಯದಲ್ಲಿರುತ್ತಾನೆ ಮತ್ತೆ ಕೆಲವು ಬಾರಿ ನೀಚ ಗುಣಗಳಿಂದ ಅಧೋಗತಿಯಲ್ಲಿರುತ್ತಾನೆ. ಹೇಗೆ ಸಮುದ್ರದಲ್ಲಿನ ಮೇಲೆದ್ದ ತೆರೆಗಳು ಕೆಳಗೆ ಬೀಳುತ್ತವೆಯೋ ಹಾಗೆಯೇ ಮನುಷ್ಯನ ಗುಣಗಳೂ ಸಹ ಎಂದು ಮನುಷ್ಯನ ಮನಸಿನ ಗುಣಗಳನ್ನು ಹಲವು ಉಪಮೆಗಳೊಂದಿಗೆ ವಿಶ್ಲೇಷಣೆ ಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ದೊಡ್ಡ ಬೆಟ್ಟವಿದೆ ಎಂದರೆ ಅದರ ಅಡಿಯಲ್ಲೇ ಕಣಿವೆಗಳಿರಲೇಬೇಕು. ಬೆಟ್ಟದ ಮೇಲೆ ಸುರಿದ ನೀರು ಹರಿದು ಹರಿದು ಕಣಿವೆಗಳಾಗಿಯೇ ಬಿಡುತ್ತವೆ. ಆ ಕಣಿವೆಗಳಿಂದಲೇ ತೊರೆ, ನದಿಗಳಾಗಿ ಹರಿಯುತ್ತವೆ. ಇದನ್ನು ನಾವು ಪ್ರಕೃತಿಯಲ್ಲಿ ಎಲ್ಲೆಡೆಯಲ್ಲೂ ನೋಡುತ್ತೇವೆ. ಇದು ಸಹಜವಾಗೇ ಇದೆ. ಇನ್ನು ಬೆಳಕಿದೆ ಎಂದರೆ ನೆರಳೂ ಸಹ ಇದೆ

ಎಂದೇ ಅರ್ಥವಲ್ಲವೆ? ಮೇಲೆ ಬೆಳಕು, ದೀಪದಡಿಯಲ್ಲಿ ನೆರಳು. ಇದೂ ಸಹಜವಾಗೇ ಇದೆ. ಅಷ್ಟೇ, ಅಲ್ಲ ಈ ಜಗತ್ತಿನಲ್ಲಿ ಹುಟ್ಟಿದ ಎಲ್ಲ ಪ್ರಾಣಿಗಳೂ ತಮ್ಮ ಆಯಸ್ಸು ಮುಗಿದ ಮೇಲೆ ಸಾಯಲೇಬೇಕು. ಸಮುದ್ರದ ತೆರೆಗಳು ಬಿದ್ದರೆ ತಾನೇ ಮತ್ತೆ ಮೇಲೇಳುವುದು. ಹಾಗೆಯೇ ಮರಣವಿದ್ದರೆ ತಾನೇ ಮತ್ತೆ ಜನನ. ಈ ಜನನ ಮರಣಗಳ ನಡುವಿನದೇ ಜೀವನ.

ಹಾಗೆಯೇ ಮನುಷ್ಯನಲ್ಲಿಯೂ ಒಳ್ಳೆಯ ಮತ್ತು ಕೆಟ್ಟ ಗುಣಗಳು ಎರಡೂ ಒಂದೇ ಗರ್ಭದಲ್ಲಿ ಹುಟ್ಟಿದ ಸಹೋದರರಂತೆ ಇರುತ್ತವೆ. ಇದನ್ನೇ ಮಾನ್ಯ ಡಿ.ವಿ.ಜಿ.ಯವರು 'ವರಗುಣೋನ್ನತಿಗೆ ನಿಮ್ಮಗುಣಂಗಳೊಡವುಟ್ಟು ಎಂದಿದ್ದಾರೆ. ಸಮುದ್ರದಲ್ಲಿ ಎದ್ದು ಬೀಳುವ ತೆರೆಗಳಂತೆ, ನಮ್ಮಲ್ಲೂ ಈ ಒಳ್ಳೆಯ ಮತ್ತು ಕೆಟ್ಟ ಗುಣಗಳು ಆಗಾಗ ಮೇಲೆದ್ದು ಕೆಳಗೆ ಬೀಳುತ್ತಿರುತ್ತವೆ ಮತ್ತು ಈ ಗುಣಗಳೂ ಸಹ ಪ್ರಾಣಿಗಳಲ್ಲಿ ಸಹಜವಾಗೇ ಇವೆ ಎಂದಿದ್ದಾರೆ ಮಾನ್ಯ ಡಿ.ವಿ.ಜಿ.ಯವರು.

ಆದರೆ ಈ ಕೆಟ್ಟ ಮತ್ತು ಒಳ್ಳೆಯ ಗುಣಗಳ ಪ್ರಮಾಣ (ratio) ಹೇಗಿದೆ ಎಂಬುದೇ ಪ್ರಶ್ನೆ, ಕೊಂಚ ಅದು ಕೊಂಚ ಇದು ಆಗಾಗ ಮೇಲೆದ್ದು ತೊಯ್ದಾಡುತ್ತಿದ್ದರೆ ಪರವಾಗಿಲ್ಲ. ಇಲ್ಲದಿದ್ದರೆ ತೊಂದರೆ. ಆದರೆ, ಒಳ್ಳೆಯದು ಮತ್ತು ಕೆಟ್ಟದ್ದು ಎನ್ನುವುದು ಪರಸ್ಪರ (relative) ಸೂಚಕ. ಒಬ್ಬರಿಗೆ ಒಳ್ಳೆಯದು ಮತ್ತೊಬ್ಬರಿಗೆ ಕೆಟ್ಟದ್ದು. ಹಾಗಾಗಿ ಈ ಒಳ್ಳೆಯದು ಮತ್ತು ಕೆಟ್ಟದ್ದು ಸದಾಕಾಲ ನಮ್ಮಲ್ಲಿ ಪ್ರಮಾಣ ಭೇದವಿದ್ದರೂ ಇದ್ದೇ ಇರುತ್ತದೆ. ನಮ್ಮ ಗುಣಗಳ ಅವಲೋಕನವನ್ನು ಪ್ರಾಮಾಣಿಕವಾಗಿ ಮಾಡಿಕೊಂಡರೆ, ನಮ್ಮಲ್ಲಿ ಯಾವ ಗುಣ ಯಾವ ಪ್ರಮಾಣದಲ್ಲಿ ಇದೆ ಎಂದು ಅರಿವಾಗುತ್ತದೆ. ಪ್ರಯತ್ನಪೂರ್ವಕವಾಗಿ ಜೀವನದ ಅಗತ್ಯಗಳಿಗನುಗುಣವಾಗಿ ನಮ್ಮ ಗುಣಗಳನ್ನು ತಿದ್ದಿಕೊಂಡು ಬಾಳಿದರೆ ಸುಖ. ಇಲ್ಲದಿದ್ದರೆ......!!!!

# ಕ್ಷಮೆ 294-298

**ಮುಕ್ತಕ-294**

**ಉಪ್ಪಿಷ್ಟು ಹುಳಿಯಷ್ಟು ಕಾರ ಸಿಹಿಯಷ್ಟಿಷ್ಟು।**
**ಒಪ್ಪಿರ್ದೊಡದು ಭೋಜ್ಯವಂತು ಜೀವಿತಂ॥**
**ತಪ್ಪು ಸರಿ ಬೆಪ್ಪು ಜಾಣಂದಕುಂದುಗಳ ಬಗೆ।**
**ಯಿಪ್ಪತ್ತು ಸೇರೆ ರುಚಿ - ಮಂಕುತಿಮ್ಮ॥**

ಒಪ್ಪಿರ್ದೊಡದು=ಒಪ್ಪಿ+ಇರ್ದೊಡೆ+ಅದು, ಭೋಜ್ಯವಂತು=ಬ್ಹೊಜ್ಯವು+ಅಂತು,
ಜಾಣಂದಕುಂದುಗಳ=ಜಾಣ+ಅಂದ+ಕುಂದುಗಳ.
ಇರ್ದೊಡೆ=ಇದ್ದರೆ, ಭೋಜ್ಯ=ತಿನ್ನಲಿಕ್ಕೆ ಯೋಗ್ಯವು, ಬೆಪ್ಪು=ಪೆದ್ದುತನ.

ನಾವು ಮಾಡುವ ಊಟದಲ್ಲಿ ಉಪ್ಪು, ಹುಳಿ, ಕಾರ, ಸಿಹಿ, ಸರಿಯಾದ ಪ್ರಮಾಣದಲ್ಲಿ ಒಪ್ಪವಾಗಿ ಇದ್ದರೆ ಹೇಗೆ ತೃಪ್ತಿಯಿಂದ ಭೋಜನಮಾಡಬಹುದೋ, ಹಾಗೆಯೇ ಬದುಕಿನಲ್ಲೂ ಸರಿ, ತಪ್ಪು, ಪೆದ್ದುತನ, ಜಾಣೆ, ಅಂದ, ಕುಂದು ಮುಂತಾದ ಹತ್ತಾರು ಬಗೆಯ ಭಾವಗಳು ಸೇರಿದರೆ ಜೀವನವೂ ನೀರಸವಾಗದೆ 'ಸಮರಸ'ವಾಗಿರುತ್ತದೆ ಎನ್ನುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಆಹಾರ ರುಚಿಯಾಗಿರುವಂತೆ ಮಾಡಲು ನಾವು ಎಷ್ಟೋ ಬಗೆಯ ಮಿಶ್ರಣಗಳನ್ನು (Combinations) ಉಪಯೋಗಿಸುತ್ತೇವೆ. ಮಿಶ್ರಣದ ವ್ಯತ್ಯಯವಾದರೆ ಬಯಸಿದ ರುಚಿ ಬಾರದೆ ಬೇರೆ ಏನೋ ರುಚಿ ಬರುತ್ತದೆ. ಆಗ ತೃಪ್ತಿ ಇರುತ್ತದೋ ಇಲ್ಲವೋ ಗೊತ್ತಿಲ್ಲ. ಉಪ್ಪು, ಹುಳಿ, ಖಾರಗಳ ಸರಿಯಾದ ಮಿಶ್ರಣವೇ ಅಡಿಗೆಯನ್ನು "ಭೋಜ್ಯ"ವೆಂದೆನಿಸುತ್ತದೆ. ಅಂತಹ ಊಟವನ್ನು ಮಾಡಿದಾಗ ಒಂದು ತೃಪ್ತಿಯುಂಟಾಗುತ್ತದೆ. ಮೂಲತಃ ಪ್ರತಿಯೊಬ್ಬರೂ ದುಡಿಯುವುದೂ ಸಂಪಾದನೆ ಮಾಡುವುದೂ ಅಂತಹ ಒಂದು ತೃಪ್ತಿಗಾಗಿ,

ಅದೇ ರೀತಿ ಬದುಕಿನಲ್ಲೂ ಸಹ ಸರಿ-ತಪ್ಪುಗಳು, ಜಾಣ್ಮ-ಬೆಪ್ಪುತನಗಳು, ಕುಂದು-ಕೊರತೆಗಳು, ನಮ್ಮೆಲ್ಲರಲ್ಲೂ ಇದ್ದು, ಅವುಗಳು ಬೇರೆ ಬೇರೆ ಪ್ರಮಾಣಗಳಲ್ಲಿ ಬೆರೆತು ಇದ್ದರೆ, ಜಗತ್ತಿನ ವೈವಿಧ್ಯತೆಗೆ ಕಾರಣವಾಗಿ

ಬದುಕು ಸೊಗಸಾಗಿರುತ್ತದೆ. ಹಾಗೆ ವೈವಿಧ್ಯತೆ ಇಲ್ಲದೆ ಎಲ್ಲರೂ ಸಮರಾಗಿ ಇದ್ದರೆ ಸ್ವಾರಸ್ಯವಿಲ್ಲದೆ ಒಂದು ರೀತಿಯ ನೀರವತೆ ತುಂಬಿ ಬಿಡುತ್ತದೆ. ಯಾವ ಉತ್ಸಾಹವೂ ಇಲ್ಲದೆ, ಜೀವನ ನೀರಸವಾಗಿಬಿಡುತ್ತದೆ, ಅಲ್ಲವೇ? ಆದ್ದರಿಂದ ನಾವು ನೋಡುವ ಮತ್ತು ನಮ್ಮ ಸಂಪರ್ಕಕ್ಕೆ ಬರುವ ಎಲ್ಲರಲ್ಲಿ ಇರುವ ಈ ಭಾವವೈವಿಧ್ಯತೆಯನ್ನು ಒಪ್ಪಿಕೊಳ್ಳಬೇಕು. ಹಾಗಲ್ಲದೆ ನಮಗೆ ಹೇಗೆ ಅನುಕೂಲವೋ ಹಾಗಿರಬೇಕೆಂದುಕೊಳ್ಳುವುದು ಶುದ್ಧ ತಪ್ಪು.

ಸೃಷ್ಟಿಯಲ್ಲಿ ಕೋಟ್ಯಾಂತರ ರೂಪ, ರಸ, ಬಣ್ಣ, ಗಂಧ, ಶಬ್ದಗಳು ಪ್ರಮಾಣ ಭೇದದ ಮಿಶ್ರಣದಿಂದಾಗಿ ಜಗತ್ತು ಇಷ್ಟು ಸುಂದರವಾಗಿದೆಯೋ, ಹೇಗೆ ಆ ವೈವಿಧ್ಯತೆಯನ್ನು ನಾವು ಮತ್ತೂ ವೈವಿಧ್ಯಮಯಗೊಳಿಸಿ, ಅದರ ಸುಂದರತೆಯನ್ನು ಆಸ್ವಾದಿಸುತ್ತೇವೆಯೋ, ಹಾಗಿದ್ದರೆ ಬದುಕು ಚೆನ್ನ. ಎಲ್ಲವೂ ಒಂದೇ ರೂಪದಲ್ಲಿಯೋ





ಆಕಾರದಲ್ಲಿಯೋ ಇದ್ದಿದ್ದರೆ, ಊಹಿಸಲೂ ಸಾಧ್ಯವಿಲ್ಲದಂತೆ ಬದುಕು ಬರಡಾಗಿರುತ್ತಿತ್ತು. ಎಲ್ಲವೂ ವೈವಿಧ್ಯಮಯವಾಗಿದ್ದರೆ ಮಾತ್ರ ಬದುಕಿನಲ್ಲಿ ಸ್ವಾರಸ್ಯ ಮತ್ತು ಉತ್ಸಾಹವಿರುತ್ತದೆ.

ನಾವು ಈ ವೈವಿಧ್ಯತೆಯನ್ನು ಕಾಣಬೇಕು, ಒಪ್ಪಿಕೊಂಡು ಅನುಭವಿಸಬೇಕು. ಪೂರ್ವಾಗ್ರಹ ಪೀಡಿತರಾಗದೆ, ಇಲ್ಲದ್ದನ್ನು ಬಯಸಿ ನಮ್ಮ ಬದುಕನ್ನು ನರಕವಾಗಿಸಿಕೊಳ್ಳದೆ, ಇರುವುದನ್ನು ಇರುವಂತೆಯೇ ಸ್ವೀಕರಿಸಿ ಆನಂದದಿಂದಿರಬೇಕು.

**ಮುಕ್ತಕ-295**

**ತಪ್ಪನಿನಿತುಂ ಸೈಸದಪ್ಪಟದ ಗುಣಶಾಲಿ।**
**ಕಪ್ಪು ಕಂಡು ಕನಲ್ವ ಕೆಂಡ ಗುಲಗಂಜಿ॥**
**ಉಪ್ಪೆ ಸಪ್ಪೆಯೊ ನಿನ್ನ ಮೈಬೆವರು ನೆಕ್ಕಿ ತಿಳಿ।**
**ಒಪ್ಪಿಹೆಯ ನೀನಜನ- ಮಂಕುತಿಮ್ಮ॥**

ತಪ್ಪನಿನಿತುಂ=ತಪ್ಪನು+ಇನಿತುಂ, ಸೈಸದಪ್ಪಟದ=ಸೈಸದ+ಅಪ್ಪಟದ, ನೀನಜನ=ನೀನು+ಅಜನ.

ಅಪ್ಪಟದ=ಶುದ್ಧ, ಕನಲ್ವ=ಕೋಪಗೊಳ್ಳುವ, ಅಜನ=ಸೃಷ್ಟಿಕರ್ತ ಬ್ರಹ್ಮನ.

ತಾನು ಮಹಾ ಗುಣಶಾಲಿ, ತಪ್ಪೇ ಮಾಡಿಲ್ಲ, ಹಿಂದೆ ಎಂದೂ ತಪ್ಪೇ ಮಾಡಿಲ್ಲ ಮತ್ತು ಮುಂದೆಯೂ ಮಾಡುವುದಿಲ್ಲ ಎಂದು ಥಂಬ ಕೊಚ್ಚಿಕೊಳ್ಳುವವರನ್ನು ಮತ್ತು ಅಂತಹ ಮನೋಭಾವದಿಂದ ಅನ್ಯರಲ್ಲಿ ಒಳ್ಳೆಯ ಗುಣವನ್ನೇ ನೋಡದವರನ್ನು ನಾವು ಕಂಡಿದ್ದೇವಲ್ಲವೇ? ತನ್ನ ಮೈಮೇಲೆ ಕಪ್ಪು ಚುಕ್ಕೆ ಇದ್ದಾಗ್ಯೂ ಬೇರೆಯ ಕಡೆ ಕಪ್ಪನ್ನು ಕಂಡು ಕೋಪಗೊಳ್ಳುವ ಕೆಂಪನೆಯ ಗುಲಗಂಜಿಯಂತೆ ಇವರು. ನಮ್ಮ ಬೆವರು ಉಪ್ಪೋ ಸಪ್ಪೆಯೋ ಎಂದು ನಮ್ಮ ಬೆನ್ನನ್ನು ನಾವೇ ನೆಕ್ಕಿ ನೋಡಿದರೆ ತಿಳಿಯುತ್ತದೆ. ಸೃಷ್ಟಿಕರ್ತನನ್ನು ನೀನು ನಂಬುವೆಯಾ? ಎಂದು ಒಂದು ವಿಡಂಬನೆಯನ್ನು ಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಈ ಜಗತ್ತಿನಲ್ಲಿ ತಪ್ಪು ಮಾಡದವರೇ ಇಲ್ಲ. ಎಲ್ಲರ ಮನೆ ದೋಸೇನೂ ತೂತೆ, ಎನ್ನುವ ಮಾತನ್ನು ನಾವು ಕೇಳಿಲ್ಲವೇ. ಹಾಗೆ ಪ್ರತಿಯೊಬ್ಬನೂ ಯಾವುದಾದರೂ ಸಮಯದಲ್ಲಿ ಏನಾದರೂ ಒಂದು ತಪ್ಪನ್ನು ಮಾಡಿರಲೇ ಬೇಕು. ಹಾಗೆ ತಪ್ಪನ್ನೇ ಮಾಡದ ಶುದ್ಧಾತ್ಮನು ಈ ಜಗತ್ತಿನಲ್ಲಿ ಇರಲು ಸಾಧ್ಯವೇ ಇಲ್ಲ. ಕೆಟ್ಟವರಾಗಲೀ, ಒಳ್ಳೆಯವರಾಗಲೀ, ತಪ್ಪು ಮಾಡಲು ಹಲವಾರು ಕಾರಣಗಳಿರಬಹುದು. ನಾನು ತಪ್ಪೇ ಮಾಡಿಲ್ಲವೆಂದು ಕೊಚ್ಚಿಕೊಳ್ಳುವವನು ಸುಳ್ಳು ಹೇಳುತ್ತಿದ್ದಾನೆ ಎಂದೇ ಪರಿಗಣಿಸಬೇಕು.

ಅನ್ಯರ ತಪ್ಪುಗಳನ್ನೇ ದೊಡ್ಡದಾಗಿ ಮಾಡಿ ಅದರ ವಿಶ್ಲೇಷಣೆ ಮಾಡುತ್ತಾ ತಾನು ಮಹಾ ಗುಣಶಾಲಿ, ಎಂದು ಬೀಗುವ ಜನರು ಕೇವಲ ಆತ್ಮವಂಚನೆ ಮಾಡಿಕೊಳ್ಳುತ್ತಿರುತ್ತಾರೆ. ಅವರ ಸ್ಥಿತಿ ಹೇಗಿದೆಯಂದರೆ ಮೈಯೆಲ್ಲಾ ಕೆಂಪಗಿರುವ ಒಂದು ಗುಲಗಂಜಿಗೆ ಒಂದು ಕಪ್ಪು ಚುಕ್ಕೆ ಇರುತ್ತದೆ. ಆದರೂ ಕಪ್ಪನ್ನು ದ್ವೇಷಿಸುವ, ತನ್ನಲ್ಲಿ

ಕಪ್ಪೇ ಇಲ್ಲವೆನ್ನುವಂತೆ ಆಡಿದಂತಿದೆ. ಅವರಿಗೆ ತಮ್ಮ ತಪ್ಪಿನ, ಲೋಪದೋಷಗಳ ಸಂಪೂರ್ಣ ಅರಿವಿರುತ್ತದೆ. ಆದರೆ ಒಪ್ಪಿಕೊಳ್ಳಲು ಅವರ ಅಹಂಕಾರ ಅಡ್ಡಬರುತ್ತದೆ. ತಮ್ಮ ತಪ್ಪಿನ ಅರಿವಿನಲ್ಲೂ 'ತಾವು ಸರಿ' ಎಂದು ಪ್ರತಿಪಾದಿಸಲು ಹೋರಾಡುತ್ತಾರೆ.

ಮಾನ್ಯ ಗುಂಡಪ್ಪನವರು 'ಸೃಷ್ಟಿಕರ್ತನನ್ನು ನೀನು ನಂಬುವೆಯಾ?' ಎಂದು ಕೇಳುತ್ತಾರೆ. ಸೃಷ್ಟಿಕರ್ತನು ಅವರವರ ಪೂರ್ವಕರ್ಮದನುಸಾರವಾಗಿ, ಪ್ರತಿಯೊಬ್ಬರಿಗೂ ಒಂದೊಂದು ಸ್ವಭಾವವನ್ನು ಕೊಟ್ಟಿದ್ದಾನೆ. ಅವರು ಹುಟ್ಟಿರುವುದೇ ಹಾಗೆ, ನಾವೊಂದು ರೀತಿ, ಅವರೊಂದು ರೀತಿ, ನಾವು ಸರಿ, ಅನ್ಯರು ಸರಿಯಿಲ್ಲ ಎಂದು ಹೇಳುವುದು ಕೇವಲ ಮೂರ್ಖತನವಷ್ಟೆ. ಆದರೆ ಎಲ್ಲರಿಗೂ ಸೃಷ್ಟಿಕರ್ತನು ವಿವೇಕವನ್ನೂ ಕೊಟ್ಟಿದ್ದಾನಲ್ಲವೇ? ಈ ವಿವೇಕವನ್ನು ಉಪಯೋಗಿಸಿ, ಮೊದಲು ನಾವು ಅನ್ಯರ ಗುಣಗಳನ್ನು ಮತ್ತು ಅವರ ತಪ್ಪುಗಳನ್ನು ವಿಮರ್ಶೆ ಮಾಡುವುದನ್ನು ನಿಲ್ಲಿಸಬೇಕು. ಅಂತಹ ವಿಮರ್ಶೆ ನಮ್ಮ ಮನಸ್ಸಿನಲ್ಲೂ ಬರಬಾರದು. ತದನಂತರ ನಮ್ಮ ತಪ್ಪುಗಳನ್ನು ಗುರುತಿಸಿ, ಅರಿತುಕೊಂಡು, ಒಪ್ಪಿಕೊಂಡು, ತಿದ್ದಿಕೊಳ್ಳುವ ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಹಾಗೆ ಎಲ್ಲರೂ ತಮ್ಮನ್ನು ತಾವು ಸುಧಾರಿಸಿಕೊಂಡರೆ, ಎಲ್ಲರೂ ಸುಧಾರಿಸಿದಂತೆ ಅಲ್ಲವೇ? ಅಂತಹ ಪ್ರಾಮಾಣಿಕ ಪ್ರಯತ್ನವನ್ನು ನಾವೆಲ್ಲರೂ ಮಾಡಬೇಕು.

**ಮುಕ್ತಕ-296**

**ಮರುಕದುಂಬಿದ ಕಣ್ಣನೋಟದೊಳದ್ದೀತು।**
**ಬಿರುನುಡಿಯೊಳಿರದೊಂದು ಕೂರಲಗು, ಸಖನೆ॥**
**ಕರವಾಳಕದಿರದಿಹ ದುರಿತಕಾರಿಯ ಹೃದಯ।**
**ಕರುಣೆಯಿಂ ಕರಗೀತೊ - ಮಂಕುತಿಮ್ಮ॥**

ಮರುಕದುಂಬಿದ=ಮರುಕ+ತುಂಬಿದ, ಕಣ್ಣನೋಟದೊಳದ್ದೀತು=ಕಣ್ಣ+ನೋಟದೊಳಗೆ+ದ್ದೀತು,
ಬಿರುನುಡಿಯೊಳಿರದೊಂದು=ಬಿರುನುಡಿಯೊಳು+ಇರದು+ಒಂದು,
ಕರವಾಳಕದಿರದಿಹ=ಕರವಾಳಕೆ+ಅದಿರದೆ+ಇಹ.
ಬಿರುನುಡಿ=ಒರಟಾದ ಮಾತು, ಸಖನೆ+ಮಿತ್ರನೆ, ಕರವಾಳ=ಕತ್ತಿ, ದುರಿತಕಾರಿ+ಕೆಟ್ಟ ಕೆಲಸ ಮಾಡುವವನು.

ಯಾರಾದರೂ ದುಷ್ಟನನ್ನು ತಿದ್ದಲು ನಾವು ಕೋಪಗೊಂಡು ಎರಡು ಮಾತನಾಡಬಹುದು. ಆದರೆ ನಿರೀಕ್ಷಿಸಿದ ಪರಿಣಾಮ ಬಾರದೆ, ದುಷ್ಟ ತಿರುಗಿ ಬೀಳುವ ಅಥವಾ ಅಸಡ್ಡೆಯ ಪ್ರತಿಕ್ರಿಯೆ ತೋರಬಹುದು. ಕತ್ತಿಯಂತೆ ತೀಕ್ಷ್ಣವಾದ ಮಾತುಗಳಿಂದ ಅಥವಾ ಬಿರುನುಡಿಗಳಿಂದ ಬದಲಾಗದ ದುಷ್ಟ, ಮರುಕ ತೋರಿ ಕರುಣೆಯಿಂದ ಮಾತನಾಡಿ, ಪ್ರೀತಿಯಿಂದ ಅವನನ್ನು ತಿದ್ದಲು ಪ್ರಯತ್ನ ಮಾಡಿದಾಗ, ಅವನ ಮನ ಕರಗಿ ಬದಲಾಗಬಹುದು, ಎಂದು ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ ತಿಳಿಹೇಳಲು ಪ್ರಯತ್ನಪಡುತ್ತಾರೆ.

ತಪ್ಪು ಅಥವಾ ಕೆಟ್ಟ ಕೆಲಸ ಮಾಡುವವನಿಗೆ ಅವನದೇ ಕಾರಣಗಳಿರಬಹುದು. ಅದರ ಸಂಪೂರ್ಣ ಪರಿಚಯ ನಮಗೆ ಆಗುವುದಿಲ್ಲ. ಅವನನ್ನು ತಿದ್ದಲು, ಅವನ ಮೇಲೆ ಪರಿಣಾಮವಾಗಲಿ ಎಂದು ಬಿರುನುಡಿಗಳನ್ನು





ನುಡಿದಾಗ, ಹಲವು ರೀತಿಯ ಪ್ರತಿಕ್ರಿಯೆಗಳು ಬರಬಹುದು. ನಾವು ಹೇಳುವ ವಿಚಾರ ಅವನ ಮನಸ್ಸಿಗೆ ತಟ್ಟಿ, ಅವನು ಬದಲಾಗಲೂ ಬಹುದು ಅಥವಾ ನಮ್ಮ ಮೇಲೆ ಅವನು ತಿರುಗಿ ಬೀಳಬಹುದು ಅಥವಾ ನಮ್ಮ ಮಾತನ್ನು ಕೇಳದೆ ತನ್ನದೇ ದಾರಿಯಲ್ಲಿ ಅವನು ಹೋಗಿಬಿಡಬಹುದು. ಆದರೆ ಅವನ ಆ ರೀತಿಯ ವರ್ತನೆಗೆ ಕಾರಣಗಳನ್ನು ವಿಶ್ಲೇಷಿಸಿ ಪ್ರೀತಿಯಿಂದ ಮಾತನಾಡಿದರೆ ಮತ್ತು ನಾವು ಹೇಳುವುದು ಅವನ ಒಳಿತಿಗಾಗಿಯೇ ಎಂಬುದನ್ನು ಅವನಿಗೆ ಮನದಟ್ಟು ಮಾಡಿದರೆ, ಅವನು ಬದಲಾಗುವ ಸಾಧ್ಯತೆ ಅಧಿಕವಾಗಿದೆ ಎಂದು ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ ಅಭಿಪ್ರಾಯ ಪಟ್ಟಿದ್ದಾರೆ. ಇದು ಸಾಮಾನ್ಯವಾಗಿ ನಡೆಯಬೇಕಾದ ರೀತಿ ಮತ್ತು ನೀತಿ

ಆದರೆ, ವಾಚಕರೆ ಇಂದಿನ ಪರಿಸ್ಥಿತಿ ಹದಗೆಟ್ಟಿದೆ. ನಾವು ಕಾಣುವ ದುಷ್ಟರನ್ನು, ನೀ ಹಾಗೆ ಮಾಡಬಾರದು ಎಂದು ಹೇಳುವುದಾಗಲೀ, ನೀ ಏಕೆ ಹೀಗೆ ಮಾಡತ್ತೀಯೆ? ಎಂದು ಕೇಳುವುದಾಗಲೀ ಮಾಡಿದರೆ, ನೀ ಯಾರು ನನಗೆ ಹೇಳಲಿಕ್ಕೆ? ಎನ್ನುವ ಉತ್ತರ ಬರುವುದೇ ಅಧಿಕವಾಗಿದೆ. ಏಕೆಂದರೆ ಅವರ ಪ್ರತಿಕ್ರಿಯೆ, ಅವರ ಬುದ್ಧಿಯಿಂದಾಗಲೀ, ವಿವೇಕದಿಂದಾಗಲೀ, ವಿಚಾರದಿಂದಾಗಲೀ ಹೊರಡುವುದಿಲ್ಲ. ಆ ರೀತಿಯ ಪ್ರತಿಕ್ರಿಯೆಗೆ ಕೇವಲ ಅವರ ಅಹಂಕಾರವೇ

ಕಾರಣವಾಗಿರುತ್ತದೆ. ಪ್ರತಿಯೊಬ್ಬರಲ್ಲೂ ಅಹಂಕಾರವಿರುತ್ತದೆ. ಆದರೆ ಬೇರೆ ಬೇರೆ ಪ್ರಮಾಣದಲ್ಲಿರುತ್ತದೆ ಮತ್ತು ದುಷ್ಟರಲ್ಲಿ ಅಹಂಕಾರದ ಪ್ರಮಾಣ ಅಧಿಕವಾಗಿರುತ್ತದೆ. ನಾವು ಅವನ ಅಹಂಕಾರವನ್ನು ಗೆದ್ದರೆ, ಅವನನ್ನು ತಿದ್ದಬಹುದು. ಸರಿಯಾದ ದಾರಿಗೆ ತರಬಹುದು.

ಸಾಮಾನ್ಯವಾಗಿ ನಮ್ಮ ಮನೆಯವರು, ನಮ್ಮ ಮಕ್ಕಳೇ ನಮ್ಮ ಮಾತನ್ನು ತಿರಸ್ಕರಿಸುವ ಕಾಲದಲ್ಲಿ ಜಗವನ್ನು ತಿದ್ದಲು ಯಾರಿಗೂ ಸಮಯವೂ ಇಲ್ಲ, ತಾಳ್ಮೆಯೂ ಇಲ್ಲ. ಹಾಗಾಗಿಯೇ ಇಂದು ದುಷ್ಟರ ಸಂಖ್ಯೆ ಅಧಿಕವಾಗುತ್ತಿದೆ. ಮೊದಲು ನಮ್ಮಲ್ಲಿ ಸಕಾರಾತ್ಮಕವಾದ ಬೆಳವಣಿಗೆ ಬರಬೇಕು. ನಮ್ಮನ್ನು ನಾವು ತಿದ್ದಿಕೊಳ್ಳಬೇಕು. ಪ್ರತಿಯೊಬ್ಬರೂ ಹಾಗೆ ತಮ್ಮನ್ನು ತಾವು ತಿದ್ದಿಕೊಂಡಾಗ, ಕ್ರಮೇಣ ದುಷ್ಟರ ಸಂಖ್ಯೆ ಕಡಿಮೆಯಾಗಬಹುದು. ನಂತರ ನಾವು ಅನ್ಯರನ್ನು ತಿದ್ದಲು ಪ್ರಯತ್ನಪಟ್ಟರೆ ಬಹುಶಃ ನಮ್ಮ ಸಮಾಜದಲ್ಲಿ ಬದಲಾವಣೆ ಬರಬಹುದೇನೋ!!! ಆದರೆ ನಮ್ಮನ್ನು ನಾವು ತಿದ್ದಿಕೊಳ್ಳುವ ಪ್ರಯತ್ನವನ್ನು ಪ್ರಾಮಾಣಿಕವಾಗಿ ಮಾಡಬೇಕು.

**ಮುಕ್ತಕ-297**

**ಪೆರ್ಮರ್ಮೆಯ ಗುಣಂಗಳಿನ್ನೂರು ಶಾಸ್ತ್ರೋಕ್ತದವು |**
**ಸರ್ವೋತ್ತಮಗಳೆರಡು ಸರ್ವ ಕಠಿಣಗಳು ||**
**ನಿರ್ಮತ್ಸರತೆಯೊಂದು ದೋಷಿಯೋಳ್ ಕ್ಷಮೆಯೊಂದು ||**
**ಬ್ರಾಹ್ಮಿಕಾಭ್ಯಾಸವದು - ಮಂಕುತಿಮ್ಮ ||**

ಗುಣಂಗಳಿನ್ನೂರು=ಗುಣಂಗಳು+ಇನ್ನೂರು, ಸರ್ವೋತ್ತಮಗಳೆರಡು=ಸರ್ವ+ಉತ್ತಮಗಳು+ಎರಡು, ನಿರ್ಮತ್ಸರತೆಯೊಂದು=ನಿರ್ಮತ್ಸರತೆ+ಒಂದು, ಬ್ರಾಹ್ಮಿಕಾಭ್ಯಾಸವದು-ಬ್ರಾಹ್ಮಿಕ+ಅಭ್ಯಾಸವಿದು.

ಪೆರ್ಮರ್ಮೆ=ಪರಮ, ಉತ್ತಮ, ಶಾಸ್ತ್ರೋಕ್ತದವು=ಶಾಸ್ತ್ರದಲ್ಲಿ ಹೇಳಲ್ಪಟ್ಟಿರುವುದು,
ನಿರ್ಮತ್ಸರತೆ=ಮಾತ್ಸರ್ಯವಿಲ್ಲದಿರುವುದು, ಬ್ರಾಹ್ಮಕ=ಉತ್ತಮವಾದ.

ಶಾಸ್ತ್ರದಲ್ಲಿ ಮತ್ತು ಹಿರಿಯರಿಂದ 'ಉತ್ತಮಗುಣಗಳು' ಎಂದು ಹೇಳಪಟ್ಟಿರುವುದು ಹಲವಾರು ಮತ್ತು ಅದರ ಪಟ್ಟಿ ಬಹಳ ದೊಡ್ಡದು. ಅತ್ಯುತ್ತಮವಾದ ಆದರೆ ಪಾಲಿಸಲು ಬಹಳ ಕಠಿಣವಾದ ಅತ್ಯುತ್ತಮ ಗುಣಗಳು ಎರಡು ಮಾತ್ರ ಒಂದು ಅನ್ಯರ ದೋಷವನ್ನು ಕ್ಷಮಿಸುವುದು ಮತ್ತು ಪರರಲ್ಲಿ ಮತ್ಸರವಿಲ್ಲದಿರುವುದು. ಇವುಗಳನ್ನು ಅಭ್ಯಾಸಮಾಡುವುದು ಬಹಳ ಉತ್ತಮವಾದುದು ಎಂದು ಸೂಚಿಸಿದ್ದಾರೆ ಮಾನ್ಯ ಗುಂಡಪ್ಪನವರು

ಪ್ರತಿನಿತ್ಯ ಪಾಲಿಸಬೇಕಾದ ವಿಧಿಗಳು ಮತ್ತು ಅವುಗಳ ವಿಧಾನಗಳ ಪಟ್ಟಿ ನಮ್ಮಲ್ಲಿ ಬಹಳಷ್ಟು ಇವೆ. ನಮ್ಮನ್ನು ಉತ್ತಮ ವ್ಯಕ್ತಿಗಳನ್ನಾಗಿ ರೂಪಿಸುವ ಸಲುವಾಗಿಯೇ ನಮ್ಮ ಭಾರತೀಯ ಶಾಸ್ತ್ರಗಳಲ್ಲಿಯೇ ಏಕೆ, ಜಗತ್ತಿನ ಎಲ್ಲಾ ಬೋಧಕ ಗ್ರಂಥಗಳೂ ಹಲವಾರು ಸಲಹೆ, ಸೂಚನೆ, ಬೋಧನೆಗಳನ್ನು ಮಾಡುತ್ತವೆ. ಸತ್ಯಂ ವದ, ಧರ್ಮಂ ಚರ, ಅನ್ನಂ ನ ನಿಂದ್ಯಾತ್, ಅನ್ನಂ ನ ಪರಿಚಕ್ಷೀತ, ವ್ಯಶೇಮ ದೇವ ಹಿತಂ ಯದಾಯುಃ, ಮುಂತಾದಾಗಿ ನೂರಾರು ಒಳ್ಳೆಯ ಗುಣಗಳನ್ನು ಬೆಳೆಸುವ ಸೂತ್ರಗಳುಂಟು. ಇವೆಲ್ಲವೂ ಶಾಸ್ತ್ರ ವಿಧಿತ. “ಅನ್ಯೇಶಾಂ ಉದಯಂ ದೃಷ್ಟ್ವಾ ಏ ಅಭಿನಂದಂತಿ ಮಾನವಾ ತೆ ವೈ ಭಾಗವತಾಃ ಸೃತಾ” ಎಂದರೆ ಅನ್ಯರ ಅಭ್ಯುದಯವನ್ನು ಕಂಡು ಯಾರು ಸಂತೋಷ ಪಡುತ್ತಾರೋ ಅವರು ಭಗವಂತನಿಗೆ ಪ್ರೀತಿ ಪಾತ್ರರು ಎಂದು ಹೇಳುತ್ತಾ ಅದಕ್ಕೆ ಒತ್ತು ಕೊಡಲಿಕ್ಕೆ 'ಗತಾಸೂಯಾ, ಅಮತ್ಸರಾ' ಅಂದರೆ ಮಾತ್ಸರ್ಯ ರಹಿತನೂ, ಅಸೂಯೆ ರಹಿತನೂ, ಎಂದೂ ಹೇಳಿದ್ದಾರೆ. ಹಾಗಾಗಿ ಅಸೂಯೆ ಪಡದಿರುವುದು ಮನುಷ್ಯನಲ್ಲಿ ಇರಲೇ ಬೇಕಾದ ಶ್ರೇಷ್ಠ ಗುಣವೆಂದು ಸಿದ್ಧವಾಗಿದೆ.

ಅಸೂಯೆಯಿಲ್ಲದಿರುವಷ್ಟೇ ಉತ್ತಮ ಗುಣ ಕ್ಷಮಾಗುಣ, ನಮ್ಮ ಪುರಾಣ ಇತಿಹಾಸದಲ್ಲಿ ಈ ಕ್ಷಮಾಗುಣದ ನಿದರ್ಶನಗಳು ಸಾವಿರಾರು ಸಿಗುತ್ತದೆ. ವಸಿಷ್ಠನು ದಯಪಾಲಿಸಿದ ಕ್ಷಮಾಗುಣದಿಂದಲೇ ಕ್ಷತ್ರಿಯನೂ, ರಾಜನೂ ಆದ ಕೌಶಿಕನು ವಿಶ್ವಾಮಿತ್ರನೆಂದು ಹೆಸರು ಪಡೆದು ಬ್ರಹ್ಮರ್ಷಿಯಾದದ್ದು, ಗೋತ್ರಪ್ರವರ್ತಕನಾದದ್ದು.

“ಹೇ ಪ್ರಭು, ಇವರನ್ನು ಕ್ಷಮಿಸಿಬಿಡು. ಪಾಪ ಅವರಿಗೆ ತಾವೇನು ಮಾಡುತ್ತಿದ್ದೇವೆ ಎಂದು ಅರಿವಿಲ್ಲ” ಎಂದು ತನ್ನನ್ನು ಶೂಲಕ್ಕೆ ಹಾಕುತ್ತಿದ್ದ ಜನರನ್ನು ಕ್ಷಮಿಸುವಂತೆ ಏಸುಕ್ರಿಸ್ತ ಬೇಡಲಿಲ್ಲವೇ ಆ ಪರಮಾತ್ಮನನ್ನು, ಆದ್ದರಿಂದ

ದುಷ್ಟರನ್ನು ಮತ್ತು ದೋಷಿಗಳನ್ನು ಕ್ಷಮಿಸುವುದೂ ಸಹ ಮಾನವರಲ್ಲಿ ಇರಬೇಕಾದ ಒಂದು ಉತ್ತಮ ಗುಣವೆಂದು ಸಿದ್ಧವಾಗಿದೆ.

ಅನ್ಯರಲ್ಲಿ ಅಸೂಯೆ ಇಲ್ಲದಿರುವುದು ಮತ್ತು ದುಷ್ಟರನ್ನು ಮತ್ತು ದೋಷಿಗಳನ್ನು ಕ್ಷಮಿಸುವುದು ಮಾನವರಲ್ಲಿರಬೇಕಾದ ಎರಡು ಅತ್ಯುತ್ತಮ ಗುಣಗಳೆಂದು ಮಾನ್ಯ ಗುಂಡಪ್ಪನವರು ಪ್ರತಿಪಾದಿಸುತ್ತಾ, ಇದನ್ನು ಸಾಧಿಸುವುದು ಬಹಳ ಕಠಿಣ ಎಂದೂ, ಇದನ್ನು ಸಾಧಿಸುವುದೇ ಪರಮ ಸಾಧನೆಯೆಂದೂ ಸೂಚಿಸಿದ್ದಾರೆ. ನಮ್ಮಲ್ಲಿ ಅಂತಹ ಗುಣದ ಅಂಶ ಸ್ವಲ್ಪವಾದರೂ, ಇದ್ದರೆ ಅದನ್ನು ಅಧಿಕಗೊಳಿಸುವ ಪ್ರಯತ್ನ ಮಾಡಬೇಕು. ಇಲ್ಲದಿದ್ದರೆ ಬೆಳೆಸಿಕೊಳ್ಳಬೇಕು.





**ಮುಕ್ತಕ-298**

**ಗಾರೆಗಚ್ಚೇನಲ್ಲ ದಾರು ದೂಲಗಳಲ್ಲ।**
**ಪಾರದ ದ್ರವದವೊಲು ಮನುಜಸ್ವಭಾವ॥**
**ವೀರಶಪಥಗಳಿಂದ ಘನರೂಪಿಯಾಗದದು।**
**ಸೈರಿಸದನಿನಿತು ನೀಂ - ಮಂಕುತಿಮ್ಮ॥**

ಗಾರೆಗಚ್ಚೇನಲ್ಲ=ಗಾರೆಗಚ್ಚು+ಏನಲ್ಲ, ಘನರೂಪಿಯಾಗದದು=ಘನರೂಪಿ+ಆಗದು+ಅದು,
ಸೈರಿಸದನಿನಿತು=ಸೈರಿಸು+ಅದನು+ಇನಿತು.

ಗಾರೆಗಚ್ಚು=ಗಾರೆಯಿಂದ ಮಾಡಿದ ಗೋಡೆ (ಗಾರೆ=ಮರಳು ಮತ್ತು ಸುಣ್ಣದ ಮಿಶ್ರವನ್ನು ಹಿಟ್ಟಿನಂತೆ ರುಬ್ಬಿದ ವಸ್ತು), ದೂಲ=ಮನೆಯ ತಾರಸಿಗೆ ಹಾಕುವ ಮರದ ತೊಲೆ, ಪಾರದದ್ರವ=ಪಾದರಸ, ವೀರಶಪಥ=ದೃಡ ನಿರ್ಧಾರ, ಘನರೂಪಿಯಾಗದದು=ಗಟ್ಟಿಯಾಗದದು, ಸೈರಿಸು=ತಾಳಿಕೊಳ್ಳು

ಮನುಷ್ಯನ ಮನಸ್ಸಿನ ಸ್ವಭಾವ ಗಟ್ಟಿಯಾದ ಇಟ್ಟಿಗೆ ಮತ್ತು ಗಾರೆಗಳಿಂದ ಮಾಡಿದ್ದಲ್ಲ. ಇದಕ್ಕೆ ಗಟ್ಟಿಯಾದ ಯಾವ ಮರದ ಭಾರವಾದ ತೊಲೆಯ ಆಧಾರವೂ ಇಲ್ಲ. ಎಷ್ಟೇ ದೃಢವಾಗಿ ನಿರ್ಧಾರ ಮಾಡಿದರೂ, ಮನಸ್ಸು ಪಾದರಸದಂತೆ ಒಂದೆಡೆ ನಿಲ್ಲದೆ ಚಂಚಲವಾಗಿರುತ್ತದೆ. ಇಂತಹ ಚಂಚಲ ಮನಸ್ಸನ್ನು ಸಹಿಸಿದರೆ ಮಾತ್ರ ನಮ್ಮ ಜೀವನ ಸುಗಮವಾಗುತ್ತದೆ ಎಂದು ಪ್ರಸ್ತಾಪಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಮನಸ್ಸು ಚಂಚಲ, ಅದನ್ನು ನಿಗ್ರಹಿಸಬೇಕು, ಅದನ್ನು ಸಂಸ್ಕರಿಸಬೇಕು, ಸತ್ಸಂಗದಲ್ಲಿ ತೊಡಗಿಸಿಕೊಳ್ಳಬೇಕು, ಎಂದು ಹೇಳುವ ಮತ್ತು ಹಾಗೆ ಮಾಡುವುದಕ್ಕೆ ಸೂಕ್ತ ಮಾರ್ಗಗಳನ್ನು ಸೂಚಿಸುವ ಅಸಂಖ್ಯಾತ ಬೋಧನೆಯು ಜಗತ್ತಿನ ಎಲ್ಲಡೆಯಲ್ಲೂ ನಮಗೆ ಹೇರಳವಾಗಿ ಸಿಗುತ್ತದೆ. ಆದರೆ ಮನಸ್ಸು ಚಂಚಲ ಎಂದು ಎಲ್ಲರಿಗೂ ಗೊತ್ತಿರುವ ಮತ್ತು ಎಲ್ಲರೂ ಒಪ್ಪಿಕೊಂಡಿರುವ ವಿಷಯ, ಅಲ್ಲವೇ? “ಹರಿದಾಡುವಂಥಾ ಮನವ ನಿಲಿಸುವುದು ಬಲು ಕಷ್ಟ” ಎಂದು ಪುರಂದರದಾಸರು ಹಾಡಿದ್ದಾರೆ. ಎಷ್ಟೇ ಗಟ್ಟಿ ನಿರ್ಧಾರಗಳನ್ನು ಮಾಡಿ ಮನಸ್ಸನ್ನು ಕಟ್ಟಿ ಹಾಕಬೇಕೆಂದು ಶತಪ್ರಯತ್ನ ಮಾಡಿದರೂ, ಪಾದರಸದಂತೆ ಹರಿದಾಡುವ ಮನಸ್ಸನ್ನು ಕಟ್ಟಿ ಹಾಕುವುದು ಸಾಧ್ಯವಿಲ್ಲ. ಇದು ಸರ್ವೇಸಾಮಾನ್ಯ ಎಲ್ಲರಿಗೂ ಅನ್ವಯವಾಗುತ್ತದೆ. ಮಾನವ ಜನಾಂಗದ ಇತಿಹಾಸದಲ್ಲಿ ಕೇವಲ ಬೆರಳೆಣಿಕೆಯಷ್ಟು ಜನರಿಗೆ ಮಾತ್ರ ತಮ್ಮ ಮನಸ್ಸಿನ ಮೇಲೆ ಸಂಪೂರ್ಣ ಹತೋಟಿಯು ಸಿದ್ಧಿಯಾಗಿದ್ದಿರಬಹುದು. ಅಂದರೆ ಸಾಮಾನ್ಯರ ಮನಸ್ಸು ಮಾತ್ರ ಚಂಚಲ.

ಕಠೋಪನಿಷತ್ತಿನಲ್ಲಿ 'ಮನಃ ಪ್ರಗ್ರಹಮೇವ ಚ' ಎಂದು ಹೇಳಲ್ಪಟ್ಟಿದೆ. ಪ್ರಗ್ರಹವೆಂದರೆ ಕುದುರೆಗಳಿಗೆ ಹಾಕುವ ಲಗಾಮು ಎಂದು ಅರ್ಥ. ಆ ಕುದುರೆಗಳೇ ನಮ್ಮ ಇಂದ್ರಿಯಗಳು ಮತ್ತು ಅವುಗಳಿಗಿರುವುದು ಕೇವಲ ವಿಷಯಾಸಕ್ತಿ. “ಇಂದ್ರಿಯಾಣಿ ಹಯಾನಾಹುರ್ವಿಷಯಾನ್” ಎಂದು ಹೇಳುತ್ತ ಈ ಮನಸ್ಸೆಂಬ ಲಗಾಮಿನಿಂದ, ವಿಷಯಗಳ ಬೆನ್ನು ಹತ್ತಿದ ನಮ್ಮ ಇಂದ್ರಿಯ ರೂಪದ, ಕುದುರೆಗಳನ್ನು ಬುದ್ಧಿಯೆಂಬ ಸಾರಥಿ ತನ್ನ ಹಿಡಿತದಲ್ಲಿಟ್ಟುಕೊಂಡರೆ ಆಗ ನಮ್ಮ ಬದುಕಿನ ಯಜಮಾನನಾದ ಆತ್ಮವು ತಾನು ಸೇರಬೇಕಾದ ಗಮ್ಯವನ್ನು ಸೇರುವುದು, ಎಂದು ಹೇಳುತ್ತಿದೆ ಕಠೋಪನಿಷತ್ತು.

ನಮ್ಮ ಮನಸ್ಸು ಚಂಚಲ, ನಮ್ಮ ಕೈಯಲ್ಲಿ ಅದನ್ನು ನಿಗ್ರಹಿಸುವುದಕ್ಕೆ ಸಾಧ್ಯವಿಲ್ಲ, ಎಂದು ಅದು ಹೋದಲ್ಲಿಗೆ ಹೋಗಲು ಬಿಡದೆ, ಸಾಧ್ಯವಾದಷ್ಟು ಮಟ್ಟಿಗೆ ತಡೆದು, ಎಲ್ಲ ಆಲೋಚನೆಗಳಿಗೂ ಒಂದು ಅಣೆಕಟ್ಟನ್ನು ಕಟ್ಟಿ, ನದಿಯನ್ನು ನೀರಾವರಿಗಾಗಿ ನಾಲೆಗಳ ಮೂಲಕ ಹರಿಬಿಡುವಂತೆ, ಚಂಚಲ ಮನಸ್ಸಿನ ಹರಿದಾಟ ಪರದಾಟವನ್ನು ಸಹಿಸಿಕೊಂಡು, ಮನದ ಆಲೋಚನೆಗಳನ್ನು ಸರಿದಾರಿಯಲ್ಲಿ ಹರಿಯ ಬಿಟ್ಟರೆ ನಮ್ಮ ಜೀವನದಲ್ಲೂ ಒಳ್ಳೆಯ ಫಲಕೊಡುವ ಫಸಲನ್ನು ಬೆಳೆದುಕೊಳ್ಳಬಹುದು. ಅಂತಹ ಪ್ರಯತ್ನವನ್ನು ನಾವೆಲ್ಲರೂ ಮಾಡಬಹುದು.

# ಬೆಪ್ಪನಾರ್ 299-303

**ಮುಕ್ತಕ-299**

**ಹಟವಾದಕೆಡೆಯಲ್ಲಿ ಮನುಜಪ್ರಪಂಚದಲಿ |**
**ಸಟೆಯೆಷ್ಟೋ ದಿಟವೆಷ್ಟೋ ಬೆರೆತಿರುವಿಲ್ಲಿ ||**
**ಪಟುವಾಗಿ ನಿಲಲಹುದ ಮಣಲೊಳೆಸಗಿದ ಗೋಡೆ? |**
**ಕಟುತೆ ಸಲ್ಲದು ಜಗಕೆ – ಮಂಕುತಿಮ್ಮ ||**

ಹಟವಾದಕೆಡೆಯಲ್ಲಿ=ಹಟವಾದಕೆ+ಎಡೆಯಲ್ಲಿ, ಬೆರೆತಿರುವಿಲ್ಲಿ=ಬೆರೆತು+ಇರುವ+ಇಲ್ಲಿ,
ನಿಲಲಹುದೆ=ನಿಲಲು+ಅಹುದೆ, ಮಣಲೊಳೆಸಗಿದ=ಮಣಲೊಳು+ಎಸಗಿದ.
ಮಣಲೊಳು=ಮರಳಿನಲ್ಲಿ, ಕಟುತೆ=ಖಂಡಿತ ವಾದ, ಸಲ್ಲದು=ಸರಿಯಲ್ಲ.

ಖಂಡಿತವಾದಕ್ಕೆ ಅಥವಾ ಹಟವಾದಕ್ಕೆ ಈ ಜಗತ್ತಿನಲ್ಲಿ ಸ್ಥಾನವಿಲ್ಲ. ಏಕೆಂದರೆ ಈ ಜಗತ್ತಿನಲ್ಲಿ ನಿಜ ಮತ್ತು ಸುಳ್ಳು ಸಮಾನ ಪ್ರಮಾಣದಲ್ಲಿ ಬೆರೆತಿದೆ. ಹೀಗೆ ಸುಳ್ಳು ಸತ್ಯಗಳ ಸಂಮಿಶ್ರಣದಿಂದ ಆದ ಜಗತ್ತು ಹೇಗಿದೆಯೆಂದರೆ

ಮರಳಲ್ಲಿ ಕಟ್ಟಿದ ಗೋಡೆಯಂತಿದೆ. ಹಾಗಾಗಿ ಜಗತ್ತಿನಲ್ಲಿ, ಇದು ಹೀಗೇ ಇರಬೇಕು ಎಂದಾಗಲೀ ಅಥವಾ ಇದು ಹೀಗೇ ಆಗಬೇಕು ಎಂಬ ಕಟುತ್ವ ಇರಬಾರದು, ಎಂದು ಪ್ರಸ್ತಾಪಮಾಡುತ್ತಾರೆ, ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ತಾವು ಹೇಳಿದ ವಿಚಾರವೇ ಸರಿ ಅಥವಾ ತಾವು ಮಾಡಿದ ಕೆಲಸವೇ ಸರಿ, ಎಂದು ಹಠ ಮಾಡುವವರನ್ನು ಕಾಣುತ್ತೇವೆ. ತಾವು ಹೇಳುವುದನ್ನು ಶತಾಯ ಗತಾಯ ಸಾಧಿಸಲು ಹಠ ಮಾಡುತ್ತಾರೆ. ಆದರೆ ಅವರು ಮಾಡಬೇಕಾದ ಕೆಲಸ ಮಾಡಿ ಪೂರ್ತಿಗೊಳಿಸಿದ ಮೇಲೆ, ಮುಂದೇನು? ಎಂದರೆ ಏನೂ ಇರುವುದಿಲ್ಲ. ಅಥವಾ ಸ್ವಲ್ಪ ದಿವಸವಾದ ಮೇಲೆ ಅವರಿಗೆ ತಾವು ಮಾಡಿದ ಕೆಲಸ ಸರಿಯಲ್ಲವೆಂದು ಅರ್ಥವಾಗುತ್ತದೆ. ಅವರ ಹಠವನ್ನು ಒಪ್ಪಿಕೊಳ್ಳಲು ಅವರ ಅಹಂಕಾರ ಅಡ್ಡ ಬರುತ್ತದೆ. ನಾವು ನಂಬಿದ ವಿಚಾರಗಳು ಮತ್ತು ನೋಡಿದ ಘಟನೆಗಳು ಸ್ವಲ್ಪ ಸಮಯವಾದ ನಂತರ ಸುಳ್ಳೆಂದೂ ಕಾಣಬಹುದು. ಹಾಗೇ ಇಂದು ಸರಿಯಲ್ಲ ಅಥವಾ ಸುಳ್ಳು ಎಂಬುದು ನಂತರ ಸ್ವಲ್ಪ ದಿನವಾದಮೇಲೆ ಸತ್ಯವಾಗಿ ನಮ್ಮ ಮುಂದೆ ಧುತ್ತೆಂದು ಬಂದು ನಿಂತು ನಮ್ಮ ನಂಬಿಕೆಯನ್ನು ಅಲುಗಾಡಿಸಬಹುದು.

(121)

| ಬೆಪ್ಪನಾರ್ 299-303 | ಕಗ್ಗ ರಸಧಾರೆ-2 |
|---|---|

ನಮ್ಮ ನಂಬಿಕೆಗಳು ಮತ್ತು ವಿಶ್ವಾಸಗಳು ಸದಾ ಕಾಲ ಗಟ್ಟಿಯಾಗಿರದೆ, ಮರಳಿನಿಂದ ಕಟ್ಟಿದ ಗೋಡೆಯಂತೆ ಕುಸಿಯುತ್ತಾ ಇರುತ್ತವೆ. ಹಿಂದಿನ ನಂಬಿಕೆಗಳು ಬೀಳುತ್ತಾ ಹೊಸ ನಂಬಿಕೆಗಳು ಹುಟ್ಟಿಕೊಳ್ಳುತ್ತಾ ಮತ್ತು ಅವೂ ಕುಸಿಯುತ್ತಾ ಇರುವ ಈ ಬದುಕಿನಲ್ಲಿ ನಾವು ಯಾವುದೋ ಒಂದಕ್ಕೆ ಹಠದಿಂದ ಅಂಟಿಕೊಂಡಿರುವುದು ಸರಿಯಲ್ಲ ಎಂದು ಸ್ಪಷ್ಟವಾಗಿ ಅಭಿಪ್ರಾಯಪಟ್ಟಿದ್ದಾರೆ ಮಾನ್ಯ ಗುಂಡಪ್ಪನವರು. ಇದನ್ನು ಒಪ್ಪಿದರೆ, ನಾವು ಯಾವುದನ್ನು ನಂಬಬೇಕು ಯಾವುದನ್ನು ಬಿಡಬೇಕು ಎನ್ನುವ ಪ್ರಶ್ನೆ ಉದ್ಭವವಾಗುತ್ತದೆಯಲ್ಲವೇ? ಕಾಲಕಾಲಕ್ಕೆ ಬದಲಾಗುವ ವಿಷಯಗಳನ್ನು ಮತ್ತು ಅದಕ್ಕಂಟಿದ ಮೌಲ್ಯಗಳನ್ನು ಒಪ್ಪಿಕೊಳ್ಳುತ್ತಾ ಬದಲಾಗುವ ಕಾಲಕ್ಕೆ ಸರಿಯಾಗಿ ನಾವೂ ಬದಲಾಗುತ್ತಾ ಶಾಂತವಾಗಿ ಜೀವನ ನಡೆಸಿದರೆ ನೆಮ್ಮದಿಯಾಗಿರಬಹುದು. ಯಾವುದಕ್ಕೋ ಗಟ್ಟಿಯಾಗಿ ಅಂಟಿಕೊಂಡು ಹಠಮಾಡುವುದರಿಂದ ನೆಮ್ಮದಿ ಹಾಳು ಅಷ್ಟೇ.

**ಮುಕ್ತಕ-300** **ಗಿಡದಿ ನಗುತಿರುವ ಹೂ ಪ್ರಕೃತಿಸಖನಿಗೆ ಚೆಂದ।**
**ಮಡದಿ ಮುಡಿದಿರುವ ಹೂ ಯುವಕಂಗೆ ಚೆಂದ॥**
**ಗುಡಿಯೊಳಗೆ ಕೊಡುವ ಹೂ ದೈವಭಕ್ತಂಗೆ ಚೆಂದ।**
**ಬಿಡಿಗಾಸು ಹೂವಳಗೆ - ಮಂಕುತಿಮ್ಮ॥**

ಪ್ರಕೃತಿಸಖನಿಗೆ=ನಿಸರ್ಗ ಪ್ರೇಮಿ, ಹೂವಳಗೆ=ಹೂಮಾರುವವಗೆ.

ಗಿಡದಲ್ಲಿ ಅರಳಿದ ಹೂ ಕಂಡು ನಿಸರ್ಗ ಪ್ರೇಮಿ ಸಂತಸಪಡುತ್ತಾನೆ. ಅದೇ ಹೂವನ್ನು ತನ್ನ ಮಡದಿಯ ತುರುಬಿನಲ್ಲಿ ಕಂಡು ಆನಂದಿಸುತ್ತಾನೆ ರಸಿಕ ಯುವಕ. ಆ ಹೂವನ್ನು ದೇವಾಲಯದಲ್ಲಿ ದೇವರ ಪಾದಕ್ಕೆ ಭಕ್ತಿಯಿಂದ ಸಮರ್ಪಿಸಿ ಶ್ರದ್ಧೆಯಿಂದ ಪ್ರಸಾದದ ರೂಪದಲ್ಲಿ ಸ್ವೀಕರಿಸುತ್ತಾನೆ ಭಕ್ತ. ಆದರೆ ಯಾರು ಹೇಗೆ ಉಪಯೋಗಿಸಿಕೊಂಡರೂ ಆ ಹೂವನ್ನು ಮಾರುವವನಿಗೆ ಅದು ಮಾರಾಟವಾಗಿ ಅವನಿಗೆ ಕಾಸು ಬಂದರೆ ತೃಪ್ತಿ, ಎಂದು ಸಾಮಾನ್ಯ ಬದುಕಿನ ಒಂದು ಸತ್ಯವನ್ನು ವಿಮರ್ಶಿಸಿದ್ದಾರೆ, ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಇಲ್ಲಿ ಅವರು ಹೇಳಿರುವುದು ಕೇವಲ ಕೆಲವು ದೃಷ್ಟಾಂತಗಳು ಅಷ್ಟೇ. ಈ ದೃಷ್ಟಾಂತವನ್ನು ನಾವು ಉಪಯೋಗಿಸುವ ಎಲ್ಲ ವಸ್ತುಗಳಿಗೂ ಅನ್ವಯಿಸಿಕೊಳ್ಳಬಹುದು. ಅವರವರ ಅವಶ್ಯಕತೆಗನುಸಾರವಾಗಿ ಒಂದು ವಸ್ತುವಿನ ಉಪಯೋಗ ಮತ್ತು ಅದರಿಂದ ಸಿಗುವ ಆನಂದ ಅಥವಾ ತೃಪ್ತಿಯೂ ಬಗೆಬಗೆಯದು. ಇದು ನಮ್ಮೆಲ್ಲರ ಅನುಭವಕ್ಕೂ ಬಂದೇ ಇರುತ್ತದೆ. ಒಂದೇ ವಸ್ತುವನ್ನು ಒಂದೇ ಸಮಯದಲ್ಲಿ ಬಗೆಬಗೆಯ ರೀತಿಯಲ್ಲಿ ಉಪಯೋಗಿಸಲಾಗುತ್ತದೆ.

ಇದು ಪ್ರತಿಯೊಬ್ಬರ ಮನೋಭಾವಕ್ಕೆ ಸಂಬಂಧಿಸಿದ್ದು, ಯಾರು ಯಾವುದಕ್ಕೆ ಎಷ್ಟು ಮಹತ್ವವನ್ನು ಕೊಡುತ್ತಾರೆ ಎನ್ನುವುದರ ಮೇಲೆ ಅವರಿಗೆ ಆ ವಸ್ತುವಿನಿಂದ ಸಿಗುವ ಆನಂದದ ಪ್ರಮಾಣ ನಿರ್ಧಾರವಾಗುತ್ತದೆ. ಏಕೆಂದರೆ ಪ್ರಕೃತಿಯನ್ನು ಮತ್ತು ಅದರೊಳಗಿನ ಹೂವನ್ನು ನೋಡಿ ಅನಂದಿಸುವವನಿಗೆ, ನಿಸರ್ಗದಲ್ಲಿ ಹೂಗಳೇ

ಕಾಣದಿದ್ದರೆ ಅಥವಾ ಮಡದಿಯ ತುರುಬಿನಲ್ಲಿ ಹೂ ನೋಡಿ ಆನಂದಪಡುವವನ ಮಡದಿಗೆ ಹೂಗಳೆಂದರೇನೇ ಆಗದಿದ್ದರೆ ಅಥವಾ ಗುಡಿಯಲ್ಲಿ ಹೂ ಸ್ವೀಕರಿಸುವವನಿಗೆ ಭಕ್ತಿಯೇ ಇಲ್ಲದಿದ್ದರೆ ಚೆಂದವಿರುವುದಿಲ್ಲ ಅಲ್ಲವೇ?

ಹಾಗಾಗಿ ನಮಗೆ ಆನಂದ ಸಿಗಬೇಕಾದರೆ ಇಷ್ಟಪಟ್ಟ ವಸ್ತು, ಇಷ್ಟಪಟ್ಟ ಸಮಯದಲ್ಲಿ, ಇಷ್ಟಪಟ್ಟ ಪ್ರಮಾಣದಲ್ಲಿ ಸಿಕ್ಕರೆ ಚೆನ್ನ ಅಲ್ಲವೇ? ಆದರೆ ನಿಜ ಜೀವನದಲ್ಲಿ ಹಾಗೆ ಆಗುವುದು ತೀರ ವಿರಳ. ನಾವು ಬಯಸಿದ ವಸ್ತು, ಬಯಸಿದ ಸಮಯದಲ್ಲಿ ಸಿಗುವುದು ಬಹಳ ಅಪರೂಪ. ಹಾಗೆ ಸಿಕ್ಕರೆ ಅವರೇ ಅದೃಷ್ಟಶಾಲಿಗಳು. ಹಲಬಾರಿ ನಾವು ಬಯಸಿದ ಸಮಯ ಮತ್ತು ವಸ್ತುವೇ ತಪ್ಪಾಗಿರಬಹುದು. ನಾವು ಬಯಸಿದ ವಸ್ತು ಮತ್ತು ತದಾಧಾರಿತ ಆನಂದ ಅಥವಾ ಸಂತೋಷ ಸಿಗದಿದ್ದರೆ ಬೇಸರವಾಗುತ್ತದೆ. ನಾವು ಬಯಸಿದ ವಸ್ತು ಸಿಗದಿದ್ದಾಗ, ಸಿಕ್ಕ ವಸ್ತುವಿನಲ್ಲಿ ತೃಪ್ತಿ ಮತ್ತು ಆನಂದ ಪಟ್ಟರೆ ಮನಸ್ಸಿಗೂ ಒಳ್ಳೆಯದು ದೇಹಕ್ಕೂ ಒಳ್ಳೆಯದು.

**ಮುಕ್ತಕ - 301.**

**ಇಲ್ಲಿ ಚೆನ್ನಲ್ಲಿ ಚೆನ್ನೆಲ್ಲೋ ಚೆನ್ನೆನುತೆಣಿಸಿ |**
**ಹುಲ್ಲು ಬಯಲೊಂದೆಡೆಯಿನೊಂದಕ್ಕೆ ನೆಗೆದು ||**
**ಮೆಲ್ಲದೆಯೆ ಧಾವಿಸುತ ದಣಿವ ಕರುವನು ಪೋಲ್ತೋ ||**
**ಡೆಲ್ಲಿಯೋ ಸುಖ ನಿನಗೆ – ಮಂಕುತಿಮ್ಮ ||**

ಚೆನ್ನಲ್ಲಿ=ಚೆನ್ನ+ಅಲ್ಲಿ, ಚೆನ್ನೆಲ್ಲೋ=ಚೆನ್ನ+ಎಲ್ಲೋ, ಚೆನ್ನೆನುತೆಣಿಸಿ=ಚೆನ್ನ+ಎನುತ+ಎಣಿಸಿ,
ಬಯಲೊಂದೆಡೆಯಿನೊಂದಕ್ಕೆ ಬಯಲ+ಒಂದೆಡೆಯಿಂದ+ಇನ್ನೊಂದಕ್ಕೆ
ಪೋಲ್ಲೋಡೆಲ್ಲಿಯೋ=ಪೋಲೊಡೆ+ಎಲ್ಲಿಯೋ.
ಪೋಲ್ತೋಡೆ=ಹೋಲಿದಂತೆ, ಹಾಗೆ,

ವಿಶಾಲವಾದ ಹುಲ್ಲ ಬಯಲಿನಲ್ಲಿ ಒಂದು ಆಕಳ ಕರು ಚಂಗು ಚಂಗೆಂದು ನೆಗೆಯುತ್ತಾ, ಒಳ್ಳೆಯ ಹುಲ್ಲು ಇಲ್ಲಿದೆ, ಅಲ್ಲಿ ಚೆನ್ನಾಗಿದೆ ಅಥವಾ ಇನ್ನೂ ಎಲ್ಲೋ ಚೆನ್ನಾಗಿರಬಹುದು, ಎಂದು ಯೋಚಿಸಿ, ಎಲ್ಲ ಕಡೆ ಓಡಿ, ಕಡೆಗೆ ಎಲ್ಲಿಯೂ

ಮೆಲ್ಲದೆಯೇ, ಓಡಿ ಓಡಿ ದಣಿವಂತೆ ಇದೆ ನಿನ್ನ ಪರಿಸ್ಥಿತಿ. ಈ ವಸ್ತುವಿನಲ್ಲಿ ಸುಖವಿದೆ, ಆ ವಸ್ತುವಿನಲ್ಲಿ ಆನಂದವಿದೆ ಅಥವಾ ನಾ ಹುಡುಕುವ ಸುಖ ಮತ್ತು ಆನಂದ ಬೇರೆ ಯಾವ ವಸ್ತುವಿನಲ್ಲಿದೆಯೋ ಎಂದು ವಸ್ತುವಿನಿಂದ ವಸ್ತುವಿಗೆ ಮತ್ತು ವಿಷಯದಿಂದ ವಿಷಯಕ್ಕೆ ನೆಗೆ-ನೆಗೆದು ನೀ ದಣಿಯುತಿದ್ದೀಯಲ್ಲ, ನಿನಗಾವುದರೊಳಗೆ ಸುಖ? ಎಂದು ಸುಖದಾಸೆಯ ಭ್ರಮೆಯಲ್ಲಿ ಸುತ್ತುವ ನಮ್ಮನ್ನು ಒಂದು ಪ್ರಶ್ನೆಯನ್ನು ಕೇಳಿದ್ದಾರೆ ಮಾನ್ಯ ಗುಂಡಪ್ಪನವರು.

ಮನುಷ್ಯನೂ ಸೇರಿದಂತೆ ಪ್ರತೀ ಪ್ರಾಣಿಯೂ ಸುಖವನ್ನೇ ಬಯಸುತ್ತದೆ. ಆದರೆ ಸುಖ ಎಂದರೆ ಏನು? ಅದು ಎಲ್ಲಿ ಸಿಗುತ್ತದೆ ಮತ್ತು ಹೇಗೆ ಸಿಗುತ್ತದೆ ಎನ್ನುವುದು ಸಂಪೂರ್ಣವಾಗಿ ಯಾರಿಗೂ ತಿಳಿದಿಲ್ಲ. ನಾವು





ಅ ಸುಖವನ್ನು ಎಲ್ಲಂದರಲ್ಲಿ ಹುಡುಕುತ್ತೇವೆ. ನಾವು ಯಾವುದೋ ಒಂದು ವಸ್ತುವಿನಿಂದ ಸುಖ ಸಿಗುತ್ತದೆ ಎಂದು ಅಂದುಕೊಳ್ಳುತ್ತೇವೆ ಮತ್ತು ಅದನ್ನು ಪಡೆಯಲು ಪ್ರಯತ್ನಿಸುತ್ತೇವೆ. ಅದು ಸಿಕ್ಕ ನಂತರ, ತತ್ಕಾಲದಲ್ಲಿ ಸುಖವನ್ನು ಅನುಭವಿಸಿದ ನಂತರ ಅಯ್ಯೋ ಇಷ್ಟೇನೇ, ಎನ್ನುವ ಭ್ರಮನಿರಸನಕ್ಕೊಳಗಾಗುತ್ತೇವೆ. ಅಲ್ಲಿಂದ ನಮ್ಮ ಹುಡುಕಾಟ ಮತ್ತೆ ಶುರುವಾಗುತ್ತದೆ. ಈ ಸುಖದ ಭ್ರಮೆಗೆ ಕೊನೆಯೇ ಇಲ್ಲ ಅಲ್ಲವೇ? ಈ ಭ್ರಮೆ ಒಬ್ಬೊಬ್ಬರಲ್ಲಿ ಒಂದೊಂದು ರೀತಿ ಇರುತ್ತದೆ. ಪ್ರಮಾಣ ಭೇದವಿದ್ದರೂ ಭ್ರಮೆಯಂತೂ ಎಲ್ಲರಲ್ಲೂ ಇದ್ದೇ ಇರುತ್ತದೆ.

ಇಂದ್ರಿಯ ಪ್ರೇರಿತವಾದ ಈ ದೇಹಕ್ಕೆ ನಾವು ಅಂಟಿಕೊಂಡಿರುವವರೆಗೆ ನಾವು ಈ ಸುಖದ ಭ್ರಮೆಯಲ್ಲೇ ಜೀವಿಸುತ್ತೇವೆ. ಮನಸ್ಸು ಬುದ್ಧಿ ದೇಹ ಮತ್ತು ಆತ್ಮಗಳ ಸಮ್ಮಿಲನದಿಂದಾದ ನಮ್ಮ ಅಸ್ತಿತ್ವದಲ್ಲಿ, ನಮ್ಮನ್ನು ನಾವು ಎಲ್ಲಿಯ ತನಕ ಮನಸ್ಸು, ಬುದ್ಧಿ, ದೇಹಗಳೊಂದಿಗೆ ಗುರುತಿಸಿಕೊಳ್ಳುತ್ತೇವೆಯೋ ಅಲ್ಲಿಯ ತನಕ ಈ ಭ್ರಮೆ ನಮ್ಮನ್ನು ಬಿಡುವುದಿಲ್ಲ. ಒಂದಲ್ಲ ಒಂದು ರೀತಿಯಲ್ಲಿ ಬೇರೆ ಬೇರೆ ರೀತಿಯ ಸುಖಕ್ಕಾಗಿ 'ಹುಲ್ಲ ಮೇಯಲು ಹೊರಟ ಕರುವಿನಂತೆ' ನಾವೂ ಸಹ ಪರದಾಡುತ್ತಿರುತ್ತೇವೆ.

ಹಾಗಲ್ಲದೆ, 'ನಾನು' ಎಂದರೆ ಆತ್ಮ ಎಂಬುದು ಯಾವಾಗ ಸಂಪೂರ್ಣ ಅರಿವಾಗುತ್ತದೋ, ಅಂದು ನಮ್ಮ ಸುಖದ ಭ್ರಮೆಯ ಹಿಂದಿನ ಓಟ ನಿಲ್ಲಬಹುದು. ಅದಕ್ಕೆ ನಮಗೆ ನಿಜವಾದ ಸುಖವೆಂದರೇನು ಎಂದು ಅರಿವಾಗಬೇಕು. ಆ ಅರಿವು ಮೂಡಿದೊಡನೆಯೇ ನಮ್ಮ ಓಟ ನಿಲ್ಲುತ್ತದೆ ಮತ್ತು ಇಂದ್ರಿಯಾತೀತವಾದ ಆನಂದದ ಅನುಭವವಾಗುತ್ತದೆ. ಸತ್ಯವಾದ ಮತ್ತು ನಿತ್ಯವಾದ ಸುಖ ಬೇಕಾದವರು ಅಂತಹ ಪ್ರಯತ್ನವನ್ನು ಮಾಡಬೇಕು. ಇಲ್ಲ ಈ ಜಗತ್ತನ್ನು ಬಿಟ್ಟರೆ, ಬೇರೆ ಏನಿದೆ ಎಂದು ನನಗೆ ಗೊತ್ತಿಲ್ಲ. ಇಲ್ಲಿರುವಾಗ ಈ ಸುಖವನ್ನು ಅನುಭವಿಸಿಬಿಡುತ್ತೇನೆ, ಎಂದು ಹೇಳುವವರಿಗೆ ಸುಖದ ಭ್ರಮೆಯ ಓಟ ನಿಲ್ಲುವುದೇ ಇಲ್ಲ. ಆಯ್ಕೆಯ ಸಂಪೂರ್ಣ ಸ್ವಾತಂತ್ರ್ಯ ನಮಗಿದೆ ಅಲ್ಲವೇ?

**ಮುಕ್ತಕ-302**

**ಹೊತ್ತು ಕಣಕಣದಿ ಮಣ್ಣನು ಗೆದ್ದಲಿರುವೆಗಳು।**
**ಮೆತ್ತುತೆಡೆಬಿಡದೆ ದುಡಿದಾಗಿಸಿದ ಗೂಡು॥**
**ಹುತ್ತವಾಗುವುದು ವಿಶಸರ್ಪಕ್ಕೆ ಮಾನವನ।**
**ಯತ್ನಗಳ ಕಥೆಯಷ್ಟೆ - ಮಂಕುತಿಮ್ಮ॥**

ಗೆದ್ದಲಿರುವೆಗಳು=ಗೆದ್ದಲು+ಇರುವೆಗಳು, ಮೆತ್ತುತೆಡೆಬಿಡದೆ=ಮತ್ತುತ್ತ+ಎಡೆ+ಬಿಡದೆ,
ದುಡಿದಾಗಿಸಿದ=ದುಡಿದು+ಆಗಿಸಿದ.
ಎಡೆಬಿಡದೆ=ನಿರಂತರ, ಬಿಡುವು ಕೊಡದೆ.

ಇರುವೆಗಳು ಮಣ್ಣ ಕಣ ಕಣವನ್ನು ನಿರಂತರವಾಗಿ ಹೊತ್ತು ತಂದು ಬಹಳ ಶ್ರಮ ಪಟ್ಟು ಗೂಡನ್ನು ಕಟ್ಟುತ್ತವೆ. ಆದರೆ ಅದರೊಳಕ್ಕೆ ಒಂದು ಹಾವು ಬಂದು ವಾಸಿಸುತ್ತದೆ. ಇರುವೆಗಳ ಶ್ರಮ ಅವುಗಳ ಮಟ್ಟಿಗೆ

ಸಂಪೂರ್ಣ ವ್ಯರ್ಥವಾಗುತ್ತದೆ. ಹಾಗೆಯೇ ಮನುಷ್ಯರು ನಿರಂತರ ಶ್ರಮಪಟ್ಟು ಕೆಲಸಮಾಡಿ ಆ ಕೆಲಸದ ಫಲವನ್ನು ಪರರು ಕಸಿದುಕೊಂಡು ಬಿಡುತ್ತಾರೆ, ಎಂದು ಒಂದು ಜಗತ್ಸತ್ಯವನ್ನು ಪ್ರಸ್ತಾಪಿಸುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಜಗತ್ತಿನಲ್ಲಿ ಎಲ್ಲರೂ ಯಾವುದಾದರೊಂದು ಕೆಲಸ ಮಾಡುತ್ತಲೇ ಇರಬೇಕು. ಇದು ಧರ್ಮ. ನಮ್ಮ ಮನೆಯವರಿಗಾಗಿ ನಾವು ದುಡಿಯುತ್ತೇವೆ. ಹಾಗೆ ಮಾಡುವ ಕೆಲಸಕ್ಕೆ ಒಂದು ಫಲ. ಆದರೆ ಆ ಕೆಲಸ ಮಾಡುವವರು ತಾವು ಮಾಡಿದ ಕೆಲಸದ ಸಂಪೂರ್ಣ ಫಲವನ್ನು ತಾವೇ ಅನುಭವಿಸಲು ಸಾಧ್ಯವೇ ಇಲ್ಲ. ಆ ಫಲ ಹಣದ ರೂಪದಲ್ಲಿರಬಹುದು, ಸಂತೋಷದ ರೂಪದಲ್ಲಿರಬಹುದು, ಪುಣ್ಯದ ರೂಪದಲ್ಲಿರಬಹುದು ಅಥವಾ ಪಾಪದ ರೂಪದಲ್ಲಿಯೂ ಇರಬಹುದು. ನಾವು ಮಾಡಿದ ಕೆಲಸದಿಂದ ಬಂದ ಪುಣ್ಯವನ್ನು ಹಂಚಿಕೊಳ್ಳಲು ಎಲ್ಲರೂ ಇರುತ್ತಾರೆ. ಆದರೆ ನಮ್ಮ ಕೆಲಸದ ಪರಿಣಾಮವಾಗಿ ಏನಾದರೂ ಪಾಪವುಂಟಾದರೆ, ಹಂಚಿಕೊಳ್ಳಲು ಯಾರೂ ಇಷ್ಟಪಡುವುದಿಲ್ಲ. ಇಲ್ಲಿ ಅಂಗುಲಿಮಾಲನ ಕಥೆಯ ದೃಷ್ಟಾಂತವನ್ನು ಓದುಗರು ನೆನಪಿಸಿಕೊಳ್ಳಬೇಕು.

ಎಷ್ಟೋ ಬಾರಿ ನಾವು ಕಷ್ಟಪಟ್ಟು ಒಂದು ಕೆಲಸವನ್ನು ಮಾಡಿ ಮುಗಿಸುತ್ತೇವೆ. ಮಧ್ಯದಲ್ಲಿ ಯಾರೋ ಅದರ ಶ್ರೇಯಸ್ಸನ್ನು ಬಾಚಿಕೊಂಡುಬಿಡುತ್ತಾರೆ. ಇದು ಬಹುಶಃ ಸಾಹಿತ್ಯ, ವೈಜ್ಞಾನಿಕ ಸಂಶೋಧನೆ ಮುಂತಾದ ಕ್ಷೇತ್ರಗಳಲ್ಲಿ ಸರ್ವೇಸಾಮಾನ್ಯ. ಯಾರೋ ಒಬ್ಬರು ಕಷ್ಟಪಟ್ಟು ಸಾಧಿಸಿದ ಸಾಧನೆಯ ಫಲವನ್ನು ಯಾರೋ ಕದ್ದು ಬಿಡುವುದನ್ನು ನಾವೆಲ್ಲಾ ನೋಡಿಲ್ಲವೇ? 'ಯತ್ನಗಳ ಕಥೆಯಷ್ಟೆ' ಎಂದು ಗುಂಡಪ್ಪನವರು ಇಂತಹವರ ಬಗ್ಗೆ ಹೇಳಿ ನಮಗೆ ಜಗತ್ತಿನ ವಿದ್ಯಮಾನವನ್ನು ತಿಳಿಹೇಳುತ್ತಾರೆ.

ಒಬ್ಬರ ಶ್ರಮದ ಫಲವನ್ನು ಮತ್ತೊಬ್ಬರು ಕಸಿದುಕೊಳ್ಳುವುದು ಸರ್ವೇಸಾಮಾನ್ಯವಾಗಿರುವ ಈ ಕಾಲದಲ್ಲಿ ನಾವು ನಮ್ಮ ಜಾಗರೂಕತೆಯಲ್ಲಿ ಇದ್ದರೆ ಒಳ್ಳೆಯದು. ಏಕೆಂದರೆ ಸತ್ಯವಂತರಿಗಿದು ಕಾಲವಲ್ಲ, ದುಷ್ಟಜನರಿಗೆ ಇದು ಸುಭಿಕ್ಷಕಾಲ, ಎಂದು ನಮ್ಮ ಪುರಂದರದಾಸರು ಎಂದೋ ಹೇಳಿಲ್ಲವೇ. ಅವರು ಅಂದೇ ಹಾಗೆ ಹಾಡಿದ್ದಾರೆ, ಇಂದು ಏನು ಹೇಳುತ್ತಿದ್ದರೋ? ಹಾಗಾಗಿ ಎಚ್ಚರವಾಗಿರಬೇಕು. ನಮ್ಮಿಂದ ಯಾರೂ ಏನನ್ನೂ ಕಸಿದುಕೊಳ್ಳದಂತೆ ಎಚ್ಚರವಾಗಿರಬೇಕು.

**ಮುಕ್ತಕ-303** 

**ಅಪ್ಪಾಲೆ ತಿಪ್ಪಾಲೆ ತಿರುಗಿಬಿದ್ದವನೊಬ್ಬ |**
**ಸ್ವಪ್ನಲೋಕದಿ ತಿರೆಯ ಮರೆತಾತನೊಬ್ಬ ||**
**ತಪ್ಪುಸರಿಗಳ ತೂಕವಳೆಯೆ ಕುಳಿತವನೊಬ್ಬ |**
**ಬೆಪ್ಪನಾರ್ ಮೂವರಲಿ? – ಮಂಕುತಿಮ್ಮ ||**

ತಿರುಗಿಬಿದ್ದವನೊಬ್ಬ=ತಿರುಗಿ+ಬಿದ್ದವನು+ಒಬ್ಬ, ಮರೆತಾತನೊಬ್ಬ=ಮರೆತ+ಆತನೊಬ್ಬ, ತೂಕವಳೆಯೆ=ತೂಕವ+ಅಳೆಯೆ, ಕುಳಿತವನೊಬ್ಬ=ಕುಳಿತವನು+ಒಬ್ಬ, ಬೆಪ್ಪನಾರ್=ಬೆಪ್ಪನು+ಆರ್.





ಅಪ್ಪಾಲೆ ತಿಪ್ಪಾಲೆ=ಮಕ್ಕಳು ಒಬ್ಬರ ಎರಡೂ ಕೈಗಳನ್ನು ಮತ್ತೊಬ್ಬರು ಎರಡೂ ಕೈಗಳಲ್ಲಿ ಹಿಡಿದು ಕಾಲುಗಳನ್ನು ಗಿರಗಿರನೆ ತಿರುಗಿಸುತ್ತಾ ಆಡುವ ಆಟ, ತಿರೆಯ=ಭಿಕ್ಷೆಯ, ಭ್ರಮೆಯಲ್ಲಿ, ಪೆದ್ದುತನದಲ್ಲಿ

ಚಿಕ್ಕ ಮಕ್ಕಳು ಅಪ್ಪಾಲೆ ತಿಪ್ಪಾಲೆ ಆಡುವಾಗ ತಲೆ ಸುತ್ತಿದಂತಾಗುತ್ತದೆ. ಹಾಗೆ ಈ ಬದುಕಿನಲ್ಲಿ ತಿರುಗಿ ತಿರುಗಿ ತಲೆ ಸುತ್ತಿ ಭ್ರಮೆ ಹಿಡಿದು ಕುಳಿತವನು ಒಬ್ಬ, ತಾನು ತಿರಿದು ತಂದ ಭಿಕ್ಷೆಯನ್ನು, ಕನಸು ಕಾಣುತ್ತಾ ಕಾಲಲ್ಲಿ ಒದ್ದು, ಇದ್ದದ್ದನ್ನೂ ಕಳೆದುಕೊಂಡ 'ತಿರುಕನೋರ್ವನೂರ ಮುಂದೆ' ಎನ್ನುವ ಪದ್ಯದಲ್ಲಿ ಬರುವ ತಿರುಕನಂಥವನೊಬ್ಬ ಮತ್ತು ಸದಾ ಕಾಲ ಅನ್ಯರ ತಪ್ಪು ಸರಿಗಳ ಎಣಿಕೆ ಹಾಕುತ್ತಾ ಕೂರುವವನೊಬ್ಬ. ಈ ಮೂವರಲ್ಲಿ ಬೆಪ್ಪನಾರು ಎಂದು ಕೇಳುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಬದುಕಿನಲ್ಲಿ ನಾವೂ ಸಹ ಯಾವುದನ್ನೂ ಹುಡುಕುತ್ತಾ, ಏನನ್ನೋ ಸಾಧಿಸಬೇಕೆಂದು, ದೇಹದಲ್ಲಿ ಶಕ್ತಿಯಿರುವರೆಗೂ, ತಿರುಗಿ ತಿರುಗಿ ಸುಸ್ತಾಗಿ, ನಮ್ಮ ಶ್ರಮದ ಕ್ರಮವೇನು ಅಥವಾ ಫಲವೇನು ಎಂದು ಅರಿಯಲಾಗದೆ,

ಒಂದು ಭ್ರಮೆಯ ಸ್ಥಿತಿಯಲ್ಲಿ ಸಾಕಪ್ಪ ಸಾಕು, ಎಂದು ಸುಸ್ತಾಗಿ ಕೂರುತ್ತೇವೆ. ನಮಗೆ ನಮ್ಮ ಕೆಲಸದ ನಿಚ್ಚಳ ಚಿತ್ರ ಕಾಣುವುದೇ ಇಲ್ಲ. ಏಕೆಂದರೆ ನಾವು ಮಾಡುವ ಕೆಲಸದ ಹಿಂದೆ ಒಂದು ಭ್ರಮೆ, ಮಾಯೆಯ ಕೈವಾಡ ಸದಾ ಇದ್ದೇ ಇರುತ್ತದೆ.

ಇನ್ನು ನಾವು ಮಾಡಿದ ಕೆಲಸದಿಂದ ಫಲ ರೂಪದಲ್ಲಿ ಏನನ್ನೋ ಪಡೆದುಕೊಳ್ಳುತ್ತೇವೆ. ಇದು ನಮ್ಮ ಶ್ರಮಕ್ಕೆ ಪರಮಾತ್ಮ ಕೊಟ್ಟ ಪ್ರಸಾದ ಎಂದು ಸ್ವೀಕರಿಸಿ ತೃಪ್ತರಾಗದೆ, ಕೈಲಿರುವುದನ್ನು ಬಿಟ್ಟು, ನಮಗೆ ಹಿತವಾವುದು, ಅಹಿತವಾವುದು ಎನ್ನುವ ಕಲ್ಪನೆಯೇ ಇಲ್ಲದೆ, ಮತ್ತೂ ಹೆಚ್ಚಿನದನ್ನು ಸಾಧಿಸುವ ಸಲುವಾಗಿ ಮತ್ತೆ ಓಡುತ್ತೇವೆ. ಈ ಓಟದಲ್ಲಿ ಮತ್ತೇನನ್ನೋ ಸಾಧಿಸುವ ಭ್ರಮೆಯಲ್ಲಿ ಕೈಲಿರುವುದನ್ನು ತೃಪ್ತಿಯಿಂದ ಅನುಭವಿಸಿ ಸಂತಸಪಡಲು ಮರೆತೇ ಹೋಗುತ್ತೇವೆ. ಹೀಗೆಯೇ ನಮ್ಮ ಜೀವನವೂ ಅಂತ್ಯಗೊಳ್ಳುತ್ತದೆ.

ನಮಗೊಂದು ದುರಭ್ಯಾಸವಿದೆ. ಸದಾಕಾಲ ನಾವು ಅನ್ಯರು ಮಾಡಿದ ಕೆಲಸಗಳನ್ನು ಟೀಕಿಸುತ್ತಲೇ ಇರುತ್ತೇವೆ. ಇದು, ನಾನು ಸರಿ-ಪರರು ತಪ್ಪು ಎನ್ನುವ ಅಹಂಕಾರ ಜನ್ಯವಾದ ಭಾವ. ಇದು ಸಾಮಾನ್ಯವಾಗಿ ಎಲ್ಲರಲ್ಲೂ, ಪ್ರಮಾಣ ಭೇದವಿದ್ದರೂ ಇರುತ್ತದೆ. ಈ ಮನಃಸ್ಥಿತಿಯಲ್ಲಿ ನಮಗೆ ಯಾರನ್ನೂ ಅಭಿನಂದಿಸಲೂ ಆಗುವುದಿಲ್ಲ, ಆನಂದಿಸಲೂ ಆಗುವುದಿಲ್ಲ. ನಾವು ಟೀಕಿಸುವ ಕೆಲಸಮಾಡಿದವರು, ನಮ್ಮ ಟೀಕೆಯ ಪರಿವೆ ಇಲ್ಲದೆ ತಮ್ಮಷ್ಟಕ್ಕೆ ತಾವು ನೆಮ್ಮದಿಯಿಂದ ಇರಬಹುದು. ಆದರೆ ನಾವು ಮಾತ್ರ ಅನ್ಯರ ತಪ್ಪುಗಳನ್ನು ಹುಡುಕುತ್ತಾ ಮತ್ತು ಪರರನ್ನು ಟೀಕಿಸುತ್ತಾ ನಮ್ಮ ಮನಸ್ಸನ್ನು ಕೆಡಿಸಿಕೊಂಡು ನೆಮ್ಮದಿಯನ್ನು ಕಳೆದು ಕೊಳ್ಳುತ್ತೇವೆ.

ವಾಚಕರೆ, ಈ ಮುಕ್ತಕದಲ್ಲಿ ಸೂಚಿಸಿರುವ ಮೂರೂ ಗುಣಗಳು ನಮ್ಮಲ್ಲಿದ್ದರೆ, ಬಿಡಬೇಕು. ಇಲ್ಲದಿದ್ದರೆ ನಮ್ಮ ಒಳಗೆ ಸುಳಿಯಲು ಬಿಡಬಾರದು. ಇಲ್ಲದಿದ್ದರೆ ಗುಂಡಪ್ಪನವರು ಹೇಳುವಂತೆ ನಾವೂ ಸಹ ಬೆಪ್ಪರಾಗುತ್ತೇವೆ.

# ಪ್ರಗತಿ ಕತೆ 304-308

**ಮುಕ್ತಕ-304**

**ಗಿರಿಯ ಮೇಲಕೆ ದೊಡ್ಡ ಬಂಡೆಯನು ಸಿಸಿಫಸನು |**
**ಉರುಳಿಸಿರಲೊಂದೆರಡು ಮಾತು ಘಾಸಿಯಲಿ ||**
**ಸರಿದು ಕೆಳಕದದೆಂತೋ ಜಾರುವುದು ಮರಮರಳಿ |**
**ಪುರುಷ ಪ್ರಗತಿಯಂತು - ಮಂಕುತಿಮ್ಮ |**

ಉರುಳಿಸಿರಲೊಂದೆರಡು=ಉರುಳಿಸಿರಲು+ಒಂದೆರಡು, ಕೆಳಕದದೆಂತೊ=ಕೆಳಕೆ+ಅದು+ಎಂತೊ,
ಸಿಸಿಫಸನು=ಗ್ರೀಸ್ ದೇಶದ ಒಬ್ಬ ದೊರೆ, ಘಾಸಿಯಲಿ=ಕಷ್ಟಪಟ್ಟು,

ಗ್ರೀಕ್ ದೇಶದ ದೊರೆ ಸಿಸಿಫಸನು ಸಾವನ್ನು ನಾಲ್ಕು ಬಾರಿ ತಪ್ಪಿಸಿಕೊಂಡದ್ದರಿಂದ ಮೃತ್ಯುದೇವನು ಅವನಿಗೆ ದೊಡ್ಡದೊಂದು ಬಂಡೆಯನ್ನು ಬೆನ್ನಮೇಲೆ ಹೊತ್ತುಕೊಂಡು ಹೋಗಿ ಅದನ್ನು ಬೆಟ್ಟದ ಮೇಲಿರಿಸಿ ಬರಬೇಕೆಂದು ಶಿಕ್ಷೆ ವಿಧಿಸಿದನಂತೆ. ಆದರೆ ಅವನು ಪ್ರತೀ ಬಾರಿ ಅದನ್ನು ಹೊತ್ತುಕೊಂಡು ಹೋಗಿ ಅಲ್ಲಿಡುವುದರಲ್ಲೇ, ಯಾವುದೋ ಕಾರಣಕ್ಕೆ ಅದು ಉರುಳಿ ಹೋಗುತ್ತಿತ್ತಂತೆ. ನಮ್ಮ ಪ್ರಗತಿಯೂ ಹಾಗೇ ಇದೆ, ಎಂದು ಮನುಷ್ಯ ಪ್ರಗತಿಯ ಒಂದು ರೂಪವನ್ನು ನಮಗೆ ದರ್ಶನ ಮಾಡಿಸಿದ್ದಾರೆ, ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಮನುಷ್ಯ ಪ್ರಗತಿಯನ್ನು ಸೂಕ್ಷ್ಮವಾಗಿ ನೋಡಿದರೆ, ನಾವು ಸತ್ಯವಾಗಿ ಪ್ರಗತಿಗೊಂಡಿದ್ದೇವೆಯೇ ಎಂಬ ಸಂದೇಹ ಬರುತ್ತದೆ. ಒಟ್ಟು ಜನ ಸಮುದಾಯದ ಹಿತ, ಸಂತೋಷ ಮತ್ತು ಜೀವನದ ನೆಮ್ಮದಿಯನ್ನು ಹೆಚ್ಚಾಗಿಸಿದರೆ ಅದನ್ನು ಪ್ರಗತಿ ಎನ್ನಬಹುದು. ಆದರೆ ಇಂದು ಆ ಸ್ಥಿತಿ ಇದೆಯೇ? ಕೆತ್ತಿದ ರಸ್ತೆಯನ್ನು ಮತ್ತೆ ಮತ್ತೆ ಕೆತ್ತಿ ರಿಪೇರಿ ಮಾಡುವುದು, ಕಳಪೆ ಕೆಲಸಮಾಡಿ ಮತ್ತೆ ಮತ್ತೆ ದುರಸ್ತಿಮಾಡಲ್ಪಡುವ ಪೈಪುಗಳು. ಎಷ್ಟು ಬಾರಿ ಕೆಟ್ಟರೂ ಸಮರ್ಪಕವಾಗಿ ದುರಸ್ತಿಯಾಗದೆ ಮತ್ತೆ ಮತ್ತೆ ಕತ್ತಲಾಗಿಸುವ, ನಮ್ಮ ಬೀದಿ ಕೊನೆಯ ಟ್ರಾನ್ಸ್‌ಫಾರ್ಮರ್‌ಗಳು, ಮತ್ತೆ ಮತ್ತೆ ಬಡವರನ್ನು ಉದ್ಧರಿಸುವ ಯೋಜನೆಗಳು, ಕೇವಲ ಹಣವಂತರಿಗಾಗಿಯೇ ಅಥವಾ ಅಧಿಕಾರವಿರುವವರಿಗಾಗಿಯೇ ರೂಪಿಸಿರುವ ಪ್ರಗತಿಯ ಯೋಜನೆಗಳು, ಮತ್ತೆಲ್ಲರಿಗೂ ಕಣ್ಮರೆಸುವ ಕಾರ್ಯಕ್ರಮಗಳು, ಇದು ಪ್ರಗತಿಯೇ? ಅಲ್ಲ ಇದು

ದುರ್ಗತಿ ಅಥವಾ ಅಧೋಗತಿ. ಈಗಿರುವ ನಮ್ಮ ಸಾಮಾಜಿಕ, ನೈತಿಕ, ಧಾರ್ಮಿಕ ಮತ್ತು ಆರ್ಥಿಕ ಅಧೋಗತಿಯ ಚಿತ್ರಣವನ್ನು ವಾಚಕರೇ ಕಾಣಬಹುದು.

ಇದಕ್ಕೆ ಕಾರಣವೇನೆಂದರೆ, ಸುಳ್ಳಿನ ಆಧಾರದ ಮೇಲಿನ ನಮ್ಮ ಜೀವನ. ಧರ್ಮಕ್ಕೆ ತಿಲಾಂಜಲಿ, ನ್ಯಾಯಕ್ಕೆ ಅನ್ಯಾಯದ ಹೊದಿಕೆ, ಎಲ್ಲ ನೈತಿಕ ಮೌಲ್ಯಗಳಿಗೂ ಮೂರುಕಾಸಿನ ಬೆಲೆ ನೀಡದ ಜನ ಸಮುದಾಯ, ಹೇಗೆ ಬೇಗ ಹಣವಂತನಾಗುವುದು ಮತ್ತು ಆ ಹಣವನ್ನು ಅಪವ್ಯಯ ಮಾಡುವುದರಲ್ಲಿ ಅನ್ಯರೊಡನೆ ಪೈಪೋಟಿ, ಕೇವಲ ಹಣಕ್ಕೆ ಬೆಲೆ, ಗುಣ ಕಾಲ ಕಸ, ಇದು ಪ್ರಗತಿಯೇ? ನಮ್ಮ ಭಾರತೀಯ ಸಮುದಾಯದ ಬಳಿ





ಇರುವ ಜ್ಞಾನ ಭಂಡಾರದ ಸದುಪಯೋಗವಾಗಿದ್ದಿದ್ದರೆ, "ಈ ಜಗತ್ತಿನಲ್ಲಿ ಇಂತಹ ಉತ್ತಮ ಸಮಾಜ" ಬೇರೆಲ್ಲೂ ಇರಲಿಕ್ಕೆ ಸಾಧ್ಯವಿರಲಿಲ್ಲ. ಆದರೆ ಹಾಗಾಗಿದೆಯೇ? ಇಲ್ಲ. ಇದು ಪ್ರಗತಿಯೇ?

ನಮ್ಮ ಪೂರ್ವಜರು, ಋಷಿ ಮುನಿಗಳು, ಸಾಧು ಸಂತರು ಪ್ರಗತಿಯ ಒಂದು ದಾರಿಯನ್ನು ತೋರಿದ್ದಾರೆ. ಆದರೆ ನಮಗದು ಬೇಡ. ನಮಗೆ ಪರಿಚಯವಿಲ್ಲದ ಯಾವುದನ್ನೂ ಅನುಕರಿಸಿ ಪತನವಾಗುತ್ತಿದ್ದೇವೆ. ಅಲ್ಲಿಯೂ ಪ್ರಗತಿಯಿಲ್ಲ. ಸತ್ಯವನ್ನು ಮತ್ತು ಸತ್ವವನ್ನು ಅರಿಯುವ ಪ್ರಯತ್ನ ಇಲ್ಲವೇ ಇಲ್ಲ. ಹೇಗೋ ಒಂದು ಜೀವನ ಸಾಗಿಸಿದರೆ ಸಾಕು, ಎಂದು ಬದುಕಿದರೆ ಪ್ರಾಣಿಗಳಿಗೂ ನಮಗೂ ವ್ಯತ್ಯಾಸವೇ ಇಲ್ಲವಾಗುತ್ತದೆ ಅಲ್ಲವೆ? ಹಿಂದೆ ಚೆನ್ನಾಗಿತ್ತು, ಇಂದು ಸರಿಯಿಲ್ಲ ಎಂದು ಯೋಚಿಸಬೇಕಾಗಿಲ್ಲ. ಆದರೆ ಇಂದು ನಮ್ಮ ಬದುಕುಗಳಲ್ಲಿ ಸತ್ಯದ ಮತ್ತು ಸತ್ವದ ಬಲವನ್ನು ತಂದುಕೊಳ್ಳಬೇಕು. ಅವುಗಳ ಆಧಾರದ ಮೇಲೆ ಒಂದು ಗಟ್ಟಿಯಾದ, ನೋವಿಲ್ಲದ, ಕಣ್ಣೀರಿಲ್ಲದ, ತೃಪ್ತಿಯ, ಆನಂದದ ಸಮಾಜದ ನಿರ್ಮಾಣವಾದರೆ, ಅದು ಪ್ರಗತಿ. ಇಲ್ಲದಿದ್ದರೆ ಸಿಸಿಫಸನು ಮತ್ತೆ ಮತ್ತೆ ಬೆಟ್ಟಕ್ಕೆ ಬಂಡೆ ಹೊತ್ತಂತೆ, ಮತ್ತೆ ಮತ್ತೆ ಪ್ರಗತಿಯ ಪ್ರಯತ್ನ ನಡೆದೇ ಇರುತ್ತದೆ ಹೊರತು ಪ್ರಗತಿಯಾಗುವುದೇ ಇಲ್ಲ.

**ಮುಕ್ತಕ - 305** **ಕಾಕತಾಳೀಯ ಕಥೆ ಲೋಕಚರಿತೆಯೊಳೆಷ್ಟೋ।**
**ಟೀಕೆಗೆಟುಕವು ನಮಗೆ ಕಾರ್ಯಕಾರಣಗಳ್।**
**ಏಕೋ ಕಣ್ಣಲೆಯುವುದು ಏನೋ ಅದ ಪಿಡಿಯುವುದು।**
**ವ್ಯಾಕುಲತೆ ಫಲಿತಾಂಶ - ಮಂಕುತಿಮ್ಮ॥**

ಲೋಕಚರಿತೆಯೊಳೆಷ್ಟೋ=ಲೋಕ+ಚರಿತೆಯೊಳು+ಎಷ್ಟೋ, ಟೀಕೆಗೆಟುಕವು-ಟೀಕೆಗೆ+ಎಟುಕವು,
ಕಣ್ಣಲೆಯುವು=ಕಣ್ಣು+ಅಲೆಯುವುದು.
ಕಾಕತಾಳೀಯ=ಅಕಸ್ಮಾತ್, ಲೋಕಚರಿತೆ=ಜಗತ್ತಿನ ಚರಿತ್ರೆ, ವ್ಯಾಕುಲತೆ=ಖಿನ್ನತೆ, ನಿರಾಸೆ, ದುಃಖ.

ಈ ಜಗತ್ತಿನ ಚರಿತ್ರೆಯಲ್ಲಿ ನಡೆದ ಘಟನೆಗಳು ಕಾಕತಾಳೀಯವಾಗಿ ನಡೆದಿರುವುದೆಷ್ಟೋ? ಒಂದು ಕಾಗೆ ತಾಳೆ ಮರದ ಮೇಲೆ ಕುಳಿತ ತಕ್ಷಣ ಆ ಮರದಿಂದ ಒಂದು ಹಣ್ಣು ಬಿದ್ದರೆ!! ಆ ಘಟನೆಗೆ ಕಾರಣವನ್ನು ಹುಡುಕುವುದು ಕಷ್ಟ. ಅದಕ್ಕೇ ಕಾಕತಾಳೀಯ ಎನ್ನುವುದು. ಅದು ಗೊತ್ತಿದ್ದರೂ ನಮ್ಮ ಕಣ್ಣುಗಳು ಕಂಡದ್ದನ್ನೆಲ್ಲ ಹಿಡಿಯಲು ಮತ್ತು ಪಡೆಯಲು ಆಸೆಪಡುವುದು. ಆದರೆ ಅದನ್ನು ಹಿಡಿಯಲು ಆಗದೆ, ಪಡೆಯಲು ಸೋತು, ಕೇವಲ ಮನೋವ್ಯಾಕುಲತೆ ಮಾತ್ರ ನಮಗೆ ಸಿಗುವ ಫಲ ಎಂದು ಮಾನವರ ಪ್ರಯತ್ನಗಳ ಕಥೆಯನ್ನು ಸೂಕ್ಷ್ಮವಾಗಿ ಅರುಹುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ನಮ್ಮೊಂದಿಗೆ ಎಷ್ಟೋ ಘಟನೆಗಳು ನಡೆಯುತ್ತವೆ. ಟ್ರಾಫಿಕ್ ಜಾಮ್ ಆಗಿ ರೈಲು ತಪ್ಪಿಹೋಗುತ್ತದೆ. ಅನಿರೀಕ್ಷಿತವಾಗಿ ಯಾರೋ ಸಿಗುತ್ತಾರೆ. ಹಾಗೆ ಸಿಕ್ಕವರಿಂದಾಗಿ ನಮ್ಮ ಯಾವುದೋ ಕೆಲಸ ಆಗುತ್ತದೆ ಅಥವಾ ಆಗಬೇಕಾದ ಕೆಲಸ ತಪ್ಪಿಹೋಗುತ್ತದೆ. ದಾರಿಯಲ್ಲಿ ನಮ್ಮಷ್ಟಕ್ಕೆ ನಾವು ನಡೆದು ಹೋಗುತ್ತಿದ್ದರೆ ಯಾವುದೋ ವಾಹನ ಬಂದು ನಮ್ಮನ್ನು ಗುದ್ದುತ್ತದೆ. ಕಾಲೋ ಕೈಯೋ ಮುರಿಯಬಹುದು ಅಥವಾ ಮರಣವೇ ಸಂಭವಿಸಬಹುದು.

ಇಂತಹ ಘಟನೆಗಳನ್ನು ಸರ್ವೇಸಾಮಾನ್ಯ ಕಾಣುತ್ತಿರುತ್ತೇವೆ ಮತ್ತು ಅನುಭವಿಸುತ್ತಿರುತ್ತೇವೆ. ಎಷ್ಟೇ ಪ್ರಯತ್ನಪಟ್ಟರೂ ನಮಗೆ ಅದರ ಕಾರಣ ಸ್ಪಷ್ಟವಾಗಿ ಸಿಗುವುದೇ ಇಲ್ಲ, ಅಲ್ಲವೇ?

ನಾವು ಏನನ್ನೋ ಮಾಡಲು ಪ್ರಯತ್ನಿಸುತ್ತೇವೆ. ಯಾವುದನ್ನೋ ಸಾಧಿಸಲು ಹೊರಡುತ್ತೇವೆ. ನಾವಂದುಕೊಂಡ ಕೆಲಸವನ್ನು ಕೆಲವೇಳೆ ಮಾಡಲಾಗುವುದೇ ಇಲ್ಲ ಅಥವಾ ನಾವು ಮಾಡಿದ ಕೆಲಸಕ್ಕೆ ನಿರೀಕ್ಷಿಸಿದ ಫಲ ಸಿಗುವುದೇ ಇಲ್ಲ ಅಥವಾ ತದ್ವಿರುದ್ಧವಾದ ಫಲ ಸಿಗುತ್ತದೆ. ಅದಕ್ಕೆ ಕಾರಣವನ್ನು ಎಷ್ಟು ಹುಡುಕಿದರೂ ಸಿಗುವುದೇ ಇಲ್ಲ, ಅಲ್ಲವೇ? ಇದು ಎಲ್ಲರ ಅನುಭವಕ್ಕೂ ಬಂದಿರುತ್ತದೆ.

ನಮಗೆ ಚಿಂತೆ ಶುರುವಾಗುತ್ತದೆ. ಏಕೆ ಹೀಗಾಯ್ತು ಎಂದು ನಾವು ತಲೆ ಕೆಡಿಸಿಕೊಳ್ಳುತ್ತೇವೆ ಅಥವಾ ಕಾರಣಗಳನ್ನು ಹುಡುಕುತ್ತೇವೆ. ನಮ್ಮ ಸಮಸ್ಯೆಯನ್ನು ಪರರಲ್ಲಿ ಹಂಚಿಕೊಳ್ಳುತ್ತೇವೆ. ಪರಿಹಾರಕ್ಕಾಗಿ, ಪೂಜೆ, ಪುನಸ್ಕಾರ, ಜ್ಯೋತಿಷಿ, ಜಾತಕ ಎಂದು ಪರದಾಡುತ್ತೇವೆ. ಮತ್ತೆ ಮತ್ತೆ ಪ್ರಯತ್ನವನ್ನು ಮಾಡುತ್ತೇವೆ. ವ್ಯಾಕುಲತೆ ನಮ್ಮನ್ನು ಪೀಡಿಸುತ್ತದೆ, ಅದರಿಂದ ಇನ್ನಷ್ಟು ಹಿಂಸೆಯಾಗುತ್ತದೆ. ಈ ರೀತಿಯ ವಿದ್ಯಮಾನಗಳು ಜಗತ್ತಿನಲ್ಲಿ ಅನಾದಿಕಾಲದಿಂದ ಇಂದಿನವರೆಗೆ ನಡೆಯುತ್ತಲೇ ಬಂದಿದೆ, ಮುಂದೆಯೂ ನಡೆಯುತ್ತದೆ. ಹೀಗೆ ನಡೆಯುವ ಘಟನೆಗಳಿಗೆ ಕಾರಣ ಗೊತ್ತಾಗುವುದೇ ಇಲ್ಲ. ನಮ್ಮ ತಲೆ ಕೆಡುವುದೊಂದು ಬಿಟ್ಟರೆ ಬೇರೆ ಏನೂ ಆಗುವುದಿಲ್ಲ, ಅಲ್ಲವೇ?

ನಾವು ಈ ತಲೆಕೆಡುವ ಸ್ಥಿತಿಯಿಂದ ಹೊರಬರಬೇಕಾದರೆ, ಬಂದದ್ದನ್ನು ಅನುಭವಿಸುವ, ಸಿಕ್ಕಿದ್ದರಲ್ಲಿ ತೃಪ್ತಿಯಿಂದಿರುವ, ಯಾವುದಕ್ಕೂ ಅತಿಯಾಗಿ ಅಂಟದೆ ಒಂದು ನಿರ್ಲಿಪ್ತತೆಯ ಮನೋಭಾವವನ್ನು ಬೆಳೆಸಿಕೊಂಡರೆ ತಕ್ಕಮಟ್ಟಿಗೆ ನಮ್ಮ ಕೆಲಸ ಕಾರ್ಯಗಳಲ್ಲಿ ಆಗುವ ಏರುಪೇರುಗಳಿಂದ ಆಗುವ ಪರಿಣಾಮಗಳು ಮನಸ್ಸಿಗೆ ಮಾಡುವ ಘಾಸಿಯನ್ನು ಕಡಿಮೆ ಮಾಡಿಕೊಳ್ಳಬಹುದು. ಹೇಳುವುದು ಸುಲಭ. ಆದರೆ ದೃಢವಾಗಿ ಪ್ರಯತ್ನ ಪಟ್ಟರೆ ಅಸಾಧ್ಯವೇನಲ್ಲ.

ವಾಚಕರೆ ನಮ್ಮ ಮನಸ್ಸನ್ನು ತಹಬಂದಿಯಲ್ಲಿಟ್ಟುಕೊಳ್ಳುವ ಕ್ಷಮತೆ ಪರಮಾತ್ಮ ಎಲ್ಲರಿಗೂ ಕರುಣಿಸಿದ್ದಾನೆ. ಎಷ್ಟರಮಟ್ಟಿಗೆ ಅದನ್ನು ಉಪಯೋಗಿಸಿಕೊಂಡು ನಮ್ಮ ಬಾಳನ್ನು ಹಸನಾಗಿಸಿಕೊಳ್ಳುತ್ತೇವೆ ಎನ್ನುವುದು ಪ್ರತಿಯೊಬ್ಬರ ಪ್ರಯತ್ನಕ್ಕೆ ಬಿಟ್ಟದ್ದು.

**ಮುಕ್ತಕ-306** **ನಾಸಿಕದ ಮಾಟದಿಂದ ಕ್ಲಿಯೋಪ್ಯಾಟ್ರಳಿಗೆ।**

**ದಾಸರಾದರು ಶೂರ ಸೀಸರ್ ಆಂಟನಿಗಳ್ ॥**

**ದೇಶಚರಿತೆಗಮವರ ಜಸಕಮಂಕುಶವಾಯ್ತು।**

**ನಾಸಾಪುಟದ ರೇಖೆ – ಮಂಕುತಿಮ್ಮ॥**

ದೇಶಚರಿಗಮವರ=ದೇಶ+ಚರಿತೆಗಂ+ಅವರ, ಜಸಕಮಂಕುಶವಾಯ್ತು=ಜಸಕಂ+ಅಂಕುಶವಾಯ್ತು.

ನಾಸಿಕ=ಮೂಗು, ಜಸಕ=ದಾಸ್ಯ, ನಾಸಾಪುಟದ ರೇಖೆ=ಮೂಗಿನ ವಿನ್ಯಾಸ





ಕ್ಲಿಯೋಪ್ಯಾಟ್ರ ಎಂಬುವಳು ರೋಮ್ ದೊರೆ ಸೀಸರನ ಕಾಲದಲ್ಲಿ ಗ್ರೀಕ್ ದೇಶದ ರಾಣಿ, ಸೀಸ ಮತ್ತು ಅಂಟನಿ ಮಿತ್ರರು. ಆ ಕ್ಲಿಯೋಪ್ಯಾಟ್ರಳ ನಾಸಿಕದ ಸೌಂದರ್ಯಕ್ಕೆ ಬಲಿಯಾಗಿ ಇವರಿಬ್ಬರೂ ಅವಳ ದಾಸರಾಗಿ ದೇಶವನ್ನು ಕಡೆಗಣಿಸಿ, ರಾಜ್ಯದಲ್ಲಿ ಪಿತೂರಿ ಮತ್ತು ಒಳಪಿತೂರಿ ನಡೆಸಿ, ಕಡೆಗೆ ದೇಶದ ಹಿತವನ್ನೇ ಕಡೆಗಣಿಸಿ ನಾಶವಾದರು. ಹೀಗೆ, ವ್ಯರ್ಥವಾದ ಅಥವಾ ಕೆಲಸಕ್ಕೆ ಬಾರದ ವಿಷಯ ಅಥವಾ ವಸ್ತುವಿಗೆ ದಾಸರಾಗಿ ಜೀವನದ ದಿಕ್ಕನ್ನು ತಪ್ಪಿಸುವಂಥಾ ಕೆಲಸವನ್ನು ಮಾಡುತ್ತೇವೆ, ಎಂದು ನಿರ್ಧಿಷ್ಟ ವಿಷಯ ವ್ಯಕ್ತಿ ಅಥವಾ ವಸ್ತುವಿಗೆ ದಾಸರಾಗುವವರ ಚರಿತ್ರೆಯನ್ನು ಸಾದೋಹರಣವಾಗಿ ವರ್ಣಿಸುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಯಾರಿಗಾದರೂ ಯಾವುದಾದರೂ ವಿಷಯ ವ್ಯಕ್ತಿ ಅಥವಾ ವಸ್ತು ಬಹಳ ಇಷ್ಟವಾದರೆ ಅದಕ್ಕೆ ಕಾರಣವಿರಬೇಕೆಂದೇನೂ ಇಲ್ಲ! ಕೆಲವರಿಗೆ ರೂಪ, ಸ್ವಭಾವ, ಹಣ, ಸೌಂದರ್ಯ ಇಷ್ಟವಾಗಬಹುದು. ಆ ಸೌಂದರ್ಯದಲ್ಲೂ, ಒಟ್ಟಾರೆ ರೂಪ, ಕೇವಲ ಕಣ್ಣುಗಳು, ಮೂಗು, ಬಣ್ಣ, ಒನಪು ಒಯ್ಯಾರಗಳು, ಗಾಂಭೀರ್ಯ, ಕೆನ್ನೆಯಲ್ಲಿ ಬೀಳುವ ಕುಳಿ, ಹೀಗೆ ಏನೇನೋ ಇಷ್ಟವಾಗಬಹುದು. ಅದಕ್ಕೆ ಕಾರಣವಿರುವುದಿಲ್ಲ. ಅಕಾರಣವಾಗಿ ನಾವು

ಇಷ್ಟಪಟ್ಟ ವಸ್ತು ವ್ಯಕ್ತಿ ವಿಷಯಗಳಿಗೆ ದಾಸರಾಗಿ ಬಿಡುತ್ತೇವೆ. 'ಜಸಕಮಂಕುಶ' ಎಂದು ಗುಂಡಪ್ಪನವರು ಹೇಳುವಂತೆ, ಈ ದಾಸ್ಯ ನಮ್ಮನ್ನು ಅಂಕುಶದಂತೆ ತಿವಿದು ತಿವಿದು ಜೀವನದ ಗತಿಯೇ ಬದಲಾಯಿಸಿಬಿಡುತ್ತದೆ.

"ಸಂಗಾತ್ ಸಂಜಾಯತೆ ಕಾಮ, ಕಾಮಾತ್ ಕ್ರೋಧೋಭಿಜಾಯತೆ, ಕ್ರೋಧಾದ್ಭವತಿ ಸಂಮೋಹಃ, ಸಂಮೋಹಾತ್ ಸ್ಮೃತಿವಿಭ್ರಮಃ, ಸ್ಮೃತಿವಿಭ್ರಮಾತ್ ಬುದ್ಧಿನಾಶಃ, ಬುದ್ಧಿನಾಶಾತ್ ಪ್ರಣಶ್ಯತಿ' ಎಂದು ಶ್ರೀ ಕೃಷ್ಣ ಭಗವದ್ಗೀತೆಯಲ್ಲಿ ಹೇಳಿರುವಂತೆ, ಒಂದು ವಸ್ತುವಿನ ಸಂಗ ಮಾಡಿದಾಗ ಅದನ್ನು ಪಡೆಯಬೇಕೆಂಬ ಆಸೆ, ಸಿಗದಿದ್ದರೆ ಕ್ರೋಧ, ಸಿಕ್ಕರೆ ಮೋಹ, ಮೋಹದಿಂದ ವಿವೇಚನೆಯ ನಷ್ಟ, ವಿವೇಚನೆಯನ್ನು ಕಳೆದುಕೊಂಡರೆ ಬುದ್ಧಿನಾಶ, ಬುದ್ಧಿನಾಶವಾದರೆ ಮನುಷ್ಯನ ಪತನ ಅಥವಾ ಅಧೋಗತಿ.

ಇದನ್ನೇ ಮಾನ್ಯ ಗುಂಡಪ್ಪನವರು 'ನಾಸಾಪುಟದ ರೇಖೆ' ಎಂದು ಹೇಳಿ ವಿವೇಚನೆಯಿಲ್ಲದೆ ನಮ್ಮ ಮೂಗಿನ ನೇರಕ್ಕೆ, ಮನಸ್ಸು ಹೋದಂತೆಲ್ಲ ಹರಿಬಿಟ್ಟು ವಸ್ತುಗಳ ಮೋಹದಲ್ಲಿ ಬಿದ್ದರೆ ನಾವು ತೊಂದರೆಯಲ್ಲಿ ಸಿಕ್ಕು ತೊಳಲಿ ದುಃಖವನ್ನು ಅನುಭವಿಸಬೇಕಾಗುತ್ತದೆ, ಎಂದು ಹೇಳಿದ್ದಾರೆ.

ವಾಚಕರೆ, ಪರಮಾತ್ಮ ನಮಗೆ ವಿವೇಚನೆಯನ್ನು ಕೊಟ್ಟಿದ್ದಾನೆ. ಅದನ್ನು ಉಪಯೋಗಿಸಿ, ಸಾಧ್ಯವಾದಷ್ಟು ಮಟ್ಟಿಗೆ ಬದುಕನ್ನು ಹಸನಾಗಿಸಿಕೊಂಡು, ತೃಪ್ತಿಯಿಂದ ಆನಂದವನ್ನು ತಂದುಕೊಂಡರೆ ಸುಖ, ಇಲ್ಲದಿದ್ದರೆ ದುಃಖ, ಆಯ್ಕೆ ಮಾಡಿಕೊಳ್ಳಲು ನಾವು ಸಂಪೂರ್ಣ ಸ್ವತಂತ್ರರಲ್ಲವೇ?

**ಮುಕ್ತಕ - 307** **ಸುರಪಸಭೆಯಲಿ ಗಾಧಿಸುತ ವಸಿಷ್ಠ ಸ್ಪರ್ಧೆ।**
**ಧರೆಯೊಳದರಿಂ ಹರಿಶ್ಚಂದ್ರಂಗೆ ತಪನೆ॥**
**ಬರುವುದಿಂತ್ತೆತ್ತಣಿನೋ ಬೇಡದ ಪ್ರಾರಬ್ಧ।**
**ಕರುಮಗತಿ ಕೃತ್ರಿಮವೊ – ಮಂಕುತಿಮ್ಮ॥**

ಧರೆಯೊಳದರಿಂ=ಧರೆಯೊಳು+ಆದರಿಂ, ಬರುವುದಿಂತ್ತೆತ್ತಣಿನೋ ಬರವುದು+ಇಂತು+ಎತ್ತಣಿನೋ, ಸುರಪಸಭೆ-ದೇವ ರಾಜ ಇಂದ್ರನ ಒಡೋಲಗ, ಗಾಧಿಸುತ=ವಿಶ್ವಾಮಿತ್ರ, ಧರೆಯೊಳು=ಭೂಮಿಯಲಿ, ತಪನೆ=ತಾಪತ್ರಯಗಳು, ಇಂತು=ಹೀಗೆ, ಎತ್ತಣಿನೋ=ಎಲ್ಲಿಂದಲೋ,
ಪ್ರಾರಬ್ಧ=ಪಡೆದುಕೊಂಡು ಬಂದ ಕರ್ಮ, ಕರುಮಗತಿ=ಕರ್ಮದ ಗತಿ, ಕೃತ್ರಿಮವೊ=ಕಂಡರೂ ಸತ್ಯವಲ್ಲದ್ದು, ಕೃತಕ, ಮೋಸ.

ಒಂದು ಬಾರಿ ಇಂದ್ರನ ಒಡೋಲಗದಲ್ಲಿ ದೇವರ್ಷಿ ವಸಿಷ್ಠನಿಗೂ ವಿಶ್ವಾಮಿತ್ರನಿಗೂ 'ಸತ್ಯವನ್ನೇ' ನುಡಿಯುವ ವ್ಯಕ್ತಿಗಳ ಬಗ್ಗೆ ವಾದ ವಿವಾದವಾಯಿತಂತೆ. ಅದರ ಫಲವೇ ಭೂಮಿಯ ಮೇಲಿದ್ದ ಹರಿಶ್ಚಂದ್ರನ ಜೀವನದಲ್ಲಿ ಉಂಟಾದ ತಾಪತ್ರಯಗಳು ಮತ್ತು ಏರುಪೇರುಗಳು. ಹೀಗೆ ಪ್ರಾರಬ್ಧಕರ್ಮ ನಮ್ಮನ್ನು ಹೇಗೆ ಯಾವಾಗ ಯಾವ ರೀತಿಯಲ್ಲಿ ಕಾಡುತ್ತದೆ ಎಂದು ಹೇಳುವುದು ಅಸಾಧ್ಯವೆಂದು ಜೀವನದ ನಗ್ನ ಸತ್ಯವನ್ನು ವಿವರಿಸುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಎಷ್ಟೋ ಬಾರಿ ಹೀಗೆ ಮಾಡಿದರೆ ಹಾಗಾಗುವುದು, ಹಾಗೆ ಮಾಡಿದರೆ ಹೀಗಾಗುವುದು, ಎಂದು ನಮ್ಮ ಜೀವನದ ಆಗುಹೋಗುಗಳ ಲೆಕ್ಕಾಚಾರವನ್ನು ಮಾಡುತ್ತಿರುತ್ತೇವೆ. ಇದು ಕೇವಲ ಅಜ್ಞಾನ. ನಮ್ಮ ಜೀವನದಲ್ಲಿ ನಡೆಯುವ ವಿದ್ಯಮಾನಗಳು ಕೆಲವು ಬಾರಿ ನಾವಂದುಕೊಂಡಂತೆ ನಡೆದರೆ ಅದು ಕೇವಲ ಕಾಕತಾಳೀಯವೆಂದೇ ಅಂದುಕೊಳ್ಳಬೇಕು. ಏಕೆಂದರೆ ನಮ್ಮ ಪ್ರತೀ ಕೆಲಸಕ್ಕೂ ಒಂದು ನಿರ್ಧಿಷ್ಟ ಕಾರಣವನ್ನು ಕೊಡಲಾಗುವುದಿಲ್ಲ. ಅಮೇರಿಕಾದ ಅಧ್ಯಕ್ಷನಿಗೆ ಜ್ವರ ಬಂದರೆ, ಮುಂಬೈ ಶೇರುಮಾರುಕಟ್ಟೆಯಲ್ಲಿ ಬೆಲೆ ಕುಸಿತವಾಗುವುದನ್ನು ನಾವು ನೋಡಿದ್ದೇವೆ. ಎಲ್ಲಿಗೆ ಯಾವ ಸಂಬಂಧ. ಹೀಗೆ ಒಂದಕ್ಕೊಂದು ಸಂಬಂಧವಿಲ್ಲದ ಕಾರ್ಯಕಾರಣಗಳ ವಿದ್ಯಮಾನವೇ ಈ ಜಗತ್ತು.

ಒಂದು ಊರಿನ ಕಾಲೇಜಿನಲ್ಲಿ ನಡೆದ ಒಂದು ಸಣ್ಣ ಘರ್ಷಣೆ, ಕೋಮು ಗಲಭೆಗೆ ತಿರುಗಿ ಊರೆಲ್ಲ ನಡುಗಿತ್ತು. ಒಂದು ಅಂಗಡಿಯ ಮಹಡಿಯ ಮೇಲೆ ನಿಂತು ನೋಡುತ್ತಿದ್ದ ಒಬ್ಬ ವ್ಯಕ್ತಿಗೆ, ಯಾರೋ ಎಲ್ಲಿಂದಲೋ ತೂರಿದ ಒಂದು ಕಲ್ಲು ತಲೆಗೆ ತಗುಲಿ, ಗಾಭರಿಯಲ್ಲಿ, ಆ ವ್ಯಕ್ತಿ ಮೃತಪಟ್ಟ. ಹೀಗೆ ನಮಗೆ ಸಂಬಂಧವೇ ಇಲ್ಲದ ಕಾರಣಕ್ಕಾಗಿ ನಾವು ಏನನ್ನೋ ಅನುಭವಿಸುವಂಥಾ ಘಟನೆಗಳು ನಮ್ಮ ಜೀವನದಲ್ಲಿ ನಡೆಯುತ್ತದೆ ಮತ್ತು ನಮ್ಮ ಸುತ್ತಲಿನ ಜನರ ಜೀವನದಲ್ಲೂ ಅಂತಹ ಘಟನೆಗಳನ್ನು ನೋಡುತ್ತೇವೆ. ಇದನ್ನೇ ಮಾನ್ಯ ಗುಂಡಪ್ಪನವರು 'ಕರುಮಗತಿ ಕುತ್ರಿಮವೊ' ಎಂದಿದ್ದಾರೆ.





ಹಾಗಾಗಿ ವಾಚಕರೆ, ನಮಗೆ ಸಂಭವಿಸುವ ಘಟನೆಗಳಿಗೆ ಕಾರಣವನ್ನು ಹುಡುಕುವುದು ವ್ಯರ್ಥ. ಹಾಗೆಂದು ಯಾವುದೂ ಅಕಾರಣವಾಗಿ ಆಗುವುದಿಲ್ಲ. ಆ ಕಾರಣ ನಮಗೆ ಗೊತ್ತಾಗುವುದಿಲ್ಲ. ನಾವು ಜೀವಿಸುವಾಗ, ಬಂದದ್ದೆಲ್ಲಾ ಬರಲಿ ಆ ಗೋವಿಂದನ ದಯೆಯೊಂದಿರಲಿ ಎಂದು ಬಂದದ್ದನ್ನು ಬಂದ ಹಾಗೆ ಅನುಭವಿಸುತ್ತಾ ಹೋದರೆ ನೆಮ್ಮದಿಯಾಗಿರಬಹುದು. ಕಾರಣಗಳ ಹುಡುಕುವ ಕೆಲಸ ಮಾಡಿದರೆ ನಮ್ಮ ತಲೆ ಕೆಡುತ್ತದೆ ಮತ್ತು ಸರಿಯಾದ ಕಾರಣಗಳು ಸಿಗದೇ ಹುಚ್ಚು ಹಿಡಿಯುತ್ತದೆ. ಬದುಕನ್ನು ಬದುಕ ಬೇಕು. ಬದುಕಿನ ಅನುಭವಗಳಿಗೆ ಕಾರಣಗಳನ್ನು 'ಬೆದಕಬಾರದು. ಅದೇ ಸಂತೋಷದ, ಆನಂದದ ಸೂತ್ರ

**ಮುಕ್ತಕ - 308**

**ಸರಕಾರ ಹರಿಗೋಲು, ತೆರೆಸುಳಿಗಳತ್ತಿತ್ತ |**
**ಸುರೆ ಕುಡಿದವರು ಕೆಲರು ಹುಟ್ಟು ಹಾಕುವರು ||**
**ಬಿರುಗಾಳಿ ಬೀಸುವುದು, ಜನವೆದ್ದು ಕುಣಿಯುವುದು |**
**ಉರುಳದಿಹುದಚ್ಚರಿಯೊ - ಮಂಕುತಿಮ್ಮ ||**

ತೆರೆಸುಳಿಗಳತ್ತಿತ್ತ =ತೆರೆ+ಸುಳಿಗಳು+ಅತ್ತಿತ್ತ, ಜನವೆದ್ದು=ಜನವು+ಎದ್ದು,

ಉರುಳದಿಹುದಚ್ಚರಿಯೊ=ಉರುಳದೆ+ಇಹುದು+ಅಚ್ಚರಿಯೊ.

ಹರಿಗೋಲು=ಗುಂಡಗಿನ ತೆಪ್ಪ ಅಥವಾ ಉಡುಪ, ಸುರೆ=ಹೆಂಡ,

ನಮ್ಮ ಸರಕಾರ ಒಂದು ಹರಿಗೋಲಿದ್ದಂತೆ. ಆಡಳಿತದ ಸಾಗರದಲ್ಲಿ ಈ ಸರಕಾರದ ಹರಿಗೋಲು, ತೆರೆಗಳ ಮತ್ತು ಸುಳಿಗಳ ತುಯ್ದಾಟದ ನಡುವೆ ಸಾಗುತ್ತಿದೆ. ಇದರ ಚುಕ್ಕಾಣಿ ಹಿಡಿದು ಹುಟ್ಟು ಹಾಕುವವರು ಹೆಂಡ ಕುಡಿದವರಂತೆ ಅಧಿಕಾರದಿಂದ ಉನ್ಮತ್ತರಾಗಿ ನಡೆದುಕೊಳ್ಳುತ್ತಿದ್ದಾರೆ. ವಿರೋಧಪಕ್ಷದವರು ಕಾಲೆಳೆಯಲು ಪ್ರಯತ್ನಿಸಿದರೂ, ಜನರಿಗೆ ಏನಾಗುವುದೋ ಎಂದು ಕಳವಳದಿಂದ ಇದ್ದರೂ, ಈ ಸರಕಾರವೆಂಬ ದೋಣಿ ಉರುಳಿ ಮುಳುಗಿ ಹೋಗದೆ ಇರುವುದೇ ಆಶ್ಚರ್ಯ ಎಂದು ನಮ್ಮ ಸರಕಾರ, ವಿರೋಧಪಕ್ಷಗಳು ಮತ್ತು ಆಡಳಿತ ವ್ಯವಸ್ಥೆಯನ್ನು ವಿಮರ್ಶೆ ಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಮಾನ್ಯ ಗುಂಡಪ್ಪನವರು, ಅಂದಿನ ಮೈಸೂರು ಸರಕಾರದ ದಿವಾನ್ ವಿಶ್ವೇಶ್ವರಯ್ಯನವರಿಗೆ ಆಡಳಿತ ಕ್ರಮದಲ್ಲಿ ಸೂಕ್ತ ಸಲಹೆಗಳನ್ನು ನೀಡುತ್ತಿದ್ದರು. ಇಂದು ಕೂಡಾ ಅವರ ಅಂದಿನ ಅನಿಸಿಕೆಗಳು ಪ್ರಸಕ್ತವಾಗಿದೆ ಮತ್ತು ಹೆಚ್ಚು ಸಮರ್ಪಕವಾಗಿದೆ ಎನ್ನಿಸುತ್ತದೆ. ಇಂದು ಅಧಿಕಾರದ ಮತ್ತು ಸರಕಾರದ ಸೂತ್ರಗಳನ್ನು ಹಿಡಿದಿರುವವರಲ್ಲಿ ಭೌದ್ಧಿಕತೆಯ ಮತ್ತು ನೈತಿಕತೆಯ ದಿವಾಳಿತನ ಎದ್ದು ಕಾಣುತ್ತದೆ. ಜನಗಳಿಂದ ಆಯ್ದು ಬರುವತನಕ ಇವರಿಗೆ ಜನ ಬೇಕು. ಒಂದು ಬಾರಿ ಆಯ್ದು ಬಂದರೆ ಜನರನ್ನು ಮರೆತು ಸ್ವಾರ್ಥದಿಂದ ಧನದ ದಾಸರಾಗಿ ಬಿಡುತ್ತಾರೆ. ಅಧಿಕಾರದ ಮತ್ತೇರಿಬಿಡುತ್ತದೆ. ತಮ್ಮನ್ನು ಅಧಿಕಾರಕ್ಕೇರಿಸಿದ ಜನಹಿತಕ್ಕಿಂತ ಸ್ವಹಿತವೇ ಹೆಚ್ಚಾಗಿ ಬಿಡುತ್ತದೆ. ಇವರನ್ನೇ ಮಾನ್ಯ ಗುಂಡಪ್ಪನವರು 'ಸುರೆ ಕುಡಿದವರು ಕೆಲರು ಹುಟ್ಟು ಹಾಕುವರು' ಎಂದಿದ್ದಾರೆ.

ಇದು ನಾವೆಲ್ಲಾ ದೇಶದಾದ್ಯಂತ ನೋಡುತ್ತಿರುವ ಪರಿಸ್ಥಿತಿಯಲ್ಲವೇ? ನಮ್ಮ ದೇಶ ಮಾತ್ರವಲ್ಲ ಇಡೀ ಜಗತ್ತಿನ ಎಲ್ಲ ದೇಶಗಳಲ್ಲಿಯೂ ಇದೇ ರೀತಿ ಎಂದರೆ ತಪ್ಪಾಗಲಾರದು. ಅಧಿಕಾರ ಸಿಕ್ಕವರು ಹೀಗೆ. ಇನ್ನು ಅಧಿಕಾರ ಸಿಗದೇ ವಿರೋಧಪಕ್ಷದಲ್ಲಿರುವವರು, ತಮಗೆ ಅಧಿಕಾರ ಸಿಗಲಿಲ್ಲವಲ್ಲ ಎನ್ನುವ ಒಂದೇ ಕಾರಣಕ್ಕೆ ಮೇಲ್ನೋಟಕ್ಕೆ ವಿರೋಧವನ್ನು ತೋರುತ್ತಾ ಅಧಿಕಾರದಲ್ಲಿರುವವರ ಜೊತೆ ಶಾಮೀಲಾಗಿ, ಒಳಗೊಳಗೇ ತಮ್ಮ ಸ್ವಾರ್ಥಸಾಧನೆ ಮಾಡುವ ದುರಳರು.

ಇವರುಗಳ ಉನ್ಮತ್ತ ಅಟ್ಟಹಾಸದ ಆಡಳಿತ ಶೈಲಿಯಲ್ಲಿ ಸರಕಾರದ ತೆಪ್ಪ ಭಯಂಕರವಾಗಿ ಓಲಾಡುತ್ತಿದೆ. ಜನ ಕಂಗಾಲಾಗಿದ್ದಾರೆ. ಇದನ್ನೇ ಮಾನ್ಯ ಗುಂಡಪ್ಪನವರು 'ಜನವೆದ್ದು ಕುಣಿಯುವುದು' ಎಂದಿದ್ದಾರೆ. ಆಡಳಿತದಲ್ಲಿರುವವರ ದುರಾಡಳಿತ ಮತ್ತು ಜನರ ನಿರಾಸೆಗಳ ಮಧ್ಯೆ, ಇಂದು ಬೀಳುವುದೋ, ನಾಳೆ ಬೀಳುವುದೋ ಎನ್ನುವಂಥಾ ಡೋಲಾಯಮಾನವಾದ ಸ್ಥಿತಿಯಲ್ಲಿ ಈ ಸರಕಾರ ಉರುಳದೆ ತೇಲಿಕೊಂಡು ಹೋಗುತ್ತಿದೆ ಅಲ್ಲವೇ? ಇದೇ ಆಶ್ಚರ್ಯಕರವಾದ ಸಂಗತಿ. ಇದಕ್ಕೆ ಕಾರಣವೇನು ಗೊತ್ತೇ, ಅಲ್ಲಿರುವವರೆಲ್ಲಾ ಕಳ್ಳರೇ, ಯಾರು ಯಾರನ್ನು ಪ್ರಶ್ನಿಸಬೇಕು? ಇವರಿಗೆ ಮತ ಕೊಟ್ಟು ಚುನಾಯಿಸಿದ ಜನಕ್ಕೆ ಅವರನ್ನು ಪ್ರಶ್ನಿಸುವ ಅಧಿಕಾರವೂ ಇಲ್ಲ. ಸಾಮಾನ್ಯ ಜನರ ಕೂಗು ಕೇವಲ ಅರಣ್ಯ ರೋದನವಾಗಿದೆ.

ಹಾಗಾಗಿ ವಾಚಕರೆ ಬದಲಾವಣೆ ತರುವ ಹೊಣೆ ನಮ್ಮ ಮೇಲೆ ಇರುವುದರಿಂದ ಸಮಯಕ್ಕೆ ಕಾಯಬೇಕು. ನಾವೆಲ್ಲಾ ಒಂದು ಶುದ್ಧ ವಾತಾವರಣ ನಿರ್ಮಾಣ ಕಾರ್ಯಕ್ಕೆ ಕಟಿಬದ್ಧರಾಗಿ ಕಾಯಬೇಕು. ಸಮಯ ಬಂದಾಗ ಸರಿಯಾದ ನಿರ್ಣಯ ತೆಗೆದುಕೊಂಡು ಸುಧಾರಣೆಯನ್ನು ನಾವೇ ಮಾಡಿಕೊಳ್ಳಬೇಕಲ್ಲವೇ? ಇಲ್ಲದಿದ್ದರೆ ನಮ್ಮ ಕರ್ಮ ಎಂದು ಅನುಭವಿಸಬೇಕು.

# ವಿಕಟ ರಸಿಕನು ದಾತ 309-313

**ಮುಕ್ತಕ - 309**

**ವನ್ಯಮೃಗಗಳ ನಡುವೆ ಗೋವು ಬಂದೇನಹುದು?? ।**
**ಪಣ್ಯವೀಧಿಯಲಿ ತಾತ್ತ್ವಿಕನಿಗೇನಹುದು? ।**
**ಅನ್ಯಾದುನ್ಮತ್ತ ಕೋಲಾಹಲದ ಲೋಕ ।**
**ಪುಣ್ಯವನು ಚಿಂತಿಪುದೆ? - ಮಂಕುತಿಮ್ಮ. ।**

ಬಂದೇನಹುದು?=ಬಂದು+ಏನು+ಅಹುದು, ತಾತ್ವಿಕನಿಗೇನಹುದು=ತಾತ್ವಿಕನಿಗೆ+ಏನು+ಅಹುದು, ಅನ್ಯಾಯದುನತ್ತ=ಅನ್ಯಾಯದ+ಉನ್ಮತ್ತ, ಪಣ್ಯವೀಧಿಯಲಿ-ಅಂಗಡಿ ಬೀದಿಯಲ್ಲಿ, ತಾತ್ವಿಕ=ತತ್ವಗಳನ್ನು ಪ್ರತಿಪಾದಿಸುವವನು, ಉನ್ಮತ್ತ=ಮದವೇರಿದ, ಅಹಂಕಾರಪೂರಿತ, ಕೋಲಾಹಲ=ಗಲಭೆ.

ಕಾಡುಪ್ರಾಣಿಗಳ ನಡುವೆ ಹಸು ಬಂದರೆ ಏನಾಗುತ್ತದೆ? ಅವುಗಳೆಲ್ಲ ಅದನ್ನು ಕೊಂದು ತಿನ್ನುತ್ತವೆ. ವ್ಯಾಪಾರ ನಡೆಯುವ ಬೀದಿಯಲ್ಲಿ ಯಾವನೋ ಒಬ್ಬ ತತ್ವಜ್ಞಾನಿ ತತ್ವವನ್ನು ಹೇಳಿದರೆ, ಕೇಳುವವರಾರು? ಹಾಗೆಯೇ ಅನ್ಯಾಯ, ಮದ, ಅಹಂಕಾರ, ಸ್ವಾರ್ಥ ತುಂಬಿದ ಈ ಲೋಕದಲ್ಲಿ ಪುಣ್ಯಕೆಲಸದ ಬಗ್ಗೆ ಯಾರು ಚಿಂತಿಸುತ್ತಾರೆ

(133)



ಎಂದು ಲೋಕದ ವಾಸ್ತವಿಕತೆಯನ್ನು ಬಿಂಬಿಸುವ ವಿಚಾರವನ್ನು ಈ ಮುಕ್ತಕದಲ್ಲಿ ಮಂಡಿಸಿದ್ದಾರೆ ಮಾನ್ಯ ಗುಂಡಪ್ಪನವರು.

ಯಾರಾದರೂ ಬಹಳ ಸಾಧು ಸ್ವಭಾವದ ವ್ಯಕ್ತಿ ಇದ್ದರೆ ಅವನನ್ನು ಹಸುವಿನಂಥಾ ಮನುಷ್ಯ ಎಂದು ಹೇಳುವುದು ವಾಡಿಕೆ. ಹಿಂದೆ ಬಂದರೆ ಒದೆಯದ ಮುಂದೆ ಬಂದರೆ ಹಾಯದ, ತಮ್ಮಷ್ಟಕ್ಕೆ ತಾವಿರುವ ಜನರವರು. ಅಂತಹ ವ್ಯಕ್ತಿಗಳು ನಮ್ಮ ಸಮಾಜದಲ್ಲಿ ಬಹಳ ಕಡಿಮೆ ಜನ ಇದ್ದಾರೆ. ಆದರೆ ಅವರಿರುವ ಈ ಜಗತ್ತು ಬಹಳ ಕ್ರೂರ ಜಗತ್ತು. ಕೇವಲ ಕಾಡು ಮೃಗಗಳಂತೆ ವರ್ತಿಸುವ ದುಷ್ಟ, ಸ್ವಾರ್ಥ ಪೂರಿತ ಜನರಿಂದಲೇ ತುಂಬಿದೆ ಈ ಲೋಕ. ಇಂತಹವರ ನಡುವಿನಲ್ಲಿ ಸಜ್ಜನರ ಜೀವನ ಬಹು ದುರ್ಭರ. ಬಹಳ ಜಾಗರೂಕರಾಗಿರಬೇಕು. ಕತ್ತಿಯ ಮೇಲಿನ ಸಾಮಿನಂತೆ.

ಇನ್ನು ಈ ಜಗತಿನಲ್ಲಿ ಇಂದು ಎಲ್ಲವೂ ವ್ಯಾಪಾರವೇ ಆಗಿಹೋಗಿದೆ. ಹೆತ್ತ ತಂದೆತಾಯಿಗಳಿಗೆ ತುತ್ತು ಅನ್ನ ಹಾಕುವುದಕ್ಕೂ ಲೆಕ್ಕಾಚಾರ ಮಾಡುವಷ್ಟು ವ್ಯಾಪಾರೀ ಮನೋಭಾವ ತುಂಬಿಕೊಂಡುಬಿಟ್ಟಿದೆ. ನಮ್ಮ ಎಲ್ಲ ಸಂಬಂಧಗಳಲ್ಲೂ, ಇಂದರಿಂದ ನನಗೇನು? ಎಂದು, ಕೇವಲ ವೈಯಕ್ತಿಕ ಪ್ರಯೋಜನವನ್ನೇ ಹುಡುಕುವ ಪ್ರವೃತ್ತಿ ಅಧಿಕವಾಗಿದೆ. ನಮ್ಮ ಬದುಕಿನ ಎಷ್ಟೋ ವಿಷಯಗಳಿಗೆ ಬೆಲೆಕಟ್ಟಿ ಲೆಕ್ಕ ಮಾಡಲು ಸಾಧ್ಯವೇ.

ಒಬ್ಬ ತಾಯಿ ತನ್ನ ಮಕ್ಕಳಿಗೆ ತೋರುವ ಪ್ರೀತಿ ಪ್ರೇಮ ಅನುರಾಗಗಳಿಗೆ ಯಾರಾದರೂ ಪ್ರಮಾಣ, ಪರಿಮಾಣಗಳ ಲೆಕ್ಕಾಚಾರವನ್ನು ಹಾಕಲು ಸಾಧ್ಯವೇ. ಆದರೆ ಆ ತಾಯಿಗೆ ತುತ್ತು ಅನ್ನ ಹಾಕಲು ಲೆಕ್ಕಾಚಾರ ಮಾಡುವ ದುಷ್ಟ ಮಕ್ಕಳ ಸಂಖ್ಯೆ ಇಂದು ಅಧಿಕವಾಗುತ್ತಿದೆ. ಇಂತಹ ಜನರಿಗೆ, ಇದು ಸರಿಯಲ್ಲವೆಂದು ಯಾರಾದರೂ ತತ್ವಬೋಧನೆಯನ್ನು ಮಾಡಿದರೆ ಕೇಳುವವರಾರು. ಅಂತಹ ಬೋಧಕರಿಗೆ ತಲೆಕೆಟ್ಟ ಹುಚ್ಚ ಎನ್ನುವ ಹಣೆಪಟ್ಟಿ ಕಟ್ಟಿ ಕುಹಕವಾಡುತ್ತದೆ ಈ ಲೋಕ. ಹಾಗಾಗಿ ವ್ಯಾಪಾರೀ ಮನೋಭಾವದ ಈ ಲೋಕದಲ್ಲಿ ತತ್ವಬೋಧನೆಯಿಂದ ಪ್ರಯೋಜನವಿಲ್ಲ.

ಇಲ್ಲಿ ಎಲ್ಲರಿಗೂ ಏನೋ ಸಡಗರ, ಓಡಾಟ, ಏನೋ ಕೋಲಾಹಲ, ಬದುಕಿನ ಓಟದ ವೇಗ. ಈ ಓಟದಲ್ಲಿ ಎಲ್ಲರೂ ಗೆಲ್ಲಲು ಉದ್ಯುಕ್ತರೇ. ನ್ಯಾಯಾನ್ಯಾಯಗಳ ಪರಿವೆ ಇಲ್ಲದೆ, ಧರ್ಮ ಅಧರ್ಮಗಳ ವಿವೇಚನೆಯಿಲ್ಲದೆ ಉನ್ಮತ್ತರಾಗಿ ಅಹಂಕಾರದಿಂದ ಜೀವನದ ಓಟವನ್ನು ಓಡುತ್ತಿರುವ ಜನರಲ್ಲಿ ಪುಣ್ಯಕಾರ್ಯಕ್ಕೆ ಸಮಯವೇ ಇಲ್ಲ. ಪುಣ್ಯವೆಂದರೆ ಸ್ವಾರ್ಥಕ್ಕಲ್ಲದೆ ಪರರ ಹಿತಕ್ಕೆ ಮಾಡುವ ಕೆಲಸವೇ ಪುಣ್ಯ ಕೆಲಸ. ಆದರೆ ಎಲ್ಲರಿಗೂ ತಮ್ಮ ಸ್ವಾರ್ಥ ಸಾಧನೆಗೇ ಸಮಯವಿಲ್ಲದಿರುವಾಗ ಇನ್ನೂ ಪರ ಹಿತದ ಕೆಲಸ ಮಾಡಲು ಸಮಯವೆಲ್ಲಿದೆ ಹೇಳಿ? ವಾಚಕರೆ, ನಮ್ಮ ದೈನಂದಿನ ಬದುಕಿನ ಓಟದ ಮಧ್ಯೆ ಈ ಮುಕ್ತಕದ ಹೂರಣವಾದ ಇಂತಹ ವಿಚಾರಗಳನ್ನು ಮಾಡಬೇಕು.

**ಮುಕ್ತಕ-310**

**ಸ್ವಾಭಾವಿಕವ ಮರೆತು ನಭಕೇಣಿ ಹೂಡುವುದುಮ್ ।**
**ಆಭಾಸವನು ಸತ್ಯವೆಂದು ಬೆಮಿಸುವುದುಮ್ ॥**
**ಸೌಭಾಗ್ಯಗಳನರಸಿ ದೌರ್ಭಾಗ್ಯಕ್ಕೀಡಹುದುಮ್ ।**
**ಅಭಿಶಾಪ ನರಕುಲಕೆ – ಮಂಕುತಿಮ್ಮ ॥**

ನಭಕೇಣಿ=ನಭಕೆ+ಏಣಿ, ಸೌಭಾಗ್ಯಗಳನರಸಿ=ಸೌಭಾಗ್ಯಗಳನು+ಅರಸಿ,
ದೌರ್ಭಾಗ್ಯಕ್ಕೀಡಹುದುಮ್=ದೌರ್ಭಾಗ್ಯಕ್ಕೆ+ಈಡಹುದುಮ್.
ಸ್ವಾಭಾವಿಕವ=ಸಹಜತೆಯ, ನಭಕೇಣಿ=ಆಕಾಶಕ್ಕೆ ಏಣಿ, ಆಭಾಸವನು=ಅಸತ್ಯವನು,
ಬೆಮಿಸುವುದುಮ್=ಭ್ರಮಿಸುವುದು, ನರಕುಲಕೆ=ಮನುಷ್ಯರಿಗೆ

ಸಹಜತೆಯ ಮರೆತು ಆಕಾಶಕ್ಕೆ ಏಣಿಹಾಕುವ ಪ್ರಯತ್ನವನ್ನು ಮಾಡುತ್ತಾ ಮಿಥ್ಯವನ್ನೇ ಸತ್ಯವೆಂದು ಭ್ರಮಿಸುತ್ತಾ ಉತ್ತಮ ಸ್ಥಿತಿಗಳನ್ನು ಹುಡುಕುತ್ತಾ ಅಧೋಗತಿಗೆ ಬೀಳುವುದೇ ಈ ಮನುಷ್ಯರಿಗೆ ಒಂದು ಶಾಪವಿದ್ದಂತೆ ಎಂದು ಜಗತ್ತಿನ ಸಾರ್ವಕಾಲಿಕ ಸತ್ಯವನ್ನು ಮಂಡಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಸ್ವಾಭಾವಿಕವಾಗಿ ತಾನಿರುವ ಸ್ಥಿತಿಗಿಂತ ಉತ್ತಮ ಸ್ಥಿತಿಗೆ ಹೋಗಬೇಕೆಂದು ಆಸೆ ಪಡುವುದು ಮನುಷ್ಯನ ಸ್ವಭಾವ. ಇದರಲ್ಲಿ ಯಾವ ತಪ್ಪೂ ಇಲ್ಲ ಅಲ್ಲವೇ? ಆದರೆ ಮನುಷ್ಯನಿಗೆ ತನಗೆ ಯಾವುದು ಹಿತ, ಯಾವುದು ಅಹಿತ ಎಂದು ವಿಮರ್ಶೆ ಮಾಡಿಕೊಳ್ಳುವ ಜ್ಞಾನ ಮತ್ತು ಕ್ಷಮತೆಯ ಕೊರತೆ ಇದೆ. ಏನನ್ನೋ ಸಾಧಿಸಿಬಿಡಬೇಕು, ಹೇಗಾದರೂ ಸಾಧಿಸಿಬಿಡಬೇಕು ಎಂದು ಇವನ ಪ್ರಯತ್ನ ನಡೆಯುತ್ತದೆ. ಹಾಗೆ ಮಾಡುವ ಪ್ರಯತ್ನದಲ್ಲಿ ಪೂರ್ವಾಪರಗಳನ್ನು ಯೋಚಿಸಿವುದಾಗಲೀ, ಸಾಧಿಸುವ ತನ್ನ ಸಾಮರ್ಥ್ಯವನ್ನು ಸರಿಯಾಗಿ ಅರಿತುಕೊಳ್ಳುವುದಾಗಲೀ, ಸಾಧನೆಯ ಮಾರ್ಗ ಮತ್ತು ಸಾಧನೆಗೆ ಬಳಸಿಕೊಳ್ಳುವ ಸಾಧನಗಳು ಸರಿಯಾಗಿವೆಯೇ ಎನ್ನುವ ವಿವೇಚನೆಯಾಗಲೀ ಇಲ್ಲದೆ, ಇವನು ಆಕಾಶಕ್ಕೆ ಏಣಿ ಹಾಕುವ ಕೆಲಸವನ್ನು ಮಾಡಲು ಹೋಗುತ್ತಾನೆ. ಇವಾವುದರ ಅರಿವೂ ಇಲ್ಲದೆ ಮಾಡಲು ಹೊರಟ ಕಾರ್ಯದಲ್ಲಿ ಎಡವುತ್ತಾನೆ, ಮುಗ್ಗರಿಸುತ್ತಾನೆ ಮತ್ತು ಬೀಳುತ್ತಾನೆ. ಪ್ರತಿಯೊಬ್ಬರೂ ತಮ್ಮ ತಮ್ಮ ಜೀವನದ ಪರಿಯನ್ನು ಅವಲೋಕನ ಮಾಡಿಕೊಂಡರೆ ಮೇಲೆ ಹೇಳಿದ ಎಲ್ಲವೂ ಅವರಿಗೆ ಗೋಚರವಾಗುತ್ತದೆ

ಈ ಲೋಕವೇ ಭ್ರಮೆಗಳಿಂದ ತುಂಬಿದೆ. ಸಹಜತೆಯೇ ಇಲ್ಲದ ಭ್ರಮೆಯಿಂದ ತುಂಬಿದೆ. ನಾವು ಕಾಣುವುದು ಯಾವುದೂ ನಮಗೆ ವಸ್ತು ವಿಷಯದ ಮತ್ತು ವ್ಯಕ್ತಿಯ ಸತ್ಯವಾದ ಪರಿಚಯ ಮಾಡಿಸುವುದೇ ಇಲ್ಲ ಅಥವಾ ನಮಗೆ ಸತ್ಯವನ್ನು ಕಾಣುವ ಯೋಗ್ಯತೆಯೇ ಇಲ್ಲ. ಯಾವುದಾದರೂ ಒಂದು ವಸ್ತು, ವಿಷಯ ಅಥವಾ ವ್ಯಕ್ತಿಯ ಪೂರ್ವ ಮತ್ತು ಸಂಪೂರ್ಣ ಪರಿಚಯವಿರದೆ ಅದನ್ನು ಪಡೆದುಕೊಳ್ಳುವ ಅಥವಾ ಅದರ ಸಹಾಯದಿಂದ ಏನನ್ನೋ ಸಾಧಿಸುವ ಪ್ರಯತ್ನ, ಸತ್ಯದ ಬಲವಿಲ್ಲದೆ, ಕೇವಲ ಭ್ರಮೆಯಿಂದ ಪ್ರೇರಿತವಾಗಿ ನಮ್ಮ ಪ್ರಯತ್ನದಲ್ಲಿ ಮುಗ್ಗರಿಸುವಂತೆ ಮಾಡುತ್ತದೆ. ಬಹುಶಃ ಈ ರೀತಿಯ ಅನುಭವ ಎಲ್ಲರಿಗೂ ಅವರವರ ಜೀವನದ ಯಾವುದಾದರೂ ಸಮಯದಲ್ಲಿ ಆಗಿರುತ್ತದೆ.





ವಾಚಕರೆ ಇದು ಎಲ್ಲರ ಅನುಭವವಾದ್ದರಿಂದಲೇ ಮಾನ್ಯ ಗುಂಡಪ್ಪನವರು ಇದನ್ನು 'ಅಭಿಶಾಪ ನರಕುಲಕೆ' ಎಂದಿದ್ದಾರೆ. ಈ ರೀತಿಯ ಅಜ್ಞಾನ ಮತ್ತು ಅಜ್ಞಾನ ಪ್ರೇರಿತವಾದ ಕೆಲಸ ಮತ್ತು ಅದರಿಂದಾಗುವ ಕಹಿ ಅನುಭವ, ವ್ಯರ್ಥ ವ್ಯಸನ ಶಾಪವಲ್ಲದೆ ಮತ್ತೇನು? ಕಾರಣವೇನೆಂದು ನೋಡಿದರೆ ದುರಾಸೆ, ಬೇಗ ಔನ್ನತ್ಯಕ್ಕೇರುವ ಭ್ರಮೆ. ಇದನ್ನು ಬಿಟ್ಟರೆ ಬಹುಶಃ ಪ್ರಯತ್ನದಲ್ಲಿ ಯಶಸ್ಸು ಸಿಗದೇ ಇದ್ದರೂ ಅಪಜಯ ಕೊಡುವ ನೋವನ್ನು ತಡೆದುಕೊಳ್ಳುವ ಶಕ್ತಿ ಬರಬಹುದು. ಅಂತಹ ದುರಾಸೆಯಿಂದ ಕೂಡಿದ ಔನ್ನತ್ಯದ ಪ್ರಯತ್ನವನ್ನು ನಾವು ಬಿಡಬೇಕು. ಬಿಟ್ಟರೆ ಸುಖ. ಇಲ್ಲದಿದ್ದರೆ ನೋವು. ಆಯ್ಕೆ ನಮಗೇ ಬಿಟ್ಟದ್ದಲ್ಲವೇ?

**ಮುಕ್ತಕ - 311** **ಒಟ್ಟಿನಲ್ಲಿ ತತ್ತ್ವವಿದು; ವಿಕಟರಸಿಕನೋ ಧಾತ |**

**ತೊಟ್ಟಿಲನು ತೂಗುವನು; ಮಗುವ ಜಿಗುಟುವನು ||**

**ಸಿಟ್ಟನ್ ಒಡಹುಟ್ಟುಗಳೊಳಾಗಿಪನು, ಸೋಲಿಪನು |**

**ತುತ್ತು ವಿಕಟಿಗೆ ನಾವು – ಮಂಕುತಿಮ್ಮ ||**

ಒಡಹುಟ್ಟುಗಳೊಳಾಗಿಪನು=ಒಡಹುಟ್ಟುಗಳೊಳ್+ಆಗಿಪನು

ವಿಕಟರಸಿಕನೋ=ಕ್ರೂರವಾದ ಹಾಸ್ಯವುಳ್ಳವನು, ವಿಕಟಿಗೆ=ಕ್ರೌರ್ಯದಿಂದ ವಿನೋದವನುಭವಿಸುವವನು.

ಈ ಜಗತ್ತಿನ ತತ್ವವಿಷ್ಟೇ, ನಮ್ಮನ್ನು ಹಾಸ್ಯದಂತೆ ಕಾಣುವ ಹಿಂಸೆಯಿಂದ ನಡೆಸಿಕೊಳ್ಳುತ್ತಿದ್ದಾನೆ ಸೃಷ್ಟಿಕರ್ತ, ಒಂದು ಕಡೆ ಮಗುವಿನ ತೊಟ್ಟಿಲನ್ನು ತೂಗಿ ಮತ್ತೆ ಮಗುವನ್ನು ಜಿಗುಟಿ ವಿಕಟ ಅಟ್ಟಹಾಸವನ್ನು ಮೆರೆಯುವಂತೆ, ನಮ್ಮ ಒಡಹುಟ್ಟಿದವರಲ್ಲಿ, ಪ್ರೀತಿಯಿರಬೇಕಾದ್ದಲ್ಲಿ, ಸಿಟ್ಟನ್ನು ಕೊಟ್ಟು, ಜಯದ ಮತ್ತು ಆನಂದದ ದಾರಿಯನ್ನು ತೋರಿಸಿ ಕಷ್ಟಗಳ ಸಂಕೋಲೆಯಲ್ಲಿ ನಮ್ಮನ್ನು ಸಿಕ್ಕಿಸಿ, ನಾವು ಸಂಕಟ ಪಡುವಾಗ ತಾನು ಆನಂದಪಡುತ್ತಾನೆ. ನಾವು ಗೆಲುವಿನ ಸಂಭ್ರಮದಲ್ಲಿರುವಾಗ ನಮ್ಮನ್ನು ಸೋಲಿಸುತ್ತಾನೆ. ಏನಾದರೇನು ನಾವೆಲ್ಲಾ ಅವನ ವಿಕಟಹಾಸ್ಯಕ್ಕೆ ತುತ್ತಾಗಿದ್ದೇವೆ ಎಂದು ವಿಧಿ ವಿಲಾಸದ ಸ್ವರೂಪವನ್ನು ಮುಂದಿಟ್ಟಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಇದು ನಮ್ಮೆಲ್ಲರ ಬದುಕಿನ ಕಥೆಯೇ ಅಲ್ಲವೇ? ನಾವೂ ಸಹ ಏನನ್ನೋ ಮಾಡಲು ಹೊರಡುತ್ತೇವೆ, ಎಲ್ಲೋ ಹೋಗಿ ಸೇರುತ್ತೇವೆ. ದಾರಿಯಲ್ಲಿ ನಮಗೆ ಪರಿಚಯವಾಗುವ ಬೇರೆ ಬೇರೆ ವ್ಯಕ್ತಿಗಳು, ನಡೆಯುವ ಘಟನೆಗಳು, ಅದರಿಂದಾಗುವ ಪರಿಣಾಮಗಳು ಮತ್ತು ನಮ್ಮ ಬದುಕಿನ ಪಯಣದ ಗತಿ ಬದಲಾವಣೆ, ಒಂದು ಗೊಂಡಾರಣ್ಯದಲ್ಲಿ ಕಣ್ಣಿಗೆ ಪಟ್ಟಿ ಕಟ್ಟಿಕೊಂಡು ಹೋದಂತೆ, ಒಂದು ಕೆಲಸವನ್ನು ಮಾಡುವಂತೆ ಬುದ್ಧಿಕೊಡುವುದೂ ಅವನೇ, ಅದಕ್ಕೆ ಮಾರ್ಗ ತೋರುವವನೂ ಅವನೇ, ಮತ್ತೆ ದಾರಿ ತಪ್ಪಿಸಿ, ನಮ್ಮನ್ನು ಪ್ರಯತ್ನದಲ್ಲಿ ಸೋಲಿಸಿ "ನೋಡಿದೆಯಾ, ನಿನ್ನನ್ನು ಹೇಗೆ ಮಂಗನಂತೆ ಆಡಿಸುತ್ತೇನೆ" ಎಂದು ನಗುವುದೂ ಅವನೇ.

ನಾವು ಒಂದೇ ತಾಯಿಯ ಗರ್ಭವನ್ನು ಹಂಚಿಕೊಂಡು ಹುಟ್ಟಿದರೂ ನಮ್ಮ ಒಡಹುಟ್ಟಿದವರೊಡನೆ, ಎಷ್ಟೊಂದು ಸಿಟ್ಟು, ದ್ವೇಷ ಮತ್ತು ವೈಷಮ್ಯ ಎಂದು ಯೋಚಿಸಿದರೆ ಈ ದಾಯಾದಿ ಮಾತ್ಸರ್ಯವೂ ಆ ವಿಧಾತನು

ನಮಗೆ ಕರುಣಿಸಿದ ಶಾಪವೋ ಎಂದು ತೋರುತ್ತದೆ. ಹಿಂದೆ ನಮ್ಮ ಜೀವನಕ್ಕೆ ಮೂರು ಜನ ದೊರೆಗಳು ಎಂದು ಮಾನ್ಯ ಗುಂಡಪ್ಪನವರು ವಿವರಿಸಿದ್ದರು. ಒಂದು ನಮ್ಮ ಪೂರ್ವ ಕರ್ಮ, ಎರಡನೆಯದು, ನಮ್ಮ ಪ್ರಸ್ತುತ ಕರ್ಮ ಮತ್ತು ಮೂರನೆಯದು ವಿಧಿ ಅಥವಾ ಪರಮಾತ್ಮ. ಹೆಚ್ಚಾಗಿ ನಮ್ಮ ಪೂರ್ವಕರ್ಮ ಪ್ರಸ್ತುತ ಕರ್ಮಕ್ಕೆ ಮಾರ್ಗಸೂಚಿಯಾಗಿರುತ್ತದೆ ಮತ್ತು ಇವೆರಡೂ ಸಹ ಆ ಪರಮಾತ್ಮನ ಅಧೀನದಲ್ಲಿರುತ್ತದೆ ಎಂದು ವಿಶದೀಕರಿಸಿದ್ದರು. ನಾವು ಪೂರ್ವ ಕರ್ಮವನ್ನು ಹೊತ್ತು ತಂದು ಇಲ್ಲಿಯೂ ಅಲ್ಪಸ್ವಲ್ಪ ಅರ್ಜಿಸಿ, ಏನನ್ನೋ ಪಡೆದುಕೊಂಡು ಮತ್ತೇನನ್ನೂ ಕಳೆದುಕೊಂಡು ಸಾಗುವುದೇ ಈ ಜೀವನದ ಪಯಣ. ಆ ವಿಧಾತನಾಡಿಸಿದಂತೆ ಆಡುವುದು ಬಿಟ್ಟರೆ ನಮಗೆ ಪರ್ಯಾಯವೇ ಇಲ್ಲ.

ಆದರೆ ಬದುಕಿನಲ್ಲಿ ಬಂದದ್ದನ್ನು ಬಂದ ಹಾಗೆ ಅನುಭವಿಸುತ್ತಾ, ಅದಕ್ಕೆ ಕಾರಣ ಹುಡುಕದೆ, ಅಂಟಿಯೂ ಅಂಟದ ಹಾಗೆ ಸದಾಕಾಲ 'ಸತ್'ನ ಸಂಗದಲ್ಲಿದ್ದು ಬದುಕಿದರೆ, ತಂದದ್ದನ್ನು ಕಳೆಯುತ್ತಾ ಮತ್ತೆ ಅಂಟಿಸಿಕೊಳ್ಳುವುದನ್ನು ಕಡಿಮೆಯಾಗಿಸಿಕೊಳ್ಳುತ್ತಾ ಸತ್ಯವಾದ ಮತ್ತು ನಿತ್ಯವಾದ ಆನಂದವನ್ನು ಪಡೆಯಬಹುದು.

**ಮುಕ್ತಕ - 312** **ಒಂದು ಜನ್ಮದ ಲೆಕ್ಕವಂದೆ ಮುಗಿವಂತೇಕೆ।**
**ಸಂಧಿಸವು ಕಾಲ ಕಾರಣ ಕರಣ ಕಾರ್ಯ॥**
**ಮುಂದಕೇತಕೆ ಮಿಗಿಸಿ ಕರ್ಮಋಣಶೇಷಗಳ।**
**ಬಂಧಿಪನು ವಿಧಿ ನಿನ್ನ - ಮಂಕುತಿಮ್ಮ॥**

ಲೆಕ್ಕವಂದೆ=ಲೆಕ್ಕವು+ಅಂದೆ, ಮುಗಿವಂತೇಕೆ=ಮುಗಿವಂತೆ+ಏಕೆ, ಮುಂದಕೇತಕೆ=ಮುಂದಕೆ+ಏತಕೆ.
ಸಂಧಿಸವು=ಸೇರುವುದಿಲ್ಲ, ಕಾಲ=ಸಮಯ, ಕರಣ=ಸಾಧನ, ಕರ್ಮಋಣಶೇಷ=ಮಾಡಬೇಕಾದ ಉಳಿದ ಕೆಲಸಗಳು, ಬಂಧಿಪನು=ಬಂಧಿಸುತ್ತಾನೆ, ವಿಧಿ=ನಮ್ಮ ಪೂರ್ವ ಕರ್ಮ,

ಈ ಜನ್ಮದಲ್ಲಿನ ನಮ್ಮ ಕೆಲಸ ಮತ್ತು ಅದರ ಫಲಗಳ ಲೆಕ್ಕಾಚಾರ ಈ ಜನ್ಮದಲ್ಲೇ ಏಕೆ ಮುಗಿಯುವುದಿಲ್ಲ? ನಮ್ಮ ಕೆಲಸ, ಅದರ ಸಮಯ, ಅದಕ್ಕೆ ಬೇಕಾದ ಸಾಧನ ಮತ್ತು ಅದರ ಕಾರಣಗಳನ್ನು ಏತಕ್ಕೆ ಉಳಿಸಬೇಕು. ಬಹುಶಃ

ಇವುಗಳನ್ನು ಉಳಿಸಿ ನಿನ್ನನ್ನು ಇನ್ನೊಂದು ಜನ್ಮಕ್ಕೆ ಬಂಧಿಸುತ್ತಾನೋ ವಿಧಿ, ಎಂದು ಜನ್ಮ ಜನ್ಮಾಂತರದ ಕೊಂಡಿಯ ವಿಷಯವನ್ನು ಪ್ರಸ್ತಾಪಿಸುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ನಮ್ಮ ಇಂದಿನ ಜನ್ಮಕ್ಕೆ ಕಾರಣ ಪೂರ್ವ ಕರ್ಮವೆಂಬುದು ಸಿದ್ಧಾಂತ. ಪೂರ್ವ ಕರ್ಮವನ್ನು ಹೊತ್ತುಕೊಂಡು ಹುಟ್ಟಿದ್ದೇವೆ. ಇಲ್ಲಿ ಮತ್ತೇನನ್ನೋ ಗಳಿಸಿಕೊಂಡು ಬಾಳುತ್ತೇವೆ. ಹೀಗೆ ಬಾಳಲು ಬೇಕಾದ ಸಮಯ, ಸಾಧನ ಮತ್ತು ಕಾರಣಗಳೆಲ್ಲ ಒಂದೇ ಸಮಯದಲ್ಲಿ ಒದಗಿ ಬಂದು ನಮ್ಮ ಲೆಕ್ಕಾಚಾರಗಳೆಲ್ಲ ಇಲ್ಲೇ ನಡೆದು 'ಕೂಡಿ ಕಳೆದು ಗುಣಿಸಿ ಭಾಗಿಸಿ' ಶೇಷವೇ ಇಲ್ಲದಂತೆ ನಮ್ಮ ಜೀವದ ಪಯಣ ಇಲ್ಲಿಗೆ ಮುಗಿಯಬಾರದು? ಎಂಬುದು ಈ ಮುಕ್ತಕದ ಪ್ರಶ್ನೆ. ಅದಕ್ಕೆ ಉತ್ತರವಾಗಿ, ವಿಧಾತನು ಈ ಕರ್ಮಶೇಷದಿಂದ ನಮ್ಮನ್ನು ಜಗತ್ತಿನ





ಹುಟ್ಟು ಸಾವುಗಳ ಚಕ್ರದಲ್ಲಿ 'ಬಂಧಿಪನು ವಿಧಿ ನಿನ್ನ' ಎಂದು ಗುಂಡಪ್ಪನವರು ಹೇಳುವಂತೆ, ಬಂಧಿಸಿಬಿಟ್ಟಿದ್ದಾನೆ, ಎಂದು ಉತ್ತರ.

ಏಕೆ ಹೀಗೆ? ಎಂದರೆ, ಇದು ವೈವಿಧ್ಯಮಯ ಜಗತ್ತು, ಈ ಜಗತ್ತಿನ ಎಲ್ಲ ಪ್ರಾಣಿ (ಪ್ರಾಣವಿರುವುದೆಲ್ಲ ಎಂಬ ಅರ್ಥದಲ್ಲಿ) ಗಿಡ ಮರಗಳು, ಹೂ ಹಣ್ಣುಗಳ ರೂಪಗಳು, ಇವೆಲ್ಲವೂ ಹೊರಡಿಸುವ ಮಧುರವಾದ ದನಿಗಳು, ಸುವಾಸನೆಗಳು, ರುಚಿಯಾದ ಸ್ವಾದಗಳು, ಭಾವಗಳು ಎಲ್ಲವೂ ಆ ಪರಮಾತ್ಮ ತನ್ನ ಲೀಲಾವಿನೋದಕ್ಕಾಗಿ ತಾನೇ ಸೃಷ್ಟಿಸಿಕೊಂಡ ಜಗತ್ತು, ಪ್ರಾಣಿಗಳು ಬೇರೆ ಬೇರೆ ರೂಪಗಳನ್ನು ಧರಿಸಿ ಹೊಸ ಹೊಸ ಪಾತ್ರಗಳನ್ನೂ ನಿರ್ವಹಿಸಲು ಈ ಜಗತ್ತಿಗೆ ಬರುತ್ತವೆ.

ಆದರೆ ಈ ಪ್ರಾಣಿ ತನ್ನ ಕರ್ಮ ಶೇಷವನ್ನು ಸಂಪೂರ್ಣವಾಗಿ ಕಳೆದುಕೊಂಡು ನಿಃಶೇಷ ಕರ್ಮ" ಎನ್ನುವಂತೆ ಆಗಿಬಿಟ್ಟರೆ ಅವನ ಲೀಲಾ ವಿನೋದವೇ ಕೊನೆಯಾಗಿಬಿಡುತ್ತದಲ್ಲ. ಆಮೇಲೆ ಅವನೇನು ಮಾಡುವುದು. ಹಾಗಾಗಿ ನಮಗೆ ಈ ಪೂರ್ವ ಕರ್ಮದ ನಂಟನ್ನು ಕೊಟ್ಟು, ಇದರಲ್ಲಿ ನಮಗೆ ರುಚಿಯನ್ನು ತೋರಿಸಿ, ನಾವು ಆಸೆ ಪಡುವಂತೆ ಮತ್ತು ಆ ಆಸೆಗಳನ್ನು ಪೂರೈಸಿಕೊಳ್ಳಲು ಮತ್ತೆ ಮತ್ತೆ ಪ್ರಯತ್ನಪಡುವಂತೆ ಮಾಡಿ, ನಮ್ಮ ಲೆಕ್ಕಚಾರ ಪೂರ್ಣವಾಗಿ ಮುಗಿಯದಂತೆ ನೋಡಿಕೊಂಡು ತಾನು ಆನಂದದಿಂದ ಈ ಜಗದ್ವ್ಯಾಪಾರವನ್ನು ನಡೆಸುತ್ತಿದ್ದಾನೆ ಎನ್ನುವುದು ತಥ್ಯ.

ಹಾಗಾದರೆ ಮುಕ್ತಿಯನ್ನು ಪಡೆಯಲು ಬಹಳಷ್ಟು ಜನರು ಪ್ರಯತ್ನ ಪಡುತ್ತಾರಲ್ಲ!! ಅದಕ್ಕರ್ಥವೇನು? ಎಂದರೆ. ಮುಕ್ತಿ ಎಂದರೆ ಬಂಧನದ ಭಾವದಿಂದ ಮುಕ್ತರಾದರೆ ಅದೇ ಮುಕ್ತಿ, ಒಂದು ಹಿಡಿ ಕಡಲೆ ಬೀಜವನ್ನು ಚೆನ್ನಾಗಿ ಹುರಿದು ಮತ್ತೆ ಅದನ್ನು ಹಸನಾದ ಭೂಮಿಯಲ್ಲಿ ನಾಟಿಮಾಡಿದರೆ ಅದು ಮೊಳೆಯುತ್ತದೆಯೇ? ಇಲ್ಲ. ಏಕೆಂದರೆ ಅದರಲ್ಲಿ ಮತ್ತೆ ಸಸಿಯಾಗುವ ಕ್ಷಮತೆ ನಶಿಸಿಹೋಗಿರುತ್ತದೆ. ಹಾಗೆಯೇ ನಾವೂ ಸಹ ಆಸೆಗಳ ಮೊಳಕೆಯನ್ನು ಆಧ್ಯಾತ್ಮದ ಬಾಣಲಿಯಲ್ಲಿ ಹುರಿದುಬಿಟ್ಟರೆ, ಸತ್ಯದ ಮತ್ತು ಸತ್ವದ ಅರಿವಾಗಿ ನಾವು ಈ ಜಗತ್ತಿಗೆ ಅಂಟದೆ, ಮುಕ್ತರಾಗಿ ಬದುಕಬಹುದು. ಕೇವಲ ಅವನು ಕೊಟ್ಟ ಪಾತ್ರ ನಿರ್ವಹಿಸುತ್ತಾ, ನಿರ್ಲಿಪ್ತತೆಯಿಂದ, ಜಗತ್ತಿನ ಕರ್ಮಗಳ ಮತ್ತು ಕರ್ಮ ಶೇಷದ ಲೆಕ್ಕಾಚಾರದ ಬಗ್ಗೆ ತಲೆ ಕೆಡಿಸಿಕೊಳ್ಳದೆ ಆನಂದದಿಂದ ಇರಬಹುದು.

ಮುಕ್ತಕ-313

ಒಳ್ಳೆ ಲೆಕ್ಕಿಗನಲ್ಲ ಪರಮೇಷ್ಠಿ; ನಮ್ಮಿಂದ ।
ಸಲ್ಲುವುದ ಕೊಳಲು ಜನ್ಮಾಂತರಕೆ ಕಾಯ್ದೆ ॥
ಇಲ್ಲಿ ಸಲ್ಲುವುದ ತಾನಿಂದೆ ತೀರಿಸಿಕೊಳ್ಳ- ।
ಲೊಲ್ಲನೇನಂತಕನು - ಮಂಕುತಿಮ್ಮ ॥

ಲೆಕ್ಕಿಗನಲ್ಲ ಲೆಕ್ಕಿಗನು+ಅಲ್ಲ, ತಾನಿಂದೆ=ತಾನು+ಇಂದೆ,
ತೀರಿಸಿಕೊಳ್ಳಲೊಲ್ಲನೇನಂತಕನು=ತೀರಿಸಿಕೊಳ್ಳಲೊಲ್ಲನು+ಏಕೆ+ಅಂತಕನು.

ಪರಮೇಷ್ಠಿ=ಬ್ರಹ್ಮ, ಕೊಳಲು=ತೆಗೆದು ಕೊಳ್ಳಲು, ಜನ್ಮಾಂತರಕೆ=ಹಲವಾರು ಜನ್ಮಗಳಿಗೆ, ಕಾಯ್ದ=ಕಾಯುತ್ತಾನೆ., ಸಲ್ಲುವುದ+ಕೊಡುವುದ, ಲೊಲ್ಲನು=ಒಲ್ಲನು, ಅಂತಕನು=ವಿಧಾತ.

ಆ ಪರಬ್ರಹ್ಮ ಒಳ್ಳೆಯ ಲೆಕ್ಕಾಚಾರದವನಲ್ಲ. ನಮ್ಮ ಕರ್ಮವನ್ನೆಲ್ಲ ಜನ್ಮ ಜನ್ಮಾಂತರಕ್ಕೆ ಕೊಂಡು ಹೋಗಲು ಇಷ್ಟಪಡದೆ ಇಂದೇ ಅವನಿಗೊಪ್ಪಿಸಿ ಲೆಕ್ಕಾಚಾರವನ್ನೆಲ್ಲ ಇಂದು, ಇಲ್ಲೇ ತೀರಿಸಿ ಹೋಗಬೇಕೆಂದುಕೊಂಡರೆ, ಅವನಿಗದು ಇಷ್ಟವಿಲ್ಲ(ಒಲ್ಲ ಏಕೆ? ಎಂದು ಒಂದು ತಾತ್ವಿಕವಾದ ಪ್ರಶ್ನೆಯನ್ನು ಕೇಳುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ, ಜೀವನದಲ್ಲಿ ಬಹಳ ಕಷ್ಟಪಟ್ಟು ನೊಂದು ಬೆಂದ ಜನರು 'ಸಾಕಪ್ಪಾ ಈ ಜನ್ಮ, ಮುಕ್ತಿ ಸಿಕ್ಕರೆ ಸಾಕು' ಎಂದು ಬೇಡುವ ದನಿಯಂತೆ ಇದೆ ಈ ಮುಕ್ತಕ.

ಪೂರ್ವ ಕರ್ಮದ ಸ್ವರೂಪವನ್ನು ನಾವು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ. ಆದರೆ ಒಂದು ಮಾತ್ರ ಸತ್ಯ. ಆ ಪೂರ್ವಕರ್ಮ ನಮ್ಮಲ್ಲಿ ಹೇಗೆ, ಯಾವ ಯಾವ ರೂಪದಲ್ಲಿ ಹೊಕ್ಕಿದೆ ಎಂದು ಒಂದು ಅನುಮಾನ (guess work) ಮಾಡಬಹುದು. ಆತ್ಮನು ಮಾನವನಾಗಿ ರೂಪ ಧರಿಸುವ ಮುನ್ನ, 84 ಲಕ್ಷ ಸಾರಿ ಬೇರೆ ಬೇರೆ ಪ್ರಾಣಿಗಳಾಗಿ, ಕ್ರಿಮಿ-ಕೀಟಗಳಾಗಿ, ಜಲಚರ, ಗಗನಚರಗಳ ಇತ್ಯಾದಿ ರೂಪಗಳನ್ನು ಧರಿಸಿದ ನಂತರವೇ ಮಾನವರಾಗುತ್ತಾರೆ ಎನ್ನುತ್ತದೆ, ನಮ್ಮ ಸನಾತನ. ಒಂದೊಂದು ರೂಪಕ್ಕೆ ಅನುಗುಣವಾದ ಒಂದೊಂದು ಸ್ವಭಾವ, ಆಸೆ ಆಕಾಂಕ್ಷೆಗಳು. ಆ ದೇಹವನ್ನು ಬಿಟ್ಟು ಬಂದರೂ ಆ ದೇಹದಲ್ಲಿನ ಅನುಭವಗಳ, ಪಳೆಯುಳಿಕೆಗಳು ಅಲ್ಪಸ್ವಲ್ಪ ಇಲ್ಲಿ ಇದ್ದೇ ಇರುತ್ತದೆ ಅಲ್ಲವಾ?

ಹೀಗೆ ಲಕ್ಷಾಂತರ ದೇಹಗಳಲ್ಲಿ ಅರ್ಜಿಸಿದ ಗುಣಗಳ ಶೇಷ, ಮಾನವರಲ್ಲಿ ಇರುವುದರಿಂದಲೇ ಮನುಷ್ಯನಲ್ಲಿ ನಾನಾ ರೀತಿಯ ಗುಣಗಳನ್ನು ಕಾಣುವುದು. ಈ ರೀತಿಯ ಗುಣ ವೈವಿಧ್ಯತೆಯನ್ನು ನಾವು ಪ್ರಾಣಿಗಳಲ್ಲಿ ಕಾಣಲಾಗುವುದಿಲ್ಲ. ನಾಯಿ ನಾಯಿಯಂತೆ, ಹಂದಿ ಹಂದಿಯಂತೆ, ಕತ್ತೆ ಕತ್ತೆಯಂತೆಯೇ ಇರುತ್ತದೆ. ಆದರೆ ಮನುಷ್ಯನಲ್ಲಿಯೋ? ಅನ್ಯರ ಮೇಲೆ ಎರಗುವಾಗ ಸಿಂಹದಂತೆಯೂ, ನಾಯಿಯಂತೆಯೂ, ಕುಟಿಲತೆಯಲ್ಲಿ, ನರಿಯಂತೆಯೂ, ತಿನ್ನುವುದರಲ್ಲಿ ಹಂದಿಯಂತೆಯೂ ಹೀಗೆ ನಾನಾ ವಿಧವಾದ ಪ್ರಾಣಿಗಳ ಗುಣಗಳನ್ನು ತನ್ನ ಹಲವಾರು ಪೂರ್ವ ಜನ್ಮಗಳಿಂದ ಹೊತ್ತು ತಂದಿರುತ್ತಾನೆ. ಇವುಗಳನ್ನೆಲ್ಲ ಒಂದೇ ಬಾರಿಗೆ ಕಳೆದುಕೊಳ್ಳುವುದು ಹೇಗೆ ಸಾಧ್ಯ? ಆ ಬ್ರಹ್ಮನಿಗೂ ಎಲ್ಲ ಗುಣಗಳಿಂದ ಕಿಚಡಿಯಂತಿರುವ ನಮ್ಮ ಎಲ್ಲಾ ಲೆಕ್ಕಾಚಾರವನ್ನೂ ಒಂದೇ ಜನ್ಮದಲ್ಲಿ ಮುಗಿಸಿ ಮುಕ್ತಿಯನ್ನು ದಯಪಾಲಿಸಲು ಕಷ್ಟವಾಗುತ್ತದೇನೋ ಎಂದು ಅನಿಸುತ್ತದೆ.

ನಾವೇ ಪ್ರಯತ್ನಪಟ್ಟು ಸಕಲ ಕರ್ಮಗಳನ್ನೂ ಕಳೆದುಕೊಂಡು, ಆಸೆ ಉಳಿಯದಂತೆ ಆದರೆ, ಆಗ ಮುಕ್ತಿ. ಬಂಧನದ ಭಾವವಿಲ್ಲದಿದ್ದರೆ ಮುಕ್ತಿ. ವಿಷಯ ವ್ಯಕ್ತಿ ಮತ್ತು ವಸ್ತುಗಳ ಅಂಟಿನಿಂದ ಮುಕ್ತಿ, ಸಂಪೂರ್ಣ ಅವನಿಗೆ ಶರಣಾದರೆ ಆಗ ಮುಕ್ತಿ, ಅದು ಸಂಪೂರ್ಣವಾಗಬೇಕು, ಅರ್ಧಂಬರ್ಧವೋ ಅಥವಾ ಕ್ಷಣಿಕವೋ ಆದರೆ ಪ್ರಯೋಜನವಿಲ್ಲ.





# ಬ್ರಹ್ಮೋದ್ಯಾನ 314-318

**ಮುಕ್ತಕ-314**

**ಕರ್ಮಋಣಶೇಷಂಗಳುಳಿಯದಿರೆ ಬಿತ್ತಾಗಿ।**
**ಜನ ಜನ್ಮಾಂತರದ ಮರಗಳೇಳದಿರೆ॥**
**ಬ್ರಹ್ಮನುದ್ಯಾನವನ ಶಾಶ್ವತದೊಳಿಹುದೆಂತು।**
**ಮರ್ಮವಿದು ಸೃಷ್ಟಿಯಲಿ - ಮಂಕುತಿಮ್ಮ॥**

ಕರ್ಮಋಣಶೇಷಂಗಳುಳಿಯದಿರೆ=ಕರ್ಮ+ಋಣ+ಶೇಷಂಗಳು+ಉಳಿಯದಿರೆ,
ಮರಗಳೇಳದಿರೆ=ಮರಗಳು+ಏಳದಿರೆ, ಬ್ರಹ್ಮನುದ್ಯಾನವನ=ಬ್ರಹ್ಮನ+ಉದ್ಯಾನವನ,
ಶಾಶ್ವತದೊಳಿಹುದೆಂತು=ಶಾಶ್ವತದೊಳು+ಇಹುದು+ಎಂತು.
ಮರ್ಮವಿದು=ಮರ್ಮವು+ಇದು.
ಕರ್ಮಋಣಶೇಷಂಗಳು=ಹಿಂದಿನ ಜನ್ಮದ ಕರ್ಮದ ಪಳೆಯುಳಿಕೆಗಳು, ಬಿತ್ತಾಗಿ=ಬೀಜವಾಗಿ,
ಬ್ರಹ್ಮನುದ್ಯಾನವನ=ಈ ಜಗತ್ತೆಂಬ ಬ್ರಹ್ಮನ ತೋಟ, ಮರ್ಮವಿದು=ಗುಟ್ಟಿದು.

ಜನ್ಮದಿಂದ ಜನ್ಮಕ್ಕೆ ನಮ್ಮ ಕರ್ಮ ಶೇಷವು ಬೀಜವಾಗಿ ಬರದೆ ಇದ್ದರೆ ಜನ್ಮ ಜನ್ಮಾಂತರದ ಮರ ಹೇಗೆ ಬೆಳೆಯುತ್ತದೆ. ಹಾಗಾದರೆ ಮಾತ್ರ ಈ ಜಗತ್ತು ಆ ಪರಮಾತ್ಮನ ಲೀಲಾವಿನೋದಕ್ಕೆ ಒಂದು ಸುಂದರ ಉದ್ಯಾನವನವಾಗಲು ಸಾಧ್ಯ. ಇದೇ ಜಗತ್ತಿನ ಸೃಷ್ಟಿ ರಹಸ್ಯ ಎಂದು ಈ ಜಗತ್ತಿನ ಸೃಷ್ಟಿಯ ಮತ್ತು ನಿರಂತರತೆಯ ವಿಷಯವನ್ನು ಪ್ರಸ್ತಾಪಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಒಂದು ಮರ ಚಿಗುರಿ, ಹೂ ಬಿಟ್ಟು, ಕಾಯನ್ನು ಹೊರಹೊಮ್ಮಿಸಿ ಕಾಯಿ ಮಾಗಿ ಹಣ್ಣಾಗುತ್ತದೆ. ಆ ಹಣ್ಣಿನೊಳಗೆ ಒಂದು ಬೀಜ. ಆ ಹಣ್ಣಿನ ಬೀಜವನ್ನು ಒಣಗಿ ಮತ್ತೆ ಭೂಮಿಯೊಳಗೆ ಹುದುಗಿ, ಮತ್ತೆ ಮೊಳಕೆಯೊಡೆದು ಚಿಗುರಿ, ಹೊಸದೊಂದು ಗಿಡವಾಗಿ, ಮರವಾಗಿ, ಮತ್ತೆ ಹೂ ಬಿಟ್ಟು ಕಾಯಾಗಿ ಹಣ್ಣು ಬಿಡುತ್ತದೆ. ಈ ಹೊಸ ಮರ ತನ್ನೆಲ್ಲಾ ಗುಣಗಳನ್ನು, ಅಂದರೆ ಎಲೆ, ಹೂವು, ಕಾಯಿ ಮತ್ತು ಹಣ್ಣಿನ ಬಣ್ಣ, ಆಕಾರ, ವಾಸನೆ ಮತ್ತು ರುಚಿ, ತನ್ನ ತಾಯಿ ಮರದಿಂದ ಆ ಬೀಜದೊಡನೆ ಹೊತ್ತು ತಂದಿರುತ್ತದೆ ಅಲ್ಲವೇ? ಆ ಬೀಜವನ್ನು ಒಡೆದು ನೋಡಿದರೆ ಯಾವ ಗುಣವೂ ನಮ್ಮ ಕಣ್ಣಿಗೆ ಕಾಣುವುದಿಲ್ಲ. ಆದರೆ ಅದಕ್ಕೆ ತಕ್ಕ ಸೂಕ್ತ ಪಾತ್ರ ಸಿಕ್ಕಾಗ ತಾನು ಹೊತ್ತು ತಂದ ಗುಣಗಳನ್ನು ಸೂಕ್ತವಾಗಿ ಪ್ರಕಟಗೊಳಿಸುತ್ತದೆ.

ಹಾಗೆಯೇ ಸಾವಿರಾರು ಜನ್ಮಗಳಲ್ಲಿ ಅರ್ಜಿಸಿದ ಗುಣಗಳನ್ನು, ಆತ್ಮ, ತನಗೆ ಅಂಟದೆ ಇದ್ದರೂ, ಒಂದು ದೇಹವನ್ನು ಬಿಟ್ಟು ಇನ್ನೊಂದು ದೇಹಕ್ಕೆ ಹೋಗುವಾಗ, ತನ್ನ ಸುತ್ತ ಒಂದು ಸೂಕ್ಷ್ಮ ಶರೀರದ ಮೂಲಕ ಹೊತ್ತುಕೊಂಡು ಮತ್ತೊಂದು ದೇಹಕ್ಕೆ (ಪಾತ್ರೆಗೆ) ಪ್ರವೇಶಮಾಡುತ್ತದೆ. ಆ ದೇಹದ ಮೂಲಕ ಹಿಂದಿನಿಂದ ತಂದ ಗುಣಗಳನ್ನು ಪ್ರಕಟಗೊಳಿಸುತ್ತಾ ಮತ್ತೊಂದು ಜನ್ಮಕ್ಕೆ ನಾಂದಿ ಹಾಡುತ್ತದೆ. ಇದೇ ಸೃಷ್ಟಿ ರಹಸ್ಯ ಎಂದು ಹೇಳುತ್ತದೆ ನಮ್ಮ ಸನಾತನ ಜ್ಞಾನ. ಅಂದರೆ ಕೆಲವು ಗುಣಗಳು ಹಿಂದಿನ ಜನ್ಮದಿಂದ ಹೊತ್ತು

ತಂದವು ಮತ್ತೆ ಕೆಲವು ಇಲ್ಲಿ ಬದುಕುವಾಗ ಪಡೆದುಕೊಂಡದ್ದು, ತಂದದ್ದಕ್ಕೆ ಇಲ್ಲಿ ಗಳಿಸಿದ್ದನ್ನು ಸೇರಿಸಿಕೊಂಡು ನಮ್ಮ ವ್ಯಕ್ತಿತ್ವ ರೂಪುಗೊಳ್ಳುತ್ತದೆ. ಹಾಗೆಯೇ ಪ್ರಸ್ತುತ ಬದುಕಿನಲ್ಲಿ, ಹೊತ್ತು ತಂದ ಮತ್ತು ಹೊಸದಾಗಿ ಪಡೆದ ಗುಣಗಳಲ್ಲಿ ಕೆಲವನ್ನು ಕಳೆದುಕೊಂಡು, ಕೆಲವನ್ನು ಉಳಿಸಿಕೊಂಡು ಮುಂದಿನ ಜನ್ಮಕ್ಕೆ ಪಾದಾರ್ಪಣೆ ಮಾಡುತ್ತೇವೆ.

ಹೀಗೆ ಎಲ್ಲ ಪ್ರಾಣಿಗಳ ಬದುಕೂ ಒಂದು ಜನ್ಮದಿಂದ ಮುಂದಿನ ಜನ್ಮಕ್ಕೆ ಹೋಗುವ ಕ್ರಮ ಅಥವಾ ವ್ಯವಸ್ಥೆಯನ್ನು ಇರುವಂತೆ ಆ ಪರಮಾತ್ಮ ನೋಡಿಕೊಂಡು ತನಗೆ ಬೇಕಾದ ಹಾಗೆ ಜೀವಿಗಳನ್ನು ರೂಪಿಸುತ್ತಾ ಈ ಜಗತ್ತಿನ ತೋಟದಲ್ಲಿ ನಮ್ಮನ್ನು ಬೇರೆ ಬೇರೆ ಗಿಡ ಮರಗಳಂತೆ ಅಥವಾ ರಂಗಮಂಚದಲ್ಲಿ ಬೇರೆ ಬೇರೆ ಪಾತ್ರಗಳನ್ನಾಗಿಸಿ ಈ ಜಗನ್ನಾಟಕವನ್ನು ನಿರಂತರವಾಗಿ ಆಡಿಸುತ್ತಾ ತಾನು ಆನಂದಪಡುತ್ತಿದ್ದಾನೆ.

ವಾಚಕರೆ, ಎಚ್ಚರಿಕೆ. ನಾವು ಕೇವಲ ಪಾತ್ರಧಾರಿಗಳಷ್ಟೇ. ಹಳೆಯ ಪಾತ್ರವನ್ನು ಕಳಚಿ ಹೊಸ ಪಾತ್ರ ಧರಿಸುವುದು ಮತ್ತು ಆ ಪಾತ್ರಕ್ಕೆ ತಕ್ಕಂತೆ ನಮ್ಮ ಮಾತು, ಕ್ರಿಯೆ ಮಾತ್ರ ನಮ್ಮ ಕರ್ತವ್ಯ. ಅದನ್ನು ಮೀರಿ ನಮ್ಮ ಅಹಂಕಾರವನ್ನು ಪ್ರದರ್ಶಿಸಲು ಪ್ರಯತ್ನಪಟ್ಟರೆ ಮೊದಮೊದಲು ಆನಂದವೆಂದು ಕಂಡರೂ ಅಂತ್ಯದಲ್ಲಿ ದೀರ್ಘಕಾಲದ ದುಃಖವನ್ನು ಅನುಭವಿಸಬೇಕಾಗುತ್ತದೆ.

**ಮುಕ್ತಕ-315**

**ಸಂಬಳದ ಹಂಬಲವೋ, ಡಾಂಬಿಕತೆಯಬ್ಬರವೋ |**
**ಇಂಬು ಕೂರ್ಮೆಯ ಕರೆಯೋ, ಕರುಳ ಕರೆಕರೆಯೋ |**
**ತುಂಬಿಹವು ಬಾಳಿನಲಿ ನೂರು ತಕರಾರುಗಳು |**
**ಬೆಂಬಲವವೆಲೋ ಜಗಕೆ - ಮಂಕುತಿಮ್ಮ |**

ಡಾಂಬಿಕತೆಯಬ್ಬರವೋ=ಡಾಂಬಿಕತೆಯ+ಅಬ್ಬರವೋ, ಬೆಂಬಲವವೆಲೋ=ಬೆಂಬಲವು+ಅವೆ+ಎಲೊ.
ಹಂಬಲ-ಆಸೆ, ಡಾಂಬಿಕತೆ-ಡಂಬಾಚಾರ, ಇಂಬು=ಒತ್ತಾಸೆ, ಕೂರ್ಮೆ=ಪ್ರೀತಿ, ಒಲವು,
ಕರೆಕರೆ=ಪಿರಿಪಿರಿ,

ವರಮಾನದ ಆಸೆ, ನಮ್ಮಲ್ಲಿರುವ ಸಂಪತ್ತನ್ನು ತೋರ್ಪಡಿಸಿಕೊಳ್ಳುವ ಹಂಬಲ, ಪ್ರೀತಿಸಿ ಒತ್ತಾಸೆ ಕೊಡುವ ಪ್ರಯತ್ನ, ಹೆತ್ತ ಮಕ್ಕಳಿನ ಮೇಲಿನ ಮಮತೆ, ಮೋಹ ಮತ್ತು ಅದರೊಟ್ಟಿಗೆ ಬರುವ ಸಾವಿರ ಸಾವಿರ ತಲೆನೋವುಗಳು, ಹೀಗೆ ಮಾನವರ ನೂರಾರು ತಕರಾರುಗಳೇ ಪೂರಕವಾಗಿ ಮತ್ತು ಅದರ ಬೆಂಬಲದಿಂದಲೇ ಈ ಜಗದ್ವ್ಯಾಪಾರ ನಡೆಯುತ್ತಿದೆ ಎಂದು ಪ್ರಸ್ತಾಪಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಬಹುಶಃ ಇವೆಲ್ಲ ಇಲ್ಲದಿದ್ದಿದ್ದರೆ ಬದುಕು ನೀರಸವಾಗಿ ಶೂನ್ಯವಾಗಿರುತ್ತಿತ್ತೋ ಏನೋ!!! ಪ್ರಶಾಂತವಾಗಿ ಬದುಕಬೇಕೆನ್ನುವ ಆಸೆ, ಆ ಆಸೆ ಪೂರೈಸುಲೋಸಗ, ಕೆಲಸ, ಕೆಲಸದಿಂದ ವರಮಾನ, ವರಮಾನ ಅವಶ್ಯಕತೆಗಿಂತ ಅಧಿಕವಾದಾಗ, ತೋರಿಕೆ, ಡಾಂಬಿಕತೆ ಸಹಜವಾಗೇ ಇರುತ್ತದೆ. ಇವೆಲ್ಲದರ ನಡುವೆ ಮನೆ ಮಡದಿ ಮಕ್ಕಳು





ಎಂಬ ನಂಟುಗಳು. ಅವರ ಅವಶ್ಯಕತೆಗಳ ಪೂರೈಸಲು ಪರದಾಟ ಹೀಗೆ ಹತ್ತ ಹಲವಾರು ಕಿರಿಕಿರಿಗಳು ತುಂಬಿದ ಜೀವನ, ಪ್ರೀತಿ, ಪ್ರೇಮ, ದ್ವೇಷ, ಅಸೂಯೆ ಬೇಸರ ಜಿಗುಪ್ಸೆ, ನೋವು ಆನಂದ ಮುಂತಾದ ಮನುಜ ಸಹಜವಾದ ಭಾವಗಳಿಂದ ಈ ಜೀವನದ ಪಯಣ. ಇವೆಲ್ಲ ಇದ್ದರೆ ಜಗತ್ತು. ಇಲ್ಲದಿದ್ದರೆ ಬದುಕು ನೀರಸ, ಬಾಳಿನಲ್ಲಿ ಸ್ವಾರಸ್ಯ ಶೂನ್ಯತೆ.

ಇದನ್ನೇ ಮಾನ್ಯ ಗುಂಡಪ್ಪನವರು 'ಬಾಳಿನಲಿ ನೂರು ತಕರಾರುಗಳು ಬೆಂಬಲವವೆಲೋ ಜಗಕೆ' ಎಂದು, ಇವೆಲ್ಲ ಬೆಂಬಲ ಕೊಡುತ್ತಿದ್ದರೆ ಜಗತ್ತು, ಇಲ್ಲದಿದ್ದರೆ ಇಲ್ಲ ಎಂದಿದ್ದಾರೆ. ವಾಚಕರೆ, ಮೇಲೆ ಹೇಳಿದ ಭಾವಗಳನ್ನೆಲ್ಲ ನಮ್ಮೊಳಗೇ ಇಟ್ಟಿರುವವನೇ ಆ 'ಪರಮಾತ್ಮ', ತನಗೆ ಹೇಗೆ ಬೇಕೋ ಹಾಗೆ ಈ ಜಗತ್ತನ್ನು ಸೃಷ್ಟಿಸಿಕೊಂಡು (ಸಕಲ ಚರಾಚರಗಳನ್ನೂ,) ನಮ್ಮೊಳಗೆ ಆಸೆ ಮುಂತಾದ ಭಾವಗಳ ಬೀಜವ ಬಿತ್ತಿ, ಮೊಳಕೆಯೊಡೆಸಿ, ಚಿಗುರಿಸಿ, ಗಿಡವಾಗಿಸಿ, ಮರವಾಗಿಸಿ, ಹೆಮ್ಮರವಾಗಿಸಿ, ಇದೆಲ್ಲ ನಮ್ಮದೇ ಭಾವಗಳು ಎಂಬಂತೆ ಕುಣಿಯುವಂತೆ ಮಾಡಿ, ತಾನು ಈ ಜಗತ್ತಿನ

ಲೀಲಾವಿನೋದದ ಕರಣ, ಕರ್ತ ಮತ್ತು ಕಾರಣನಾಗಿ ತಾನೇ ಇದನ್ನು ಅನುಭವಿಸುತ್ತಿದ್ದಾನೆ ಎನ್ನುವುದು ನಮ್ಮ ನಂಬಿಕೆ. ಒಂದು ನಾಟಕವನ್ನು ಬರೆದು, ಪಾತ್ರಗಳ ಸೃಷ್ಟಿಸಿ, ಅವುಗಳಿಗೆ ಸಂಭಾಷಣೆಯನ್ನು ಹೇಳಿಕೊಟ್ಟು, ನಾಟಕವನ್ನು ನಿರ್ದೇಶಿಸಿ, ಆ ನಾಟಕ ನಡೆಯುವಾಗ ತನ್ನ ಕೃತಿಯನ್ನು ತಾನೇ ನೋಡಿ ಸಂತೋಷಪಡುವ ಒಬ್ಬ ನಿರ್ದೇಶಕನಂತೆ, ಆ ಪರಮಾತ್ಮನೂ ಸಹ ಅಲ್ಲವೇ?.

ಇರಲಿ ಇವೆಲ್ಲ ಬೆಂಬಲವಾಗಿ ಇದ್ದರೆ ಈ ಜಗತ್ತು ಎಂದು ಈ ಮುಕ್ತಕದ ಆಂತರ್ಯ, ನಮ್ಮ ಪಾತ್ರವನ್ನು ಸೂಕ್ತವಾಗಿ ನಿರ್ವಹಿಸಿದರೆ ನಮ್ಮನ್ನು ಸೃಷ್ಟಿಸಿದ ಈ ಜಗನ್ನಾಟಕದ ನಿರ್ದೇಶಕ ಮತ್ತು ಸೂತ್ರದಾರಿಯಾದ ಪರಮಾತ್ಮನಿಗೂ ಸಂತೋಷ. ಆದರೆ ಇಂದು ನಮ್ಮ ವಿಪರೀತ ಬುದ್ಧಿಯಿಂದ ಆ ಪರಮಾತ್ಮನೂ ಸೊರಗುವಂತಾಗಿದೆ ಎನ್ನುವುದೇ ದುರಂತ. ಬನ್ನಿ ಸಹಜತೆಯಿಂದ ಇದ್ದುಬಿಡುವ ಆಗ ನಿರಾಳವಾಗಿರಬಹುದು.

**ಮುಕ್ತಕ-316**

**ತಿರುತಿರುಗಿ ತಿರುಗುತ್ತೆ ಬುಗುರಿ ತಾನೇ ಸೋತು।**
**ತಿರೆಗುರುಳುವುದು ತನ್ನ ಬಲವ ತಾಂ ಕಳೆದು॥**
**ನರಮುನಂತೆಯೇ ಸುತ್ತಿ ಕಡೆಗೊಂದು ದಿನ।**
**ತೆರುವನಸ್ಥಿಯ ಧರೆಗೆ – ಮಂಕುತಿಮ್ಮ॥**

ತಿರೆಗುರುಳುವುದು=ತಿರೆಗೆ+ಉರುಳುವುದು, ನರಮುನಂತೆಯೆ=ನರಮುನುಂ+ಅಂತೆಯೆ,
ಕಡೆಗೊಂದು=ಕಡೆಗೆ+ಒಂದು, ತೆರುವನಸ್ಥಿಯ=ತೆರುವನು+ಅಸ್ಥಿಯ.

ತಿರೆಗುರುಳುವುದು=ನೆಲಕ್ಕೆ ಬೀಳುವುದು, ನರಮುನಂತೆಯೆ=ಮನುಷ್ಯನೂ ಅಂತೆಯೇ,
ಧರೆಗೆತೆರುವನಸ್ಥಿಯ=ತನ್ನ ಮೂಳೆಗಳ ಭೂಮಿಗೆ ಕೊಡುವ

ಒಂದು ಬುಗುರಿಗೆ ಚಾಟಿಯನ್ನು ಸುತ್ತಿ ಜೋರಾಗಿ ತಿರುಗಿಸಿದಾಗ, ಅದು ನಾವು ಕೊಟ್ಟ ಬಲ ಕಡಿಮೆಯಾಗುವತನಕ ಸುತ್ತುತ್ತದೆ. ತಿರುಗುತ್ತಾ ತಿರುಗುತ್ತಾ ಬಲ ಕಡಿಮೆಯಾಗಿ, ತಿರುಗುವ ವೇಗವನ್ನು ಕಡಿಮೆಯಾಗುತ್ತಾ ನಿಧಾನವಾಗಿ ಸುತ್ತುತ್ತಾ ಕೆಳಗೆ ಬೀಳುತ್ತದೆ. ಹಾಗೆಯೇ ಮನುಷ್ಯನೂ ಸಹ ಶಕ್ತಿಯಿರುವವರೆಗೂ ಸುತ್ತಿ ಸುತ್ತಿ ಏನನ್ನೋ ಸಾಧಿಸಬೇಕೆಂದು ಓಡಿ ಓಡಿ ಶಕ್ತಿಯೆಲ್ಲ ಕುಂದಿ ಧರೆಗೆ ಬಿದ್ದು, ಸಾವನ್ನಪ್ಪಿ ತನ್ನ ದೇಹವನ್ನು ಈ ಧರೆಗೇ ಒಪ್ಪಿಸುತ್ತಾನೆ ಎನ್ನುತ್ತಾರೆ ಮಾನ್ಯ ಗುಂಡಪ್ಪನವರು.

ನಮ್ಮ ಕೈಯಲ್ಲಿ ಒಂದು ಬುಗುರಿ ಮತ್ತು ಚಾಟಿ ಇದೆ. ಚಾಟಿ ಸುತ್ತಿ, ಬುಗುರಿಯನ್ನು ಬಲವಾಗಿ ಬೀಸಿ ಬಿಡುಗಡೆ ಮಾಡಿದರೆ, ನಾವು ಎಷ್ಟು ಶಕ್ತಿಯನ್ನು ಅದಕ್ಕೆ ಕೊಟ್ಟು ಬೀಸಿರುತ್ತೇವೆಯೋ ಅಷ್ಟು ಶಕ್ತಿ ಅದರ ತಿರುಗಣೆಯಲ್ಲಿ ಉಪಯೋಗವಾಗುವತನಕ ಆ ಬುಗುರಿ ತಿರುಗುತ್ತದೆ. ನಂತರ ಕೆಳಗೆ ಬೀಳುತ್ತದೆ. ಹಾಗೆಯೇ ತಾಯ ಗರ್ಭದಲ್ಲೇ ನಮಗೆ, ತನ್ನ ಶಕ್ತಿಯ ಒಂದಂಶವನ್ನು ತುಂಬಿ ಈ ಧರೆಗೆ ತಳ್ಳಿಬಿಡುತ್ತದೆ, ಆ ಪರಮ ಶಕ್ತಿ, ಆ ಶಕ್ತಿಯು ಇಡೀ ಜೀವನದಲ್ಲಿ ನಾವು ನಡೆಸುವ ಎಲ್ಲಾ ಕೆಲಸ ಕಾರ್ಯಗಳಿಗೂ ಒತ್ತಾಸೆ ನೀಡುತ್ತದೆ. ಆ ಶಕ್ತಿ ಇರುವ ತನಕ ನಮ್ಮ ಓಡಾಟ ನಿರಂತರ. ಶಕ್ತಿ ಕುಂದಿದರೆ ಧರೆಯೇ ಗತಿ.

ಪ್ರತೀ ಮನುಷ್ಯನೂ ಸಹ ಹುಟ್ಟಿದಾರಭ್ಯ ಏನಾದರೊಂದು ಮಾಡುತ್ತಲೇ ಇರುತ್ತಾನೆ. ಈ ಮುಕ್ತಕದ ಭಾಷೆಯಲ್ಲಿ ಹೇಳಬೇಕಾದರೆ ತಿರುಗುತ್ತಲೇ ಇರುತ್ತಾನೆ. ಆ ಪರಮಾತ್ಮ ಕೊಟ್ಟ ಶಕ್ತಿ ನಮ್ಮಲ್ಲಿರುವ ತನಕ ನಮ್ಮ ಓಡಾಟ ಪರದಾಟಗಳೆಲ್ಲಾ. ಆ ಶಕ್ತಿ ಕಡಿಮೆಯಾದರೆ ನಮ್ಮ ತಿರುಗಾಟದ ತೀವ್ರತೆಯೂ ಕಡಿಮೆಯಾಗುತ್ತದೆ ಮತ್ತು ಯಾವತ್ತು ಆ ಶಕ್ತಿ ನಮ್ಮಲ್ಲಿಂದ ಹೊರಟು ಹೋಗುತ್ತದೋ, ಆಗ ಗುಂಡಪ್ಪನವರು ಈ ಮುಕ್ತಕದಲ್ಲಿ ಹೇಳುವಂತೆ 'ತೆರುವನಸ್ಥಿಯ ಧರೆಗೆ', ಎಂದರೆ ನಮ್ಮ ದೇಹವನ್ನು ಈ ಧರೆಯಲ್ಲಿ ಲೀನವಾಗಿಸಬೇಕು. ಅಂದರೆ ನಾವು ಆ ಶಕ್ತಿಯ ಅಧೀನ ಅಲ್ಲವೇ? ಅದನ್ನು ಮುಕ್ತ ಮನಸ್ಸಿನಿಂದ ಒಪ್ಪಿಕೊಂಡು ನಮ್ಮನ್ನು ಜೀವಂತವಾಗಿಟ್ಟಿರುವ ಆ ಶಕ್ತಿಗೆ ನಮಿಸ ಬೇಕು, ಕೃತಜ್ಞತೆ ಅರ್ಪಿಸಬೇಕು.

ಆದರೆ ನಾವು ಮಾಡುವುದೇನು? ಆತ್ಮರೂಪದಲ್ಲಿ ಆ ಶಕ್ತಿಯು ನಮ್ಮಲ್ಲಿ ಇರುವುದನ್ನು ಮರೆಮಾಚಿ, ನಮ್ಮ ದೇಹ, ಮನಸ್ಸು ಮತ್ತು ಬುದ್ಧಿಗಳ ಇಂದ್ರಿಯಗಳ ವಾಸನೆಗಳ ಸಂಸರ್ಗದಲ್ಲಿ ಅಹಂಕಾರವನ್ನು ಬೆಳೆಸಿಕೊಂಡು, ನಾವು ಈ ಜಗತ್ತಿನಲ್ಲಿ ಶಾಶ್ವತವಾಗಿ ಇದ್ದುಬಿಡುತ್ತೇವೆ ಎನ್ನುವ ಭಾವದಿಂದ ಇದ್ದೇವೆ. ಇದೇ ದುರಂತ. ನಮ್ಮ ಜೀವನದ

ಪ್ರಯಾಣದಲ್ಲಿ ಆತ್ಮ ಪಯಣಿಗ, ಮಿಕ್ಕೆಲ್ಲವೂ ಪ್ರಯಾಣದ ಉಪಕರಣಗಳು ಅಥವಾ ವಾಹನಗಳು, ಉಪಕರಣ ಹಾಳಾದರೆ ಅಥವಾ ಪ್ರಯಾಣದ ಗಾಡಿ ಕೆಟ್ಟರೆ ಮತ್ತೊಂದು ಗಾಡಿ ಹತ್ತುತ್ತದೆ ಈ ಆತ್ಮ ಹಾಗಾಗಿ ನಮ್ಮ ಎಲ್ಲ ತಿರುಗಾಟಗಳೂ ಅದಕ್ಕೆ ಪೂರಕವಾದ ಶಕ್ತಿಯನ್ನು ಅರಿತುಕೊಳ್ಳಲು ಪ್ರಯಾಣವನ್ನು
ಸುಗಮವಾಗಿಸಲು ಪೂರಕವಾಗಿರಬೇಕು.





**ಮುಕ್ತಕ-317**

**ಪುಣ್ಯಪಾಪದ ಮಿಶ್ರ ನರಜಂತುವವನ ನೆಲೆ।**
**ಮಣ್ಣು ಕರುಳುಗಳೆ ಸಕವವನ ಮೈದೊಡವು ॥**
**ಬಣ್ಣ ಬಣ್ಣದ ವಸ್ತ್ರ ಬಿಳ್ಪೊಡನೆ ಕಪ್ಪಿಹುದು।**
**ಕಣ್ಣ ದುರುಗುಟಿಸದಿರು – ಮಂಕುತಿಮ್ಮ ॥**

ನರಜಂತುವವನ=ನರಜಂತುವು+ಅವನ, ಕರುಳುಗಳೆಸಕವವನ=ಕರುಳುಗಳೆ+ಎಸಕ+ಅವನ, ಮೈತೊಡವು=ಮೈ+ತೊಡವು, ಬಿದ್ದೊಡನೆ=ಬಿಳುಪು+ಒಡನೆ, ಕಪ್ಪಿಹುದು=ಕಪ್ಪು+ಇಹುದು.

ನೆಲೆ=ಸ್ಥಿತಿ, ಎಸಕ-ಸಂತೋಷ, ಮೈತೊಡವು=ಮೈಮೇಲೆ ತೊಡುವ ವಸ್ತ್ರ, ದುರುಗುಟಿಸದಿರು=ದುರುಗುಟ್ಟಿಕೊಂಡು ನೋಡದಿರು, ಕೋಪದಿಂದ ವಿಮರ್ಶೆಮಾಡದಿರು.

ಪುಣ್ಯ ಮತ್ತು ಪಾಪಗಳ ಮಿಶ್ರಣದಿಂದಾದವನೇ ಮಾನವ. ಈ ಜಗತ್ತಿನ ವಸ್ತುಗಳು ಮತ್ತು ಅದರೊಂದಿಗೆ ಅವನ ಸಂಬಂಧಗಳಲ್ಲೇ ಸಂತೋಷಪಡುವುದು ಅವನ ಸ್ವಭಾವ. ಹೇಗೆ ಅವನು ಹಾಕಿಕೊಳ್ಳುವ ಬಣ್ಣಬಣ್ಣದ ವಸ್ತ್ರಗಳಲ್ಲಿ ಬಿಳುಪು ಮತ್ತು ಕಪ್ಪು ಬಣ್ಣ ಎರಡೂ ಕೂಡಿ ಇದೆಯೋ, ಹಾಗೆಯೇ ಅವನ ಸ್ವಭಾವದಲ್ಲೂ ಗುಣ ಮತ್ತು ದೋಷಗಳೆರಡೂ

ಇವೆ. ಅದನ್ನು ನೀನು ಕೋಪದಿಂದ ವಿಮರ್ಶೆ ಮಾಡಬೇಡ ಎಂದು ಒಂದು ಆದೇಶವನ್ನು ನೀಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

"ಸದೋಷಂ ನಿರ್ಗುಣಂ ವಸ್ತು ನಿರ್ದೋಷಂ ಸಗುಣಂ ತಥಾ ನೈವ ನೈವಾತ್ರ ಲಭ್ಯೇತ್ ಸರ್ವಂ ಹಿ ಗುಣದೋಷ ಭಾಕ್" ಎಂದು ಭಾಗವತ ಪುರಾಣ ಹೇಳುತ್ತದೆ. ಸಂಪೂರ್ಣ ದೋಷಪೂರಿತವಾಗಿ, ಗುಣವೇ ಇಲ್ಲದ ವಸ್ತುವಾಗಲೀ ಅಥವಾ ಸಂಪೂರ್ಣ ಗುಣವಿದ್ದು, ದೋಷವೇ ಇಲ್ಲದ ವಸ್ತುವಾಗಲೀ ಸಿಗುವುದೇ ಇಲ್ಲ ಎಂದು ಇದರ ಅರ್ಥ. ಅಂದರೆ ಜಗತ್ತಿನ ಎಲ್ಲವೂ ಗುಣ ಮತ್ತು ದೋಷಗಳಿಂದ ಕೂಡಿದೆ ಎಂದೂ ಹೇಳಬಹುದು. ಹಾಗೆಯೇ ಮನುಷ್ಯನೂ ಸಹ. ಇವನಲ್ಲಿ ಗುಣ ಮತ್ತು ದೋಷಗಳೆರಡೂ ಇವೆ. ಆದರೆ ಈ ಗುಣ ಮತ್ತು ದೋಷಗಳು ಪ್ರಮಾಣ ವ್ಯತ್ಯಾಸವಿದ್ದರೂ ಇದ್ದೇ ಇರುತ್ತವೆ.

ಇಂತಹ ಗುಣ ಮತ್ತು ದೋಷಗಳ ಮಿಶ್ರಣವನ್ನು ಹೊಂದಿರುವ ಮಾನವ, ತಾನು ಇರುವ ಈ ಜಗತ್ತನ್ನು ಮತ್ತು ಆತನನ್ನು ಈ ಜಗತ್ತಿನೊಂದಿಗೆ ಬಂಧಿಸಿರುವ, ತಂದೆ ತಾಯಿ, ಮಡದಿ ಮಕ್ಕಳೊಂದಿಗಿನ ಬಂಧನವೇ ಇವನಿಗೆ ಸಂತಸವನ್ನು ನೀಡುತ್ತದೆ. ಈ ಸಂಬಂಧಗಳಲ್ಲೇ ಇವನ ಗುಣ ಮತ್ತು ದೋಷಗಳ ಪ್ರದರ್ಶನ ನಿರಂತರವಾಗೇ ಇರುತ್ತದೆ. ಇವನು ಧರಿಸುವ ಬಣ್ಣ ಬಣ್ಣದ ವಸ್ತ್ರಗಳಲ್ಲಿ ಹೇಗೆ ಅನ್ಯ ಬಣ್ಣಗಳ ಜೊತೆಗೆ ಬಿಳುಪು ಮತ್ತು ಕಪ್ಪು ಹೇಗೆ ಸೇರಿದೆಯೋ ಹಾಗೆಯೇ ಇವನ ಸ್ವಭಾವ ಮತ್ತು ನಡವಳಿಕೆಯಲ್ಲೂ ಗುಣಗಳು ಮತ್ತು ದೋಷಗಳೂ ತುಂಬಿರುತ್ತವೆ. ಇದು ಬಹಳ ಸಹಜವಾದದ್ದು ಎನ್ನುತ್ತಾರೆ ನಮ್ಮ ಗುಂಡಪ್ಪನವರು.

ಆದ್ದರಿಂದ ಬಹಳ ಸಹಜವಾದ ಈ ಗುಣ ಮತ್ತು ದೋಷಗಳ ಮಿಶ್ರಣವಾದ ಮನುಷ್ಯನನ್ನು ಅವನ ಗುಣ ಮತ್ತು ದೋಷಗಳ ಕುರಿತು ವಿಮರ್ಶೆ ಮಾಡಬಾರದು. ಅವನ ಗುಣಾವಗುಣಗಳನ್ನು ಸಹಜವಾಗೇ ತೆಗೆದುಕೊಂಡು

ಅವನ ಬಗ್ಗೆ ಕೋಪಗೊಳ್ಳಬಾರದು ಎಂದು ಒಂದು ಆದೇಶವನ್ನು ನೀಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ. ಹೀಗೆ ಜಗತ್ತಿನಲ್ಲಿರುವ ವಸ್ತುಗಳಲ್ಲಿನ ಗುಣ ಮತ್ತು ಅವಗುಣಗಳನ್ನು ಸಹಜವಾಗಿ ಒಪ್ಪಿಕೊಳ್ಳುವ ಮತ್ತು ಅವನ್ನು ವಿಮರ್ಶೆ ಮಾಡದಿರುವ ಸ್ವಭಾವನನ್ನು ನಾವು ಬೆಳೆಸಿಕೊಂಡರೆ ಉತ್ತಮ. ಇಲ್ಲದಿದ್ದರೆ ಯಾವುದು ಸಹಜವೋ ಅದರ ಬಗ್ಗೆ ಕೋಪಗೊಂಡು ನಮ್ಮ ಮನಸ್ಸನ್ನು ಕೆಡಿಸಿಕೊಳ್ಳುವುದನ್ನು ಬಿಟ್ಟು, ನಾವೇನೂ ಸಾಧಿಸಲಾಗುವುದಿಲ್ಲ. ವಾಚಕರೆ ಅಂತಹ ಸ್ವಭಾವನ್ನು ಬೆಳೆಸಿಕೊಳ್ಳುವ ಪ್ರಯತ್ನವನ್ನು ನಾವೂ ಮಾಡೋಣವೆ?

**ಮುಕ್ತಕ-318**

**ಹಾಸ್ಯಗಾರನೊ ಬೊಮ್ಮ; ವಿಕಟ ಪರಿಹಾಸವದು |**
**ಆಸ್ಯ ಗಂಭೀರ; ಬೆರಲಿಂದ ಚಕಳಗುಳಿ ||**
**ವಿಶ್ವಾಸದುಪಚಾರ; ಹುಣಿಸೆಮೆಣಸಾಹಾರ |**
**ವಿಶ್ವಪಾಲನೆಯಿಂತು - ಮಂಕುತಿಮ್ಮ ||**

ಪರಿಹಾಸವದು=ಪರಿಹಾಸವು+ಅದು, ವಿಶ್ವಾಸದುಪಚಾರ=ವಿಶ್ವಾಸದ+ಉಪಚಾರ,
ಮೆಣಸಾಹಾರ=ಮೆಣಸ+ಆಹಾರ, ವಿಶ್ವಪಾಲನೆಯಿಂತು-ವಿಶ್ವ+ಪಾಲನೆಯು+ಇಂತು.

ವಿಕಟ-ಮನೋವಿಕಾರದ ಹಾಸ್ಯ, ಆಸ್ಯ=ಮುಖ, ವದನ.

ನಮ್ಮನ್ನು ಸೃಷ್ಟಿಸಿದ ಆ ಬ್ರಹ್ಮ ವಿಕಟತೆಯಿಂದ ಕೂಡಿದ ಹಾಸ್ಯಗಾರನೋ? ಅವನ ಮುಖ ಮಾತ್ರ ಗಂಭೀರವಾಗಿದ್ದರೂ, ಬೆರಳಿಂದ ಕಚಗುಳಿ ಇಡುತ್ತಾ ನಮ್ಮನ್ನು ನಗಿಸಲು ಪ್ರಯತ್ನಿಸುವ ಅಥವಾ ಬಹಳ ವಿಶ್ವಾಸದಿಂದ ನಮಗೆ ಉಪಚಾರ ಮಾಡುತ್ತಾ ಭೋಜನವ ಬಡಿಸಿ ಊಟದಲ್ಲಿ ಹುಣಸೆಯ ಹುಳಿಯನ್ನೂ, ಮೆಣಸಿನ ಖಾರವನ್ನೂ ಇಟ್ಟಂತೆ, ನಮಗೆ ಜೀವನದಲ್ಲಿ ಗುಣ-ಅವಗುಣ, ಸಂತೋಷ-ದುಃಖ, ಹೀಗೆ ಒಂದಕ್ಕೊಂದು ವಿರೋಧವಾದದ್ದನ್ನು ಇಟ್ಟು, ನಮ್ಮ ಪರಿಸ್ಥಿತಿ ನೋಡಿ ತಾನು ಆನಂದವನ್ನು ಅನುಭವಿಸುತ್ತಿದ್ದಾನೋ ಆ ಬ್ರಹ್ಮ ಎಂದು ಪ್ರಸ್ತಾಪಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಆ ಪರಮಾತ್ಮ ನಮಗೆ ಜೀವನದಲ್ಲಿ ಸಂತೋಷಪಡಲು ಮತ್ತು ದುಃಖಪಡಲು ಕಾರಣಗಳನ್ನು ಕೊಟ್ಟಿದ್ದಾನೆ. ಅವನೇನೋ ಜಗದ್ರಕ್ಷಕನ ರೂಪದಲ್ಲಿ ಬಲು ಗಂಭೀರ. ಆದರೆ ಅವನು ಸೃಷ್ಟಿಸಿದ ಈ ಜಗತ್ತಿನಲ್ಲಿ ಕೇವಲ ಗಂಭೀರವೇ ಇಲ್ಲ, ಇಲ್ಲಿ ಹಾಸ್ಯ, ನಲಿವು, ಪ್ರೇಮ, ಪ್ರೀತಿ, ದ್ವೇಷ, ಅಸೂಯೆ, ಕೋಪ, ಸಹಜತೆ, ನಟನೆ ಹೀಗೆ ಒಂದಕ್ಕೊಂದು ಪೂರಕವಾದ ಮತ್ತು ಒಂದಕ್ಕೊಂದು ಮಾರಕವಾದ ಭಾವನೆಗಳನ್ನು ನಮ್ಮಲ್ಲಿ ತುಂಬಿದ್ದಾನೆ. ಅಥವಾ ನಾವು ಇಂತಹ ಭಾವನೆಗಳನ್ನು ತುಂಬಿಕೊಂಡಿದ್ದೇವೆ. ಆದರೆ ನಮ್ಮ ಯಾವ ಭಾವವೂ ಶಾಶ್ವತವಲ್ಲ. ಈ ಜಗತ್ತು ಇರುವುದೇ ಹೀಗೆ, ತನ್ನ ಆನಂದಕ್ಕಾಗಿ ಸೃಷ್ಟಿಸಿಕೊಂಡ ಈ ಜಗತ್ತಿನಲ್ಲಿ ತನಗೆ ಬೇಕಾದ ಎಲ್ಲವನ್ನೂ ಇಟ್ಟು ನಮಗೆ ಅದರೊಳಗೆ ಆಸಕ್ತಿಯನ್ನು ಹುಟ್ಟಿಸಿ, ಒಂದು ಕಡೆ ಸುಖವನ್ನೂ ಮತ್ತೊಂದು ಕಡೆ ದುಃಖವನ್ನೂ ಅನುಭವಿಸುವಂತೆ ಮಾಡುತ್ತಾನೆ. ನಮ್ಮ ಮೂಲಕ ಆ ಪರಬ್ರಹ್ಮನೇ ಇದನ್ನೆಲ್ಲಾ ಅನುಭವಿಸುತ್ತಾ ಆನಂದಿಸುತ್ತಿದ್ದಾನೆ ಎನ್ನುವುದು ನಮ್ಮ ಸನಾತನ ನಂಬಿಕೆ.

(145)

| ಪೂರ್ಣ ದರ್ಶನ 319-323 | ಕಗ್ಗ ರಸಧಾರೆ-2 |
|---|---|

ಆದರೆ ಒಂದು ವಿಷಯ. ಆ ಪರಮಾತ್ಮನೇ ಎಲ್ಲವನ್ನೂ ತನ್ನಿಂದಲೇ ಜಗತ್ತನ್ನು ರಚಿಸಿ, ಆ ಜಗತ್ತಿಗೆ ಜಡ ಮತ್ತು ಚೇತನದ ರೂಪವೂ ಅವನೇ ಆಗಿ, ಅವನೇ ಇವುಗಳನ್ನೆಲ್ಲ ತಾನೇ ಅನುಭವಿಸಿ ಆನಂದಪಡುತ್ತಿದ್ದಾನೆ ಎಂದ ಮೇಲೆ ಇಲ್ಲಿ ನಾವು ಅನುಭವಿಸುವುದೆಂತು ಮತ್ತು ನಾವು ಅನುಭವಿಸುವುದೇನು? ಎಂಬ ಒಂದು ತಾತ್ವಿಕವಾದ ಪ್ರಶ್ನೆ ಬರುತ್ತದೆ.

'ನಾನು' ಎಂದು ನಮ್ಮನ್ನು ಈ ಇಂದ್ರಿಯ ಪ್ರಚೋದಕವಾದ ಮತ್ತು ಪ್ರೇರಿತವಾದ ಜಗತ್ತಿನೊಂದಿಗೆ ಗುರುತಿಸಿಕೊಳ್ಳುವ ತನಕ ನಾವು ಈ ಎಲ್ಲ ಭಾವಗಳನ್ನೂ ಅನುಭವಿಸುತ್ತಿರುತ್ತೇವೆ ಮತ್ತು ಪರರಿಗೆ ಆ ಅನುಭವಗಳನ್ನು ಕೊಡುತ್ತಿರುತ್ತೇವೆ. ಆದರೆ ಆ 'ನಾನು' ಎಂಬುದು ಹೋಗಿ ಎಲ್ಲವೂ ಆ ಪರಮಾತ್ಮನೇ ಎನ್ನುವ ಭಾವ ಸ್ಥಿರವಾಗಿ

ನಮ್ಮೊಳಗೆ ಬೇರೂರಿದರೆ, ಎಲ್ಲವನ್ನೂ ಆ ಪರಮಾತ್ಮನೇ ಅನುಭವಿಸುತ್ತಿದ್ದಾನೆ, ನಾನು ಕೇವಲ ನಿಮಿತ್ತ ಎನ್ನುವುದು ಅರಿವಾಗುತ್ತದೆ.

"ಈಶಾವಾಸ್ಯಮಿದಂ ಸರ್ವಂ ಯಕ್ಕಿಂಚ ಜಗತ್ಯಾಂ ಜಗತ್" ಎನ್ನುವುದು ಈಶಾವಾಸ್ಯೋಪನಿಷತ್ತಿನ ಉಕ್ತಿ. ಹಾಗೆ ಎಲ್ಲವೂ ಅವನು ಎಂದಾಗ ಯಾರನ್ನೂ ದ್ವೇಷಿಸುವ ಅಥವಾ ಟೀಕಿಸುವ ಮತ್ತು ಎಲ್ಲವೂ ಅವನಿಗೆ ಸೇರಿದ್ದು ಎಂದು ಒಪ್ಪಿಕೊಂಡಾಗ ಪರರ ವಸ್ತುವಿಗೆ ಆಸೆಪಡುವ, ಪ್ರಮೇಯವೂ ಬರುವುದಿಲ್ಲ. ಆಗ ಎಲ್ಲರನ್ನೂ ಸಮಭಾವದಿಂದ ಮತ್ತು ಎಲ್ಲವನ್ನೂ ಸಮನ್ವಯದಿಂದ ನೋಡುವ ಪ್ರವೃತ್ತಿ ನಮ್ಮಲ್ಲಿ ಬೆಳೆಯುತ್ತದೆ. ನಮ್ಮ ಎಲ್ಲ ಓದು, ವಿದ್ಯಾಭ್ಯಾಸ, ಸಂಸ್ಕಾರ, ಸಾಧನೆಗಳೆಲ್ಲಾ ಅಂತ ಭಾವವನ್ನು ಸಂಪೂರ್ಣವಾಗಿ ನಮ್ಮದಾಗಿಸಿ ಕೊಳ್ಳುವುದಕ್ಕೆ ಪೂರಕವಾಗಿದ್ದರೆ ಒಳಿತು.

# ಪೂರ್ಣ ದರ್ಶನ 319-323

**ಮುಕ್ತಕ-319**

**ಪಂಚಭೂತಗಳಂತೆ; ಪಂಚೇಂದ್ರಿಯಗಳಂತೆ ।**
**ಪಂಚವೇಕೆ? ಚತುಷ್ಕ ಷಟ್ಕವೇಕಲ್ಲ? ॥**
**ಹೊಂಚುತಿಹನಂತೆ ವಿಭು; ಸಂಚವನದೇನಿಹುದೋ ।**
**ವಂಚಿತರು ನಾವೆಲ್ಲ – ಮಂಕುತಿಮ್ಮ ॥**

ಷಟ್ಕವೇಕಲ್ಲ=ಷಟ್ಕವು+ಏಕಲ್ಲ, ಹೊಂಚುತಿಹನಂತೆ=ಹೊಂಚುತಿಹನು+ಅಂತೆ,
ಸಂಚವನದೇನಿಹುದೋ ಸಂಚು+ಅವನದು+ಏನು+ಇಹುದೋ.
ಚತುಷ್ಕ=ನಾಲ್ಕು, ಷಟ್ಕ=ಆರು, ವಿಭು=ಪರಮಾತ್ಮ.

ಈ ಜಗತ್ತನ್ನು ನಡೆಸುವುದು ಪಂಚಭೂತಗಳಂತೆ ಮತ್ತು ನಮಗೆ ಪಂಚೇಂದ್ರಿಯಗಳಿವೆಯಂತೆ. ಐದೇ ಏಕೆ, ನಾಲ್ಕು ಅಥವಾ ಆರು ಏಕಿರಬಾರದು?, ಪರಮಾತ್ಮ ಈ ಜಗತ್ತನ್ನು ಯಾರಿಗೂ ಅರ್ಥವಾಗದ ರೀತಿಯಲ್ಲಿ ಸೃಜಿಸಿದ್ದಾನೆ, ಇದರಲ್ಲಿ ಅವನ ಸಂಚು ಏನಿರಬಹುದು. ಇದೆಲ್ಲ ಅರಿಯದಂತೆ ಈ ಜಗತ್ತನ್ನಿಟ್ಟು ನಮ್ಮನ್ನೆಲ್ಲ

ವಂಚಿಸಿದ್ದಾನೋ ಆ ಪರಮಾತ್ಮ ಎಂದು, ಇನ್ನೂ ಸಂದೇಹವಾಗಿಯೇ ಉಳಿದಿರುವ ವಿಷಯವನ್ನು ಪ್ರಸ್ತಾಪಮಾಡುತ್ತಾರೆ ಮಾನ್ಯ ಗುಂಡಪ್ಪನವರು, ಈ ಮುಕ್ತಕದಲ್ಲಿ.

ಭೂಮಿಯ ಅಸ್ತಿತ್ವಕ್ಕೆ ಆ ಪರಮಾತ್ಮ ಸೃಷ್ಟಿಸಿದ ಪಂಚಭೂತಗಳು ಕಾರಣವೆಂದು ನಮಗೆ ಸ್ಥೂಲವಾಗಿ ಗೊತ್ತು. "ಆಕಾಶಾತ್ ವಾಯುಃ ವಾಯೋರಗ್ನಿ ಅಗ್ನಿರಾಪಃ ಅದ್ಭ್ಯಃ ಪೃಥಿವೀ ಪ್ರತಿವ್ಯಾ ಓಷದಯಃ ಓಷಧೀಭ್ಯೋನ್ನಂ ಅನ್ನಾತ್ ಪುರುಷಃ" ಎಂದು ಪಂಚಭೂತಗಳಾದ ಆಕಾಶ, ವಾಯು, ಅಗ್ನಿ, ನೀರು ಮತ್ತು ಈ ಭೂಮಿಗಳ ಪ್ರಭಾವ ಜಗತ್ತಿನ ಸಕಲ ಚರಾಚರಗಳ ಅಸ್ತಿತ್ವದ ಮೇಲೆ ಎಷ್ಟಿದೆ ಎಂದು ವಿವರಿಸುತ್ತದೆ.

ಹಾಗೆಯೇ ಜಗತ್ತಿನೊಂದಿಗೆ ಸಂಪರ್ಕವನ್ನು ಸಾಧಿಸಲು ನಮಗೆ ಕಿವಿ, ಚರ್ಮ, ಕಣ್ಣು, ನಾಲಗೆ ಮತ್ತು ಮೂಗು ಎಂಬ ಪಂಚ ಇಂದ್ರಿಯಗಳು ಇವೆ. ಇವುಗಳು ನಮಗೆ ಶಬ್ದ, ಸ್ಪರ್ಶ, ರೂಪ, ರಸ ಮತ್ತು ಗಂಧಗಳ ಜ್ಞಾನವನ್ನು ಉಂಟುಮಾಡುತ್ತವೆ. ಈ ಶಬ್ದ, ಸ್ಪರ್ಶ, ರೂಪ, ರಸ ಮತ್ತು ಗಂಧಗಳೂ ಸಹ ಆ ಪಂಚ ಭೂತಗಳ ಸಹಾಯದಿಂದಲೇ ಆಗುತ್ತದೆ. ಶಬ್ದಕ್ಕೆ ಆಕಾಶ, ಸ್ಪರ್ಶಕ್ಕೆ ವಾಯು, ರೂಪಕ್ಕೆ ಅಗ್ನಿ, ರಸಕ್ಕೆ ನೀರು ಮತ್ತು ಗಂಧಕ್ಕೆ ಭೂಮಿಯ ಸಹಾಯ.

ಆದರೆ ಈ ಜ್ಞಾನವೆಲ್ಲವೂ ನಮಗೆ ನಮ್ಮ ಮನಸ್ಸಿನ ಮೂಲಕವೇ ಆಗಬೇಕಾದ್ದರಿಂದ ಮನಸ್ಸಿಗೆ ಆರನೇ ಇಂದ್ರಿಯದ ಸ್ಥಾನವನ್ನು ಭಗವದ್ಗೀತೆಯಲ್ಲಿ ಕೊಡಲ್ಪಟ್ಟಿದೆ. ಇವೆಲ್ಲವೂ ನಮಗೆ ಗೊತ್ತಿರುವ ವಿಷಯವಾದರೂ, ಇವು ಐದೇ ಏಕೆ ನಾಲ್ಕು ಏಕಿರಬಾರದು ಎಂದು ಯೋಚನೆ ಮಾಡಿದರೆ ಸಮರ್ಪಕವಾದ ಉತ್ತರ ಸಿಗುವುದಿಲ್ಲ. ಅವುಗಳನ್ನು ಸಂಪೂರ್ಣವಾಗಿ ಅರಿಯುವುದೂ ಸಾಧ್ಯವೇ ಇಲ್ಲ. ಹಾಗೆ ಅವುಗಳ ಸ್ವರೂಪ ನಮ್ಮ ಅರಿವಿಗೆ ಬಾರದಂತೆ ಒಂದು ನಿಗೂಢತೆಯನ್ನು ಇಟ್ಟಿದ್ದಾನೆ ಆ ಪರಮಾತ್ಮ, ಎಂದು ಉಲ್ಲೇಖಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ. ಹಾಗೆ ಮಾಡಿ ನಮ್ಮನ್ನು ಅವುಗಳ ಸಂಪೂರ್ಣ ಜ್ಞಾನದಿಂದ ವಂಚಿತರನ್ನಾಗಿಸಿದ್ದಾನೆ ಎಂದೂ ಸಹ ಹೇಳುತ್ತಾರೆ.

ಮಾನವ ಮಾತ್ರರಾದ ನಮಗೆ, ಅಗಾಧವಾದ ಪಂಚಭೂತಗಳನ್ನು ಅರಿಯಲು ಸಾಮರ್ಥ್ಯವೂ ಇಲ್ಲ, ಯೋಗ್ಯತೆಯೂ ಇಲ್ಲ. ಹಿಂದೆ ಬಹಳ ಹಿಂದೆ ಮಹಾನ್ ಋಷಿ ಮುನಿಗಳು ಅರಿತಿದ್ದರಂತೆ. ಅವರ ಆ ಜ್ಞಾನವನ್ನೇ ನಮಗೆ ವೇದಗಳಲ್ಲಿ ತುಂಬಿಕೊಟ್ಟಿದ್ದಾರೆ. ಅದನ್ನು ಅರಿತರೆ ಸಾಕು. ಅಷ್ಟೇ ಅಲ್ಲ, ಆ ಪರಮಾತ್ಮ ಈ ಪಂಚ ಭೂತಗಳನ್ನೂ ಮತ್ತು ಪಂಚೇಂದ್ರಿಯಗಳನ್ನೂ ನಮ್ಮ ಬದುಕಿಗೆ ಪೂರಕವಾಗಿ ಕೊಟ್ಟಿದ್ದಾನೆ. ಅವುಗಳನ್ನು ಗೌರವಿಸಬೇಕು, ಸೂಕ್ತವಾಗಿ

ಉಪಯೋಗಿಸಿಕೊಳ್ಳಬೇಕು. ಇಂದು, ಇವುಗಳನ್ನು ಹಾಳುಗೆಡವಿಕೊಂಡು, ಅಂತರ್ಜಲದ ಅಭಾವ, ವಾಯು ಮಾಲಿನ್ಯ, ಶಬ್ದ ಮಾಲಿನ್ಯವೆಂದು ಪಂಚ ಭೂತಗಳ ದುರುಪಯೋಗದ ಫಲವನ್ನು ಅನುಭವಿಸುತ್ತಿದ್ದೇವೆ. ಆದರೆ ಈ ಪಂಚಭೂತಗಳು ಎಷ್ಟು ಬಲಶಾಲಿಗಳೆಂದರೆ, ಅವು ತಮ್ಮನ್ನು ತಾವು ಸರಿಪಡಿಕೊಳ್ಳುವ ಒಂದು ವ್ಯವಸ್ಥೆಯನ್ನೂ ಪರಮಾತ್ಮ ಸೃಜಿಸಿದ್ದಾನೆ. ಅವುಗಳನ್ನು ದುರುಪಯೋಗಪಡಿಸಿಕೊಳ್ಳಬಾರದು ಎಂಬ ಕಿಂಚಿತ್ ಪರಿಜ್ಞಾನ ನಮಗಿದ್ದರೆ ಸಾಕು.

(147)

ಪೂರ್ಣ ದರ್ಶನ 319-323 ಕಗ್ಗ ರಸಧಾರೆ-2

**ಮುಕ್ತಕ-320**

**ಪಂಚಕವೊ, ಪಂಚ ಪಂಚಕವೊ, ಮಾಭೂತಗಳ।**
**ಹಂಚಿಕೆಯನರಿತೇನು? ಗುಣವ ತಿಳಿದೇನು?॥**
**ಕೊಂಚ ಕೊಂಚಗಳರಿವು ಪೂರ್ಣದರಿವಾದೀತೇ?।**
**ಮಿಂಚಿದದು ಪರತತ್ತ್ವ - ಮಂಕುತಿಮ್ಮ॥**

ಹಂಚಿಕೆಯನರಿತೇನು=ಹಂಚಿಕೆಯನು+ಅರಿತೇನು, ಕೊಂಚಗಳರಿವು=ಕೊಂಚಗಳ+ಅರಿವು, ಪೂರ್ಣದರಿವಾದೀತೇ=ಪೂರ್ಣದ+ಅರಿವು+ಆದೀತೆ, ಮಿಂಚಿದದು=ಮಿಂಚಿದ್ದು+ಅದು.

ಪಂಚಪಂಚಕ=ಇಪ್ಪತ್ತೈದು,ಮಾಭೂತಗಳ=ಮಹಾಭೂತಗಳ, ಹಂಚಿಕೆ=ಯುಕ್ತಿ ಅಥವಾ ಸಂಚು, ಮಿಂಚಿದ್ದು=ಉನ್ನತವಾದದ್ದು, ಪರತತ್ತ್ವ=ಪರಮಾತ್ಮತತ್ತ್ವ,

ಪಂಚಭೂತಗಳೆಂಬ ಈ ಮಹಾ ಭೂತಗಳು ಐದೋ, ಇಪ್ಪತ್ತೈದೋ, ಅದರ ಲೆಕ್ಕವನ್ನು ಅರಿತು ಏನು ಪ್ರಯೋಜನ? ಅವುಗಳ ಗುಣಗಳನ್ನು ನಾವು ತಿಳಿದುಕೊಂಡು ಏನಾಗಬೇಕಿದೆ? ಅದರ ಸಮಗ್ರ ಅಥವಾ ಸಂಪೂರ್ಣ ಅರಿವು ನಮಗಾಗುವುದಿಲ್ಲ. ಅಲ್ಪಸ್ವಲ್ಪ ಅದನ್ನು ತಿಳಿದುಕೊಂಡರೆ, ಪೂರ್ಣದ ಅರಿವು ನಮಗೆ ಆಗುತ್ತದೆಯೇ? ಈ ಪರಮಾತ್ಮನ ಮತ್ತು ಅವನ ಸೃಷ್ಟಿಯ ಜ್ಞಾನ, ನಮ್ಮ ಅರಿತುಕೊಳ್ಳುವ ಕ್ಷಮತೆಗೆ ಮಿಂಚಿದ್ದು ಎಂದು ಹೇಳುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಪಂಚಭೂತಗಳಲ್ಲಿ ಒಂದಾದ ಆಕಾಶವನ್ನು ನಾವು ಅಳೆಯಲಾಗುವುದಿಲ್ಲ, ಅರಿಯಲಾಗುವುದಿಲ್ಲ. ಬೃಹದಾರಣ್ಯಕ ಉಪನಿಷತ್ತಿನಲ್ಲಿ 'ಆಕಾಶವು' ಯಾವುದರಿಂದ ಆಗ ಮಾಡಲ್ಪಟ್ಟಿದೆ ಎಂದು ಗಾರ್ಗಿ ಕೇಳುವ ಪ್ರಶ್ನೆಗೆ ಯಾಜ್ಞವಲ್ಕನು ಆಕಾಶವನ್ನು ಅಕ್ಷರ, ಅಸ್ಥೂಲ, ಅಹ್ರಸ್ವ, ಅದೀರ್ಘ, ಆಲೋಹಿತ, ಅಸ್ನೇಹ" ಮುಂತಾದಾಗಿ ವಿವರಿಸುತ್ತಾನೆ. ನೋಡಿ ನಮಗೇನಾದರೂ ಅರ್ಥವಾಗುತ್ತದೆಯೇ? ಇಲ್ಲ!!! ಹೀಗೆಯೇ ಇತರ ಭೂತಗಳಾದ ವಾಯು, ಅಗ್ನಿ, ನೀರು ಮತ್ತು ಭೂಮಿಗಳನ್ನೂ ನಾವು ಸಂಪೂರ್ಣವಾಗಿ ಅರಿಯಲು ಸಾಧ್ಯವಿಲ್ಲ.

ನಾವು ಗಾಳಿಯನ್ನು ಉಸಿರಾಡುತ್ತೇವಾದ್ದರಿಂದ ಬದುಕಿದ್ದೇವೆ. ನಮಗೆ ಗಾಳಿಯ ಉಗಮ ಮತ್ತು ಸ್ವರೂಪ, ಅದರಲ್ಲಿ ಮಿಶ್ರಣಗೊಂಡ ಅನ್ಯ ಅನಿಲಗಳ ಪರಿಚಯವಿಲ್ಲದಿದ್ದರೂ ಉಸಿರಾಡುತ್ತೇವೆ ಮತ್ತು ಅದರಿಂದ ಬದುಕಿದ್ದೇವೆ. ಹಾಗೆಯೇ ಮಿಕ್ಕ ಭೂತಗಳ ಪರಿಚಯ ಮತ್ತು ಉಪಯೋಗ ನಮಗೆ ಇದ್ದರೂ, ಅದನ್ನು ಸಂಪೂರ್ಣವಾಗಿ ಅರ್ಥ ಮಾಡಿಕೊಳ್ಳಲಾಗುವುದಿಲ್ಲ. ಇಲ್ಲಿ ಮಾನ್ಯ ಗುಂಡಪ್ಪನವರು 'ಹಂಚಿಕೆಯನರಿತೇನು, ಗುಣವ ತಿಳಿದೇನು' ಎಂದು ಹೇಳುತ್ತಾ, ಅವು ಅರ್ಥವಾಗದ ಹಾಗೆ ಏಕೆ ಇದೆ ಎಂದಾಗಲೀ ಮತ್ತು ಅವುಗಳ ಗುಣವನ್ನು ಅರಿತು ನಮಗೆ ಏನಾಗಬೇಕಾಗಿದೆ ಎಂದು ಕೇಳುತ್ತಾರೆ.

ಇದು ಪರಮಾತ್ಮನಿಂದಾದ ಪಂಚಭೂತಗಳು. ಇದು ಪರತತ್ವಕ್ಕೆ ಸಂಬಂಧಪಟ್ಟದ್ದು, ನಮ್ಮ ಅರಿವಿಗೆ ಮಿಂಚಿದ್ದು, ಹಾಗಾಗಿ ಈ ಪಂಚಭೂತಗಳು ಹೇಗಾದರೂ ಆಗಿರಲಿ, ಹೇಗಾದರೂ ಇರಲಿ, ಹೇಗಾದರೂ ಕ್ರಿಯಾಶೀಲವಾಗಿರಲಿ, ನಾವು ಅದರ ಸಮಗ್ರ ಅರಿವಿಗೆ ಪ್ರಯತ್ನಿಸದೆ, ಆ ಪರಮಾತ್ಮನಿಂದ ಆದ ಈ ಪಂಚಭೂತಗಳು, ಜಗತ್ತಿನಲ್ಲಿ ನಮ್ಮ ಬದುಕಿಗೆ ಹೇಗೆ ಪೂರಕವಾಗಿವೆ ಎಂಬುದನ್ನು ಅರಿತು, ಅವುಗಳಿಗೆ ನಮ್ಮ ಕೃತಜ್ಞತೆಯನ್ನು ಸಲ್ಲಿಸುತ್ತಾ,

ಧರ್ಮದಿಂದ ಅವುಗಳನ್ನು ಅನುಭವಿಸುತ್ತಾ, ನಮ್ಮ ದುರ್ಬುದ್ಧಿಯಿಂದ ಅವುಗಳನ್ನು ಹಾಳುಮಾಡದಿದ್ದರೆ, ಬದುಕು ಸುಂದರವಾಗಿರುವುದಲ್ಲದೆ ಮುಂದಿನ ಪೀಳಿಗೆಗಳೂ ಸಹ ಬದುಕಲು ಅನುವು ಮಾಡಿಕೊಟ್ಟಂತಾಗುತ್ತದೆ.

**ಮುಕ್ತಕ-321** **ಜೀವನದ ಪರಿಪೂರ್ಣದರ್ಶನವದೊಂದಿಹುದು |**
**ಭೂವ್ಯೋಮ ವಿಸ್ತರದ ಮಿತಿಯಮೀರ್ದಿದದು ||**
**ದೇವ ನರ ಪಶು ಸಸಿಗಳೆಲ್ಲ ಕುಣಿಯುವರಲ್ಲಿ? |**
**ಭಾವಿಸಾ ಚಿತ್ರವನು - ಮಂಕುತಿಮ್ಮ ||**

ಪರಿಪೂರ್ಣದರ್ಶನವದೊಂದಿಹುದು=ಪರಿಪೂರ್ಣ+ದರ್ಶನವು+ಅದು+ಒಂದು+ಇಹುದು,
ಮೀರ್ದಿದದು=ಮೀರ್ದಿದ+ಅದು, ಕುಣಿಯುವರಲ್ಲಿ=ಕುಣಿಯುವರು+ಅಲ್ಲಿ, ಭಾವಿಸಾ=ಭಾವಿಸು+ಆ.
ಭೂವ್ಯೋಮ=ಭೂಮಿ ಮತ್ತು ಆಕಾಶ, ಮೀರ್ದಿದ=ಮೀರಿದ.

ಜೀವನಕ್ಕೆ ಪರಿಪೂರ್ಣವಾದ ಒಂದು ದರ್ಶನವಿದೆ ಅಥವಾ ಇಡೀ ಬದುಕಿಗೆ ಒಂದು ಪೂರ್ಣವಾದ ಚಿತ್ರವಿದೆ. ಅದು ಭೂಮಿ ಆಕಾಶದ ವಿಸ್ತಾರವನ್ನು ಮೀರಿ ಇದೆ. ಅಲ್ಲಿ ದೇವತೆಗಳು, ನರರು, ಪಶುಗಳು ಗಿಡ ಮರಗಳು ಎಲ್ಲವೂ ನಲಿದಾಡುತ್ತಾರೆ. ಅಂತಹ ಚಿತ್ರವನ್ನು ಭಾವಿಸು ಎಂದು ಒಂದು ಆದೇಶವನ್ನು ನೀಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಬದುಕಿನಲ್ಲಿ ನಮಗೆ ಯಾವುದರ ಪೂರ್ಣ ಚಿತ್ರವೂ ಅರಿವಾಗುವುದೇ ಇಲ್ಲ. ಉದಾಹರಣೆಗೆ, ನಮ್ಮ ಮನೆಯಲ್ಲಿರುವ ವ್ಯಕ್ತಿಗಳ ಪರಿಚಯ ಎಷ್ಟಿದೆ? ಎಂದು ಯೋಚನೆ ಮಾಡಿದರೆ, ನಾವು ಅವರನ್ನು ಶೇಕಡಾ 10 ರಷ್ಟೂ ಅರಿತಿಲ್ಲ ಎಂಬುದು ನಮಗೆ ಅರ್ಥವಾಗುವುದು. ಹೀಗೆ ನಮ್ಮೊಡನೆ ಹುಟ್ಟಿದ ಅಣ್ಣ ತಮ್ಮಂದಿರನ್ನೋ, ಅಕ್ಕ ತಂಗಿಯರನ್ನೋ ಅಥವಾ ನಮಗೆ ಜನ್ಮ ಕೊಟ್ಟ ತಂದೆ ತಾಯಿಯರನ್ನೋ ಅಥವಾ ನಾವು ಕಟ್ಟಿಕೊಂಡವರನ್ನೋ ಅರ್ಥಮಾಡಿಕೊಳ್ಳಲಾಗದ ನಾವು, ಇಷ್ಟು ವಿಶಾಲವಾದ ಜಗತ್ತನ್ನು ಅರ್ಥಮಾಡಿಕೊಳ್ಳಲು ಸಾಧ್ಯವೇ. ನಮಗೆ ಅರ್ಥವಾಗದಿದ್ದರೂ ಅದಕ್ಕೆ ಒಂದು ಪೂರ್ಣ ಚಿತ್ರವಿದೆ.

ಜೀವನದಲ್ಲಿ ನಾವು ನಮ್ಮ ಸುತ್ತ ಭಾಷೆ, ವರ್ಣ, ಬಣ್ಣ, ಜಾತಿ ಮತ್ತು ಅಹಂಕಾರ ಮುಂತಾದ ಗೆರೆಗಳನ್ನು ಎಳೆದುಕೊಂಡು ನಾವು ನೋಡುವ ದೃಷ್ಟಿಯನ್ನು ಮತ್ತು ಆಲೋಚಿಸುವ ಬುದ್ಧಿಯನ್ನು ಸಂಕುಚಿತವಾಗಿಸಿ, ನಮ್ಮ ಪ್ರಪಂಚ ಇಷ್ಟೇ, ಇದಕ್ಕಿಂತ ಇನ್ನೇನೂ ಇಲ್ಲ, ಇದನ್ನು ಬಿಟ್ಟು ಬೇರೇನಾದರೂ ಇದ್ದರೆ ಅದನ್ನು ನಾನು ಒಪ್ಪುವುದಿಲ್ಲ ಎಂಬ ಮೂರ್ಖತನದ ಮತ್ತು ಭಂಡತನದ ಭಾವವನ್ನು ವ್ಯಕ್ತಪಡಿಸುತ್ತಾ 'ಕೂಪಸ್ಥ ಮಂಡೂಕ'ಗಳ ತರಹ ಜೀವಿಸುತ್ತಾ ಇದ್ದೇವೆ.

ಇದನ್ನು ಬಿಟ್ಟು ನಮ್ಮ ದೃಷ್ಟಿಕೋನವನ್ನು ವಿಸ್ತರಿಸಿ ಒಂದು ಸಮಗ್ರ ಚಿತ್ರವನ್ನು ನೋಡಲು ಪ್ರಯತ್ನಪಟ್ಟರೆ, ಆಗ ನಾವು ಎಳೆದುಕೊಂಡ ಸಂಕುಚಿತ ಬುದ್ಧಿಯ ಗೆರೆಗಳು ಅಳಿಸಿಹೋಗಿ, 'ದೇವ ನರ ಪಶು ಸಸಿಗಳೆಲ್ಲ





ಕುಣಿಯುವರಲ್ಲಿ' ಎಂದು ಗುಂಡಪ್ಪನವರು ಹೇಳುವಂತೆ, ಸಕಲ ಚರಾಚರಗಳೂ ಆನಂದವಾಗಿ ಜೀವಿಸುವ ಒಂದು ಬೃಹತ್ ಜಗತ್ತಿನ ಚಿತ್ರ ಮೂಡುತ್ತದೆ.

ಅಲ್ಲಿ ಜಾತಿ, ಮತ, ವರ್ಣ, ದೇಶ, ಭಾಷೆ, ಬಣ್ಣಗಳನ್ನು ಬೇರೆಯಾಗಿಸುವ ಅಹಂಕಾರದ ರೇಖೆಗಳಲ್ಲಾ ಅಳಿಸಿ ಹೋಗುತ್ತದೆ. ಅಲ್ಲಿ ನಮಗೆ ಒಂದು ಸುಂದರ ಜಗತ್ತಿನ ಸಮಗ್ರ ಚಿತ್ರಣ ಕಾಣುತ್ತದೆ. ಪ್ರತಿಯೊಬ್ಬರೂ ತಮ್ಮ ಮನಗಳಲ್ಲಿ ಎಳೆದುಕೊಂಡ ಸಂಕುಚಿತ ಭಾವನೆಯ ಗೆರೆಗಳನ್ನು ಅಳಿಸಿಹಾಕಿ ವಿಶಾಲ ಜಗಚಿತ್ರವನ್ನು ನೋಡಬೇಕು. ಇದನ್ನೇ ಮಾನ್ಯ ಗುಂಡಪ್ಪನವರು 'ಭಾವಿಸಾ ಚಿತ್ರವನು' ಎಂದು ಆದೇಶ ನೀಡಿದ್ದಾರೆ. ವಾಚಕರೆ ಪ್ರಯತ್ನಪಟ್ಟರೆ ನಮಗೂ ಅಂತಹ ಮುಕ್ತ ಜಗತ್ತಿನ ಚಿತ್ರ ಕಾಣಬಹುದು.

**ಮುಕ್ತಕ-322** **ಈ ವಿಶ್ವರೂಪ ಸಂದರ್ಶನದಿ ಹೊಂದಿಹವು।**
**ಜೀವ ಜೀರ್ಣವಗಳು, ಕ್ರಮ ಯದೃಚ್ಛೆಗಳು॥**
**ಅವಶ್ಯ ವಶ್ಯ; ಸ್ವಾಚ್ಛಂದ್ಯ ನಿರ್ಬಂಧಗಳು।**
**ಕೈವಲ್ಯ ದೃಷ್ಟಿಯದು - ಮಂಕುತಿಮ್ಮ॥**

ಹೊಂದಿಹವು=ಹೊಂದಿ+ಇಹವು, ದೃಷ್ಟಿಯದು=ದೃಷ್ಟಿ+ಅದು.

ಕ್ರಮ=ಒಂದು ಪೂರ್ವ ನಿರ್ಧಾರಿತ ನಿಯಮದಂತೆ ಆಗುವುದು,

ಯದೃಚ್ಛ=ಸ್ವ-ತಂತ್ರ, ತನ್ನದೇ ಆದ ತಂತ್ರ ಸ್ವಾಚ್ಛಂದ ಸ್ವಚ್ಛಂದ, ಮನಸ್ಸಿಗೆ ಬಂದಂತೆ ನಡೆಯುವುದು,

ಕೈವಲ್ಯ=ಮೋಕ್ಷ ಅಥವಾ ನಿರ್ಮಲತೆ.

ಈ ವಿಶ್ವದ ರೂಪದಲ್ಲಿ ಜೀವವಿರುವುದು ಮತ್ತು ಜೀವವಿಲ್ಲದವು, ಕ್ರಮಬದ್ಧವಾಗಿರುವುದು, ಕ್ರಮಕ್ಕೊಳಪಡದೆ ಸ್ವತಂತ್ರವಾಗಿರುವುದು, ನಮ್ಮ ವಶದಲ್ಲಿರುವುದು, ನಮ್ಮ ವಶದಲ್ಲಿ ಇರದೇ ಇರುವುದು, ಸ್ವಚ್ಛಂದವಾಗಿ ನಡೆಯುವುದು, ನಿರ್ಬಂಧಕ್ಕೊಳಪಟ್ಟವು ಎಲ್ಲವೂ ಇವೆ. ಇವುಗಳನ್ನು ಹೇಗೆ ಇವೆಯೋ ಹಾಗೆಯೇ ನೋಡಿದರೆ ಅದು ನಿರ್ಮಲ ಅಥವಾ ಸ್ವಚ್ಛ ದೃಷ್ಟಿ ಎಂದು ಹೇಳುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಅಗಾಧವಾದ ಈ ಸೃಷ್ಟಿಯಲ್ಲಿ ಎಲ್ಲವೂ ಇದೆ. ಜೀವ ಮತ್ತು ನಿರ್ಜೀವ ವಸ್ತುಗಳು ಹೊಂದಿಕೊಂಡು ಈ ಜಗತ್ತಿನಲ್ಲಿರುವುದು ನಮಗೆ ಗೊತ್ತು. ಕ್ರಮವಾಗಿರುವುದು ಮತ್ತು ಕ್ರಮಕ್ಕೊಳಪಡದೆ ಇರುವುದೂ ಸಹ ಇದೆ. ಆದರೆ ಕ್ರಮವೆಂದರೆ ಏನು, ಸ್ವತಂತ್ರವೆಂದರೆ ಏನು ಎಂದು ಒಂದು ಉದಾಹರಣೆಯ ಮೂಲಕ ನಾವು ಅರಿತುಕೊಳ್ಳಬಹುದು. ಒಂದು ಮಾವಿನ ಬೀಜ (ಓಟೆ)ಯನ್ನು ನೆಟ್ಟಾಗ ಮಾವಿನ ಗಿಡ ಅಥವಾ ಒಂದು ಬೇವಿನ ಬೀಜ ನೆಟ್ಟಾಗ ಬೇವಿನ ಗಿಡ ಬೆಳೆಯುವುದು 'ಕ್ರಮ'. ಆ ಗಿಡ ಭೂಮಿಯಿಂದ ಸಾರವನ್ನು ಸೆಳೆದುಕೊಂಡು ತನ್ನ ವಿನ್ಯಾಸವನ್ನು, ರುಚಿ, ಬಣ್ಣ ಮತ್ತು ವಾಸನೆಗಳಂತಹ ಗುಣಗಳನ್ನು ತನ್ನ ತಂತ್ರದಿಂದಲೇ ರೂಢಿಸಿಕೊಳ್ಳುತ್ತದೆ. ಬೀಜ ಮರವಾಗುವುದು ಕ್ರಮವಾದರೆ ಮರ ಬೆಳೆಯುವುದು ಅದರದೇ ತಂತ್ರ ಅಂದರೆ ಸ್ವತಂತ್ರ ಹಾಗಾಗಿಯೇ ಪ್ರತೀ ಮರಕ್ಕೂ ತನ್ನದೇ ಆದ ಆಕಾರ ಮತ್ತು ವಿನ್ಯಾಸ.

ಇನ್ನು ಅವಶ್ಯ ಮತ್ತು ವಶ್ಯಗಳನ್ನೂ ನೋಡುವ. ನಾವು ಮಾಡುವ ಕೆಲಸಗಳು ನಮ್ಮ ವಶದಲ್ಲಿರುವುದರಿಂದ ಅದು ವಶ್ಯ. ನಮ್ಮ ಪ್ರಮೇಯವೇ ಇಲ್ಲದೆ ನಡೆಯುವುದು ಅ-ವಶ್ಯ ಅಂದರೆ ನಮ್ಮ ವಶದಲ್ಲಿ ಇಲ್ಲದೆ ಇರುವುದು. ಉದಾಹರಣೆಗೆ, ನಾವು ಏನನ್ನು ತಿನ್ನಬೇಕು ಎನ್ನುವುದು ನಮ್ಮದೇ ನಿರ್ಧಾರವಾದ್ದರಿಂದ ಅದು ನಮ್ಮ ವಶದಲ್ಲಿರುವುದರಿಂದ, ಅದು ವಶ್ಯ. ಆಹಾರ ನಮ್ಮ ದೇಹದ ಒಳ ಹೊಕ್ಕ ಮೇಲೆ ಅದು ಹೇಗೆ ಪಚನವಾಗುತ್ತದೆ, ತಿಂದ ಆಹಾರದಲ್ಲಿನ ಶಕ್ತಿ ನಮ್ಮ ದೇಹದೊಳಕ್ಕೆ ಹೇಗೆ ಸೇರುತ್ತದೆ ಎನ್ನುವುದು ನಮ್ಮ ಪ್ರಮೇಯವಿಲ್ಲದೆ ನಡೆಯುತ್ತದೆಯಾದ್ದರಿಂದ, ಅದು ಅವಶ್ಯ, ಅಂದರೆ ನಮ್ಮ ವಶದಲ್ಲಿ ಇಲ್ಲದೆ ಇರುವುದು. ಈ ಸೃಷ್ಟಿಯಲ್ಲಿ ಹೀಗೆ ವಶ್ಯ ಮತ್ತು ಅವಶ್ಯಗಳು ಒಂದಕ್ಕೊಂದು ಹೊಂದಿಕೊಂಡು ಇವೆ.

ಅದೇ ರೀತಿ ಜಗತ್ಸೃಷ್ಟಿಯಲ್ಲಿ ಸ್ವಚ್ಛಂದವಾಗಿ, ಯಾವುದೇ ಅಂಕೆ ಇಲ್ಲದೆ ಇರುವ ಅಸಂಖ್ಯಾತ ಪಶುಗಳು, ಪಕ್ಷಿಗಳು ಪ್ರಾಣಿಗಳು ವನಸ್ಪತಿಗಳು ಕ್ರಿಮಿ ಕೀಟಗಳು ಇವೆ. ಅಲ್ಲದೆ, ಸದಾಕಾಲ ಒಂದು ಬಂಧನಕ್ಕೆ ಒಳಗಾದ ವಿಷಯಗಳೂ ಇವೆ. ಅಂತ್ಯವೇ ಇಲ್ಲದ ಈ ಜಗತ್ತಿನ ಚಿತ್ರದಲ್ಲಿ ನಮ್ಮ ಊಹೆಗೂ ನಿಲುಕದ ಮತ್ತು ನಾವೆಷ್ಟು ಪ್ರಯತ್ನಪಟ್ಟರೂ ನಮಗರ್ಥವಾಗದ ವಿಷಯಗಳು, ಕ್ರಮಗಳು, ತಂತ್ರಗಳು ಅಂದ ಚೆಂದಗಳು ಕೋಟ್ಯಾಂತರವಾಗಿ ಇವೆ. ಅಂತಹ ಶುದ್ಧ, ಸ್ವ-ತಂತ್ರ ಮತ್ತು ನಿರ್ಮಲವಾದ ಚಿತ್ರವನ್ನು ಕೆಡಿಸದೆ ಅಥವಾ ಕಲಕದೆ ಹಾಗೇ ಕಂಡು ಆನಂದಿಸಿ ಅನುಭವಿಸಬೇಕು, ಎನ್ನುವುದೇ ಈ ಮುಕ್ತಕದ ಹೂರಣ.

**ಮುಕ್ತಕ-323** **ಸಾರಸುಖರಸನಿಧಿ ಪರಬ್ರಹ್ಮನಿರುತಿರಲ್ ।**

**ಸ್ವಾರಸ್ಯಹೀನವೆನ್ನುವರೆ ಜೀವಿತವ? ॥**

**ಪೌರುಷ ಪ್ರೇಮ ಸೌಂದರ್ಯಗಳುಮಂತೆಯೇ ।**

**ಸ್ವಾರಸ್ಯವೋ ರಹಸ್ಯ- ಮಂಕುತಿಮ್ಮ ।**

ಸಾರಸುಖರಸನಿಧಿ=ಸಾರ+ಸುಖ+ರಸನಿಧಿ, ಪರಬ್ರಹ್ಮನಿರುತಿರಲ್=ಪರಬ್ರಹ್ಮನ್+ಇರುತಿರಲು,

ಸ್ವಾರಸ್ಯಹೀನವೆನ್ನುವರೆ=ಸ್ವಾರಸ್ಯಹೀನ+ಎನ್ನುವರೆ,

ಸೌಂದರ್ಯಗಳುಮಂತೆಯೇ ಸೌಂದರ್ಯಗಳುಂ+ಅಂತೆಯೇ.

ಸುಖರಸದ ಸಾರದ ನಿಧಿಯಂತೆ ಪರಬ್ರಹ್ಮನು ಇರುತಿರುವಾಗ ಜೀವನವನ್ನು ಸ್ವಾರಸ್ಯಹೀನವೆನ್ನಲಾದೀತೇ. ಪೌರುಷ, ಪ್ರೇಮ ಮತ್ತು ಸೌಂದರ್ಯಗಳೂ ಸಹ ಅಂತೆಯೇ. ಈ ಜಗತ್ತಿನ ಎಲ್ಲ ಸ್ವಾರಸ್ಯವೂ ರಹಸ್ಯವಾಗೇ ಇದೆ ಎಂದು ಸೃಷ್ಟಿಯ ಒಂದು ರೂಪವನ್ನು ಈ ಮುಕ್ತಕದಲ್ಲಿ ಪ್ರಸ್ತಾಪಮಾಡಿದ್ದಾರೆ, ಮಾನ್ಯ ಗುಂಡಪ್ಪನವರು.

ತಾನು ಹಲವಾಗಿ ಪ್ರಕಟಗೊಳ್ಳಬೇಕು ಎಂದು ಸ್ವ-ಇಚ್ಛೆಯಿಂದ ಈ ಜಗತ್ತನ್ನು ಸೃಷ್ಟಿಸಿ ಇಲ್ಲಿನ ಎಲ್ಲ ಆನಂದ ಸುಖ ಮತ್ತು ಸಾರಕ್ಕೆ ತಾನೇ ನಿಧಿಯಂತೆ ಕಾರಣನಾಗಿರುವಾಗ ಈ ಜೀವನವನ್ನು ಸ್ವಾರಸ್ಯರಹಿತ ಎಂದು ಹೇಳಲಾಗುವುದೇ? ಇಲ್ಲಿನ ಶಕ್ತಿ, ಪ್ರೇಮ, ಪ್ರೀತಿ, ಸೌಂದರ್ಯ ಇತ್ಯಾದಿ ರೂಪಗಳೂ ಅವನೇ ಆಗಿರುವುದರಿಂದಲೇ ಈ ಜಗತ್ತು ಇಷ್ಟು ಸುಂದರವಾಗಿರುವುದು ಎಂದು ನಾವು ಅರಿತುಕೊಳ್ಳಬೇಕು. ಆ ಪರಬ್ರಹ್ಮ ತನ್ನ ಆನಂದಕ್ಕೆ





ಈ ಜಗತ್ತನ್ನು ಸೃಜಿಸಿ ತಾನೇ ಎಲ್ಲ ರೂಪವೂ ಆಗಿ ಮತ್ತು ಎಲ್ಲ ರೂಪಗಳಲ್ಲಿಯೂ ಚೇತನನಾಗಿ ಅವನೇ ಇದ್ದುಕೊಂಡು ಸಂತಸಪಡುತ್ತಿದ್ದಾನೆ ಎನ್ನುವುದು ನಮ್ಮ ನಂಬಿಕೆ. ಹಾಗಾಗಿ ನಮಗೆ ಎಲ್ಲವೂ ದೈವ ಸಮಾನ.

ಮನುಷ್ಯನನ್ನು ಹೊರತು ಮಿಕ್ಕೆಲ್ಲಾ ಪ್ರಾಣಿಗಳೂ ಪರಿಮಿತ ಜ್ಞಾನವನ್ನು ಹೊಂದಿವೆಯಾದ್ದರಿಂದ ಈ ಜಗತ್ತಿನಲ್ಲಿ ಸಹಜವಾಗೇ ಜೀವಿಸುತ್ತವೆ. ಮನುಷ್ಯ ಮಾತ್ರ ತನ್ನ ಅತೀ ಬುದ್ಧಿವಂತಿಕೆಯಿಂದ ಸೃಷ್ಟಿಯನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಪಟ್ಟಿದ್ದಾನೆ. ಅದು ತಪ್ಪಲ್ಲ. ಆದರೆ ಈ ಮನುಷ್ಯ, ಈ ಜಗತ್ತಿನ ಎಲ್ಲವೂ ಅಂದರೆ ಗಿಡ ಮರಗಳು, ನದಿ ಸಮುದ್ರಗಳು, ಬೆಟ್ಟ ಗುಡ್ಡಗಳು, ಅಷ್ಟೇಕೆ ಅನ್ಯ ಪ್ರಾಣಿಗಳೂ ಸಹ ತನ್ನ ಪ್ರಯೋಜನಕ್ಕಾಗಿಯೇ ಸೃಷ್ಟಿಸಲ್ಪಟ್ಟಿದೆ ಎಂಬ ದುರ್ಭಾವದಿಂದಲೇ ಬದುಕುತ್ತಿದ್ದಾನೆ. ಇರುವುದನ್ನೆಲ್ಲ ಹಾಳುಗೆಡವಿ ತನ್ನ ಬದುಕನ್ನು ಸುಂದರವನ್ನಾಗಿಸುವ ಒಂದು ವ್ಯರ್ಥ ಪ್ರಯತ್ನ ಮಾಡುತ್ತಿದ್ದಾನೆ. ಇದು ತಪ್ಪು ಏಕೆಂದರೆ ಈ ಸೃಷ್ಟಿಯನ್ನು ಇವನಿಗೆ ಅರ್ಥಮಾಡಿಕೊಳ್ಳಲೇ ಸಾಧ್ಯವಿಲ್ಲ. ಹಾಗಿದ್ದಮೇಲೆ ಇದರಲ್ಲಿನ ಸ್ವಾರಸ್ಯವನ್ನು ಕಂಡುಕೊಳ್ಳುವುದೆಂತು? ಇವನ ಅಪರಿಮಿತ ಅಹಂಕಾರವೇ ಇವನನ್ನು ಈ

ಜಗತ್ಸ್ವಾರಸ್ಯವನ್ನು ಅರಿತುಕೊಳ್ಳಲು ಬಿಡುವುದಿಲ್ಲ. ಅದು ಇವನಿಗೆ ಸದಾ ರಹಸ್ಯವಾಗೇ ಉಳಿಯುತ್ತದೆ ಎಂಬ ಅರ್ಥದಲ್ಲಿ 'ಸ್ವಾರಸ್ಯವೋ ರಹಸ್ಯ' ಎಂದಿದ್ದಾರೆ ಮಾನ್ಯ ಗುಂಡಪ್ಪನವರು.

ಪರಮಾತ್ಮನ ಸೃಷ್ಟಿಯಲ್ಲಿನ ಅನ್ಯರೂಪಗಳಂತೆಯೇ ನನ್ನದೂ ಒಂದು ರೂಪ, ಅನ್ಯ ರೂಪಗಳಲ್ಲಿ ಆ ಪರಮಾತ್ಮ ಪ್ರಕಟವಾದಂತೆ ನನ್ನ ರೂಪದಲ್ಲಿಯೂ ಪ್ರಕಟವಾಗಿದ್ದಾನೆ, ಪರಮಾತ್ಮ ತನ್ನ ಆನಂದಕ್ಕಾಗಿಯೇ, ನನ್ನನ್ನೂ ಸೇರಿ ಈ ಜಗತ್ತಿನ ಎಲ್ಲವನ್ನೂ ಸೃಷ್ಟಿಸಿದ್ದಾನೆ, ಎನ್ನುವ ಸತ್ಯವನ್ನು ಅರಿತು ದೃಢವಾಗಿಸಿಕೊಂಡರೆ ಆಗ ಆ ರಹಸ್ಯವೂ ನಮಗರಿವಾಗಬಹುದು. ಆದರೆ ಅಹಂಕಾರವನ್ನು ತೊರೆದರೆ ಮಾತ್ರ ಅದು ಸಾಧ್ಯ. ವಾಚಕರೆ ಅಹಂಕಾರವನ್ನು ಬಿಡುವುದು ಅಷ್ಟು ಸುಲಭವಲ್ಲ. ಆದರೆ ಅಸಾಧ್ಯವೂ ಅಲ್ಲ. ಪ್ರಯತ್ನಪಡಬೇಕು. ಅಂತಹ ಅಹಂಕಾರರಹಿತ ಸ್ಥಿತಿಯಲ್ಲಿ ನಮಗೆ 'ಜಗದಾನಂದಕಾರಕ'ನ ಮತ್ತು ಅವನ ಈ ಸೃಷ್ಟಿಯ ಸತ್ಯವಾದ ಸಾರ ಎರಡೂ ಅರ್ಥವಾಗಬಹುದು.

# ನಾವೆಲ್ಲಾರಾಟದೆಲೆ 324-328

**ಮುಕ್ತಕ-324**

**ಏನೇ ನಿಜವಿರಲಿ ಮತ್ತೇನೆ ಸುಳ್ಳಾಗಿರಲಿ।**
**ನಾನೆನಿಪ್ಪಾತವೊಂದಿರುವುದನುಭವಿಕ॥**
**ಹಾನಿಗಾವಾತನಾತ್ಮವನುಂ ಕೆಡುಹದಿರು।**
**ಧ್ಯಾನಿಸಾತ್ಮದ ಗತಿಯ – ಮಂಕುತಿಮ್ಮ॥**

ನಾನೆನಿಪ್ಪಾತ್ಮವೊಂದಿರುವುದನುಭವಿಕ=ನಾನು+ಎನಿಪ+ಆತ್ಮ+ಒಂದು+ಇರುವುದು+ಅನುಭವಿಕ
ಹಾನಿಗಾವಾತನಾತ್ಮವನುಂ=ಹಾನಿಗೆ+ಆವಾತನ+ಆತ್ಮವನುಂ, ಕೆಡುಹದಿರು=ಕೆಡುಹುದೆ+ಇರು,
ಧ್ಯಾನಿಸಾತ್ಮದ ಧ್ಯಾನಿಸು+ಆತ್ಮದ.

ಯಾವುದೇ ನಿಜವಾಗಿರಲಿ ಅಥವಾ ಸುಳ್ಳಾಗಿರಲಿ, ನಾನು ಎಂದು ಎನಿಸುವ ಆತ್ಮದ ಇರುವಿಕೆ ಅನುಭವ ವೇದ್ಯ. ಹಾಗಿರುವಾಗ 'ಅನ್ಯ' ಆತ್ಮಗಳಿಗೆ ಹಾನಿಯನ್ನುಂಟು ಮಾಡದೆ, ನಿನ್ನ ಆತ್ಮದ ಗತಿಯ ಮತ್ತು ಗಮ್ಯದ ಬಗ್ಗೆ ನೀನು ಧ್ಯಾನಿಸು, ಎಂದರೆ ಅದರ ಬಗ್ಗೆ ಆಲೋಚಿಸು ಎಂದು ಅದೇಶಿಸುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಈ ಜಗತ್ತಿನಲ್ಲಿನ ಎಲ್ಲ ಪ್ರಾಣಿಗಳಿಗೂ ಒಂದು ಸಮಾನಾಂಶವಿದೆ. ಅದೇನೆಂದರೆ ಎಲ್ಲಕ್ಕೂ ಒಂದು ದೇಹ, ಒಂದು ಮನಸ್ಸು, ಒಂದು ಬುದ್ಧಿ ಮತ್ತು ಒಂದು ಆತ್ಮ ಅಥವಾ ಚೇತನವಿದೆ. ರೂಪಗಳು ಬೇರೆ ಬೇರೆಯಾದರೂ ಮತ್ತು ಆ ರೂಪಗಳ ಆಧಾರವಾದ ಮನಸ್ಸು ಬುದ್ಧಿಗಳ ವಿಕಾಸ ಬೇರೆ ಬೇರೆ ಸ್ಥರಗಳಲ್ಲಿ ಇದ್ದರೂ ಆತ್ಮದ ಸ್ವರೂಪ ಒಂದೇ ಆಗಿರುತ್ತದೆ, ಎನ್ನುತ್ತದೆ ನಮ್ಮ ಸನಾತನದ ಸಿದ್ಧಾಂತ. ಈ ನಾಲ್ಕರಲ್ಲಿ 'ನಾನು' ಯಾರು? ಎಂದರೆ, ನಾನು ಚೇತನ ಎಂದು ಅನುಭವಿಸಬೇಕು. ಭೂಮಿಯಿಂದಾದ ದೇಹ ಪಂಚಭೂತಗಳಿಂದಾದ ಮನಸ್ಸು, ಬುದ್ಧಿಗಳು 'ನಾನು' ಅಲ್ಲ ಎಂದಾದರೆ, ನಾನು ಕೇವಲ ಚೇತನ ಎಂದು ಭಾವಿಸಬೇಕು. ಆ ಚೇತನಕ್ಕೂ ಈ ನಾನು ಎನ್ನುವ ಭಾವ ಕೇವಲ ದೇಹ ಸಂಬಂಧದಿಂದ ಮಾತ್ರ ಬರುತ್ತದೆ. ಇದನ್ನು ಸ್ವಾನುಭವದಿಂದ ಅರಿಯಬೇಕು, ಅನುಭವಿಸಬೇಕು.

ಹಾಗೆ ಅನುಭವಿಸುವಾಗ ಅನ್ಯ ಎಲ್ಲಾ ಜೀವಿಗಳಲ್ಲಿಯೂ ಒಂದೇ ಮೂಲದಿಂದ ಬಂದ ಚೇತನವೇ ಇದೆ ಎಂದು ಶುದ್ಧ ಮನಸ್ಸಿನಿಂದ ಒಪ್ಪಿಕೊಳ್ಳಬೇಕು. ಹಾಗೆ ಒಪ್ಪಿಕೊಂಡು ಆ ಜೀವಿಗಳಿಗೆ ತೊಂದರೆ ಕೊಡದಂತೆ ನಾವು ಜೀವಿಸಬೇಕು ಎನ್ನುವ ಅರ್ಥದಲ್ಲಿ, 'ಹಾನಿಗಾವಾತನಾತ್ಮವನುಂ ಕೆಡುಹದಿರು' ಎಂದು ಅದೇಶಿಸಿದ್ದಾರೆ, ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

"ಧ್ಯಾನಿಸಾತ್ಮದ ಗತಿಯ" ಎಂದು ಹೇಳುತ್ತಾ ನೀನು ಆತ್ಮ, ನಿನ್ನನ್ನು ನೀನು ಪರಿಕಿಸಿಕೋ, ಆತ್ಮಾವಲೋಕನ ಮಾಡಿಕೋ, ನೀನು ಸೇರಬೇಕಾದ ಗಮ್ಯವನ್ನು ಅರಿತು, ನಿನ್ನ ಮಾರ್ಗವನ್ನು ಶುದ್ಧವಾಗಿಟ್ಟುಕೋ ಎಂದೂ ಸಹ ನಮಗೆ ಜ್ಞಾನದ ದಾರಿ ತೋರಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ. ವಾಚಕರೆ ಸೂಕ್ಷ್ಮವಾಗಿ ನೋಡಿದರೆ, ನಾವು ಪರರನ್ನು ಗಮನಿಸುವುದು, ಅವರ ಕೊರತೆಗಳನ್ನು ಎತ್ತಿಕಟ್ಟುವುದು, ಅದರ ಬಗ್ಗೆ ವಿಮರ್ಶೆಮಾಡುವುದು, ಪರರ ವಿಷಯದಲ್ಲಿಯೇ ನಮ್ಮ ಆಲೋಚನೆ ಮತ್ತು ಆಲೋಚನೆಗಳು ಇರುತ್ತವೆ ಹೊರತು ನಮ್ಮ ಸಮಯದಲ್ಲಿ, ಆತ್ಮಾವಲೋಕನಕ್ಕೆ ಸಮಯವೇ ಇರುವುದಿಲ್ಲ. ಆತ್ಮಾವಲೋಕನ ಮಾಡಿಕೊಂಡರೆ ನಮಗೆ ಹೆದರಿಕೆಯಾಗುತ್ತದೆ.

ನಮ್ಮ ಲೋಪ ದೋಷಗಳು ನಮ್ಮ ಮುಂದೆ ಬಂದು ನಿಲ್ಲುತ್ತವೆ. ಅದನ್ನು ಎದುರಿಸುವ ಮನೋಬಲ ಮತ್ತು ಧೈರ್ಯ ನಮಗಿರುವುದಿಲ್ಲ.

ಹಾಗಾಗಿ "ನಾನು ಆತ್ಮ" ಎಂದು ಅರಿತು, ಪರರಿಗೆ ತೊಂದರೆ ಕೊಡದಂತೆ, ನಮ್ಮನ್ನು ನಾವು ತಿದ್ದಿಕೊಂಡು, ಶುದ್ಧವಾದ ಗುರಿಯಿಟ್ಟುಕೊಂಡು ನಾವು ಸೇರಬೇಕಾದ ಸ್ಥಳಕ್ಕೆ ಸೇರುವ ಪ್ರಯತ್ನವನ್ನು ಮಾಡಬೇಕು.





**ಮುಕ್ತಕ-325**

**ಎಷ್ಟುಬಗೆಯ ಯಂತ್ರಗಳೊಳೆಷ್ಟು ರಸಮಿಶ್ರದಿಂ।**
**ದೆಷ್ಟಾದಿಭೂತಗಳು ಪರಿಪಾಕವೊಂದಿ॥**
**ಒಟ್ಟು ಸೇರಿಹವು ನರನೆಂಬ ಸಿದ್ಧಿಯೊಳವನು।**
**ಸೃಷ್ಟಿಶೈಲದ ಶಿಖರ - ಮಂಕುತಿಮ್ಮ॥**

ಯಂತ್ರಗಳೊಳೆಷ್ಟು=ಯಂತ್ರಗಳೊಳು+ಎಷ್ಟು,
ರಸಮಿಶ್ರದಿಂದೆಷ್ಟಾದಿಭೂತಗಳು+ರಸಮಿಶ್ರದಿಂದ+ಎಷ್ಟು+ಆದಿ+ಭೂತಗಳು,
ಸಿದ್ಧಿಯೊಳವನು=ಸಿದ್ಧಿಯೊಳು+ಅವನು.
ಪರಿಪಾಕವೊಂದಿ=ಪರಿಪಾಕವಾಗಿ, ಸೃಷ್ಟಿಶೈಲದ=ಸೃಷ್ಟಿಯ ಬೆಟ್ಟದ, ಶಿಖರ=ತುದಿ.

ಜಗತ್ತಿನಲ್ಲಿ ಪ್ರಾಣಿಗಳ ಸೃಷ್ಟಿಯ ಕ್ರಮವೊಂದನ್ನು ವಿಶ್ಲೇಷಣೆ ಮಾಡುತ್ತಾ, ಪ್ರಾಣಿಗಳ ದೇಹವು ಪಂಚಭೂತಗಳಿಂದಾದ ಯಂತ್ರಗಳ ಸಮೂಹ. ಈ ದೇಹ ಉತ್ಪತ್ತಿಯಾಗುವುದು, ಬೆಳೆಯುವುದು ಮತ್ತು ಬದುಕುವುದು ಎಲ್ಲ ಈ ಯಂತ್ರಗಳು ಒಸರುವ ರಸಗಳ ಮಿಶ್ರಣದಿಂದ. ಹೀಗೆ ಆ ಪರಮಾತ್ಮನ ಸೃಷ್ಟಿಯಲ್ಲಿ 'ನರ' ನೆಂಬ ಪ್ರಾಣಿ,

ಪ್ರಾಣಿ ಸಂಕುಲದಲ್ಲಿ ಅತ್ಯುತ್ತಮವಾದವನು, ಸೃಷ್ಟಿಯನ್ನು ಒಂದು ಬೆಟ್ಟವೆಂದುಕೊಂಡರೆ ಮಾನವ ಅದರ ತುತ್ತ ತುದಿಯಲ್ಲಿ ಇದ್ದಾನೆ ಎನ್ನುತ್ತಾರೆ ಮಾನ್ಯ ಗುಂಡಪ್ಪನವರು.

ಮಾನವ ಜನ್ಮ ದೊಡ್ಡದು, ಎಂದು ದಾಸರೂ ಸಹ ಹೇಳಿದ್ದಾರೆ ಅಲ್ಲವೇ? ಅನ್ಯ ಪ್ರಾಣಿಗಳ ಯೋಚನಾ ಶಕ್ತಿ, ಅವುಗಳ ವಂಶಾಭಿವೃದ್ಧಿ, ರಕ್ಷಣೆ ಮತ್ತು ಅಹಾರಾನ್ವೇಷಣೆಗೆ ಮಾತ್ರ ಸೀಮಿತ. ಆದರೆ ಮಾನವನಿಗೆ ಅದಕ್ಕಿಂತ ಹೆಚ್ಚಿನ ಶಕ್ತಿಯನ್ನು ಪರಮಾತ್ಮ ಕೊಟ್ಟಿದ್ದಾನೆ. ಹಾಗಾಗಿಯೇ ಮಾನವ ಪ್ರಪಂಚದಲ್ಲಿ ಇಷ್ಟೊಂದು ವೈವಿಧ್ಯತೆ ಮತ್ತು ಬೆಳವಣಿಗೆ, ಮಾನವನ ಉಗಮವಾದಂದಿನಿಂದ ಇಂದಿನವರೆಗಿನ ಇವನ ಬೆಳವಣಿಗೆಯ ಅವಲೋಕನ ಮಾಡಿದರೆ ನಮಗದರ ಅರಿವು ಆಗುತ್ತದೆ. ಹಾಗಾಗಿಯೇ ಬೇರೆಲ್ಲಾ ಪ್ರಾಣಿ, ಪಕ್ಷಿ, ಕೀಟ, ಕ್ರಿಮಿಗಳು ಭೂಮಿಗೆ ಸಮಾನಾಂತರವಾಗಿದ್ದರೆ ಮಾನವ ಮಾತ್ರ ಭೂಮಿಗೆ ಲಂಬವಾಗಿ, ಊರ್ಧ್ವಮುಖನಾಗಿದ್ದಾನೆ.

ತಾನು ಸೃಷ್ಟಿಸಿದ ಜಗತ್ತನ್ನು ನಡೆಸಿಕೊಂಡು ಹೋಗಲು, ಇನ್ನೂ ಹೆಚ್ಚು ಸುಂದರವನ್ನಾಗಿಸಲು, ವಿಶೇಷವಾದ ಬುದ್ಧಿಯನ್ನು ಕೊಟ್ಟು, ತನ್ನ ಕಾರ್ಯವನ್ನು ಸುಲಭಗೊಳಿಸಿಕೊಳ್ಳಲು ಪ್ರಯತ್ನಿಸಿ, ಈ ಮಾನವನನ್ನು ವಿಶೇಷವಾಗಿ ಸೃಷ್ಟಿಸಿರಬೇಕು, ಆ ಪರಮಾತ್ಮ. ಹಾಗಾಗಿ ಅವನಿಗೆ ಆಲೋಚನಾ ಶಕ್ತಿಯೊಂದಿಗೆ ಭಾಷೆಯನ್ನೂ ಕೊಟ್ಟು, ಮಾತನ್ನೂ ಕೊಟ್ಟು, ಪರಮಾತ್ಮ ಇವನ ಮೇಲೆ ಬಹಳ ಕರುಣೆ ತೋರಿದ್ದಾನೆ. ಜ್ಞಾನ, ಸಾಹಿತ್ಯ, ಸಂಗೀತ, ಕಲೆ, ಭಕ್ತಿ ಮುಂತಾದ ಬದುಕಿಗೆ ಸಾರ್ಥಕ್ಯವನ್ನು ನೀಡಲು ಪೂರಕವಾದ ಎಲ್ಲವನ್ನೂ ಕೊಟ್ಟು ಇವನನ್ನು ಅತ್ಯುತ್ತಮವಾಗಿ ಸೃಷ್ಟಿಸಿದ್ದಾನೆ. ನಾಯಿಯೋ, ನರಿಯೋ, ಹಂದಿಯೋ, ಕೋತಿಯೋ ಆಗದೆ ನಾವೆಲ್ಲಾ ಮಾನವಾರಾಗಿ ಹುಟ್ಟಿರುವುದೇ ನಮ್ಮ ಸೌಭಾಗ್ಯ.

ಆದರೆ ವಿಪರ್ಯಾಸವೆಂದರೆ ಕೊಟ್ಟದ್ದು ಅವನಾದರೂ, ನಾವೇ ಗಳಿಸಿದ್ದೇವೆಂಬ ಅಹಂಕಾರದಿಂದ ಅವನು ಕೊಟ್ಟದ್ದನ್ನೆಲ್ಲಾ, ನಮ್ಮ ಸ್ವಾರ್ಥಕ್ಕೆ ಬಳಸುತ್ತಾ, ಒಬ್ಬರು ಮತ್ತೊಬ್ಬರೊಡನೆ ಹೋರಾಡುವ ಮತ್ತು ಕಚ್ಚಾಡುವ

ಪ್ರವೃತ್ತಿಯನ್ನು ಬೆಳೆಸಿಕೊಂಡಿದ್ದೇವೆ. ಎಷ್ಟೊಂದು ಯುದ್ಧಗಳು, ವೈಮನಸ್ಯ, ವೈಷಮ್ಯ ರಕ್ತಪಾತ!! ನಮ್ಮದಲ್ಲದ ಭೂಮಿಗೆ, ಕಡಲಿಗೆ, ಕಿತ್ತಾಟ. ನಮ್ಮ ಕಿಂಚಿತ್ ಪ್ರಯತ್ನವೂ ಇಲ್ಲದೆ, ಆಕಾಶದಿಂದ ಬಿದ್ದ ಮಳೆ ನದಿಯಾಗಿ ಹರಿಯುತ್ತದೆ. ಅದು ಪರಮಾತ್ಮ ನಮಗೆ ಬದುಕಲು ಕೊಟ್ಟ ಬಹುಮಾನ. ಅದನ್ನು ಹಂಚಿಕೊಂಡು ಶಾಂತವಾಗಿ ಬದುಕಲು ಆಗದೆ, ಅದಕ್ಕಾಗಿಯೇ ಕಚ್ಚಾಡುವ ಪ್ರವೃತ್ತಿ ಮತ್ತು ಪ್ರಯತ್ನ ನಮ್ಮದು. ನಮ್ಮ ದುರ್ಬುದ್ಧಿಯಿಂದ, ಯಾವುದು ನಮ್ಮ ಬದುಕಿಗೆ ಪೂರಕವಾಗಬಹುದು ಎಂದು ಪರಮಾತ್ಮ ನಮಗೆ ಕರುಣಿಸಿದ್ದಾನೋ ಅವೆಲ್ಲ ಇಂದು ನಮ್ಮ ಬದುಕಿಗೆ ಮಾರಕವಾಗಿದೆ. ಇದು ವಿಪರ್ಯಾಸವಲ್ಲದೆ ಮತ್ತೇನು?

ಆ ಪರಮಾತ್ಮನೇನೋ ನಮ್ಮನ್ನು ಸೃಷ್ಟಿಯ ಶಿಖರದಂತೆ ಸೃಷ್ಟಿಸಿದ. ನಮ್ಮ ದುರ್ಬುದ್ಧಿ ಮತ್ತು ಅಹಂಕಾರದಿಂದ ಆ ಶಿಖರದ ಮೇಲಿಂದ ಪತನವಾಗಿದ್ದೇವೆ. ಇದರಿಂದ ಮುಕ್ತಿಯುಂಟೋ ಅಥವಾ ವಿನಾಶವೇ ಗತಿಯೋ ನಾವು ಯೋಚನೆಮಾಡಬೇಕಾದ ವಿಷಯ.

**ಮುಕ್ತಕ-326**

**ಸುಮ್ಮನಿರಲೊಲ್ಲದೆ ತನಗೊಡನಾಡಿಯೋರ್ವಳನು ।**
**ನಿರ್ಮಿಸಿ ನಿಜಾಂಶದಿಂ ಮಾಯೆಯೆಂಬುವಳಿಂ ॥**
**ದುಣ್ಮಿದ ಜಗಜ್ಜಾಲಗಳಲಿ ವಿಹರಿಸುತ್ತಿರುವ ।**
**ಬೊಮ್ಮನಾಟವ ಮೆರೆಸೊ - ಮಂಕುತಿಮ್ಮ ॥**

ಸುಮ್ಮನಿರಲೊಲದೆ=ಸುಮ್ಮನೆ+ಇರದು+ಒಲದೆ,

ತನಗೊಡನಾಡಿಯೋರ್ವಳನು ತನಗೆ+ಒಡನಾಡಿ+ಒರ್ವಳನು, ನಿಜಾಂಶದಿಂ=ನಿಜ+ಅಂಶದಿಂ,

ಮಾಯೆಯೆಂಬುವಳಿಂದುಣಿದ=ಮಾಯೆ+ಎಂಬುವಳಿಂದ+ಉದ,

ಜಗಜ್ಜಾಲಗಳಲಿ=ಜಗತ್+ಜಾಲಗಳಲಿ, ವಿಹರಿಸುತಿರುವ=ವಿಹರಿಸುತ+ಇರುವ,

ಬೊಮ್ಮನಾಟವ=ಬೊಮ್ಮನ+ಆಟವ

ತಾನೊಬ್ಬನೇ ಇರಲಾಗದೆಂದು ತನಗೆ ಒಡನಾಡಿ ಬೇಕೆಂದು "ಮಾಯೆ"ಯೆಂಬ ಒಡನಾಡಿಯನ್ನು ಸೃಷ್ಟಿಸಿ, ಅವಳ ಮೂಲಕ ಈ ಜಗಜ್ಜಾಲವನ್ನು ನಿರ್ಮಿಸಿ ಅದರಲ್ಲಿ ತಾನು ವಿಹರಿಸುತ್ತ, ನಡೆಸುತ್ತಿರುವ ಈ ಜಗತ್ತಿನ ನಾಟಕವನ್ನು ಮೆರೆಸೋ' ಚೆನ್ನಾಗಿ ಅನುಭವಿಸಿ, ಅಭಿಮಾನಿಸಿ, ಅಭಿವೃದ್ಧಿಪಡಿಸೋ ಎಂದು ಒಂದು ಆದೇಶವನ್ನು ನೀಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಒಂದು ಬೃಹತ್ ಚೇತನ. ಅದೇ ಪರಮಾತ್ಮ. ಅವನೊಬ್ಬನೇ ಇದ್ದ. ಒಬ್ಬನೇ ಇರಲಾರದೆ ಈ ಜಗತ್ತನ್ನು ಸೃಷ್ಟಿಸಿದ. ಒಂದು ವ್ಯವಸ್ಥೆಯಲ್ಲಿ ನಾನಾ ರೂಪದ ಜಡವಸ್ತುಗಳನ್ನು ಸೃಷ್ಟಿಸಿ ತಾನು ಆ ರೂಪದೊಳಗೆ ಚೇತನವಾಗಿ (ಪ್ರಾಣವಾಗಿ) ಸೇರಿ ತನ್ನ ಜೊತೆಗೆ ಮಾಯೆಯನ್ನು ಸೃಷ್ಟಿಸಿ, ಆ ಮಾಯೆಯ ಮೂಲಕ ಒಂದು ಜಾಲ (network) ಹೆಣೆದು ತಾನು ಆನಂದದಿಂದ ಇದನ್ನೆಲ್ಲಾ ಅನುಭವಿಸುತ್ತಿದ್ದಾನೆ. ಇದೊಂದು ಬ್ರಹ್ಮನಾಡುವ ಬೃಹತ್ ನಾಟಕ, ಜಗನ್ನಾಟಕ, ಅವನು ಈ ನಾಟಕದ ಸೂತ್ರಧಾರಿ. ಈ ನಾಟಕದಲ್ಲಿ ನಾವೆಲ್ಲಾ





ಪಾತ್ರದಾರಿಗಳು. ಹಾಗೆ ಎಲ್ಲದರಲ್ಲೂ ಆ ಪರಮಾತ್ಮನೇ ಚೇತನ ರೂಪದಲ್ಲಿ ಸೇರಿಕೊಂಡು ಅನುಭವಿಸುತ್ತಿದ್ದಾನೆ ಎಂದಾದಮೇಲೆ, ಇಲ್ಲಿ ನಮ್ಮ ಪ್ರಮೆಯವೇನು? ಎಂದರೆ, ಇಲ್ಲಿ 'ನಾನು' ಎನ್ನುವ ಭಾವವೇ ನಾವು. ಆ ಭಾವವನ್ನು ಬಿಟ್ಟರೆ ನಾವಿಲ್ಲ. ಇದನ್ನೇ ಪುರಂದರ ದಾಸರು "ನಾನು ಎಂಬುದ ಬಿಟ್ಟು ಜ್ಞಾನಿಗಳೊಳಗೂಡಿ ಏನೆಲ್ಲಕೆ ದೇವ ಪ್ರೇರಣೆಯೆಂದು" ಎಂದು ಹೇಳಿ ಈ ಜಗತ್ತಿನಲ್ಲಿ ನಡೆವುದೆಲ್ಲವೂ ಆ ದೈವದ ಪ್ರೇರಣೆಯಿಂದ ನಡೆಯುತ್ತದೆ ಎಂದು ಭಾವಿಸಬೇಕೆಂದು ಹೇಳಿದ್ದಾರೆ.

ಈ ಜಗತ್ತಿನಲ್ಲಿ ನಾವು ಅಹಂಕಾರವನ್ನು ಬಿಟ್ಟು ಬಾಳಿದರೆ, ಅದೇ ಒಂದು ದೇವರ ಪೂಜೆಯಿದ್ದಂತೆ. ಎಲ್ಲವೂ ಪರಮಾತ್ಮನಿಂದ ಪರಮಾತ್ಮನಿಗಾಗಿಯೇ ಆಗಿದೆ. ''ತೇನ ತ್ಯಕ್ತೇನ ಭುಂಜೀತಾ" ಎನ್ನುವಂತೆ ನಾವು

ಅನುಭವಿಸುವುದೆಲ್ಲವೂ ಆ ಪರಮಾತ್ಮನ ಪ್ರಸಾದವೆನ್ನುವಂತೆ ಭಾವಿಸಿದರೆ ಆಗ ಅವನ ಸೃಷ್ಟಿಯನ್ನು, ಮಾನ್ಯ ಗುಂಡಪ್ಪನವರ ಆದೇಶದಂತೆ ಮೆರೆಸಬಹುದು. ಆಗ ನಮಗೆ ನಿಜ ಆನಂದದ ಅನುಭವ ಆಗುತ್ತದೆ. ಅಹಂಕಾರವನ್ನು ಬಿಡದಿದ್ದರೆ, ಇಲ್ಲಿರುವುದೆಲ್ಲ ನನಗಾಗಿಯೇ ಸೃಷ್ಟಿಸಲ್ಪಟ್ಟಿದೆ ಎಂದು ಬೀಗುತ್ತಾ ಅನುಭವಿಸಿದರೆ, ತಾತ್ಕಾಲಿಕ ಸುಖವನ್ನು ಅನುಭವಿಸಿದರೂ ದೀರ್ಘ ಕಾಲದಲ್ಲಿ (in the long run) ಖಂಡಿತವಾಗಿ ದುಃಖವನ್ನೇ ಅನುಭವಿಸಬೇಕು. ಇದು ಈ ಜಗತ್ತಿನ ಚರಿತ್ರೆಯಲ್ಲಿ ಹಲವಾರು ಬಾರಿ ನಿರೂಪಿಸಲ್ಪಟ್ಟ ನಿದರ್ಶನವಿದೆ.

ಹಾಗಾಗಿ, ಈ ಜಗತ್ತು ಪರಮಾತ್ಮ ತಾನೇ ಅನುಭವಿಸುವ ಮತ್ತು ತಾನೇ ಆನಂದಿಸುವ ಒಂದು ಬೃಹತ್ ಮೆರವಣಿಗೆ, ಪ್ರತಿಯೊಬ್ಬರ ಬದುಕೂ ಒಂದೊಂದು ಪಲ್ಲಕಿ. ಆ ಪಲ್ಲಕ್ಕಿ ಹೊರುವ ಜೀತದಾಳುಗಳು ನಾವು. ನಮ್ಮ ಬದುಕೇ ನಮಗೆ ಸಿಗುವ ಮತ್ತು ಸಿಕ್ಕಿರುವ ಕೂಲಿ ಅಥವಾ ಭತ್ಯೆ, ಅವನ ವೈಭವವನ್ನು ಮೆರೆಸಬೇಕು. ಅವನ ಆನಂದದಲ್ಲಿ ನಾವು ನಮ್ಮ ಆನಂದವನ್ನು ಕಂಡುಕೊಳ್ಳಬೇಕು.

**ಮುಕ್ತಕ-327**

**ಜೀವಿಸಂಘವಿದೇನು? ಗಂಜೀಫಿನೆಲೆಕಟ್ಟು ।**
**ದೈವ ಪೌರುಷ ಪೂರ್ವವಾಸನೆಗಳೆಂಬಾ ॥**
**ಮೂವರದನಾಡುವರು, ಚದಿರಿಸುತೆ, ಬೆರೆಸಿಡುತೆ ।**
**ನಾವೆಲ್ಲರಾಟದೆಲೆ - ಮಂಕುತಿಮ್ಮ ॥**

ಜೀವಿಸಂಘವಿದೇನು?=ಜೀವಿ+ಸಂಘವು+ಇದೇನು, ಗಂಜೀಫಿನೆಲೆಕಟ್ಟು-ಗಂಜೀಫಿನ+ಎಲೆಕಟ್ಟು,
ಪೂರ್ವವಾಸನೆಗಳೆಂಬಾ=ಪೂರ್ವ+ವಾಸನೆಗಳು+ಎಂಬ,
ಮೂವರದನಾಡುವರು=ಮೂವರು+ಅದನು+ಆಡುವರು, ಬೆರೆಸಿಡುತೆ=ಬೆರೆಸಿ+ಇಡುತೆ,
ನಾವೆಲ್ಲರಾಟದಲೆ=ನಾವೆಲ್ಲರ+ಆಟದೆಲೆ,

ಗಂಜೀಫಿನ ಎಲೆ=ಬಣ್ಣಬಣ್ಣದ ಚಿತ್ರಗಳನ್ನು ಬರೆದ ಆಟದ ಎಲೆಗಳು.

ಮಾನವನ ಬದುಕನ್ನು ವಿಶ್ಲೇಷಣೆ ಮಾಡುತ್ತಾ, ಜೀವಿಗಳ ಬದುಕು ಗಂಜೀಫಾ ಎಲೆಗಳ ಆಟದಂತೆ ಇದೆ. ಇದನ್ನು ಆಡುವವರು ದೈವ, ನಮ್ಮ ಪೂರ್ವಕರ್ಮ ಮತ್ತು ನಮ್ಮ ಪ್ರಯತ್ನ. ನಾವೆಲ್ಲಾ ಈ ಗಂಜೀಫಿನ ಎಲೆಗಳಂತೆ. ನಮ್ಮನ್ನು ಈ ಮೂವರು ಆಟಗಾರರು ಬೆರೆಸುತ್ತ, ಚದುರಿಸುತ್ತಾ, ಮತ್ತೆ ಬೆರೆಸುತ್ತ ಆಡುತ್ತಾರೆ,ಎಂದು ಹೇಳುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ ಬದುಕಿಗಾರ್ ನಾಯಕರು ಎಂದು 7 ನೇ ಮುಕ್ತಕದಲ್ಲಿ
ಕೇಳುವಂತೆ.

ಗಂಜೀಫಾ ಎಲೆಗಳೆಂದರೆ ವರ್ತುಲಾಕಾರದಲ್ಲಿ ತಯಾರಿಸಿ ಅವುಗಳಿಗೆ ಬಣ್ಣ ಬಣ್ಣದ ಚಿತ್ತಾರ ಮತ್ತು ಚಿತ್ರಗಳನ್ನು ವಿನ್ಯಾಸಗೊಳಿಸಿ ಒಂದು ರೀತಿಯ ಇಸ್ಪೀಟಾಟಕ್ಕೆ ಬಳಸುವ ಎಲೆಗಳು, ನಾವೆಲ್ಲಾ ಅಂತ ಚಿತ್ರ ವಿಚಿತ್ರವಾಗಿ ವಿನ್ಯಾಸಗೊಂಡ ಗಂಜೀಫಾ ಎಲೆಗಳಂತೆ. ಈ ಜೀವನವೇ ಒಂದು ಗಂಜೀಫದಾಟ. ಅದನ್ನು ಆಡುವವರು ನಮ್ಮ ಪೂರ್ವಕರ್ಮ, ನಮ್ಮ ಇಂದಿನ ಪ್ರಯತ್ನ ಮತ್ತು ದೈವ, ಎನ್ನುವುದು ಈ ಮುಕ್ತಕದ ಹೂರಣ.

ನಾವು ಎಲ್ಲಿ ಹುಟ್ಟ ಬೇಕು ಎಂದು ನಿರ್ಧರಿಸುವ ಅಧಿಕಾರ ನಮಗಿಲ್ಲ. ಜೀವಿ ತಾನು ಎಲ್ಲಿ ಹೇಗೆ ಹುಟ್ಟಬೇಕು ಎಂದು ತಾನೇ ನಿರ್ಧರಿಸುತ್ತದೆ ಎಂದು ವೇದಾಂತ ಹೇಳುತ್ತದೆ. ಆದರೆ ನಮಗದು ಗೊತ್ತಿಲ್ಲ. ಎಲ್ಲೋ ಹುಟ್ಟುತ್ತೇವೆ. ಜೀವನದಲ್ಲಿ ನಮ್ಮನ್ನು ಯಾರೋ ಸೇರುತ್ತಾರೆ, ಯಾರೋ ಬಿಟ್ಟು ಹೋಗುತ್ತಾರೆ. ಯಾವುದೋ ವಸ್ತು ನಾವು ಆಸೆ ಪಡದಿದ್ದರೂ ನಮಗೆ ಸಿಗುತ್ತದೆ, ಹಾಗೆಯೇ ನಾವು ಪ್ರಾಮಾಣಿಕವಾಗಿ ಪ್ರಯತ್ನಪಟ್ಟರೂ ಬಯಸಿದ ವಸ್ತು ಸಿಗದೇ ಹೋಗಬಹುದು. ಹೀಗೆ ಈ ಸೇರುವಿಕೆ, ಅಗಲುವಿಕೆ, ಪಡೆಯುವಿಕೆ, ಕಳಕೊಳ್ಳುವಿಕೆ ಎಲ್ಲವೂ ನಮ್ಮ ಪೂರ್ವಕರ್ಮ, ನಮ್ಮ ಇಂದಿನ ಪ್ರಯತ್ನ ಮತ್ತು ದೈವ, ಇವುಗಳ ಬಲದಿಂದ ಆಗುತ್ತದೆ.

ಯಾವುದರ ಬಲಾಧಿಕ್ಯವಿರುತ್ತದೋ ಅದರಂತೆ ನಮಗೆ ಫಲ ಸಿಗುತ್ತದೆ. ನಮ್ಮ ಪೂರ್ವಕರ್ಮ ಸರಿಯಿಲ್ಲದಿದ್ದರೆ, ನಮ್ಮ ಇಂದಿನ ಪ್ರಯತ್ನ ಮತ್ತು ದೈವಾನುಗ್ರಹದಿಂದ ಅದನ್ನು ಸರಿಪಡಿಸಿಕೊಳ್ಳಬಹುದು. ಆ ರೀತಿಯ ಪ್ರಯತ್ನ ಪಡಲು ನಮಗೆ ಶಕ್ತಿ ಇಲ್ಲವೆಂದುಕೊಂಡರೆ, ದೈವಕ್ಕೆ ಮೊರೆಹೋಗಿ ದೈವ ಬಲದಿಂದಲೇ ಜೀವನವನ್ನು ಗೆಲ್ಲಬೇಕು. ನಮ್ಮ ಪ್ರಯತ್ನ ಮತ್ತು ದೈವಾನುಗ್ರಹದ ಬಲ ಇಲ್ಲದೆ ಹೋದರೆ, ಬದಲಾಗಲಾರದ ಪೂರ್ವ ಕರ್ಮವನ್ನು ಅನುಭವಿಸುತ್ತಾ ಬದುಕನ್ನು ದೂಡಬೇಕು.

ನಮ್ಮ ಪೂರ್ವ ಕರ್ಮ ಉತ್ತಮವಾಗಿದ್ದರೆ ನಮ್ಮ ಸಾಧಾರಣ ಪ್ರಯತ್ನ ಮತ್ತು ದೈವ ಬಲದಿಂದ ಜೀವನದ ಆಟ ಸುಗಮವಾಗಿರುತ್ತದೆ. ಇಲ್ಲದಿದ್ದರೆ ಇಲ್ಲ. ಹೀಗೆ ನಮ್ಮ ಬದುಕು ಈ ಮೂವರ ಬಲದಿಂದಲೇ ನಡೆಯಬೇಕು. ನಮ್ಮ ಇಂದಿನ 'ಸತ್' ಪ್ರಯತ್ನದಿಂದ ದೈವಕ್ಕೆ ಶರಣಾಗಿ ಪೂರ್ವಕರ್ಮವನ್ನು ಅಳಿಸಿಹಾಕುವುದೋ ಅಥವಾ ಉತ್ತಮಗೊಳಿಸಿಕೊಳ್ಳುವುದೋ ಮಾಡಿದರೆ ಬದುಕು ಉತ್ತಮವಾಗುತ್ತದೆ. ಆ ಮೂವರಾಡುವ ಆಟವೂ ಚೆನ್ನಾಗಿರುತ್ತದೆ.





**ಮುಕ್ತಕ-328**

**ಎಲೆಕಟ್ಟನಾಗಾಗ ಕಲಸಿಕೊಡುವುದೆ ಸೃಷ್ಟಿ |**
**ಬಳಿಕೆಲೆಯ ಗತಿಯೆಂತೊ ಎಲ್ಲಿ ಸೇರುವುದೋ ||**
**ಬಳಸುತಿಹುದೊಂದೊಂದುಮೊಂದೊಂದು ದಿಕ್ಕಿನಲ್ಲಿ |**
**ಅಲೆಯುವೆವು ನಾವಂತು – ಮಂಕುತಿಮ್ಮ ||**

ಎಲೆಕಟ್ಟನಾಗಾಗ=ಎಲೆ+ಕಟ್ಟನು+ಆಗಾಗ, ಬಳಿಕೆಲೆಯ=ಬಳಿಕ+ಎಲೆಯ, ಗತಿಯೆಂತೊ=ಗತಿಯು+ಎಂತೊ, ಬಳಸುತಿಹುದೊಂದೊಂದುಮೊಂದೊಂದು=ಬಳಸುತ+ಇಹುದು+ಒಂದೊಂದುಂ+ಒಂದೊಂದು,
ನಾವಂತು=ನಾವು+ಅಂತು.
ಎಲೆಕಟ್ಟಿನಾಟ=ಇಸ್ಪೀಟಾಟ, ಬಳಸುತ=ಉಪಯೋಗಿಸುತ್ತ, ಅಲೆಯುವೆವು=ಸುತ್ತುವೆವು.

ಜಗತ್ತಿನಲ್ಲಿ ಜನರ ಬದುಕಿನ ಪರಿಯನ್ನು ವಿವರಿಸುವ ಈ ಇಸ್ಪೀಟಾಟದ ಉದಾಹರಣೆಯನ್ನು, ಮಾನ್ಯ ಗುಂಡಪ್ಪನವರು ಹಿಂದಿನ ಮುಕ್ತಕಗಳಲ್ಲೂ ಉಲ್ಲೇಖಮಾಡಿದ್ದಾರೆ. ಇಸ್ಪೀಟಿನ ಆಟದಲ್ಲಿ ಎಲೆಗಳನ್ನು ಕಲೆಸಿದ ನಂತರ ಯಾವ ಎಲೆ ಯಾವ ದಿಕ್ಕಿನಲ್ಲಿ ಹೋಗುವುದೋ ಗೊತ್ತಿಲ್ಲದಂತೆ ಹಂಚಿ ನಾನಾ ದಿಕ್ಕುಗಳಿಗೆ ಎಸೆಯಲ್ಪಟ್ಟು ಎಲ್ಲಿ

ಸೇರುವುದೋ ಎಂಬಂತೆ, ವಿಧಿಯಾಟದಿಂದ ಕಲಸಲ್ಪಟ್ಟು, ಹಂಚಲ್ಪಟ್ಟು ನಾನಾ ದಿಕ್ಕುಗಳಿಗೆ ಎಸೆಯಲ್ಪಟ್ಟು ದಿಕ್ಕಾಪಾಲಾಗಿ ಅಲೆಯುವುದೇ ನಮ್ಮ ಬದುಕೂ ಸಹ ಎಂದು ಬದುಕಿನ ಒಂದು ಸತ್ಯವನ್ನು ನಮ್ಮ ಮುಂದಿಟ್ಟಿದ್ದಾರೆ ಶ್ರೀ ಗುಂಡಪ್ಪನವರು.

ನಮ್ಮ ಪ್ರಮೇಯವೇ ಇಲ್ಲದೆ ಯಾರಲ್ಲೋ ಹುಟ್ಟಿ, ಬೆಳೆದು, ಹುಟ್ಟೂರ ತೊರೆದು ಎಲ್ಲೆಲ್ಲೋ ಅಲೆದು ಮತ್ತಾರದೋ ಸಂಗವ ಮಾಡಿ ಮತ್ತೆಲ್ಲಿಗೆಲ್ಲಿಗೋ ಹೋಗುವುದೇ ಈ ಜಗತ್ತಿನಲ್ಲಿ ನಮ್ಮ ಪಾಡು. ಎಷ್ಟು ವ್ಯಕ್ತಿಗಳು ನಮ್ಮನ್ನು ಸೇರುತ್ತಾರೆ, ನಾವು ಯಾರದೋ ಸಂಗವನ್ನು ಮಾಡುತ್ತೇವೆ. ಸ್ನೇಹಿತರು ಮತ್ತು ಬಂಧುಗಳ ಸಂಪರ್ಕ, ಸಂಬಂಧಗಳ ವೃತ್ತ ಬದಲಾಗುತ್ತಲೇ ಇರುತ್ತದೆ, 'ಕೆಲಿಡೋಸ್ಕೋಪ್' ನಲ್ಲಿ ಮೂಡುವ ಚಿತ್ತಾರಗಳಂತೆ. ಯಾವುದಾವುದೋ ವಿಷಯಗಳನ್ನು ಕಲಿಯುತ್ತೇವೆ, ಕೆಲವನ್ನು ಬಿಡುತ್ತಾ, ಮತ್ತೇನನ್ನೋ ಕಲಿಯುತ್ತೇವೆ. ಹೀಗೆ ನಮ್ಮ ಜೀವನ ಕಲೆಯುವಿಕೆ ಮತ್ತು ಅಗಲುವಿಕೆಯ ನಿರಂತರ ಪ್ರವಾಹ, ನಾವು ಈ ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗುತ್ತಿದ್ದೇವೆ. ಒಂದು ಸ್ಥಳದಲ್ಲಿ ಹುಟ್ಟಿ ಅಲ್ಲೇ ಬೆಳೆದು ಅಲ್ಲೇ ಜೀವನ ಸಾಗಿಸಿ ಅಲ್ಲೇ ಅಂತ್ಯಗೊಳ್ಳುವ ವ್ಯಕ್ತಿಗಳನ್ನೂ ನಾವು ನೋಡಿದ್ದೇವೆ. ಪ್ರಸಕ್ತ ಸಾಮಾಜಿಕ ಜೀವನ ಶೈಲಿಯಲ್ಲಿ ಅಂತಹವರು ಬಹಳ ವಿರಳ.

ನಾವು ಮಾಡುವ ಕೆಲಸಗಳೂ ಸಹ ಹಲವಿಧವಾಗಿರುತ್ತದೆ. ಯಾವುದೋ ಒಂದನ್ನು ಮಾಡುತ್ತಿರುತ್ತೇವೆ, ಮತ್ತೆ ಅದನ್ನು ತೊರೆದು ಬೇರೇನನ್ನೋ ಹಿಡಿದುಕೊಳ್ಳುತ್ತೇವೆ. ಜೀವನದಲ್ಲಿ ಬೇರೆ ಬೇರೆ ಸಮಯದಲ್ಲಿ ಬೇರೆ ಬೇರೆ ಕೆಲಸಗಳನ್ನು ಮಾಡುವಂತೆಯೇ ಒಂದೇ ದಿನದಲ್ಲಿ ನಾವು ಹತ್ತು ಹಲವಾರು ಕೆಲಸಗಳನ್ನು ಮಾಡುತ್ತೇವೆ. ಕೆಲವನ್ನು ಇಷ್ಟಪಟ್ಟು, ಕೆಲವನ್ನು ಅನಿವಾರ್ಯವಾಗಿ ಮಾಡುತ್ತೇವೆ. ಕೆಲವರು ಜೀವನದುದ್ದಕ್ಕೂ ಒಂದೇ ರೀತಿಯ ಕೆಲಸಮಾಡುತ್ತಿರುತ್ತಾರೆ. ಮತ್ತೆ ಕೆಲವರು ತಮ್ಮ ಕೆಲಸವನ್ನು ಬದಲಾಯಿಸುತ್ತಾ ಇರುತ್ತಾರೆ. ಕೆಲಸ ಬದಲಾದರೆ ಊರು, ಸಾಂಗತ್ಯ, ಬಂಧುತ್ವದ ವೃತ್ತವೂ ಬದಲಾಗುತ್ತಾ ಹೋಗಬಹುದು. ಹೀಗೆ ನಮ್ಮ

ಬದುಕಿನಲ್ಲಿ ನಮಗರಿಲ್ಲದಂತೆಯೇ ಬರುವ ಬದಲಾವಣೆಯ ಪ್ರವಾಹವನ್ನೇ ಮಾನ್ಯ ಗುಂಡಪ್ಪನವರು 'ಒಂದೊಂದು ದಿಕ್ಕಿನಲ್ಲಿ ಅಲೆಯುವೆವು ನಾವಂತು' ಎಂದಿದ್ದಾರೆ ಈ ಮುಕ್ತಕದಲ್ಲಿ.

ವಾಚಕರೆ ಇದೇ ಬದುಕು. ಇದು ಬಿಟ್ಟರೆ ಬೇರೆ ಗತಿಯಿಲ್ಲ. ಚಿಂತೆ ಮಾಡದೆ ಬದುಕು ಹೇಗೆ ಬಂದರೆ ಹಾಗೆ ಅಥವಾ ಜೀವನ ನಮ್ಮನ್ನು ಹೇಗೆ ಆಡಿಸಿದರೆ ಹಾಗೆ ಆಡಬೇಕು. ಹಾಗೆ ಆಡುವಾಗ ಬಂದದ್ದನ್ನು ಸಹಜತೆಯಿಂದ ಒಪ್ಪಿಕೊಂಡು ಸಂತೋಷದಿಂದ ಮತ್ತು ತೃಪ್ತಿಯಿಂದ ಬದುಕಿನಾಟ ಸಾಗಿಸಿದರೆ ಹಿತ.

# ನೇತ್ರದಂದದೆ ನೋಟ 329-333

**ಮುಕ್ತಕ-329**

**ನಿಲದೆ ನಡೆವುದು ಮೊದಲು ಕೊನೆಯಿಲ್ಲದೀಯಾಟ ।**
**ಕಳೆವುದದರಲಿ ನಮ್ಮ ಜನುಮಜನುಮಗಳು ॥**
**ಗೆಲುವಾರ್ಗೋ! ಸೋಲಾರ್ಗೋ! ಲೆಕ್ಕನೋಡುವುದೆಂದೋ ।**
**ಫಲವು ಬರಿಯಾಟವೆ ಮಂಕುತಿಮ್ಮ. ॥**

ಕೊನೆಯಿಲ್ಲದೀಯಾಟ=ಕೊನೆ+ಇಲ್ಲದ+ಈ+ಆಟ, ಕಳೆವುದದರಲಿ=ಕಳೆವುದು+ಇದರಲಿ,
ಗೆಲುವಾರ್ಗೋ=ಗೆಲುವು+ಯಾರಿಗೋ, ಸೋಲಾರ್ಗೋ=ಸೋಲು+ಯಾರಿಗೋ,
ಲೆಕ್ಕನೋಡುವುದೆಂದೋ=ಲೆಕ್ಕ+ನೋಡುವುದು+ಎಂದೋ, ಬರಿಯಾಟವೆಲೊ=ಬರಿಯೆ+ಆಟವು+ಎಲೊ

ನಿರಂತರವಾಗಿ ನಡೆಯುವುದು ಜನ್ಮ ಜನ್ಮಾಂತರದ ಬದುಕಿನ ಆಟ. ಈ ಆಟದಲ್ಲಿ ಗೆದ್ದವರು ಯಾರೋ, ಸೋತವರು ಯಾರೋ ಎಂದು ಲೆಕ್ಕವನ್ನು ನೋಡುವುದು ಯಾವ ಕಾಲಕ್ಕೂ ಎಂದು ಯಾರಿಗೂ ಅರಿವಿಲ್ಲ. ಆದ್ದರಿಂದ ನಮ್ಮ ಬದುಕಿಗೆ ಫಲವೆಂದರೆ, ಬರೀ ಬಾಳಿನಾಟ ಅಡುವುದಷ್ಟೇ ಅಲ್ಲದೆ ಬೇರೇನೂ ಅಲ್ಲ ಎಂದು ಬದುಕಿನ ಲೆಕ್ಕಾಚಾರಗಳ ಮತ್ತು ಫಲಾಫಲಗಳ ವಿಚಾರವನ್ನು ಮಂಡಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಒಂದು ಆತ್ಮ ಹುಟ್ಟಿತು ಎಂದರೆ ಯಾವುದಾದರೂ ಒಂದು ದೇಹವನ್ನು ಧಾರಣೆ ಮಾಡಿತು ಎಂದು ಅರ್ಥ. ಹಾಗೆ ಆತ್ಮ ಮೊದಲ ಬಾರಿಗೆ ಎಂದು ದೇಹದಾರಣೆ ಮಾಡಿತು ಮತ್ತು ಯಾವ ದೇಹವನ್ನು ಧಾರಣೆ ಮಾಡಿತು ಎಂದು ಅರಿತುಕೊಳ್ಳುವುದು ಅಸಾಧ್ಯ. ನಮ್ಮ ಬದುಕಿನ ಆಟದ ಮೊದಲನ್ನಾಗಲೀ, ಕೊನೆಯನ್ನಾಗಲೀ ಅರಿಯುವುದು ಅಸಾಧ್ಯ. ಇದೊಂದು ನಿರಂತರ ಪ್ರಯಾಣ. ನಾವು ಬೇರೆ ಬೇರೆ ಊರುಗಳಿಗೆ ಹೋಗಲು ಬೇರೆ ಬೇರೆ ಬಸ್ಸು ಅಥವಾ ವಾಹನಗಳನ್ನು ಏರುವಂತೆ ಬೇರೆ ಬೇರೆ ಬದುಕಿಗೆ ಬೇರೆ ಬೇರೆ ದೇಹಗಳು. ಆಯಾಯಾ ದೇಹಗಳಲ್ಲಿ ಒಂದು ಬದುಕು. ಹುಟ್ಟಿನಿಂದ ಸಾವಿನವರೆಗೆ ಒಂದು ಬದುಕಿನಾಟ. ಈ ಆಟದಲ್ಲಿ ಹಲವು ಬಾರಿ ಗೆದ್ದು ಹಲವು ಬಾರಿ ಸೋತು, ಮತ್ತೆ ಕೆಲವು ಬಾರಿ ಬಿದ್ದು ಮತ್ತೆ ಎದ್ದು ಕಡೆಗೆ ಒಂದು ದಿನ





ಅಂತ್ಯಗೊಳಿಸುವ ಆಟವೇ ನಮ್ಮ ಜೀವನ. ಈ ಜೀವನದಲ್ಲಿ ಬಿದ್ದದ್ದು ಎಷ್ಟು ಬಾರಿ, ಎದ್ದದ್ದು ಎಷ್ಟು ಬಾರಿ, ಗೆದ್ದದ್ದು ಎಷ್ಟು ಬಾರಿ, ಸೋತದ್ದು ಎಷ್ಟು ಬಾರಿ ಎಂದು ಲೆಕ್ಕ ತಾಳೆ ಮಾಡಿ ನೋಡುವುದು ಎಂದೋ ಎನ್ನುವುದೇ ಒಂದು ಪ್ರಶ್ನೆ, ಉತ್ತರವೇ ಸಿಗದ ಪ್ರಶ್ನೆ.

ಕೆಲವು ಬಾರಿ ನಮಗೆ ಏನನ್ನೋ ಗೆದ್ದ ಭಾವ. ಏನನ್ನೋ ಸಾಧಿಸಿದ್ದೇವೆಂಬ ಬೀಗು. ಆದರೆ ಸ್ವಾರ್ಥವಿಲ್ಲದೆ ಪರಹಿತಕ್ಕೆ ಮಾಡಿದ ಕೆಲಸದಲ್ಲಿ ಅನ್ಯರ ನೋವನ್ನು ಸಂಕಷ್ಟವನ್ನು ನೀಗಲಾದರೆ ಅದು ಗೆಲವು. ಅದಲ್ಲದೆ ಸ್ವಾರ್ಥಕ್ಕೆ ಅಥವಾ ಸ್ವಾರ್ಥ ಭಾವದಿಂದ ಏನೇನನ್ನು ಸಾಧಿಸಿದರೂ ಅದರ ಫಲ ತಾತ್ಕಾಲಿಕ ಸಂತೋಷವನ್ನೇ ನೀಡಿದರೂ, ಆ ಸಂತೋಷ ಸದಾ ಕಾಲಕ್ಕೆ ನಿಲ್ಲಲಾರದು.

ಆದರೆ ಬದುಕಿನಲ್ಲಿ ನಾವು ಗೆದ್ದೆವೋ ಅಥವಾ ಸೋತೆವೋ ಎಂದು ಒಂದು ಆತ್ಮಾವಲೋಕನ ಮಾಡಿಕೊಳ್ಳಬಹುದು. ಹಾಗೆ ಮಾಡಿಕೊಳ್ಳುವ ಮೊದಲು ಗೆಲುವೆಂದರೇನು? ಮತ್ತು ಸೋಲೆಂದರೇನು? ಎನ್ನುವ

ವಿಷಯ ಇತ್ಯರ್ಥ ಮಾಡಿಕೊಳ್ಳಬೇಕು. ಶುದ್ಧವಾಗಿ ಬದುಕಿದರೆ, ಬಡತನದಲ್ಲಿದ್ದರೂ ಸ್ವಾರ್ಥವಿಲ್ಲದೆ ನಾಲ್ಕು ಜನರಿಗೆ ಉಪಯೋಗವಾಗುವಂತೆ ಬದುಕಿದರೆ ಗೆಲುವು ಎನ್ನಬಹುದು. ಮಾನ್ಯ ಗುಂಡಪ್ಪನವರ ಬದುಕೇ ಇದಕ್ಕೆ ಸಾಕ್ಷಿಯಾಗಿ ನಿಲ್ಲಬಹುದು. ಹಾಗಲ್ಲದೆ ಸ್ವಾರ್ಥದಿಂದ, ಲೋಭಿಯಾಗಿ, ಪರಪೀಡನೆಯನ್ನು ಮಾಡುತ್ತಾ, ಅಹಂಕಾರದಿಂದ ಬಾಳಿ ನಾಲ್ಕು ಜನಕ್ಕೆ ನಿಷ್ಪ್ರಯೋಜಕ ಬದುಕು ಬಾಳಿದರೆ, ಅದು ಸೋಲು ಎನ್ನಬಹುದು. ಆದರೆ ಇಂದಿನ ಪ್ರಸಕ್ತ ಸಾಮಾಜಿಕ ಬದುಕಿನಲ್ಲಿ ಮೊದಲನೇ ಗುಂಪಿಗೆ ಸೇರಿದ ಜನರನ್ನು ಸೋತವರೆಂದು ಪರಿಗಣಿಸಿ ಕಡೆಗಣಿಸಲಾಗುತ್ತದೆ ಮತ್ತು ಎರಡನೇ ಗುಂಪಿಗೆ ಸೇರಿದವರನ್ನು ಗೆಲುವು ಸಾಧಿಸಿದವರೆಂದೂ ಪರಿಗಣಿಸಿ ಹಿಂಬಾಲಿಸಲಾಗುತ್ತದೆ. ಇದೇ ವಿಪರ್ಯಾಸ. ಇದನ್ನು ಕೊಂಚ ನಮ್ಮೊಳಗೇ ವಿಮರ್ಶಿಸಬೇಕಾದ ವಿಚಾರವಲ್ಲವೇ?

**ಮುಕ್ತಕ-330**

**ಆಟಕ್ಕೆ ಫಲವೇನು? ಕೌತುಕದ ರುಚಿಯೆ ಫಲ |**
**ಚೀಟಿ ತಾಂ ಬೀಳನೆನಲ್ ಆಟ ಸಾಗುವುದೆ? ||**
**ಏಟಾಯ್ತೆ ಗೆಲುವಾಯ್ತೆದೆಂದು ಕೇಳುವುದದೇನು |**
**ಆಟದೋಟವೆ ಲಾಭ-ಮಂಕುತಿಮ್ಮ ||**

ಫಲವೇನು=ಫಲವು+ಏನು, ಬೀಳನೆನಲ್=ಬೀಳೆನು+ಎನಲ್, ಏಟಾಯ್ತೆ=ಏಟು+ಆಯ್ತೆ,
ಗೆಲುವಾಯ್ತೆದೆಂದು=ಗೆಲುವು+ಆಯ್ತೆ+ಎಂದು, ಕೇಳುವುದದೇನು=ಕೇಳುವುದು+ಅದೇನು,
ಆಟದೋಟವೆ=ಆಟದ+ಓಟವೆ.
ಕೌತುಕ=ಕುತೂಹಲ, ಚೀಟಿ=ಇಸ್ಪೀಟಿನ ಎಲೆ.

ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ ಮತ್ತೆ ಇಸ್ಪೀಟಿನ ಆಟದ ಉದಾಹರಣೆಯನ್ನು ನೀಡಿ, ನಮ್ಮ ಬಾಳಿನ ಆಟವೂ ಅದೇ ರೀತಿ ಎಂದು ಹೇಳುತ್ತಾರೆ. ಇಸ್ಪೀಟಿನ ಆಟದಲ್ಲಿ ಸರಿಯಾದ ಎಲೆ ಬಿದ್ದರೆ ಆಟ

ಮುಂದುವರೆಯುವುದು. ಹಾಗಾಗಿ, ಇಲ್ಲಿ ಗೆದ್ದೆವೋ, ಸೋತೆವೋ ಎಂದು ಕೇಳುವುದದೇನು, ಆಟವಾಡಿದ್ದಷ್ಟೇ ಲಾಭವಲ್ಲವೇ? ಹಾಗೆಯೇ ಜೀವನದಾಟದಲ್ಲಿ ಏಟಾಯ್ತೆ ಗೆಲುವಾಯ್ತುಂದೆಂದು ಕೇಳುವುದದೇನು ಎಂದು ಹೇಳುತ್ತಾ, ಇಲ್ಲಿ ಬದುಕಿದ್ದೆ ಲಾಭವೆಂದು ಹೇಳುತ್ತಾರೆ ಶ್ರೀ ಗುಂಡಪ್ಪನವರು.

ನಮ್ಮೆಲ್ಲರ ಬದುಕೂ ಅಷ್ಟೇ, ಅಲ್ಲವೇ? ನಾವೂ ಸಹ ಬದುಕುತ್ತೇವೆ. ಏನಾದರೂ ಕೆಲಸ ಮಾಡುತ್ತಲೇ ಇರುತ್ತೇವೆ. ಸುಮ್ಮನೆ ಇರಲು ಸಾಧ್ಯವೇ ಇಲ್ಲ. ಬದುಕಿನಾಟ ಆಡುತ್ತಲೇ ಇರಬೇಕು. ಬದುಕಿನಲ್ಲಿ ಏನೋ ಮಾಡಬೇಕೆಂಬ ಅಪೇಕ್ಷೆ. ಹಾಗೆ ಮಾಡುವುದರಿಂದ ಏನೋ ಸಿಗುತ್ತದೆಂಬ ಅಪೇಕ್ಷೆ. ಅಪೇಕ್ಷಿಸಿದ್ದು ಸಿಕ್ಕರೆ ನಮಗೆ ಸುಖವೆಂದು ಭಾವನೆ, ಸಿಗದಿದ್ದರೆ ದುಃಖ. ಮತ್ತೆ ಬೇರೇನೋ ಅಪೇಕ್ಷೆ. ಹೇಗೆ ಇಸ್ಪೀಟಿನಾಟದಲ್ಲಿ ಮತ್ತೊಂದು ಒಳ್ಳೆಯ ಎಲೆಗೆ ಕಾಯುತ್ತೇವೆಯೋ, ಆಟ ಮಾಡಿಯೇ ಬಿಡುತ್ತೇವೆಂದು ಬೀಗುತ್ತೇವೆಯೋ, ಹಾಗೆಯೇ ಬದುಕಿನಲ್ಲೂ ನಾಳೆಯ ದಿನ ಚೆನ್ನಿರಬಹುದು ಎಂಬ ಆಶಾಭಾವನೆಯಲ್ಲೇ ಕಳೆಯುತ್ತೇವೆ. ನಮಗೆ ಜಯ ಸಿಗುತ್ತದೋ ಇಲ್ಲವೋ ಅದು ಬೇರೆ ವಿಚಾರ. ಅದರ ಲೆಕ್ಕಾಚಾರ ಮಾಡಲು ಸಾಧ್ಯವಿಲ್ಲ.

ನಾವೆಲ್ಲರೂ ಬದುಕುತ್ತೇವೆ. ನೋವು ನಲಿವುಗಳ ನಡುವೆ, ಜಯ-ಅಪಜಯಗಳ, ಪ್ರೇಮ ಪ್ರೀತಿಗಳ ನಡುವೆ, ದ್ವೇಷ-ಅಸೂಯೆಗಳ, ಸ್ವಾರ್ಥ-ಸ್ವಾಭಿಮಾನಗಳ, ಸಂಗ-ಸಾಂಗತ್ಯಗಳ ನಡುವೆ ದಿನಗಳನ್ನು ದೂಡುತ್ತಾ ಬದುಕುತ್ತೇವೆ. ಹಾಗೆ ಇಲ್ಲಿ ಯಾವ ಪ್ರಯೋಜನಗಳ ಲೆಕ್ಕವು ಸಿಗದಿದ್ದರೂ, ಸೋಲು ಗೆಲುವುಗಳ ಲೆಕ್ಕ ಸಿಗದಿದ್ದರೂ ಬದುಕುತ್ತೇವೆ. ಕೊನೆಗೊಂದು ದಿನ ನಮ್ಮ ಈ ಜೀವನ ಮುಕ್ತಾಯಗೊಳ್ಳುತ್ತದೆ. ನಡುವೆ ನಾವು ನಡೆಸಿದ ಬದುಕು ಮಾತ್ರ ನಮಗೆ ಸಂದ ಪ್ರಯೋಜನವೆನ್ನಬಹುದು. ಇದನ್ನೇ ಮಾನ್ಯ ಗುಂಡಪ್ಪನವರು "ಆಟದೋಟವೆ ಲಾಭ' ಎಂದಿದ್ದಾರೆ.

ಆದ್ದರಿಂದ ಬದುಕಬೇಕು, ಬದುಕಿನಾಟವ ಆಡುತ್ತಲೇ ಇರಬೇಕು. ಗೆದ್ದೆವೋ ಸೋತೆವೋ ಎಂದು ಲೆಕ್ಕಾಚಾರ ಮಾಡದೆ ತೃಪ್ತಿಯಿಂದ ಬದುಕಿದರೆ ಶಾಂತ ಜೀವನ ಮಾಡಬಹುದು.

**ಮುಕ್ತಕ-331** ಸತ್ಯ ಶಿವ ಸುಂದರದ ಸಚ್ಚಿದಾನಂದನದ।
ಭಿತ್ತಿಯಲಿ ಬಣ್ಣಬಣ್ಣದ ಜೀವಚಿತ್ರ ॥
ನಿತ್ಯ ನೀನದ ನೆನೆದು ಚಿತ್ರದಲ್ಲಿ ಮನವಿರಿಸೆ।
ವೃತ್ತಿ ತನ್ಮಯವಹುದೊ – ಮಂಕುತಿಮ್ಮ ॥

ಸಚ್ಚಿದಾನಂದನದ=ಸತ್+ಚಿತ್+ಆನಂದನದ, ನೀನದ=ನೀನು+ಅದ, ಮನವಿರಿಸೆ=ಮನವ+ಇರಿಸೆ,
ತನ್ಮಯವಹುದೊ=ತನ್ಮಯವು+ಅಹುದೊ.
ಶಿವ=ಶುಭ, ಬಿತ್ತಿಯಲಿ+ಪಟದಲಿ, ಮನವಿರಿಸೆ=ತನ್ಮಯನಾದರೆ, ವೃತ್ತಿ=ಕಾಯಕ.

ಜಗತ್ತಿನ ಸೃಷ್ಟಿಯ ಚಿತ್ರ, ಸತ್ಯವಾಗಿಯೂ ಮಂಗಳಕರವಾಗಿಯೂ,ಸುಂದರವಾಗಿಯೂ ಇದ್ದು, ಸಚ್ಚಿದಾನಂದ ಸ್ವರೂಪದಿಂದಿದೆ. ಪ್ರತಿನಿತ್ಯ ನೀನು ಅಂತಹ ಚಿತ್ರದಲ್ಲಿ ಚಿತ್ತವನು ಇರಿಸಿದರೆ ನೀ ಮಾಡುವ ಕೆಲಸ ತನ್ಮಯತೆಯಿಂದ





ಕೂಡಿರುತ್ತದೆ ಎಂದು, ಈ ಪರಮಾತ್ಮನ ಸೃಷ್ಟಿಯಲ್ಲಿ ಏನನ್ನು ಮತ್ತು ಜಗಚ್ಚಿತ್ರವನ್ನು ಹೇಗೆ ಕಾಣಬೇಕು ಎಂದು ಸೂಚಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಪರಮಾತ್ಮನ ಸಮಗ್ರ ಸೃಷ್ಟಿ ವೈವಿಧ್ಯತೆಯಿಂದ ಕೂಡಿ ಸುಂದರವಾಗಿದೆ. ಇಲ್ಲಿ, ಯಾವ ನ್ಯೂನತೆಯೂ ಇಲ್ಲವೇ ಇಲ್ಲ. ಆಕಾಶ, ಅದರಲ್ಲಿನ ಗ್ರಹಗಳು, ನಕ್ಷತ್ರಾದಿಗಳು, ನಮ್ಮ ಭೂಮಿ ಮತ್ತು ಇದರ ಮೇಲಿನ ಸಮುದ್ರಗಳು, ನದಿಗಳು, ಬೆಟ್ಟ ಗುಡ್ಡಗಳು ಪ್ರಾಣಿ ಪಕ್ಷಿಗಳು, ಕ್ರಿಮಿ ಕೀಟಗಳು, ಗಿಡ ಮರಗಳು, ಹೂ ಹಣ್ಣುಗಳು, ಚಿತ್ರವಿಚಿತ್ರವಾದ ಬಣ್ಣಗಳು, ಚಿತ್ತಾರಗಳು, ಸುಗಂಧಗಳು, ಎಲ್ಲವೂ ಆ ಸೃಷ್ಟಿಕರ್ತನ ಕೈಚಳಕವಲ್ಲವೇ? ಅವನ ಸೃಷ್ಟಿಗೆ ಒಂದು ಪರಿಭಾಷೆಯನ್ನು ಬರೆಯುವ ಬುದ್ಧಿಮತ್ತೆ ಮತ್ತು ಈ ಸೃಷ್ಟಿಯನ್ನು ಇನ್ನೂ ಸುಂದರವನ್ನಾಗಿಸುವ ಕ್ಷಮತೆಯನ್ನು

ಹೊಂದಿದ ಮಾನವ, ಅವನಿಗೆ ಅಂತಹ ಯೋಗ್ಯತೆಯನ್ನು ನೀಡಿದ, ಆ ಪರಮಾತ್ಮ ಬರೆದ ಸುಂದರ ಮತ್ತು ಸತ್ಯವಾದ ಚಿತ್ತಾರವಲ್ಲವೇ ಈ ಸೃಷ್ಟಿ? ಇಂತಹ ಚಿತ್ರವನ್ನು ಅವನ ಕೃತಿಯೆಂದು ನಾವು ಒಪ್ಪಿಕೊಂಡು ಇದನ್ನು ಮನದಲ್ಲಿರಿಸಿಕೊಂಡರೆ ನಾವು ಮಾಡುವ ಕೆಲಸವೆಲ್ಲವೂ ತನ್ಮಯತೆಯಿಂದ ಸಾಗುತ್ತದೆ ಎಂದು ಸೂಚಿಸಿದ್ದಾರೆ ಮಾನ್ಯ ಗುಂಡಪ್ಪನವರು.

ನೋಡಿದರೆ ಎಲ್ಲೆಲ್ಲೂ ನಮಗೆ ಕಾಣುವುದೇ ಇಂತಹ ಸತ್ಯವಾದ, ಶಿವಸ್ವರೂಪವಾದ, ಸುಂದರವಾದ ಮತ್ತು ಸಚ್ಚಿದಾನಂದ ಸ್ವರೂಪವಾದ, ತಾನೇ ತಾನಾಗಿ ಎಲ್ಲವೂ ಆಗಿ ಪ್ರಕಟಗೊಂಡ ಆ ಪರಮಾತ್ಮನ ಚಿತ್ರ. ಇದನ್ನು ಕಾಣಲು ಅರಿಷಡ್ವರ್ಗಗಳ ಲೇಪವಿಲ್ಲದ ಶುದ್ಧ ಮನವಿರಬೇಕು. ಹಾಗಿದ್ದರೆ, ನಾವು ತನ್ಮಯತೆಯಿಂದ ಸುಂದರ ಜಗತ್ತಿನ ಚಿತ್ರವನ್ನು ನೋಡುತ್ತಾ ಆನಂದವನ್ನು ಅನುಭವಿಸಬಹುದು. ಇಲ್ಲದಿದ್ದರೆ ಸಾಮಾನ್ಯವಾದ, ಎಲ್ಲ ನ್ಯೂನತೆಗಳನ್ನು ಮೈಗೂಡಿಸಿಕೊಂಡು ನಮ್ಮ ಸುತ್ತ ನಮ್ಮದೇ ಆದ ಕ್ಲೇಶಪೂರಿತವಾದ ಬದುಕನ್ನು, ಸಂಕಷ್ಟಗಳ ಸರಮಾಲೆಯನ್ನು ಸೃಷ್ಟಿಸಿಕೊಂಡು ಬದುಕಬಹುದು. ಆಯ್ಕೆ ಮಾಡಲು ನಮಗೆ ಸಂಪೂರ್ಣ ಸ್ವಾತಂತ್ರವನ್ನು ಕೊಟ್ಟಿದ್ದಾನಲ್ಲವೇ, ಆ ಪರಮಾತ್ಮ, ಯಾವುದನ್ನು ನಾವು ಆಯ್ಕೆ ಮಾಡಿಕೊಂಡರೆ ನಮಗೆ ಅದು ಲಭ್ಯವಾಗುತ್ತದೆ.

ಮುಕ್ತಕ-332

ಸತ್ಯವೆಂಬುದದೆಲ್ಲಿ? ನಿನ್ನಂತರಂಗದೊಳೊ ।
ಸುತ್ತ ನೀನನುಭವಿಪ ಬಾಹ್ಯ ಚಿತ್ರದೊಳೋ ॥
ಯುಕ್ತಿಯಿಂದೊಂದನೊಂದಕೆ ತೊಡಿಸಿ ಸರಿನೋಡೆ ।
ತತ್ವದರ್ಶನವಹುದು - ಮಂಕುತಿಮ್ಮ ॥

ಸತ್ಯವೆಂಬುದದಲ್ಲಿ=ಸತ್ಯವೆಂಬುದು+ಅದೆಲ್ಲಿ, ನಿನ್ನಂತರಂಗದೊಳೊ ನಿನ್ನ+ಅಂತರಂಗದೊಳೊ, ನೀನನುಭವಿಪ=ನೀನು+ಅನುಭವಿಪ, ಯುಕ್ತಿಯಿಂದೊಂದನೊಂದಕೆ=ಯುಕ್ತಿಯಿಂದ+ಒಂದನು+ಒಂದಕೆ, ತತ್ವದರ್ಶನವಹುದು=ತತ್ವ+ದರ್ಶನವು+ಅಹುದು.

ಬಾಹ್ಯ ಚಿತ್ರದೊಳೋ=ಬಾಹ್ಯ ಜಗತ್ತಿನ ವಿದ್ಯಮಾನಗಳಲ್ಲೋ.

ಸತ್ಯವೆಂಬುದು ಎಲ್ಲಿದೆ? ನಿನ್ನ ಅಂತರಂಗದಲ್ಲೋ ಅಥವಾ ನೀ ಇದ್ದು ಅನುಭವಿಸುತ್ತಿರುವ ಈ ಬಾಹ್ಯ ಪ್ರಪಂಚದಲ್ಲೋ? ಯುಕ್ತಿಯಿಂದ ಒಂದನು ಒಂದಕ್ಕೆ ಸರಿಹೊಂದಿಸಿ ನೋಡಿದರೆ ನಮಗೆ ತತ್ವದರ್ಶನವಾಗುವುದು ಎಂದು ಸೂಚಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಸತ್ಯವೆಂದರೆ ಏನು? ಋತವೆಂದರೆ ಮನಸ್ಸಿನ ಭಾವ. ಆ ಮನಸ್ಸಿನ ಭಾವ ಬದಲಾಗದೆ ಅಂತೆಯೇ ಹೊರಬಂದರೆ ಅದು ಸತ್ಯ. ನಾವು ಮಾಡುತ್ತಿರುವ ಕೆಲಸ ಮತ್ತು ಆಡುತ್ತಿರುವ ಮಾತು ಸತ್ಯವೋ ಅಲ್ಲವೋ ಎಂದು ನಮಗೇ ಗೊತ್ತು. ಏಕೆಂದರೆ ನಮ್ಮ ಆಂತರ್ಯದಲ್ಲಿರುವುದು ನಮಗೆ ಮಾತ್ರ ಗೊತ್ತು ಮತ್ತು ಹೊರಗೆ ನಾವು ಆಡುವ ಮಾತು ಮತ್ತು ಮಾಡುವ ಕೃತಿಯಲ್ಲಿ ಸತ್ಯವಿದೆಯೋ ಇಲ್ಲವೋ ಎಂದೂ ಸಹ ನಮಗೆ ಮಾತ್ರ ಗೊತ್ತು. ಹೊರಗಿನವರಿಗೆ ಅದು ತಿಳಿಯುವುದಿಲ್ಲ.

ಆದರೆ ಒಂದು ವಿಷಯಕ್ಕೆ ಒಂದೇ ಸತ್ಯವಿರಲು ಸಾಧ್ಯವಿದೆ, ಎರಡಲ್ಲ. ಈ ಸೃಷ್ಟಿಯಲ್ಲಿರುವುದೆಲ್ಲಾ ಸತ್ಯ. ಏಕೆಂದರೆ ಆ ಪರಮಾತ್ಮ ಹೇಗೆ ತನ್ನ ಮನದಲ್ಲಿ ಇದನ್ನು ಸಂಕಲ್ಪಿಸಿಕೊಂಡನೋ ಹಾಗೆ ಪ್ರಕಟವಾಗಿದೆ. ಹಾಗಾಗಿ ಅಲ್ಲಿ ಋತ ಮತ್ತು ಸತ್ಯ ಒಂದೇ ಆಗಿದೆ. ನಮಗೆ ಕಾಣಲು ಶಕ್ತಿ ಬೇಕು ಅಷ್ಟೇ. "ಅಂತ ಬಹಿಶ್ಚ ತತ್ ಸರ್ವಂ ವ್ಯಾಪ್ಯ ನಾರಾಯಣಃ ಸ್ಥಿತಃ' ಎಂದ ಹಾಗೆ ಇಡೀ ಜಗತ್ತಿನ ಕೋಟ್ಯಾಂತರ ರೂಪಗಳಲ್ಲಿ ಒಳಗೂ ಹೊರಗೂ ಆ ಪರಮಾತ್ಮನೇ ನೆಲೆಸಿದ್ದಾನೆ ಎಂದು ಅರಿತುಕೊಳ್ಳಬೇಕು. ಹಾಗೆ ಸತ್ಯಸ್ವರೂಪನಾದ ಆ ಪರಮಾತ್ಮ ಒಬ್ಬನೇ ಇದ್ದವನು ತಾನೇ ಇಡೀ ಜಗತ್ತಾಗಿ ಪ್ರಕಟಗೊಂಡ ಮೇಲೆ, ಜಗತ್ತೂ 'ಸತ್ಯ'ವಾಗಿರಲೇ ಬೇಕಲ್ಲವೇ.

ಒಳಗೊಂದು ಹೊರಗೊಂದು ಇರದೆ ಎಲ್ಲೆಡೆಯಲ್ಲೂ ಆ ಪರಮಾತ್ಮನೇ ಇರುವನೆಂದು ಮನಗಂಡು ನಮ್ಮ ಒಳಗು ಮತ್ತು ಹೊರಗನ್ನು ಒಂದಾಗಿಸಿಕೊಂಡು ನೋಡಿದಾಗ ನಮಗೆ ಸತ್ಯ ಸ್ವರೂಪನಾದ ಆ ಪರಮಾತ್ಮನ ಸತ್ವ ಮತ್ತು ತತ್ವ ಎರಡೂ ಅರಿವಿಗೆ ಬರುತ್ತದೆ. ಈ ರೀತಿಯ ಅರಿವು ಸಾಧನೆಯಿಂದ ಮಾತ್ರ ಬರಲು ಸಾಧ್ಯ. ಅಂತರ್ಮುಖಿಗಳಾಗಿ, ಅಹಂಕಾರವನ್ನು ತೊರೆದು ಚಿಂತನೆ ಮಾಡಿದರೆ ಸತ್ವದ ದರ್ಶನವಾಗುತ್ತದೆ ಎನ್ನುವುದು ಈ ಮುಕ್ತಕದ ಹೂರಣ.

**ಮುಕ್ತಕ-333** **ಸತ್ಯಾನುಭವವೆಲ್ಲರಿಂಗಮೊಂದೆಂತಹುದು? |**

**ಬೆಟ್ಟದಡಿಯೊಳಗೊಬ್ಬ; ಕೋಡಬಳಿಯೊಬ್ಬ ||**

**ಎತ್ತರದ ದೃಶ್ಯ ಕಣಿವೆಯೊಳಿಹನಿಗಾದೀತೇ? |**

**ನೇತ್ರದಂದದೆ ನೋಟ - ಮಂಕುತಿಮ್ಮ ||**

ಸತ್ಯಾನುಭವವೆಲ್ಲರಿಂಗಮೊಂದೆಂತಹುದು=ಸತ್ಯ+ಅನುಭವವು+ಎಲ್ಲರಿಂಗಂ+ಒಂದೇ+ಎಂತೆ+ಅಹುದು, ಬೆಟ್ಟದಡಿಯೊಳಗೊಬ್ಬ=ಬೆಟ್ಟದ+ಅಡಿಯೊಳಗೆ+ಒಬ್ಬ, ಕೋಡಬಳಿಯೊಬ್ಬ=ಕೋಡ+ಬಳಿ+ಒಬ್ಬ, ಕಣಿವೆಯೊಳಿಹನಿಗಾದೀತೇ=ಕಣಿವೆ+ಒಳಗೆ+ಇಹನಿಗೆ+ಆದೀತೆ, ನೇತ್ರದಂದದೆ=ನೇತ್ರದ+ಅಂದರೆ





ಕೋಡು=ತುತ್ತ ತುದಿ, ನೇತ್ರದಂದದೆ=ನೋಟವು ಹೇಗಿದ್ದರೆ ಹಾಗೆ.

ಸತ್ಯದ, ಎಂದರೆ ಪರಮಾತ್ಮನ ಅನುಭವ ಎಲ್ಲರಿಗೂ ಒಂದೇ ರೀತಿಯಲ್ಲಿ ಆಗುವುದು ಹೇಗೆ ಸಾಧ್ಯ? ಬೆಟ್ಟದಡಿ ಒಬ್ಬ ನಿಂತರೆ ಅವನಿಗೆ ಬೆಟ್ಟದ ಬುಡ ಮಾತ್ರ ಕಾಣುತ್ತದೆ. ಬೆಟ್ಟದ ತುತ್ತ ತುದಿಯಲ್ಲಿ ನಿಂತವನಿಗೆ ತುದಿ ಮಾತ್ರ ಕಾಣುತ್ತದೆ. ಕಣಿವೆಯಲ್ಲಿ ನಿಂತವಗೆ ಎತ್ತರದ ದೃಶ್ಯ ಕಾಣುತ್ತದೆಯೇ? ನಮಗೆ ನೋಡಲು ಕ್ಷಮತೆ ಎಷ್ಟಿದೆಯೋ ಅಷ್ಟು ಮಾತ್ರ ನೋಟ ಸಿಗುತ್ತದೆ. ಹೀಗೆ ಈ ಜಗತ್ತನ್ನು ನೋಡುವ ಮತ್ತು ಆ ಸೃಷ್ಟಿಕರ್ತನನ್ನು ಮತ್ತು ಅವನ ಸೃಷ್ಟಿಯನ್ನು ನೋಡುವ ಮತ್ತು ಅರ್ಥಮಾಡಿಕೊಳ್ಳುವ ವಿಷಯವನ್ನು ಪ್ರಸ್ತಾಪಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಒಂದು ನೂರು ಜನರು ಒಂದೇ ಬಾರಿ ಒಂದು ವಸ್ತುವನ್ನು ನೋಡಿದರೆ ಅಥವಾ ಒಂದು ವಿಷಯವನ್ನು ಕೇಳಿದರೆ, ಅವರ ಮನಸ್ಸುಗಳನ್ನು ನೂರು ಭಿನ್ನವಾದ ಭಾವಗಳು ಉದ್ಭವವಾಗುತ್ತವೆ. ಹಾಗಿರುವಾಗ ಸಕಲ ಜಗತ್ತಿನ

ಸೃಷ್ಟಿಕರ್ತನನ್ನು ಎಲ್ಲರೂ ಒಂದೇ ರೀತಿಯಲ್ಲಿ ಅನುಭವಿಸುವುದು ಹೇಗೆ ಸಾಧ್ಯ? ನಮಗೆ ನಾವು ಕಂಡಿದ್ದು ಸತ್ಯ ಮತ್ತು ನಮ್ಮ ಅನುಭವ ನಮ್ಮ ಮಟ್ಟಿಗೆ ಸತ್ಯ ಅಲ್ಲವೇ? ನಮ್ಮ ಊಹಾಶಕ್ತಿ ಅಥವಾ ಕಲ್ಪನಾ ಶಕ್ತಿ ಸೀಮಿತವಾದದ್ದು. ಹಾಗಾಗಿ ನಮ್ಮ ಭಾವವೂ ಸೀಮಿತವಾಗಿರುತ್ತದೆ.

"ಎಂತ ಮಾತ್ರಮುನ ಎವ್ವರು ತಲಚಿನ ಅಂತ ಮಾತ್ರಮೆ ನೀವು" ಎಂದು ಹೇಳುತ್ತಾ ತಾಳ್ಳಪಾಕ ಅನ್ನಮಾಚಾರ್ಯರು "ಯಾರು ಎಷ್ಟು ಎಂದು ನೆನೆಸಿದರೆ ನೀ ಅಷ್ಟು" ಎಂದು ಆ ಪರಮಾತ್ಮನನ್ನು ಸಂಬೋಧಿಸುತ್ತಾ, ನೋಡುವವರ ಕ್ಷಮತೆ ಎಷ್ಟಿದ್ದರೆ, ಅವರಿಗೆ ಅಷ್ಟಾಗಿ ಕಾಣುತ್ತಾನೆ ಆ ಪರಮಾತ್ಮ. ಎನ್ನುತ್ತಾರೆ. ಪ್ರತಿಯೊಬ್ಬರೂ ಆ ಪರಮಾತ್ಮ ಸತ್ಯವನ್ನು ಅವರವರ ಅನುಭವಗಳ ಅನುಸಾರವಾಗಿ ಅರಿತುಕೊಳ್ಳುತ್ತಾರೆ. ಅವರ ಅನುಭವ ಬದಲಾದ ಸಂದರ್ಭ, ಸಂಪರ್ಕಗಳ ಕಾರಣದಿಂದ ಕಾಲಕಾಲಕ್ಕೆ ಬದಲಾಗುತ್ತಾ ಇರುತ್ತದೆ. ಆದರೆ ಆ ಬದಲಾವಣೆ ಆ ಸತ್ಯವನ್ನು ಇನ್ನೂ ನಿಚ್ಚಳವಾಗಿ ಅರಿಯಲು ಪೂರಕವಾದರೆ ಉತ್ತಮ.

ಆದರೆ ನಾವು ಗೋಡೆಗಳನ್ನು ಕಟ್ಟಿಕೊಂಡಿದ್ದೇವೆ. ಜಾತಿ, ಮತ, ಭಾಷೆ, ವರ್ಣ, ಬಣ್ಣಗಳಿಂದ, ಒಬ್ಬ ಮನುಷ್ಯ ಇನ್ನೊಬ್ಬ ಮನುಷ್ಯನಿಂದ, ಒಂದು ಜನಾಂಗ ಇನ್ನೊಂದು ಜನಾಂಗದಿಂದ, ಒಂದು ದೇಶವನ್ನು ಮತ್ತೊಂದು ದೇಶವನ್ನು ಬೇರೆಯಾಗಿಸುವಂತಹ ಮತ್ತು ಭೇದಿಸಲಾಗದಂತಹ ಗೋಡೆಗಳನ್ನು ಕಟ್ಟಿಕೊಂಡು ಬಾಳುತ್ತಿದ್ದೇವೆ. ನಾವು ನಿಶ್ಚಲ ಮನಸ್ಸಿನಿಂದ, ಈ ಎಲ್ಲ ಪೂರ್ವಾಗ್ರಹಗಳನ್ನು ಬಿಟ್ಟು ಆ ಪರಮ ಸತ್ಯವನ್ನು ಅರಿತುಕೊಳ್ಳಲು, ಸಂಪೂರ್ಣ ಚಿತ್ರವನ್ನು ತೋರದ ಬೆಟ್ಟದ ತುದಿಯಲ್ಲೂ ನಿಲ್ಲದೆ, ಅಡಿಯಲ್ಲೂ ನಿಲ್ಲದೆ ಅಥವಾ ಕಣಿವೆಯಲ್ಲೂ ನಿಲ್ಲದೆ, ಒಂದು ವಿಶಾಲವಾದ ಚಿತ್ರವನ್ನು ನೋಡಲು ಇಚ್ಚಿಸಿದರೆ ಮತ್ತು ಅದಕ್ಕಾಗಿ ಪ್ರಾಮಾಣಿಕ ಪ್ರಯತ್ನ ಪಟ್ಟರೆ, ಅಧ್ಯಯನ, ಧ್ಯಾನ, ಚಿಂತನ ಮತ್ತು ವಿಚಾರ ಮಂಥನದಂತಹ ಪ್ರಕ್ರಿಯೆಗಳಿಂದ ಆ ಸೃಷ್ಟಿಕರ್ತನ ಬೃಹತ್ ಚಿತ್ರವನ್ನು ಕಾಣಬಹುದು.

# ನೂರು ಜಡೆ ಕೋಲಾಟ 334-338

**ಮುಕ್ತಕ-334**

**ಓರೋರ್ವನಿಚ್ಚೆಗುಣವೊಂದೊಂದು ಬಗೆ ಜಗದಿ।**
**ಭಾರವರೊರ್ವನಿಂಗೊಂದೊಂದು ತೆರದಿ॥**
**ದಾರಗಳಿನವರ ವಿಧಿ ಪಿಡಿದು ಕುಣಿದಾಡಿಸಲು।**
**ನೂರುಜಡೆಕೋಲಾಟ - ಮಂಕುತಿಮ್ಮ॥**

ಓರೋರ್ವನಿಚ್ಚೆಗುಣವೊಂದೊಂದು=ಓರೋರ್ವನ+ಇಚ್ಛೆಗುಣವು+ಒಂದೊಂದು,
ಭಾರಮೋರೊರ್ವನಿಂಗೊಂದೊಂದು=ಭಾರಂ+ಓರೋರ್ವನಿಗೆ ಒಂದೊಂದು,
ದಾರಗಳಿನವರ=ದಾರಗಳನು+ಇವರ.
ತೆರದಿ=ತರಹೆ, ಓರೋರ್ವನಿಗೆ=ಒಬ್ಬೊಬ್ಬನಿಗೆ,
ನೂರುಜಡೆಕೋಲಾಟ=ಒಂದು ರೀತಿಯ ಕೋಲಾಟ.

ಮೇಲೊಂದು ಗೂಟಕ್ಕೆ ನೂರು ದಾರಗಳ ಕಟ್ಟಿ ಕೆಳಗೆ ನೂರು ಜನ ಅದನ್ನು ಹಿಡಿದು, ಕೋಲಾಟವಾಡುತ್ತಾ, ಜಡೆಯಂತೆ ಅದನ್ನು ಹೆಣೆದು, ಮತ್ತೆ ಬಂದ ರೀತಿಯಲ್ಲೇ ಹಿಂತಿರುಗೆ, ಸಿಕ್ಕಾಗದೆ ಆ ಜಡೆ ಬಿಡಿಸಿಕೊಂಡು ಯಥಾಸ್ಥಿತಿಗೆ ಹೋಗುವಂತೆ ಆಡುವುದು. ಜಗತ್ತಿನಲ್ಲಿ ಒಬ್ಬೊಬ್ಬನ ಇಚ್ಛೆಯ ಗುಣ ಒಂದೊಂದು ರೀತಿ ಮತ್ತು ಅವನವನ ಕಾರ್ಯದ ಭಾರ ಒಬ್ಬೊಬ್ಬನಿಗೆ ಒಂದೊಂದು ರೀತಿ. ಎಲ್ಲರ ಸೂತ್ರಗಳನ್ನೂ ವಿಧಿಯು ಹಿಡಿದು ಕುಣಿದಾಡಿಸಲು, ಈ ಜಗತ್ತೇ ಒಂದು "ನೂರು ಜಡೆ ಕೋಲಾಟವಾಡುವಂತಹ ಚಿತ್ರಣವನ್ನು ಬಿಂಬಿಸುತ್ತದೆ ಎಂಬುದೆ ಈ ಮುಕ್ತಕದ ಹೂರಣ.

ಒಬ್ಬಬ್ಬರಿಗೊಂದೊಂದು ಇಚ್ಛೆ ಆ ಇಚ್ಛೆಗಳನ್ನು ಪೂರೈಸಿಕೊಳ್ಳಲು ಒಬ್ಬೊಬ್ಬರದೊಂದೊಂದು ಕಾರ್ಯ ವೈಖರಿ, ಅದಕ್ಕೆ ತಕ್ಕಂತೆ ಅವರವರು ಭರಿಸುವ ಜೀವನದ ಭಾರ. ಒಬ್ಬರ ತರಹೆ ಮತ್ತೊಬ್ಬರಿಲ್ಲ, ಒಬ್ಬರ ಇಚ್ಛೆಯಂತೆ ಮತ್ತೊಬ್ಬರದಿಲ್ಲ. ಒಂದು ವ್ಯಕ್ತಿಯನ್ನು ಕೇಂದ್ರ ಬಿಂದುವನ್ನಾಗಿಸಿಕೊಂಡು, ಅವನ ಸಂಬಂಧಿತ ಎಲ್ಲ ವ್ಯಕ್ತಿಗಳಿಗೆ ಒಂದೊಂದು ರೇಖೆಯನ್ನೆಳೆದರೆ, ನೂರಾರು ರೇಖೆಗಳನ್ನು ಎಳೆಯಬೇಕಾಗಬಹುದು, ಏಕೆಂದರೆ ಒಂದೇ ವ್ಯಕ್ತಿ ತನ್ನ ಜೀವಿತಕಾಲದಲ್ಲಿ ನೂರಾರು ವ್ಯಕ್ತಿ-ವಿಷಯಗಳೊಡನೆ ಸಂಪರ್ಕ ಮತ್ತು ಸಂಬಂಧವನ್ನು ಇಟ್ಟುಕೊಂಡಿರುತ್ತಾನೆ.

ಹಾಗೆ ನಮಗೆ ಸಂಬಂಧಪಟ್ಟ ಒಬ್ಬೊಬ್ಬ ವ್ಯಕ್ತಿಯೊಂದಿಗೆ ಹಲವಾರು ರೀತಿಯ ಸಂಬಂಧವೇರ್ಪಟ್ಟಿರುತ್ತದೆ. ಒಬ್ಬರಿಗೊಬ್ಬರು "ಜಡೆ" ಯಂತೆ ಹೆಣೆದುಕೊಂಡಿರುತ್ತೇವೆ. ಹೀಗೆ ನಮಗೆ ಬೇರೆ ವ್ಯಕ್ತಿಗಳೊಡನೆ, ವಸ್ತುಗಳೊಡನೆ ಅಥವಾ ವಿಷಯಗಳೊಡನೆ ಸಂಬಂಧವೇರ್ಪಡಿಸುವುದು 'ದಾರಗಳಿನವರ ವಿಧಿ ಪಿಡಿದು ಕುಣಿದಾಡಿಸಲು ಎಂದು ಹೇಳುತ್ತಾ, ಇದ ನಮ್ಮ ವಿಧಿ ಎನ್ನುತ್ತಾರೆ ಪೂಜ್ಯ ಗುಂಡಪ್ಪನವರು.

ಹುಟ್ಟಿದಾರಭ್ಯ ನಮ್ಮ ಮನಸ್ಸಿನ ಆಸೆ ಅಕಾಂಕ್ಷೆಗನುಸಾರವಾಗಿ ಯಾವ್ಯಾವುದೋ ರೀತಿಯಲ್ಲಿ ಜಗತ್ತಿನ ವ್ಯಕ್ತಿ, ವಸ್ತು ಮತ್ತು ವಿಷಯಗಳೊಡನೆ ಸಂಬಂಧವನ್ನು ವಿಧಿಯ ನಿರ್ದೇಶನದಲ್ಲಿ ಹೆಣೆದುಕೊಳ್ಳುತ್ತೇವೆ. ಆದರೆ





ಇದರಿಂದ ಬಿಡಿಸಿಕೊಳ್ಳುವ ಮಾರ್ಗ ಗೊತ್ತಾಗುವುದಿಲ್ಲ. ಹಾಗಾಗಿ ಸಂಬಂಧಗಳು ಬಹಳ ಗೋಜಲು ಗೋಜಲಾಗಿಬಿಡುತ್ತದೆ. ಕೆಲವು ಸಂಬಂಧಗಳು ಮಧುರವಾಗೂ ಮತ್ತು ಬಹಳಷ್ಟು ಸಂಬಂಧಗಳು ಅಸಹನೀಯವಾಗೂ ಇರುತ್ತದೆ. ಇವುಗಳಿಂದ ಬಿಡಿಸಿಕೊಳ್ಳಲು ಆಗದೆ ಒದ್ದಾಡುತ್ತಿರುತ್ತೇವೆ. ಬಿಡಿಸಿಕೊಳ್ಳುವ ಪ್ರಯತ್ನದಲ್ಲಿ ಹಲವರೊಡನೆ ನಿಷ್ಠೂರವನ್ನೂ ಕಟ್ಟಿಕೊಳ್ಳುತ್ತೇವೆ.

ಜಗತ್ತಿನಲ್ಲಿ ಸಂಬಂಧಗಳನ್ನು ಹೆಣೆದುಕೊಳ್ಳುವುದು ಬಹಳ ಸುಲಭ, ಆದರೆ ಆ ಸಂಬಂಧಗಳನ್ನು ನಿಭಾಯಿಸುವುದು ಮತ್ತು ನಮ್ಮ ಇಚ್ಛೆಯಾದಾಗ ಬಿಡಿಸಿಕೊಳ್ಳುವುದು ಕಷ್ಟ ಎಂಬ ಅರ್ಥದಲ್ಲಿ 'ವಿಧಿ ಪಿಡಿದು ಕುಣಿದಾಡಿಸಲು ಎಂದಿದ್ದಾರೆ ಮಾನ್ಯ ಗುಂಡಪ್ಪನವರು. ಅಂತಹ ವಿಧಿಯೊಡನೆ ನಾವು ಹೋರಾಡಬೇಕು, ಸೆಣೆಸಿ ಬಂಧಮುಕ್ತರಾದರೆ, ಸಂಬಂಧವಿದ್ದರೂ, ಬಂಧನವಿಲ್ಲದ ಸ್ಥಿತಿ ತಲುಪಬಹುದು. ನಮ್ಮ ಜೀವನದ 'ನೂರು ಜಡೆ ಕೋಲಾಟ'ದಲ್ಲಿ ನಾವು ಹೆಣೆದುಕೊಂಡ ಎಲ್ಲ ಬಂಧನಗಳನ್ನೂ ಅನುಭವಿಸಿ ಮತ್ತೆ ಯಥಾ ಸ್ಥಿತಿಗೆ ಬಂದರೆ ನಾವೇ ಧನ್ಯರು.

**ಮುಕ್ತಕ-335** **ಆವ ಜನ್ಮದ ಋಣವೊ, ಆವ ಕರ್ಮದ ಕಣವೊ।**

**ಮಾವಾಗಿ ಬೇವಾಗಿ ಸಂಸಾರ ವನದಿ॥**

**ಜೀವಕೀಂಟಿಪುವು ಮಾದಕದ ರಸಪಾನಗಳ।**

**ಭಾವಜ್ವರಂಗಳವು - ಮಂಕುತಿಮ್ಮ॥**

ಜೀವಕೀಂಟಿಸುವು=ಜೀವಕೆ+ಈಂಟಿಪುವು, ಭಾವಜ್ವರಂಗಳವು=ಭಾವ+ಜ್ವರಂಗಳು+ಅವು.

ಈಂಟಿಪುವು=ಕುಡಿಸುತ್ತವೆ,

ಹಲವಾರು ಪೂರ್ವ ಜನ್ಮಗಳ ವಾಸನೆಗಳಿಗೆ ಅನುಸಾರವಾಗಿ ನಮಗೆ ಈ ಜನ್ಮ. (ಇದನ್ನು ನಂಬದವರೂ ಇದ್ದಾರೆ). ಹಿಂದಿನಿಂದ ಹೊತ್ತು ತಂದ ಆ ವಾಸನೆ ಮತ್ತು ಕರ್ಮಗಳನ್ನು ಪೂರೈಸಿಕೊಳ್ಳಲು ಈ ಜನ್ಮ ಮತ್ತು ಇಲ್ಲಿನ ಕರ್ಮ. ಇಲ್ಲಿ ಮಾವಿನ ಸಿಹಿಯನ್ನೂ ಸವಿಯಬೇಕು. ಬೇವಿನ ಕಹಿಯನ್ನೂ ಸವಿಯಬೇಕು. ಇವೆರಡರ ಸಮ್ಮಿಶ್ರ 'ರಸಪಾನ'ವನ್ನು ನಮಗೆ ವಿಧಿ ಮಾಡಿಸುತ್ತಿದೆ. ನಮ್ಮ ಭಾವೋದ್ವೇಗಗಳೇ ನಮಗೆ ತಾಪವನ್ನು ಹೆಚ್ಚಿಸುತ್ತಾ 'ಭಾವ ಜ್ವರ'ವನ್ನು ಉಂಟುಮಾಡುತ್ತದೆ ಎಂದು, ಬದುಕಿನಲ್ಲಿ ನಮಗೆ ದೊರೆಯುವ ಸಿಹಿ- ಕಹಿಗಳ ಸಮ್ಮಿಶ್ರ ಅನುಭವಗಳನ್ನು ಪ್ರಸ್ತಾಪಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಈ ಸಂಸಾರವೆಂಬುದೇ ಒಂದು ವನವಿದ್ದಂತೆ. ನಾವೆಲ್ಲಾ ಒಂದೊಂದು ಮರವೋ ಗಿಡವೋ ಇದ್ದಂತೆ. ನಮ್ಮ ಭಾವನೆಗಳ ಉದ್ವೇಗಾದಿಗಳಿಂದ ಹೊರಹೊಮ್ಮುವ ಫಲಗಳು ಸಿಹಿಯಾಗಿರಬಹುದು ಅಥವಾ ಕಹಿಯಾಗಿರಬಹುದು. ನಮ್ಮ ಈ ಎಲ್ಲ ಭಾವನೆಗಳಿಗೂ ಕಾರಣ ನಮ್ಮ ಪೂರ್ವ ಜನ್ಮದ ವಾಸನೆಗಳು ಮತ್ತು

ನಾವು ಇಲ್ಲಿ ಸಂಚಯಿಸಿಕೊಳ್ಳುವ ಗುಣಗಳು, ಈ ಜಗತ್ತೆಂಬ ಭೂಮಿಯಲ್ಲಿ, ಸಂಸಾರವೆಂಬ ವನದಲ್ಲಿ ಬೆಳೆದ ಗಿಡ ಮರಗಳಾಗಿ ನಾವು ಇದ್ದೇವೆ. ನಮ್ಮ ಭಾವನೆಗಳೆಂಬ ರೆಂಬೆ ಕೊಂಬೆ ಬಳ್ಳಿಗಳಲ್ಲಿ ಪಲ್ಲವಿಸುವ ಹೂ ಹಣ್ಣುಗಳು ಸಿಹಿಯಾಗಿಯೂ ಕಹಿಯಾಗಿಯೂ ಇರುತ್ತವೆ. ಅವುಗಳೇ ನಮ್ಮ ಬದುಕಿನಲ್ಲಿ ಕಷ್ಟ ಮತ್ತು ಸುಖಗಳ ಸಮ್ಮಿಶ್ರ ಫಲಗಳು.

ವಿಪರ್ಯಾಸವೆಂದರೆ, ನಿಸರ್ಗದಲ್ಲಿರುವ ಗಿಡ-ಮರಗಳು ತಮ್ಮ ಹೂ ಹಣ್ಣುಗಳನ್ನು ತಾವೇ ಅನುಭವಿಸುವುದಿಲ್ಲ. ಆದರೆ ಸಂಸಾರದ ಗಿಡಮರಗಳಾದ ನಾವು, ನಮ್ಮ ಕರ್ಮದ ಫಲವನ್ನು ನಾವೂ ಉಂಡು ಅನ್ಯರಿಗೂ ಉಣಬಡಿಸುತ್ತೇವೆ. ಹಾಗೆಯೇ ಅನ್ಯರೂ ಸಹ ತಮ್ಮ ಕರ್ಮಫಲವನ್ನು ತಾವೂ ಅನುಭವಿಸುತ್ತಾ ನಮಗೂ ಉಣಬಡಿಸುತ್ತಾರೆ. ಇದನ್ನೇ ಮಾನ್ಯ ಗುಂಡಪ್ಪನವರು "ಜೀವಕೀಂಟಿಪುವು ಮಾದಕದ ರಸಪಾನಗಳ" ಎಂದು ಕರೆದಿರಬಹುದು. ಆವ ಕರ್ಮದ ಕಣವೊ ಎಂದು ಗುಂಡಪ್ಪನವರು ಹೇಳುವಂತೆ, ನಾವು ಮಾಡಿದ ಯಾವ ಕಾರ್ಯದಿಂದ ನಮಗೆ ಸಿಹಿ ಅಥವಾ ಕಹಿ ಅನುಭವ ಸಿಗುತ್ತದೆ ಎನ್ನುವುದು ಹೇಳಲಸಾಧ್ಯ. ಇದೊಂದು ಸಾಂಕ್ರಾಮಿಕವಾದ ಭಾವಜ್ವರವೆಂದೂ ಸಹ ಮಾನ್ಯ ಗುಂಡಪ್ಪನವರು ಉಲ್ಲೇಖಿಸಿದ್ದಾರೆ. ನಾವು ಈ ಜಗತ್ತಿಗೆ ಅಂಟಿಕೊಂಡಿರುವಷ್ಟು ದಿನವೂ ಜನ್ಮ ಜನ್ಮಾಂತರದಲ್ಲಿ ನಮಗೆ ಈ ಜ್ವರ ಗುಣವಾಗುವುದೇ ಇಲ್ಲ. ಇದು ಜಗತ್ತಿನಲ್ಲಿ ಸಹಜವಾದದ್ದು.

ಭಾವನೆಗಳ ಶುದ್ಧತೆ, ಶಾಂತತೆ ಮತ್ತು ನಿರ್ಮಲತೆಗಳನ್ನು ಎಲ್ಲರೂ ಬೆಳೆಸಿಕೊಂಡಾಗ ಬಹುಶಃ ಈ ಜ್ವರದ ತಾಪ ಕಡಿಮೆಯಾಗಬಹುದು. ಪ್ರಯತ್ನ ಪಟ್ಟರೆ ಸಾಧ್ಯ. ಇಲ್ಲದಿದ್ದರೆ ಇದ್ದೇ ಇದೆ ಸಿಹಿ ಕಹಿಗಳ ಸಮ್ಮಿಶ್ರ ಫಲ.

**ಮುಕ್ತಕ-336**

**ನಿನ್ನ ಜೀವಿತವೆಲ್ಲ ನಿನ್ನ ಕೈಮಾಲೆಯೇಂ |**
**ಅನ್ಯಶಕ್ತಿಗಳೆನಿತೊ ಬೆರೆತಿರುವುವಲ್ಲಿ? ||**
**ಅನ್ನವಿಡುವರು, ತಿಳಿವನೀವರ್, ಒಡನಾಡುವರು? |**
**ನಿನ್ನ ಬಾಳ್ಗಿವರಿರರೆ?- ಮಂಕುತಿಮ್ಮ ||**

ತಿಳಿವನೀವರ್=ತಿಳಿವನ್ನು+ಈವರ್, ಬಾಳ್ಗಿವರಿರರೆ=ಬಾಳ್ಗೆ+ಅವರಿರರೆ,

ಕೈಮಾಲ್ಕೆಯೇಂ=ಕೈಯಿಂದಾದದೆ?, ತಿಳಿವನೀವರ್,=ಅರಿವನ್ನು ಕೊಡುವವರು,

ಒಡನಾಡುವರು=ಸ್ನೇಹಿತರು, ಬಾಳ್ಗೆ=ಬಾಳಿಗೆ.

ನಿನ್ನ ಬೆಳವಣಿಗೆಗೆ ಅನ್ಯರ ಶಕ್ತಿಗಳೆಷ್ಟೋ ಪೂರಕವಾಗಿ ಬೆರೆತಿರುವಾಗ ನಿನ್ನ ಬದುಕು ಕೇವಲ ನಿನ್ನಿಂದಲೇ ರೂಪುಗೊಂಡದ್ದೇನು? ನಿನಗೆ ಅನ್ನವಿಟ್ಟವರು, ಅರಿವನಿತ್ತವರು ಮತ್ತು ನಿನ್ನ ಒಡನಾಡಿಗಳು, ಈ ಎಲ್ಲರೂ ಒತ್ತಾಸೆಯಿಂದ ನಿನ್ನ ಬಾಳಲ್ಲಿ ಇರುವಾಗ, "ನಾನು ಸ್ವತಂತ್ರನಾಗಿ ಬೆಳೆದಿದ್ದೇನೆ" ಎಂದು ನೀ ತಿಳಿಯಬಾರದು ಎಂದು, ಒಬ್ಬ ವ್ಯಕ್ತಿಯ ಬಾಳ ವಿಕಸನದ ಪರಿಯನ್ನು ವಿಶ್ಲೇಷಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

(167)

ನೂರು ಜಡೆ ಕೋಲಾಟ 334-338 ಕಗ್ಗ ರಸಧಾರೆ-2

ತಾಯ ಗರ್ಭದಲ್ಲಿ ಬಿದ್ದಾಗಲಿಂದ ಮತ್ತೆ ಮಣ್ಣಾಗುವವರೆಗೆ ನಾವೆಷ್ಟು 'ಸ್ವತಂತ್ರ'ರೆಂದು ಯೋಚಿಸಿದರೆ, ನಾವೆಷ್ಟು 'ಪರತಂತ್ರ'ರೆಂದು ಅರಿವಾಗುತ್ತದೆ. ಹುಟ್ಟಿಗೆ ತಂದೆ ತಾಯಿಯರ ಮಿಲನ ಕಾರಣ. ಗರ್ಭದಲ್ಲಿ ತಾಯ ಆರೈಕೆಯಿಂದ ಬೆಳೆದು ಜೀವ ತಳೆದು, ಭೂ ಪತನವಾದ ಮೇಲೆ, ತಾಯ ಹಾಲುಂಡು ಬೆಳೆದು, ಸುತ್ತು ಪರಿಸರದಿಂದ ಪ್ರಭಾವಿತರಾಗಿ, ಅನ್ಯರಿಂದ ಬಹಳಷ್ಟು ಕಲಿತು ರೂಪುಗೊಂಡು ಬೆಳೆದು ದೊಡ್ಡವರಾದ ನಾವು 'ನನ್ನ ಜೀವನವನ್ನು ನಾನೇ ರೂಪಿಸಿಕೊಂಡೆ' ಎಂದರೆ, ಸರಿಯೇನು? ಎನ್ನುವುದು ಮಾನ್ಯ ಗುಂಡಪ್ಪನವರ ಪ್ರಶ್ನೆ.

"ಕೆಲವಂ ಬಲ್ಲವರಿಂದ ಕತ್ತು ಕೆಲವಂ ಶಾಸ್ತ್ರಂಗಳಂ ಕೇಳುತಂ। ಕೆಲವಂ ಮಾಳವರಿಂದ ಕಂಡು ಕೆಲವಂ ಸುಜ್ಞಾನದಿಂ ನೋಡುತಂ ‖ ಕೆಲವಂ ಸಜ್ಜನಸಂಗದಿಂದಲರಿಯಲ್ ಸರ್ವಜ್ಞನಪ್ಪಂ ನರಂ ಪಲವುಂ ಪಳ್ಳ ಸಮುದ್ರವೈ ಹರಹರಾ ಶ್ರೀ ಚೆನ್ನ ಸೋಮೇಶ್ವರಾ ॥" ಎಂದು ಹುಲಿಗೆರೆ ಅಥವಾ ಪಾಲ್ಕುರಿಕೆ ಸೋಮನಾಥನೆಂಬ ತ್ರಿಭಾಷಾ ಕವಿ ಹೇಳಿದ್ದಾರೆ ಸೋಮೇಶ್ವರ ಶತಕದಲ್ಲಿ.

ಹೀಗೆ ನಾವು ಜೀವನದಲ್ಲಿ ನಮ್ಮ ತಂದೆ ತಾಯಿಗಳು, ಗುರು ಹಿರಿಯರು, ಸ್ನೇಹಿತರು ಮತ್ತು ನಮ್ಮ ಅನುಭವಕ್ಕೆ ಬರುವ ಎಲ್ಲ ಘಟನೆಗಳಿಂದ ಕಲಿತು, ಅರಿತು, ಭಾವಿಸುತ್ತಾ ರೂಪುಗೊಳ್ಳುತ್ತೇವೆ ಅಲ್ಲವೇ? ಇವಿಷ್ಟೇ ಅಲ್ಲದೆ ಅರಿವಿಗೆ ಬಾರದ, ಸೃಷ್ಟಿಯ, ನಿಸರ್ಗದ ಮತ್ತು ಪ್ರಕೃತಿಯ ಎಷ್ಟೋ ಶಕ್ತಿಗಳು, ತಮ್ಮ ಪ್ರಭಾವ ಬೀರಿ ನಮ್ಮ ವ್ಯಕ್ತಿತ್ವ ವಿಕಾಸಗೊಳ್ಳುವಂತೆ ಮಾಡುತ್ತವಲ್ಲವೇ? ಹೀಗೆ ರೂಪುಗೊಂಡ ಅಸ್ತಿತ್ವ ಮತ್ತು ವ್ಯಕ್ತಿತ್ವ ಸಂಪೂರ್ಣವಾಗಿ ನಾವೇ ರೂಪಿಸಿಕೊಂಡದ್ದು ಎಂದುಕೊಂಡರೆ ತಪ್ಪಾಗುವುದಲ್ಲವೇ? ನಾವು ವಿನಮ್ರರಾಗಿ ನಮ್ಮನ್ನು ರೂಪಿಸಿದ ಎಲ್ಲಕ್ಕೂ ಮತ್ತು ಆ ಎಲ್ಲವನ್ನೂ ನಮಗೊದಗಿಸಿದ ಆ ಪರಮ ಚೇತನಕ್ಕೆ ಕೃತಜ್ಞರಾಗಿರಬೇಕು.

**ಮುಕ್ತಕ-337**

**ಅನಿಲಗುಣ ಭೂಗುಣಗಳಿಂ ಸಸ್ಯಧಾನ್ಯಗುಣ |**
**ತನುಗುಣಗಳನ್ನದಿಂ, ಮನದ ಗುಣ ತನುವಿಂ ||**
**ಜನಪದವಿಧಂಗಳಿಂತಾಗಿಹವು ಸೃಷ್ಟಿಯಿನೆ |**
**ಮನುವೊಬ್ಬ, ಜನತೆ ಶತ - ಮಂಕುತಿಮ್ಮ ||**

ತನುಗುಣಗಳನ್ನದಿಂ=ತನು+ಗುಣಗಳು+ಅನ್ನದಿಂ
ಜನಪದವಿಧಂಗಳಿಂತಾಗಿಹವು=ಜನಪದ+ವಿಧಂಗಳು+ಇಂತೆ+ಆಗಿಹವು. ಮನುವೊಬ್ಬ=ಮನುವು+ಒಬ್ಬ.
ಭೂಗುಣಗಳಿಂ=ಭೂಮಿಯ ಗುಣಗಳಿಂದ, ತನುವಿಂ=ದೇಹದಿಂದ,

ಬೀಸುವ ಗಾಳಿ ಮತ್ತು ಅದರೊಳಗಿನ ಅನಿಲಗಳ ಗುಣಗಳು ಮತ್ತು ಅಲ್ಲಿನ ಭೂಮಿಯ ಗುಣಕ್ಕೆ ಅನುಗುಣವಾಗಿ, ಆ ಪ್ರದೇಶದಲ್ಲಿ ಬೆಳೆಯುವ ಬೆಳೆಗಳ ಗುಣ, ತಿನ್ನುವ ಅನ್ನದ ಗುಣದಿಂದ ದೇಹದ ಗುಣ, ದೇಹದ ಗುಣದಂತೆ ಮನದ ಗುಣ, ಹೀಗೆ ಬೇರೆ ಬೇರೆ ಪ್ರದೇಶದಲ್ಲಿ ಬೇರೆ ಬೇರೆ ರೀತಿಯ ಜನಪದ. ಎಲ್ಲರೂ ಮನುಷ್ಯರೇ ಆದರೂ ಜನಾಂಗಗಳು ನೂರಾರಾಗಿ ರೂಪುಗೊಂಡಿವೆ ಈ ಜಗತ್ತಿನಲ್ಲಿ ಎಂಬುದೇ ಶ್ರೀ ಗುಂಡಪ್ಪನವರ ಈ ಮುಕ್ತಕದ ಹೂರಣ.

ಪ್ರತೀ ಪ್ರದೇಶದಲ್ಲೂ ಭೂಮಿಯ ಗುಣ ಮತ್ತು ಅದಕ್ಕನುಸಾರವಾಗಿ ಬೀಸುವ ಗಾಳಿಯ ಗುಣಗಳು ಬೇರೆ ಬೇರೆ, ಭೂಮಿಯ ಗುಣಕ್ಕೆ ಅನುಗುಣವಾಗಿ ಅಲ್ಲಿನ ಗಿಡ ಮರಗಳು ಮತ್ತು ವಾತಾವರಣ. ಹಾಗಾಗಿ, ಭೂಮಿ ಮತ್ತು ವಾತಾವರಣದ ಗುಣಗಳು ಬೆಳೆಯುವ ಬೆಳೆಗಳ ಮೇಲೆ ಪ್ರಭಾವ ಬೀರಿ ಅಲ್ಲಿನ ಆಹಾರದಲ್ಲಿ, ಭೂಮಿ ಮತ್ತು ವಾತಾವರಣದ ಗುಣಗಳು ಸೇರಿಕೊಳ್ಳುತ್ತದೆ. ಆ ಆಹಾರವನ್ನು ಸೇವಿಸಿದ ಪ್ರಾಣಿಗಳ ಮೇಲೆ ಆಹಾರದ ಮೂಲಕ ಅಲ್ಲಿನ ಭೂಮಿಯ ಮತ್ತು ವಾತಾವರಣದ ಪ್ರಭಾವ. ಹಾಗೆಯೇ, ಭೂ ವಾತಾವರಣ ಪ್ರಭಾವಿತ ಆಹಾರ ಸೇವಿಸಿ ಬೆಳೆದ ದೇಹಗಳಲ್ಲಿರುವ ಮನಸ್ಸಿನ ಮೇಲೂ ಇವುಗಳೆಲ್ಲದರ ಪ್ರಭಾವ. ಅಂತಹ ಮನಸ್ಸುಗಳ ಭಾವಸಮುಷ್ಠಿಯಿಂದಲೇ ಅಲ್ಲಿನ ಜನಾಂಗದ ಗುಣ, ವಿಚಾರ, ಆಚಾರ, ಸಂಸ್ಕೃತಿ ಮತ್ತು ಸಂಸ್ಕಾರಗಳ ವಿಕಾಸ.

ಮೂಲತಃ ಇರುವುದು ಮೂರು ಗುಣಗಳು, ಸತ್ವ, ರಜ ಮತ್ತು ತಮ. ಈ ಗುಣಗಳು ಸಾತ್ವಿಕ, ರಾಜಸಿಕ ಮತ್ತು ತಾಮಸಿಕ ಪ್ರವೃತ್ತಿಯನ್ನು ಪ್ರಕಟಗೊಳಿಸುತ್ತವೆ. ಒಂದು ಪ್ರದೇಶದ ಜನಾಂಗದ ಗುಣಗಳಲ್ಲಿ, ಪ್ರತಿ ವ್ಯಕ್ತಿಯಲ್ಲೂ ಇರುವ ಹಾಗೆ ಈ ಮೂರೂ ಗುಣಗಳು, ಪ್ರಮಾಣ ಭೇದವಿದ್ದರೂ, ಇರುತ್ತವೆ. ಯಾವ ಗುಣದ ಪ್ರಮಾಣ ಅಧಿಕವಾಗಿದ್ದರೆ, ಅದನ್ನು ಆ ಜನ ಸಮೂಹದ ಗುಣವೆಂದು ಪರಿಗಣಿಸಲಾಗುತ್ತದೆ.

ಇಡೀ ಭೂಮಂಡಲದಲ್ಲಿ ಬೇರೆ ಬೇರೆ ಗುಣಗಳಿಂದ ಕೂಡಿದ ಸಾವಿರಾರು ಭೂಭಾಗಗಳಿರುವುದರಿಂದ, ಜಗತ್ತಿನಲ್ಲಿ ಮಾನವನು ಒಂದೇ ಜಾತಿಯ (Species) ಪ್ರಾಣಿಯಾದರೂ, ಆಯಾಯಾ ಪ್ರದೇಶದ ಭೂಮಿ ಮತ್ತು ವಾತಾವರಣದ ಆಧಾರಿತವಾಗಿ ವಿಕಾಸಗೊಂಡ ನೂರಾರು ಜನಾಂಗಗಳು ಈ ಜಗತ್ತಿನಲ್ಲಿ ಇವೆ ಎನ್ನವುದೇ ಈ ಮುಕ್ತಕದ ಹೂರಣ.

**ಮುಕ್ತಕ-338**

**ಓರ್ವ ನಾನೆಂದು ನೀನೆಂತು ತಿಳಿಯುವೆ ಜಗದಿ |**
**ನೂರ್ವರಣಗಿಹರು ನಿನ್ನಾತ್ಮ ಕೋಶದಲಿ ||**
**ಪೂರ್ವಿಕರು, ಜತೆಯವರು, ಬಂಧುಸಖಶತ್ರುಗಳು |**
**ಸರ್ವರಿಂ ನಿನ್ನ ಗುಣ - ಮಂಕುತಿಮ್ಮ ||**

ನಾನೆಂದು=ನಾನು+ಎಂದು, ನೀನೆಂತು=ನೀನು+ಎಂತು,

ನೂರ್ವರಣಗಿಹರು=ನೂರ್ವರು+ಅಣಗಿ+ಇಹರು, ನಿನ್ನಾತ್ಮ=ನಿನ್ನ+ಆತ್ಮ

ನಿನ್ನಾತ್ಮಕೋಶದಲಿ=ಅಂತರಂಗದಲಿ, ಪೂರ್ವಿಕರು=ಪೂರ್ವಜರು, ಸರ್ವರಿಂ=ಎಲ್ಲರಿಂದ.

ನಾನು ಒಬ್ಬನೇ, ಒಬ್ಬಂಟಿ, ನನ್ನಿಂದಲೇ ನಾನು, ಎಂದು ನೀ ತಿಳಿಯಬೇಡ, ನಿನ್ನ ಭಾವಗಳಲ್ಲಿ, ಯೋಚನೆಗಳಲ್ಲಿ, ಗುಣಗಳಲ್ಲಿ ಮತ್ತು ಅಂತರಾತ್ಮದಲ್ಲಿ, ನಿನ್ನ ಪೂರ್ವಜರ, ಸ್ನೇಹಿತರ, ಬಂಧುಗಳ, ಸನ್ನಿಹಿತರ ಮತ್ತು ಶತ್ರುಗಳ, ಹೀಗೆ ನಿನ್ನ ಸಂಪರ್ಕಕ್ಕೆ ಬಂದ ಎಲ್ಲರ ಪ್ರಭಾವವಿದೆ. ಎಂದು ಒಬ್ಬ ವ್ಯಕ್ತಿಯ ರೂಪುಗೊಳ್ಳುವಿಕೆಯನ್ನು ವಿಶಧೀಕರಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

(169)

| ಸಂಸಾರ ಸುಖ 339-343 | ಕಗ್ಗ ರಸಧಾರೆ-2 |
|---|---|

ಗರ್ಭದಲ್ಲಿ ತಂದೆ ತಾಯಿಯರ ಗುಣದ ಜೊತೆಗೆ, ಹಿಂದಿನ ಏಳು ತಲೆಮಾರಿನವರೆಲ್ಲರ ಅಥವಾ ಯಾರಾದರೊಬ್ಬರ ಅಥವಾ ಕೆಲವರ ಸಮ್ಮಿಶ್ರ ಗುಣ ಮತ್ತು ಸ್ವಭಾವಗಳು ಶಿಶುವಿಗೆ ಬರಬಹುದು ಎನ್ನುತ್ತದೆ ವಂಶ ಸಿದ್ಧಾಂತ (genetic theory). ನಮ್ಮ ಬಂಧುಗಳೊಬ್ಬರಲ್ಲಿ ಹುಟ್ಟಿದ ಅವಳಿ ಗಂಡು ಮಕ್ಕಳಲ್ಲಿ, ಒಬ್ಬ ತಾಯಿಯ ತಂದೆಯಂತೆಯೂ, ಮತ್ತೊಬ್ಬ ತಂದೆಯ ತಂದೆಯಂತೆಯೂ, ಬಣ್ಣ, ಆಕಾರ ಮತ್ತು ಗುಣಗಳನ್ನು, ಎರಕ ಹೊಯ್ದಂತೆ ಹುಟ್ಟಿದ್ದಾರೆ. ಇದು ಏಕೆ ಹೀಗೆ ಎಂದು ಯೋಚಿಸಿದರೆ ಅರ್ಥವಾಗದ ವಿಷಯ.

ಹುಟ್ಟಿದ ನಂತರ ನಮ್ಮ ಮನೆ, ಅಲ್ಲಿನ ವಾತಾವರಣ, ತಂದೆತಾಯಿಯರ, ಒಡಹುಟ್ಟಿದವರ, ಅಕ್ಕ-ಪಕ್ಕದವರ ಸ್ನೇಹಿತರ, ಗುರು ಹಿರಿಯರ ಮತ್ತು ನಮ್ಮ ಓದು, ವಿದ್ಯಾಭ್ಯಾಸ, ಸಹವಾಸ, ಎಲ್ಲವೂ ನಮ್ಮ ಮೇಲೆ ಪ್ರಭಾವ ಬೀರಿ ನಮ್ಮ ಸ್ವಭಾವ ಮತ್ತು ಗುಣಗಳು ರೂಪುಗೊಳ್ಳುವಂತೆ ಮಾಡುವಾಗ ನಾನು, ನನ್ನಿಂದಲೇ ರೂಪುಗೊಂಡೆ ಎಂದರೆ

ತಪ್ಪಾಗುತ್ತದಲ್ಲವೇ. ಕೆಲವರು ಅಜ್ಞಾನದಿಂದ (I am a self made man) ಎನ್ನುತ್ತಾರೆ, ಇದನ್ನೇ ಮಾನ್ಯ ಗುಂಡಪ್ಪನವರು 'ಸರ್ವರಿಂ ನಿನ್ನ ಗುಣ' ಎಂದು ಬಹಳ ಸ್ಪಷ್ಟವಾಗಿ ಉಲ್ಲೇಖಿಸಿದ್ದಾರೆ.

ಜೀವನದಲ್ಲಿ ನಮ್ಮ ಅನುಭವಗಳ, ನಮ್ಮೊಡನೆ ನಡೆಯುವ ಘಟನೆಗಳ, ಕಡೆಗೆ ನಮ್ಮ ಶತ್ರುಗಳಿಂದಲೂ ಏನೇನನ್ನೋ ಕಲಿತು ನಮ್ಮ ಗುಣ ವೃದ್ಧಿಗೊಳಿಸಿಕೊಳ್ಳುತ್ತೇವೆ. ಹಾಗಾಗಿ ನಮ್ಮ ಗುಣ ಸಂಪೂರ್ಣವಾಗಿ ಸ್ವಂತದ್ದೇ ಆಗಿರದೆ, ಈ ಜಗತ್ತಿನಲ್ಲಿ ನಾವು ಪಡೆದುಕೊಂಡ ಎಲ್ಲ ಸಂಪರ್ಕಗಳಿಂದ ರೂಪುಗೊಳ್ಳುತ್ತದೆ ಎನ್ನುವುದೇ ಮುಕ್ತಕದ ಆಂತರ್ಯ,

## ಸಂಸಾರ ಸುಖ 339-343

**ಮುಕ್ತಕ - 339**

**ನಿನ್ನಜ್ಜ ಮುತ್ತಜ್ಜ ಮೂಲಜ್ಜರೆಲ್ಲರುಂ।**
**ನಿನ್ನೊಳವತರಿಸಿ, ಮುಂದಿನ್ನು ಜನಿಸಲಿಹ ॥**
**ನಿನ್ನ ಮಗ ಮೊಮ್ಮ ಮರಿಮೊಮ್ಮರೊಳು ಜೀವಿಪ್ಪರ್।**
**ಅನ್ವಯ ಚಿರಂಜೀವಿ - ಮಂಕುತಿಮ್ಮ॥**

ಮೂಲಜ್ಜರೆಲ್ಲರುಂ=ಮೂಲಜ್ಜರು+ಎಲ್ಲರುಂ, ನಿನ್ನೊಳವತರಿಸಿ=ನಿನ್ನೊಳು+ಅವತರಿಸಿ,
ಮುಂದಿನ್ನು=ಮುಂದೆ+ಇನ್ನು,
ಮರಿಮೊಮ್ಮರೊಳು=ಮರಿ ಮೊಮ್ಮಕ್ಕಳಲ್ಲಿ, ಅನ್ವಯ=ಈ ರೀತಿ,

ವಂಶವಾಹಿನಿಯ ಸಿದ್ಧಾಂತದ ಪ್ರಕಾರ ನಮ್ಮ ತಂದೆ, ಅಜ್ಜ, ಮುತ್ತಜ್ಜ, ತಾಯಿ, ಅಜ್ಜಿ, ಮುತ್ತಜ್ಜಿ, ಹೀಗೆ ಹಿಂದಿನ ಏಳು ತಲೆಮಾರಿನ ಎಲ್ಲ ಜನರ ಸ್ವಭಾವ ಮತ್ತು ರೂಪಗಳು ನಮ್ಮೊಳಗೆ ಅವತರಿಸಿರಬಹುದು ಮತ್ತು ಅವರುಗಳು ನಮ್ಮನ್ನೂ ಸೇರಿಸಿಕೊಂಡು ನಮ್ಮ ಮಗ, ಮೊಮ್ಮಗ, ಮರಿಮಗ ಹೀಗೆ ಮುಂದಿನ ಏಳು

ತಲೆಮಾರುಗಳಿಗೆ ಸ್ವಭಾವ ಮತ್ತು ರೂಪಗಳನ್ನು ರವಾನಿಸುತ್ತಾ, ಚಿರಂಜೀವಿಯಂತೆ ಈ ಜಗತ್ತಿನಲ್ಲಿ ಜೀವಿಸುತ್ತಾರೆ ಎಂದು ಜಗತ್ತಿನ ನಿರಂತರತೆಯ ಸ್ವರೂಪವನ್ನು ವಿವರಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ನಮ್ಮ ಪೂರ್ವಜರ ವಂಶವಾಹಿನಿ (genes) ಗಳಲ್ಲಿ ಅಡಕವಾಗಿರುವ ಗುಣ ಮತ್ತು ಸ್ವಭಾವಗಳ ಮೇಲೆ ಹೇಗೆ ನಮ್ಮ ಗುಣ ಸ್ವಭಾವಗಳು ಅಧಾರಪಟ್ಟಿರುತ್ತವೆ. ಎನ್ನುವುದನ್ನು ಇತ್ತೀಚೆಗೆ ವಿಜ್ಞಾನಿಗಳು ತೀವ್ರ ಸಂಶೋಧನೆ ನಡೆಸುತ್ತಿದ್ದಾರೆ. ನಮ್ಮ ಭಾರತೀಯ ವೇದಸಂಸ್ಕೃತಿಯು ಇದನ್ನು ಮನಗಂಡು, ಜೀವಿಗಳ ನಿರಂತರ ಪ್ರಯಾಣದ ಬಗ್ಗೆ ಖಚಿತವಾಗಿ ಕಂಡು ಕೊಂಡಿದ್ದಾರೆ. ವೈಜ್ಞಾನಿಕವಾಗಿ ತೀರ ಹತ್ತಿರದ ಬಂಧುಗಳಲ್ಲಿ ವೈವಾಹಿಕ ಸಂಬಂಧಗಳಾದರೆ, ಮುಂದೆ ಹುಟ್ಟುವ ಮಕ್ಕಳಲ್ಲಿ ದೈಹಿಕ, ಮಾನಸಿಕ ಮತ್ತು ಭೌದ್ಧಿಕ ಬೆಳೆವಣಿಗೆ ಕುಂಠಿತವಾಗುತ್ತದೆಂದು, ಅಂತಹ ವಿವಾಹಗಳನ್ನು ನಿಷೇದಿಸಿದ್ದರು. ಇತ್ತೀಚೆಗೆ ಆ ವಿಚಾರವನ್ನು ಗೊಡ್ಡು ಸಂಪ್ರದಾಯವೆಂದು ಅಲ್ಲಗೆಳೆಯುವ ಪ್ರವೃತ್ತಿ ಅಧಿಕವಾಗಿದೆ.

ಆದರೆ, ನಮ್ಮ ಅರಿವಿಲ್ಲದಂತೆಯೇ ಅಥವಾ ನಮ್ಮ ಪ್ರಮೇಯವಿಲ್ಲದಂತೆಯೇ, ನಮ್ಮ ಪೂರ್ವಜರ ಸ್ವಭಾವ ಮತ್ತು ಗುಣಗಳು ನಮ್ಮೊಳಕ್ಕೆ ಬಂದಿರುತ್ತದೆ. ಆದರೆ ಯಾರ ಯಾವ ಗುಣ ಯಾರಿಗೆ ಯಾವ ಪ್ರಮಾಣದಲ್ಲಿ ಬಂದು ಸೇರಿರುತ್ತದೆ ಎನ್ನುವುದು ಹೇಳಲು ಅಸಾಧ್ಯ. ಏಳು ತಲೆಮಾರಿನಲ್ಲಿ ಯಾರದ್ದಾದರೂ ಸಮಗ್ರವಾದ ಗುಣ ಸ್ವಭಾವಗಳು ಮುಂದಿನ ಏಳು ತಲೆಮಾರಿನಲ್ಲಿ ಯಾರಿಗಾದರೂ ಬರಬಹುದು, ಸಮ್ಮಿಶ್ರವಾಗಿ ಬರಬಹುದು ಅಥವಾ ಯಾವುದೋ ಒಂದು ಅಥವಾ ಕೆಲ ಗುಣಗಳು ಬಂದು ಸೇರಿರಬಹುದು. ನಮ್ಮಲ್ಲಿ ಹೀಗೆ ಗುಣಗಳು ಬಂದಿರುವುದಕ್ಕೆ ಪೂರಕವಾದ ಉದಾಹರಣೆಗಳು ಹೇರಳವಾಗಿ ಸಿಗುತ್ತವೆ.

ಹೀಗೆ ಪ್ರಕೃತಿ, ಜಗತ್ತಿನ ಪ್ರಾಣಿಗಳ ಗುಣ ಮತ್ತು ಸ್ವಭಾವಗಳು ನಿರಂತರವಾಗಿ ಹರಿಯುವಂಥಹ ಒಂದು ಕ್ರಮವನ್ನಿಟ್ಟು ಈ ಜಗತ್ತಿನ ವೈವಿಧ್ಯತೆಯನ್ನು ಸದಾ ಹೀಗೆ ಇರುವಂತೆ ನೋಡಿಕೊಂಡಿದೆ ಎಂದರೆ ತಪ್ಪಾಗಲಾರದು. ಈ ಗುಣ ಸ್ವಭಾವಗಳು ತಲೆಮಾರಿನಿಂದ ತಲೆಮಾರಿಗೆ ಹರಿದು ಬರುವುದರಿಂದ "ಹಿಂದಿನವರು ಇಂದಿನವರಲ್ಲಿ ಮತ್ತು ಇಂದಿನವರು ಮುಂದಿನವರಲ್ಲಿ ಚಿರಂಜೀವಿಗಳಂತೆ ಜೀವಿಸುತ್ತಾರೆ ಎನ್ನುವುದೇ ಈ ಮುಕ್ತಕದ ಹೂರಣ.

**ಮುಕ್ತಕ-340** **ರೇಖಾರಹಸ್ಯಗಳು ನಿನ್ನ ಹಣೆಯವದಿರಲಿ।**

**ನೀಂ ಕಾಣ್ಬ ರೂಪಭಾವಂಗಳೊಳ ಮಿಹುವು॥**

**ತಾಕಿ ನಿನ್ನಾತುಮವ ನಾಕನರಕಂಗಳಂ।**

**ಏಕವೆನಿಸುವುವು ನಿನಗೆ - ಮಂಕುತಿಮ್ಮ॥**

ಹಣೆಯವದಿರಲಿ=ಹಣೆಯವು+ಅದು+ಇರಲಿ,

ರೂಪಭಾವಂಗಳೊಳಮಿಹುವು=ರೂಪಭಾವಂಗಳ+ಒಳಂ+ಇಹುವು, ನಿನ್ನಾತುಮವ=ನಿನ್ನ+ಆತುಮವ,

ನಾಕನರಕಂಗಳಂ=ನಾಕ+ನರಕಂಗಳಂ





ಕಾಣ್ಬ=ಕಾಣುವ, ತಾಕಿ=ಮುಟ್ಟಿ,ನಿನ್ನಾತುಮವ=ನಿನ್ನ ಆತ್ಮವ, ನಾಕನರಕಂಗಳಂ=ಸ್ವರ್ಗ ನರಕಗಳನ್ನು

ಏಕವೆನಿಸುವುವು=ಒಂದೇ ಎನಿಸುತ್ತವೆ.

ನಿನ್ನ ಹಣೆಯಲ್ಲಿ ರಹಸ್ಯವಾಗಿರುವ ಹಣೆಬರಹಗಳ ಗೆರೆಗಳು ಇವೆ. ಅವು ಒತ್ತಟ್ಟಿಗೆ ಇರಲಿ, ನೀನು ನೋಡುವ ರೂಪ, ಭಾವಗಳ ಒಳಗೆ ಇರುವ ಸತ್ಯ ಮತ್ತು ಸತ್ವ, ನಿನ್ನ ಆತ್ಮವನು ತಾಕಿ ನಿನಗೆ ಸ್ವರ್ಗ ನರಕಗಳು ಒಂದೇ ಅನಿಸುವಂತೆ ಮಾಡುತ್ತವೆ, ಎಂದು ನಮ್ಮ ಮತ್ತು ಈ ಜಗದ ಸಂಬಂಧದಲ್ಲಿ ನಮಗೆ ಯಾವ ರೀತಿಯ ಅನುಭವವಾಗಬಹುದು ಎಂಬ ವಿಷಯವನ್ನು ಉಲ್ಲೇಖಿಸಿದ್ದಾರೆ ಮಾನ್ಯ ಗುಂಡಪ್ಪನವರು.

ಹಣೆಯ ಬರಹವೆಂದರೆ ಇಂದಿನ ನಮ್ಮ ಬದುಕಿನಲ್ಲಿ, ನಮ್ಮ ಹಿಂದಿನ ಜನ್ಮದ ಕರ್ಮಗಳ ಮತ್ತು ವಾಸನೆಗಳ ಪ್ರಭಾವ. ಅದು ನಮಗೆ ಅರ್ಥವಾಗುವುದಿಲ್ಲ. ಅದನ್ನು ಓದಲು ನಾವು ಜೋತಿಷ್ಕನ ಬಳಿಯೋ ಅಥವಾ ಹಸ್ತಸಾಮುದ್ರಿಕೆಯನ್ನು ಅರಿತವರಲ್ಲೋ ಹೋಗುತ್ತೇವೆ. ನಮಗೆ ಅಲ್ಲಿ ನಿರಾಶೆ ಕಟ್ಟಿಟ್ಟ ಬುತ್ತಿ, ಏಕೆಂದರೆ ಅವರಿಗೂ ಸತ್ಯ ಗೋಚರವಾಗುವುದಿಲ್ಲ. ಅದು ರಹಸ್ಯ. ಹಾಗಾಗಿ ಅದು ಒತ್ತಟ್ಟಿಗೆ ಇರಲಿ. ಅದರ ಬಗ್ಗೆ ಚಿಂತೆ ಮಾಡಬೇಡ ಎನ್ನುವ ಒಂದು ಸ್ಪಷ್ಟ ಆದೇಶವನ್ನು ಮಾನ್ಯ ಗುಂಡಪ್ಪನವರು ನಮಗೆ ನೀಡಿದ್ದಾರೆ.

"ಗಾಮಾವಿಶ್ಯ ಚ ಭೂತಾನಿ ಧಾರಯಾಮ್ಯಹಮೋಜಸಾ, ಪುಷ್ಣಾಮಿ ಚೌಷಧೀಃ ಸರ್ವಾಃ ಸೋಮೋ ಭೂತ್ವಾ ರಸಾತ್ಮಕಃ' (ಭ. ಗೀ. 15-13) ಎಂದರೆ ನಾನು ಭೂಮಿಯನ್ನು ಪ್ರವೇಶ ಮಾಡಿ ಪ್ರಾಣಿಗಳನ್ನು ಓಜಸ್ಸಿನಿಂದ ಧರಿಸಿದ್ದೇನೆ, ರಸಸ್ವರೂಪದ ಚಂದ್ರನಾಗಿ ಎಲ್ಲಾ ವನಸ್ಪತಿಗಳನ್ನು ಪೋಷಿಸುತ್ತೇನೆ' ಎಂದು ಭಗವದ್ಗೀತೆಯಲ್ಲಿ ಶ್ರೀ ಕೃಷ್ಣ ಹೇಳುತ್ತಾನೆ. ನಾವು ಈ ಬದುಕಿನಲ್ಲಿ ಕಾಣುವ ಬೇರೆ ಬೇರೆ ರೂಪಗಳ ಅಂತರಂಗದಲ್ಲಿ ಇರುವ ಆ ಪರಮ ಚೈತನ್ಯವನ್ನು ಅರಿತುಕೊಂಡರೆ ಅನಾದಿಕಾಲದಿಂದ ಎಲ್ಲ ರೂಪಗಳಲ್ಲೂ ಹರಿದುಬರುತ್ತಿರುವುದು ಇದೇ ಚೈತನ್ಯವೆಂಬ ಸತ್ಯ ನಮ್ಮ ಅರಿವಿಗೆ ಬಂದರೆ, ಆ ಅರಿವು ನಮ್ಮ ಆತ್ಮಾನುಭವಕ್ಕೆ ಬಂದಾಗ, ನಮ್ಮ ಪೂರ್ವಜರಲ್ಲಿದ್ದ ಚೇತನವೇ ನನ್ನಲ್ಲಿಯೂ ಮತ್ತೆ ಮುಂದಿನ ಸಂತತಿಯಲ್ಲೂ ಅವ್ಯಾಹತವಾಗಿ ಹರಿಯುತ್ತದೆ ಎಂಬ ವಿಷಯ ಸ್ಪಷ್ಟವಾಗುತ್ತದೆ.

'ನಾನು' ಅನ್ಯ ರೂಪಗಳಲ್ಲಿರುವಂತೆ 'ಆತ್ಮ' ಎಂಬ ಅರಿವು ಮೂಡಿದಾಗ, ಶಬ್ದ, ಸ್ಪರ್ಶ, ರೂಪ, ರಸ ಗಂಧಾದಿಗಳಿಂದ ಸದಾಕಾಲ ಪ್ರಭಾವಿಸಲ್ಪಡುವ ಈ ದೇಹ ನಾನಲ್ಲ, ನಾನು ಶುದ್ಧ ಚೈತನ್ಯವೆಂಬ ಅರಿವು ಮೂಡಿದಾಗ ಇಂದ್ರಿಯ ಸಂಬಂಧದಿಂದುಂಟಾಗುವ ಕಷ್ಟ ಸುಖಗಳ ಪರಿಧಿಯಿಂದ ಭಿನ್ನವಾಗಿ ನಮ್ಮನ್ನು ನಾವು ಗುರುತಿಸಿಕೊಂಡಾಗ ಈ ಬದುಕಿನಲ್ಲಿಯ ಕಷ್ಟ ಸುಖಗಳಿಂದ ಭಾದಿತರಾಗದೆ ಒಂದು ತಟಸ್ಥಭಾವ ತಳೆಯಲಾಗುತ್ತದೆ. ಆ ಸ್ಥಿತಿಯಲ್ಲಿ ಸುಖ ಮತ್ತು ದುಃಖಗಳು ನಮಗೆ ಒಂದೇ ರೀತಿ ಕಾಣುತ್ತವೆ ಎನ್ನವುದೇ ಈ ಮುಕ್ತಕದ ಹೂರಣ.

**ಮುಕ್ತಕ-341**

**ಕ್ಷೀರಾನ್ನದಿಂದ ನರಪುಷ್ಟಿ; ಹಸುವಿಂ ಪಾಲು।**
**ಪೈರು ಬೆಳೆಸಿಂದೆ ಹಸು; ಪೈರುಗಳ್ಗೂರ।**
**ಸಾರದಿಂ ಪುಷ್ಟಿ; ಇಂತುಣಿಸುಮುಂಬನುಮೊಂದು।**
**ಪಾಲೇನು? ಪೇಲೇನು? – ಮಂಕುತಿಮ್ಮ॥**

ಕ್ಷೀರಾನ್ನದಿಂದೆ=ಕ್ಷೀರ+ಅನ್ನದ+ಇಂದ, ಪೈರುಗಳ್ಗೂರ=ಪೈರ್ಗಳ್+ಊರ,
ಇಂತುಣಿಸುಮುಂಬನುಮೊಂದು=ಇಂತೂ+ಉಣಿಸುಂ+ಉಂಬನುಂ+ಒಂದು.
ಕ್ಷೀರಾನ್ನ-ಹಾಲನ್ನ, ಪುಷ್ಟಿ=ಶಕ್ತಿ, ಸಾರದಿಂ=ಸಾರದಿಂದ, ಉಣಿಸುಂ=ಊಟವು,
ಉಂಬನುಂ=ಉನ್ನುವವನು, ಪಾಲೇನು=ಹಾಲೇನು, ಪೇಲೇನು=ಮಲವೇನು.

ಹಾಲಿನಿಂದ ನರರಿಗೆ ಪೌಷ್ಟಿಕತೆ ದೊರೆಯುತ್ತದೆ. ಆ ಹಾಲನೀಯುವ ಹಸುವಿಗೆ ಹಸಿರು ಪೈರು, ಹುಲ್ಲು ಮತ್ತು ಕಾಳುಗಳಿಂದ ಪೌಷ್ಟಿಕತೆ ಸಿಗುತ್ತದೆ. ಆ ಪೈರುಗಳಿಗೆ ಬೆಳೆಯುವ ಭೂಮಿಗೆ ಊರಜನರ ತ್ಯಾಜ್ಯದಿಂದ ಸಾರ ಅಥವಾ ಪೌಷ್ಟಿಕತೆ ಸಿಗುತ್ತದೆ. ಹೀಗೆ ಒಂದಕ್ಕೊಂದು ಅಧಾರಪಟ್ಟಿರುವಾಗ, ಹಾಲು ಉತ್ತಮ ಮಲ ಅಧಮ ಎನ್ನುವುದು ಏಕೆ? ಸಮಗ್ರತೆಯ ಕಾಣು ಎನ್ನುವಂತೆ ಈ ಜಗತ್ತಿನ ಎಲ್ಲಕ್ಕೂ ಮತ್ತೊಂದರ ಮೇಲಿನ ನಿರ್ಭರತೆಯ ಚಿತ್ರಣವನ್ನು ನಮಗೆ ನೀಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ನಾ ಕಂಡಂತೆ ಹಿಂದಿನ ಕಾಲದಲ್ಲಿ ಈ "ಡ್ರೈನೇಜ್" ಬರುವುದಕ್ಕಿಂತ ಮುಂಚೆ ಪ್ರತೀ ಮನೆಯಲ್ಲೂ ಸೋಕ್ ಪಿಟ್ ಗಳಿರುತ್ತಿದ್ದವು. ಅವುಗಳು ತುಂಬಿದಾಗ ಅದನ್ನು ತೆಗೆದುಕೊಂಡು ಹೋಗಲು ಗಾಡಿಗಳು ಸುತ್ತುತ್ತಿರುತ್ತಿದವು. ಅದನ್ನು ತೆಗೆದು ಮಣ್ಣಿನೊಂದಿಗೆ ಮಿಶ್ರಣ ಮಾಡಿ ಮತ್ತು ಸಗಣಿಯೊಂದಿಗೆ ಸೇರಿಸಿ ಅತ್ಯುತ್ತಮವಾದ ನೈಸರ್ಗಿಕ

ಗೊಬ್ಬರವನ್ನು ತಯಾರು ಮಾಡುತ್ತಿದ್ದರು. ಅಬ್ಬ! ಎಂತಹ ಅಸಹ್ಯ ಎಂದು ನೀವೆನ್ನಬಹುದು. ಈಗ ನೈಸರ್ಗಿಕ ಗೊಬ್ಬರ ನಮ್ಮ ಕಣ್ಣಿಗೆ ಬೀಳುತ್ತಿಲ್ಲ ಅಷ್ಟೇ. ಎಂತಹ ಗೊಬ್ಬರವಾದರೂ, ತಯಾರಿಕೆ ವಿಧಾನ ಮತ್ತು ಅದರ ವಾಸನೆ ಅಸಹ್ಯವೇ. ಆದರೆ ಅಂತಹ ಗೊಬ್ಬರದಿಂದ ಬೆಳೆದ ಬೆಳೆ ಬಹಳ ಉತ್ತಮವಾಗಿರುತ್ತಿತ್ತು. ಹಾಗೆ ಬೆಳೆದ ಬೆಳೆಯಲ್ಲಿನ ಕಾಳು ನಮಗೆ, ಹುಲ್ಲು ದನಕರುಗಳಿಗೆ ಆಹಾರ ರೂಪದಲ್ಲಿ ಯಥೇಚ್ಚವಾಗಿ ಸಿಗುತ್ತಿತ್ತು.

ಇಂದೊಂದು ಚಕ್ರ, ಹಾಲಿನಿಂದ ನಮಗೆ ಪುಷ್ಟಿ, ಆ ಹಾಲಕೊಡುವ ಹಸು ತಿನ್ನುವುದು ಹುಲ್ಲು ಮತ್ತು ಪೈರಕಡ್ಡಿ, ಆ ಹುಲ್ಲು ಮತ್ತು ಪೈರು ಬೆಳೆಯುವುದು ಭೂಮಿಯ ಸಾರದಿಂದ ಮತ್ತು ಆ ಭೂಮಿಯ ಸಾರ ವೃದ್ಧಿಯಾಗುವುದು ಜನರ ಮತ್ತು ಪ್ರಾಣಿಗಳ ತ್ಯಾಜ್ಯದಿಂದ. ಹೀಗೆ ನಿಸರ್ಗದಲ್ಲಿ ಪರಸ್ಪರ ನಿರ್ಭರತೆಯನ್ನು ಮಾನ್ಯ ಗುಂಡಪ್ಪನವರು ಒಂದು ದೃಷ್ಟಾಂತದ ಮೂಲಕ ಚಿತ್ರಿಸಿದ್ದಾರೆ.

ಇಲ್ಲಿ ಯಾರೂ ಸ್ವತಂತ್ರರಲ್ಲ. ಈ ಸೃಷ್ಟಿಯಲ್ಲಿ ಪ್ರತಿಯೊಂದೂ ಪರಸ್ಪರ ಆಧಾರ ಪಡಲೇಬೇಕು, ಬೇರೆ ದಾರಿಯಿಲ್ಲ. "ಹುಲ್ಲೆಗೆ ಹುಲ್ಲು-ಹುಲಿಗೆ ಹುಲ್ಲೆ" ಹೀಗೆ ಪ್ರಕೃತಿಯ ಚಿತ್ರವನ್ನು ನೋಡಿದರೆ ನಮಗೆ ಒಂದು





ಮತ್ತೊಂದರ ಮೇಲೆ ಅಧಾರಪಡುವುದು ಕಾಣುತ್ತದೆ. ಪ್ರಾಣಿಗಳಲ್ಲೇ ಶ್ರೇಷ್ಠ ಪ್ರಾಣಿಯೆಂದು ಪರಿಗಣಿಸಲ್ಪಟ್ಟ ಮಾನವ ಪ್ರಾಣಿಯೂ ಸಹ ಇದೇ ರೀತಿ ಜಗತ್ತಿನ ಎಲ್ಲದರಮೇಲೂ ಆಧಾರಪಟ್ಟಿದ್ದಾನೆ. ಹಾಗಾಗಿ ಯಾರೂ "ನಾನು ಸ್ವತಂತ್ರ" ಎಂದು ಬೀಗುವುದು ಸಲ್ಲ. ಸೃಷ್ಟಿಯಲ್ಲಿರುವ ಎಲ್ಲರಿಗೂ ಎಲ್ಲವನ್ನೂ ಇತ್ತು,ಒಂದಕ್ಕೆ ಒಂದು ಪೂರಕವಾಗಿಟ್ಟು, ಒಂದು ಇನ್ನೊಂದರ ಮೇಲೆ ಅಧಾರಪಡುವಂತೆ ಮಾಡಿ,ಅದರ ಅರಿವನ್ನೂ ಮನುಷ್ಯನಿಗೆ ಕೊಟ್ಟು ಅವನು ಎಲ್ಲವನ್ನೂ

ಕಾಪಾಡಬೇಕೆಂಬ ಒಂದು ಜವಾಬುದಾರಿಯನ್ನೂ ಕೊಟ್ಟಿದ್ದಾನೆ ಪರಮಾತ್ಮ. ಆದರೆ ಮನುಷ್ಯ ಈ ನೈಸರ್ಗಿಕ ಚಕ್ರವನ್ನು ಎಷ್ಟು ಕಾಪಾಡಿದ್ದಾನೆ ಅಥವಾ ಎಷ್ಟು ನಾಶಮಾಡಿದ್ದಾನೆ ಎನ್ನುವುದನ್ನು ನೋಡಿದರೆ, ನಮಗೆ ತೀವ್ರ ನಿರಾಶೆಯಾಗುತ್ತದೆ.

**ಮುಕ್ತಕ-342**

**ಪೂಸರದಿ ಕಾಂತಿ ಸೌರಭ ಮೊದಲನೆಯ ತಾಸು।**
**ವಾಸನೆಯ ಹಳಸು ಕೊಳಕೊಳಚೆಯಾ ಬಳಿಕ॥**
**ಮಾಸಿ ನಲುನಲುಗಿ ಮುಳ್ಳಹುದು ಮೂರನೇ ತಾಸು।**
**ಸಂಸಾರಕಥೆಯದುವೆ - ಮಂಕುತಿಮ್ಮ॥**

ಪೂಸರದಿ=ಪೂ+ಸರದಿ, ಮುಳ್ಳಹುದು=ಮುಳ್ಳು+ಅಹುದು,

ಸಂಸಾರಕಥೆಯದುವೆ=ಸಂಸಾರ+ಕಥೆಯು+ಅದುವೆ.

ಪೂಸರದಿ=ಹೂ ಮಾಲೆಯಲ್ಲಿ, ಕಾಂತಿ=ಹೊಳಪು, ಸೌರಭ-ಸುವಾಸನೆ.

ಆಗತಾನೆ ಪೋಣಿಸಿದ ಹೂಮಾಲೆಯಲ್ಲಿ ನವ ನವೀನತೆ ಇರುತ್ತದೆ ಮತ್ತು ಪರಿಮಳದ ಘಮಲು ಎಲ್ಲೆಲ್ಲೂ ಪಸರಿಸುತ್ತದೆ. ಆದರೆ ಸ್ವಲ್ಪ ಸಮಯದ ಬಳಿಕ ಅದು ಬಾಡುತ್ತಾ ತನ್ನ ಸುಗಂಧ ಮತ್ತು ನಾವೀನ್ಯವನ್ನು ಕಳೆದುಕೊಳ್ಳುತ್ತದೆ. ಸಮಯ ಕಳೆದಂತೆ ನಲುಗಿ, ಕೊಳೆತು ಸುಗಂಧ ದುರ್ಗಂಧಕ್ಕೆ ಎಡೆಮಾಡಿಕೊಡುತ್ತದೆ. ಸಂಜೆಯಹೊತ್ತಿಗೆ ಅದರ ವಾಸನೆ ಅಸಹನೀಯವಾಗಿ ಬಿಸುಡುವ ಮನಸ್ಸಾಗುತ್ತದೆ. ನಮ್ಮೆಲ್ಲರ ಜೀವನದ ಕಥೆಯೂ ಇಷ್ಟೇ ಎಂದು ಬದುಕಿನ ವಾಸ್ತವಿಕತೆಯನ್ನು ಉಪಮಾ ಸಹಿತ ವಿಶ್ಲೇಷಣೆ ಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ,

ನಮ್ಮೆಲ್ಲರ ಬದುಕೂ ಅಷ್ಟೇ. ಹೂವು ಮರದ ಬೇರಿನಿಂದ, ಕಾಂಡದಿಂದ, ಕೊಂಬೆ ಎಲೆಗಳಿಂದ ಸಾರವನ್ನು ಸೆಳೆದು ತನ್ನ ಸೌಂದರ್ಯ ಮತ್ತು ಸುಗಂಧವನ್ನು ಪಡೆದು, ವೃದ್ಧಿಸಿಕೊಂಡು ಹೊರಸೂಸುತ್ತದೋ, ಅದೇ ರೀತಿ ನಾವೂ ಸಹ ನಮ್ಮ ಪೂರ್ವಜರ ಬದುಕಿನಿಂದ, ತಂದೆತಾಯಿಯರಿಂದ, ಒಡಹುಟ್ಟಿದವರಿಂದ ಏನೆಲ್ಲಾ ಕಲಿತು ಬೆಳೆದು ಎಳೆಯ ವಯಸ್ಸಿನಲ್ಲಿ ಆಕಾಶದಷ್ಟು ಆಸೆ ಆಕಾಂಕ್ಷೆಗಳನ್ನೂ ಹೊತ್ತು ಥಳಥಳಿಸುತ್ತೇವೆ, ಯೌವನದಲ್ಲಿ ಹಾರಾಡುತ್ತೇವೆ.

ನಂತರ ಬಂಧಗಳು, ಸಂಬಂಧಗಳು, ಅನುಬಂಧಗಳು, ಹೀಗೆ ಏನೇನನ್ನೋ ಕಟ್ಟಿಕೊಂಡು ಹತ್ತು ಹಲವಾರು ಆಯಾಮಗಳನ್ನು ಸೃಷ್ಟಿಸಿಕೊಳ್ಳುತ್ತಾ ಬದುಕಿನ ಜಂಜಾಟದಲ್ಲಿ ಮುಳುಗಿ ತೇಲಾಡುತ್ತಾ, ಮನೆ ಮಕ್ಕಳು, ಅವರ

ಬೆಳವಣಿಗೆಗಳ ನಡುವೆ ನಾವು ನಮ್ಮ ಅಸ್ತಿತ್ವವನ್ನು ಬೆಳೆಸಿಕೊಳ್ಳಲು ಮತ್ತು ಉಳಿಸಿಕೊಳ್ಳಲು ಪರದಾಡುತ್ತೇವೆ. ವೃದ್ಧಾಪ್ಯದಲ್ಲಿ, ಹೂವಂತೆ ಬಾಡಿ, ನಮ್ಮ ಬದುಕೇ ನಮಗೆ ಭಾರವಾಗಿ ರೋಗ ರುಜಿನಗಳಿಗೆ ತುತ್ತಾಗಿ ಕೊಳೆತು ನಾರುತ್ತಾ, ತೊಳಲಾಡುತ್ತಾ, ಅನ್ಯರಿಗೂ ಅಸಹನೀಯವಾಗಿ ಬದುಕು ಸಾವುಗಳ ಮಧ್ಯೆ ಹೋರಾಡುತ್ತೇವೆ.

ಹೀಗೆ ಯೌವನದಲ್ಲಿ ಹಾರಾಡಿ, ಪ್ರೌಢಾವಸ್ಥೆಯಲ್ಲಿ ಹೋರಾಡಿ, ವೃದ್ಧಾಪ್ಯದಲ್ಲಿ ಪರದಾಡಿ ಅಂತ್ಯಗೊಳ್ಳುವುದೇ ನಮ್ಮ ಜೀವನವೆಂದು ಅರಿಯುವುದೇ ಈ ಮುಕ್ತಕದ ಹೂರಣ. ಅರಿತರೆ ಸಾಲದು, ಬದುಕನ್ನು ಒಂದು ನಿರ್ಲಿಪ್ತ ಭಾವದಿಂದ ಬದುಕಿದರೆ, ಈ ಎಲ್ಲ ಅವಸ್ಥೆಗಳಲ್ಲಿ ಉಂಟಾಗುವ ನೋವನ್ನು ಕಡಿಮೆ ಮಾಡಿಕೊಳ್ಳಬಹುದು ಮತ್ತು ಆ ನೋವನ್ನು ಸಹಿಸುವ ಶಕ್ತಿಯನ್ನು ಪಡೆದುಕೊಳ್ಳಬಹುದು.

**ಮುಕ್ತಕ- 343**

**ಸಾಕು ಸಾಕೆನಿಸುವುದು ಲೋಕಸಂಪರ್ಕಸುಖ |**
**ಸೋಕಿದೆಡೆ ತುರಿಯನೆಬ್ಬಿಸುವ ತುರುಚಿಯದು ||**
**ಮೂಕನವೆ ತುರಿಸದಿರೆ, ತುರಿಯುತಿರೆ ಹುಣ್ಣುರಿತ |**
**ಮೂಕನಪಹಾಸ್ಯವದು - ಮಂಕುತಿಮ್ಮ. ||**

ಸೋಕಿದೆಡೆ=ಸೋಕಿದ+ಎಡೆ, ತುರಿಯನೆಬ್ಬಿಸುವ=ತುರಿಯನು+ಎಬ್ಬಿಸುವ,

ತುರುಚಿಯದು=ತುರಚಿಯು+ಅದು,  ಹುಣ್ಣುರಿತ=ಹುಣ್ಣು+ಉರಿತ,

ಮೂಕನಪಹಾಸ್ಯವದು=ಮೂಕನ+ಅಪಹಾಸ್ಯವದು.

ಲೋಕ ಸಂಪರ್ಕದ ಸುಖ ಹಲವು ಬಾರಿ ಸಾಕು ಸಾಕೆನಿಸುತ್ತದೆ. ಸಂಪರ್ಕಗಳು, ತುರಿಕೆ ಸೊಪ್ಪು ಸೋಕಿದಾಗ ಆಗುವಂತಾ ಉರಿಯನ್ನು ನೀಡುತ್ತವೆ. ತುರಿಸಿಕೊಂಡರೆ ಹುಣ್ಣಾಗಿ ಮತ್ತಷ್ಟು ನವೆಯಾಗುತ್ತದೆ ಮತ್ತು ತುರಿಸಿಕೊಳ್ಳದಿದ್ದರೆ ಒಂದು ಮೂಕವೇದನೆಯನ್ನು ನೀಡುತ್ತದೆ. ಇದು ಹೇಗಿದೆಯಂದರೆ, ಒಬ್ಬ ಮೂಕ, ಆದರೂ ಅಪಹಾಸ್ಯ ಮಾಡಬೇಕೆಂದುಕೊಂಡಾಗ ಮಾತನಾಡಲಾಗದೆ ಬರೀ ಕೈಸನ್ನೆಯಲ್ಲೇ ಮಾಡುವಂಥಾ ಚೇಷ್ಟೆಯನ್ನೆ ಮಾಡುತ್ತೇವೆ ನಾವು ಎಂದು ಪ್ರಸ್ತಾಪಮಾಡುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಈ ಲೋಕದಲ್ಲಿನ ಪರಸ್ಪರ ಸಂಬಂಧ ಮತ್ತು ಸಂಪರ್ಕಗಳೇ ಹಾಗೆ. ಇಷ್ಟಪಟ್ಟು ಕಟ್ಟಿಕೊಂಡ ಸಂಬಂಧಗಳು, ಮೊದಮೊದಲು ಹಿತವಾಗಿದ್ದರೂ ಕ್ರಮೇಣ ಕಿರಿಕಿರಿಯನ್ನುಂಟುಮಾಡುತ್ತಾ ಅಸಹನೀಯವಾಗುತ್ತದೆ. ಅದರೊಂದಿಗೆ ಹೋರಾಡಲು ಹೊರಟರೆ, ಘರ್ಷಣೆಯಾಗಿ ಸಂಬಂಧಗಳು ಗಾಯಗೊಂಡು ವ್ರಣವಾಗುತ್ತದೆ. ಅತೀವ ನೋವನ್ನುಂಟುಮಾಡುತ್ತದೆ.

ಅಕಸ್ಮಾತ್ ನಾವು ಆ ಕಿರಿಕಿರಿಯನ್ನು ತಡೆದುಕೊಂಡು ಇರಲು ಸಹನೆಯನ್ನು ತಂದುಕೊಂಡರೆ, ಹೇಳಿಕೊಳ್ಳಲೂ ಆಗದೆ, ಸುಮ್ಮನಿರಲೂ ಆಗದೆ, ಒಳಗೊಳಗೇ ಹಿಂಸೆ ಅನುಭವಿಸಬೇಕು. ಇದು ಯಾವ ರೀತಿ ಇರುತ್ತದೆಂದರೆ





ಒಬ್ಬ ಮೂಕ ಹಾಸ್ಯ ಮಾಡಬೇಕೆಂದುಕೊಂಡರೂ, ಮಾತನಾಡಲಾಗದೆ ಮತ್ತು ಸುಮ್ಮನಿರಲಾಗದೆ ಮಾಡುವ ಮೂಕ ಚೇಷ್ಟೆಗಳಂತೆ ಎಂದು ಹೇಳುತ್ತಾರೆ ಮಾನ್ಯ ಗುಂಡಪ್ಪನವರು.

ನಾವು ಎಲ್ಲಿಯ ತನಕ ಈ ಜಗತ್ತಿಗೆ ಮತ್ತು ಈ ಜಗತ್ತಿನ ಸಂಬಂದಗಳಿಗೆ ಎಷ್ಟು ಹೆಚ್ಚಾಗಿ ಅಂಟಿಕೊಳ್ಳುತ್ತೇವೆಯೋ ಅಲ್ಲಿಯ ತನಕ ಅವುಗಳು ಮಾಡುವ ತುರಿಕೆ, ಒಳಗುದಿ, ನೋವುಗಳನ್ನೂ ಅನುಭವಿಸಲೇಬೇಕು. ಆಡಿಯಾದರೂ ಅನುಭವಿಸಬೇಕು ಅಥವಾ ಮೂಕ ವೇದನೆಯನ್ನಾದರೂ ಅನುಭವಿಸಬೇಕು. ಅನ್ಯದಾರಿ ಇಲ್ಲ. ಹಾಗೆ ನಾವು ಅಂಟೀಯೂ ಅಂಟದ ಹಾಗೆ ಇದ್ದರೆ, ಈ ನವೆ ಮತ್ತು ಗಾಯಗಳು ಮಾಡುವ ನೋವನ್ನು ತಡೆದುಕೊಳ್ಳುವ ಶಕ್ತಿಯನ್ನು ಪಡೆದುಕೊಳ್ಳಬಹುದು.

# ಸುಖ ಭ್ರಾಂತಿ 344-348

**ಮುಕ್ತಕ-344**

**ಮಿಡಿಚೇಪೆಕಾಯಿಗಳ ತಡಬಡದೆ ನುಂಗುವುದು।**
**ಕಡಿಯ ಹೊಟ್ಟೆಯಲ್ಲಿ ಹರಳೆಣ್ಣೆ ಕುಡಿಯುವುದು॥**
**ಬಿಡುತಿರಲು ನೋವಾಗ ಸುಖವೀಗಳೆನ್ನುವುದು।**
**ಪೊಡವಿಗಿದೆ ಭೋಗವಿಧಿ - ಮಂಕುತಿಮ್ಮ॥**

ಸುಖವೀಗಳೆನ್ನುವುದು=ಸುಖವು+ಈಗಳೇ+ಎನ್ನುವುದು.

ಮಿಡಿಚೇಪೇಕಾಯಿಗಳು=ಕಸಗಟ್ಟು ಸೀಬೆ ಕಾಯಿಗಳು, ಕಡಿಯೆ=ತೊಂದರೆ ಮಾಡಿದರೆ, ಪೊಡವಿ=ಪೃಥ್ವಿ,

ಇನ್ನೂ ಮಾಗದ ಸಣ್ಣ ಸಣ್ಣ ಹಸೀ ಸೀಬೇಕಾಯಿಗಳನ್ನು ಆಸೆಯಿಂದ ಕಡಿದು, ಸಂಪೂರ್ಣ ಜಗಿಯದೆ ಆತುರಾತುರವಾಗಿ ನುಂಗಿ, ಹೊಟ್ಟೆನೋವು ಬರಿಸಿಕೊಂಡು, ಆ ನೋವ ನಿವಾರಣೆಗೆ, ಹರಳೆಣ್ಣೆ ಕುಡಿದು, ಆ ನೋವು ಕಡಿಮೆಯಾಗುವಾಗ, ಆಹಾ! ಇದೇ ಸುಖ ಎನ್ನುವಂತೆ ಇದೆ, ಮನುಷ್ಯರು ಈ ಜಗತ್ತಿನಲ್ಲಿ ಸುಖಗಳನ್ನು ಅನುಭವಿಸುವ ರೀತಿ ಎಂದು ಹೇಳುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಇಲ್ಲಿ ಸೀಬೇಕಾಯಿ ಕೇವಲ ಒಂದು ದೃಷ್ಟಾಂತವಷ್ಟೆ. ನಮ್ಮ ಜೀವನಗದಲ್ಲೂ ಯಾವುದೋ ಒಂದು ವಸ್ತುವನ್ನು ಆಸೆ ಪಡುತ್ತೇವೆ. ಅದು ನಮಗೆ ಹಿತವೊ, ಅಹಿತವೋ ಎಂದು ಯೋಚಿಸದೆ ಪಡೆದು ಅನುಭವಿಸ ತೊಡಗುತ್ತೇವೆ. ಮೊದಲು ಕೆಲ ಸಮಯ ಹಿತವೆನಿಸಿದರೂ ನಮ್ಮ ಸ್ವಭಾವ ಅದನ್ನು ಒಪ್ಪಿಕೊಳ್ಳದಾದಾಗ, ಅದರಿಂದ ಬಿಡುಗಡೆಗೆ ಪ್ರಯತ್ನ ಪಡುತ್ತೇವೆ. ಬಿಡುಗಡೆ ಸಿಕ್ಕಾಗ, ಅಬ್ಬ! ಪೀಡೆ ಬಿಟ್ಟಿತು ಎಂದು ಸಂತೋಷಪಡುತ್ತೇವೆ. ಇದು ಸರ್ವೇ ಸಾಮಾನ್ಯ ಎಲ್ಲ ಮಾನವರ ಪರಿಸ್ಥಿತಿಯೂ ಹೌದು.

ಮನುಷ್ಯನಿಗೆ ಸದಾ ಯಾವುದೋ ಅಸೆ ಕಾಡುತ್ತಿರುತ್ತದೆ. ಏನನ್ನೋ, ಯಾರನ್ನೋ, ಪಡೆಯಬೇಕು. ಅದನ್ನು ಪಡೆದರೆ ನನಗೆ ಸುಖ ಎನ್ನುವ ಭಾವ. ನಾವು ಪಡೆಯಬೇಕೆಂದುಕೊಳ್ಳುವ ವಸ್ತು ವಿಷಯ ಅಥವಾ ವ್ಯಕ್ತಿಗಳ





ಕಿಂಚಿತ್ ಪರಿಚಯವೂ ಇಲ್ಲದೆ ಪಡೆದಾಗ, ಅದರಿಂದುಂಟಾಗುವ ತೊಂದರೆಗಳನ್ನು ಅನುಭವಿಸಲೇ ಬೇಕು. ಹಾಗೆ ಅನುಭವಿಸಲಾಗದಿದ್ದರೆ ಅದರಿಂದ ಬಿಡುಗಡೆಯನ್ನು ಹೊಂದಬೇಕು. ಕೆಲವು ಬಾರಿ ಆ ಬಿಡುಗಡೆಗೆ ನಾವು ಪ್ರಯತ್ನ ಪಡದಿದ್ದರೂ ಕಾಲವೇ ಪರಿಹಾರ ಸೂಚಿಸುತ್ತದೆ.

ಹಾಗೆ ನಾವು ಸ್ವಪ್ರಯತ್ನದಿಂದ, ಹರಳೆಣ್ಣೆ ಕುಡಿದು ಹೊಟ್ಟೆ ನೋವನ್ನು ಕಡಿಮೆ ಮಾಡಿಕೊಂಡಹಾಗೆ, ನಮ್ಮ ಸಮಸ್ಯೆಗಳಿಗೆ ಉಮಶಮನವನ್ನು ತಂದುಕೊಳ್ಳಬಹುದು. ಆದರೆ ನಮ್ಮ ಮನಸ್ಸು ಮತ್ತೆ ಅದೇ ರೀತಿಯ ತಪ್ಪನ್ನು ಮಾಡುವುದಿಲ್ಲ ಎಂದು ಹೇಗೆ ಹೇಳುವುದು. ಮತ್ತೆ ಮತ್ತೆ ಅದೇ ರೀತಿಯ ತಪ್ಪನ್ನು ಮಾಡುತ್ತಿರುವುದು, ಮಾಡಿದ ತಪ್ಪನ್ನು ತಿದ್ದಿಕೊಳ್ಳಲು ಪ್ರಯತ್ನಪಡುವುದು, ಈ ತಪ್ಪು ಸರಿಗಳ ವೃತ್ತದಲ್ಲಿ ಒಂದು ಬಗೆಯ ಆನಂದ, ಬೇಸರ, ಹಿಂಸೆಗಳನ್ನು ಅನುಭವಿಸುವುದೇ ಜೀವನವೆನ್ನುವುದು ಈ ಮುಕ್ತಕದ ಹೂರಣ. ಯಾವುದಕ್ಕೂ ಅತಿಯಾಗಿ ಅಂಟದೆ, ಆಸೆ ಪಡದೆ ಸಿಕ್ಕಿದ್ದನ್ನು ಅನುಭವಿಸುತ್ತಾ, ಒಂದು ಮಾನಸಿಕ ನಿರ್ಲಿಪ್ತತೆಯನ್ನು ಬೆಳೆಸಿಕೊಂಡರೆ ನೆಮ್ಮದಿಯಾಗಿರಬಹುದು. ಆಯ್ಕೆ ನಮ್ಮ ಕೈಯಲ್ಲೇ ಇದೆ ಅಲ್ಲವೇ?

**ಮುಕ್ತಕ-345**

**ಅಡಿಜಾರಿ ಬೀಳುವುದು, ತಡವಿ ಕೊಂಡೇಳುವುದು ||**
**ಕಡುಬ ನುಂಗುವುದು, ಕಹಿಮದ್ದ ಕುಡಿಯುವುದು |**
**ದುಡುಕಿ ಮತಿದಪ್ಪುವುದು, ತಪ್ಪನೊಪ್ಪೆನ್ನುವುದು |**

**ಬದುಕೆಂಬುದಿದು ತಾನೆ? - ಮಂಕುತಿಮ್ಮ||**

ಇಡುವ ಹೆಜ್ಜೆ ಜಾರಿ ಕೆಳಗೆ ಬೀಳುವುದು, ಮತ್ತೆ ಸಾವರಿಸಿಕೊಂಡು ಮೇಲೆ ಏಳುವುದು, ಸಿಹಿ ಕಡುಬ ತಿನ್ನುವುದು. ತಿಂದದ್ದು ಹೆಚ್ಚಾಗಿ ಹೊಟ್ಟೆ ನೊಂದರೆ, ಕಹಿಯಾದ ಔಷಧಿಯನ್ನು ಕುಡಿಯುವುದು, ದುಡುಕಿ ಏನೋ ತಪ್ಪ ಮಾಡುವುದು, ಮಾಡಿದ ತಪ್ಪನ್ನು 'ನಾ ಮಾಡಿದ್ದೇ ಸರಿ' ಎಂದು ಸಾಧಿಸುವುದು, ಹೀಗೆ ಸಾಗುವುದೇ ನಮ್ಮ ಜೀವನವೆಂದು, ಬದುಕಿನಲ್ಲಿನ ವಾಸ್ತವಿಕೆಗೆ ಒಂದು ವ್ಯಾಖ್ಯಾನಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ದುಡುಕಿನಿಂದ ತಪ್ಪು ಮಾಡುವುದು ಮಾನವ ಸಹಜ ಪ್ರವೃತ್ತಿ. ಏನಾದರೂ ಮಾಡುವಾಗ ಮಾಡುವ ಕೆಲಸ, ಅದನ್ನು ಮಾಡುವ ಕ್ರಮ ಮತ್ತು ಅದರಿಂದಾಗುವ ಪರಿಣಾಮಗಳ ಅರಿವು ಎಲ್ಲ ಸಮಯದಲ್ಲೂ ಇರುವುದಿಲ್ಲ. ಹಾಗಾಗಿ ತಪ್ಪು ನಡೆಯಬಹುದು. ತಪ್ಪು ಮಾಡುವಾಗ ಮನುಷ್ಯನ ಬುದ್ಧಿಯಲ್ಲಿನ 'ವಿವೇಕ' ಕೆಲಸ ಮಾಡುವುದಿಲ್ಲ. ಮಾಡಿದ ತಪ್ಪನ್ನು ತಿದ್ದಿಕೊಳ್ಳಲು ಪ್ರಯತ್ನವನ್ನು ಮಾಡಲೂಬಹುದು ಮತ್ತು ತಿದ್ದಿಕೊಳ್ಳಲೂಬಹುದು. ಮತ್ತೆ ಅದೇ ತಪ್ಪನ್ನು ಮಾಡಲೂಬಹುದು ಮತ್ತೆ ತಿದ್ದಿಕೊಳ್ಳಬಹುದು. ಇದು ಸರ್ವೇ ಸಾಮಾನ್ಯ ನಮ್ಮ ನಿಮ್ಮಲ್ಲಿ ನಡೆಯಬಹುದು. ಆದರೆ ತಪ್ಪು ಮಾಡಿ ತಮ್ಮನ್ನು ತಾವು ಸಮರ್ಥಿಸಿಕೊಳ್ಳುವವರನ್ನು, ತಾವು ತಪ್ಪೇ ಮಾಡಿಲ್ಲವೆಂದೂ ಅಥವಾ ತಾವು ಮಾಡಿದ್ದು ತಪ್ಪೇ ಅಲ್ಲವೆಂದೂ ವಾದಿಸುವವರನ್ನೂ ನಮ್ಮ ಸುತ್ತ ಮುತ್ತಲಿರುವವರಲ್ಲಿ ನೋಡಿರುತ್ತೇವೆ. ಇದು ಸಹಜ, ಇದನ್ನೇ ಬದುಕು ಎಂದಿದ್ದಾರೆ ಮಾನ್ಯ ಗುಂಡಪ್ಪನವರು.





ಆದರೆ ನಾವು ಮಾಡಿದ್ದು ತಪ್ಪು ಎಂದು ಅರಿತುಕೊಳ್ಳುವುದು, ಅರಿತಿದ್ದನ್ನು ಒಪ್ಪಿಕೊಳ್ಳುವುದು, ಒಪ್ಪಿಕೊಂಡು ತಿದ್ದಿಕೊಳ್ಳುವುದು ಮಾಡಿದರೆ ಆಗ ನಮ್ಮ ಸ್ವಭಾವದಲ್ಲಿ ಒಂದು ಬದಲಾವಣೆ ಬಂದಂತೆ ಅಲ್ಲವೇ? ತಪ್ಪು ಮಾಡುವುದು ಸಹಜವೇ ಆದರೂ ಅದನ್ನು ಒಪ್ಪಿಕೊಂಡು ತಮ್ಮನ್ನು ತಾವು ತಿದ್ದಿಕೊಂಡರೆ ಮತ್ತು ದುಡುಕನ್ನು ಬಿಟ್ಟರೆ ಮತ್ತೆ ಆ

ತಪ್ಪನ್ನು ಮಾಡದೆ ಇರಬಹುದು. ಆತುರ, ಆವೇಶ ಮತ್ತು ದುಡುಕುಗಳು ನಮ್ಮಲ್ಲಿ ಕಡಿಮೆಯಾದರೆ, ತಪ್ಪು ಮಾಡುವ ಸಾಧ್ಯತೆಗಳು ಕ್ರಮೇಣ ಕಡಿಮೆಯಾಗುತ್ತವೆ ಅಲ್ಲವೇ?

**ಮುಕ್ತಕ-346**

**ಹೇರಾಳು ಮೂಟೆಗೂಲಿಯ ಬೇಡಿ ಹೆಗಲೊಡ್ಡಿ।**
**ಭಾರವನು ನಾಲ್ಕು ಮಾರೊಯ್ದಷ್ಟರೊಳಗೇ॥**
**ದೂರವಿನ್ನೆಷ್ಟೆನುತಲಾತುರಿಪನ್ ಅದನಿಳಿಸೆ।**
**ಕಾರುಬಾರುಗಳಷ್ಟೆ - ಮಂಕುತಿಮ್ಮ॥**

ಹೇರಾಳು-ಹೇರು+ಆಳು, ಮೂಟೆಗೂಲಿಯ=ಮೂಟೆ+ಕೂಲಿಯ, ಹೆಗಲೊಡ್ಡಿ=ಹೆಗಲು+ಒಡ್ಡಿ,
ಮಾರೊಯ್ದಷ್ಟರೊಳಗೇ=ಮಾರು+ಒಯ್ದು+ಅಷ್ಟರ+ಒಳಗೇ,
ದೂರವಿನ್ನೆಷ್ಟೆನುತಲಾತುರಿಪನ್=ದೂರವು+ಇನ್ನು+ಎಷ್ಟು+ಎನುತಲ್+ಅತುರಿಪನ್, ಅದನಿಳಿಸೆ=ಅದನಿಳಿಸಿ,
ಕಾರುಬಾರುಗಳಷ್ಟೆ=ಕಾರುಬಾರುಗಳ್+ಅಷ್ಟೆ
ಹೇರಾಳು=ಭಾರ ಹೊರುವ ಆಳು, ಮಾರು=ಸ್ವಲ್ಪ ದೂರ, ಅತುರಿಪನ್=ಅವರಸರಿಸುತ್ತಾನೆ

ಮೂಟೆ ಹೊರಲು ತನ್ನಿಚ್ಛೆಯಿಂದಲೇ ಬಂದ ಕೂಲಿಯಾಳು, ಹೊತ್ತ ಮೂಟೆಯ ಭಾರ ತಡಿಯಲಾರದೆ, ಸ್ವಲ್ಪ ದೂರ ನಡೆಯುವಷ್ಟರಲ್ಲಿಯೇ, ಹೊತ್ತ ಭಾರವನ್ನು ಇಳಿಸಲು ಇನ್ನೂ ಎಷ್ಟು ದೂರವಿದೆ' ಎಂದು ಆತುರ ಪಡುವಂತೆ ಇದೆ ನಮ್ಮ ಜೀವನದ ಪರಿ, ಎಂದು ವಿಡಂಬನೆ ಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ನಾವೂ ಸಹ ಹೀಗೆಯೇ! ಯಾವುದಾದರೂ ಕೆಲಸವನ್ನು ಯಾವುದೋ ಒಂದು ಪ್ರಯೋಜನದ ಆಸೆಯಿಂದ ಕೈಗೆತ್ತಿಕೊಳ್ಳುವುದು. ಆ ಕೆಲಸದ ನಿರ್ವಹಣೆಯ ಹೊರೆಯ ಭಾರ ಹೆಚ್ಚಾದಂತೆ, "ಸಧ್ಯ ಮುಗಿದರೆ ಸಾಕು ಛೇ! ಇನ್ನೂ ಎಷ್ಟು ದಿವಸ ಇದನ್ನು ಮಾಡುವುದು' ಎಂದು ಅದನ್ನು ಮುಗಿಸಲು ಆತುರಪಡುವುದು, ಅಥವಾ ಅರ್ಧದಲ್ಲೇ ಕೈಬಿಡುವುದು, ತೀರ ಸಾಮಾನ್ಯ. ನಾವು ಹೇಗೆ ಕೆಲಸಕಾರ್ಯಗಳಲ್ಲಿ ನಮ್ಮನ್ನು ತೊಡಗಿಸಿಕೊಳ್ಳುತ್ತೇವೆ, ಆ ಕೆಲಸವನ್ನು ಹೇಗೆ ನಿಭಾಯಿಸುತ್ತೇವೆ ಎನ್ನುವುದನ್ನು ನೋಡಿದರೆ ನಮಗೇ ಅರ್ಥವಾಗುತ್ತದೆ. ಇದಕ್ಕೆ ಕಾರಣವೇನೆಂದರೆ, ಒಂದು, ನಾವು ಆ ಕೆಲಸದ ವ್ಯಾಪ್ತಿಯನ್ನು ಮತ್ತು ಭಾರವನ್ನು ಅರ್ಥಮಾಡಿಕೊಂಡಿಲ್ಲ, ಎರಡು ನಾವು ನಮ್ಮ ಕೆಲಸಮಾಡುವ ಕ್ಷಮತೆ(capacity)ಯನ್ನು ಅರಿತಿಲ್ಲ. ಆದ್ದರಿಂದ, ಕೆಲಸವನ್ನು ನಿಭಾಯಿಸಲು

ಶುರುಮಾಡಿದಾಗ ಇದ್ದ ಉತ್ಸಾಹ ಸ್ವಲ್ಪ ದಿನ ಕಳೆದ ನಂತರ ಇರುವುದಿಲ್ಲ. ಅದು ನಮಗೆ ಭಾರವೆಂದಿನಿಸುತ್ತದೆ ಮತ್ತು ಹೊರುವುದು ದುರ್ಭರವಾಗುತ್ತದೆ. ಆರಂಭ ಶೂರತ್ವದ ಹಣೆ ಪಟ್ಟಿ ನಮ್ಮದಾಗುತ್ತದೆ. ಬಹಳ ಕಡಿಮೆ ಸಾರಿ ನಾವು ಕೈಗೆತ್ತಿಕೊಂಡ ಯಾವುದೇ ಕಷ್ಟಕರವಾದ ಕೆಲಸವನ್ನು ಪೂರೈಸುತ್ತೇವೆ.





ಒಂದು ಕೆಲಸವನ್ನು ಮಾಡಬೇಕೆಂದು ಯೋಚಿಸಿ, ಆ ಕೆಲಸದಲ್ಲಿ ಬರಬಹುದಾದ ಎಡರು ತೊಡರುಗಳು, ಕಷ್ಟಗಳನ್ನು ಮುಂಚೆಯೇ ಆಲೋಚಿಸಿ, ಕೆಲಸವನ್ನು ಆರಂಭಮಾಡದೆ ಇರುವವರನ್ನು ಅಧಮರೆನ್ನುತ್ತಾರೆ. ಕೆಲಸವನ್ನು ಆರಂಭಿಸಿ ಕಷ್ಟಗಳು, ಒತ್ತಡಗಳು ಮತ್ತು ಕ್ಲಿಷ್ಟತೆಗಳನ್ನು ಎದುರಿಸಲಾಗದೆ, ಅರ್ಧದಲ್ಲೇ ಕೈಬಿಡುವವರನ್ನು ಮಧ್ಯಮರೆನ್ನುತ್ತಾರೆ. ಇನ್ನು ಕೆಲಸವನ್ನು ಆರಂಬಿಸಿ ಎಷ್ಟೇ ತೊಂದರೆಗಳು ಬಂದರೂ ಛಲಬಿಡದೆ ಕಾರ್ಯವನ್ನು ಕೊನೆ ಮುಟ್ಟಿಸುವವರನ್ನು ಉತ್ತಮರೆನ್ನುತ್ತಾರೆ. ನಾವು ಯಾರಾಗಿದ್ದೇವೆ ಎಂದು ಅವಲೋಕಿಸಿಕೊಂಡು ಅರಿತುಕೊಂಡರೆ, ನಾವೂ ಉತ್ತಮರಾಗುವ ಸಾಧ್ಯತೆಗಳು ಇವೆ.

**ಮುಕ್ತಕ-347**

**ರುಚಿಯೊಪ್ಪೆ ರಸನೆಗದು ಶೂಲವಹುದುದರಕ್ಕೆ ।**
**ತ್ವಚೆ ಬೇಳ್ಪೆ ತಂಗಾಳಿಯಿಂ ಬೇನೆಯೆದೆಗೆ ॥**
**ರಚಿಸಿದವನಿಂತೊಡಲೊಳಿಡೆ ವಿಷಮ ಕುಟಿಲಗಳ ।**
**ಉಚಿತವಾವುದೊ ನಿನಗೆ – ಮಂಕುತಿಮ್ಮ ।**

ರುಚಿಯೊಪ್ಪೆ=ರುಚಿಯ+ಒಪ್ಪೆ, ರಸನೆಗದು=ರಸನೆಗೆ+ಅದು,

ಶೂಲವಹುದುದರಕ್ಕೆ=ಶೂಲವಹುದು+ಉದರಕ್ಕೆ,

ರಚಿಸಿದವನಿಂತೊಡಲೊಳಿಡೆ=ರಚಿಸಿದವನು+ಇಂತು+ಒಡಲೊಳು+ಇದೆ,

ಉಚಿತವಾವುದೊ=ಉಚಿತವು+ಆವುದೊ.

ರಸನೆ=ನಾಲಿಗೆ, ಶೂಲವಹುದು=ಚುಚ್ಚುವಂತಹುದು, ಉದರಕ್ಕೆ=ಹೊಟ್ಟೆಗೆ, ಬೇನೆಯೆದೆಗೆ=ಬೆನೆಯೇದೆಗೆ, ಒಡಲೊಳು=ದೇಹದೊಳು, ಉಚಿತವೂ ಸರಿಯಾದದು.

ನಾಲಿಗೆಗೆ ರುಚಿಯಾದದ್ದು, ಆರೋಗ್ಯಕ್ಕೆ ಹಿತವಾಗುವುದಿಲ್ಲ. ರುಚಿಯಾಗಿದೆ ಎಂದು ಆಸೆ ಪಟ್ಟು ತಿಂದರೆ ಹೊಟ್ಟೆನೋಯುತ್ತದೆ, ಆರೋಗ್ಯ ಕೆಡುತ್ತದೆ. ಚರ್ಮಕ್ಕೆ ಹಿತವಾಗಿರುತ್ತದೆ ಎಂದು ತಂಗಾಳಿಗೆ ಹೋದರೆ ಒಳಗೆ ಶೀತವೋ, ಉಬ್ಬಸವೋ ಬರುತ್ತದೆ. ಒಂದು ಅಂಗಕ್ಕೆ ಹಿತವಾದದ್ದು ಮತ್ತೊಂದು ಅಂಗಕ್ಕೆ ವಿಷಮವಾಗುವಂತಹ ಕುಟಿಲತೆಗಳನ್ನು ಸೃಷ್ಟಿಸಿದಾತನೆ ನಮ್ಮ ಒಡಲಲ್ಲಿ ಇಟ್ಟಿರುವಾಗ ನಮಗೆ ಹಿತವಾವುದು ಅಹಿತವಾವುದು ಎಂದು ಅರಿಯುವುದೇ ಕಷ್ಟ ಎಂದು ನಮ್ಮ ಬದುಕಿನ ವಾಸ್ತವಿಕತೆಯ ಒಂದು ಆಯಾಮವನ್ನು ತೋರಿದ್ದಾರೆ ನಮಗೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

“ಅವರಿಗೆ ಆರತಿ ತೆಗೊಂಡ್ರೆ ಉಷ್ಣ, ತೀರ್ಥ ತೆಗೊಂಡ್ರೆ ಶೀತ' ಎನ್ನುವ ಮಾತು ನಮ್ಮಲ್ಲಿ ಒಬ್ಬ ವ್ಯಕ್ತಿಯ ನಾಜೂಕಾದ ಆರೋಗ್ಯದ ಸ್ಥಿತಿಗೆ ಉದಾಹರಣೆಯಾಗಿ ನೀಡುತ್ತಾರೆ. ನಮ್ಮ ದೇಹದ ಅವಶ್ಯಕತೆಗಳನ್ನು ನಿರ್ಧರಿಸುವುದು ನಮ್ಮ ಇಂದ್ರಿಯಗಳು, ಆ ಇಂದ್ರಿಯಗಳು ಹೇಗೆ ಕೆಲಸಮಾಡುತ್ತವೆ ಎಂದು ನಮಗೆ ಅರ್ಥವಾಗುವುದಿಲ್ಲ. ನಮ್ಮ ಪ್ರಮೇಯವಿಲ್ಲದೆಯೇ ನಮ್ಮ ಜೀವನ ಶೈಲಿಯಿಂದಾಗಿ, ಪರಿಸರದಿಂದಾಗಿ, ಅನುವಂಶಿಕವಾಗಿ ಅಥವಾ ಸೋಂಕಿನಿಂದ ಆರೋಗ್ಯದಲ್ಲಿ ಆಗುವ ಏರುಪೇರುಗಳೆಷ್ಟೋ!

(179)

ಕಗ್ಗ ರಸಧಾರೆ-2 ಸುಖ ಭ್ರಾಂತಿ 344-348

ನಮ್ಮ ದೇಹಕ್ಕೆ ಯಾವುದು ಹಿತ ಯಾವುದು ಅಹಿತ ಎಂದು ನಿರ್ಧರಿಸುವುದು ಕಷ್ಟ, ಕಾಯಿಲೆ ಬಂದಾಗ, ಇದರಿಂದ ಹೀಗಾಯ್ತು, ಅದರಿಂದ ಹಾಗಾಯ್ತು, ಎಂದು ಒಂದು ಅಂದಾಜು ಮಾಡುತ್ತಾರೆ ವೈದ್ಯರು. ಕಾಯಿಲೆ ಬಂದರೆ ಮಾತ್ರ ಅನಾರೋಗ್ಯದ ಕಾರಣ ಗೊತ್ತಾಗುತ್ತದೆ. ಮಧುಮೇಹಿಗೆ ಸಕ್ಕರೆ ತಿನ್ನುವಂತಿಲ್ಲ, ರಕ್ತದ ಒತ್ತಡದ

ಕಾಯಿಲೆಯವರು ಉಪ್ಪು ತಿನ್ನುವಂತಿಲ್ಲ, ಹೀಗೆ ಹತ್ತು ಹಲವಾರು ವಿಧವಾದ ನಿರ್ಬಂಧಗಳು. ಕಡಿವಾಣ ಇಲ್ಲದ ಅಭಾದಿತ ಆಹಾರ ಸೇವನೆ, ನಂತರ ಯಾತನೆ ಅನುಭವಿಸುವುದು.

ನಮ್ಮ ಆಹಾರದ ಸಂಪೂರ್ಣ ಅವಶ್ಯಕತೆಗಳು (dietary needs) ಗೊತ್ತಿಲ್ಲವಾದ್ದರಿಂದ ಮಿತ ಮತ್ತು ಹಿತವಾದ ಆಹಾರ ಸೇವನೆ, ನಿಯಮಿತ ವ್ಯಾಯಾಮ, ಶುದ್ಧ ಅಭ್ಯಾಸಗಳು ಆರೋಗ್ಯಕ್ಕೆ ಅವಶ್ಯಕವೆಂದು ನಮ್ಮ ಹಿಂದಿನವರು ಪ್ರತಿಪಾದಿಸಿದ್ದಾರೆ. ಅವುಗಳನ್ನು ಪಾಲಿಸಿದರೆ ಆರೋಗ್ಯ ಇಲ್ಲದಿದ್ದರೆ ಅನಾರೊಗ್ಯ. ಆಯ್ಕೆ ಮಾಡುವ ತಿಳುವಳಿಕೆ ನಮಗೆ ಇದ್ದರೆ ಒಳ್ಳೆಯದು.

**ಮುಕ್ತಕ-348**

**ಬಾಳಿನೊಳಕಿಚ್ಚು ದೆಸೆದೆಸೆಗುರಿಯ ಚಾಚುತಿರೆ।**
**ಕಾಲನೆನ್ನುವ ಹುಚ್ಚ ಮಣ್ಣನೆರಚುತಿರೆ॥**
**ಧೂಳ ಹೊಗೆಗಳ ಹೊರತು ಜಗದಿ ಬೇರಿಲ್ಲದಿರೆ।**
**ಮೇಲೇನು? ಬೀಳೇನು - ಮಂಕುತಿಮ್ಮ॥**

ಬಾಳಿನೊಳಕಿಚ್ಚು=ಬಾಳಿನ+ಒಳಕಿಚ್ಚು, ದೆಸೆದೆಸೆಗುರಿಯ-ದೆಸೆದೆಸೆಗೆ+ಉರಿಯ, ಚಾಚುತಿರೆ=ಚಾಚುತ+ಇರೆ,
ಕಾಲನೆನ್ನುವ=ಕಾಲವು+ಎನ್ನುವ, ಮಣ್ಣನೆರಚುತಿರೆ=ಮಣ್ಣನು+ಎರಚುತಿರೆ,
ಬೇರಿಲ್ಲದಿರೆ=ಬೇರೆ+ಇಲ್ಲದೆ+ಇರೆ.
ಒಳಕಿಚ್ಚು=ಒಳ ಕುದಿತ, ದೆಸೆದೆಸೆಗೆ=ದಿಕ್ಕು ದಿಕ್ಕುಗಳಿಗೆ

ನಮ್ಮ ಮನದೊಳಗೆ ಇರುವ ದ್ವೇಷ, ಅಸೂಯೆ, ಮತ್ಸರ, ಮುಂತಾದ ದಳ್ಳುರಿಗಳು ನಾಲ್ಕೂ ದಿಕ್ಕುಗಳಿಗೆ ಸಮಯ ಸಮಯಕ್ಕೆ ಬುಗ್ಗೆಯಂತೆ ಮೇಲೇಳುತ್ತಿರುವಾಗ, ಇವೆಲ್ಲ ಕೂಡಿ ಧೂಳಂತೆ ಹರಡುತ್ತಿರುವಾಗ ಮತ್ತು ಈ ಧೂಳು ಮತ್ತು ಬೆಂಕಿಗಳಲ್ಲದೆ ಬೇರೇನೂ ಇಲ್ಲದೆ ಇರುವಾಗ ನಾವು ಮೇಲಿದ್ದರೇನು ಕೆಳಗಿದ್ದರೇನು ಎಂದು ಮನುಜರ ಬದುಕಿನ ಮತ್ತೊಂದು ಆಯಾಮವನ್ನು ನಮ್ಮ ಮುಂದಿಟ್ಟಿದ್ದಾರೆ ಮಾನ್ಯ ಗುಂಡಪ್ಪನವರು.

ಮತ್ತೊಬ್ಬರನ್ನು ಸಹಿಸದ ಮನೋಭಾವ ಮನುಷ್ಯನಿಗೆ ಸಹಜವಾಗೇ ಇದೆ. ಇದು ಸ್ವಾರ್ಥದ ಪ್ರಭಾವ. ಇದು ನಮ್ಮ ಮನಸ್ಸುಗಳಲ್ಲಿ, ಅಸೂಯೆ, ದ್ವೇಷ, ಕಾಮ, ಕ್ರೋಧ ಮುಂತಾದವುಗಳನ್ನು ಒಂದು ದಾವಾನಲದಂತೆ ಹರಿಸುತ್ತದೆ. ಈ ಎಲ್ಲ ದುರ್ಗುಣಗಳ ಜ್ವಾಲೆ ನಮ್ಮಿಂದ ಹೊರಹೊಮ್ಮುತ್ತದೆ. ಎಲ್ಲರಲ್ಲೂ ಇರುವ ಇಂತಹ ಭಾವಗಳು

ಎಲ್ಲ ದಿಕ್ಕುಗಳಿಗೆ ಹರಿದು ಹರಡುತ್ತದೆ. ಆ ಬೆಂಕಿಯನ್ನು ಶಮನ ಮಾಡಲು ಕಾಲವು ಧೂಳನ್ನು ಎರಚಲು ಎಲ್ಲೆಡೆಯಲ್ಲೂ ಆ ಬೆಂಕಿಯ ಜ್ವಾಲೆ ಮತ್ತು ಧೂಳು ಬೆರೆತಿರುವಾಗ, ಕಣ್ಣು ಕಾಣದ ಗಾವಿಲರಂತೆ ಆಗಿದೆ ನಮ್ಮ ಪರಿಸ್ಥಿತಿ.





ಪ್ರತಿಯೊಬ್ಬರೂ ತಮ್ಮ ಮನಸ್ಸಿನ ಒಳಹೊಕ್ಕು ಗಮನಿಸಿದರೆ, 'ನಮ್ಮೊಳಗೇ ಇಂತಹ ವಿನಾಶಕಾರಿ' ದುರ್ಗುಣಗಳು ಎಷ್ಟು ತುಂಬಿವೆ ಎಂದು ವಿಸ್ಮಯಗೊಳ್ಳಬಹುದು. ನಾವು ಅವುಗಳನ್ನು ಉಪಯೋಗಿಸುತ್ತೇವೆಯೋ, ಇಲ್ಲವೋ ಅದು ಅವರವರ ಒತ್ತಡಗಳಿಗೆ ಸೇರಿದ್ದು. ಹೀಗೆ ನಮ್ಮೊಳಗೆ ಒಳಿತು ಕೆಡುಕುಗಳ ಸಮಾವೇಶವಾಗಿರುವಾಗ, ನಾವು ಮೇಲಿದ್ದೇವೋ ಅಥವಾ ಕೆಳಗಿದ್ದೇವೋ ಎಂದು ಅರ್ಥಮಾಡಿಕೊಳ್ಳುವುದು ಸಾಧ್ಯವಿಲ್ಲ. ಕೆಲಬಾರಿ ಬಹಳ ಉದಾತ್ತತೆಯನ್ನು ಪ್ರದರ್ಶಿಸುತ್ತ ಮತ್ತೆ ನೀಚತನದ ಎಲ್ಲೆಯನ್ನು ದಾಟುತ್ತ ಇರುವ ನಮ್ಮ ಜೀವನದಲ್ಲಿ ನಾವು ಮೇಲೋ ಕೆಳಗೋ ಅರಿತುಕೊಳ್ಳಲಾಗುವುದಿಲ್ಲ.

ಆದರೆ ನಮಲ್ಲಿ ಯಾವುದು ಸರಿ ಯಾವುದು ತಪ್ಪು ಎಂದು ಅರಿಯುವ ವಿವೇಕವೂ ಇದೆ. ಸುಪ್ತವಾಗಿರುವ ವಿವೇಕವನ್ನು ಜಾಗೃತಗೊಳಿಸಿಕೊಂಡರೆ ಮೇಲಿರುವವರು ಮೇಲೇ ಇರಬಹುದು ಮತ್ತು ಕೆಳಗಿರುವವರು ಮೇಲೇರಬಹುದು.

# ದೈವ ಭಾಗ 349-355

**ಮುಕ್ತಕ-349**

**ಮಿತ ನಿನ್ನ ಗುಣ ಶಕ್ತಿ, ಮಿತ ನಿನ್ನ ಕರ್ತವ್ಯ।**
**ಮಿತಿ ಅತಿಗಳಂತರವ ಕಾಣುವುದೇ ಕಡಿದು॥**
**ಹಿತವೆನಿಸದನಿತೆಸಗು ದೈವಕುಳಿದುದನು ಬಿಡು।**

**ಕೃತಿಯಿರಲಿ ದೈವಕಂ - ಮಂಕುತಿಮ್ಮ ||**

ಅತಿಗಳಂತರವ=ಅತಿಗಳ+ಅಂತರವ, ಹಿತವೆನಿಸದನಿತೆಸಗು=ಹಿತ+ಎನಿಸಿದ+ಅನಿತು+ಎಸಗು,

ದೈವಕುಳಿದುದನು=ದೈವಕೆ+ಉಳಿದುದನು,ಕೃತಿಯಿರಲಿ=ಕೃತಿಯು+ಇರಲಿ.

ಕಡಿದು=ಕಷ್ಟವಾದದ್ದು, ದುರ್ಗಮವಾದದ್ದು, ಅನಿತು=ಅಷ್ಟು, ಕೃತಿಯು=ಕೆಲಸವು.

ನಿನ್ನ ಶಕ್ತಿ ಮತ್ತು ಕ್ಷಮತೆಗೆ ಒಂದು ಮಿತಿ ಇದೆ ಮತ್ತು ಆ ಮಿತಿಯೊಳಗೆ ನಿನ್ನ ಎಲ್ಲ ಕೆಲಸ ಕಾರ್ಯಗಳೂ ಇರುತ್ತವೆ. ಆದರೆ ನಮ್ಮ ಮಿತಿಗಳನ್ನು ಮತ್ತು ಕಾರ್ಯಕ್ಷಮತೆಯನ್ನು ಅರಿಯುವುದು ಬಹಳ (ಕಡಿದು) ಕಷ್ಟವಾದ ಕೆಲಸ. ನಿನಗೆ ಹಿತ ಎಂದು ಅನಿಸಿದ್ದನ್ನು ನೀನು ಮಾಡು, ನಿನ್ನ ಮಿತಿಯನ್ನು ಮೀರಿದ್ದನ್ನು ಮತ್ತು ನಿನ್ನ ಕೈಲಾಗದ್ದನ್ನು ಆ ದೈವಕ್ಕೆ ಬಿಡು. ನೀನು ಮಾಡುವ ಎಲ್ಲ ಕೆಲಸವನ್ನೂ ಆ ದೈವಕ್ಕೆ ಅರ್ಪಿಸಿಬಿಡು ಎಂಬ ತತ್ವವನ್ನು ಪ್ರತಿಪಾದಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ನಮ್ಮದು ಆಕಾಶಕ್ಕೆ ಏಣಿ ಹಾಕುವ ಸ್ವಭಾವ. ನಮ್ಮ ಆಲೋಚನೆಯ ಮತ್ತು ಕಾರ್ಯದ ಮಿತಿಗಳು ನಮಗೆ ಗೊತ್ತಿರುವುದೇ ಇಲ್ಲ. ನಮ್ಮ ಮಿತಿಗಳನ್ನು ಅರಿತುಕೊಂಡಾಗ, ಮಿತಿಯಾವುದು ಮತ್ತು ಅತಿ ಯಾವುದು ಎಂದು ಗೊತ್ತಾಗುತ್ತದೆ. ಆದರೆ ಅದನ್ನು ಅರಿತುಕೊಳ್ಳುವುದು ಬಹಳ ಕಷ್ಟವಾದ ಕೆಲಸ. ಹೀಗೆ ಮಿತಿಯನರಿಯದೆ ಇದ್ದಾಗ ನಾವು ಮಾಡುವ ಕೆಲಸ ಸಮರ್ಪಕವಾಗುವುದಿಲ್ಲ. ಹಾಗಾದರೆ ಏನು ಮಾಡುವುದು? ಎಂದು ಪ್ರಶ್ನೆ





ಉದ್ಭವವಾದಾಗ ನಮಗೆ ಹಿತವೆನಿಸಿದ ಕಾರ್ಯವನ್ನು ನಮ್ಮ ಕೈಲಾದಷ್ಟು ಮಾಡಿ, ಮಿಕ್ಕಿದನ್ನು ದೈವಕ್ಕೆ ಅಂದರೆ ನಮ್ಮನ್ನಾಡಿಸುವ, ನಾವು ಕಾಣಲಾಗಾದ ಆ ಪರಮ ಶಕ್ತಿಗೆ, ಒಪ್ಪಿಸಿಬಿಡು ಎಂದು ಆದೇಶಿಸುತ್ತಾರೆ ಮಾನ್ಯ ಗುಂಡಪ್ಪನವರು.

ನಾವು, ಪ್ರತೀ ಕೆಲಸವನ್ನು ಮಾಡುವಾಗಲೂ, ವಿಘ್ನ ನಿವಾರಕನಾದ ಗಣಪತಿಗೋ ಅಥವಾ ನಮ್ಮ ಇಷ್ಟ ದೈವಕ್ಕೋ, ದೇವರೇ ಕಾಪಾಡಪ್ಪ, ಎಂದು ಹೇಳುವುದಿಲ್ಲವೇ? ಪ್ರತಿ ನಿತ್ಯ ಬೆಳಗೇಳುವಾಗ, ದೇವರಿಗೆ ಕೈಮುಗಿದು ಇಂದಿನ ದಿನವೆಲ್ಲ ಸಮರ್ಪಕವಾಗಿ ನಡೆಯಲಿ ಎಂದು ಬೇಡುವುದು ನಮ್ಮ ಸಂಸ್ಕೃತಿಯೂ ಹೌದು. ಅಷ್ಟೇ, ಅಲ್ಲ, ನಾವು ಮಾಡುವ ಕೆಲಸಗಳೆಲ್ಲವೂ ಆ ಪರಮ ಶಕ್ತಿಯ ಆದೇಶದಮೇಲೆ ಮಾಡುತ್ತೇವೆ ಎನ್ನುವುದಕ್ಕೆ ನಾವು ಭಗವದಾಜ್ಞಾ, ಎಲ್ಲವೂ ಭಗವಂತ ಆಜ್ಞೆಯಂತೆ ಎನ್ನುವ ಅರ್ಥದಲ್ಲಿ ಕೆಲಸ ಮಾಡುತ್ತೇವೆ ಮತ್ತು ಹಾಗೆಯೇ ಮಾಡಬೇಕು ಎನ್ನುವುದು ಈ ಮುಕ್ತಕದ ಆದೇಶ.

ನಮ್ಮ ಮಿತಿಗಳಲ್ಲಿ ನಮ್ಮ ಕೆಲಸಗಳನ್ನು ಮುಗಿಸಿ 'ಕಾಯೇನ ವಾಚ ಮನಸೇಂದ್ರಿಯೇವ ಬುಧ್ಯಾತ್ಮನಾವ ಪ್ರಕೃತೆ ಸ್ವಭಾವಾತ್ ಕರೋಮಿ ಯದ್ ಯದ್ ಸಕಲಂ ಪರಸ್ಮೈ............ ಸಮರ್ಪಯಾಮಿ " ಎಂದು ತಾವು ತಾವು ಮಾಡಿದ ಕೆಲಸಗಳನ್ನು ತಮ್ಮ ತಮ್ಮ ಇಷ್ಟದೈವಕ್ಕೆ ಅರ್ಪಿಸಿಬಿಡುವುದೂ, ಸಹ ನಮ್ಮ ಸಂಸ್ಕೃತಿಯಲ್ಲವೇ? ಇದನ್ನೇ ಮಾನ್ಯ ಗುಂಡಪ್ಪನವರು "ಕೃತಿಯಿರಲಿ ದೈವಕಂ" ಎಂದಿದ್ದಾರೆ. ಈ ರೀತಿಯ ಮನೋಭಾವ ಬೆಳೆಸಿಕೊಳ್ಳುವುದರಿಂದ ನಮ್ಮ ಅಹಂಕಾರ ಕಡಿಮೆಯಾಗುವ ಸಾಧ್ಯತೆಗಳು ಹೆಚ್ಚು. ನಮ್ಮ ಪ್ರತೀ ಕೆಲಸವೂ ಹಿತವಾಗಿರಬೇಕು, ಮಿತವಾಗಿರಬೇಕು, ದೈವ ಪ್ರೇರಿತವೆಂದು ತಿಳಿಯಬೇಕು ಮತ್ತು ಮಾಡಿದ ಕೆಲಸವನ್ನು 'ಕೃಷ್ಣಾರ್ಪಣಂ' ಎಂದು ದೈವಕ್ಕೆ ಅರ್ಪಿಸಿಬಿಟ್ಟರೆ ನೆಮ್ಮದಿ.

**ಮುಕ್ತಕ-350**

**ಹೇಳಲಾಗದ ಹಸಿವು,ತಾಳಲಾಗದ ತಪನೆ।**
**ಆಳದಲಿ ನಾಚನಾಗಿಪ ಚಿಂತೆಯೂಟೆ॥**
**ಗಾಳಿಯೆತ್ತೆತ್ತಣಿನೊ ತಂದೀವ ಸೋಂಕು।**
**ಬಾಳ ಸಾಮಗ್ರಿಯಲ - ಮಂಕುತಿಮ್ಮ॥**

ಹೇಳಲಾಗದ=ಹೇಳಲು+ಆಗದ, ತಾಳಲಾಗದ=ತಾಳಲು+ಆಗದ, ಗಾಳಿಯೆತ್ತೆತ್ತಣಿನೋ=ಗಾಳಿ+ಎತ್ತೆತ್ತಣಿನೊ, ತಂದೀವ=ತಂದು+ಈವ.

ತಪನೆ=ತುಡಿತ, ಆಳದಲಿ=ಮನದಾಳದಲಿ, ನಾಚನಾಗಿಪ=ನಾಚಿಸುವ, ಸಾಮಗ್ರಿಯಲ=ವಸ್ತು, ವಿಷಯ ಮತ್ತು ವ್ಯಕ್ತಿ, ಎತ್ತೆತ್ತಣಿನೊ=ಎಲ್ಲೆಲ್ಲಿಂದಲೋ, ತಂದೀವ=ತಂದುಕೊಡುವ, ಸೋಂಕು=ಅಂಟು.

ನಮಗೆ ಈ ಜಗತ್ತಿನಲ್ಲಿ ಏನೋ ಬೇಕು, ಆದರೆ ಅದು ನಮಗೇ ಹೇಳಲಾಗುವುದಿಲ್ಲ ಮತ್ತು ಅದನ್ನು ಪಡೆಯಲು ತೀವ್ರವಾಗಿ ಪರದಾಡುತ್ತೇವೆ. ನಮ್ಮ ಮನಸ್ಸಿನ ಒಳಹೊಕ್ಕು, ನಮಗಿರುವ ಆಲೋಚನೆಗಳು ಮತ್ತು ಬುಗ್ಗೆ ಬುಗ್ಗೆಯಾಗಿ ಮೇಲೇಳುವ ಚಿಂತೆಗಳ ಮಹಾಪೂರವನ್ನು ನೋಡಿದರೆ, ನಾಚಿಕೆಯಾಗುತ್ತದೆ.

(182)

| ಕಗ್ಗ ರಸಧಾರೆ-2 | ದೈವ ಭಾಗ 349-355 |
| --- | --- |

ಹೊರಗಿನಿಂದ ಬಂದು ನಮ್ಮ ಮನದಲ್ಲಿ ಮನೆಮಾಡಿ, ನಮ್ಮನ್ನು ಈ ಜಗತ್ತಿಗೆ ಅಂಟಿಸಿಬಿಡುವ ಇಂತಹ ಆಲೋಚನೆಗಳೇ, ನಾವು ನಡೆಸುವ ಬಾಳಿಗೆ ಸಾಮಗ್ರಿ ಎಂದು ವಾಸ್ತವಿಕ ಚಿತ್ರಣವನ್ನು ಉಲ್ಲೇಖಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ನಮ್ಮ ಅರಿವಿಲ್ಲದಂತೆಯೇ ಹಲವಾರು ಆಸೆಗಳು ಹುಟ್ಟುತ್ತವೆ ಮತ್ತು ಆ ಆಸೆಗಳನ್ನು ಪೂರೈಸಿಕೊಳ್ಳಲು ತಪತಪಿಸುತ್ತೇವೆ. ಒಂದು ಬಾರಿ ಮನಸ್ಸಿನೊಳಕ್ಕೆ ಹೊಕ್ಕು ನೋಡಿದರೆ, ಅಸಹ್ಯಪಟ್ಟುಕೊಂಡು ನಾಚುವಂತೆ ಆಗುತ್ತದೆ. ನಮ್ಮ ಮನದೊಳಕ್ಕೆ ಈ ಎಲ್ಲ ವಿಚಾರಗಳೂ ಎಲ್ಲಿಂದ ಬಂದವು? ಏಕೆ ಬಂದವು? ಅವು ನಮ್ಮ ಮೇಲೆ ಎಂತಹ ಪರಿಣಾಮವನ್ನು ಬೀರುತ್ತವೆ? ಎಂಬುವ ಪ್ರಶ್ನೆಗಳಿಗೆ ಉತ್ತರವೇ ಸಿಗುವುದಿಲ್ಲ. ಬೇಕೋ ಬೇಡವೋ ಅವುಗಳು ನಮ್ಮ ಒಳಕ್ಕೆ ನುಗ್ಗುತ್ತವೆ. ನುಗ್ಗಿ ಮನಸ್ಸನ್ನು ರಾಡಿ ಮಾಡಿ, ಆಸೆ ಪ್ರೀತಿ, ದ್ವೇಷ, ಕೋಪಗಳಂತಹ ಅನೇಕಾನೇಕ ಭಾವಗಳನ್ನು ಹೊರಹೊಮ್ಮಿಸುತ್ತದೆ. ಇದು ಎಲ್ಲರಲ್ಲೂ ಆಗುವ ಪ್ರಕ್ರಿಯೆ. ಯಾರೂ ಇದಕ್ಕೆ ಹೊರತಲ್ಲ. ಎಲ್ಲರ ಜೀವನದ ಗಾಡಿಯೂ ಓಡುವುದು ಇಂತಹ ಚಿತ್ರ ವಿಚಿತ್ರ ಯೋಚನೆಗಳ ಚಕ್ರಗಳಿಂದಲೇ.

ಜೀವನದಲ್ಲಿ ನಮಗೆ ಏನು ಬೇಕೋ ಅದನ್ನು ಮಾತ್ರ ನಾವು ಒಳ ತೆಗೆದುಕೊಳ್ಳುವಂತೆ ಆದರೆ, ಅನವಶ್ಯಕ ವಿಚಾರ ಮತ್ತು ಯೋಚನೆಗಳಿಗೆ ನಮ್ಮ ಮನದ ಕಿಟಕಿಯನ್ನು ಮುಚ್ಚಲಾದರೆ, ಮನಸ್ಸಿನಲ್ಲಿ ಮಾನ್ಯ ಗುಂಡಪ್ಪನವರು

ಹೇಳಿರುವ ಚಿಂತೆಯೂಟ'ಯನ್ನು ಕಡಿಮೆ ಮಾಡಿಕೊಳ್ಳಬಹುದು. ಆದರೆ ಇಂದಿನ, ಉದ್ವೇಗ, ಒತ್ತಡ, ಪೈಪೋಟಿಯಿಂದ ಕೂಡಿದ ಜೀವನ ಶೈಲಿಯಲ್ಲಿ ಅದು ದುಃಸಾಧ್ಯವಾದರೂ, ಅಸಾಧ್ಯವಲ್ಲ. ಪ್ರಯತ್ನ ಪಡಬೇಕು ಅಷ್ಟೆ.

**ಮುಕ್ತಕ-351**

**ಹುದುಗಿಹುದದಲ್ಲಿ ಪರಮಾತ್ಮನೀ ತನುವಿನಲಿ? |**
**ಹೃದಯದೊಳೋ ಮೆದುಳಿನೊಳೋ ಹುಬ್ಬಿನಿರುಕಿನೊಳೋ? ||**
**ಇದನೆನಿತೋ ತರ್ಕಿಸಿಹರ್; ಎಣ್ಣಿಕೆಯನುಕೇಳು |**
**ಉದರವಾತ್ಮನಿವಾಸ – ಮಂಕುತಿಮ್ಮ ||**

ಹುದುಗಿಹುದದಲ್ಲಿ=ಹುದುಗಿ+ಇಹುದು+ಅದು+ಎಲ್ಲಿ, ಪರಮಾತ್ಮನೀ=ಪರಮಾತ್ಮನು+ಈ, ಹುಬ್ಬಿನಿರುಕಿನೊಳೋ=ಹುಬ್ಬಿನ+ಇರುಕಿನೊಳೋ, ಇದನೆನಿತೋ=ಇದನು+ಎನಿತೋ, ತರ್ಕಿಸಿಹರ್=ತರ್ಕಿಸಿ+ಇಹರ್, ಉದರವಾತ್ಮನಿವಾಸ=ಉದರವು+ಆತ್ಮ+ನಿವಾಸ. ತನುವಿನಲಿ=ದೇಹದಲಿ, ಹುಬ್ಬಿನಿರುಕು=ಭ್ರುಕುಟಿ ಅಥವಾ ಎರಡು ಹುಬ್ಬುಗಳ ಮಧ್ಯಭಾಗ, ತರ್ಕಿಸಿಹರ್=ವಾದ ವಿವಾದ ಮತ್ತು ತರ್ಕಗಳನ್ನು ಮಾಡಿದ್ದಾರೆ, ಎಣ್ಣಿಕೆ=ಲೆಕ್ಕಾಚಾರ, ಉದರವು=ಹೊಟ್ಟೆಯು.

ಈ ಜಗತ್ತಿನ ಸೃಷ್ಟಿಯ ಎಲ್ಲದರಲ್ಲೂ ಪರಮಾತ್ಮ ನಿವಸಿಸುತ್ತಾನೆ ಎನ್ನುವುದು ನಮ್ಮ ನಂಬಿಕೆ. ಆದರೆ ನಮ್ಮ ದೇಹದಲ್ಲಿ ಪರಮಾತ್ಮ ಎಲ್ಲಿದ್ದಾನೆ? ಹೃದಯದಲ್ಲೋ, ಬುದ್ಧಿಯಲ್ಲೋ ಅಥವಾ ಎರಡು ಹುಬ್ಬುಗಳು ಕೂಡುವ

ಭ್ರುಕುಟಿಯಲ್ಲೋ ಎಂದು ನಾನಾ ತರ್ಕಗಳು ಇರುವಾಗ, ಹೊಟ್ಟೆ ತುಂಬಿದಾಗ ಆತ್ಮ ತೃಪ್ತಿಯಾಗುತ್ತದೆಯಾದ್ದರಿಂದ, ಆ ಪರಮಾತ್ಮ ಉದರದಲ್ಲಿ ಎಂದರೆ ಹೊಟ್ಟೆಯಲ್ಲಿ ಇದ್ದಾನೆ ಎಂದು ಅರಿತುಕೋ ಎನ್ನುತ್ತಾ ಒಂದು ಪರಮಸತ್ಯವನ್ನು ನುಡಿದಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

"ವೈಶ್ವಾನರ ರೂಪದಲ್ಲಿ ನಾನು ಜೀವಿಗಳ ಜಠರದಲ್ಲಿ ಇದ್ದೇನೆ" ಎಂದು ಶ್ರೀ ಕೃಷ್ಣ ಭಗವದ್ಗೀತೆಯಲ್ಲಿ ನುಡಿದಿದ್ದಾನೆ. ಹೊಟ್ಟೆ ತುಂಬಿದರೆ ವೇದಾಂತ ಹೊರಬರುತ್ತದೆ. ಹಸಿವಿಂದ ಬಳಲುತ್ತಿರುವ ಒಬ್ಬನಿಗೆ ವೇದಾಂತದ ವಿಚಾರ ಹೇಳಿದರೆ, ಕೋಣನ ಮುಂದೆ ಕಿನ್ನರಿ ಬಾರಿಸಿದ ಹಾಗೆ ಆಗುತ್ತದೆ. ಉದರ ನಿಮಿತ್ತಂ ಬಹುಕೃತ ವೇಷಂ ಎನ್ನುವಂತೆ ನಮ್ಮ ಪುರಂದರ ದಾಸರು, ಎಲ್ಲಾರು ಮಾಡುವುದು ಹೊಟ್ಟೆಗಾಗಿ, ಗೇಣು ಬಟ್ಟೆಗಾಗಿ ತುತ್ತು ಹಿಟ್ಟಿಗಾಗಿ, ಎಂದು ಜೀವದ ಮೂಲ ಅವಶ್ಯಕತೆಯನ್ನು ಉಲ್ಲೇಖಿಸಿದ್ದಾರೆ.

ನಮ್ಮ ಪೂರ್ವಜರು, ಊಟ ಮಾಡುವುದನ್ನು ಒಂದು ಯಜ್ಞಕ್ಕೆ ಹೋಲಿಸಿದ್ದಾರೆ. ಈ ಯಜ್ಞದಲ್ಲಿ ಕೊಡುವ ಹವಿಸ್ಸು, ಆಹಾರ, ನಮ್ಮ ಜಠರದಲ್ಲಿರುವ ವೈಶ್ವಾನರರೂಪಿ ಪರಮಾತ್ಮನಿಗೆ ಅದು ಸಮರ್ಪಿತ. ಹಾಗಾಗಿ ಆ ಪರಮಾತ್ಮ ನಮ್ಮ ಹೊಟ್ಟೆಯಲ್ಲಿದ್ದಾನೆ ಎಂದು ಸೂಕ್ತವಾಗೇ ಹೇಳಿದ್ದಾರೆ ನಮ್ಮ ಗುಂಡಪ್ಪನವರು. ಹಸಿವನ್ನು ತಣಿಸುವುದು ಪ್ರಾಣಿಗಳ, ಪಕ್ಷಿ, ಗಿಡ ಮರಗಳದೂ ಸಹ ಮೂಲ ಅವಶ್ಯಕತೆ. ಈ ಅವಶ್ಯಕತೆ ತೀರಿದರೆ, ಮತ್ತೆಲ್ಲಕ್ಕೂ ಸಮಯ ಸಿಗುತ್ತದೆ. ಹೊಟ್ಟೆ ತುಂಬಿದರೆ ಮನಸ್ಸಿಗೆ ನಿರಾಳವಾಗುತ್ತದೆ. ನೀರು ಮತ್ತು ಫಲವತ್ತಾದ ಭೂಮಿ ಸಿಕ್ಕಾಗ ಒಂದು ಗಿಡ, ಚಿಗುರಿ, ಹೂ ಕಾಯಿ ಮತ್ತು ಹಣ್ಣುಗಳಿಂದ ನಳನಳಿಸುವ ಹಾಗೆ, ಮನುಷ್ಯನಿಗೂ ಹೊಟ್ಟೆ ತುಂಬಿದಾಗ, ಪರಮಾತ್ಮನ ಬಗೆಗಿನ ವಿಚಾರ ಮನಸ್ಸಿನಲ್ಲಿ ಬರಬಹುದು.

ಹಾಗಾಗಿ ಪರಮಾತ್ಮನ ಚಿಂತನೆಗೆ ಉಗಮ ಸ್ಥಾನವೇ ನಮ್ಮ ಹೊಟ್ಟೆ, ದೇಹದ ಕಣಕಣದಲ್ಲೂ, ಪರಮಾತ್ಮ ಸ್ವರೂಪವಾದ ಚೇತನವೇ ತುಂಬಿಕೊಂಡಿದ್ದರೂ, ಅದರ ವಿಚಾರ ಮಾಡುವುದಾಗಲೀ, ಅದನ್ನು ಅರಿತುಕೊಳ್ಳುವ ಪ್ರಯತ್ನಮಾಡುವುದಾಗಲೀ, ಅದರ ಅನುಭವ ಆಗುವುದಾಗಲೀ, ಹಸಿವಿನ ಅವಶ್ಯಕತೆಯನ್ನು ಮೀರಿ ನಿಂತಾಗಲೇ ಅಲ್ಲವೇ? ಹಸಿವು ಇಂಗಿದರೆ ಚೇತನಕ್ಕೂ ಪುಷ್ಟಿ, ಆಹಾರವಿಲ್ಲದೆ ದೇಹ ಸೊರಗಿದರೆ, ಆತ್ಮವೂ ಸೊರಗುತ್ತದೆ. ಹಸಿವನ್ನು ಗೆದ್ದು ಆ ಪರಮಾತ್ಮನನ್ನು ಹೃದಯದಲ್ಲೋ, ಬುದ್ಧಿಯಲ್ಲೋ ಕಂಡುಕೊಳ್ಳುವವರು, ಯೋಗಿಗಳು, ನಮ್ಮಂತಹ ಸಾಮಾನ್ಯರಲ್ಲ. ಹಾಗಾಗಿ ನಮಗೆ ಆ ಪರಮಾತ್ಮ 'ಮಾನ್ಯ ಗುಂಡಪ್ಪನವರು ಹೇಳುವಂತೆ ನಮ್ಮ ಉದರದಲ್ಲೇ ನಿವಸಿಸುತ್ತಾನೆ.

**ಮುಕ್ತಕ-352** **ಹೊಟ್ಟೆರಾಯನ ನಿತ್ಯದಟ್ಟಹಾಸವೋ ಬಾಳು ?**
**ದೃಷ್ಟ ಧಣಿಯೂಳಿಗಕೆ ಸೊಟ್ಟು ಮೈಬಾಗು ?**
**ಹಿಟ್ಟಿಗಗಲಿದ ಬಾಯಿ, ಬಟ್ಟೆಗೊಡ್ಡಿದ ಕೈಯಿ ?**
**ಇಷ್ಟೇ ನಮ್ಮೆಲ್ಲ ಕಥೆ - ಮಂಕುತಿಮ್ಮ**

ನಿತ್ಯದಟ್ಟಹಾಸವೋ=ನಿತ್ಯದ+ಅಟ್ಟಹಾಸವೋ, ಧಣಿಯೂಳಿಗಕೆ=ಧಣಿಯ+ಊಳಿಗಕೆ, ಹಿಟ್ಟಿಗಗಲಿದ=ಹಿಟ್ಟಿಗೆ+ಅಗಲಿದ, ಬಟ್ಟೆಗೊಡ್ಡಿದ=ಬಟ್ಟೆಗೆ+ಒಡ್ಡಿದ,





ಹೊಟ್ಟೆರಾಯನ=ಹಸಿವಿನ, ದೃಷ್ಟ=ಬಲಿಷ್ಠ, ಕಟ್ಟುನಿಟ್ಟಾದ, ಊಳಿಗಕೆ=ಕೆಲಸಕ್ಕೆ, ಸೊಟ್ಟು=ಅಂಕುಡೊಂಕು, ಒಡ್ಡಿದ=ಚಾಚಿದ.

ನಮಗೆ ಪ್ರತಿ ನಿತ್ಯ ಹಸಿವಾಗುವುದು. ಹೊಟ್ಟೆಪಾಡಿಗಾಗಿ ಮತ್ತು ಜೀವನದ ಇತರೆ ಅವಶ್ಯಕತೆಗಳಿಗೆ ನಮಗಿಂತ ಬಲಿಷ್ಠನಾದವನ ಬಳಿ ಊಳಿಗ ಮಾಡುವುದು, ಮೈ ಬಗ್ಗಿಸಿ ದುಡಿಯುವುದು ಮತ್ತು ಅವನು ನೀಡುವ ಹಣಕ್ಕೆ ಕೈ ಒಡ್ಡುವುದು, ಇಷ್ಟೇ ಎಲ್ಲರ ಜೀವನದ ಕಥೆಯೂ ಎಂದು ಬದುಕಿನ ವಾಸ್ತವಿಕತೆಗೆ ಕನ್ನಡಿಯಂತೆ ನುಡಿದಿದ್ದಾರೆ, ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ದೇಹ ಸುಸ್ಥಿರವಾಗಿರಬೇಕಾದರೆ ಶಕ್ತಿಬೇಕು. ಶಕ್ತಿಯನ್ನು ಉತ್ಪಾದಿಸುವ ಕಾರ್ಖಾನೆಯೇ ನಮ್ಮ ಜಠರ. ಉತ್ಪಾದನೆಗೆ ಇಂಧನವೇ ಆಹಾರ, ಅನ್ನಾತ್ ಪುರುಷಃ' ಎನ್ನುತ್ತದೆ ವೇದ. ಪೌರುಷೋತ್ಪತ್ತಿಗೆ ಅನ್ನವೇ ಕಾರಣ. ಇದು ನಿರಂತರವಾಗಿ ನಡೆಯುವ ಕಾರ್ಖಾನೆ. ಇದು ಓಡುವುದಕ್ಕೆ, ಇಂಧನದ ಪೂರೈಕೆ ಆಗುತ್ತಲೇ ಇರಬೇಕು. ನಾವು ಆ

ಆಹಾರವನ್ನು ಸಂಪಾದಿಸಬೇಕು. ಅದಕ್ಕಾಗಿ ದುಡಿಯಬೇಕು. ದುಡಿಸಿಕೊಂಡು, ಕೂಲಿ ನೀಡುವವರಲ್ಲಿ ದುಡಿಯಬೇಕು. ನಮ್ಮನ್ನು ದುಡಿಸಿಕೊಂಡು ನಮಗೆ ನೀಡಬೇಕಾದರೆ, ಧಣಿ ನಮಗಿಂತ ಹಣದಿಂದ, ಶಕ್ತಿಯಿಂದ, ಯುಕ್ತಿಯಿಂದ, ಬಲಿಷ್ಠನಾಗಿರಬೇಕು ಅಲ್ಲವೇ? ಅಂತಹವರಲ್ಲಿ ಪ್ರತಿನಿತ್ಯ ಮೈ ಬಗ್ಗಿಸಿ ನಿರ್ವಂಚನೆಯಿಂದ ದುಡಿಯಬೇಕು. ದುಡಿದರೆ ಮಾತ್ರ ಹೊಟ್ಟೆಗೆ ಹಿಟ್ಟು ಮತ್ತು ಮೈಮೇಲೆ ಬಟ್ಟೆ. ಇಲ್ಲದಿದ್ದರೆ ಅವಾವುದೂ ಇಲ್ಲ. ಇದನ್ನೇ ಮಾನ್ಯ ಗುಂಡಪ್ಪನವರು "ಹೊಟ್ಟೆರಾಯನ ನಿತ್ಯದಟ್ಟಹಾಸವೋ ಬಾಳು" ಎಂದರು.

ಈ ಜಗತ್ತಿನಲ್ಲಿ ಹುಟ್ಟಿದ ಪ್ರತೀ ಪ್ರಾಣಿಗೂ ದೇಹ ಧಾರಣೆಗೆ, ತನ್ನ ಆಹಾರವನ್ನು ತಾನೇ ಸಂಪಾದಿಸಿಕೊಳ್ಳುವ ಅನಿವಾರ್ಯತೆ ಉಂಟು. ಮಾನವ ಪ್ರಪಂಚದಲ್ಲಿರುವ ಪರಾವಲಂಬಿಗಳ ಹೊರತುಪಡಿಸಿ, ಇದನ್ನೆಲ್ಲಾ ಮಾಡಿಸುವುದು ನಮ್ಮ ಜಠರದಲ್ಲಿ ಕೂತ ವೈಶ್ವಾನರ ರೂಪಿ ಪರಮಾತ್ಮ. ಅವನೇ ನಮ್ಮನ್ನು ದುಡಿಯುವಂತೆ ಮಾಡುವ ಧಣಿ, ಅವನು 'ದೃಷ್ಟ' ಎನ್ನುತ್ತಾರೆ ಮಾನ್ಯ ಗುಂಡಪ್ಪನವರು. ಅವನು ಬಹಳ ನಿಷ್ಠುರ, ಕೆಲಸ ಮಾಡಿಸುವ ವಿಷಯದಲ್ಲಿ ಬಹಳ ಕಟ್ಟುನಿಟ್ಟಾದವ ಎಂದು ಅರ್ಥ.

ನಾವು ಲೌಕಿಕ ಜೀವನದಲ್ಲಿ ಮಾಡುವ ನೌಕರಿಯಲ್ಲಿ ನಮ್ಮ ಯಜಮಾನನ ಕಣ್ಣು ತಪ್ಪಿಸಿ ಅಲ್ಪ ಸ್ವಲ್ಪ "ಕಾಂ ಚೋರಿ" ಮಾಡಿಬಿಡಬಹುದು. ಆದರೆ ನಾನಾ ರೂಪದಲ್ಲಿ ನಮ್ಮೊಳಗೇ ಇದ್ದು ಸದಾ ನಮ್ಮನ್ನು ಕಾಯುವ, ಕಾಪಾಡುವ ಮತ್ತು ನಮ್ಮನ್ನು ಅನಿವಾರ್ಯವಾಗಿ, ಪ್ರತಿ ಘಳಿಗೆ ದುಡಿಯುವಂತೆ ಮಾಡುವ ಆ ಪರಮಾತ್ಮನೆಂಬ ಧಣಿಯ ಕಣ್ಣು ತಪ್ಪಿಸಿ "ಕೆಲಸ ಕದಿಯಲು" ಸಾಧ್ಯವೇ ಇಲ್ಲ ಅಲ್ಲವೇ?

ಹುಟ್ಟಿದಾರಭ್ಯ ಸಾಯುವತನಕ ಈ "ಹೊಟ್ಟೆರಾಯನ ಅಟ್ಟಹಾಸ'ಕ್ಕೆ ತಲೆಬಾಗಿ ದುಡಿಯುವುದೇ ನಮ್ಮ ಬಾಳು. ಆದರೆ ಆ ದುಡಿತ ನಿರ್ವಂಚನೆಯಿಂದ, ಸ್ವಾರ್ಥರಹಿತವಾಗಿ, ಅತ್ಯಾಸೆ ಮತ್ತು ದುಷ್ಟತನವಿಲ್ಲದೆ, ಈ ದುಡಿತವೂ





ಆ ಪರಮಾತ್ಮನ ಕೈಂಕರ್ಯ ಎಂದು ತಿಳಿದು ಮಾಡಿದರೆ, ಮಾನಸಿಕ ಕ್ಲೇಷೆ ಇರುವುದಿಲ್ಲವೆಂದು ನನ್ನ

ನಂಬಿಕೆ. ಅಲ್ಲವೇ ವಾಚಕರೇ ?

**ಮುಕ್ತಕ-353** **ಏನಾದೊಡೇನು? ನೀನೆಲ್ಲಿ ಪೋದೊಡಮೇನು? ।**
**ಪ್ರಾಣವೇಂ ಮಾನವೇನಭ್ಯುದಯವೇನು? ॥**
**ಮಾನವಾತೀತವೊಂದೆಲ್ಲವನು ನುಂಗುವುದು ।**
**ಜಾನಿಸದನಾವಗಂ - ಮಂಕುತಿಮ್ಮ ॥**

ಏನಾದೊಡೇನು?=ಏನು+ಆದೊಡೆ+ಏನ್, ನೀನೆಲ್ಲಿ=ನೀನು+ಎಲ್ಲಿ,
ಪೋದೊಡಮೇನು=ಪೋದೊಡುಂ+ಏನು, ಪ್ರಾಣವೇಂ=ಪ್ರಾಣವು+ಏಂ,
ಮಾನವೇನಭ್ಯುದಯವೇನು=ಮಾನವೇನ್+ಅಭ್ಯುದಯವೇನು,
ಮಾನವಾತೀತವೊಂದೆಲ್ಲವನು=ಮಾನವ+ಅತೀತ+ಒಂದು+ಎಲ್ಲವನು,
ಜಾನಿಸದನಾವಗಂ=ಜಾನಿಸದನು+ಆವಗಂ,
ಪೋದೊಡುಂ=ಹೋದರೇನು, ಜಾನಿಸದನು=ಧ್ಯಾನಿಸದನು, ಆವಗಂ=ಯಾವಾಗಲೂ, ಸದಾ,

ಏನಾದರೇನು? ಎಲ್ಲಿ ಹೋದರೇನು? ನಿನ್ನ ಪ್ರಾಣವು, ಮಾನವು ಮತ್ತು ಉದ್ಧಾರವೂ ಒಂದು ಅತಿಮಾನವ ಶಕ್ತಿಯ ಅಧೀನದಲ್ಲಿರುವುದರಿಂದ, ನಾನು ಪರಮಾತ್ಮಾಧೀನ ಎಂದು ಅರಿತು ಅದನ್ನು ಕುರಿತು ಧ್ಯಾನಿಸು ಎಂದು ಅಪ್ಪಣೆ ಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

“ಏನು ಮಾಡಿದರೇನು ಭವ ಹಿಂಗದು ದಾನವಾಂತಕ ನಿನ್ನ ಕೃಪೆಯಾಗೋ ತನಕ” ಎಂದು ನಮ್ಮ ಪುರಂದರ ದಾಸರು ಹಾಡಿದ್ದಾರೆ. ನಾವು ಏನೇ ಮಾಡಬಹುದು, ಅದು ನಮ್ಮ ದೈಹಿಕಾರೋಗ್ಯದ ಧೃಡತೆ ಕಾಪಾಡಿಕೊಳ್ಳುವ ವಿಷಯವಾಗಲಿ, ನಾವು ಗಳಿಸುವ ಹಿರಿಮೆಗಳಾಗಲಿ, ಮಾನ ಮರ್ಯಾದೆಗಳಾಗಲಿ ಅಥವಾ ಜೀವನದಲ್ಲಿ ಪಡೆಯುವ ಸರ್ವತೋಮುಖ ಅಭ್ಯುದಯವಾಗಲೀ, ಎಲ್ಲವೂ ಮಾನವನ ಶಕ್ತಿಗೆ ಮೀರಿದ ಅತಿಮಾನವ ಶಕ್ತಿಯ ಪ್ರಭಾವಕ್ಕೊಳಗಾಗಿರುವುದರಿಂದ ನಾವು ನಿರಂತರ ಆ ಪರಮ ಶಕ್ತಿಯನ್ನು ಧ್ಯಾನಿಸಬೇಕೆಂದು ಅರಿಯಬೇಕು.

ನಾನು ಮಾಡುವುದೆಲ್ಲ, ನಾನು ಗಳಿಸುವುದೆಲ್ಲ ನನ್ನದೇ ಪರಿಶ್ರಮದಿಂದ ಸಿಕ್ಕಿದೆ, ನಾನು ಸಾಧಿಸಿದ್ದೇನೆ ನಾನು ಗಳಿಸಿದ್ದೇನೆ ಎಂದು ಬೀಗುವವರಿಗೇನೂ ಈ ಜಗತ್ತಿನಲ್ಲಿ ಕಡಿಮೆಯಿಲ್ಲ. ಆದರೆ ನಾವು ಏನೇ ಸಾಧಿಸಿದರೂ ನಮ್ಮಲ್ಲಿರುವ ಮತ್ತು ಈ ಜಗತ್ತನ್ನು ತನ್ನ ಸೂತ್ರದಲ್ಲಿಟ್ಟುಕೊಂಡಿರುವ ಪರಮ ಚೇತನದ ಸಹಾಯದಿಂದಲೇ ಸಾಧಿಸುತ್ತೇವಲ್ಲವೇ?

ಹಾಗಿರುವಾಗ ನಾವು ಸಾಧಿಸಿದ್ದೇವೆ ಎಂದು ಅಹಂಕಾರ ಪಡುವುದಕ್ಕೆ ನಮಗೆ ಅಧಿಕಾರವುಂಟೆ, ಎಂದು ಯೋಚಿಸಿದರೆ ಮತ್ತು ಸತ್ಯವನ್ನರಿತರೆ, ಆ ಪರಮ ಚೇತನದ ಮುಂದೆ ನಾವು ಎಷ್ಟು ನಿರ್ಬಲರು ಎಂದು

ಅರ್ಥವಾಗುತ್ತದೆ. ಅಷ್ಟೇ, ಅಲ್ಲದೆ ನಾವು ದೈವಾಧೀನರು ಎಂದು ಆಲೋಚಿಸಿದಾಗ ನಮ್ಮ ಅಹಂಕಾರವೂ ಕಡಿಮೆಯಾಗಬಹುದಲ್ಲವೇ? ನಮ್ಮ ಊರ್ಧ್ವಗತಿಯ ಗಮನ ಯಾವಾಗಲೂ ನಮ್ಮ ಅಹಂಕಾರವನ್ನು ಕಡಿಮೆಯಾಗಿಸಿಕೊಳ್ಳುವ ಪ್ರಯತ್ನವಾಗಬೇಕು.

**ಮುಕ್ತಕ-354**

**ಲೋಕವೆಲ್ಲವು ದೈವಲೀಲೆಯೆಂಬರೇ, ಪೇಳಿ ? |**
**ಶೋಕ ಸೋಂಕಿರದೊಡಾ ಲೀಲೆ ನೀರಸವೇಂ? ||**
**ಮೂಕಂಗೆ ಕಳ್ ಕುಡಿಸಿ ಚೇಳ್ ಕುಟುಕಿಪಾಟವಿದು |**
**ಏಕಪಕ್ಷದ ಲೀಲೆ - ಮಂಕುತಿಮ್ಮ ||**

ದೈವಲೀಲೆಯೆಂಬರೇ=ದೈವಲೀಲೆ+ಎಂಬರೇ, ಸೋಂಕಿರದೊಡಾ–ಸೋಂಕಿ+ಇರದೊಡೆ+ಆ,
ನೀರಸವೇಂ=ನೇರಸವೆ+ಏಂ, ಕುಟುಕಿಪಾಟವಿದು=ಕುಟುಕಿಪ+ಆಟವಿದು
ಲೀಲೆ=ಪರಮಾತ್ಮನ ಜಗದ್ವ್ಯಾಪಾರ, ಯೆಂಬರೇ=ಎನ್ನುವವರೇ, ಕಳ್=ಹೆಂಡ, ನೀರಸ=ಸ್ವಾರಸ್ಯವಿಲ್ಲದ,

ಈ ಜಗತ್ತೆಲ್ಲವೂ ಆ ಪರಮಾತ್ಮನ ಲೀಲಾವಿನೋದ ಎನ್ನುವ ಹೇ! ಜನರೇ, ಹೇಳಿ ಆ ಲೀಲೆಯಲ್ಲಿ ದುಃಖದ ಲೇಪನ ಇಲ್ಲದಿದ್ದಿದ್ದರೆ ಈ ಜೀವನವೇನು ನೀರಸವಾಗಿಬಿಡುತ್ತಿತ್ತೆ? ಮಾತನಾಡಲಾಗದವನಿಗೆ ಹೆಂಡವನ್ನು ಕುಡಿಸಿ ನಂತರ ಚೇಳಿನಿಂದ ಕಚ್ಚಿಸುವಂತೆ, ಇದೊಂದು ಏಕಪಕ್ಷೀಯವಾದ ಲೀಲೆ ಆ ಪರಮಾತ್ಮನದು ಎಂದು, ಜಗತ್ತಿನಲ್ಲಿ ಜನರ ಜೀವನದ ಪರಿಯನ್ನು ವಿಶ್ಲೇಷಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ,

ನಮ್ಮ ಜೀವನವೆಲ್ಲವೂ ಲಕ್ಷಾಂತರ ಘಟನೆಗಳ ಸರಮಾಲೆ. ನಮ್ಮ ಪೂರ್ವ ಕರ್ಮದ ಆಧಾರದ ಮೇಲೆ ಇಂದಿನ ಜೀವನವನ್ನು ರೂಪಿಸಿಕೊಳ್ಳುವಾಗ ಆ ದೈವದ ಸಹಾಯವನ್ನೂ ಪಡೆಯುತ್ತೇವೆ. ಇದರಲ್ಲಿ ಸುಖ ಮತ್ತು ದುಃಖ ಮಿಳಿತವಾದ ಅನುಭವಗಳನ್ನು ಪಡೆಯುತ್ತಾ ಇರುತ್ತೇವೆ. ಆದರೆ ಹಲವರು, ಈ ಜಗತ್ತೆಲ್ಲವೂ ಆ ಪರಮಾತ್ಮ ಲೀಲಾವಿನೋದ, ನಾವೆಲ್ಲಾ ನಿಮಿತ್ತ ಮಾತ್ರರು, ಎಂದು ಪ್ರತಿಪಾದಿಸುವವರಿಗೆ ಮಾನ್ಯ ಗುಂಡಪ್ಪನವರ ಒಂದು ಪ್ರಶ್ನೆ ಏನೆಂದರೆ "ಈ ಜಗತ್ತಿನಲ್ಲಿ ದುಃಖವೆಂಬುದನ್ನು ಪರಮಾತ್ಮ ಕೇವಲ ತನ್ನ ಲೀಲೆ ಸ್ವಾರಸ್ಯವಾಗಿರಲೆಂದೇ ಇಟ್ಟಿದ್ದಾನೆಯೇ? ಹಾಗೆ ದುಃಖವೆಂಬುದು ಇಲ್ಲದೆ ಹೋಗಿದ್ದರೆ, ಈ ಜೀವನವೇನು ಸ್ವಾರಸ್ಯಕರವಾಗಿ ಇರುತ್ತಿರಲಿಲ್ಲವೇ?" ಎಂದು.

ನಮ್ಮ ಬಾಳಲ್ಲಿ ಘಟಿಸುವ ಘಟನೆಗಳಿಗೆ ನಿಜವಾದ ಕಾರಣವನ್ನು ಅರಿಯಲು ಸಾಧ್ಯವಾಗುವುದೇ ಇಲ್ಲ. ಕಾರಣ ಎರಡಿರಬಹುದು. ಒಂದು, ಕಾರಣವೇ ಗೂಢವಾಗಿರಬಹುದು, ಇನ್ನೊಂದು, ಅರಿತುಕೊಳ್ಳುವ ಯೋಗ್ಯತೆ ನಮ್ಮಲ್ಲಿ ಇಲ್ಲದಿರಬಹುದು. ಹೀಗೆ ನಮ್ಮನ್ನು, ಅರಿತುಕೊಂಡು ಮಾತನಾಡಲಾಗದ ಮೂಕರನ್ನಾಗಿಸಿ ಅದರ ಮೇಲೆ ಸಂಕಷ್ಟಗಳ ಹೊರಯನ್ನು ನಮ್ಮ ಮೇಲೆ ಹೇರಿದ್ದಾನೆ ಆ ಪರಮಾತ್ಮ, ನಮಗೆ ಅವನ ಲೀಲೆಯನ್ನು ಅರಿತುಕೊಳ್ಳಲೂ ಸಾಧ್ಯವಿಲ್ಲ ಮತ್ತು ಅದರ ಪ್ರಭಾವದಿಂದ ತಪ್ಪಿಸಿಕೊಳ್ಳಲೂ ಸಾಧ್ಯವಿಲ್ಲ.





ನೋವನ್ನೂ ಅನುಭವಿಸಬೇಕು ಮತ್ತು ಮಾತನಾಡದೆಯೂ ಇರಬೇಕು. ನಮ್ಮ ಪ್ರಮೆಯವೇನೂ ಇಲ್ಲದಿರುವುದರಿಂದ ಇದೊಂದು ಏಕಪಕ್ಷೀಯವಾದ ಲೀಲೆ ಎನ್ನುತ್ತಾರೆ ಮಾನ್ಯ ಗುಂಡಪ್ಪನವರು.

ಈ ನೋವು, ಸುಖ, ದುಃಖ, ಪ್ರೀತಿ, ಪ್ರೇಮ ಮುಂತಾದ ಭಾವಗಳೆಲ್ಲ ಬರುವುದು 'ನಾನು' ಎನ್ನುವ ಭಾವವಿರುವ ತನಕ. ಆ ಜಗನ್ನಾಟಕ ಸೂತ್ರಧಾರಿಯ ಕೈಯಲ್ಲಿ ಅವನ ನಾಟಕದಲ್ಲಿ ನನ್ನದೊಂದು ಪಾತ್ರ ಇದು ಸತ್ಯವಲ್ಲ ಮತ್ತು ಇದು ನಾನಲ್ಲ ಎಂಬ ಅರಿವು, ದೀರ್ಘಕಾಲದ ಸಾಧನೆಯಿಂದ ಲಭ್ಯವಾದರೆ, ಆಗ ಅಂತಹ ಭಾವಗಳಿಗೆ ಅತೀತವಾಗಿ ಬದುಕಬಹುದು. ವಾಚಕರೆ ಅತೀ ಸುಲಭವಾಗಿ ಹೇಳಿಬಿಡಬಹುದು. ಅನುಷ್ಠಾನ ಕಷ್ಟ ಪ್ರಯತ್ನ ಪಟ್ಟು ಸಾಧಿಸಬಹುದು.

**ಮುಕ್ತಕ-355**

**ಗುಣಿಗುಣಿಸಿ ತಿಣುಕುತ್ತಾ ಹೆಣಗಾಡಿ ಫಲವೇನು? ।**
**ಗಣನೆಗೆಟುಕದದೊಂದಚಿಂತ್ಯವೆತ್ತಲೋ, ತಾನ್ ॥**
**ಅಣಗಿದ್ದು ನಿನ್ನೆಲ್ಲ ಗಣಿತಗಳನಣಕಿಸುದು ।**

**ದಣಿಯದಾ ವಿಧಿ ವಿಕಟ - ಮಂಕುತಿಮ್ಮ ||**

ಗಣನೆಗೆಟುಕದದೊಂದಚಿಂತ್ಯವೆತ್ತಲೋ=ಗಣನೆಗೆ+ಎಟುಕದ+ಅದು+ಒಂದು+ಅಚಿಂತ್ಯವು+ಎತ್ತಲೋ, ಗಣಿತಗಳನಣಕಿಪುದು=ಗಣಿತಗಳನು+ಅಣಕಿಪುದು, ದಣಿಯದಾ=ದಣಿಯದು+ಆ, ಗುಣಿಗುಣಿಸಿ=ಲೆಕ್ಕಾಚಾರ ಹಾಕಿ, ಅಚಿಂತ್ಯವು=ಚಿಂತನೆಗೆ ನಿಲುಕದ್ದು, ಅಣಕಿಪುದು=ಅಪಹಾಸ್ಯ ಮಾಡುವುದು,

ಜೀವನದ ಆಗುಹೋಗುಗಳನ್ನು ತೀವ್ರವಾಗಿ ಆಲೋಚಿಸುತ್ತಾ, ಅದರ ಬಗ್ಗೆ ಲೆಕ್ಕಾಚಾರವನ್ನು ಹಾಕುತ್ತಾ ಪರದಾಡಿದರೆ ಏನು ಪ್ರಯೋಜನ? ನಮ್ಮ ಲೆಕ್ಕಾಚಾರಕ್ಕೆ ಎಟುಕದ ಮತ್ತು ಯೋಚನೆಯ ಪರಿಧಿಯೊಳಕ್ಕೆ ನಿಲುಕದ ಒಂದು ಶಕ್ತಿ, ವಿಧಿ ರೂಪದಲ್ಲಿ, ತಾನು ಹೊರಗೆ ತೋರ್ಪಡಿಸಿಕೊಳ್ಳದೆ ಇದ್ದರೂ, ನಮಗೆ ಕಾಣದೆ ಇದ್ದರೂ, ತನ್ನ ಪ್ರಭಾವವನ್ನು ಬೀರಿ ನಮ್ಮ ಎಲ್ಲ ಲೆಕ್ಕಾಚಾರವನ್ನೂ ಬುಡಮೇಲು ಮಾಡಿ, ನಮ್ಮನ್ನು ವಿಕಟ ಅಟ್ಟಹಾಸದಿಂದ ಅಣಕಿಸುತ್ತದೆ ಎಂದು, ಬದುಕಿನಲ್ಲಿ ವಿಧಿಯಾಟದ ಪ್ರಸ್ತಾಪ ಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಹೌದಲ್ಲವೇ, ನಾವು ನಮ್ಮ ಜೀವನದಲ್ಲಿ ಹಾಕುವ ಲೆಕ್ಕಾಚಾರಕ್ಕೇನೂ ಕಡಿಮೆ ಇರುವುದಿಲ್ಲ. ಹೀಗಾದರೆ, ಹಾಗಾಗಿಬಿಡುತ್ತದೆ, ಎಂದೋ, ಹಾಗೆ ಮಾಡಿದರೆ ಹೇಗಾಗುತ್ತೆ, ಎಂದೋ ಲೆಕ್ಕಾಚಾರ ಹಾಕುತ್ತಲೇ ಇರುತ್ತೇವೆ. ಅವೆಲ್ಲ ನಮ್ಮ ಊಹೆಗೆ ಸಂಬಂಧಿಸಿದ್ದು, ಬಹಳಷ್ಟು ಬಾರಿ ಅಂದುಕೊಂಡಹಾಗೆ ಕೆಲಸಗಳು ಆಗುವುದೇ ಇಲ್ಲ. ಕೆಲಸ ಕೆಡಬಹುದು ಅಥವಾ ಉತ್ತಮವಾಗಿಯೂ ಆಗಬಹುದು. ಆದರೆ ನಾವಂದುಕೊಂಡ ಹಾಗೆ ಆಗುವುದಿಲ್ಲ. ಇದು ನಮ್ಮೆಲ್ಲರ ಅನುಭವಕ್ಕೆ ಬಂದ ವಿಷಯವೇ ಅಲ್ಲವೇ? ಕಾರಣಗಳು ಹಲವಾರಿರಬಹುದು.

ನಮ್ಮ ಲೆಕ್ಕಾಚಾರದಲ್ಲೇ ದೋಷವಿರಬಹುದು, ಮಾಡುವ ಕೆಲಸದಲ್ಲಿ ಕ್ರಮದ ಅಥವಾ ಶ್ರಮದ ಕೊರತೆ ಇರಬಹುದು ಅಥವಾ ನಾವು ಆ ಕೆಲಸಕ್ಕೆ ಯಾರ ಮೇಲೆ ನಿರ್ಭರರಾಗಿದ್ದೇವೆಯೋ ಅವರ ಲೆಕ್ಕಾಚಾರವೇ ಬೇರೆಯಾಗಿದ್ದಿರಬಹುದು. ನಮಗೆ ಇದಾವುದರ ಅರಿವೂ ಇರುವುದಿಲ್ಲ. ಹಾಗಾಗಿ ಕೆಲಸ ಕೆಟ್ಟಾಗ, ಅಯ್ಯೋ ನಮ್ಮ ಹಣೆಯ ಬರಹವೇ ಇಷ್ಟು, ಎಂದು ಖಿನ್ನರಾಗುತ್ತೇವೆ. ನಮ್ಮ ಬದುಕಿನಲ್ಲಿ ಹಿಂದಿನ, ಇಂದಿನ ಬದುಕು ಮತ್ತು ಇವೆರಡನ್ನೂ ಒಂದು ಕೊಂಡಿಯಲ್ಲಿ ಸಿಕ್ಕಿಸಿದ ಆ ಪರಮಾತ್ಮ, ಹೀಗೆ ಎಲ್ಲರ ಪ್ರಭಾವವೂ ಇರುವುದರಿಂದ, ನಮ್ಮ ಸಫಲತೆಗೆ, ಕೇವಲ ನಮ್ಮ ಪ್ರಯತ್ನವೇ ಸಾಕಾಗುವುದಿಲ್ಲ.

ತಾನು ಸ್ವಲ್ಪವೂ ದಣಿಯದೆ ನಮ್ಮನ್ನು ಸದಾ ಆಡಿಸುವುದು ನಮ್ಮ ವಿಧಿ. ನಮ್ಮ ಲೆಕ್ಕಾಚಾರ ತಪ್ಪಿದಾಗ "ನೋಡಿದೆಯಾ ನೀ ತಪ್ಪು ಮಾಡಿದೆ. ನನ್ನ ಪ್ರಭಾವದಿಂದ ದೂರಾಗಲಾರೆ", ಎಂದು ಒಂದು ವಿಕಟ ನಗೆಯನ್ನು ನಗುತ್ತದೆ. ಆದರೆ ಅದರ ಪ್ರಭಾವ ನಮ್ಮ ಮೇಲೆ ಹೇಗೆ ಆಗುತ್ತದೆ ಎಂದು ಅರಿಯಲು ಸಾಧ್ಯವೇ ಇಲ್ಲ. ಮಾಡುವ ಕೆಲಸದ ಪ್ರತಿಫಲಕ್ಕೆ ನಾವು ತೀವ್ರವಾಗಿ ಅಂಟಿಕೊಂಡಾಗ, ನಿರಾಸೆಯ ಮತ್ತು ನೋವಿನ ತೀವ್ರತೆಯೂ ಅಧಿಕವಾಗೇ ಇರುತ್ತದೆ. ಹಾಗಾಗಿ ನಾವು ಈ ವಿಕಟ ವಿಧಿಯ ಪ್ರಭಾವದಿಂದಾಗುವ ನಿರಾಸೆ ಮತ್ತು ನೋವನ್ನು ತಡೆದುಕೊಳ್ಳಬೇಕಾದರೆ, ಅಂಟದೆ ಇರಬೇಕು. "ಆಸೆ ಪಡಿ, ಆದರೆ ಅಂಟದೆ ಇರಿ" ಎನ್ನುವುದು ನಮ್ಮ ಮಂತ್ರವಾಗಬೇಕು. ಇದನ್ನು ಸಾಧನೆಯಿಂದ ನಮ್ಮ ಸ್ವಾಭಾವವಾಗಿಸಿಕೊಳ್ಳಬಹುದು. ಹಾಗಾದರೆ ಸುಖ ಇಲ್ಲದಿದ್ದರೆ ನೋವು ನಿರಾಸೆಗಳು ಎಂದಿಗೂ ಕೊನೆಯಾಗುವುದೇ ಇಲ್ಲ.

## ದಾತ ತಿಲಘಾತಕ 356-358

**ಮುಕ್ತಕ-356**

**ಆಶೆ ಬಲೆಯನು ಬೀಸಿ, ನಿನ್ನ ತನ್ನೆಡೆಗೆಳೆದು ।**
**ಘಾಸಿ ನೀಂ ಬಡುತ ಬಾಯ್ಬಿಡಲೋರೆ ನೋಡಿ ॥**
**ಮೈಸವರಿ ಕಾಲನೆಡವಿಸಿ, ಗುಟ್ಟಿನಲ್ಲಿ ನಗುವ ।**
**ಮೊಸದಾಟವೋ ದೈವ - ಮಂಕುತಿಮ್ಮ ॥**

ತನ್ನೆಡೆಗೆಗೆಳೆದು=ತನ್ನ+ಎಡೆಗೆ+ಎಳೆದು, ಬಾಯ್ಬಿಡಲೋರೆ=ಬಾಯಿಬಿಡಲು+ಓರೆ,
ಕಾಲನೆಡವಿಸಿ=ಕಾಲನು+ಎಡವಿಸಿ, ಮೊಸದಾಟವೋ=ಮೋಸದ+ಆಟವೋ,
ಘಾಸಿ=ನೋವು, ಬಡುತ=ಪಡುತ, ಒರೆನೋಟ-ವಕ್ರದೃಷ್ಟಿ

ಆಸೆಯ ಬಲೆಯನ್ನು ನಮ್ಮ ಮೇಲೆ ಬೀಸಿ, ಮನಸ್ಸಿನಲ್ಲಿ ಆಸೆ ಚಿಗುರುವಂತೆ ಮಾಡಿ, ಆ ಆಸೆಗಳನ್ನು ಪೂರೈಸಿಕೊಳ್ಳಲು ನಾವು ಪಡುವ ಪಾಡನ್ನು ಓರೆಗಣ್ಣಿಂದ ನೋಡಿ, ನಮ್ಮ ಮೇಲೆ ಕರುಣೆಯೋ ಎಂಬಂತೆ





ಮೈದಡವಿ ಎದ್ದುನಿಲ್ಲುವಂತೆ ಮಾಡಿ, ಮತ್ತೆ ನಮ್ಮ ಕಾಲನ್ನು ಎಡವಿಸಿ ಮರೆಯಲ್ಲಿ ನಿಂತು ನೋಡಿ ಮುಸಿ ಮುಸಿ ನಗುವ ಆ ಪರಮಾತ್ಮನದು, ಮೋಸದಾಟವೋ? ಎಂದು ವಿಡಂಬನಾತ್ಮಕ ಪ್ರಸ್ತಾಪವನ್ನು ಮಾಡುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಜಗತ್ತಿನ ವಸ್ತು ವಿಷಯ ಮತ್ತು ವ್ಯಕ್ತಿಗಳಲ್ಲಿ ನಮಗೆ ಆಸೆಯನ್ನು ಹುಟ್ಟಿಸುವುದೇ ಪ್ರಕೃತಿ ರೂಪದಲ್ಲಿರುವ ಆ ಪರಮಾತ್ಮ. ಆ ಆಸೆಯಿಂದ ನಮಗೆ ಒದಗುವ ಕಷ್ಟಗಳ ಸಂಕೋಲೆಗಳಿಂದ ಬಿಡುಗಡೆಗೂ ಮಾರ್ಗ ತೋರುವುದು ಅವನೇ. ಬಿಡುಗಡೆ ಕೊಟ್ಟ ಹಾಗೇ ಕೊಟ್ಟು ಮತ್ತೆ ನಮ್ಮನ್ನು ಈ ಆಸೆ ಮತ್ತು ಅದರಿಂದ ಬರುವ ಸಂಕಷ್ಟಗಳ ವಿಷವೃತ್ತದಲ್ಲಿ ಸಿಲುಕಿಸುವುದೂ ಆ ಪರಮಾತ್ಮನೇ. ಈ ರೀತಿಯ ಆಸೆ ನಿರಾಸೆಗಳ ವೃತ್ತದಲ್ಲಿ ನಮ್ಮನ್ನು ಸಿಲುಕಿಸಿ ಮರೆಯಲ್ಲಿ ನಿಂತು ನಗುವ ಆ ದೈವದ ಜಗನ್ನಾಟಕದಲ್ಲಿ ಪಾತ್ರವಹಿಸುವುದು ಮಾತ್ರ ನಮ್ಮ ಪಾಲಿಗೆ ಬಂದ ಬದುಕು.

ಈ ಮುಕ್ತಕದಲ್ಲಿ ನಿನ್ನ ತನ್ನೆಡೆಗೆಳೆದು' ಎಂದು ಉಲ್ಲೇಖವಿದೆ. ಆಕಾಶದಿಂದ ಧರೆಗಿಳಿದ ಪ್ರತೀ ನೀರ ಹನಿಯೂ ತನ್ನ ಮೂಲವಾದ ಸಮುದ್ರವನ್ನು ಸೇರಲು ತವಕ ಪಡುವಂತೆ ಈ ಜಗತ್ತಿನಲ್ಲಿ ಹುಟ್ಟಿದ ಪ್ರತೀ ಜೀವಿಯೂ ತನ್ನ ಮೂಲವನ್ನು, ಅಂದರೆ ಆ ಪರಮಾತ್ಮನನ್ನು ಸೇರಲು ಆಂತರ್ಯದಲ್ಲಿ ತವಕ ಪಡುತ್ತದೆ. ಆದರೆ ಇಂದ್ರಿಯ ಪ್ರಭಾವಿತವಾದ ಈ ದೇಹವನ್ನು ಧರಿಸಿದ ಮೇಲೆ ಈ ಜಗತ್ತಿನ ಪ್ರಕೃತಿ ಜನ್ಯವಾದ ಆಕರ್ಷಣೆಗಳಿಗೆ ಒಳಗಾಗದೆ ಇರಲು ಸಾಧ್ಯವೇ ಇಲ್ಲ.

ಹೀಗೆ ಆ ಪರಮಾತ್ಮ, ಜೀವಿಗಳನ್ನು "ತನ್ನ ಸೇರುವ ಮಾರ್ಗಗಳನ್ನು ತೋರಿ, ಪಕ್ಕದಲ್ಲೇ ಈ ಜಗತ್ತಿನ ಆಕರ್ಷಣೆಗಳನ್ನೂ ಕೊಟ್ಟು ನಮ್ಮನ್ನು ಈ ಜಗತ್ತಿನ ಮೇಲೂ ಮತ್ತು ನಮ್ಮ ಮೂಲವಾದ ಪರಮಾತ್ಮನ ಮೇಲೂ ಅಸೆಪಡುವಂತೆ ಮಾಡಿ, ಈ ಜಗತ್ತಿಗೆ ಅಂಟಿಕೊಳ್ಳುವಂತೆ ಮಾಡಿ ತೊಳಲಾಡಿಸುತ್ತಿದ್ದಾನೆ ಎಂದೂ ಅರ್ಥೈಸಬಹುದು. ವಿರುದ್ಧ ದಿಕ್ಕಿನ ಇವೆರಡರ ಸೆಳೆತದಿಂದ "ಮೇಲೆದ್ದು ನೀ ಹೇಗೆ ಬರುವೆ" ಎಂದು ಓರೆನೋಟದಿಂದ ನೋಡುತ್ತಾ, ನಗುತ್ತಾ ನಮ್ಮನ್ನು ಪರೀಕ್ಷಿಸುತ್ತಿದ್ದಾನೆ ಆ ಪರಮಾತ್ಮ ಎನ್ನುವುದೂ ಸಹ ಈ ಮುಕ್ತಕದ ಭಾವ.

ವಾಚಕರೆ ಪರಮಾತ್ಮನ ಸೃಷ್ಟಿಯಾದ, ಇಂದ್ರಿಯಾಕರ್ಷಣೆಯಿಂದ ಕೂಡಿದ ಈ ಜಗತ್ತಿನಲ್ಲಿ ನಾವೂ ಒಂದು ಭಾಗ, ಅವನೇ ನಮ್ಮನ್ನು ಇಲ್ಲಿ ಇರಿಸಿ, ಇದರಿಂದ ಬಿಡಿಸಿಕೊಂಡು ಬರುವ ಮಾರ್ಗವನ್ನೂ ತೋರಿ " ಬಾ, ನನ್ನ ಸೇರು" ಎನ್ನುವಂತಹ ಒಂದು ಸವಾಲನ್ನೂ ಹಾಕಿ ಜೀವನ ಎನ್ನುವ ಒಂದು ಮೋಸದಾಟವನ್ನು ನಮ್ಮಿಂದ ಆಡಿಸುತ್ತಿದ್ದಾನೆ. ಆಸೆಗಳಿಗೆ ಅಂಟದೆ, ಅವನಲ್ಲಿ ದೃಢ ಭಕ್ತಿಯಿಂದ ರಕ್ತಿ ಮತ್ತು ವಿರಕ್ತಿಗಳ ದ್ವಂದ್ವದಿಂದ ನಾವು ಹೊರಬಂದರೆ ಅದೇ ನಮ್ಮ ಸಾಧನೆಯಾಗಬಹುದು.





**ಮುಕ್ತಕ-357** **ದಾತನೆಣ್ಣೆಯಗಾಣದೆಳ್ಳುಕಾಳೆಲೆ ನೀನು।**

ಆತನೆಲ್ಲರನರೆವನ್; ಆರನುಂ ಬಿಡನು ||

ಆತುರಂಗೊಳದೆ ವಿಸ್ಮೃತಿಬಡದುಪೇಕ್ಷಿಸದೆ |

ಘಾತಿಸುವನೆಲ್ಲರನು - ಮಂಕುತಿಮ್ಮ ||

ದಾತನೆಣ್ಣೆಯಗಾಣದೆಳ್ಳುಕಾಳೆಲೆ=ದಾತನ+ಎಣ್ಣೆಯ+ಗಾಣದ+ಎಳ್ಳುಕಾಳು+ಎಲೆ (ಸಂಭೋಧನೆ), ಆತನೆಲ್ಲರನರೆವನ್=ಆತನು+ಎಲ್ಲರನ್+ಅರೆವನ್, ಆತುರಂಗೊಳದೆ=ಆತುರಂ+ಗೊಳದೆ, ವಿಸ್ಮೃತಿಬಡದುಪೇಕ್ಷಿಸದೆ=ವಿಸ್ಮೃತಿಬಡದೆ+ಉಪೇಕ್ಷಿಸದೆ, ಘಾತಿಸುವನೆಲ್ಲರನು=ಘಾತಿಸುವನು+ಎಲ್ಲರನು, ಅರೆವನ್=ಅರೆಯುವವನು, ಆರನುಂ=ಯಾರನ್ನೂ, ಗೊಳದೆ=ಪಡದೆ, ವಿಸ್ಮೃತಿಬಡದೆ=ಮರೆಯದೆ, ಘಾತಿಸುವನು=ಕಷ್ಟಗಳಿಗೊಳಪಡಿಸುವನು

ನಮಗೆ ಈ ಬದುಕನ್ನು ಕೊಟ್ಟ ದಾತನು ಎಂದರೆ ಆ ಪರಮ ಪುರುಷ ನಮ್ಮನ್ನು ಜೀವನವೆಂಬ ಗಾಣದಲ್ಲಿ ಎಳ್ಳಿನ ಕಾಳುಗಳಂತೆ ಅರೆಯುತ್ತಾನೆ. ಯಾರಿಗೂ ಈ ಅರೆತದಿಂದ ವಿನಾಯತಿ ಇಲ್ಲ. ನಿಧಾನವಾಗಿ ಎಲ್ಲರನ್ನೂ ನೆನಪಿನಲ್ಲಿರಿಸಿಕೊಂಡು, ಯಾರನ್ನೂ ಉಪೇಕ್ಷಿಸದೆ, ಅವರ ಅವರ ಕರ್ಮಾನುಸಾರ ಎಂತೆಂತಹ ಪೆಟ್ಟುಗಳನ್ನು ಕೊಡಬೇಕೋ ಅವುಗಳನ್ನೆಲ್ಲ ನಿಶ್ಚಯವಾಗಿ ಕೊಡುತ್ತಾನೆ ಎಂಬುದು ಮಾನ್ಯ ಗುಂಡಪ್ಪನವರ ಈ ಮುಕ್ತಕದ ಹೂರಣ.

ಈ ಜಗತ್ತನ್ನು ಒಂದು ಸಮರ್ಪಕವಾದ ವಿಧಾನ (system) ನಲ್ಲಿ ಇರಿಸಿದ್ದಾನೆ ಆ ಪರಮಾತ್ಮ, ಜಗತ್ತಿನ ಸಕಲ ಚರಾಚರಗಳೂ ಅ ವ್ಯವಸ್ಥೆ ಅಥವಾ ಪದ್ದತಿಗೆ ಅನುಸಾರವಾಗಿಯೇ ನಡೆದುಕೊಳ್ಳಬೇಕು. ಅನ್ಯ ದಾರಿಯೇ ಇಲ್ಲ. ಆದರೆ ಮನುಷ್ಯನಿಗೆ ಮಾತ್ರ ಸ್ವಲ್ಪ ವಿವೇಕವನ್ನೂ ಮತ್ತು ಅದನ್ನು ವೃದ್ಧಿಸಿಕೊಳ್ಳುವ ಕ್ಷಮತೆಯನ್ನೂ ನೀಡಿದ್ದಾನೆ ವಿಧಾತ. ಆದರೂ ನಾವೆಲ್ಲಾ ಗಾಣದ ಎಳ್ಳಿನ ಕಾಳ ತರಹೆ ಪ್ರತಿ ನಿತ್ಯ ಅರೆಯಲ್ಪಪಡುತ್ತೇವೆ. ಈ ಅರೆತವೇ ಜೀವನಾನುಭವ. ಅಂತಹ ಅರೆತದಿಂದ ಉಂಟಾಗುವ ಅರಿವೇ ಆ ಪರಮಾತ್ಮ ತನ್ನ ಗಾಣದಲ್ಲಿ ತೆಗೆಯುವ ಎಣ್ಣೆ. ವ್ಯತ್ಯಾಸವೇನೆಂದರೆ ಗಾಣಿಗ ತೆಗೆಯುವ ಎಣ್ಣೆ ಪರರ ಉಪಯೋಗಕ್ಕೆ ಬರುತ್ತದೆ, ಆದರೆ ನಮ್ಮ ಪರಮಾತ್ಮನೆಂಬ ಗಾಣಿಗ ತೆಗೆಯುವ ಎಣ್ಣೆ, ಜೀವಿಗೆ ಅನುಕೂಲಕ್ಕೆ ಬರುತ್ತದೆ. ಆತ್ಮೋದ್ಧಾರಕ್ಕೆ ಅನುವು ಮಾಡಿಕೊಡುತ್ತದೆ.

ಪರಮಾತ್ಮ ಮಹಾನ್ ಲೆಕ್ಕಿಗ, ಎಲ್ಲರ ಲೆಕ್ಕವನ್ನೂ ಸಮರ್ಪಕವಾಗಿಟ್ಟಿರುತ್ತಾನೆ. ಯಾರನ್ನೂ ಮರೆಯುವ ಪ್ರಮೇಯವೇ ಬರುವುದಿಲ್ಲ. ಅವನ ಕೈಯಲ್ಲಿರುವ ಲೇಖನಿಯೇ ವಿಧಿ, ಆ ವಿಧಿಯೆಂಬ ಲೇಖನಿಯಲ್ಲಿ ಶಾಯಿ ರೂಪದಲ್ಲಿ ಅವನು

ತುಂಬುವುದೇ ನಮ್ಮನ್ನು ಬದುಕೆಂಬ ಗಾಣದಲ್ಲಿ ಅರೆದು ತೆಗೆದ 'ಅರಿವೆಂಬ ಎಣ್ಣೆಯನ್ನು. ಈ ಎಣ್ಣೆ ಎಷ್ಟು ಸುಧಾರಿತವಾಗಿದ್ದರೆ, ನಮ್ಮ ಮುಂದಿನ ಬದುಕಿನ ಬರಹವೂ ಸುಂದರವಾಗಿರುತ್ತದೆ.





ವಾಚಕರೆ, ನಾವು ಏನೇ ಆಗಿದ್ದರೂ, ಏನೇ ಮಾಡಿದರೂ ಆ ವಿಧಾತನ ಅಧೀನದಲ್ಲಿರುವುದರಿಂದ ಅವನ ವ್ಯವಸ್ಥೆ ಮತ್ತು ವಿಧಾನಕ್ಕೆ ತಲೆಬಾಗಿ ಕಷ್ಟವೋ ಸುಖವೋ ಒಂದು ನಿರ್ಲಿಪ್ತ ಭಾವದಿಂದ ಬದುಕನ್ನು ಅನುಭವಿಸಿದರೆ ನೋವಿಲ್ಲದೆ ಇರಬಹುದು. ಆಯ್ಕೆ ನಮಗೆ ಬಿಟ್ಟದಲ್ಲವೇ?

**ಮುಕ್ತಕ-358**

**ಇದು ನಡೆಯಲಿಲ್ಲವದು ನಿಂತುಹೋಯಿತೆನ್ನುತ್ತ ।**
**ಎದೆಯುಬ್ಬೆಗವನೊಂದಿ ಕುದಿಯುತಿಹುದೇಕೋ ॥**
**ಅಧಿಕಾರಪಟ್ಟವನು ನಿನಗಾರು ಕಟ್ಟಿಹರು? ।**
**ವಿಧಿಯ ಮೇಸ್ತ್ರಿಯೆ ನೀನು? ಮಂಕುತಿಮ್ಮ? ॥**

ನಡೆಯಲಿಲ್ಲವದು=ನಡೆಯಲಿಲ್ಲವು+ಅದು, ನಿಂತುಹೋಯಿತೆನ್ನುತ್ತ=ನಿಂತುಹೋಯಿತು+ಎನ್ನುತ್ತ,
ಎದೆಯುಬ್ಬೆಗವನೊಂದಿ=ಎದೆ+ಉಬ್ಬಗವನು+ಒಂದಿ, ಕುದಿಯುತಿಹುದೇಕೋ=ಕುದಿಯುತಿಹುದು+ಏಕೋ.
ಉಲ್ಬಗವನು=ಉದ್ವೇಗವನು, ಒಂದಿ=ಹೊಂದಿ,

ನೀನು ಕೆಲಸ ಕಾರ್ಯಗಳನ್ನು ಮಾಡುವಾಗ ಕೆಲವು ಕೆಲಸಗಳು ಅಂದುಕೊಂಡಹಾಗೆ ನಡೆಯಲಿಲ್ಲವೆಂದು ಅಥವಾ ಕೆಲವು ಕೆಲಸಗಳು ನಿಂತುಹೋಯಿತೆಂದು ಹೃದಯದೊಳಗೆ ಉದ್ವೇಗವನ್ನು ತುಂಬಿಕೊಂಡು ಮಾನಸಿಕ ಕುದಿತವೇಕೆ? ಹಾಗೆ ಕುದಿಯುವ ಅಧಿಕಾರವನ್ನು ನಿನಗೆ ಕೊಟ್ಟವರು ಯಾರು? ನೀನೇನು ವಿಧಿಯನ್ನು ನಿಯಂತ್ರಿಸುವ

ಮೇಲ್ವಿಚಾರಕನೇನು? ಎಂದು ಮನುಷ್ಯರು ಪ್ರಾಕೃತ ಭಾವದಿಂದ ಪಡುವ ಅನುಭವವನ್ನು ವಿಶ್ಲೇಷಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ನಾವು ಅಂದುಕೊಂಡಂತೆ ಕೆಲಸ ಕಾರ್ಯಗಳು ನಡೆಯದಾಗ ಉದ್ವೇಗಗೊಂಡು ಮಾನಸಿಕ ತಾಪವನ್ನು ಹೆಚ್ಚಿಸಿಕೊಂಡು, ಕಾರಣಗಳನ್ನು ಹುಡುಕುತ್ತಾ ನಮ್ಮನ್ನೇ ನಾವೋ ಅಥವಾ ಅನ್ಯರನ್ನೋ ಅಥವಾ ನಮ್ಮ ಹಣೆಯ ಬರಹವನ್ನೋ ಹಳಿದುಕೊಳ್ಳುವುದು ಸರ್ವೇ ಸಾಮಾನ್ಯ ಅಲ್ಲವೇ? ಇದು ಪ್ರಾಕೃತ ಮನಸ್ಸಿನ ಭಾವ, ಒಂದು ನಿಮಿಷ ಶಾಂತವಾಗಿ ಯೋಚಿಸಿದರೆ ಕಾರಣಗಳು ಸ್ಪಷ್ಟವಾಗಬಹುದು. ವಸ್ತು ಸ್ಥಿತಿ ಅರ್ಥವಾಗಬಹುದು. ನಮ್ಮ ಕೆಲಸಗಳನ್ನು ಮಾಡುವಾಗ ಅದರಿಂದ ಬರುವ ಫಲ ಅಥವಾ ಪರಿಣಾಮಗಳಿಗೆ ಹೆಚ್ಚು ಅಂಟಿಕೊಂಡಿರುತ್ತೇವೆ. ಆದ್ದರಿಂದ ಕೆಲಸ ಕೆಟ್ಟರೆ ನಿರಾಶೆ ಆಗುತ್ತದೆ. ನಮ್ಮ ನಂಟು ಮತ್ತು ಅಂಟು ಎಷ್ಟು ಹೆಚ್ಚಾಗಿ ಮತ್ತು ಎಷ್ಟು ಗಾಢವಾಗಿದ್ದರೆ ನಿರಾಶೆಯೂ ಅಷ್ಟೇ, ಅಧಿಕವಾಗಿರುತ್ತದೆ. ಅದೇ ಕಾರಣದಿಂದ ಉದ್ವೇಗವೂ ಅಧಿಕವಾಗಿರುತ್ತದೆ.

ಒಂದು ಕೆಲಸ ಮಾಡುವಾಗ ಇರುವ ನಮ್ಮ ಮನಃಸ್ಥಿತಿ, ಆ ಕೆಲಸಕ್ಕೆ ಸಂಬಂಧಪಟ್ಟ ಅನ್ಯ ಜನರ ಮನೋಭಾವ ಮತ್ತು ನಮಗೆ ಗೊತ್ತಿಲ್ಲದಿದ್ದರೂ ನಮ್ಮನ್ನಾಡಿಸುವ ವಿಧಿ, ಇವೆಲ್ಲವೂ ಆ ಕೆಲಸ ಸರಿಯಾಗುವ ಅಥವಾ ಕೆಡುವ ವಿಷಯದಲ್ಲಿ ತಮ್ಮ ಪ್ರಭಾವ ಬೀರಿಯೇ ಬೀರುತ್ತದೆ. ನಮ್ಮನ್ನು ನಾವು ನಿಯಂತ್ರಿಸಿಕೊಳ್ಳಬಹುದು.

(192)

ಆದರೆ ಅನ್ಯರನ್ನು ಮತ್ತು ವಿಧಿಯನ್ನು ನಮ್ಮಿಂದ ನಿಯಂತ್ರಿಸಲು ಸಾಧ್ಯವಿಲ್ಲ ಅಲ್ಲವೇ? ಯಾವುದು ನಮ್ಮ ಹಿಡಿತದಲ್ಲಿ ಇಲ್ಲವೋ, ಯಾವುದನ್ನು ನಾವು ಬದಲಾಯಿಸಲು ಸಾಧ್ಯವಿಲ್ಲವೋ, ಅದರ ಬಗ್ಗೆ ಉದ್ವೇಗಗೊಳ್ಳುವುದಾಗಲೀ ಅಥವಾ ಅಂತರಂಗದಲ್ಲಿ ಕುದಿಯುವುದಾಗಲೀ ಮಾಡುವುದರಿಂದ ಕಿಚಿಂತ್ ಪ್ರಯೋಜನವೂ ಇಲ್ಲವೆಂಬುದೇ ಈ ಮುಕ್ತಕದ ಹೊರಣ.

ನಮ್ಮ ಕಾರ್ಯ ವಿಧಾನವನ್ನು ನಾವು ರೂಪಿಸಿಕೊಳ್ಳಬಹುದು. ನಮ್ಮ ಕಾರ್ಯಕ್ಕೆ ಸಂಬಂಧಪಟ್ಟ ಅನ್ಯರನ್ನೂ ನಮ್ಮ ಅನುಕೂಲಕ್ಕೆ ತಿದ್ದಿಕೊಳ್ಳುವ ಪ್ರಯತ್ನ ಮಾಡಬಹುದು. ಆದರೆ ವಿಧಿಯನ್ನು ನಿಯಂತ್ರಿಸಲು ಸಾಧ್ಯವೇ ಇಲ್ಲ. ಏಕೆಂದರೆ ಅದರ ಪರಿಚಯ ನಮಗಿಲ್ಲ. ಹಾಗಾಗಿ ನಾವು ಮಾಡುವ ಕೆಲಸವನ್ನು ಮಾಡಿ, ಬಂದದ್ದನ್ನು ಅನುಭವಿಸುವುದೇ ಲೇಸು. ರಾಜಾ ಕುಲಶೇಖರರು ಹೇಳುವಂತೆ “ನನ್ನ ವಿಧಿ ಪ್ರಾಕಾರ ಏನೇನು ನಡೆಯಬೇಕೋ ಅದೆಲ್ಲವೂ ನಡೆಯಲಿ, ಬಂದದನ್ನು ಅನುಭವಿಸುವಾಗ, ಹೇ! ಪರಮಾತ್ಮ ನನ್ನ ಮನವು ನಿನ್ನ ಪಾದಾರವಿಂದದಲ್ಲಿರಲಿ” ಎಂಬ ಭಾವ ಬೆಳಸಿಕೊಂಡರೆ ಸುಖ ನೆಮ್ಮದಿ ಮತ್ತು ಮಾನಸಿಕ ಶಾಂತಿ, ಪ್ರಯತ್ನಪಟ್ಟರೆ ಈ ಸ್ಥಿತಿಯನ್ನು ಸಾಧಿಸಬಹುದು.

# ವಿಧಿಯಂತ್ರ 359-363

**ಮುಕ್ತಕ-359**

**ಸೊಟ್ಟುಗಳ ನೆಟ್ಟಗಾಗಿಪ ಯತ್ನ ಲೋಕದಲಿ ?**
**ಸೃಷ್ಟಿಯಾದಿಯನಾಗುತಿಹುದು; ಫಲವೇನು ?**
**ಹೊಟ್ಟೆ ನೋವಿಳಿಯುತಿರೆ ರೆಟ್ಟೆ ನೋವೆನ್ನುವುದು ?**
**ಮಟ್ಟಸವೇ ತಿರೆಹರವು? ಮಂಕುತಿಮ್ಮ ?**

ನೆಟ್ಟಗಾಗಿಪ=ನೆಟ್ಟಗೆ+ಆಗಿಪ, ಸೃಷ್ಟಿಯಾದಿಯನಾಗುತಿಹುದು=ಸೃಷ್ಟಿಯ+ಆದಿಯಿನ್+ಆಗುತಿಹುದು,
ನೋವಿಳಿಯುತಿರೆ=ನೋವು+ಇಳಿಯುತಿರೆ,ನೋವೆನ್ನುವುದು-ನೋವು+ಎನ್ನುವುದು,
ತಿರೆ=ಧರೆ,

ಸೊಟ್ಟುಗಳನ್ನು ನೆಟ್ಟಗೆ ಮಾಡುವ ಪ್ರಯತ್ನವು ಪ್ರಪಂಚದ ಆದಿಯಿಂದ ನಡೆದಿದೆ. ಅದರಿಂದ ಯಾವ ಪ್ರಯೋಜನವೂ ಇಲ್ಲ. ಏಕೆಂದರೆ ಹೊಟ್ಟೆ ನೋವೆಂದು ಔಷಧಿ ತೆಗೆದುಕೊಂಡರೆ ಮತ್ತೆ ಭುಜ ನೋವಾಗುತ್ತದೆ. "ಈ ಪ್ರಪಂಚದಲ್ಲಿ ಅಥವಾ ಭೂಮಿಯಲ್ಲಿ ಯಾವುದೂ ಸಮನಾಗಿಲ್ಲ ಅಲ್ಲವೇ' ಎಂದು ಒಂದು ಪ್ರಶ್ನೆಯನ್ನು ಕೇಳುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಈ ಭೂಮಿಯಲ್ಲಿ ಯಾವುದೂ ಸಮವಾಗಿಲ್ಲ. ಎತ್ತರದ ಬೆಟ್ಟಗಳ ಪಕ್ಕದಲ್ಲೇ ಆಳವಾದ ಪ್ರಪಾತಗಳು, ಕೆಲವು ಕಡೆ ಬಹಳ ಆಳವಾಗಿ ಮತ್ತು ಹಲವೆಡೆ ಆಳವಿಲ್ಲದೆ ಹರಿಯುವ ನದಿಗಳು, ಬೃಹದಾಕಾರದ ಹೆಮ್ಮರಗಳು,

(193)

ವಿಧಿಯಂತ್ರ 359-363 ಕಗ್ಗ ರಸಧಾರೆ-2

ಸಣ್ಣ ಗಿಡಗಳು, ಬಳುಕುವ ಬಳ್ಳಿಗಳು ಯಾವುದೂ ಸಮನಲ್ಲ. ಸೃಷ್ಟಿಯಲ್ಲಿನ ಪ್ರಾಣಿ ಸಂಕುಲದಲ್ಲಿಯೇ ನೋಡಿ ಒಂದು ಪ್ರಾಣಿಯಿದ್ದಂತೆ ಇನ್ನೊಂದಿಲ್ಲ. ಬೃಹದಾಕಾರದ ಆನೆ, ಘೇಂಡಾಮೃಗಗಳಂತಹ ಪ್ರಾಣಿಗಳು ಇರುವಲ್ಲೇ ನೊಣ ಸೊಳ್ಳೆಗಳಂತಹ ಸಣ್ಣ ಕೀಟಗಳು.

ಮನುಷ್ಯ ಮಾತ್ರ ಎಲ್ಲ ಪ್ರಾಣಿಗಳಿಗಿಂತ ಭಿನ್ನವಾಗಿದ್ದಾನೆ. ಅವನಿಗೊಂದು ಭಾಷೆ, ಉನ್ನತ ಆಲೋಚನೆ, ತನ್ನ ಆಲೋಚನೆಗಳನ್ನು ಕಾರ್ಯ ರೂಪಕ್ಕೆ ತರುವ ಕ್ಷಮತೆ ಎಲ್ಲವನ್ನೂ ಹೊಂದಿದ್ದಾನೆ. ಮನುಷ್ಯನ ಈ ಆಲೋಚನೆಗಳೇ ಇವನಿಗೆ ಜಗತ್ತಿನ ಸೃಷ್ಟಿಯಲ್ಲಿರುವ ಎಲ್ಲವನ್ನೂ ಪರೀಕ್ಷಿಸಿ ನೋಡುವ ಮತ್ತು ಎಲ್ಲವನ್ನೂ ತನ್ನ ಉಪಯೋಗಕ್ಕೆ ತಂದುಕೊಳ್ಳುವಂತೆ ಮಾಡುವುದು. ಆದರೆ ಇವನ ಆಲೋಚನೆಗಳನ್ನೇ ನೋಡಿ, ಒಂದೇ ಸಮನಾಗಿರುವುದಿಲ್ಲ. 'ಕ್ಷಣಂ ಚಿತ್ತಂ ಕ್ಷಣಂ ಪಿತ್ತಂ' ಎನ್ನುವಂತೆ ಇವನ ಯೋಚನೆಗಳು ಬದಲಾಗುತ್ತಲೇ ಇರುತ್ತವೆ. ಕೆಲವು ಒಳಿತಿಗೆ ಮತ್ತು ಹಲವು ಕೆಡುಕಿಗೆ

ಹಾಗಾಗಿ ಈ ಜಗತ್ತಿನ ಯಾವುದೂ ಸಮನಾಗಿಲ್ಲ. ಇದು ಪರಮಾತ್ಮನ ಸೃಷ್ಟಿ. ಅವನಿಗೆ ಹೇಗೆ ಬೇಕೋ ಹಾಗೆ ಇದನ್ನು ಸೃಷ್ಟಿಸಿಕೊಂಡಿದ್ದಾನೆ. ನಾವು ಅದನ್ನು 'ಸಮಾನಾಗಿಸುತ್ತೇನೆ' ಎಂದು ಅತೀ ಬುದ್ಧಿವಂತಿಕೆಯಿಂದ ಪ್ರಯತ್ನಪಟ್ಟರೆ ಅದು ಖಂಡಿತ ವ್ಯರ್ಥವಲ್ಲವೆ? ಮಾನವರಾದ ನಾವೂ ಸಹ ಪರಮಾತ್ಮನ ಸೃಷ್ಟಿಯಾದ ಈ ಜಗತ್ತಿನಲ್ಲಿ ಒಂದು ಭಾಗವಾದ್ದರಿಂದ ಈ ಸೃಷ್ಟಿಯ ಅಸಮತೆಯಲ್ಲಿ ಸೌಂದರ್ಯವನ್ನು ಕಾಣಬೇಕು, ಅನುಭವಿಸಬೇಕು ಮತ್ತು

ಆನಂದಿಸಬೇಕು. ಇವುಗಳನ್ನೆಲ್ಲ ಕಂಡು ಆನಂದಿಸುವ ಭಾಗ್ಯವನ್ನು ನಮಗೆ ಕರುಣಿಸಿದ ಪರಮಾತ್ಮನಿಗೆ ಕೃತಜ್ಞತೆ ಸಲ್ಲಿಸುತ್ತಾ ಬಾಳಬೇಕು.

**ಮುಕ್ತಕ-360** **ಇನ್ನೇನು ಮತ್ತೇನು ಗತಿಯೆಂದು ಬೆದರದಿರು।**
**ನಿನ್ನ ಕೈಯೊಳಗಿಹುದೆ ವಿಧಿಯ ಲೆಕ್ಕಣಿಕೆ॥**
**ಕಣ್ಣಿಗೆಟುಕದೆ ಸಾಗುತಿಹುದು ದೈವದ ಸಂಚು।**
**ತಣ್ಣಗಿರಿಸಾತ್ಮವನು - ಮಂಕುತಿಮ್ಮ॥**

ಗತಿಯೆಂದು=ಗತಿ+ಎಂದು, ಬೆದರದಿರು=ಬೆದರದೆ+ಇರು, ಕೈಯೊಳಗಿಹುದೆ=ಕೈ+ಒಳಗೆ+ಇಹುದೆ,
ಕಣ್ಣಿಗೆಟುಕದೆ=ಕಣ್ಣಿಗೆ+ಎಟುಕದೆ, ಸಾಗುತಿಹುದು=ಸಾಗುತ+ಇಹುದು,
ತಣ್ಣಗಿರಿಸಾತ್ಮವನು=ತಣ್ಣಗೆ+ಇರಿಸು+ಆತ್ಮವನು.
ಬೆದರದಿರು=ಹೆದರದಿರು, ಲೆಕ್ಕಣಿಕೆ ಲೇಖನಿ, ಸಂಚು=ಉಪಾಯ.

ನಿನ್ನ ಪರಿಸ್ಥಿತಿಗೆ ಹೆದರಿ, ಅಯ್ಯೋ ಇನ್ನೇನು ಗತಿ, ಎಂದು ಕೊರಗದಿರು, ಏಕೆಂದರೆ ನಿನ್ನ ಹಣೆಬರಹವನ್ನು ಬರೆಯುವ ಲೇಖನಿ ನಿನ್ನ ಕೈಯಲ್ಲಿ ಇಲ್ಲ. ಅದು ವಿಧಿಯ ಕೈಯಲ್ಲಿ ಇದೆ. ಆ ದೈವ, ವಿಧಿಯ ಮೂಲಕ ನಡೆಸುವ ನಮ್ಮ ಜೀವನದ ಪಾತ್ರವನ್ನು ಬಹಳ ಉಪಾಯವಾಗಿ, ನಮಗೆ ಅರ್ಥವಾಗದ ರೀತಿಯಲ್ಲಿ ಬರೆಸಿ,





ನಡೆಸುತ್ತದೆ. ಆದ್ದರಿಂದ ನಿನ್ನ ಆತ್ಮವನ್ನು ತಣ್ಣಗಿರಿಸಿಕೋ'ಎಂದು ಅದೇಶಿಸುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಜೀವನದಲ್ಲಿ ನಾವು ಅನುಭವಿಸುವ ನೋವು, ಕಷ್ಟ, ಹಿಂಸೆ, ಸಂಕಟ, ದುಃಖ ಅಥವಾ ಆನಂದ, ಪ್ರೀತಿ, ಸುಖ, ಸಂತೋಷ ಎಲ್ಲವೂ ಆ ದೈವ ನಾವು ಈ ಜಗನ್ನಾಟಕದಲ್ಲಿ ಧರಿಸಿದ ಪಾತ್ರಕ್ಕೆ ತನ್ನ ಲೇಖನಿಯಿಂದ ಬರೆದ ಚಿತ್ರಕಥೆ ಮತ್ತು ಸಂಭಾಷಣೆ. ಅದು ನಮಗೆ ಅರ್ಥವಾಗುವುದಿಲ್ಲ ಮತ್ತು ಅದನ್ನು ಬರೆಯುವಲ್ಲಿ ನಮ್ಮ ಪಾತ್ರವೇನೂ ಇಲ್ಲ. ಅದು ದೈವದ ಉಪಾಯದಂತೆ ಅಥವಾ ಇಚ್ಛೆಯಂತೆ ನಡೆಯುತ್ತದೆ. ಹಾಗಾಗಿ ನಾವು ಕಷ್ಟ ಸುಖಗಳನ್ನು ಕುರಿತು ಹೆದರಿ, ಬೆದರಬಾರದು ಎನ್ನುವುದೇ ಈ ಮುಕ್ತಕದ ಹೂರಣ.

ಪ್ರತಿಯೊಬ್ಬರ ಬಾಳೂ ಪೂರ್ವ ನಿಯೋಜಿತ. ನಮ್ಮ ಪ್ರಮೆಯವೇನೂ ಇಲ್ಲದೆ ನಮಗೆ ಏನೇನು ಆಗಬೇಕೋ ಅದೆಲ್ಲವೂ ಆಗುತ್ತದೆ. ಆದರೆ ಇಂದ್ರಿಯಗಳ ಸಂಪರ್ಕದಿಂದ ಇದನ್ನು, 'ನಾನು ಅನುಭವಿಸುತ್ತಿದ್ದೇನೆ. ಅಯ್ಯೋ ಇದು ನನಗೇ ಏಕೆ ಹೀಗಾಯಿತು' ಎಂದು ಒಂದು ಪ್ರಾಕೃತ ಭಾವದಿಂದ ನಾವು ಕೊರಗುತ್ತೇವೆ. ಇದು ತೀರ
ಸಹಜವಾದ ವಿಷಯ.

ಆದರೆ ನಾವು ಮನಸ್ಸು ಬುದ್ಧಿ ಮತ್ತು ದೇಹಗಳ ಪ್ರಭಾವದ ಪರಿಧಿಯೊಳಗಿಂದ ಮೇಲೆದ್ದು ಬಂದಾಗ ಮತ್ತು ಜೀವನವನ್ನು 'ಸಾಕ್ಷಿ'ರೂಪದಲ್ಲಿ ಅವಲೋಕಿಸಿದರೆ ಆಗ ಗುಂಡಪ್ಪನವರು ಹೇಳಿದಂತೆ ಆತ್ಮವನ್ನು ತಣ್ಣಗಿಟ್ಟುಕೊಳ್ಳಬಹುದು. ಎಲ್ಲಿಯ ತನಕ ಚೇತನ ಪಂಚಭೂತಗಳ ಮತ್ತು ಪಂಚೇಂದ್ರಿಯಗಳ ಹಿಡಿತದಲ್ಲಿರುತ್ತದೆಯೋ, ಅಲ್ಲಿಯ ತನಕ ಆತ್ಮಕ್ಕೆ ನೋವಿನ ಅಥವಾ ನಲಿವಿನ ಅನುಭವ ಆಗುತ್ತಲೇ ಇರುತ್ತದೆ. ಆದರೆ ಆ 'ಸಾಕ್ಷೀಭಾವ ಬರಬೇಕಾದರೆ ತೀವ್ರವಾದ ಸಾಧನೆ ಬೇಕು. ಕಠಿಣ ಸಾಧನೆಯಿಂದ ಪಡೆದ ಜ್ಞಾನ ಮತ್ತು ವಿವೇಕದಿಂದ ಮಾತ್ರ ಆತ್ಮವನ್ನು ತಣ್ಣಗಿರಿಸಿಕೊಳ್ಳಬಹುದು.

ವಾಚಕರೆ ನಮ್ಮನ್ನು ಇಲ್ಲಿ ಒಂದು ಪಾತ್ರದಂತೆ ಇಟ್ಟು, ನಮಗೆ ಹತ್ತು ಹಲವಾರು ಅನುಭವಗಳನ್ನು ಕೊಟ್ಟು, ಇದರಿಂದ ಹೊರಬರುವ ಮಾರ್ಗವನ್ನೂ ಸಹ ನಮಗೆ ತಿಳಿಸಿ, ಸಾಧಿಸಬಹುದಾದ ಮಾರ್ಗವನ್ನೂ ತೋರಿದ್ದಾನೆ ಪರಮಾತ್ಮ. ನಾವು ಪ್ರಯತ್ನದಿಂದ ಸಾಧಿಸಬಹುದು.

**ಮುಕ್ತಕ - 361**

**ಎಲ್ಲಿಯೋ ವಿಧಿಯ ಗೂಢದ ಕರ್ಮಶಾಲೆಯಲಿ।**
**ನಿಲ್ಲದಾಡುತ್ತಿಹವು ಯಂತ್ರ ಕೀಲುಗಳು॥**
**ಎಲ್ಲಾ ಆಗುಹೋಗುಗಳುಮಾ ಚಕ್ರಗತಿಯಂತೆ।**
**ತಲ್ಲಣವು ನಿನಗೇಕೆ? ಮಂಕುತಿಮ್ಮ॥**

ನಿಲ್ಲದಾಡುತ್ತಿಹವು=ನಿಲ್ಲದೆ+ಆಡುತಿಹವು, ಆಗುಹೋಗುಗಳುಮಾ=ಆಗುಹೋಗುಗಳುಂ+ಆ.

(195)

ವಿಧಿಯಂತ್ರ 359-363 ಕಗ್ಗ ರಸಧಾರೆ-2

ಬಹಳ ಗುಪ್ತವಾಗಿ ನಡೆಯುವ ವಿಧಿಯ ಕಾರ್ಯಾಂಗದಲ್ಲಿ ಜಗತ್ತಿನ ಎಲ್ಲ ಜೀವಿಗಳ ಆಗುಹೋಗುಗಳ ನಿರ್ಣಯಿಸುವ ಚಕ್ರವು ನಿರಂತರವಾಗಿ ತಿರುಗುತ್ತಿರುತ್ತದೆ. ಅದು ಗೂಢತೆಯಿಂದ ನಡೆಯುತ್ತಿದೆ ಮತ್ತು ಅದು ನಿನಗೆ ಅರ್ಥವಾಗದ ವಿಷಯವಾದದ್ದರಿಂದ, ನೀ ಏಕೆ ತಲ್ಲಣ ಪಡತ್ತೀಯೆ? ಎಂದು ಕೇಳುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ನಮ್ಮ ಬಾಳಿನಲ್ಲಿ ನಡೆಯುವ ಎಲ್ಲ ಪ್ರಸಂಗಗಳಿಗೂ ನಾವು ಕಾರಣವನ್ನು ಹುಡುಕಲು ಆಗುವುದೇ ಇಲ್ಲ. ಪ್ರಯತ್ನಪಟ್ಟರೂ ಅದು ನಮ್ಮ ಕೈಗೆಟುಕುವುದೇ ಇಲ್ಲ ಅಥವಾ ಆ ಕಾರಣಗಳು ತಮ್ಮ ತಮ್ಮ ಸ್ಥಾನದಲ್ಲೇ ಇದ್ದರೂ, ನಾವು ಅವುಗಳನ್ನು ಅರ್ಥಮಾಡಿಕೊಳ್ಳಲು ಸಮರ್ಥರಲ್ಲ. ವಿಧಿಯ ಚಕ್ರ ಸುತ್ತುತ್ತಲೇ ಇರುತ್ತದೆ. ನಾವುಗಳು ಆ ಚಕ್ರದ ಸುತ್ತುವಿಕೆಯಲ್ಲಿ ಸಿಕ್ಕಿಕೊಂಡಿದ್ದೇವೆ. ಅದು ಹೇಗೆ ಹೇಗೆ ನಮ್ಮನ್ನು ಸುತ್ತಿಸುತ್ತದೋ ಹಾಗೆಲ್ಲಾ ಸುತ್ತುವುದೇ ನಮ್ಮ ಕೆಲಸ. ಆ ವಿಧಿ ಚಕ್ರದ ಸುತ್ತುವಿಕೆಯು ನಮ್ಮ ಸ್ವಾಧೀನಕ್ಕೆ ಎಂದಿಗೂ ಬರುವುದೇ ಇಲ್ಲ.

ನಾವು ಯಾವುದಾದರೊಂದು ಕೆಲಸ ಮಾಡಲು ನಿರ್ಧರಿಸುತ್ತೇವೆ, ಯೋಚನೆ ಮಾಡುತ್ತೇವೆ, ಯೋಜನೆ ಹಾಕುತ್ತೇವೆ. ಕೆಲಸಮಾಡಲು ಉಪಕ್ರಮಿಸುತ್ತೇವೆ. ನಮಗರಿವಿಲ್ಲದಂತೆಯೇ ಸಾಕಷ್ಟು ಅಡಚಣೆಗಳು ಬರುತ್ತವೆ. ಕೇವಲ ನಮ್ಮ ಯೋಚನೆ ಮತ್ತು ಪ್ರಯತ್ನವಷ್ಟೇ ಅಲ್ಲದೆ ಅನ್ಯ ಕಾರಣಗಳೂ ಆ ಕೆಲಸದ ಮೇಲೆ ಪ್ರಭಾವ ಕೆಲಸ ಸುಗಮವಾಗಬಹುದು, ಬೀರುವುದರಿಂದ ನಮಗದರ ಪರಿಣಾಮದ ಅರಿವಿರುವುದಿಲ್ಲ. ಕೆಲ ವೇಳೆ ನಮ್ಮ
ಕೆಲವೇಳೆ ಆಗದೆ ಇರಬಹುದು.

ನಮ್ಮ ಜೀವನದಲ್ಲಿ ಹೀಗೆ ನಮಗರಿವಿಲ್ಲದ ಒಂದು ಶಕ್ತಿಯ ಪ್ರಭಾವವನ್ನೇ ಮಾನ್ಯ ಗುಂಡಪ್ಪನವರು "ವಿಧಿಚಕ್ರ" ಎನ್ನುತ್ತಾರೆ. 'ತಲ್ಲಣಿಸದಿರು ಕಂಡ್ಯಾ ತಾಳು ಮನವೇ" ಎಂದು ದಾಸರು ಹೇಳಿದಂತೆ, ನಾವು ವಿಚಲಿತಗೊಳ್ಳದೆ ದೃಢಮನಸ್ಕರಾಗಿ ಬಂದದನ್ನು ನಿರ್ಲಿಪ್ತತೆಯಿಂದ ಅನುಭವಿಸಿದರೆ, ಸುಖವಾಗಿರಬಹುದು. ಅಲ್ಲದೆ ಅತೀ ಚಿಂತಾಕ್ರಾಂತರಾದರೆ ಆ ಚಿಂತೆಯೇ ನಮ್ಮನ್ನು ಸುಡುತ್ತದೆ. ಹಾಗಾಗಿ "ತಲ್ಲಣವು ನಿನಗೇಕೆ" ಎಂದು ಡಿ.ವಿ.ಜಿ.ಯವರು ಕೇಳಿದಂತೆ ನಾವು ತಲ್ಲಣಿಸದೆ ಶಾಂತರಾಗಿದ್ದರೆ ಒಳ್ಳೆಯದು.

**ಮುಕ್ತಕ - 362**

**ಕಾಲನದಿಯಲಿ ನಮ್ಮ ಬಾಳದೋಣಿಯು ಮೆಖರೆದು।**
**ತೇಲುತ್ತೆ ಭಯವ ಕಾಣದೆ ಸಾಗುತಿರಲು॥**
**ಗಾಳಿಯಾವರಮೊ ಬಂದೆತ್ತಣಿನೊ ಬೀಸುತ್ತ।**
**ಮೇಲ ಕೀಳಾಗಿಪುದು - ಮಂಕುತಿಮ್ಮ।**

ಸಾಗುತಿರಲು=ಸಾಗುತ+ಇರಲು, ಗಾಳಿಯಾವಗಮೊ=ಗಾಳಿಯು+ಯಾವಗ,
ಬಂದೆತ್ತಣಿನೊ=ಬಂದು+ಎತ್ತಣಿನೊ, ಕೀಳಾಗಿಪುದು=ಕೀಳು+ಆಗಿಹುದು.
ಯಾವಗಮೊ=ಯಾವಾಗಲೋ, ಎತ್ತಣಿನೊ=ಎಲ್ಲಿಂದಲೋ, ಕೀಳಾಗಿಹುದು=ಬೀಳಿಸುವುದು.





ಅವ್ಯಾಹತವಾಗಿ ಹರಿಯುವ 'ಕಾಲ'ವೆಂಬ ನದಿಯಲ್ಲಿ, ಬಾಳು ಎಂಬ ದೋಣಿಯಲ್ಲಿ ಕುಳಿತು ಭಯವಿಲ್ಲದೆ, ಮೆರೆಯುತ್ತಾ ಸಾಗುತ್ತಿರಲು, ಎಲ್ಲಿಂದಲೋ ಒಂದು ಬಿರುಗಾಳಿ ಬೀಸಿ, ಕಷ್ಟಗಳ ಸಂಕೋಲೆಗಳಲ್ಲಿ ಸಿಲುಕಿ ಬಾಳ ದೋಣಿ ತಲೆಕೆಳಗಾಗುತ್ತದೆ ಎಂದು ಉಲ್ಲೇಖ ಮಾಡುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ನಾವು ಹುಟ್ಟಿದಂದಿನಿಂದ ಸಾಯುವವರೆಗೆ ನಮ್ಮ ಕಾಲ. ಕಾಲದ ಒಂದು ಬಿಂದುವಿನಿಂದ ಮತ್ತೊಂದು ಬಿಂದುವಿನವರೆಗೆ ನಮ್ಮ ಪಯಣ. ಆ ಪಯಣಕ್ಕೆ ನಮ್ಮ ಬದುಕೊಂದು ಆಧಾರ. ಬಾಲ್ಯದಿಂದ ಮುಪ್ಪಿನವರೆಗಿನ ಹಲವಾರು ಅವಸ್ಥೆಗಳಲ್ಲಿ ನಮ್ಮ ಬದುಕು ಒಂದೇ ರೀತಿಯಿರುವುದಿಲ್ಲ. ಎಲ್ಲವೂ ಸುಗಮವಾಗಿದೆ ಎಂದು ಅಂದುಕೊಳ್ಳುತ್ತಿರುವಾಗಲೇ ಏನೋ ತೊಂದರೆ ತಾಪತ್ರಯಗಳು ಬಂದೆರಗುತ್ತವೆ. ಅವುಗಳ ಬಾಧೆಯಿಂದ ಪಾರಾಗಿ 'ಅಬ್ಬ! ಈಗ ನಿರಾಳವಾಯಿತು' ಎನ್ನುವಷ್ಟರಲ್ಲೇ ಮತ್ತೇನೋ ಬಂದು ನಮ್ಮ ನೆಮ್ಮದಿಯನ್ನು ಕೆಡಿಸುತ್ತದೆ. ಇದು ಎಲ್ಲರ ಬದುಕಿನಲ್ಲೂ ನಡೆಯುತ್ತದೆ. ತೊಂದರೆಯ ಪ್ರಮಾಣ ಮತ್ತು ಪರಿಣಾಮಗಳು ಬೇರೆ ಬೇರೆಯಾಗಿರಬಹುದು. ಕೆಲಬಾರಿ ಸಮಸ್ಯೆಗಳ ಪರಿಹಾರ, ಬೇಗನೆ ಆಗುತ್ತದೆ. ಕೆಲಬಾರಿ ನಮ್ಮನ್ನು ದೀರ್ಘಕಾಲ ಪೀಡಿಸಿ ಆಗುತ್ತದೆ ಅಥವಾ ಆಗುವುದೇ ಇಲ್ಲ.

ಹಾ! ಕೆಲವರ ಬದುಕು ಯಾವ ಏರು ಪೇರೂ ಇಲ್ಲದೆ ಸರಾಗವಾಗಿ ಸಾಗುತ್ತದೆ. ಯಾರ್ಯಾರು ಏನೇನನ್ನು ಪಡೆದುಕೊಂಡು ಬಂದಿದ್ದರೆ ಮತ್ತು ಯಾರು ಹೇಗೆ ತಮ್ಮ ಜೀವನವನ್ನು ರೂಪಿಸಿಕೊಂಡರು ಎನ್ನುವುದರ ಮೇಲೆ ಅವರವರ ಜೀವನವಿರುತ್ತದೆ.ಆದರೆ ಗುಂಡಪ್ಪನವರು ಹೇಳುವಂತೆ" ಎಲ್ಲವೂ ಸುಗಮವಾಗಿ ಸಾಗುತ್ತಿರಲು 'ಗಾಳಿಯಾವರಮೊ ಬಂದೆತ್ತಣಿನೊ ಬೀಸುತ್ತ' ಎನ್ನುವಂತೆ ನಮಗರಿವಿಲ್ಲದಂತೆಯೇ ಧುತ್ತೆಂದು ಕಷ್ಟಗಳ, ಸಮಸ್ಯೆಗಳ ಮಧ್ಯೆ ನಾವು ಸಿಕ್ಕು ಸುಗಮವಾದ ಪ್ರಯಾಣದಲ್ಲಿ ಏರುಪೇರಾಗುತ್ತದೆ. ಅದಕ್ಕೆ ಕಾರಣ ಹುಡುಕುವುದು ಕಷ್ಟ ನಮಗೇ ಹೀಗೆ ಏಕೆ ಆಗಬೇಕು? ಎಂದರೆ ನಮಗೆ ಉತ್ತರ ಸಿಗುವುದಿಲ್ಲ.

ಹುಟ್ಟಿದಮೇಲೆ ಬಂದದ್ದನ್ನು ಅನುಭವಿಸಿಯೇ ತೀರಬೇಕು. ಆದರೆ ಹಾಗೆ ಅನುಭವಿಸುವಾಗ ನಿರ್ಲಿಪ್ತತೆಯಿಂದ ಇದ್ದರೆ ಸುಖವಾಗಿರಬಹುದು. ಅಲ್ಲದೆ ನಾವು ಈ ಬದುಕಿಗೆ ಎಷ್ಟು ಹೆಚ್ಚು ಅಂಟಿಕೊಂಡರೆ ಬಂದಂತಹ ಸಮಸ್ಯೆಯಿಂದುಂಟಾಗುವ ನೋವಿನ ತೀವ್ರತೆ ಅಷ್ಟು ಹೆಚ್ಚಾಗಿರುತ್ತದೆ. ಸುಖವೋ ದುಃಖವೋ, ಆಯ್ಕೆ ನಮ್ಮದಲ್ಲವೇ?

**ಮುಕ್ತಕ-363**

**ಆತುರತೆಯೇನಿರದು ವಿಧಿಯಂತ್ರಚಲನೆಯಲಿ।**
**ಭೀತತೆಯುಮಿರದು, ವಿಸ್ಮೃತಿಯುಮಿರದೆಂದುಂ॥**
**ಸಾಧಿಪುದದೆಲ್ಲವನು ನಿಲದೆ, ತಪ್ಪದೆ, ಬಿಡದೆ।**
**ಕಾತರತೆ ನಿನಗೇಕೆ? – ಮಂಕುತಿಮ್ಮ॥**

ಆತುರತೆ+ಏನೂ+ಇರದು, ವಿಧಿ+ಯಂತ್ರ+ಚಲನೆಯಲಿ, ಭೀತತೆಯುಮಿರದು=ಭೀತತೆಯುಂ+ಇರದು, ವಿಸ್ಮೃತಿಯುಂ+ಇರದು+ಎಂದುಂ, ಸಾಧಿಪುದದೆಲ್ಲವನು=ಸಾಧಿಪುದು+ಅದು+ಎಲ್ಲವನು.

ಆತುರತೆ=ಆತುರ, ಭೀತತೆ=ಹೆದರಿಕೆ, ವಿಸ್ಮೃತಿಯುಂ=ಮರೆವು

(197)

ತಟವಟವೋ ಸೃಷ್ಟಿದಯೆ 364-368 ಕಗ್ಗ ರಸಧಾರೆ-2

ವಿಧಿಯ ಚಕ್ರದ ಚಲನೆಯಲಿ ಆತುರವಿರದು, ಭೀತತೆಯು ಇರದು ಮತ್ತು ವಿಧಿ ಯಾವುದನ್ನೂ ಮರೆಯದೆ ತಾನು ಸಾಧಿಸಬೇಕಾದದ್ದನ್ನೆಲ್ಲ ಬಿಡದೆ, ತಪ್ಪದೆ ಸಾಧಿಸಿಯೇ ತೀರುತ್ತದೆ. ಹಾಗಾಗಿ ಏನಾಗುವುದೋ ಎಂತಾಗುವುದೋ ಎಂಬ ಕಾತರತೆ ನಿನಗೆ ಬೇಡ ಎಂದು ಒಂದು ಕಿವಿಮಾತನ್ನು ಆದೇಶದ ರೂಪದಲ್ಲಿ ಮಾನ್ಯ ಗುಂಡಪ್ಪನವರು ನಮಗೆ ಈ ಮುಕ್ತಕದಲ್ಲಿ ಹೇಳಿದ್ದಾರೆ.

ಸಾಮಾನ್ಯವಾಗಿ ನಮಗೆ ನಮ್ಮ ಕೆಲಸಗಳನ್ನು ಮಾಡುವಾಗ ನಮ್ಮ ಕೆಲಸ ಹೇಗಾಗುವುದೋ ಎಂಬ ಆತಂಕ ಕಾತುರ ಎಲ್ಲ ಇರುತ್ತದೆಯಲ್ಲವೆ? ಆದರೆ ನಮ್ಮ ಪ್ರಯತ್ನವನ್ನು ನಾವು ಸಕ್ರಮವಾಗಿ ನಿರ್ವಂಚನೆಯಿಂದ ಮಾಡಿದಾಗಲೂ ಹಲವು ಬಾರಿ ನಮ್ಮ ಕೆಲಸಕ್ಕೆ ನಾವಂದುಕೊಂಡ ಫಲಿತಾಂಶ ಸಿಗುವುದಿಲ್ಲ. ವೈಫಲ್ಯಕ್ಕೆ ಕಾರಣವನ್ನು ಎಷ್ಟು ಹುಡುಕಿದರೂ ನಮಗೆ ಅರ್ಥವಾಗುವುದೂ, ತಿಳಿಯುವುದೂ ಇಲ್ಲ. ಹಾಗಾಗಿ ನಮಗೆ ಕಾತರ, ನಿರಾಶೆ ಮತ್ತು ಜಿಗುಪ್ಸೆಯಂತಹ ಭಾವಗಳು ಬರುವುದು ಸಹಜ.

ಮಾನ್ಯ ಗುಂಡಪ್ಪನವರು ಹಿಂದಿನ ಮುಕ್ತಕದಲ್ಲಿ ಹೇಳಿದ ಹಾಗೆ ವಿಧಿಯ ಚಕ್ರ ಸುತ್ತುತ್ತಾ ನಮ್ಮನ್ನು ಮತ್ತು ನಮಗೆ ಸಂಬಂಧಪಟ್ಟ ಎಲ್ಲವನ್ನೂ ತನ್ನ ಪ್ರಭಾವದ ಪರಿಧಿಯೊಳಕ್ಕೆ ಸೆಳೆದುಕೊಂಡು ನಮ್ಮನ್ನು ಆಡಿಸುತ್ತದೆ. ತನ್ನ ಸುತ್ತುವಿಕೆಯಲ್ಲಿ ನಮ್ಮನ್ನೂ ಸಿಕ್ಕಿಸಿಕೊಂಡು ಸುತ್ತುತ್ತಾ, ನಮಗೆ ಅನುಭವ ಉಣ ಬಡಿಸುತ್ತಿರುತ್ತದೆ. ಯಾರನ್ನೂ ಬಿಡದೆ ಅವರವರ ಪೂರ್ವಕರ್ಮ, ಇಂದಿನ ಪ್ರಯತ್ನಗಳ ಆಧಾರದ ಮೇಲೆ ಅದು ಎಲ್ಲರಿಗೂ ಉಣಬಡಿಸುತ್ತದೆ. ಯಾರನ್ನೂ

ಅದು ತಪ್ಪಿಸುವುದಿಲ್ಲ ಮತ್ತು ಯಾರೂ ಅದರಿಂದ ತಪ್ಪಿಸಿಕೊಳ್ಳಲಾರರು.ಈ ಜಗತ್ತಿನಲ್ಲಿರುವ ಎಲ್ಲ ಜೀವಿಗಳಿಗೂ ಇದು ಅನ್ವಯಿಸುತ್ತದೆ. ಯಾರಿಗೂ ಇದರಿಂದ ವಿನಾಯಿತಿಯೇ ಇಲ್ಲ.

ಹಾಗಿರುವಾಗ ನಮ್ಮ ಜೀವನದಲ್ಲಿ ಏನು ಬರುತ್ತದೋ ಅದನ್ನು ಸುಮ್ಮನೆ ಸ್ವೀಕರಿಸಿ ಅನುಭವಿಸುವುದೇ ಒಳ್ಳೆಯದು. ಏಕೆಂದರೆ ನಮಗೆ ವಿಧಿಯೊಂದಿಗೆ ಹೋರಾಡುವ ಶಕ್ತಿ ಇಲ್ಲ ಅಲ್ಲವೇ. ನಾವು ನಮ್ಮ ಕೆಲಸಗಳನ್ನು ಮಾಡುವುದರಲ್ಲಿ ನಮ್ಮ ಶಕ್ತಿ ಮತ್ತು ಯುಕ್ತಿಗಳ ಜೊತೆಗೆ ಆ ವಿಧಿಯ ಪ್ರಭಾವವೂ ಇದೆ ಎಂದು ನಂಬಿ, ಅದರಿಂದಾಗುವ ಪರಿಣಾಮಗಳಿಗೆ ಮಾನಸಿಕವಾಗಿ ಮೊದಲೇ ತಯಾರಾಗಿದ್ದು, ಕಾತರತೆಯನ್ನು ತೊರೆದು ಬಂದದ್ದನ್ನು ಬಂದಹಾಗೆ ಅನುಭವಿಸಿದರೆ ಅಥವಾ ಅನುಭವಿಸುವ ಮನೋಭಾವ ಬೆಳೆಸಿಕೊಂಡರೆ ಒಳ್ಳೆಯದು.

# ತಟವಟವೋ ಸೃಷ್ಟಿದಯೆ 364-368

**ಮುಕ್ತಕ-364**

**ನಟಿಪುದೆಮ್ಮೊಮ್ಮೆ ಮರುಕವ ದೈವ ಮನುಜರಲಿ।**
**ಕಟುಕನಿನಿಸಕ್ಕಿಯನ್ನು ಹಕ್ಕಿಗೆರಚುವವೋಲ್॥**
**ತುಟಿ ಸುಟ್ಟು ರಸನೆಗೆಟುಕದ ಕೀರು ದೈವಕೃಪೆ।**
**ತಟವಟವೋ ಸೃಷ್ಟಿದಯೆ - ಮಂಕುತಿಮ್ಮ॥**

ನಟಿಪುದೆಮ್ಮೊಮ್ಮೆ=ನಟಿಪುದು+ಒಮ್ಮೊಮ್ಮೆ, ಕಟುಕನಿನಿಸಕ್ಕಿಯನು=ಕಟುಕನ್+ಇನಿಸು+ಅಕ್ಕಿಯನು, ಹಕ್ಕಿಗೆರಚುವವೋಲ್=ಹಕ್ಕಿಗೆ+ಎರಚುವ+ಓಲ್, ರಸನೆಗೆಟುಕದ=ರಸನೆಗೆ+ಎಟುಕದ.





ಮರುಕ=ಕರುಣೆ, ಮನುಜ=ಮನುಷ್ಯ, ರಸನೆ=ನಾಲಿಗೆ, ಕೀರು=ಹಾಲು ಅಥವಾ ಪಾಯಸ, ತಟವಟ-ಮೋಸ.

ಹಕ್ಕಿಗಳ ಕತ್ತರಿಸುವ ಮುನ್ನ ಅವುಗಳಿಗೆ ತೋರಿಕೆಯ ಕರುಣೆಯಿಂದ ಅಕ್ಕಿಯನು ಎರಚುವ ಕಟುಕನ ರೀತಿ ಅಥವಾ ರುಚಿಯಾದ ಬಿಸಿ ಹಾಲನ್ನೋ ಅಥವಾ ಪಾಯಸವನ್ನೋ ನಮ್ಮ ಮುಂದಿಟ್ಟು, ನಾವದನ್ನು ಆಸೆಯಿಂದ ಹೀರಲು ಹೋಗಿ ತುಟಿ ಸುಟ್ಟುಕೊಂಡು ಇನ್ನು ಪಾಯಸವೇ ಬೇಡ" ಎನ್ನುವಂತೆ ಮಾಡುವ, ಮೋಸದ ಅಥವಾ ಕಪಟದ ಕರುಣೆಯೇ ಆ ದೈವ ಕೃಪೆಯೋ? ಎನ್ನುತ್ತಾರೆ ನಮ್ಮ ಗುಂಡಪ್ಪನವರು ಈ ಮುಕ್ತಕದಲ್ಲಿ.

ಇಂದ್ರಿಯಗಳಿಂದಾದ ಮನಸ್ಸು, ಬುದ್ಧಿ, ದೇಹಗಳಿಂದ ಕೂಡಿದ ಪ್ರಾಣಿಗಳಾದ ನಾವು ಆಸೆಪಡುವುದು ಸಹಜವಾದ ಗುಣ. ಹಾಗೆ ಆಸೆಪಡುವಾಗ ನಾವು ಆಸೆಪಡುವ ವಸ್ತು, ವಿಷಯ ಅಥವಾ ವ್ಯಕ್ತಿ ಎಂತಹುದು, ಅದನ್ನು ಆಸೆಪಡುವುದರಿಂದ ಆಗುವ ಸಾಧಕ ಭಾಧಕಗಳೇನು? ಎಂದು ಅರಿಯದೆಯೇ ಆಸೆಪಡುತ್ತೇವೆ. ನಾವು ಆಸೆಪಟ್ಟದ್ದು ನಮಗೆ ಸಿಕ್ಕಾಗ ಆ ದೈವದ ಕೃಪೆಯಿಂದ ನಮಗೆ ಇದು ಸಿಕ್ಕಿತು ಎಂದು ಸಂತೋಷ ಪಟ್ಟುಕೊಳ್ಳುತ್ತೇವೆ. ಒಂದು ಆಸೆಯನ್ನು ತೀರಿಸಿ ಮತ್ತಷ್ಟನ್ನು ಆಸೆಪಡುವಂತೆ ಮಾಡಿ, ನಮ್ಮನ್ನು ತನ್ನ ಮೋಸದ ಜಾಲದಲ್ಲಿ ಸಿಕ್ಕಿಸಿಕೊಳ್ಳುವುದೇ ವಿಧಿಯ ತಂತ್ರ ಎಂದು ಅರಿಯದೆ ಹೋಗುತ್ತೇವೆ. ಕಟುಕನು ಹಾಕುವ ತಳಿರೆಲೆಗಳಿಗೆ ಆಸೆಪಟ್ಟು ಅವನ ಹಿಂದೆಯೇ ಪ್ರೀತಿಯಿಂದ ಓಡುವ ಕುರಿಯಂತೆ, ನಾವು ಈ ವಿಧಿಯು ತೋರುವ ಆಸೆಗಳ ಬಲೆಗೆ ನಾವೇ ಆಸೆ ಪಟ್ಟು ಬೀಳುತ್ತೇವೆ, ಬಿದ್ದು ಪರದಾಡುತ್ತೇವೆ.

ಈ ವಿಧಿ ನಮಗೆ ಹೀಗೆ ಆಸೆಗಳನ್ನು ತೋರಿ ನಮಗೆ ಮೋಸದ ಆನಂದವನ್ನೋ ಅಥವಾ ಸೌಖ್ಯವನ್ನೋ ಏತಕ್ಕಾಗಿ ನೀಡುತ್ತದೆ ಎಂದು ಸ್ವಲ್ಪ ಯೋಚಿಸಿದರೆ ನನಗೆ ಹೀಗನ್ನಿಸುತ್ತದೆ. ನೋಡಿ ಆಸೆ ಪಡುವ ಅಥವಾ ಪಡದೆ ಇರುವ ಸ್ವಾತಂತ್ರ್ಯವನ್ನು ನಮಗೆ ಆ ಪರಮಾತ್ಮ ವಿವೇಚನೆಯ ರೂಪದಲ್ಲಿ ಕೊಟ್ಟಿದ್ದಾನೆ. ನಾವು ಆಸೆ ಪಟ್ಟರೆ "ನೋಡು ನೀ ಆಸೆ ಪಟ್ಟಿದ್ದನ್ನು ನೀಡಿದ್ದೇನೆ. ಅದರಿಂದ ಬರುವ ನೋವು ನಲಿವುಗಳಿಗೆ ನೀನೇ ಬಾಧ್ಯನು ಮತ್ತು ನೀನೇ ಅನುಭವಿಸಬೇಕು" ಎನ್ನುತ್ತಾನೆ.

ವಾಚಕರೆ ನಮಗೇನು ಬೇಕು, ಎಷ್ಟು ಬೇಕು, ನಾವು ಏನನ್ನು ಪಡೆಯಲು ಅರ್ಹರು, ಯಾವುದು ನಮಗೆ ಹಿತ ಎಂದು ನಮ್ಮ ಮಿತಿಗಳನ್ನು ಅರಿಯುವುದು ಮತ್ತು ಆ ಮಿತಿಗಳ ಪರಿಧಿಯಲ್ಲೇ ಹಿತವಾಗಿ ನಡೆದು ಕೊಳ್ಳುವುದೇ ಜ್ಞಾನ. ಹಾಗೆ ಆದರೆ ವಿಧಿಯು ನಗುವ ವಿಕಟ ಅಟ್ಟಹಾಸದ ನಗೆಯು ಮಾಡುವ ನೋವನ್ನು ತಡೆದುಕೊಳ್ಳುವ ಶಕ್ತಿ ಇರುತ್ತದೆ. ಅನ್ಯ ಪ್ರಾಣಿಗಳಿಗಿಂತ ವಿವೇಚನೆ ಹೆಚ್ಚಾಗಿರುವ ಪ್ರಾಣಿಗಳು ನಾವಾದ್ದರಿಂದ ಅಂತಹ ಪ್ರಯತ್ನವನ್ನು ಮಾಡಬಹುದು.

**ಮುಕ್ತಕ-365**

**ಅದು ಒಳಿತು ಇದು ಕೆಟ್ಟದೆಂಬ ಹಠ ನಿನಗೇಕೆ |**
**ಹೊದಿಸಿಹುದು ದೈವವೆಲ್ಲಕವೊಂದು ತೆರೆಯ ||**
**ಸೊದೆಯ ಸೌರಭ ನಂಜುಬಟ್ಟಲಲಿ ತೋರೀತು |**
**ವಿಧಿಯ ಬಗೆಯೆಂತಿಹುದೊ - ಮಂಕುತಿಮ್ಮ ||**

ಕೆಟ್ಟದೆಂಬ=ಕೆಟ್ಟದ್ದು+ಎಂಬ, ನಿನಗೇಕೆ=ನಿನಗೆ+ಏಕೆ, ಹೊದಿಸಿಹುದು=ಹೊದಿಸಿ+ಇಹುದು, ದೈವವೆಲ್ಲಕವೊಂದು=ದೈವವು+ಎಲ್ಲಕಂ+ಒಂದು, ಬಗೆಯೆಂತಿಹುದೊ=ಬಗೆಯು+ಎಂತಿಹುದೊ ಹೊದಿಸಿಹುದು=ಕವಿಸಿ ಇದೆ, ಸೊದೆಯ=ಅಮೃತದ, ಸೌರಭ-ಸುವಾಸನೆ, ನಂಜುಬಟ್ಟಲಲಿ=ವಿಷದ ಬಟ್ಟಲಲಿ, ಬಗೆಯು=ವಿಧಾನ.

ಒಂದು ಒಳ್ಳೆಯದು ಅಥವಾ ಇನ್ನೊಂದು ಕೆಟ್ಟದೆಂದು ವ್ಯಾಖ್ಯಾನ ಮಾಡುವ ಹಠ ನಿನಗೆ ಏಕೆ? ಎಂದು ಅಧಿಕಾರಯುಕ್ತವಾಗಿ ಒಂದು ಪ್ರಶ್ನೆಯನ್ನು ಕೇಳುತ್ತಾ, ಆ ದೈವವು ಎಲ್ಲದರ ನಿಜಸ್ವರೂಪವನ್ನೂ ಒಂದು ತೆರೆಯ ಹಿಂದೆ ಅಡಗಿಸಿಟ್ಟಿದೆ. ಆ ವಿಧಿಯ ಕಾರ್ಯ ವೈಖರಿಯ ವಿಧಾನ ಹಲವು ಬಗೆಯಾದದ್ದು, ಏಕೆಂದರೆ ನಮಗೆ ಹಲವು ಬಾರಿ ವಿಷದ ಬಟ್ಟಲಲ್ಲಿ ಅಮೃತದ ಸುವಾಸನೆ ಅಥವಾ ಸುಗಂಧ ಸಿಗಬಹುದು ಎಂದು ನಮಗೆ ವಸ್ತು ವಿಷಯ ಅಥವಾ ವ್ಯಕ್ತಿಗಳ ನಿಜ ಸ್ವರೂಪವನ್ನು ಅರಿಯುವ ಬಗೆಯನ್ನು ವಿಶದ ಪಡಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ನಾವು ಯಾವುದನ್ನೋ ಸರಿ ಅಥವಾ ಒಳ್ಳೆಯದು ಎನ್ನುತ್ತೇವೆ, ಮತ್ಯಾವುದನ್ನೋ ತಪ್ಪು ಅಥವಾ ಕೆಟ್ಟದ್ದು ಎನ್ನುತ್ತೇವೆ. ಆದರೆ ಬಹುತೇಕ ಸಮಯಗಳಲ್ಲಿ ನಮಗೆ ವಸ್ತು, ವಿಷಯ ಮತ್ತು ವ್ಯಕ್ತಿಗಳ ಸಂಪೂರ್ಣ ಪರಿಚಯವಿಲ್ಲದೆಯೇ ಆ ರೀತಿಯ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಾ ಇರುತ್ತೇವೆ. ನಮ್ಮ ಅರಿವಿಗೆ ಒಂದು ಪರದೆ

ಕವಿದು ಬಿಟ್ಟಿರುತ್ತದೆ. ಆ ಪರದೆಯನ್ನು ಸರಿಸಿ ಸತ್ಯವನ್ನು ಅರಿತಾಗ ನಮ್ಮ ಗ್ರಹಿಕೆಯ ಕೊರತೆಯ ಅರಿವಾಗುತ್ತದೆ. ಆ ರೀತಿಯ ಕೊರತೆಯ ಪರದೆಯನ್ನು ನಮಗೆ ಹೊದಿಸುವುದು ಮಾಯೆ. ಹೀಗೆ ಒಳ್ಳೆಯದ್ದನ್ನು ಕೆಟ್ಟದ್ದೆಂದೂ, ಸರಿಯಾದದ್ದನ್ನು ತಪ್ಪೆಂದೂ ಗ್ರಹಿಸುವುದು ಕೇವಲ ಆ ಪರದೆಯ ಆವರಣದಲ್ಲಿ ನಾವಿದ್ದಾಗ, ಅದರಿಂದ ಹೊರಬಂದರೆ ಸೊದೆಯ ಸೌರಭ ನಂಜುಬಟ್ಟಲಲಿ " ಎಂಬಂತೆ ಸತ್ಯದ ಅರಿವಾಗಿ ನಮಗೆ ನಮ್ಮ ಗ್ರಹಿಕೆ ಬದಲಾಗಬಹುದು.

ಅದು ಒಳಿತು ಇದು ಕೆಟ್ಟದೆಂಬ ಹಠ ನಿನಗೇಕೆ? ಎಂದು ಗುಂಡಪ್ಪನವರು ಒಂದು ಪ್ರಶ್ನೆ ಕೇಳುತ್ತಾರೆ. ಅವರ ಅಭಿಪ್ರಾಯದಂತೆ ಸತ್ಯವನ್ನು ಅರಿಯಬೇಕು ಮತ್ತು ಅಂತಹ ಅರಿವು ಶೋಧಿತ ಸತ್ಯದ ಅರಿವಿನಿಂದಾಗಬೇಕು. ಅಂತಹ ಸತ್ಯದ ಅರಿವಾದಾಗ ನಮ್ಮ ಹಠ ಕಡಿಮೆಯಾಗಿ ನಾವು ಶಾಂತವಾಗಬಹುದು.





**ಮುಕ್ತಕ-366**

**ಗ್ರಹಗತಿಯ ತಿದ್ದುವನೆ ಜೋಯಿಸನು ಜಾತಕದಿ।**
**ವಿಹಿತವಾಗಿಹುದುದರ ಗತಿ ಸೃಷ್ಟಿ ವಿಧಿಯಿಂ॥**
**ಸಹಿದಲ್ಲದೆ ಮುಗಿಯದಾವ ದಶೆ ಬಂದೊಡಂ।**
**ಸಹನೆ ವಜ್ರದ ಕವಚ - ಮಂಕುತಿಮ್ಮ॥**

ವಿಹಿತವಾಗಿಹುದುದರ=ವಿಹಿತವಾಗಿಹುದು+ಅದರ, ಸಹಿದಲ್ಲದೆ=ಸಹಿಸದೆ+ಅಲ್ಲದೆ,

ಮುಗಿಯದಾವ=ಮುಗಿಯದು+ಆವ.

ದಶೆ=ಜಾತಕದಲ್ಲಿ, ನಮಗೆ ಒಂದು ಸಮಯದಿಂದ ಒಂದು ಸಮಯದವರೆಗೆ ಇರುವ ಕಾಲ (ಉದಾ : ಶುಕ್ರ ದೆಶೆ, ಶನಿ ದೆಶೆ), ವಿಹಿತ=ನಿಗದಿತ.

ಜ್ಯೋತಿಷ್ಯನ ಬಳಿ ಹೋಗಿ ನಿನ್ನ ಜಾತಕವ ತೋರಿಸಿದರೆ, ಅವನಿಗೆ ನಿನ್ನ ಗ್ರಹ ಗತಿಯನ್ನು ತಿದ್ದಲು ಸಾಧ್ಯವೇ? ಇಲ್ಲ, ಏಕೆಂದರೆ ನೀನು ಈ ಜಗತ್ತಿಗೆ ಬಂದಾಗಲೇ ನಿನ್ನ ಗ್ರಹಗತಿಯನ್ನು ವಿಧಿ ನಿರ್ಧರಿಸಿಬಿಟ್ಟಿದೆ. ಹಾಗಾಗಿ ಯಾವ ದೆಶೆಯಾದರೂ, ಬಂದದ್ದನ್ನು ಅನುಭವಿಸಿಯೇ ತೀರಬೇಕು. ಹಾಗೆ ಅನುಭವಿಸುವಾಗ ಬರುವ ನೋವು ಸಂಕಷ್ಟಗಳನ್ನು ಸಹಿಸಲು ನಿನಗೆ ಬೇಕಾದದ್ದು ಸಹನೆ ಎಂಬ 'ವಜ್ರದ ಕವಚ' ಎಂದು ಜನರ ಭವಿಷ್ಯವನ್ನು ಕುರಿತಾದ ಪರದಾಟಕ್ಕೆ ಉತ್ತರವೆಂಬಂತೆ ಈ ಮುಕ್ತಕದ ವಿಷಯವನ್ನು ಪ್ರಸ್ತಾಪಿಸಿದ್ದಾರೆ, ಮಾನ್ಯ ಗುಂಡಪ್ಪನವರು.

"ಹಣೆ ಬರಹಕ್ಕೆ ಹೊಣೆ ಯಾರು" ಎನ್ನುವುದು ಸಾಮಾನ್ಯವಾಗಿ ನಾವು ಕೇಳುವ ಮಾತು. ಅಂದರೆ ಎಲ್ಲರಿಗೂ ಗೊತ್ತು, ವಿಧಿ ಬರಹವನ್ನು ತಿದ್ದಿ ಬರೆಯಲು ಸಾಧ್ಯವಿಲ್ಲ ಎಂದು. ಆದರೂ ತಮ್ಮ ಅಥವಾ ತಮ್ಮವರ ಜಾತಕವನ್ನು ಹಿಡಿದು ಹಲವಾರು ಜ್ಯೋತಿಷ್ಯರ ಮನೆ ಬಾಗಿಲಿಗೆ ಓಡುವ ಜನದ ಕೊರತೆಯೇನೂ ಇಲ್ಲ. ಒಂದು ಬೀಜ ತನ್ನ ತಾಯಿಮರದಿಂದ ಹೇಗೆ ತಾನು 'ಆಗುವ' ಮರದ ಎಲ್ಲ ಗುಣಗಳನ್ನೂ ತನ್ನಲ್ಲೇ ಅಡಗಿಸಿಕೊಂಡು ಬಂದಿರುತ್ತದೆಯೋ, ಹಾಗೆಯೇ ಪ್ರತೀ ಜೀವಿಯೂ ಒಂದು ದೇಹ ಧಾರಣೆ ಮಾಡುವಾಗಲೇ, ತನ್ನೆಲ್ಲ ವಿಧಿಬರಹವನ್ನೂ ಹೊತ್ತು ತಂದಿರುತ್ತದೆ. ಅದನ್ನು ಬಲಾಯಿಸಲು ಸಾಧ್ಯವೇ ಇಲ್ಲ.

ಆದರೆ ಜೋತಿಷ್ಯನ ಬಳಿ ಹೋಗಿ ಕೇಳುವುದು ನಮ್ಮ ತೃಪ್ತಿಗೆ, ಅವನು ಹೇಳುವುದೂ ಸಹ ನಮ್ಮ ತೃಪ್ತಿಗೆ ಇನ್ನು ದೋಷಗಳನ್ನು ಕಂಡು ಹಿಡಿದು ಅದರ ಪರಿಹಾರಕ್ಕೆ ಯಾವುದಾದರೂ ಶಾಂತಿ, ಹೋಮ, ಹವನ, ಬಲಿ, ಮುಂತಾದವುಗಳನ್ನು ಮಾಡುವುದೂ ಸಹ ಏನೋ ಒಂದು ಮಾನಸಿಕ ತೃಪ್ತಿಗಾಗಿಯಷ್ಟೇ. ಅದರಿಂದ ಬದಲಾಗುವುದಾವುದೂ ಇಲ್ಲ.

ಆದರೆ ನಾವು ನಂಬುವುದು ಏನನ್ನು? ನಮ್ಮ ಲಲಾಟ ಲಿಖಿತ'ವನ್ನು ಬರೆಯುವ ಮತ್ತು ನಿಯಂತ್ರಿಸುವ ವಿಧಿಯನ್ನು ಮತ್ತು ಆ ವಿಧಿಗಧಿಪತಿಯಾದ ಆ ಪರಮಾತ್ಮನನ್ನು ಬಿಟ್ಟು ಮಿಕ್ಕೆಲ್ಲವನ್ನೂ ನಂಬುತ್ತೇವೆ. ಆ ವಿಧಿ ಬರಹದಲ್ಲಿ ನಮಗೆ ಹಿತವಿದೆಯೋ ಇಲ್ಲವೋ, ಅನುಭವಿಸಿಯೇ ತೀರಬೇಕು ಅನ್ಯಥಾ ದಾರಿಯಿಲ್ಲ.





ನಾವು ಕಾತರದಿಂದ ಪರದಾಡದೆ ಸಹನೆಯಿಂದ ಅನುಭವಿಸಬೇಕು. ಅದಕ್ಕೇ ಮಾನ್ಯ ಗುಂಡಪ್ಪನವರು "ಸಹನೆ ವಜ್ರದ ಕವಚ" ಎಂದಿದ್ದಾರೆ. ಸಹನೆಯನ್ನು ಬೆಳೆಸಿಕೊಂಡು ಆ ವಜ್ರ ಕವಚವನ್ನು ನಮ್ಮದಾಗಿಸಿಕೊಂಡರೆ, ಎಂತಹ ಪರಿಸ್ಥಿತಿಯನ್ನೂ ಧೈರ್ಯದಿಂದ ಎದುರಿಸಬಹುದು ಎನ್ನುವುದು ನೂರಕ್ಕೆ ನೂರು ಸತ್ಯ.

**ಮುಕ್ತಕ - 367**

**ಧಾರಿಣಿಯ ವಾಸಿಗಳ್ಗಿಹುದೊಂದು ಹಿತವಾರ್ತೆ।**
**ಆರಯ್ವುದಾರ್ತರ್ ಅತ್ಯಾರ್ತರಾಪದವ?**
**ರೌರವಿಗೆ ಹಿತ ಮಹಾರೌರವಿಯ ಗೋಳುದನಿ ?**
**ನಾರಕದೊಳುದುಪಾಯ - ಮಂಕುತಿಮ್ಮ ?**

ವಾಸಿಗಳ್ಗಿಹುದೊಂದು=ವಾಸಿಗಳಿಗೆ+ಇಹುದು+ಒಂದು, ಆರಯ್ವುದಾರ್ತ=ಆರಯ್ದುದು+ಆರ್ತರ್,
ಅತ್ಯಾರ್ತರಾಪದವ=ಅತಿ+ಆರ್ತರ+ಆಪದವ, ನಾರಕದೊಳುದುಪಾಯ=ನಾರಕದೊಳು+ಅದು+ಉಪಾಯ.
ಧಾರಿಣಿ=ಭೂಮಿ, ಜಗತ್ತು, ಆರಮ್ಯದು=ವಿಚಾರಮಾಡುವುದು, ಆರ್ತ=ಸಂಕಟದಿಂದ ಗೋಳಾಡುವವರು,
ಅತ್ಯಾರ್ತ=ಅತಿಯಾಗಿ ಗೋಳಾಡುವವರು, ರೌರವಿ=ನರಕದಂತ ಕಷ್ಟ ಅನುಭವಿಸುವವನು,

ನಾರಕದೊಳುದುಪಾಯ=ಹಿಂಸೆಯಲ್ಲೂ ಒಂದು ಉಪಾಯ.

ಈ ಜಗತ್ತಿನಲ್ಲಿರುವವರಿಗೆ ಒಂದು ಒಳ್ಳೆಯ ಉಪಾಯವಿದೆ. ಅತಿಯಾಗಿ ಕಷ್ಟಗಳನ್ನು ಅನುಭವಿಸುವವರ ಕಷ್ಟಗಳನ್ನು ಅವರಿಗಿಂತ ಕಡಿಮೆ ಕಷ್ಟಗಳನ್ನು ಅನುಭವಿಸುವವರು ವಿಚಾರ ಮತ್ತು ವಿಶ್ಲೇಷಣೆ ಮಾಡಿದರೆ ನಮಗಿಂತ ಹೆಚ್ಚು ಕಷ್ಟ ಅಥವಾ ಹಿಂಸೆ ಅನುಭವಿಸುವವರಿಗಿಂತ ನಾವು ಉತ್ತಮ ಎಂದು ನಾವು ಅಂದುಕೊಳ್ಳಬಹುದು. ಮಹಾನರಕ ಯಾತನೆ ಅನುಭವಿಸುವವನಿಗಿಂತ ನನ್ನ ಯಾತನೆ ಕಡಿಮೆಯಾದದ್ದು, ಎಂದು ನಮಗಿಂತ ಹೆಚ್ಚು ಕಷ್ಟ ಮತ್ತು ಹಿಂಸೆ ಅನುಭವಿಸುವವರನ್ನು ನೋಡಿ ಸಮಾಧಾನ ಪಟ್ಟುಕೊಳ್ಳುವುದೇ ಉಪಾಯ ಎಂದು ಬಂದ ಕಷ್ಟಗಳನ್ನು ಲಲಿತವಾಗಿ (light) ಹೇಗೆ ಭಾವಿಸಬಹುದೆಂಬ ಸೂಚನೆಯ ರೀತಿಯಲ್ಲಿದೆ ಮಾನ್ಯ ಗುಂಡಪ್ಪನವರ ಈ ಮುಕ್ತಕದ ಆಂತರ್ಯ.

ಈ ಜಗತ್ತಿನಲ್ಲಿ ಕಷ್ಟವಿಲ್ಲದವರಾರು? ಅವರವರ ಕಷ್ಟ ಅವರಿಗೆ ಕೆಲವರಿಗೆ ದೊಡ್ಡದು, ಕೆಲವರಿಗೆ ಸಣ್ಣದು. ದೊಡ್ಡ ಕಷ್ಟ ಬಂದವರು ಅದನ್ನು ಸಣ್ಣ ದೆಂದುಕೊಳ್ಳಬಹುದು ಅಥವಾ ತೀರ ಸಣ್ಣ ಕಷ್ಟವೇ ಕೆಲವರಿಗೆ ತಲೆಯ ಮೇಲೆ ಬೆಟ್ಟ ಬಿದ್ದಂತಾಗಬಹುದು. ಅದು ಅವರು ಪರಿಸ್ಥಿತಿಯನ್ನು ತೆಗೆದುಕೊಳ್ಳುವ ರೀತಿಯಲ್ಲಿರುತ್ತದೆ. ಯಾವ ವಸ್ತುವಿಗೆ ನಾವು ಅಂಟಿಕೊಂಡಿರುತ್ತೇವೆಯೋ ಆ ವಸ್ತುವಿನಿಂದ ನಾವು ದೂರಾಗಬೇಕಾದ ಸಂದರ್ಭ ಬಂದಾಗ ನಮಗೆ ಕಷ್ಟ ಎನಿಸುತ್ತದೆ. ನಮಗಿಂತ ಹೆಚ್ಚು ಕಷ್ಟಪಡುವವನನ್ನು ಕಂಡು ನಮ್ಮ ಸ್ಥಿತಿ ಅವನಿಗಿಂತ ಉತ್ತಮವಾಗಿದೆ ಎಂದು ಸಮಾಧಾನಪಟ್ಟುಕೊಳ್ಳುವುದೇ ಮೇಲು. ಬೇರೆ ದಾರಿಯಿಲ್ಲ. ಏಕೆಂದರೆ ಈ ಕಷ್ಟ, ಹಿಂಸೆ, ಯಾತನೆ ಎಲ್ಲರಿಗೂ ಇದ್ದೇ ಇದೆ. ಪ್ರಮಾಣ ಮತ್ತು ಪರಿಣಾಮಗಳ ವ್ಯತ್ಯಾಸ ಅಷ್ಟೆ.

(202)

| | |
|---|---|
| ಕಗ್ಗ ರಸಧಾರೆ-2 | ತಟವಟವೋ ಸೃಷ್ಟಿದಯೆ 364-368 |

ಸಾಮಾನ್ಯವಾಗಿ ಕಷ್ಟಗಳು ನಮಗೆ ಬರುವುದಿಲ್ಲ. ನಾವು ಅದನ್ನು ಹೋಗಿ ಹಿಡಿದುಕೊಳ್ಳುತ್ತೇವೆ, ನಂತರ ಪರದಾಡುತ್ತೇವೆ. ಹಾಗಾಗಿ ಕಷ್ಟವಿಲ್ಲದವರಿಲ್ಲ. ವ ಎಲ್ಲರಿಗೂ ಇದೆ. ಇದು ಈ ಜಗತ್ತಿನಲ್ಲಿ ಹುಟ್ಟಿದ ಪ್ರತೀ ಜೀವಿಗೂ

ಇರುವುದೇ. ಆದರೆ ಜಗತ್ತಿನಲ್ಲಿ ಅನ್ಯರನ್ನು ಕಂಡು ನಮ್ಮ ಕಷ್ಟವನ್ನು ತಾಳ್ಮೆಯಿಂದ ಸಹಿಸಿಕೊಳ್ಳುವುದೇ ಜಾಣತನವೆಂಬ ಕಿವಿಮಾತೇ ಈ ಮುಕ್ತಕದ ಆಂತರ್ಯ.

ಮುಕ್ತಕ-368

ಮುಕ್ಕೋಟಿ ದೇವತೆಗಳಾಳುತಿಹ ಲೋಕದಲಿ ।
ದಿಕ್ಕುಗಾಣದೆ ಜೀವಿಯಲೆವುದಚ್ಚರಿಯೇಂ ॥
ಒಕ್ಕಟ್ಟನೊಡೆಯರೇ ಕಲಿಯದಿರೆ ನಮ್ಮ ಗತಿ- ।
ಗಿಕ್ಕಟ್ಟು ತಪ್ಪುವುದೆ ? - ಮಂಕುತಿಮ್ಮ ‖

ದೇವತೆಗಳಾಳುತಿಹ=ದೇವತೆಗಳು+ಆಳುತಿಹ, ದಿಕ್ಕುಗಾಣದೆ=ದಿಕ್ಕು+ಕಾಣದೆ, ಜೀವಿಯಲೆವುದಚ್ಚರಿಯೇಂ?=ಜೀವಿ+ಅಲೆವುದು+ಅಚ್ಚರಿಯೇಂ?, ಒಕ್ಕಟ್ಟಿನೊಡೆಯರೇ=ಒಕ್ಕಟ್ಟನ+ಒಡೆಯರೇ ಗತಿಗಿಕ್ಕಟ್ಟು=ಗತಿಗೆ+ಇಕ್ಕಟ್ಟು, ಒಕ್ಕಟ್ಟನೊಡೆಯರೇ=ಸಮಗ್ರ ಸೃಷ್ಟಿಯ ಒಡೆಯರೇ, ಗತಿಗಿಕ್ಕಟ್ಟು=ಬದುಕಿಗೆ ತೊಡಕುಗಳು.

ಮೂರು ಕೋಟಿ ದೇವತೆಗಳು ಆಳುತಿಹ ಈ ಲೋಕದಲಿ ಜೀವಿಗಳು ದಿಕ್ಕುಕಾಣದೆ ಅಲೆಯುವುದು ಆಶ್ಚರ್ಯವೇನಲ್ಲ. ಏಕೆಂದರೆ ಸಮಗ್ರವಾಗಿರುವ ಈ ಸೃಷ್ಟಿಯ ಪಾಲನೆಗೆ ನಿಯಮಿಸಲ್ಪಟ್ಟ ಆ ದೇವತೆಗಳಲ್ಲೇ ಒಗ್ಗಟ್ಟು ಇಲ್ಲದಿದ್ದರೆ ಹುಲುಮಾನವರಾದ ನಮ್ಮ ಗತಿಗೆ ಇಕ್ಕಟ್ಟು, ಅಂದರೆ ತೊಂದರೆ ಬರದೆ ಇನ್ನೇನಾಗುತ್ತದೆ ಎನ್ನುವ ಪ್ರಶ್ನೆಯನ್ನು ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ ಪ್ರಸ್ತಾಪಿಸಿದ್ದಾರೆ.

ನಮ್ಮನ್ನಾಳುವ ಆ ಪರಮಾತ್ಮನ ಅಡಿಯಲ್ಲಿ ದುಡಿಯುವ ಹಲವಾರು ದೇವತೆಗಳು, ಲೆಕ್ಕದಲ್ಲಿ ನಮಗೆ ಅವರು ಮೂರು ಕೋಟಿ. ಲೆಕ್ಕಹಾಕಲು ಬಹಳ ಕಷ್ಟ ಅವರೆಲ್ಲರೂ ನಮ್ಮನ್ನು ಕಾಯುವುದು, ಆ ಪರಮಾತ್ಮನ ಆದೇಶದಂತೆ, 'ಭೀಷಾಸ್ಮಾದ್ ವಾತಃ ಪವತೆ, ಭೀಷೋದೇತಿ ಸೂರ್ಯಃ' ಇತ್ಯಾದಿಯಾಗಿ ವೇದವು ಹೇಳುತ್ತದೆ. ನಮ್ಮ ಪೂರ್ವಕರ್ಮವನ್ನು ಹೊತ್ತು ತರುವ ದೇವತೆಗಳು, ನಮ್ಮ ಇಂದಿನ ಮನವನಾಳುವ ದೇವತೆಗಳು ಮತ್ತು ಇವರನ್ನೆಲ್ಲ ಆದೇಶಿಸುವ ಆ ಪರಮಾತ್ಮ ಹೀಗೆ ಹಲವರ ಅಧೀನ ನಾವು ಮತ್ತು ನಮ್ಮ ಬಾಳು. ಯಾವುದನ್ನು ಅಳಿಸಿಕೊಳ್ಳುವುದು, ಯಾವುದನ್ನು ಉಳಿಸಿಕೊಳ್ಳುವುದು ಮತ್ತು ಯಾವುದನ್ನು ನಂಬುವುದು ಎನ್ನುವುದು ಅರ್ಥವಾಗದೆ ನಾವು ದಿಕ್ಕು ಕಾಣದೆ ಅಲೆಯುತ್ತಿದ್ದೇವೆ. ನಮ್ಮ ಕಷ್ಟಗಳು ಮತ್ತು ಅವುಗಳ ಕಾರಣಗಳು ನಮಗೆ ಅರ್ಥವಾಗದೆ ಇದ್ದೇವೆ. ನಮ್ಮ ಪರದಾಟಕ್ಕೆ ಕೊನೆಯೇ ಇಲ್ಲ.

ಇನ್ನು ನಮ್ಮನ್ನಾಳುವ ದೇವತೆಗಳೂ ಸಹ ನಮ್ಮನ್ನು ಕಾಯುವ ವಿಷಯದಲ್ಲಿ ಒಮ್ಮತವಿಲ್ಲ. ಬಯಸಿದ್ದನ್ನು ಕೊಡುವವರು ಒಬ್ಬರಾದರೆ, ಕೊಟ್ಟದ್ದರಿಂದ ನಮ್ಮನ್ನು ಪರದಾಡಿಸುವವರು ಮತ್ತೊಬ್ಬರು, ಕೊಟ್ಟದ್ದನ್ನು





ಕಿತ್ತುಕೊಳ್ಳುವವರು ಇನ್ನೊಬ್ಬರು. ಹೀಗೆ ಒಮ್ಮತವಿಲ್ಲದೆ ಮಾನ್ಯ ಗುಂಡಪ್ಪನವರು ಹೇಳುವಂತೆ ನಮ್ಮ ಇಕ್ಕಟ್ಟಿನ ಗತಿಗೆ ಕೊನೆಯೇ ಇಲ್ಲ. ಹಾಗೆ ಒಮ್ಮತವಿದ್ದಿದ್ದರೆ ಜಗತ್ತಿನ ನಮ್ಮ ಬದುಕು ಒಂದೇ ರೀತಿ ಇರಬೇಕಾಗಿತ್ತಲ್ಲವೇ? ಹಾಗೆ ಇಲ್ಲದಿರುವುದಕ್ಕೆ ನಮ್ಮನ್ನು ಕಾಯುವ ಆ ದೇವತೆಗಳಲ್ಲಿ ಒಗ್ಗಟ್ಟು ಇಲ್ಲದಿರುವುದೇ ಕಾರಣ ಎಂದು ಹೇಳುವುದೇ ಈ ಮುಕ್ತಕದ ಹೂರಣ.

ವಾಚಕರೆ ಕಷ್ಟಗಳು ಮತ್ತು ಇಕ್ಕಟ್ಟಿನ ಸ್ಥಿತಿಯನ್ನು ಅನುಭವಿಸಲೇ ಬೇಕು. ಹಾಗೆ ಅನುಭವಿಸುವಾಗ ಈ ಎಲ್ಲ ದೇವತೆಗಳ ದೇವನಾದ ಪರಮಾತ್ಮನಲ್ಲಿ ಶರಣಾಗಿ, ಸಹನೆಯಿಂದ ಬಂದದ್ದನ್ನೆಲ್ಲಾ ಅನುಭವಿಸುವುದೇ ನಮಗಿರುವ ಒಂದೇ ಒಂದು ದಾರಿ.

# ಮನವ ತೊರೆದಿರಲಹುದೇ 369-373

**ಮುಕ್ತಕ-369**

**ಏಕವಾಗವೆ ದೈವ ಚಿತ್ತ ನರಚಿತ್ತಗಳು।**
**ಏಕೆನ್ನ ಮನವನಾಳನು ಲೋಕದೊಡೆಯಂ॥**

**ಬೇಕೆನಿಪುದೊಂದೆನಗೆ ವಿಧಿ ಗೈವುದಿನ್ನೊಂದು।**

**ಈ ಕುಟಿಲಕೇಂ ಮದ್ದು – ಮಂಕುತಿಮ್ಮ॥**

ಏಕವಾಗವೆ=ಏಕ+ಆಗವೆ, ಏಕೆನ್ನ=ಏಕೆ+ಎನ್ನ, ಮನವನಾಳನು=ಮನವನು+ಆಳುವ,
ಬೇಕೆನಿಪುದೊಂದೆನಗೆ=ಬೇಕು+ಎನಿಪುದು+ಒಂದು+ಎನಗೆ, ಗೈವುದಿನ್ನೊಂದು=ಗೈವುದು+ಇನ್ನೊಂದು,
ಕುಟಿಲಕೇಂ=ಕುಟಿಲಕೆ+ಏಂ.
ಏಕವಾಗವೆ=ಒಂದಾಗವೆ, ಚಿತ್ತ=ಮನದ ಭಾವ, ಎನಿಪುದು=ಎನಿಸುವುದು, ಗೈವುದು=ಮಾಡುವುದು,
ಕುಟಿಲಕೆ=ಭೇದಕೆ, ಮದ್ದು=ಔಷಧಿ.

ನಮ್ಮ ಮನದ ಆಸೆ ಮತ್ತು ಆ ದೈವದ ಆಸೆ ಒಂದಾಗುವುದಿಲ್ಲವೇ? ನಮ್ಮ ಮನಸ್ಸನ್ನು ತಾನೇ ಏಕೆ ಆಳಲೊಲ್ಲ ಆ ಪರಮಾತ್ಮ? ನಮಗೆ ಒಂದು ಬೇಕೆನಿಸಿದರೆ ಅವನು ಕೊಡುವುದೇ ಬೇರೆ!! ಈ ವಿಪರ್ಯಾಸಕ್ಕೆ ಮದ್ದು ಯಾವುದಾದರೂ ಉಂಟೆ ಎಂದು ವಿಧಿಯಾಟದ ವಿಶ್ಲೇಷಣೆ ಮಾಡುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಎಲ್ಲವನ್ನೂ ಆ ಪರಮಾತ್ಮನೇ ಸೃಷ್ಟಿಸಿ ಎಲ್ಲದರೊಳಗೂ ಅವನೇ ಇದ್ದಾನೆ ಎಂದಾದ ಮೇಲೆ ನಮ್ಮ ಮನಸ್ಸಿನ ಭಾವವೂ ಅವನೇ ಆಗಿರಬೇಕಲ್ಲವೇ? ಆದರೆ ಹಾಗಿಲ್ಲ. ಏಕೆಂದರೆ ಮನುಷ್ಯನಿಗೆ ಒಂದು ಸ್ವತಂತ್ರ ವಿಚಾರ ಶಕ್ತಿಯನ್ನಿತ್ತು ಅದರೊಟ್ಟಿಗೆ ಒಂದಷ್ಟು ಅಹಂಕಾರವನ್ನೂ ಇತ್ತು ಮನುಷ್ಯನ ಮನಸ್ಸನ್ನು ಕಲುಷಿತಗೊಳ್ಳುವಂತೆ ಮಾಡಿದ್ದಾನೆ ಆ ಪರಮಾತ್ಮ, ನಮಗೆ ಅರ್ಥವಾಗದ ವಿಧಿ ನಮಗಾಗಿ ಏನನ್ನೋ ನಿಗದಿಪಡಿಸಿದೆ. ನಾವು





ಏನನ್ನೋ ಬಯಸುತ್ತೇವೆ, ಆದರೆ ಆ ವಿಧಿ ಮತ್ತೇನನ್ನೋ ಕೊಡುತ್ತದೆ. ಹಾಗೆ ನಾವು ಬಯಸುವ ಮತ್ತು ನಾವು ಪಡೆಯುವ ವಸ್ತು ವಿಷಯ ಮತ್ತು ವ್ಯಕ್ತಿಗಳ ವ್ಯತ್ಯಾಸವೇ ಬದುಕಿನಲ್ಲಿ ನಾವು ಪರದಾಡುವುದಕ್ಕೆ ಕಾರಣ.

ನಾವು ಬಯಸುವುದನ್ನೇ ಅವನು ಏಕೆ ಕೊಡುವುದಿಲ್ಲ ಅಥವಾ ಅವನು ಕೊಡುವುದನ್ನೇ ನಾವು ಏಕೆ ಬಯಸುವುದಿಲ್ಲ ಎಂದು ಆಲೋಚಿಸಿದರೆ ನಮಗೆ ಅರ್ಥವೇ ಆಗುವುದಿಲ್ಲ. ಇದನ್ನೇ ವಿಧಿಯಾಟವೆನ್ನುತ್ತಾರೆ ನಮ್ಮ ದಾರ್ಶನಿಕರು. "ನಾನು ಇದನ್ನು ಮಾಡಿದ್ದೇನೆ. ಅದಕ್ಕೆ ಇಂತಹ ಫಲವೇ ಬರಬೇಕು" ಎಂದು ಯೋಚಿಸುವುದೇ ತಪ್ಪು. ಏಕೆಂದರೆ ವಿಧಿಯ ನಿರ್ಣಯವೇ ಬೇರೆಯಾಗಿರುವುದರಿಂದ, ಯಾವುದನ್ನೂ ಮಾಡಿ ಅದರಿಂದ ಏನನ್ನೋ ಬಯಸಿ ಅದು ಸಿಗದೇ ಬೇರೆ ಏನೋ ಸಿಕ್ಕಾಗ ಅದನ್ನು ಒಪ್ಪಿಕೊಳ್ಳಲಾಗದೆ, ಸ್ವೀಕರಿಸಲೂ ಆಗದೆ ನಾವು ಪರದಾಡುತ್ತೇವೆ. ಈ ಬಯಕೆ ಮತ್ತು ಗಳಿಕೆಗಳ ನಡುವಿನ ಸಮನ್ವಯದ ಕೊರತೆಯೇ ಬದುಕಿನ ಜಂಜಾಟಕ್ಕೆ ಕಾರಣ. ಹಾಗೆ ನಾವು ಬಯಸಿದ್ದೆಲ್ಲಾ ಸಿಕ್ಕಿಬಿಟ್ಟರೆ ನಮ್ಮನ್ನು ಹಿಡಿಯುವರಾರು?

ಇದಕ್ಕೆ ಮದ್ದೇ ಇಲ್ಲವೇ? ಎಂದರೆ, ಬಹುಶಃ ಇದೆ. ಶುದ್ಧ ಮನಸ್ಸಿನಿಂದ ಕೆಲಸ ಮಾಡುವುದು. ಬಂದ ಪ್ರತಿಫಲವನ್ನು ನಿರ್ವಿಕಾರವಾಗಿ ಸ್ವೀಕರಿಸಿ ತೃಪ್ತಿಪಡುವುದೇ ಇದಕ್ಕೆ ಮದ್ದು. ಹೇಳುವುದು ಸುಲಭ, ಪಾಲಿಸುವುದು ಕಷ್ಟ. ಆದರೆ ಅಸಾಧ್ಯವಲ್ಲ. ವಾಚಕರೆ ನಾವು ಅಂತಹ ಸ್ಥಿತಿಯನ್ನು ಸಾಧಿಸಲಾದರೆ ನಾವೇ ಧನ್ಯರು.

**ಮುಕ್ತಕ-370**

**ಸ್ವಾತಿ ಮಳೆಹನಿ ಬೀಳ್ವ, ಶುಕ್ತಿ ಬಾಯ್ದೆರೆದೇಳ್ವ।**
**ಕೌತುಕದ ಸಮಯಯೋಗದೆ ಮೌಕ್ತಿಕ ಫಲ ॥**
**ಪ್ರೀತಿ ಸುಖ ಸತ್ಯದರ್ಶನ ಶಾಂತಿಗಳ ಹುಟ್ಟುಮ್।**
**ಆ ತೆರದೆ ಯೋಗದಿನೆ – ಮಂಕುತಿಮ್ಮ॥**

ಬಾಯ್ದೆರೆದೇಳ್ವ =ಬಾಯಿ+ತೆರೆದು+ಏಳ್ವ

ಶುಕ್ತಿ=ಸಮುದ್ರದ ಚಿಪ್ಪು, ಕೌತುಕದ=ಆಶ್ಚರ್ಯದ, ಮೌಕ್ತಿಕ=ಮುತ್ತು ನವರತ್ನಗಳಲ್ಲಿ ಒಂದು,

ತೆರದೆ=ರೀತಿಯ, ಯೋಗದಿನೆ=ಯೋಗದಿಂದಲೇ.

ಸ್ವಾತಿ ನಕ್ಷತ್ರದ ದಿನ ಬೀಳುವ ಮಳೆ ಬೀಳುವಾಗ, ಸಮುದ್ರದಲ್ಲಿನ ಚಿಪ್ಪು ಬಾಯ ತೆರೆದು, ಒಂದು ಮಳೆ ಹನಿಗೆ ಕಾಯುತ್ತದಂತೆ. ಹಾಗೆ ಅದರೊಳಗೆ ಬಿದ್ದ ಸ್ವಾತಿಮಳೆಯ ಒಂದು ಹನಿ ಆ ಚಿಪ್ಪಿನ ಗರ್ಭದಲ್ಲಿ ಹೊಕ್ಕಾಗ 'ಮುತ್ತು' ಆಗುತ್ತದಂತೆ. ಇದು ಒಂದು ಸು-ಸಂಯೋಗ, ಆ ರೀತಿಯ ಯೋಗದಿಂದಲೇ ಪ್ರೀತಿ, ಸುಖ, ಶಾಂತಿ ಮತ್ತು ಸತ್ಯದ ದರ್ಶನವಾಗುತ್ತದೆ, ಎಂದು ಯೋಗ ಮತ್ತು ಸಂಯೋಗಗಳ ವಿಚಾರವನ್ನು ಪ್ರಸ್ತಾಪಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತದಲ್ಲಿ.

ಸ್ವಾತಿ ನಕ್ಷತ್ರದಲ್ಲಿ ಮಳೆ ಬೀಳಬೇಕು, ಆ ಸಮಯಕ್ಕೆ ಆ ಸಮುದ್ರದ ಚಿಪ್ಪು ಬಾಯಿತೆರೆದು ಕುಳಿತಿರಬೇಕು ಮತ್ತು ಒಂದು ಹನಿ ಅದರ ಬಾಯೊಳಗೆ ಬೀಳಬೇಕು. ಅದನ್ನು ಯಾರೂ ಮಾಡಲಿಕ್ಕಾಗುವುದಿಲ್ಲ. ತಾನೇ ತಾನಾಗಿ ಆಗಬೇಕು. ಹಾಗೆ ಸಂಯೋಗದಿಂದ ಬಿದ್ದ ಹನಿ ಮುತ್ತಾಗುತ್ತದೆ. ಅಂತಹ ಮುತ್ತನ್ನು 'ಮೌಕ್ತಿಕ'ವೆನ್ನುತ್ತಾರೆ ಮತ್ತು ಅದನ್ನು ನವರತ್ನಗಳಲ್ಲಿ ಒಂದೆಂದು ಪರಿಗಣಿಸಲಾಗುತ್ತದೆ. ಅದು ಅಮೂಲ್ಯ.

ಅದೇ ರೀತಿ ನಮ್ಮ ಜೀವನದಲ್ಲಿ ನಮಗೆ ಸ್ವಾರ್ಥರಹಿತವಾಗಿ ಶುದ್ಧ ಮನಸ್ಸಿನಿಂದ ಪ್ರೀತಿಸುವ ಜನ, ಕ್ಷಣಿಕವಾದ ಇಂದ್ರಿಯ ಸಂಬಂಧದಿಂದ ಬರುವ ಸುಖವಲ್ಲದೆ, ತೃಪ್ತಿಯಿಂದ ಸಿಗುವ ಶುದ್ಧ ಸುಖ, ಅರಿಷಡ್ವರ್ಗಗಳ ಲೇಪವಿಲ್ಲದ ಶಾಂತ ಭಾವ ಮತ್ತು ಭಗವದ್ ಸೃಷ್ಟಿಯಲ್ಲಿನ ಪ್ರತೀ ವಸ್ತುವಿನ ಸತ್ಯದರ್ಶನ, ಇವೆಲ್ಲವೂ ಅತ್ಯಮೂಲ್ಯವಾದವು. ಅವು ನಮಗೆ ಸಿಗಬೇಕಾದರೆ ಯೋಗವಿರಬೇಕು. ಕೊಡುವ ಆ ಪರಮಾತ್ಮನ ಮತ್ತು ಪಡೆಯುವ ನಮ್ಮ ಮನಸ್ಸು ಒಂದಾಗಬೇಕು.

ಹಾಗೆ ಸಿಗಬೇಕಾದರೆ ನಾವು ಸಮುದ್ರದ ಚಿಪ್ಪಿನಂತೆ ಯೋಗ್ಯರಾಗಬೇಕು. ಸಾಧನೆಯಿಂದ ಯೋಗ್ಯತೆಯನ್ನು ಬೆಳೆಸಿಕೊಂಡರೆ ನಮಗೂ ಯೋಗವು ಒದಗಿ ಬಂದು ನಾವು ಬಯಸಿದ್ದು ಸಿಗುತ್ತದೆ. ಸುಯೋಗದಿಂದ ಬಯಸಿದ್ದು ಲಭ್ಯವಾಗುತ್ತದೆ. ಸ್ವಾರ್ಥ ಮತ್ತು ಅಹಂಕಾರವನ್ನು ತ್ಯಜಿಸುವ ಮೂಲಕ ಅಂತಹ ಯೋಗ್ಯತೆಯನ್ನು ಪಡೆದುಕೊಳ್ಳುವ ಪ್ರಯತ್ನವನ್ನು ನಾವು ಮಾಡಬೇಕು. ಯೋಗ್ಯತೆ ಇದ್ದರೆ ಯೋಗ ಬರುತ್ತದೆ.

**ಮುಕ್ತಕ - 371** **ಬೇಕು ಬೇಕದು ಬೇಕು ಬೇಕಿದೆನಗಿನ್ನೊಂದು ।**
**ಬೇಕುನುತ ಬೊಬ್ಬಿಡುತಲಿಹ ಘಟವನಿದನು ॥**

**ಏಕೆಂದು ರಚಿಸಿದನೊ ಬೊಮ್ಮನೀ ಬೇಕು ಜಪ।**

**ಸಾಕೆನಿಪುದೆಂದಿಗೆಲೊ - ಮಂಕುತಿಮ್ಮ॥**

ಬೇಕದು=ಬೇಕು+ಅದು, ಬೇಕಿದೆನಗಿನ್ನೊಂದು=ಬೇಕಿದೆ+ಎನಗೆ+ಇನ್ನೊಂದು, ಬೇಕುನುತ=ಬೇಕು+ಎನುತ,
ಬೊಬ್ಬಿಡುತಲಿಹ=ಬೊಬ್ಬೆ+ಇಡುತಲಿ+ಇಹ, ಘಟವನಿದನು=ಘಟವನು+ಇದನು,
ಬೊಮ್ಮನೀ=ಬೊಮ್ಮನು+ಈ, ಸಾಕೆನಿಪುದೆಂದಿಗೆಲೊ=ಸಾಕು+ಎನಿಪುದು+ಎಂದಿಗೆ+ಎಲೋ.
ಘಟವನು=ದೇಹವೆಂಬ ಈ ಮಡಿಕೆಯನು, ಬೊಮ್ಮನು=ಪರಮಾತ್ಮನು.

ಅದು ಬೇಕು, ಇದು ಬೇಕು, ಮತ್ತೊಂದು ಬೇಕು ಎಂದು ಸದಾಕಾಲ ಪರದಾಡುವಂತಹ ಈ ದೇಹವೆಂಬ ಮಡಕೆಯನ್ನು ಏಕೆ ಸೃಷ್ಟಿಸಿದನೋ ಆ ಪರಮಾತ್ಮ? ನಮ್ಮ ಬದುಕಿನಲ್ಲಿ ಈ ' ಬೇಕು' ಗಳ ಜಪ ಎಂದಿಗೆ ಕೊನೆಯಾಗುತ್ತದೋ, ಎಂದು ಜಗತ್ತಿನ ಮನುಷ್ಯರ ಬದುಕಿನಲ್ಲಿ ಆಸೆಗಳ ಪರಿಯನ್ನು ವಿಶ್ಲೇಷಣೆ ಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

(206)

| ಕಗ್ಗ ರಸಧಾರೆ-2 | ಮನವ ತೊರೆದಿರಲಹುದೇ 369-373 |
|---|---|

ನಮಗೆ ಬದುಕಿನಲ್ಲಿ ಈ ಬೇಕುಗಳ ಸರಮಾಲೆ ನಿಲ್ಲುವುದೇ ಇಲ್ಲ. ಹನುಮಂತನ ಬಾಲದಂತೆ ಬೆಳೆಯುತ್ತಲೇ ಇರುತ್ತದೆ. ನಮಗೆ ನಮ್ಮ ಬೇಕುಗಳು ಎಷ್ಟು ಸೂಕ್ತವೋ, ಅವಶ್ಯವೋ ಅನವಶ್ಯವೋ ಎಂಬುದರ ಪರಿವೆ, ವಿವೇಚನೆ ಇಲ್ಲದೆಯೇ ನಮ್ಮ ಮನಸ್ಸುಗಳಲ್ಲಿ ಈ ಬೇಕುಗಳು ಬುಗ್ಗೆ ಬುಗ್ಗೆಯಾಗಿ ಉದ್ಭವವಾಗುತ್ತವೆ. ಮನಸ್ಸು ಎಲ್ಲೆಲ್ಲಿ

ಹರಿಯುತ್ತದೋ, ಎಲ್ಲ ಕಡೆಯಿಂದಲೂ ಈ ಬೇಕುಗಳ ಮಹಾಪೂರ ನಿರಂತರವಾಗಿ ಹರಿದು ಬರುತ್ತಿರುತ್ತಲೇ ಇರುತ್ತದೆ. ಏಕೆ ಈ ಪರಮಾತ್ಮ ನಮ್ಮನ್ನು ಹೀಗೆ ಸೃಷ್ಟಿಸಿದ್ದಾನೆ ಮತ್ತು ಈ ಬೇಕು ಬೇಕೆನ್ನುವ ಜಪವನ್ನು ನಿಲ್ಲಿಸುವುದು ಎಂದಿಗೋ ಎನ್ನುವುದೇ ಈ ಮುಕ್ತಕದ ಮುಖ್ಯ ಪ್ರಶ್ನೆ.

ವಾಚಕರೆ, ನಮ್ಮ ಆಸೆಗಳ ಮತ್ತು ಬೇಕುಗಳ ಪ್ರವಾಹವನ್ನು ನಿಲ್ಲಿಸಲು, ಮೊದಲು ನಾವು ಮಾನಸಿಕವಾಗಿ ಶಾಂತರಾಗಬೇಕು. ನಮಗೆ ಏನು ಸೂಕ್ತ ಎನ್ನುವುದನ್ನು ಆ ಶಾಂತತೆಯಲ್ಲಿ ಅಲೋಚಿಸಬೇಕು. ನಮ್ಮ ಪ್ರತೀ ಕ್ರಿಯೆಯನ್ನು ನಾವೇ ಪರೀಕ್ಷಿಸಿಕೊಳ್ಳಬೇಕು. ನಮಗೆ ಸೂಕ್ತವಲ್ಲದ ಆಸೆಗಳಿಂದ ದೂರಾಗಬೇಕು.

ಇದೊಂದು ಸಾಧನೆ. ಇದನ್ನು ಸಾಧಿಸಬೇಕಾದರೆ ಬಹಳ ಕಷ್ಟ ಪಡಬೇಕು. ಆಗ ನಮ್ಮ ಮನಸ್ಸಿನಲ್ಲಿ ಏಳುವ ಈ ಬೇಕುಗಳ ಬುಗ್ಗೆಯನ್ನು ಶಮನ ಮಾಡಬಹುದು ಮತ್ತು ಬೇಡದ ಆಸೆಗಳು ಮನಸ್ಸಿನಲ್ಲಿ ಏಳದ ಹಾಗೆ ನೋಡಿಕೊಳ್ಳಬಹುದು. ಹಾಗೆ ನಾವು ಮಾಡಲಾದರೆ, ಸುಖದಿಂದ, ಆನಂದದಿಂದ ಇರಬಹುದು. ನಾವೆಲ್ಲಾ ಅಂತಹ ಪ್ರಯತ್ನವನ್ನು ಮಾಡಬೇಕು.

**ಮುಕ್ತಕ - 372**

**ವನದಿ ನಿರ್ಜನದಿ ಮೌನದಿ ತಪವನೆಸಗುವನ।**
**ನೆನಪಿನಲಿ ಪಿಂತಿನನುಭವವುಳಿಯದೇನು॥**
**ಇನಿನೋಟ ಸವಿಯೂಟ ಕಿನಿಸು ಕರುಬುಗಳಾಟ।**
**ಕನಲುತಿಹುವಾಳದಲಿ - ಮಂಕುತಿಮ್ಮ॥**

ತಪವನೆಸಗುವನ=ತಪವನು+ಎಸಗುವನ,
ಪಿಂತಿನನುಭವವುಳಿಯದೇನು=ಪಿಂತಿನ+ಅನುಭವವು+ಉಳಿಯದೇನು, ಕರುಬುಗಳಾಟ=ಕರುಬುಗಳ+ಆಟ,
ಕನಲುತಿಹುವಾಳದಲಿ=ಕನಲುತಿಹವು+ಆಳದಲಿ,
ಪಿಂತಿನ=ಹಳೆಯ, ಇನಿನೋಟ-ಪ್ರೀತಿಯ ನೋಟ, ಸವಿಯೂಟ=ಸವಿಯಾದ ಊಟ, ಕಿನಿಸು=ಕೋಪ. ಕರುಬು=ಸಂಕಟಪಡು, ಕನಲು=ಕೊರಗು.

ನಿರ್ಜನವಾದ ಕಾಡಿನಲ್ಲಿ ಮೌನವಾಗಿ ತಪಸ್ಸನ್ನು ಮಾಡುವವನ ನೆನಪಿನಲ್ಲಿ, ಅವನ ಜೀವನದ ಹಳೆಯ ನೆನಪುಗಳು ಇರುವುದಿಲ್ಲವೇನು? ಆ ನೆನಪಿನಲ್ಲಿ ಅವನು ಅನುಭವಿಸಿದ ಸುಖ, ಕೋಪ, ದ್ವೇಷ ನೋವು ಸಂಕಟಗಳ

ಹಳೆಯ ಅನುಭವಗಳು ಮನಸಿನಂತರಾಳದಲ್ಲಿ ಇದ್ದೇ ಇರುತ್ತದೆ ಎಂದು ಉಲ್ಲೇಖಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

(207)

| ಮನವ ತೊರೆದಿರಲಹುದೇ 369-373 | ಕಗ್ಗ ರಸಧಾರೆ-2 |
|---|---|

ನಮ್ಮ ಮನಸ್ಸಿನಲ್ಲಿ ಹಳೆಯ ನೆನಪುಗಳನ್ನು ಸಂಪೂರ್ಣವಾಗಿ ಅಳಿಸಿಹಾಕಲು ಸಾಧ್ಯವೇ ಇಲ್ಲ. ಎಲ್ಲ ನೆನಪುಗಳೂ ಉಳಿಯದಿದ್ದರೂ ನಾವು ಆ ಘಟನೆಗಳು ನಡೆದ ಕಾಲಕ್ಕೆ ಎಷ್ಟು ತೀವ್ರವಾಗಿ ಆ ಘಟನೆಯ ವಿಷಯವನ್ನು ನಮ್ಮ ಮನಸ್ಸಿನಲ್ಲಿ ಮುದ್ರಿಸಿಕೊಳ್ಳುತ್ತೇವೋ, ಅಷ್ಟೇ ದೀರ್ಘಕಾಲ ನಮ್ಮ ಮನಸ್ಸಿನ ತಳದಲ್ಲಿ ಅದು ಉಳಿಯುತ್ತದೆ. ಹಾಗಾಗಿಯೇ ಎಲ್ಲವೂ ಉಳಿಯುವುದಿಲ್ಲ. ಹಾಗೆ ಉಳಿದುಬಿಟ್ಟರೆ ನಮಗೆ ಹುಚ್ಚು ಹಿಡಿದುಬಿಡುತ್ತದೆ. ಹಾಗಾಗಿ ಒಂದು ರೀತಿಯಲ್ಲಿ ಮರೆವು ಒಂದು ವರವೇ ಸರಿ.

ಆದರೆ ಬಹಳಷ್ಟು ನೆನಪುಗಳು ನಮ್ಮ ಮನಸ್ಸಿನಲ್ಲಿ ಉಳಿದಿರುತ್ತದೆ. ಯಾರೋ ತೋರಿದ ಪ್ರೀತಿ ಪ್ರೇಮ, ಯಾರೋ ನೀಡಿದ ಸವಿಯಾದ ಅನುಭವಗಳು, ಯಾರೋ ನಮ್ಮ ಮೇಲೆ ತೋರಿದ ಕೋಪ, ದ್ವೇಷ ಅಸೂಯೆ ಅದರಿಂದ ನಮಗಾದ ತೊಂದರೆ, ನೋವು, ಸಂಕಟ, ಹೀಗೆ ಬೇರೆ ಬೇರೆ ಸಮಯಗಳಲ್ಲಿ ಬೇರೆ ಬೇರೆ ವ್ಯಕ್ತಿಗಳಿಂದಾದ ಸಾವಿರಾರು ಅನುಭವಗಳು ನೆನಪಿನ ರೂಪದಲ್ಲಿ ನಮ್ಮ ಮನಸ್ಸಿನ ಆಳದಲ್ಲಿ ಕುಳಿತಿರುತ್ತದೆ ಅಲ್ಲವೆ.

ಆ ನೆನಪುಗಳಿಂದ ಒಳಿತೂ ಉಂಟು ಮತ್ತು ಕೆಡುಕೂ ಉಂಟು, ಒಳಿತು ಹೇಗೆಂದರೆ, ಹಿಂದೆ ನಾವು ಮಾಡಿದ ತಪ್ಪುಗಳನ್ನು ಮತ್ತೆ ಮಾಡದಂತೆ ನಮ್ಮನ್ನು ತಿದ್ದಿಕೊಳ್ಳಬಹುದು. ಗತಂ ನ ಶೋಚಿತವ್ಯಂ" ಎಂದು ಹೇಳಲ್ಪಟ್ಟಿದೆ ಹಾಗಾಗಿ ಯಾವುದು ಬದಲಾಗುವುದಿಲ್ಲವೋ ಅದರಿಂದ ಬೇರೇನೂ ಪ್ರಯೋಜನವಿಲ್ಲ. ಕೆಡುಕು ಹೇಗೆಂದರೆ ಈ ನೆನಪುಗಳ ತೀವ್ರತೆ ಅಧಿಕವಾದರೆ ಅವು ಜೀವನದಲ್ಲಿ ಮುಂದಿನ ಹೆಜ್ಜೆ ಹಾಕಲು ತಡೆಯುವ ಕಡಿವಾಣದಂತೆ ಇರುತ್ತದೆ. ಭೂತದ ನೆನಪು ಮತ್ತು ವರ್ತಮಾನದ ವಿಷಯಗಳ ಮಧ್ಯೆ ಸಮನ್ವಯವನ್ನು ಕಾಪಾಡಿಕೊಳ್ಳುವುದೇ ಬುದ್ಧಿವಂತಿಕೆ. ನಾವು ನಮ್ಮ ನೆನಪುಗಳ ಸಮನ್ವಯಕ್ಕೆ ಪ್ರಯತ್ನಿಸಬೇಕು.

**ಮುಕ್ತಕ - 373** **ಮನೆಯ ತೊರೆದೋಡಲೇಂ? ವನಗುಹೆಯ ಸಾರಲೇಂ? |**

**ತನುವನುಗ್ರವ್ರತಗಳಿಂದೆ ದಂಡಿಸಲೇಂ ? ||**

**ಬಿನದಿಗಳನರಸಿ ನೀನೂರೂರೊಳಲೆದೊಡೇಂ? |**

**ಮನವ ತೊರೆದಿರಬಹುದೆ - ಮಂಕುತಿಮ್ಮ ? ||**

ತೊರೆದೋಡಲೇಂ=ತೊರೆದು+ಓಡಲೇಂ, ತನುವನುಗ್ರವ್ರತಗಳಿಂದೆ=ತನುವನು+ಉಗ್ರ+ವ್ರತಗಳಿಂದೆ,

ದಂಡಿಸಲೇಂ=ದಂಡಿಸಲು+ಏಂ, ಬಿನದಿಗಳನರಸಿ=ಬಿನದಿಗಳನು+ಅರಸಿ,

ನೀನೂರೂರೊಳಲೆದೊಡೇಂ=ನೀನು+ಊರು+ಊರೊಳು+ಅಲೆದೊಡೆ+ಏಂ,

ತೊರೆದಿರಲಹುದೆ=ತೊರೆದು+ಇರಲು+ಅಹುದೆ.

ಬಿನದಿಗಳನು=ಸಂತೋಷಗಳನ್ನು, ಅರಸಿ=ಹುಡುಕಿ,

ಮನೆಯ ತೊರೆದು ಹೋದರೇನು ಅಥವಾ ತಪಸ್ಸಿಗೆಂದು ಕಾಡಿನ ಗುಹೆಗಳಲ್ಲಿ ಸೇರಿದರೇನು ಅಥವಾ ಹಠಯೋಗ ಮುಂತಾದ ಕಠಿಣ ವ್ರತಗಳಿಂದ ದೇಹವನ್ನು ದಂಡಿಸಿದರೇನು ಅಥವಾ ಸುಖವನ್ನು ಹುಡುಕುತ್ತಾ





ಒಂದು ಊರಿಂದ ಬೇರೆ ಬೇರೆ ಊರಿಗೆ ಹೋದರೇನು, ನಮ್ಮ ಮನಸ್ಸನ್ನು ತೊರೆಯಲಾಗುವುದೇ? ಎಂದು ನಮ್ಮ ಮತ್ತು ಮನಸ್ಸಿನ ಅವಿನಾಭಾವ ಸಂಬಂಧವನ್ನು ಪ್ರಸ್ತಾಪಿಸುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

"ಕಾಶಿಗ್ ಹೋಗಲುಬಹುದು, ದೇಶ ತಿರುಗಲುಬಹುದು, ಆಸೆ ಸುಟ್ಟಂತಿರಬಹುದು, ಹರಿದಾಡುವಂತಾ ಮನವ ನಿಲಿಸುವುದು ಬಲು ಕಷ್ಟ" ಎಂಬುದು ದಾಸರ ಉಕ್ತಿ, ಮನುಷ್ಯನ ಸ್ವಭಾವ ಹೇಗಿದೆ ಎಂದರೆ, ತಾನು ಇರುವ ಸ್ಥಿತಿಯಲ್ಲಿ ಅವನಿಗೆ ಸುಖ ಸಿಗುವುದೇ ಇಲ್ಲ. ಸದಾ ಇರುವುದನ್ನು ಬಿಟ್ಟು ಮತ್ತೆಲ್ಲೋ ಸುಖವನ್ನೋ, ಮಾನಸಿಕ ನೆಮ್ಮದಿಯನ್ನೋ ಹುಡುಕುತ್ತಲೇ ಇರುತ್ತಾನೆ. ಆ ರೀತಿಯ ಅರಸುವಿಕೆಯಲ್ಲಿ ಅವನು ಮನೆಯನ್ನು ಬಿಟ್ಟು ಎಲ್ಲ ಸಂಬಂಧ ಸಂಪರ್ಕಗಳನ್ನೂ ಕಡಿದುಕೊಂಡು ಹೋಗಬಹುದು, ತಪಸ್ಸು ಮಾಡಲು ಪ್ರಯತ್ನಮಾಡಬಹುದು, ದೇಹ ದಂಡನೆಯಿಂದ ಕಠಿಣವಾದ ವ್ರತಗಳನ್ನು ಮಾಡಬಹುದು ಅಥವಾ ಒಂದೇ ಕಡೆ ನಿಲ್ಲದೆ ಊರಿಂದ ಊರಿಗೆ ಆ ಸುಖದ ಮತ್ತು ಆನಂದವನ್ನು ಹುಡುಕುತ್ತಾ ಅಲೆಯಬಹುದು.

ಎಲ್ಲೇ ಹೋದರೂ, ಮನುಷ್ಯನ ಮನಸನ್ನು ಬಿಟ್ಟು ಬರಲು ಸಾಧ್ಯವೇ? ಇಲ್ಲವೇ ಇಲ್ಲ. ಅವನ ಮನಸ್ಸು ಮತ್ತು ಅವನ ನೆನಪುಗಳೆಲ್ಲ ಅವನನ್ನು ನೆರಳಂತೆ ಹಿಂಬಾಲಿಸುತ್ತವೆ. ಎಲ್ಲಿ ಹೋದರೂ ಆ ನೆನಪುಗಳು ಅವನನ್ನು ಕಾಡುತ್ತಲೇ ಇರುತ್ತವೆ ಮತ್ತು ಅವನ ಮೇಲೆ ತನ್ನ ಪ್ರಭಾವ ಬೀರುತ್ತಲೇ ಇರುತ್ತದೆ. ಇದರಿಂದ ಮನುಷ್ಯನಿಗೆ ಮುಕ್ತಿಯೇ ಇಲ್ಲ. ಇದೇ ಈ ಮುಕ್ತಕದ ಹೂರಣ.

ಆದ್ದರಿಂದ ಇರುವ ಸ್ಥಳದಲ್ಲಿ ಇರುವ ವಸ್ತು ಮತ್ತು ವಿಷಯಗಳಲ್ಲಿಯೇ ಸಂತೋಷವನ್ನು ಕಂಡುಕೊಳ್ಳುವ, ಶಾಂತಿಯನ್ನು ಪಡೆಯುವ ಮನೋಭಾವವನ್ನು ಬೆಳೆಸಿಕೊಂಡರೆ ಎಲ್ಲಿಗೆ ಹೋದರೂ ಈ ನೆನಪುಗಳ ಪ್ರಭಾವದಿಂದ ತಪ್ಪಿಸಿಕೊಳ್ಳಬಹುದು. ನಮ್ಮ ನಿರ್ಲಿಪ್ತತೆಯ ತೀವ್ರತೆ ಎಷ್ಟು ಹೆಚ್ಚಾದರೆ ನೆನಪುಗಳಿಂದಾಗುವ ನೋವು ಅಷ್ಟು ಕಡಿಮೆಯಾಗುತ್ತದೆ. ಪ್ರಯತ್ನಪಟ್ಟರೆ ಖಂಡಿತ ಇದನ್ನು ಸಾಧಿಸಬಹುದು.

# ಮನಸ್ಸಿನ ಹವ 374-378

**ಮುಕ್ತಕ - 374**

**ಈ ಜಗದ ಗಂಧ ಪರಿಪರಿ ಹಸಿವ ಕೆಣಕುತಿರೆ।**
**ಭೋಜನವ ನೀಡೆನೆನೆ ಮನ ಸುಮ್ಮನಿಹುದೆ॥**
**ಸಾಜಗಳ ಕೊಲ್ಲೆನುವ ಹಠಯೋಗಕಿಂತ ಸರಿ।**
**ರಾಜಯೋಗದುಪಾಯ - ಮಂಕುತಿಮ್ಮ॥**

ಕೆಣಕುತಿರೆ=ಕೆಣಕುತ+ಇರೆ, ನೀಡೆನೆನೆ=ನೀಡೆನು+ಎನೆ, ಕೊಲ್ಲೆನುವ=ಕೊಲ್ಲು+ಎನುವ, ರಾಜಯೋಗದುಪಾಯ=ರಾಜಯೋಗದ+ಉಪಾಯ.

ಜಗದ ಗಂಧ=ಭುವಿಯ ವಾಸನೆ ಅಥವಾ ಸೆಳೆತ, ಸಾಜಗಳ=ಸಹಜತೆಯ.

(209)

ಮನಸ್ಸಿನ ಹವ 374-378 ಕಗ್ಗ ರಸಧಾರೆ-2

ಈ ಜಗತ್ತಿನ ಸೆಳೆತಗಳು ನಿನ್ನ ದೈಹಿಕ ಮತ್ತು ಮಾನಸಿಕ ಹಸಿವೆಗಳನ್ನು ಕೆಣಕುತ್ತಾ ಇರುವಾಗ, ಅವುಗಳ ತಣಿಸದೆ ನೀವು ಅವುಗಳಿಗೆ ಆಹಾರ ಕೊಡಲು ನಿರಾಕರಿಸಿದರೆ, ನಿನ್ನ ಮನಸು ಸುಮ್ಮನಾದೀತೆ? ಸಹಜವಾದ ಆಸೆ ಆಕಾಂಕ್ಷೆಗಳ ತುಳಿದು ಹಠ ಯೋಗವನ್ನು ಸಾಧಿಸುವುದಕ್ಕಿಂತ ಇತಿ ಮಿತಿಯ ರಾಜಯೋಗವೇ ಒಳಿತು ಎಂದು ಉಲ್ಲೇಖಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಜಗತ್ತಿನಲ್ಲಿ ಜನಿಸಿದ ಎಲ್ಲ ಪ್ರಾಣಿಗಳಿಗೂ ಆಸೆಯಿರುತ್ತದೆ. ಅನ್ಯ ಪ್ರಾಣಿಗಳ ಆಸೆಗಳು ಕೇವಲ ತಮ್ಮನ್ನು ತಾವು ಕಾಪಾಡುವ, ತಮ್ಮ ಆಹಾರ ಹುಡುಕುವ ಮತ್ತು ತಮ್ಮ ವಂಶವನ್ನು ಬೆಳೆಸುವ ವಿಷಯಗಳಿಗೆ ಸೀಮಿತವಾಗಿರುತ್ತವೆ. ಆದರೆ ಮನುಷ್ಯನ ಆಸೆಗಳಿಗೆ ಯಾವ ಮಿತಿಯೂ ಇಲ್ಲ. ಅವನ ವಿಕಸಿತ ಮನಸ್ಸು ಬುದ್ಧಿಗಳು ಇವನನ್ನು ಅತಿ ಆಸೆ ಪಡುವಂತೆ ಮಾಡುತ್ತದೆ.

ಇವನು ವಿಕಸಿತ ಪ್ರಾಣಿಯಾದ್ದರಿಂದ, ಇವನು ತನಗೆ ಸರಿ ಯಾವುದು, ತಪ್ಪು ಯಾವುದು ಎಂದು ಅರಿತುಕೊಳ್ಳುವ ವಿವೇಚನೆಯನ್ನೂ ಪಡೆದಿದ್ದಾನೆ. ಹಲವರು ಛೇ! ಈ ಮನಸ್ಸು ಹೋದಂತೆಲ್ಲ ಬಿಡಬಾರದು, ಈ ಮನಸ್ಸು ಕೇಳಿದ್ದೆಲ್ಲ ಕೊಡಬಾರದು, ಎಂದು ಮನಸ್ಸನ್ನು ನಿಗ್ರಹಿಸಿ ಹಠಯೋಗವನ್ನು ಅನುಸರಿಸಿ ಮನಸ್ಸು ಮತ್ತು ದೇಹವನ್ನು ದಂಡಿಸುತ್ತಾರೆ. ಹಾಗೆ ಮಾಡಿದರೆ ಮನದೊಳಗಿನ ಆಸೆಗಳ ಅದುಮಿ ಇಟ್ಟಂತೆ ಆಗುತ್ತದೆಯೇ ವಿನಃ, ಆಸೆ

ಇಲ್ಲದಂತೆ ಇರಲು ಸಾಧ್ಯವೇ ಇಲ್ಲ. ಆ ಆಸೆಗಳು ನಮ್ಮ ಹಠ ಯೋಗದ ಬಲ ಕಡಿಮೆಯಾದರೆ, ಎಂದಾದರೂ ಮತ್ತೆ ಬುಗ್ಗೆಯಂತೆ ಮೇಲೇಳುವ ಸಾಧ್ಯತೆ ಇದೆ. ಆದ್ದರಿಂದ ಹಠಯೋಗ ಸಲ್ಲ.

ಆದರೆ ಮನದಲ್ಲಿ ಸಹಜವಾಗಿ ಬರುವ ಆಸೆಗಳ ಸ್ವಭಾವವನ್ನು ಅರಿತು ನಮ್ಮ ಮಿತಿಗಳನ್ನೂ ಅರಿತು, ನಮಗೆ ಯಾವುದು ಹಿತವೋ ಅಂತಹ ಆಸೆಗಳನ್ನು ತೀರಿಸಿಕೊಳ್ಳುತ್ತಾ, ನಮಗೆ ಹಿತವಲ್ಲದ ಆಸೆಗಳನ್ನು ನಿವಾರಿಸಿಕೊಳ್ಳುತ್ತಾ ಬದುಕುವುದು ರಾಜಯೋಗ, ಅಂತಹ ಮಾರ್ಗದಲ್ಲಿ ನಡೆದರೆ ನಮಗೆ ಅವಶ್ಯಕವಾದ ಆಸೆಗಳೂ ತೀರುತ್ತವೆ, ಬೇಡದ ಆಸೆಗಳು ಹೋಗುತ್ತವೆ. ಹಾಗಾಗಿ ವಾಚಕರೆ ಸಹಜತೆಯಿಂದ ನಮ್ಮ ಇತಿ ಮಿತಿಗಳನ್ನು ಅರಿತು ವಿವೇಕದಿಂದ ಬಾಳಿದರೆ ಸುಖ ಎನ್ನುವುದೇ ಈ ಮುಕ್ತಕದ ಹೂರಣ.

**ಮುಕ್ತಕ - 375**

**ಮನವನಾಳ್ವುದು ಹಟದ ಮಗುವನಾಳುವ ನಯದೆ |**
**ಇನಿತಿನಿತು ಸವಿಯುಣಿಸುಸವಿಕಥೆಗಳಿಂದ ||**
**ಅನುಕೂಲಿಸದು ಬರಿಯ ಕೂಗು ಬಡಿತಗಳಿನದು |**
**ಇನಿತಿತ್ತು ಮರಸಿನಿತು - ಮಂಕುತಿಮ್ಮ ||**

ಮನವನಾಳ್ವುದು=ಮನವನು+ಆಳ್ವುದು, ಮಗುವನಾಳುವ=ಮಗುವನು+ಆಳುವ, ಇನಿತಿನಿತು=ಇನಿತು+ಇನಿತು, ಇನಿತಿತ್ತು=ಇನಿತು+ಇತ್ತು, ಮರಸಿನಿತು=ಮರಸಿ+ಇನಿತು.
ನಯದೆ=ನಯ ಮತ್ತು ಪ್ರೀತಿಯಿಂದ, ಸವಿಯುಣಿಸು=ರುಚಿಯಾದ ಆಹಾರ, ಸವಿಕಥೆ=ಒಳ್ಳೆಯ ಕಥೆಗಳು, ಅನುಕೂಲಿಸದು=ಪ್ರಯೋಜನಕ್ಕೆ ಬರದು, ಇನಿತು=ಸ್ವಲ್ಪ.



ಕೇವಲ ಕೂಗಾಟ ಬಡಿದಾಟಗಳಿಂದ ಅಲ್ಲದೆ, ಕೆಲವನ್ನು ಕೊಟ್ಟು ಮತ್ತೆ ಕೆಲವನ್ನು ಮರೆಸಿ, ಸ್ವಲ್ಪ ಸವಿಯಾದ ತಿನಿಸು ಮತ್ತು ಸೊಗಸಾದ ಕಥೆಗಳನ್ನು ಹೇಳಿ ಹಠಮಾಡುವ ಮಗುವನ್ನು ನಯ ವಿನಯದಿಂದ ಲಾಲಿಸಿ ಪಾಲಿಸುವಂತೆ, ಹಠಮಾರಿ ಮನಸ್ಸನ್ನೂ ಸಹ ಪಾಲಿಸಬೇಕು ಎನ್ನುವುದು ಮಾನ್ಯ ಗುಂಡಪ್ಪನವರ ಈ ಮುಕ್ತಕದ ಹೂರಣ.

ಒಂದು ಮಗು. ಬಹಳ ಹಠಮಾರಿ, ಹಿಡಿದ ರಚ್ಚೆ ಬಿಡದು. ಕಂಡ ಕಂಡದ್ದನ್ನು ಬೇಕೆನ್ನುತ್ತ ಹಠಮಾಡುತ್ತದೆ. ಅದರ ತಾಯಿ ಅದು ಕೇಳುವುದೆಲ್ಲ ಅದಕ್ಕೆ ಒಳ್ಳೆಯದಲ್ಲ ಎಂದು ಅರಿತು ಅದಕ್ಕೆ ಏನು ಬೇಕೋ ಅದನ್ನು ಕೊಡದೆ ಅದಕ್ಕೆ ಏನು ಹಿತವೊ ಅದನ್ನೇ ಸ್ವಲ್ಪ ಸ್ವಲ್ಪವಾಗಿ ಕೊಡುತ್ತಾ, ಹೆದರಿಸದೆ, ಹೊಡೆಯದೆ, ಬಡಿಯದೆ, ಅದಕ್ಕೆ ಇಷ್ಟವಾದ ಕಥೆಗಳನ್ನು ಹೇಳುತ್ತಾ, ಅದಕ್ಕೆ ಬೇರೆ ಏನನ್ನೋ ತೋರಿಸಿ, ಅದರ ಮನಸ್ಸನ್ನು ಬದಲಿಸುವ ಪ್ರಯತ್ನವನ್ನು ಮಾಡುತ್ತಾ, ಅದನ್ನು ಲಾಲಿಸಿ ಪಾಲಿಸುತ್ತಾಳಲ್ಲವೇ?

ನಮ್ಮ ಮನಸೂ ಅದೇ ರೀತಿ ಹಠ ಮಾಡುವ ಒಂದು ಮೊಂಡು ಮಗುವಿನಂತೆಯೇ ಅಲ್ಲವೇ? 'ದೃಷ್ಯಮಾಣೆ ಭವೇತ್ ಪ್ರೀತಿಃ' ಎಂದರೆ, ಕಂಡರೆ ಪಡೆಯುವ ಆಸೆಯಾಗುತ್ತದೆ ಎಂದು ಅರ್ಥ. ಹಾಗೆ ನಮಗೆ ಕಂಡದ್ದನ್ನೆಲ್ಲ ಪಡೆಯುವ ಆಸೆ. ಮನಸ್ಸು ಆಸೆ ಪಡುತ್ತದೆ. ನಮಗದನ್ನು ಪಡೆಯುವ ಯೋಗ್ಯತೆ ಇದೆಯೋ ಇಲ್ಲವೋ, ನಮಗದು ಹಿತವೋ ಅಲ್ಲವೋ, ನಮಗದು ಅವಶ್ಯವೋ ಅಲ್ಲವೋ ಎಂಬುದರ ವಿವೇಚನೆ ಇಲ್ಲದೆ ಆಸೆ ಪಡುತ್ತೇವೆ. ಹಾಗೆ ಮಾಡುವಾಗ ಹಣದ ಮತ್ತು ಮನದ ದುರುಪಯೋಗವಾಗುತ್ತದೆ. ಹಣವೂ ವ್ಯರ್ಥ, ಮನಸ್ಸಿಗೂ ಕಷ್ಟ. ಹಾಗಲ್ಲದೆ ಮನವನ್ನು ಸಂಪೂರ್ಣ ನಿಗ್ರಹಿಸಿ ಅದನ್ನು ಹೆದರಿಸಿ ಬೆದರಿಸಿ, ಆಸೆಗಳನ್ನು ಅದುಮಿಟ್ಟರೆ, ಮನಕ್ಕೆ ಮತ್ತು ಬುದ್ಧಿಗೆ ಹಿಂಸೆ, ಅದೂ ಸಹ ಖಂಡಿತ ಒಳ್ಳೆಯದಲ್ಲ.

ಇವೆರಡರ ಮಧ್ಯದ ದಾರಿಯನ್ನು ಅನುಸರಿಸಿ, ಮನವು ಅಪೇಕ್ಷೆಪಟ್ಟಿದ್ದರಲ್ಲಿ ಯಾವುದು ಮನಸ್ಸು ಬುದ್ಧಿ ದೇಹಗಳಿಗೆ ಹಿತವೊ ಅವುಗಳನ್ನು ಹಿತ ಮತ್ತು ಮಿತವಾಗಿ ಕೊಡುತ್ತಾ, ಹಿತವಾದ ವಿಷಯಗಳಲ್ಲಿ ಮನಸ್ಸು ಬುದ್ಧಿಗಳನ್ನು ತೊಡಗಿಸಿಕೊಂಡು, ಅಹಿತವಾದ ವಸ್ತುಗಳಿಂದ ಮನವನ್ನು ದೂರವಿರಿಸುವುದು (diversion) ಒಳ್ಳೆಯದು. ಕ್ರಮೇಣ ತನಗೆ ಹಿತವಲ್ಲದ ವಸ್ತುಗಳನ್ನು ಮನಸ್ಸು ಬಯಸದಂತಹ ಸ್ಥಿತಿಗೆ ತೆಗೆದುಕೊಂಡು ಹೋಗಬೇಕು. ಮನಸ್ಸು ಆಸೆ ಪಡುವುದು ಸಹಜ. ಸತ್ ಸಂಗ, ಶುದ್ಧ ವಾತಾವರಣ, ಸರಿಯಾದ ವಿದ್ಯೆ, ಶುದ್ಧವಾದ ಜೀವನ ಶೈಲಿಗಳಿಂದ ಮನಸ್ಸನ್ನು ನಮ್ಮ ಹಿಡಿತದಲ್ಲಿ ಇರಿಸಿಕೊಂಡರೆ, ಚಿತ್ರ ವಿಚಿತ್ರವಾದ ಬಯಕೆಗಳನ್ನು ಬಯಸುವ ಮನಸ್ಸಿನ ಪ್ರವೃತ್ತಿಯಿಂದ ನಮ್ಮನ್ನು ನಾವು ರಕ್ಷಿಸಿಕೊಳ್ಳಬಹುದು. ಹಾಗಾದರೆ ಹಿತ, ಇಲ್ಲದಿದ್ದರೆ ಇದ್ದೇ ಇದೆ, ಬದುಕಿನ ಜಂಜಾಟ.

**ಮುಕ್ತಕ - 376**

**ಅಂತಾನುಮಿಂತಾನುಮೆಂತೊ ನಿನಗಾದಂತೆ |**
**ಶಾಂತಿಯನೆ ನೀನರಸು ಮನ ಕೆರಳಿದಂದು ||**
**ಸಂತವಿಡುತೊಮ್ಮೆ ಶಿಕ್ಷಿಸುತೊಮ್ಮೆ ಶಿಶುವೆಂದು |**
**ಸ್ವಾಂತಮಂ ತಿದ್ದುತಿರು - ಮಂಕುತಿಮ್ಮ ||**

ಅಂತಾನುಮಿಂತಾನುಮೆಂತೊ=ಅಂತಾನುಂ+ಇಂತಾನುಂ+ಎಂತೋ, ನಿನಗಾದಂತೆ=ನಿನಗೆ+ಆದಂತೆ, ನೀನರಸು=ನೀನು+ಅರಸು, ಕೆರಳಿದಂದು=ಕೆರಳಿದ+ಅಂದು, ಸಂತವಿಡುತೊಮ್ಮೆ ಸಂತವ+ಇಡುತ+ಒಮ್ಮೆ, ಶಿಕ್ಷಿಸುತೊಮ್ಮೆ=ಶಿಕ್ಷಿಸುತ+ಒಮ್ಮೆ, ತಿದ್ದುತಿರು=ತಿದ್ದುತ+ಇರು.
ಅಂತಾನುಂ=ಹಾಗಾದರೂ, ಇಂತಾನುಂ=ಹೀಗಾದರೂ, ಎಂತೋ=ಹೇಗೋ,ಅರಸು=ಹುಡುಕು,
ಸಂತವ=ಸಮಾಧಾನವ, ಸ್ವಾಂತಮಂ=ಮನಸ್ಸನ್ನು,

ನಿನ್ನ ಮನಸ್ಸು ಕೆರಳಿದಾಗ, ಹಾಗಾದರೂ ಸರಿ, ಹೀಗಾದರೂ ಸರಿ, ಹೇಗಾದರೂ ಸರಿ ನಿನಗೆ ಆದಂತೆ, ಆ ಮನಸ್ಸನ್ನು ಶಾಂತಗೊಳಿಸಲು ಪ್ರಯತ್ನಿಸು. ಹಠ ಮಾಡುವ ಮಗುವನ್ನು ಹಲವು ಬಾರಿ ಸಮಾಧಾನದಿಂದ ಮತ್ತೆ ಕೆಲವು ಬಾರಿ ಶಿಕ್ಷೆಯಿಂದ ಶಾಂತಗೊಳಿಸುವಂತೆ, ನಿನ್ನ ಮನಸ್ಸನ್ನೂ ತಿದ್ದುತ್ತ ಇರು ಎಂದು ಒಂದು ಆದೇಶವನ್ನು ನೀಡಿದ್ದಾರೆ, ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಮನಸ್ಸು ನೋಡುತ್ತದೆ. ನೋಡಿದ್ದನ್ನು ಬಯಸುತ್ತದೆ. ಬಯಸಿದ್ದನ್ನು ಪಡೆಯಲು ಪ್ರಯತ್ನ ಪಡುತ್ತದೆ. ಬಯಸಿದ್ದು ಸಿಕ್ಕಾಗ ಸಂತೋಷಪಡುತ್ತದೆ. ಬಯಸಿದ್ದು ಸಿಗದಿದ್ದರೆ, ಕೆರಳುತ್ತದೆ. ಹಾಗೆ ಕೆರಳಿದ ಮನಸ್ಸು ಏನೇನನ್ನೋ ಮಾಡಲು ಉದ್ಯುಕ್ತವಾಗುತ್ತದೆ. ಹಾಗಾದಾಗ ನಮಗೆ ಅಹಿತವಾದ ಪರಿಣಾಮಗಳೂ ಸಹ ಆಗಬಹುದು. ಏಕೆಂದರೆ ಈ ಮನಸ್ಸೇ ನಮ್ಮ ಎಲ್ಲ ಕ್ರಿಯೆಯ ಉಗಮ ಮತ್ತು ಯೋಜನಾ ಸ್ಥಾನ.

ಆದ್ದರಿಂದ ಕೆರಳಿದ ಮನಸ್ಸನ್ನು, ರಚ್ಚೆ ಹಿಡಿದ ಮಗುವನ್ನು ಶಾಂತಗೊಳಿಸುವಂತೆ ಹೇಗಾದರೂ ಮಾಡಿ ಶಾಂತಗೊಳಿಸಬೇಕು. ಅದಕ್ಕೆ ಪೂಜೆ, ಧ್ಯಾನ, ಜಪ, ತಪ, ಯೋಗ, ಸತ್ಸಂಗ ಮುಂತಾದ ಬಹಳಷ್ಟು ವಿಧಾನಗಳನ್ನು ನಮ್ಮ ಪೂರ್ವಜರು ಸೂಚಿಸಿದ್ದಾರೆ.

ನಮ್ಮ ಮನಸ್ಸನ್ನು ಅರ್ಥಮಾಡಿಕೊಳ್ಳುವುದು ಬಹಳ ಕಷ್ಟ. ಅದರಲ್ಲಿ ಬುಗ್ಗೆ ಬುಗ್ಗೆಯಾಗಿ ಏಳುವ ಭಾವನೆಗಳನ್ನು ತಡೆಹಿಡಿಯುವುದು ಇನ್ನೂ ಕಷ್ಟ, ತಡೆಹಿಡಿಯಲಾಗದಿದ್ದರೆ, ಅದಕ್ಕೆ ಒಂದು ಮಾರ್ಗವನ್ನು ತೋರಿ ಅದಕ್ಕೆ ಸಾಂತ್ವನ ನೀಡುವುದೇ ಮೇಲೆ ಹೇಳಿದ ಎಲ್ಲ ಮಾರ್ಗಗಳ ಉದ್ದೇಶ. ನಯದಿಂದಾಗಲೀ, ಭಯದಿಂದಾಗಲೀ ಅದನ್ನು ತಡೆ ಹಿಡಿಯಬೇಕು, ಸಮಾಧಾನಪಡಿಸಬೇಕು. ಮನಸ್ಸು ಶಾಂತವಾಗಿದ್ದರೆ ಬದುಕು ಶಾಂತವಾಗಿರುತ್ತದೆ. ಅಂತಹ ಶಾಂತ ಮನಸ್ಸು ನಮ್ಮದಾಗಬೇಕು. ಹಾಗಾದರೆ ನೆಮ್ಮದಿ.





**ಮುಕ್ತಕ-377**

**ಉದರದೈವಕೆ ಜಗದೊಳೆದುರು ದೈವವದೆಲ್ಲಿ? |**
**ಮೊದಲದರ ಪೂಜೆ, ಮಿಕ್ಕೆಲ್ಲವದರಿಂದ ||**
**ಮದಿಸುವುದದಾದರಿಸೆ ಕುದಿವುದು ನಿರಾಕರಿಸೆ |**
**ಹದದಳಿರಿಸುವುದೆಂತೊ - ಮಂಕುತಿಮ್ಮ ||**

ಜಗದೊಳೆದುರು-ಜಗದೊಳು+ಎದುರು, ದೈವವದಲ್ಲಿ=ದೈವವು+ಅದೆಲ್ಲಿ, ಮೊದಲದರ=ಮೊದಲು+ಅದರ,

ಮಿಕ್ಕೆಲ್ಲವದರಿಂದ=ಮಿಕ್ಕೆಲ್ಲವು+ಅದರಿಂದ, ಮದಿಸುವುದದಾದರಿಸೆ=ಮದಿಸುವುದು+ಅದು+ಆದರಿಸೆ,
ಹದದಳಿರಿಸುವುದೆಂತೊ=ಹದದಲ್ಲಿ+ಇರಿಸುವುದು+ಎಂತೊ,
ಮದಿಸುವುದು=ಆನಂದಿಸುವುದು, ಕುದಿವುದು=ಕೋಪಗೊಳ್ಳುವುದು, ಹದದಲ್ಲಿ=ಸಮತೋಲನದಲಿ,
ಉದರ=ಹೊಟ್ಟೆ.

ಹೊಟ್ಟೆಯೊಳಗಿನ ದೈವದ ಪೂಜೆ ಮೊದಲು ಆದಮೇಲೆ ಮಿಕ್ಕೆಲ್ಲ ದೇವರುಗಳ ಪೂಜೆಯಾಗುತ್ತದೆ. ಏಕೆಂದರೆ ಆ ಹೊಟ್ಟೆಯೊಳಗಿನ ದೈವಕ್ಕಿಂತ ಮಿಗಿಲಾದ ದೈವವು ಯಾವುದೂ ಇಲ್ಲ. ಅದಕ್ಕೆ ಕೊಡಬೇಕಾದ್ದನ್ನು ಕೊಟ್ಟರೆ ಅದು ಶಾಂತವಾಗಿರುತ್ತದೆ, ಇಲ್ಲದಿದ್ದರೆ ಕೋಪಗೊಳ್ಳುತ್ತದೆ. ಅದನ್ನು ಸಮವಾಗಿರಿಸುವುದು ಹೇಗೋ ಎಂದು ಉದರ ಪೂಜೆಯ ವಿಚಾರವನ್ನು ಪ್ರಸ್ತಾಪಿಸುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಶ್ರೀ ಕೃಷ್ಣ ಭಗವದ್ಗೀತೆಯಲ್ಲಿ 'ನಾನು ಜೀವಿಗಳ ಉದರದಲ್ಲಿ ವೈಶ್ವಾನರ ರೂಪದಲ್ಲಿ ಇದ್ದೇನೆ' ಎಂದು ಹೇಳುತ್ತಾನೆ. ನಮ್ಮ ಜಠರದಲ್ಲಿರುವುದು ಜಠರಾಗ್ನಿ ಹವಿಸ್ಸಿನ ರೂಪದಲ್ಲಿ ನಾವು ಆಹಾರವನ್ನು ಅದಕ್ಕೆ ಸಮರ್ಪಿಸಿದಾಗ ಆ ಅಗ್ನಿ ಅದನ್ನು ಪಚನಗೊಳಿಸಿ ಎಲ್ಲ ರೀತಿಯ ಶಕ್ತಿಯನ್ನೂ ಉತ್ಪಾದಿಸಿ 'ಸಮಾನ ವಾಯು'ವಿನ ಮೂಲಕ ನಮ್ಮ ದೇಹದ ಎಲ್ಲ ಭಾಗಗಳಿಗೂ ಸಮರ್ಪಕವಾಗಿ ವಿತರಿಸುತ್ತದೆ. ಈ ಪ್ರಕ್ರಿಯೆ ನಡೆಯುತ್ತಿದ್ದರೆ ನಮ್ಮ ದೇಹ ಸುಸ್ಥಿತಿಯಲ್ಲಿರುತ್ತದೆ. ಹಾಗಾಗಿ ಗುಂಡಪ್ಪನವರು ಹೇಳುವಂತೆ ನಮ್ಮ ಉದರದಲ್ಲಿರುವ ಆ ವೈಶ್ವಾನರನೆಂಬ ದೇವರಿಗೆ ಮೊದಲ ಪೂಜೆಯಾಗಬೇಕು. ಹಾಗಾದಾಗ ದೇಹ ದೃಢವಾಗಿ ಮಿಕ್ಕೆಲ್ಲ ದೇವತೆಗಳ ಪೂಜೆಗೆ ಪೂರಕವಾಗಿರುತ್ತದೆ. ಹಾಗೆ ಕೊಟ್ಟ ಆಹಾರದಿಂದ ವೈಶ್ವಾನರ ತೃಪ್ತನಾದರೆ ಆನಂದ, ಇಲ್ಲದಿದ್ದರೆ ಅವನು ಆಗ್ರಹಿಸಿ ದೇಹ ಸೊರಗಿ ಶಕ್ತಿಯಿಲ್ಲದೆ ಯಾವ ದೇವರ ಪೂಜೆಯೂ ಕೈಲಾಗುವುದಿಲ್ಲ. ಹಾಗಾಗಿ ಉದರ ದೈವದ ಪೂಜೆ ಮೊದಲಾಗಬೇಕು.

ಹೆಚ್ಚು ತಿಂದರೆ ಅನಾರೋಗ್ಯ, ಕಡಿಮೆ ತಿಂದರೂ ಅನಾರೊಗ್ಯ. ಎಷ್ಟು ತಿನ್ನಬೇಕು ಎಂದು ನಿರ್ಧರಿಸುವುದು ಕಷ್ಟ, ಏನನ್ನೋ ತಿಂದರೆ ಅನಾರೋಗ್ಯ ಮತ್ಯಾವುದನ್ನೋ ತಿಂದರೆ ಆರೋಗ್ಯ, ಆದರೆ ಏನು ತಿನ್ನಬೇಕು ಎನ್ನುವುದನ್ನು ನಿರ್ಧರಿಸುವುದು ಕಷ್ಟ ಮಿಶ್ರಣ (combination) ಪರಿಮಾಣ (ratio) ಮತ್ತು ಪ್ರಮಾಣ (quantity) ನಿರ್ಧರಿಸುವುದೇ ಗುಂಡಪ್ಪನವರು ಹೇಳುವ ಹದವರಿಯುವುದು. ಆದರೆ ನಾಲಿಗೆ ಒಂದಿದೆಯಲ್ಲ!! ಅದನ್ನೂ ತೃಪ್ತಿ ಪಡಿಸುತ್ತಾ ಆ ಹದವನ್ನೂ ಅರಿತರೆ ಉದರ ದೈವದ ಪೂಜೆಯೂ ಸರಿಯಾಗುತ್ತದೆ. ದೇಹವೂ ಆರೋಗ್ಯದಿಂದಿರುತ್ತದೆ.

ವಾಚಕರೆ ಆ ಹದವನರಿಯುವ ಭಾಗ್ಯ ಮತ್ತು ಆಹಾರದ ಸಮತೋಲನವನ್ನು ಕಾಪಾಡಿಕೊಳ್ಳುವ ಭಾಗ್ಯ ನಮ್ಮದಾಗಲಿ.

**ಮುಕ್ತಕ - 378**

**ಕುದಿ ಹೆಚ್ಚೆ ವೆಗಟುವುದು; ಕಡಿಮೆಯಿರೆ ಹಸಿನಾತ।**
**ಕದಡಲೊಡೆವುದು ಹಾಲು; ಸೂಕ್ಷ್ಮವದರ ಹದ॥**
**ಅದರವೊಲೆ ಮನದ ಹದ, ಅದನೆಚ್ಚರದಿ।**
**ಬದುಕು ಸೊಗ ಹದದಿಂದ - ಮಂಕುತಿಮ್ಮ॥**

ವೆಗಟುವುದು=ವೆಗಟು+ಅಹುದು, ಕಡಿಮೆಯಿರೆ=ಕಡಿಮೆ+ಇರೆ, ಕದಡಲೊಡೆವುದು=ಕದಡಲು+ಒಡೆವುದು,
ಸೂಕ್ಷ್ಮವದರ=ಸೂಕ್ಷ್ಮವು+ಅದರ, ಅದನೆಚ್ಚರದಿ+ಅದನು+ಎಚ್ಚರದಿ,
ವೆಗಟು=ಎಗಟು (ತಿಕ್ಕುವುದು)

ಹಾಲನ್ನು ಕಾಯಿಸುವಾಗ ಹದವಾಗಿ ಕಾಸಿದರೆ ಅದು ಚೆನ್ನಾಗಿ ಕಾದು, ಕೆನೆ ಕಟ್ಟಿ, ಕುಡಿಯಲು ರುಚಿಯಾಗಿರುತ್ತದೆ. ಅದನ್ನು ಹೆಚ್ಚಾಗಿ ಕಾಯಿಸಿದರೆ ಅಡಿಕಟ್ಟಿ ಸೀದ ವಾಸನೆ ಬರುತ್ತದೆ. ಅಲ್ಲದೆ ಕಡಿಮೆಯಾಗಿ ಕಾಯಿಸಿದರೆ, ಸರಿಯಾಗಿ ಕಾಯದೆ ಹಸಿ ವಾಸನೆ ಬಂದು ಕುಡಿಯಲು ಯೋಗ್ಯವಾಗಿರುವುದಿಲ್ಲ. ಹಾಗಾಗಿ ಹಾಲನ್ನು ಹದವಾಗಿ ಕಾಯಿಸಬೇಕು. ಅದರಂತೆಯೇ ಮನಸ್ಸನ್ನೂ ಎಚ್ಚರದಿಂದ ಹದವಾಗಿಟ್ಟುಕೊಂಡು ಬಾಳನ್ನು ಬಾಳಬೇಕು ಎಂದು ಆದೇಶಿಸುತ್ತಾರೆ, ಗುಂಡಪ್ಪನವರು ಈ ಮುಕ್ತಕದಲ್ಲಿ.

ಇದನ್ನೇ ನಮ್ಮ ಮನಸ್ಸಿಗೆ ಅನ್ವಯಿಸಿಕೊಂಡು ನೋಡೋಣ. ಮನಸ್ಸಿನ ಪಟಲ ಹಾಲು ಕಾಯಿಸುವ ಪಾತ್ರೆ ಇದ್ದಂತೆ. ಯಾವುದೇ ಒಂದು ವಿಚಾರ ಮನಸ್ಸಿಗೆ ಬಂದಾಗ ಅದರ ಯುಕ್ತಾಯುಕ್ತತೆಯನ್ನು ಆಲೋಚಿಸಿ, ಮಥಿಸಿ ನಮಗೆ ಉಪಯೋಗವಾಗುವಂತಹದನ್ನು ಉಳಿಸಿಕೊಂಡು ಮಿಕ್ಕದ್ದನ್ನು ಹೊರಹಾಕಿದರೆ ಒಳ್ಳೆಯದು. ಅದಲ್ಲದೆ ಎಲ್ಲವನ್ನೂ

ತುಂಬಿಕೊಂಡು ಎಲ್ಲವನ್ನೂ ಇಟ್ಟುಕೊಂಡು 'ಕಾಯಿಸುತ್ತಾ' ಹೋದರೆ ಹುಚ್ಚು ಹಿಡಿಯುತ್ತದೆ, ಅಲ್ಲವೇ? ಹಾಗಾಗಿ ವಿಚಾರಗಳನ್ನು ಹದಗೊಳಿಸುತ್ತಾ ಇರಬೇಕು.

ಮನದಲ್ಲಿ ಏಳುವ ವಿಚಾರಗಳ ಬುಗ್ಗೆಗಳು ಹಲವಾರು ಭಾವಗಳಿಂದ ಕೂಡಿರುತ್ತವೆ. ಕೋಪ, ದ್ವೇಷ, ಅಸೂಯೆ, ಕ್ರೋಧ, ಸಹನೆ, ಶಾಂತಿ, ಸಂತೋಷ ಮುಂತಾದ ಹಲವಾರು ರೀತಿಯ ಭಾವಗಳು ಮನದಲ್ಲಿ ಏಳುತ್ತವೆ. ಯಾವುದು ನಮ್ಮ ಮಾನಸಿಕ ಸಂತುಲನೆಗೆ ಹಿತವಲ್ಲದ ಭಾವಗಳನ್ನು, ಕಸ ಗುಡಿಸಿ ಬಿಸಾಡುವ ಹಾಗೆ ಹೊರ ತಳ್ಳಬೇಕು. ಶಾಂತ ಮನಸ್ಸಿನ ಭಾವ ಉಳಿಸಿಕೊಂಡರೆ ಸಹನೆ ಹೆಚ್ಚಾಗುತ್ತದೆ. ಸಹನೆ ಹೆಚ್ಚಾದರೆ ಮನಸ್ಸು ಶಾಂತವಾಗಿರಬಹುದು. ಹಾಗಾದಾಗ ಮನಸ್ಸು ಸೀಯದೆ ಮತ್ತು ಅರೆ ಬರೆ ವಿಚಾರಗಳಿಂದ ನಮ್ಮಿಂದ ಹಿತವಲ್ಲದ ಕೆಲಸಗಳನ್ನು ಮಾಡಿಸದೆ, ಗುಂಡಪ್ಪನವರು ಹೇಳುವಂತೆ ಹದದಿಂದ ಬದುಕನ್ನು ಸೊಗಸಾಗಿ ಬಾಳಬಹುದು. ಅಂತಹ ಪ್ರಯತ್ನ ನಮ್ಮದಾಗಬೇಕಲ್ಲವೇ? ಹದವರಿತು ಬಾಳಿದರೆ ಬದುಕು ಸೊಗಸು.





# ಕುಲಕದಿರು ಬಾಲವನು 379-383

**ಮುಕ್ತಕ - 379**

**ತೃಪ್ತಿಯರಿಯದ ವಾಂಛೆ, ಜೀರ್ಣಸದ ಭುಕ್ತಿವೊಲು |**
**ಗುಪ್ತದಲಿ ಕೊಳೆಯುತ್ತೆ ವಿಷಬೀಜವಾಗಿ ||**
**ಪ್ರಾಪ್ತಿಗೊಳಿಪುದು ಜೀವಕುನ್ಮಾದತಾಪಗಳ |**
**ಸುಪ್ತವಹುದೆಂತಿಚ್ಛೆ - ಮಂಕುತಿಮ್ಮ ||**

ತೃಪ್ತಿಯರಿಯದ=ತೃಪ್ತಿಯ+ಅರಿಯದ, ಜೀವಕುನ್ಮಾದತಾಪಗಳ=ಜೀವಕೆ+ಉನ್ಮಾದ+ತಾಪಗಳ,

ಸುಪ್ತವಹುದೆಂತಿಚ್ಛೆ=ಸುಪ್ತ+ಅಹುದು+ಎಂತು+ಇಚ್ಛೆ

ವಾಂಛೆ=ಆಸೆ, ಕಾಮನೆ, ಭುಕ್ತಿವೊಲು=ಆಹಾರದಂತೆ, ಪ್ರಾಪ್ತಿಗೊಳಿಪುದು=ತಂದಿಡುವುದು,

ಉನ್ಮಾದ=ಉದ್ವೇಗ, ತಾಪ=ಉದ್ರೇಕ, ಸುಪ್ತ=ಪ್ರಕಟಗೊಳ್ಳದೆ, ಇಚ್ಛೆ ಆಸೆ.

ತೃಪ್ತವಾಗದ ಬಯಕೆಗಳು, ಜೀರ್ಣವಾಗದ ಆಹಾರದಂತೆ, ಒಳಗೊಳಗೇ ಕೊಳೆತು ವಿಷವಾಗಿಬಿಡುತ್ತದೆ. ಆ ರೀತಿಯ ಬಯಕೆಗಳು ಜೀವವನ್ನು ಉನ್ಮಾದ ಮತ್ತು ಉದ್ರೇಕಗೊಳಿಸುತ್ತವೆ. ಈ ರೀತಿಯ ಬಯಕೆಗಳು ಶಾಂತವಾಗಿ ಮೇಲೇಳದಂತೆ ಇರುವುದು ಎಂದೋ? ಎಂದು ಮಾನವನ ಆಸೆಗಳ ಬಗ್ಗೆ ಒಂದು ಸುಂದರ ವಿಶ್ಲೇಷಣೆ ಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಈಡೇರದ ಆಸೆಗಳು ಮನದಲ್ಲಿ ಮತ್ತೆ ಮತ್ತೆ ಮೇಲೇಳುತ್ತಾ ಕೊರೆಯುತ್ತಾ ಇರುತ್ತವೆ. ಆ ಕೊರೆತದ ಕಾರಣದಿಂದ ಅವು ಕೊಳೆಯುತ್ತಾ, ನಮ್ಮ ಮೇಲೆ ತನ್ನ ದುಷ್ಪ್ರಭಾವವನ್ನು ಬೀರುತ್ತಾ ನಮ್ಮ ಭಾವಗಳನ್ನು ಕೊಳೆಯುವಂತೆ ಮಾಡುತ್ತದೆ. ಜೀರ್ಣವಾಗದ ಆಹಾರ ನಮ್ಮ ದೇಹದಲ್ಲಿ ಕೊಳೆತು ದುರ್ನಾತ ಹೊಡೆಯುವಂತೆ, ಇವೂ ಸಹ ನಮ್ಮಿಂದ ದುರ್ನಾತದ ಭಾವಗಳನ್ನು ಹೊರ ಹೊಮ್ಮಿಸುತ್ತ ನಮ್ಮಲ್ಲಿ ಕೋಪ, ದ್ವೇಷ, ಅಸಹನೆ, ಅಸೂಯೆ ಮುಂತಾದ ಭಾವಗಳನ್ನು ತುಂಬುತ್ತಾ ನಮ್ಮ ಸುತ್ತಲಿನ ಜನರ ಬದುಕು ಅಸಹನೀಯವಾಗಿಬಿಡುತ್ತದೆ. ಇಂದು ನಮ್ಮ ಬದುಕುಗಳಲ್ಲಿ ಈ ಅತೃಪ್ತ ಆಸೆಗಳ ದುರ್ನಾತ ಬಡಿಯುತ್ತಿರುವುದು ಎಲ್ಲರಿಗೂ ಗೊತ್ತಿರುವ ವಿಷಯವೇ ಅಲ್ಲವೇ?

"ಸುಪ್ತವಹುದೆಂತಿಚ್ಛೆ" ಎಂದು ಒಂದು ಪ್ರಶ್ನೆಯನ್ನು ಕೇಳಿದ್ದಾರೆ ಮಾನ್ಯ ಗುಂಡಪ್ಪನವರು. ತಾಳ್ಮೆಯ ಮತ್ತು ತೃಪ್ತ ಜೀವನದಲ್ಲಿ ನಮ್ಮ ಅತಿಯಾದ ಆಸೆಗಳನ್ನು ಬುಗ್ಗೆ ಬುಗ್ಗೆಯಂತೆ ಮೇಲೇಳದಂತೆ ಹಿಡಿತದಲ್ಲಿ ಇಟ್ಟುಕೊಳ್ಳಬಹುದು ಎಂದು ನಮ್ಮ ಹಿರಿಯರು ಮಾರ್ಗ ತೋರಿದ್ದಾರೆ. ಆದರೆ ಇಂದ್ರಿಯವಶವಾದ ನಮ್ಮ ಮನಸ್ಸು ಬುದ್ಧಿ ದೇಹಗಳ ವಾಂಛಗಳನ್ನು ಕೇವಲ ಸಾಧನೆಯಿಂದ ನಿಗ್ರಹಿಸಬಹುದು. ವಾಚಕರೆ, ಇದು ಕೇವಲ ಪ್ರಯತ್ನದಿಂದ ಸಾಧ್ಯ. ಅಂತಹ ಪ್ರಯತ್ನವನ್ನು ನಿರಂತರವಾಗಿ ಮಾಡುತ್ತಾ ಇದ್ದರೆ ಎಂದೋ ಒಂದು ದಿನ ನಮಗೂ ಜಯ ಸಿಗಬಹುದು.

**ಮುಕ್ತಕ - 380**

**ಹುಲಿಯ ಕೆಣಕುವುದು ಹುಲಿ; ಕಪಿಯನಣಕಿಸುದು ಕಪಿ ।**
**ಹುಲಿಕಪಿಗಳವಿತಿರದ ನರಜಂತುವಲ್ಲಿ ॥**
**ಮಲಗಿರುವ ಮೃಗವನಂತಿರಲು ಬಿಡುವುದೇ ಜಾಣು ।**
**ಕುಲಕದಿರು ಬಾಲವನು – ಮಂಕುತಿಮ್ಮ ॥**

ಕಪಿಯನಣಕಿಪುದು=ಕಪಿಯನು+ಅಣಕಿಪುದು, ಹುಲಿಕಪಿಗಳವಿತಿರದ=ಹುಲಿ+ಕಪಿಗಳು+ಅವಿತಿರದ,
ನರಜಂತುವೆಲ್ಲಿ=ನರ+ಜಂತುವು+ಎಲ್ಲಿ, ಮೃಗವನಂತಿರಲು+ಮೃಗವನು+ಅಂತೆ+ಇರಲು
ಕುಲಕದಿರು = ಕೆದಕಿ ಆಡಿಸದೆ ಇರು.

ಒಂದು ಹುಲಿಯನ್ನು ಮತ್ತೊಂದು ಹುಲಿ ಕೆಣಕುವುದು. ಒಂದು ಕಪಿ ಮತ್ತೊಂದು ಕಪಿಯನ್ನು ಅಣಕಿಸುತ್ತದೆ. ಇವೆರಡಕ್ಕೂ ಅವುಗಳದೇ ಆದಂತಹ ಗುಣಗಳಿವೆ. ಆದರೆ ಹುಲಿ ಮತ್ತು ಕಪಿಗಳೆರಡರ ಸಮ್ಮಿಶ್ರ ಗುಣಗಳಿಲ್ಲದ ಮನುಷ್ಯ ಸಿಗುವುದೇ ಇಲ್ಲ. ಹಾಗೆ ಎರಡೂ ಗುಣಗಳಿರುವ ಈ ಮನುಷ್ಯನ ಎರಡೂ ಗುಣಗಳನ್ನು ಹಾಗೆ ಬಿಡುವುದೇ ಜಾಣತನ. "ನಿನ್ನಲ್ಲಿರುವ ಈ ಗುಣಗಳನ್ನು ಕೆದಕದೆ ಇರು" ಎಂದು ಒಂದು ಆದೇಶವನ್ನು ನೀಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಮನುಷ್ಯ ಜನ್ಮಕ್ಕೆ ಬರುವ ಮೊದಲು ಆತ್ಮ ಹಲವಾರು ಕೀಟ ಪಕ್ಷಿ ಪ್ರಾಣಿಗಳ ದೇಹಗಳನ್ನು ಧಾರಣೆಮಾಡಿ ಇರುತ್ತದೆಂಬುದು ನಮ್ಮ ಸನಾತನದ ನಂಬಿಕೆ. ಹಾಗೆ ಧರಿಸಿದ ದೇಹಗಳ ಗುಣಗಳನ್ನು ಹೊತ್ತು ಬಂದ ನಮ್ಮ ಮಾನವನಲ್ಲಿ ಈ ಮೃಗಗಳ ಗುಣಗಳು ಇರುವುದೇನೂ ಆಶ್ಚರ್ಯದ ವಿಷಯವಲ್ಲ. ಇಂದ್ರಿಯ ಪ್ರಚೋದಿತವಾದ ನಮ್ಮ ಆಸೆಗಳು ಮಾನವ ಗುಣಗಳಲ್ಲದೆ, ಈ ಮೃಗ ಗುಣಗಳಿಂದಲೂ ಪ್ರೇರಿತಗೊಳ್ಳುತ್ತವೆ. ಹಾಗಾದಾಗ ನಮ್ಮ ವರ್ತನೆ ವಿಚಿತ್ರವಾಗುತ್ತದೆ. ನಮ್ಮ ಬದುಕಿನಲ್ಲಿ ನಾವು ನೋಡುವ ನಮ್ಮ ಮತ್ತು ಅನ್ಯರ ಚಿತ್ರವಿಚಿತ್ರ ವರ್ತನೆಗೆ ಈ ಸಮ್ಮಿಶ್ರ ಗುಣಗಳೇ ಕಾರಣ.

ಮಾನವರಾದ ನಾವು ನಮ್ಮ ವರ್ತನೆಯನ್ನು ಶುದ್ಧವಾಗಿಟ್ಟುಕೊಳ್ಳಬೇಕಾದರೆ ನಮ್ಮಲ್ಲಿರುವ ಅಂತಹ ಗುಣಗಳನ್ನು ಹಿಡಿತದಲ್ಲಿಟ್ಟು ವರ್ತಿಸಬೇಕು. ಸುಪ್ತವಾಗಿರುವ ಆ ಗುಣಗಳನ್ನು ಹಾಗೇ ಇರಲು ಬಿಡಬೇಕು ಮತ್ತು ನಮ್ಮ ಸದ್ವರ್ತನೆಯಿಂದ ಸದಾಚಾರದಿಂದ ಅವುಗಳನ್ನು ನೀಗಿಕೊಳ್ಳಲು ಪ್ರಯತ್ನಿಸಬೇಕು. ಹಾಗಲ್ಲದೆ ನಾನಿರುವುದೇ ಹೀಗೆ, ನನ್ನ ಸ್ವಭಾವವೇ ಹೀಗೆ ಪಶುಗುಣಗನುಗುಣವಾಗಿ ವರ್ತಿಸಿದರೆ ನಮ್ಮದಷ್ಟೇ ಅಲ್ಲ ನಮ್ಮ ಸುತ್ತಲಿರುವ ಬದುಕೂ ಹಾಳಾಗುತ್ತದೆ.

ಹಾಗಾಗಿ, ಮೊದಲು ನಮ್ಮಲ್ಲಿರುವ ಅವಗುಣಗಳನ್ನು ಗುರುತಿಸಿಕೊಳ್ಳಬೇಕು. ಅವುಗಳನ್ನು ಹಿಡಿತದಲ್ಲಿ ಇಟ್ಟುಕೊಳ್ಳಬೇಕು. ಅವುಗಳನ್ನು ಅಪ್ರಕಟಿತವಾಗಿಟ್ಟುಕೊಂಡು ನೀಗಿಕೊಳ್ಳಲು ಪ್ರಯತ್ನಿಸಬೇಕು. ಹಾಗೆ ನಮ್ಮನ್ನು ನಾವೇ ಸುಧಾರಿಸಿಕೊಳ್ಳಬೇಕು.





**ಮುಕ್ತಕ-381**

**ಅತಿಶಯದದೃಷ್ಟ ಹುಟ್ಟಿಂ ಮೃತೇಂದ್ರಿಯನದಲ ।**
**ಇತರರೊಳು ವಿಷಪರೀಕ್ಷೆಗೆ ನಿಲುವವರಾರು ॥**
**ಮಿತ ಕುಕ್ಷಿ ; ಮಿತಭುಕ್ತ; ಮತ್ತಾರ್ ಜಿತೇಂದ್ರಿಯ ।**
**ಅತಿಚರ್ಚೆ ಸಲದಿಲ್ಲಿ - ಮಂಕುತಿಮ್ಮ ॥**

ಅತಿಶಯದದೃಷ್ಟ=ಅತಿಶಯದ+ಅದೃಷ್ಟ, ಮೃತೇಂದ್ರಿಯನದಲ=ಮೃತ+ಇಂದ್ರಿಯನದು+ಅಲ,
ನಿಲುವವರಾರು=ನಿಲುವವರು+ಯಾರು, ಸಲದಿಲ್ಲಿ ಸಲದು+ಇಲ್ಲಿ,
ಹುಟ್ಟಿಂ=ಹುಟ್ಟಿನಿಂದ, ಮೃತೇಂದ್ರಿಯ=ಯಾರ ಇಂದ್ರಿಯಲಾಲಸೆ ಸತ್ತಿದೆಯೋ,

ವಿಷಪರೀಕ್ಷೆಗೆ=ಘೋರಪರೀಕ್ಷೆಗೆ, ಮಿತ ಕುಕ್ಷಿ=ಕಡಿಮೆ ಹಸಿವಿನವನು, ಮಿತಭುಕ್ತ=ಮಿತವಾಗಿ ಆಹಾರ ಸೇವಿಸುವವನು, ಅತಿಚರ್ಚೆ=ಹೆಚ್ಚು ವಾಗ್ವಾದ.

ಜನ್ಮದಿಂದಲೇ ಇಂದ್ರಿಯ ಲಾಲಸೆ ಸತ್ತವನು ಇದ್ದರೆ, ಅದು ಅತಿಶಯದ ಅದೃಷ್ಟವಲ್ಲವೇ? ಹಾಗಲ್ಲದೆ ಘೋರ ಪರೀಕ್ಷೆಗೆ ಒಳಪಡುವವರಾರು? ಕಡಿಮೆ ಹಸಿವಾಗುವವನೋ ಅಥವಾ ಮಿತವಾಗಿ ಆಹಾರ ಸೇವಿಸುವವನೋ, ಯಾರು ಜಿತೇಂದ್ರಿಯರು? ಎನ್ನುವ ಪ್ರಶ್ನೆಗಳನ್ನು ತೆಗೆದು, ಈ ವಿಷಯದಲ್ಲಿ ಅತಿಯಾದ ಚರ್ಚೆ ಮಾಡಬಾರದು ಎಂದು ಒಂದು ಆದೇಶವನ್ನು ನೀಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಜನ್ಮದಿಂದಲೇ ಎಲ್ಲ ಇಂದ್ರಿಯ ಆಸೆಗಳೂ ಸುಟ್ಟಿರುವ ವ್ಯಕ್ತಿಗಳು ಯಾರಾದರೂ ಸಿಗುತ್ತಾರೇನು? ಎಂದು ನೋಡಿದರೆ, ಸಾಧ್ಯವೇ ಇಲ್ಲ. ಹಾಗಲ್ಲದವರಲ್ಲಿ ಇವನು ಜಿತೇಂದ್ರಿಯನೋ ಅಲ್ಲವೋ ಎಂದು ಪರೀಕ್ಷೆಗೆ ಒಳಪಡುವವರಾರು? ಹಾಗೆ ಎಲ್ಲರನ್ನೂ ಪರೀಕ್ಷೆಗೆ ಒಳಪಡಿಸಿದರೆ, ಯಾರಿಗೂ ಹಸಿವಿಲ್ಲ ಹಾಗಾಗಿ ಊಟ ಕಡಿಮೆ, ಯಾರಿಗೋ ಹೊಟ್ಟೆಯಲ್ಲಿ ಹುಣ್ಣು, ಹಾಗಾಗಿ ಊಟ ಸೇರುವುದಿಲ್ಲ. ಹೀಗೆ ಬೇರೆ ಯಾವುದಾವುದೋ ಕಾರಣಕ್ಕೆ ಅವರುಗಳ ಇಂದ್ರಿಯಗಳು ಸತ್ತಂತೆ ಇದ್ದರೆ. ಅವರನ್ನು ಜಿತೇಂದ್ರಿಯರೆನ್ನಲಾಗುತ್ತದೆಯೇ?

ಮಾತನಾಡಲಾಗದೆ ಮೌನವಾಗಿರುವ, ಮೂಗನನ್ನು ಮೌನವ್ರತ ಮಾಡುತ್ತಿದ್ದಾನೆ ಎನ್ನಲಾಗುವುದೇ? ಎಲ್ಲ ಉಪಕರಣಗಳೂ, ಇಂದ್ರಿಯಗಳೂ ಸರಿಯಾಗಿರುವಾಗ ಅವುಗಳ ಮೂಲಕ ಉಂಟಾಗುವ ಆಸೆಗಳು ನಮ್ಮ ಮೇಲೆ ಪ್ರಭಾವ ಬೀರದಂತೆ, ಮತ್ತು ನಾವು ಆಸೆ ಪಡದ ರೀತಿ ನಮ್ಮನ್ನು ನಾವು ರೂಪಿಸಿಕೊಳ್ಳಲಾದರೆ ಅದು ಸಾಧನೆ. ಅದಕ್ಕೆ ನೂರಾರು ಮಾರ್ಗಗಳನ್ನು ಸೂಚಿಸಿದ್ದಾರೆ ಜ್ಞಾನಿಗಳು. ಆ ಮಾರ್ಗಗಳಲ್ಲಿ ನಮ್ಮ ಜೀವನದ ಪಯಣಸಾಗಿ ನಾವೂ ಸಹ, ಮೃತೇಂದ್ರಿಯರಲ್ಲದಿದ್ದರೂ, ಜಿತೇಂದ್ರಿಯರಾಗುವ ಪ್ರಯತ್ನಪಡಬಹುದು.

**ಮುಕ್ತಕ-382**

**ಇಂದ್ರಿಯವ ಜಯಿಸಿದೆಯೊ? ಮಂದವೋ ನಿನ್ನಕ್ಷಿ ।**
**ಸೌಂದರ್ಯ ಯಕ್ಷಿಣಿಯೆ ನಿನ್ನ ತೊರೆದಿಹಳೋ ॥**
**ಅಂಧನೆ ವಿರಕ್ತನ್; ಅಪ್ಸರೆಯ ಕಾಣದನೆ ಯತಿ ।**
**ಕಂಡು ಕೆರಳದನಾರೊ! – ಮಂಕುತಿಮ್ಮ ॥**

ನಿನ್ನಕ್ಷಿ-ನಿನ್ನ+ಅಕ್ಷಿ, ತೊರೆದಿಹಳೋ=ತೊರೆದು ಇಹಳೋ, ಕೆರಳದನಾರೊ=ಕೆರಳದನ್+ಆರೋ
ಅಕ್ಷಿ+ಕಣ್ಣು ಅಥವಾ ದೃಷ್ಟಿ, ಅಂಧನೆ=ಕುರುಡನೆ, ವಿರಕ್ತನ್=ಆಸೆ ಇಲ್ಲದವನು, ಕಾಣದನೆ=ಕಾಣದವನೆ,
ಕೆರಳದನಾರೊ=ಆಕರ್ಷಿತನಾಗದವನು

ನೀನೇನು ಇಂದ್ರಿಯಗಳ ಜಯಿಸಿದ್ದೀಯೋ? ಅಥವಾ ನೋಡುವ ಕ್ಷಮತೆಯನ್ನು ಕಳೆದುಕೊಂಡಿದ್ದೀಯೋ? ಅಥವಾ ಈ ಜಗತ್ತಿನ ಸೌಂದರ್ಯದಲ್ಲಿ ನಿನಗೆ ಆಸೆ ಮೂಡಿಸುವ ಆ ಯಕ್ಷಿಣಿ ನಿನ್ನನ್ನು ತೊರೆದು ಹೋಗಿದ್ದಾಳೋ? ಕಣ್ಣು ಕಾಣದವನು ಏನನ್ನೂ ನೋಡದಿದ್ದರೆ ಅವನ ಮನದೊಳಗೆ ಆಸೆಗಳು ಇಲ್ಲವೇನು? ತಪಸ್ಸಿನಲ್ಲಿ ನಿರತ ಯತಿಯು ಅಪ್ಸರೆಯನ್ನು ನೋಡದಿರುವನೆ? ಹಾಗೆ ಕಂಡೂ ಆಸೆಪಡದೆ ಇರುವವರಾರು? ಎಂದು ಅಶಾ ಪ್ರವೃತ್ತವಾದ ಮನುಷ್ಯನ ಮನಸ್ಸನ್ನು ಕುರಿತು ಹತ್ತು ಹಲವಾರು ಪ್ರಶ್ನೆಗಳನ್ನು, ನಮ್ಮ ಮುಂದಿಟ್ಟಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ತಮ್ಮ ಒಂದು ಹಾಡಲ್ಲಿ ಪುರಂದರ ದಾಸರು 'ಆಸೆ ಸತ್ತಂತಿರಬಹುದು' ಎಂದು ಹೇಳುತ್ತಾರೆ. ಸತ್ತಂತೆ ಇರಬಹುದು ಎಂದರೆ ಆಸೆ ಇದೆ, ಆದರೆ ಅದನ್ನು ಹೊರಗೆ ತೋರಿಸದೆ ಇರುವುದು. ಆಸೆ ಇಲ್ಲದ ಮನುಷ್ಯನಾರೂ ಇರಲು ಸಾಧ್ಯವಿಲ್ಲ. ಮನುಷ್ಯನೇನು ಯಾವ ಪ್ರಾಣಿಯೂ ಇರಲು ಸಾಧ್ಯವೇ ಇಲ್ಲ. ಆದರೆ ಅನ್ಯ ಪ್ರಾಣಿಗಳ ಆಸೆಗೂ ಮನುಷ್ಯನ ಆಸೆಗೂ ಬಹಳ ವ್ಯತ್ಯಾಸವಿದೆ. ಕಣ್ಣ ಮುಚ್ಚಿಕೊಂಡು ನಾ ಯಾವುದನ್ನೂ ನೋಡುವುದಿಲ್ಲ ಎಂದರೆ ಮನದೊಳಗಿನ ಆಸೆಯನ್ನು ಗೆದ್ದಂತೆಯೇ? ಏನನ್ನೂ ಕಾಣಲಾಗದ ಕುರುಡನನ್ನು ವಿರಕ್ತನೆಂದು ಹೇಳಲು ಸಾಧ್ಯವಿಲ್ಲ.

ಕಣ್ಣ ಮುಚ್ಚಿ ತಪವನ್ನು ಆಚರಿಸುತ್ತಿದ್ದ ವಿಶ್ವಾಮಿತ್ರನಂತಹ ಋಷಿಯೂ ಸಹ ನಾಲ್ಕು ಬಾರಿ ಆ ಮೇನಕೆ ಕಣ್ಣ ಮುಂದೆ ನಡೆದಾಡಿದಾಗ ವಿಚಲಿತನಾದನಲ್ಲ!!ಎಲ್ಲರ ಮನಸ್ಸಲ್ಲೂ ಆಸೆ ಇರುತ್ತದೆ. ಪ್ರಮಾಣ ಬೇರೆ

ಬೇರೆಯಾಗಿರಬಹುದು. ಆದರೆ ಆಸೆ ಇಲ್ಲದ ಮನುಷ್ಯ ಸೌಂದರ್ಯಕ್ಕೆ ಆಕರ್ಷಿತನಾಗದ ಮನುಷ್ಯ ಇರಲು ಸಾಧ್ಯವೇ ಇಲ್ಲ.

ವಾಚಕರೆ, 'ನಾನು ಯಾವುದಕ್ಕೂ ಆಸೆಪಡುವುದಿಲ್ಲ' ಎಂದು ಪ್ರತಿಜ್ಞೆ ಮಾಡಿದರೂ ಮನದಾಳದಲ್ಲಿ ಇರುವ ಆಸೆಯ ಬೀಜವನ್ನು ಮೊಳೆಯದಂತೆ ಮಾಡಲು ಸಾಧ್ಯವಿಲ್ಲ. ಮನದೊಳಗೆ ಆಸೆಯನ್ನಿಟ್ಟುಕೊಂಡು ವಿರಕ್ತನಂತೆ ಡಾಂಬಿಕದ ಸೋಗು ಹಾಕುವುದು, ನಮಗೆ ನಾವು ಮೋಸ ಮಾಡಿಕೊಂಡ ಹಾಗೆ ಆಗುತ್ತದೆ ಅಲ್ಲವೇ? ಹಾಗಾಗಿ ಹಿತವಾಗಿ ಮಿತವಾಗಿ ಆಸೆಪಟ್ಟು, ಆ ನಮ್ಮ ಆಸೆಗಳು ನಮಗೆ ಹಿತವನ್ನೇ ಉಂಟು ಮಾಡುತ್ತವೆ. ಎನ್ನುವ ನಂಬಿಕೆಯಿಂದ ಆಸೆಪಡಬೇಕು. ಹಾಗಾದಾಗ ಬಾಳು ಹಿತವಾಗುತ್ತದೆ.





**ಮುಕ್ತಕ-383**

**ಜನಕಜೆಯ ದರುಶನದಿನಾಯ್ತು ರಾವಣ ಚಪಲ।**
**ಕನಕಮೃಗದರುಶನದ ಜಾನಕಿಯ ಚಪಲ॥**
**ಜನವವನ ನಿಂದಿಪುದು, ಕನಿಕರಿಪುದಾಕೆಯಲಿ।**
**ಮನದ ಬಗೆಯರಿಯದದು - ಮಂಕುತಿಮ್ಮ॥**

ದರುಶನದಿನಾಯ್ತು=ದರುಶನದಿ+ಆಯ್ತು, ಕನಕಮೃಗದರುಶನದೆ=ಕನಕಮೃಗ+ದರುಶನದೆ,
ಜನವವನ=ಜನವು+ಅವನ, ಕನಿಕರಿಪುದಾಕೆಯಲಿ=ಕನಿಕರಿಪುದು+ಆಕೆಯಲಿ,

ಬಗೆಯರಿಯದದು=ಬಗೆಯ+ಅರಿಯದು+ಅದು.

ಜನಕಜೆ=ಜನಕನ ಮಗಳು(ಸೀತೆ), ಕನಕಮೃಗ=ಬಂಗಾರದ ಜಿಂಕೆ(ಮಾಯಾ ಜಿಂಕೆ),

ಕನಿಕರಿಸುದು=ಕರುಣೆಯ ತೋರುವುದು. ಬಗೆಯ=ರೀತಿಯನ್ನು,

ಸೀತೆಯನ್ನು ನೋಡಿ ರಾವಣನಿಗೆ ಅವಳನ್ನು ಪಡೆಯಬೇಕೆಂಬ ಚಪಲವಾಯ್ತು, ಆದರೆ ಸೀತೆಗೆ ಬಂಗಾರದ ಜಿಂಕೆಯನ್ನು ನೋಡಿ ಅದನ್ನು ಪಡೆಯಬೇಕೆಂಬ ಚಪಲವಾಯ್ತು, ಆದರೆ ಜನರು ಸೀತೆಗೆ ಕನಿಕರ ತೋರುತ್ತಾರೆ ಮತ್ತು ರಾವಣನನ್ನು ದುಷ್ಟನೆಂದು ಜರಿಯುತ್ತಾರೆ. ಹಾಗೆ ಭಿನ್ನವಾಗಿ ಅಭಿಪ್ರಾಯಪಡುವ ಜನರು ಮನವನ್ನು ಸರಿಯಾಗಿ ಅರಿಯದೆ ಮಾತನಾಡುತ್ತಾರೆ, ಎಂದು ಜನಸಾಮಾನ್ಯರ ಮನೋಭಾವದ ವಿಶ್ಲೇಷಣೆ ಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ನಿಜವಲ್ಲದ ಆ ಕನಕ ಮೃಗವನ್ನು ಪಡೆಯುವ ಇಚ್ಛೆ ಸೀತೆಯ ಮನದಲ್ಲಿ ಬಂದದ್ದರಿಂದಲೇ ಅಲ್ಲವೇ ರಾವಣ ಆಕೆಯನ್ನು ಲಂಕೆಗೆ ಎತ್ತಿಕೊಂಡು ಹೋದದ್ದು. ಮತ್ತೆ ನಡೆದದ್ದು ರಾಮಾಯಣದ ಕಥೆ. ಇಲ್ಲಿ ಸೀತೆಯೂ ಚಪಲ ಚಿತ್ತದಿಂದ ಇಚ್ಛೆ ಪಟ್ಟಳು ಮತ್ತು ರಾವಣನೂ ಅದೇ ಚಪಲ ಚಿತ್ತದಿಂದ ಸೀತೆಯನ್ನು ಬಯಸಿದ. ಇಬ್ಬರ ಮನೋಭಾವವೂ ಒಂದೇ ಆಗಿತ್ತಲ್ಲವೆ?

ಒಂದು ವಸ್ತುವಿನ ಸುಂದರತೆಯನ್ನು ನೋಡುವ ಮತ್ತು ಅದನ್ನು ಪಡೆಯಲು ಇಚ್ಛೆಪಡುವುದು ಸಹಜವೆ. ಆದರೆ ಅದರಿಂದ ಬರುವ ಸುಖವನ್ನೋ, ದುಃಖವನ್ನೋ, ಅನುಭವಿಸಲೇಬೇಕಲ್ಲವೇ? ಹಾಗೆಯೇ, ಸೀತೆಯೂ ಅಶೋಕವನದ ವಾಸವನ್ನು ಅನುಭವಿಸಿದಳು ಮತ್ತು ರಾವಣ ರಾಮನಿಂದ ಹತನಾದ. ಆದರೆ ಜನರು ರಾವಣನನ್ನು ದುಷ್ಟನೆಂದೂ ಜರಿಯುತ್ತಾರೆ ಮತ್ತು ಸೀತೆಯನ್ನು ಕನಿಕರಿಸುತ್ತಾರೆ.

ಹೀಗೆ ಜನರು ಮಾಡುವ ವಿಶ್ಲೇಷಣೆಗೆ ವ್ಯಕ್ತಿಯ ನಿಷ್ಠೆ ಅಧಿಕವಾಗಿ ಸತ್ಯದ ಬಲವಿರುವುದಿಲ್ಲ. ಇದು ಸರ್ವೇ ಸಾಮಾನ್ಯ ನಾವು ಕಾಣುವ ಬಹುತೇಕ ವಿಷಯದಲ್ಲಿ ಸತ್ಯವಾಗಿರುತ್ತದೆ. ಜನರಿಗೆ ಒಂದು ಅಭಿಪ್ರಾಯವನ್ನು ವಹಿಸಲು ಅವರವರದೇ ಕಾರಣಗಳಿರುತ್ತದೆ. ಸತ್ಯವರಿತರೆ ಪಕ್ಷವಹಿಸುವ ಪ್ರಶ್ನೆ ಬರುವುದಿಲ್ಲ.

# ಸೃಷ್ಟಿ ಕೀಲು 384-388

**ಮುಕ್ತಕ-384**

**ಹೊಟ್ಟೆಯಲಿ ಹಸಿವು, ಮನದಲಿ ಮಮತೆ- ಈ ಯೆರಡು ।**
**ಗುಟ್ಟು ಕೀಲುಗಳಿಹವು ಸೃಷ್ಟಿಯಂತ್ರದಲಿ ॥**
**ಕಟ್ಟಿಪುವು ಕೋಟೆಗಳ, ಕೀಳಿಸುವು ತಾರೆಗಳ ।**
**ಸೊಟ್ಟಾಗಿಪುವು ನಿನ್ನ - ಮಂಕುತಿಮ್ಮ ॥**

ಕೀಲುಗಳಿಹವು=ಕೀಲುಗಳು+ಇಹವು, ಸೊಟ್ಟಾಗಿಪುವು=ಸೊಟ್ಟಗೆ+ಆಗಿಸುವು

ಕೀಲುಗಳಿಹವು=ಯಂತ್ರದ ಕೊಂಡಿಗಳು.

ಉದರದಲ್ಲಿರುವ ಹಸಿವು, ಮನಸ್ಸಿನಲ್ಲಿರುವ ಮಮತೆ ಈ ಎರಡೂ ಜಗತ್ತಿನಲ್ಲಿ ಸೃಷ್ಟಿಯಂತ್ರದ ಕೀಲುಗಳಂತೆ ಇವೆ. ಆಕಾಶಕ್ಕೆ ಏಣಿ ಹಾಕಿ ನಕ್ಷತ್ರಗಳ ಕಿತ್ತು ತರುವ ಸಾಹಸವನ್ನು ಮಾಡುವುದು ಈ ಹಸಿವು ಮತ್ತು ಮಮತೆಯ ಬಲದಿಂದ. ಈ ರೀತಿ ಮಾಡುವಾಗ, ಸಾಧ್ಯಾಸಾಧ್ಯತೆಗಳನ್ನು ಮತ್ತು ಯುಕ್ತಾಯುಕ್ತತೆಗಳನ್ನು ಅರಿಯದೆ ಏನೇನ್ನೋ ಮಾಡಲು ಹೋಗಿ ತನ್ನ ಬಾಳನ್ನು ಸೊಟ್ಟಗಾಗಿಸಿಕೊಳ್ಳುತ್ತಾನೆ ಎಂದು ಈ ಜಗತ್ತಿನಲ್ಲಿ ಮನುಷ್ಯನ ಪರಾಕ್ರಮವನ್ನು ಕುರಿತು ಉಲ್ಲೇಖಿಸುತ್ತಾರೆ ಮಾನ್ಯ ಗುಂಡಪ್ಪನವರು, ಈ ಮುಕ್ತಕದಲ್ಲಿ.

ಈ ಜಗತ್ತಿನಲ್ಲಿ ಮಾನವನ ವಿಚಾರಾಧಿಕ್ಯತೆಯಿಂದ ಅವನು ತುಳಿದ ಎಲ್ಲ ಹಾದಿಗಳಿಗೂ ಇವನಲ್ಲಿ ಅಡಕವಾಗಿರುವ ಮಹತ್ವಾಕಾಂಕ್ಷೆಯನ್ನು ಎತ್ತಿ ತೋರುತ್ತದೆ. ಈ ಮಹತ್ವಾಕಾಂಕ್ಷೆಗೆ ಇಂಬು ಕೊಟ್ಟಿದ್ದು ಅವನ ಹಸಿವು. ಎಲ್ಲವನ್ನೂ ಪಡೆಯಬೇಕೆಂಬ ಹಸಿವು ಮತ್ತು ಪಡೆದ ವಸ್ತುಗಳ ಮೇಲೆ ಅವನು ಬೆಳೆಸಿಕೊಂಡ ಮಮತೆ ಅಥವಾ ವ್ಯಾಮೋಹ. ಇವೆರಡೇ ಇವನ ಜೀವನವನ್ನು ಓಡಿಸುವ ಚಕ್ರಗಳು. ಇವನು ಕಟ್ಟಿದ ರಾಜ್ಯಗಳು, ಗೆದ್ದ ಪ್ರದೇಶಗಳು, ಸಮುದ್ರಗಳು, ಆಕಾಶ, ಕಲಿತ ಕಲೆ, ಶಾಸ್ತ್ರ, ಅರಿತ ಜ್ಞಾನ ವಿಜ್ಞಾನಗಳು ಎಲ್ಲವೂ ತನ್ನನ್ನು ಮತ್ತು ತಾನು ಕಟ್ಟಿಕೊಂಡ

ಸಮಾಜವನ್ನು ಬದಲಾಯಿಸುವ, ಸುಧಾರಿಸುವ ಮತ್ತು ಔನ್ನತ್ಯಕ್ಕೆ ಕೊಂಡುಹೋಗುವ ಇವನ ಪ್ರಯತ್ನಕ್ಕೆ ಇವನ ಮಹತ್ವಾಕಾಂಕ್ಷೆ ಮತ್ತು ಮಮತೆಗಳೇ ಕಾರಣವೆಂದರೆ ಸೂಕ್ತವಾಗುತ್ತದೆ.

ಆದರೆ ಇಷ್ಟೆಲ್ಲಾ ಸಾಧನೆಯ ದಾರಿಯಲ್ಲಿ ಸತ್ವದಿಂದ ಮತ್ತು ಸತ್ಯದಿಂದ ಮನುಷ್ಯ ದೂರ ಸರಿದುಹೋಗಿದ್ದಾನೆ. ಸ್ವಾರ್ಥ, ಅಹಂಕಾರ, ಅಸೂಯೆಗಳಿಂದ, ಇಡೀ ಜಗತ್ತನ್ನೇ ವಿನಾಶದ ಹಾದಿಗೆ ಕೊಂಡು ಹೋಗುತ್ತಿದ್ದಾನೆಂದರೆ ತಪ್ಪಗಲಾರದು. ಎಲ್ಲೋ ಒಂದಿಷ್ಟು ಜನ ಸತ್ಪುರುಷರು ಇರಬಹುದು. ಅವರ ಹಸಿವು ಮತ್ತು ಮಮತೆಗಳು, ಈ ಜಗತ್ತಿಗೆ ಇನ್ನೂ ಸುಂದರ ಭವಿಷ್ಯವಿದೆ ಎಂದು ಸಾರಬಹುದು. ಆದರೆ ಬಹುತೇಕ ನೈತಿಕ ಮೌಲ್ಯಗಳ ಪತನವಾಗಿರುವುದು ಸರ್ವ ವೇದ್ಯ. ಇದನ್ನೇ ಮಾನ್ಯ ಗುಂಡಪ್ಪನವರು " ಸೊಟ್ಟಾಗಿಪುವು ನಿನ್ನ" ಎಂದಿದ್ದಾರೆ. ಹಸಿವಿನ ರೂಪದಲ್ಲಿರುವ ನಮ್ಮ ದೈಹಿಕ ಮಾನಸಿಕ ಮತ್ತು ಬೌದ್ಧಿಕ ಆಸೆ ಆಕಾಂಕ್ಷೆಗಳು ಮತ್ತು ಮಮತೆ ಮಮಕಾರಗಳನ್ನು, ನಾವಿರುವ ಸಮಾಜವೂ ಸೇರಿದಂತೆ ಒಟ್ಟು ಜಗತ್ತನ್ನು ಸುಂದರವಾಗಿಸಲು, ನಾವು





ಉಪಯೋಗಿಸಿದರೆ, ಬಹುಶಃ ಮುಂದಿನ ಪೀಳಿಗೆಗಳೂ ಒಂದು ಶಾಂತ ಮತ್ತು ಸುಂದರ ಜಗತ್ತಿನಲ್ಲಿ ಬದುಕುವಂತಾಗಬಹುದು.

**ಮುಕ್ತಕ-385**

**ದಾಸರೋ ನಾವೆಲ್ಲ ಶುನಕನಂದದಿ ಜಗದ।**
**ವಾಸನೆಗಳೆಳೆತಕ್ಕೆ ದಿಕ್ಕುದಿಕ್ಕಿನಲಿ॥**
**ಪಾಶಗಳು ಹೊರಗೆ, ಕೊಂಡಿಗಳು ನಮ್ಮೊಳಗಿಹವು।**
**ವಾಸನಾಕ್ಷಯ ಮೋಕ್ಷ - ಮಂಕುತಿಮ್ಮ॥**

ವಾಸನೆಗಳೆಳೆತಕ್ಕೆ=ವಾಸನೆಗಳ+ಎಳೆತಕ್ಕೆ, ನಮ್ಮೊಳಗಿಹವು=ನಮ್ಮೊಳಗೆ+ಇಹವು,

ವಾಸನಾಕ್ಷಯ=ವಾಸನಾ+ಕ್ಷಯ

ದಾಸ=ಗುಲಾಮ, ವಾಸನಾ=ಇಂದ್ರಿಯಾಕರ್ಷಿತ ಆಸೆಗಳು, ಕ್ಷಯ=ನಶಿಸುವುದು.

ಹೇಗೆ ನಾಯಿಯು ಕೇವಲ ವಾಸನೆಯಿಂದ ವ್ಯಕ್ತಿ ಮತ್ತು ವಸ್ತುಗಳನ್ನು ಗುರುತು ಹಿಡಿಯುತ್ತದೆಯೋ ಹಾಗೆಯೇ ನಾವೆಲ್ಲಾ ಈ ಜಗತ್ತಿನ ಸಕಲ ದಿಕ್ಕುಗಳಲ್ಲಿರುವ ವಾಸನೆಗಳಿಂದ ಸೆಳೆಯಲ್ಪಡುತ್ತೇವೆ. ಸೆಳೆತಗಳು ಹೊರಗಿವೆ ಮತ್ತು ಅವುಗಳೊಂದಿಗೆ ಸೇರಿಕೊಳ್ಳಲು ಆಸೆಗಳೆಂಬ ಕೊಂಡಿಗಳು ನಮ್ಮ ಮನಸ್ಸಿನಲ್ಲಿವೆ. ಈ ಆಸೆಗಳು ಮತ್ತು ಆಶಾ ಪ್ರೇರಿತವಾದ ಸೆಳೆತಗಳು, ನಮ್ಮಲ್ಲಿ ಎಂದು ಸಂಪೂರ್ಣ ನಾಶವಾಗುವುದೋ, ಅಂದೇ ನಮಗೆ ಮುಕ್ತಿ ಎಂದು ಉಲ್ಲೇಖಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

"ದೃಷ್ಯಮಾಣೆ ಭವೇತ್ ಪ್ರೀತಿಃ" ಎಂದರೆ ವಸ್ತು, ವಿಷಯ ಮತ್ತು ವ್ಯಕ್ತಿಗಳನ್ನು ನೋಡಿದಾಗ ನಮ್ಮ ಮನಸ್ಸಲ್ಲಿ ಆ ಕ್ಷಣವೇ ಅವುಗಳಲ್ಲಿ ಪ್ರೀತಿ ಉಂಟಾಗುತ್ತದೆ. ಹಾಗೆ ಉಂಟಾದಪ್ರೀತಿಯಿಂದ ಅವುಗಳನ್ನು ಪಡೆಯಬೇಕೆಂಬ ಆಸೆ ಮೂಡಿಸುತ್ತದೆ. ತತ್ಕಾರಣವಾಗಿ ನಮ್ಮ ಪ್ರಯತ್ನ ನಡೆದು ನಾವು ಬಂಧನಕ್ಕೆ ಸಿಕ್ಕಿಕೊಳ್ಳುತ್ತೇವೆ ಮತ್ತು ತೊಳಲಾಡುತ್ತೇವೆ

ವಸ್ತು, ವಿಷಯ, ವ್ಯಕ್ತಿಗಳು, ತಮ್ಮಷ್ಟಕ್ಕೆ ತಾವು ಇರುತ್ತವೆ. ಮನಸ್ಸಿನ ಆಸೆಯಿಂದಾಗಿ ನಾವು ಅವುಗಳಲ್ಲಿ ಮೋಹಗೊಳ್ಳುತ್ತೇವೆ. ಮೋಹದಿಂದ ಅವುಗಳನ್ನು ಹಿಡಿದುಕೊಳ್ಳುತ್ತೇವೆ. ಇದು ನಮ್ಮ ಪ್ರಯತ್ನದಿಂದ ಆಗಿದ್ದಾದ್ದರಿಂದ, ಅದರಿಂದ ಬರುವ ಸುಖ ಮತ್ತು ದುಃಖಗಳನ್ನು ನಾವೇ ಅನುಭವಿಸಬೇಕಲ್ಲವೇ? ಅನ್ಯ ದಾರಿಯಿಲ್ಲ. ಇಂತಹದ್ದರಿಂದಲೇ ನಮಗೆ ಆಸೆಯುಂಟಾಗುತ್ತದೆ ಎಂದು ಹೇಳಲಾಗುವುದಿಲ್ಲ. ಯಾವುದೇ ವಸ್ತುವಿನಿಂದಲೂ ನಾವು ಆಕರ್ಷಿತರಾಗಬಹುದು ಮತ್ತು ಮೋಹಿತರಾಗಬಹುದು ಅಥವಾ ಆಗದೆಯೂ ಇರಬಹುದು. ನಮ್ಮೆಲ್ಲ ಕಷ್ಟ ಕಾರ್ಪಣ್ಯ ಮತ್ತು ಸುಖ ಸಂತೋಷಗಳಿಗೆ, ಈ ಇಂದ್ರಿಯ ಜನಿತವಾದ ವಾಸನೆ, ಮತ್ತು ಅದರಿಂದ ಪ್ರೇರಿತವಾದ ಆಸೆ ಅಥವಾ ಮೋಹವೇ ಕಾರಣ.

'ವಾಸನಾಕ್ಷಯ ಮೋಕ್ಷ' ಎನ್ನುತ್ತಾರೆ ಮಾನ್ಯ ಗುಂಡಪ್ಪನವರು. ಎಂದರೆ, ಎಂದು ನಮಗೆ ಈ ವಾಸನೆಗಳು ಇಲ್ಲದಂತಾಗುತ್ತದೋ, ಅಂದು ನಾವು ಈ ಪ್ರಾಪಂಚಿಕ ಬಂಧನಗಳಿಂದ ಮುಕ್ತರಾಗಬಹುದು ಎಂದು ಹೇಳುತ್ತಾರೆ. ಇದು ಸತ್ಯ. ಆದರೆ ಅಂತಹ ಸ್ಥಿತಿಗೆ ತಲುಪಲು ಸಾಧನೆ ಮುಖ್ಯ. ಸದ್ವಿಚಾರಗಳ, ಸತ್ಸಂಗದಿಂದ, ಸತ್ಯದ ಮತ್ತು ಸತ್ವದ ಅರಿವಿನಿಂದ, ಮೋಹದ ಪಾಶಗಳಿಂದ ಮುಕ್ತರಾಗಬಹುದು. ಹಾಗಾದಾಗ ಸತ್ ಚಿತ್ ಆನಂದ ನಮ್ಮದಾಗುತ್ತದೆ.

**ಮುಕ್ತಕ-386**

**ಹೃದಯದಬ್ಬರವೇನು ಹೊಟ್ಟೆಯುಬ್ಬರದಂತೆ ।**
**ಅದರಿಳಿತ ಕೊರಳ ನಾಳದ ಸದ್ದಿನಿಂದ ॥**
**ಅದೇ ನಗುವು ದುಗುಡಗಳು, ಅದೆ ಹೊಗಳು ತೆಗಳುಗಳು ।**
**ಅದನಿಳಿಸೆ ಶಾಂತಿಯ - ಮಂಕುತಿಮ್ಮ ॥**

ಹೃದಯದಬ್ಬರವೇನು=ಹೃದಯದ+ಅಬ್ಬರವು+ಏನು, ಹೊಟ್ಟೆಯುಬ್ಬರದಂತೆ=ಹೊಟ್ಟೆಯ+ಉಬ್ಬರದಂತೆ,
ಅದರಿಳಿತ=ಅದರ+ಇಳಿತ, ಅದನಿಳಿಸೆ=ಅದನು+ಇಳಿಸೆ.
ಅಬ್ಬರವು=ಹಾರಾಟ, ದುಗುಡ=ದುಃಖ.

ಹೊಟ್ಟೆಯು ಹಸಿವಿನಿಂದ ಪರದಾಡುವಂತೆ, ಭಾವನೆಯ ಹಸಿವಿನಿಂದ ಹೃದಯವೂ, ಮನಸ್ಸ ಪರದಾಡುತ್ತದೆ. ಆಹಾರವು ಕೊರಳ ನಾಳದಿಂದ ಒಳಹೊಕ್ಕಂತೆ ಹೃದಯದ ಅಬ್ಬರವೂ ಸಹ ಕೊರಳ ನಾಳದಿಂದಲೇ, ನಗು, ಕೋಪ, ಹೊಗಳಿಕೆ, ತೆಗಳಿಕೆ ಮುಂತಾದವುಗಳಾಗಿ ಒಳ ಹೊಕ್ಕು, ಹೊರ ಹೊಮ್ಮುತ್ತದೆ. ಈ ಎಲ್ಲ ರೀತಿಯ ಭಾವಗಳ ಶಮನದಿಂದಲೇ ಮನಸ್ಸಿಗೆ ಶಾಂತಿ ಸಿಗುತ್ತದೆ ಎಂದು ಉಲ್ಲೇಖಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ನಮ್ಮ ದೇಹ ಧಾರಣೆಗೆ ಹೇಗೆ ಆಹಾರವು ಅಗತ್ಯವೋ ಹಾಗೆಯೇ ಹೃದಯ ಮತ್ತು ಮನಸ್ಸುಗಳಿಗೆ ಭಾವನೆಗಳೆಂಬ ಆಹಾರ ಅತ್ಯಗತ್ಯ. ಅವರವರ ಮನೋಭಾವಕ್ಕೆ ತಕ್ಕಂತೆ ಎಲ್ಲರ ಭಾವನೆಗಳೂ ಇರುತ್ತವೆ. ಆಹಾರದಲ್ಲಿ ಎಷ್ಟು ವೈವಿಧ್ಯತೆ ಇದೆಯೋ ಅಷ್ಟಕ್ಕಿಂತ ಸಾವಿರಪಟ್ಟು ಭಾವ ವೈವಿಧ್ಯತೆ ಉಂಟು. ಹೇಗೆ ಎಷ್ಟೋ ಬಾರಿ

ನಾವು ಜೀರ್ಣವಾಗದ, ಆರೋಗ್ಯಕ್ಕೆ ಹಿತವಲ್ಲದ ಆಹಾರವನ್ನು ಸೇವಿಸುವಂತೆ, ಮನಸ್ಸು ಬುದ್ಧಿಗಳಿಗೆ ಹಾನಿಯುಂಟು ಮಾಡುವ ವಿಚಾರಗಳು ಭಾವನೆಗಳು ನಮ್ಮ ಮನಸ್ಸಿನೊಳಕ್ಕೆ ನುಗ್ಗುತ್ತವೆ, ಬಂದು ಹೋಗುತ್ತದೆ, ತನ್ನ ಪರಿಣಾಮ ಬೀರಿ ಸ್ಥಾಯೀಯಾಗಿ ನಮ್ಮ ಮನಸಿನಲ್ಲೇ ಉಳಿದು ಆಗಾಗ ಮೇಲೆದ್ದು ಪ್ರಕಟಗೊಳ್ಳುತ್ತಾ ಇರುತ್ತವೆ.

ನಮ್ಮ ನಗು, ಆನಂದ, ಸಂತೋಷ, ಕೋಪ, ದ್ವೇಷ, ದುಗುಡ, ದುಮ್ಮಾನ, ಅಸೂಯೆಯಂತಹ ಭಾವಗಳೆಲ್ಲ ನಮ್ಮ ಕೊರಳಿಂದ ನಮ್ಮೊಳಗೆ ಇಳಿದು, ಕೊರಳೊಳಗಿಂದಲೇ ಹೊರ ಹೊಮ್ಮುತ್ತದೆ. ಹಾಗೆ ಬಂದು ಹೋಗುವ





ಭಾವಗಳೇ ನಮ್ಮ ವ್ಯಕ್ತಿತ್ವವನ್ನು ರೂಪಿಸುತ್ತವೆ. ನಮ್ಮ ಭಾವನೆಗಳು ಹೇಗಿರುತ್ತವೆಯೋ ಹಾಗೆ ನಮ್ಮ ನಡವಳಿಕೆಯಿರುತ್ತದೆ. ಕಾಲಕಾಲಕ್ಕೆ ಬದಲಾಗುವ ನಮ್ಮ ವಿಚಾರಗಳು ಮತ್ತು ತದನುಗುಣವಾಗಿ ಬದಲಾಗುವ ಭಾವನೆಗಳಿಂದ ನಮ್ಮ ವ್ಯಕ್ತಿತ್ವ ಬದಲಾಗುತ್ತಾ ಹೋಗುತ್ತದೆ. ಈ ವಿಚಾರಗಳೆಲ್ಲ ನಮ್ಮನ್ನು ಶಾಂತವಾಗಿರಲು ಬಿಡುವುದಿಲ್ಲ.

ಮನಸ್ಸು ಬುದ್ಧಿಗಳಿಂದ ಶಾಂತ ಸ್ಥಿತಿಗೆ ತಲುಪಬೇಕಾದರೆ ಈ ರೀತಿ ನಮ್ಮನ್ನು ವಿಚಲಿತಗೊಳಿಸುವ ಭಾವನೆಗಳನ್ನು ಕಸ ಗುಡಿಸಿದಂತೆ ಮನದಿಂದ ಹೊರಹಾಕಬೇಕು ಮತ್ತು ಶುದ್ಧ ಮತ್ತು ಶಾಂತ ವಿಚಾರಗಳನ್ನು ಮಾತ್ರ

ಒಳಬರಮಾಡಿಕೊಳ್ಳುವ ಪ್ರಯತ್ನ ಮಾಡಬೇಕು. ಆಗ ನಾವು ಶಾಂತರಾಗಬಹುದು. ಜಗತ್ತಿನಲ್ಲಿ ನಾವಿರುವಾಗ ಅದರಿಂದ ದೂರ ಸರಿಯಲು ಸಾಧ್ಯವಿಲ್ಲ. ಇಲ್ಲಿ ಇದ್ದೇ ಆ ರೀತಿಯ ಮನಃಶಾಂತಿಯನ್ನು ಪಡೆಯಲಾದರೆ ಅದೇ ದೊಡ್ಡ ಸಾಧನೆ.

**ಮುಕ್ತಕ -387**

**ರದನೋದಯಜ್ವರಕ್ಕೆ ಸಿಲುಕದಿಹ ಶಿಶುವಿರದು।**
**ವಿಧಿಯೊದೆಗೆ ಸಿಕ್ಕದಿಹ ನರಜಂತುವಿರದು॥**
**ಒದೆಪೆಟ್ಟು ಮುಗಿದಂದು ರಾಹುದಂಷ್ಟ್ರದೆ ಹೊರಟ।**
**ವಿಧುಬಿಂಬವೋ ನೀನು ಮಂಕುತಿಮ್ಮ॥**

ರದನೋದಯಜ್ವರಕ್ಕೆ=ರದನ+ಉದಯ+ಜ್ವರಕ್ಕೆ,
ಸಿಲುಕದಿಹ=ಸಿಲುಕದೆ+ಇಹ,ಶಿಶುವಿರದು=ಶಿಶುವು+ಇರದು, ವಿಧಿಯೊದೆಗೆ+ವಿಧಿಯ+ಒದೆಗೆ,
ಸಿಕ್ಕದಿಹ=ಸಿಕ್ಕದೆ+ಇಹ, ನರಜಂತುವಿರದು+ನರಜಂತುವು+ಇರದು, ಮುಗಿದಂದು=ಮುಗಿದ+ಅಂದು.
ರದನ=ದಂತ, ಹಲ್ಲು, ರಾಹುದಂಷ್ಟ್ರ=ರಾಹುವಿನ ಹಿಡಿತ.

ಪುರಾಣದಲ್ಲಿ ಸಮುದ್ರ ಮಂಥನವಾಗಿ ಅಮೃತದ ವಿತರಣೆಯ ಸಮಯದಲ್ಲಿ, ಮಾರುವೇಷದಲ್ಲಿ ಅಮೃತವನ್ನು ಕುಡಿಯಲು ಬಂದ ರಾಹು ಮತ್ತು ಕೇತುವಿನ ಕತ್ತನ್ನು ಶ್ರೀಹರಿಯು ಕತ್ತರಿಸಲು, ಕೋಪಗೊಂಡ ಅವರು ಸೂರ್ಯ, ಚಂದ್ರರನ್ನು ಆಗಾಗ ನುಂಗುವರೆಂದೂ, ಅದೇ ಸೂರ್ಯ, ಚಂದ್ರ ಗ್ರಹಣವೆಂದು ಒಂದು ನಂಬಿಕೆ, ಹಾಗೆ ಗ್ರಹಣದ ನಂತರ ಹೊರಬಂದ ಸೂರ್ಯ ಚಂದ್ರರು ಮತ್ತೆ ಅಧಿಕ ತೇಜೋಮಯರಾಗುತ್ತಾರೆಂಬ ವಿಷಯ ಇಲ್ಲಿ ಪ್ರಸ್ತಾಪವಾಗಿದೆ.

ಪ್ರತೀ ಶಿಶುವಿಗೂ ಒಸಡನ್ನು ಸೀಳಿಕೊಂಡು ಹಲ್ಲು ಮೊಳೆಯುವಾಗ ಜ್ವರ ಬರುತ್ತದೆ. ಪೂರ್ಣ ಹಲ್ಲು ಬಂದಾಗ ಆ ಜ್ವರ ಕಡಿಮೆಯಾಗುತ್ತದೆ. ಹಾಗೆಯೇ ವಿಧಿ ಹೊರೆಸಿದ ನಮ್ಮ ಕರ್ಮಗಳನ್ನು ಅನುಭವಿಸಿ ಹೊರಬಂದಾಗ, ಗ್ರಹಣ ಮುಕ್ತರಾಗಿ ಅಧಿಕ ದೀಪ್ತಿಯಿಂದ ಪ್ರಜ್ವಲಿಸುವ ಸೂರ್ಯ ಚಂದ್ರರಂತೆ, ನಮ್ಮ ಉತ್ಸಾಹವೂ ಅಧಿಕವಾಗುತ್ತದೆ ಎಂದು ಉಲ್ಲೇಖಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಅನುಭವಗಳ ಒಳ ಹೊಗುವುದು, ಅನುಭವಿಸಿ ಹೊರಬರುವುದು ನಮಗೆ ವಿಧಿ ಹೊರೆಸಿದ ಹೊರೆ. ಅದನ್ನನುಭವಿಸದ ಹೊರತು ನಮಗೆ ಅನ್ಯ ದಾರಿಯಿಲ್ಲ. ಹಾಗೆ ಅನುಭವದ ಮೂಸೆಯಿಂದ ಹೊರಬಂದಾಗ ನಾವು ಅನುಭವಿಗಳಾಗಿ, ಜೀವನದ ಪಾಠ ಕಲಿತು ಹೆಚ್ಚು ಬುದ್ಧಿವಂತರಾಗುತ್ತೇವೆ, ಸಾಮಾನ್ಯವಾಗಿ, ಹಾಗೆಯೇ ಆಗಬೇಕು. ಹಾಗೆ, ಅನುಭವದಿಂದ ಪಾಠ ಕಲಿತರೆ ಒಳ್ಳೆಯದು.

ಆದರೆ ನಮಗೆಷ್ಟು ಅನುಭವವಾದರೂ ಹಲವು ಬಾರಿ ಆ ಅನುಭವದಿಂದ ಏನನ್ನೂ ಕಲಿಯದೇ ಮತ್ತೆ ಮತ್ತೆ ಮಾಡಿದ ತಪ್ಪನ್ನೇ, ಮಾಡುತ್ತೇವೆ. ಹಾಗಾಗದೆ ಮನಸ್ಸು ಬುದ್ಧಿಗಳು, ಅನುಭವದ ಪಾಠದಿಂದ ಪಕ್ವವಾಗಿ ನಾವು ಮತ್ತಷ್ಟು ಪ್ರಾಜ್ಞರಾಗಬೇಕು ಎಂದು ನಾವು ಆ ಮಟ್ಟಕ್ಕೆ ತಲುಪುತ್ತೇವೋ, ಅಂದು ಜೀವನ ಹೆಚ್ಚು ಶಾಂತವಾಗಬಹುದು ಮತ್ತು ಆನಂದ ನಮ್ಮದಾಗಬಹುದು.

**ಮುಕ್ತಕ - 388**

**ದೇಹಾತುಮಂಗಳೆರಡಂಗಗಳು ಜೀವನಕೆ।**
**ನೇಹದಿಂದೊಂದನೊಂದಾದರಿಸೆ ಲೇಸು ||**
**ದಾಹಗೊಂಡಿರಲೊಂದು ಮಿಕ್ಕೊಂದಕೆಲ್ಲಿ ಸುಖ।**
**ದ್ರೋಹ ಬೇಡೊಂದಕಂ – ಮಂಕುತಿಮ ||**

ದೇಹಾತುಮಂಗಳೆರಡಂಗಗಳು=ದೇಹ+ಆತುಮಂಗಳು+ಎರಡು+ಅಂಗಗಳು,

ನೇಹದಿಂದೊಂದನೊಂದಾದರಿಸೆ=ನೇಹದಿಂದ+ಒಂದನು+ಒಂದು+ಆದರಿಸೆ,

ದಾಹಗೊಂಡಿರಲೊಂದು=ದಾಹಗೊಂಡಿರಲು+ಒಂದು, ಮಿಕ್ಕೊಂದಕೆಲ್ಲಿ=ಮಿಕ್ಕ+ಒಂದಕೆ+ಎಲ್ಲಿ,

ಬೇಡೊಂದಕಂ=ಬೇಡ+ಒಂದಕಂ,

ಲೇಸು=ಮೇಲು, ಒಳ್ಳೆಯದು, ದ್ರೋಹ ಮೋಸ.

ನಮ್ಮ ಜೀವನಕೆ ದೇಹ ಮತ್ತು ಅತ್ಮಗಳೆರಡು ಅಂಗಗಳು. ಅವರೆಡೂ ಪರಸ್ಪರ ಸ್ನೇಹದಿಂದ ಇದ್ದರೆ ಒಳ್ಳೆಯದು. ಒಂದು ತನ್ನದೇ ಅವಶ್ಯಕತೆಗಳ ದಾಹದಲ್ಲಿ ಮುಳುಗಿಬಿಟ್ಟರೆ ಮತ್ತೊಂದಕ್ಕೆ ಸುಖವಿರುವುದಿಲ್ಲ. ಸಮತೋಲನವನ್ನು ಕಾಯುವ ಸಲುವಾಗಿ ಒಂದಕ್ಕೊಂದು ದ್ರೋಹಮಾಡಿಕೊಳ್ಳಬಾರದು ಎಂದು ದೇಹಾತ್ಮ ಸಂಬಂಧದ ಗಹನ ವಿಚಾರವನ್ನು ಪ್ರಸ್ತಾಪಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಆತ್ಮದ ಉದ್ಧಾರಕ್ಕೆ ದೇಹವೇ ಮುಖ್ಯ ಉಪಕರಣ (ಟೂಲ್). ದೇಹವಿಲ್ಲದಿದ್ದರೆ ಆತ್ಮಕ್ಕೆ ಮುಕ್ತಿಯೇ ಇಲ್ಲ. ಆತ್ಮ ಇಂದ್ರಿಯಾತೀತವಾದದ್ದು. ಆದರೆ ದೇಹ ಇಂದ್ರಿಯ ಪ್ರೇರಿತವಾದದ್ದು, ಒಂದರ ಸೆಳೆತ ಮತ್ತೊಂದರ ಸೆಳೆತ ಬೇರೆ ಬೇರೆ ಮತ್ತು ತೀರ ವಿರುದ್ಧವಾದದ್ದು, ಆತ್ಮ ತನ್ನ ಮೂಲ ಸೇರುವ ಪ್ರಯಾಣದಲ್ಲಿ ತಾನು ಹೊತ್ತು ತಂದ ಪೂರ್ವ ಕರ್ಮಗಳನ್ನು ದೇಹದ ಮೂಲಕವೇ ನೀಗಿಕೊಳ್ಳಬೇಕು. ಆದರೆ ಪಂಚಭೂತಗಳಿಂದಾದ ದೇಹ ಇಂದ್ರಿಯ ಸುಖಗಳನ್ನೇ ಬಯಸುತ್ತಾ ಆದರಲ್ಲೇ ಮುಳುಗಿಬಿಟ್ಟರೆ ಅನ್ನೋದ್ದಾರದ ಮಾತು ಹಿಂದೆ ಸರಿದು ಆತ್ಮ ಸೊರಗುತ್ತದೆ. 'ರಿಪೇರಿಯಾಗದ ಬಸ್ಸಿನಲ್ಲಿ ಕುಳಿತ ಪ್ರಯಾಣಿಕನಂತೆ.

(224)

ಸೃಷ್ಟಿ ಕೀಲು 384-388 ಕಗ್ಗ ರಸಧಾರೆ-2

ಅನುಭವಗಳ ಒಳ ಹೊಗುವುದು, ಅನುಭವಿಸಿ ಹೊರಬರುವುದು ನಮಗೆ ವಿಧಿ ಹೊರೆಸಿದ ಹೊರೆ. ಅದನ್ನನುಭವಿಸದ ಹೊರತು ನಮಗೆ ಅನ್ಯ ದಾರಿಯಿಲ್ಲ. ಹಾಗೆ ಅನುಭವದ ಮೂಸೆಯಿಂದ ಹೊರಬಂದಾಗ ನಾವು ಅನುಭವಿಗಳಾಗಿ, ಜೀವನದ ಪಾಠ ಕಲಿತು ಹೆಚ್ಚು ಬುದ್ಧಿವಂತರಾಗುತ್ತೇವೆ, ಸಾಮಾನ್ಯವಾಗಿ, ಹಾಗೆಯೇ ಆಗಬೇಕು. ಹಾಗೆ, ಅನುಭವದಿಂದ ಪಾಠ ಕಲಿತರೆ ಒಳ್ಳೆಯದು.

ಆದರೆ ನಮಗೆಷ್ಟು ಅನುಭವವಾದರೂ ಹಲವು ಬಾರಿ ಆ ಅನುಭವದಿಂದ ಏನನ್ನೂ ಕಲಿಯದೇ ಮತ್ತೆ ಮತ್ತೆ ಮಾಡಿದ ತಪ್ಪನ್ನೇ, ಮಾಡುತ್ತೇವೆ. ಹಾಗಾಗದೆ ಮನಸ್ಸು ಬುದ್ಧಿಗಳು, ಅನುಭವದ ಪಾಠದಿಂದ ಪಕ್ವವಾಗಿ ನಾವು

ಮತ್ತಷ್ಟು ಪ್ರಾಜ್ಞರಾಗಬೇಕು ಎಂದು ನಾವು ಆ ಮಟ್ಟಕ್ಕೆ ತಲುಪುತ್ತೇವೋ, ಅಂದು ಜೀವನ ಹೆಚ್ಚು ಶಾಂತವಾಗಬಹುದು ಮತ್ತು ಆನಂದ ನಮ್ಮದಾಗಬಹುದು.

**ಮುಕ್ತಕ - 388** **ದೇಹಾತುಮಂಗಳೆರಡಂಗಗಳು ಜೀವನಕೆ।**
**ನೇಹದಿಂದೊಂದನೊಂದಾದರಿಸೆ ಲೇಸು॥**
**ದಾಹಗೊಂಡಿರಲೊಂದು ಮಿಕ್ಕೊಂದಕೆಲ್ಲಿ ಸುಖ।**
**ದ್ರೋಹ ಬೇಡೊಂದಕಂ – ಮಂಕುತಿಮ್ಮ॥**

ದೇಹಾತುಮಂಗಳೆರಡಂಗಗಳು=ದೇಹ+ಆತುಮಂಗಳು+ಎರಡು+ಅಂಗಗಳು,
ನೇಹದಿಂದೊಂದನೊಂದಾದರಿಸೆ=ನೇಹದಿಂದ+ಒಂದನು+ಒಂದು+ಆದರಿಸೆ,
ದಾಹಗೊಂಡಿರಲೊಂದು=ದಾಹಗೊಂಡಿರಲು+ಒಂದು, ಮಿಕ್ಕೊಂದಕೆಲ್ಲಿ=ಮಿಕ್ಕ+ಒಂದಕೆ+ಎಲ್ಲಿ,
ಬೇಡೊಂದಕಂ=ಬೇಡ+ಒಂದಕಂ,
ಲೇಸು=ಮೇಲು, ಒಳ್ಳೆಯದು, ದ್ರೋಹ ಮೋಸ.

ನಮ್ಮ ಜೀವನಕೆ ದೇಹ ಮತ್ತು ಅತ್ಮಗಳೆರಡು ಅಂಗಗಳು. ಅವರೆಡೂ ಪರಸ್ಪರ ಸ್ನೇಹದಿಂದ ಇದ್ದರೆ ಒಳ್ಳೆಯದು. ಒಂದು ತನ್ನದೇ ಅವಶ್ಯಕತೆಗಳ ದಾಹದಲ್ಲಿ ಮುಳುಗಿಬಿಟ್ಟರೆ ಮತ್ತೊಂದಕ್ಕೆ ಸುಖವಿರುವುದಿಲ್ಲ. ಸಮತೋಲನವನ್ನು ಕಾಯುವ ಸಲುವಾಗಿ ಒಂದಕ್ಕೊಂದು ದ್ರೋಹಮಾಡಿಕೊಳ್ಳಬಾರದು ಎಂದು ದೇಹಾತ್ಮ ಸಂಬಂಧದ ಗಹನ ವಿಚಾರವನ್ನು ಪ್ರಸ್ತಾಪಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಆತ್ಮದ ಉದ್ಧಾರಕ್ಕೆ ದೇಹವೇ ಮುಖ್ಯ ಉಪಕರಣ (ಟೂಲ್). ದೇಹವಿಲ್ಲದಿದ್ದರೆ ಆತ್ಮಕ್ಕೆ ಮುಕ್ತಿಯೇ ಇಲ್ಲ. ಆತ್ಮ ಇಂದ್ರಿಯಾತೀತವಾದದ್ದು. ಆದರೆ ದೇಹ ಇಂದ್ರಿಯ ಪ್ರೇರಿತವಾದದ್ದು, ಒಂದರ ಸೆಳೆತ ಮತ್ತೊಂದರ ಸೆಳೆತ ಬೇರೆ ಬೇರೆ ಮತ್ತು ತೀರ ವಿರುದ್ಧವಾದದ್ದು, ಆತ್ಮ ತನ್ನ ಮೂಲ ಸೇರುವ ಪ್ರಯಾಣದಲ್ಲಿ ತಾನು ಹೊತ್ತು ತಂದ ಪೂರ್ವ ಕರ್ಮಗಳನ್ನು ದೇಹದ ಮೂಲಕವೇ ನೀಗಿಕೊಳ್ಳಬೇಕು. ಆದರೆ ಪಂಚಭೂತಗಳಿಂದಾದ ದೇಹ ಇಂದ್ರಿಯ ಸುಖಗಳನ್ನೇ ಬಯಸುತ್ತಾ ಆದರಲ್ಲೇ ಮುಳುಗಿಬಿಟ್ಟರೆ ಅನ್ನೋದ್ಧಾರದ ಮಾತು ಹಿಂದೆ ಸರಿದು ಆತ್ಮ ಸೊರಗುತ್ತದೆ. 'ರಿಪೇರಿಯಾಗದ ಬಸ್ಸಿನಲ್ಲಿ ಕುಳಿತ ಪ್ರಯಾಣಿಕನಂತೆ.

ರಥಂ ವಿದ್ಧಿ, ಎಂದು ಹೇಳಿ 'ಈ ದೇಹವನ್ನು ರಥವೆಂದು ತಿಳಿ' ಎಂದ ಶ್ರೀ ಕೃಷ್ಣ ರಥದಲ್ಲಿ ಕುಳಿತ ಯಜಮಾನನೇ ಆತ್ಮ, ಸಾರಥಿಯೇ ಬುದ್ಧಿ ಲಗಾಮೇ ಮನಸ್ಸು ಮತ್ತು ಓಡುವ ಕುದುರೆಗಳೇ ಅರಿಷಡ್ವರ್ಗಗಳು. ಎಲ್ಲಿಯ ತನಕ ಓಡುವ ಕುದುರೆಗಳು ಲಗಾಮಿನ ಮೂಲಕ ಸಾರಥಿಯ ಹಿಡಿತದಲ್ಲಿರುತ್ತವೆಯೋ ಅಲ್ಲಿಯ ತನಕ ಯಜಮಾನನ ಪ್ರಯಾಣ ಗಮ್ಯವನ್ನು ಸೇರುತ್ತದೆ. ಅದಲ್ಲದೆ ಸಾರಥಿಯ ಹಿಡಿತ ತಪ್ಪಿದರೆ ಎಡ್ಡಾದಿಡ್ಡಿ ಪ್ರಯಾಣವಾಗಿ ಪ್ರಯಾಣಕ್ಕೆ ಹೊರಟ ಯಜಮಾನ ಸೊರಗುತ್ತಾನೆ.

ಹಾಗೆಂದು ದೇಹಕ್ಕೆ ಪ್ರಾಮುಖ್ಯತೆ ನೀಡಬಾರದು ಎಂದಲ್ಲ, ನೀಡಬೇಕು. ಅದು ಕೇವಲ ದೇಹವನ್ನು ಸುಸ್ಥಿತಿಯಲ್ಲಿ ಇಡಲಷ್ಟೇ ಆಗಬೇಕು. ಆರೋಗ್ಯವನ್ನು ಕಾಪಾಡಿ ದೇಹ ಸುಸ್ಥಿತಿಯಲ್ಲಿದ್ದರೆ, ಮನಸ್ಸು ಬುದ್ಧಿಗಳೂ ಸಹ ಸುಸ್ಥಿತಿಯಲ್ಲಿರುತ್ತವೆ. ಇಂದ್ರಿಯಾಕರ್ಷಣೆಗಳಿಂದ ಕೂಡಿದ ಪ್ರಪಂಚದ ಸೆಳೆತಗಳಿಗೆ ಬಲಿಯಾಗದೆ, ಇರುವ ವಾಸನೆಗಳನ್ನು ದೇಹದ ಮೂಲಕವೇ ಕಳೆದುಕೊಂಡು, ಮತ್ತಷ್ಟನ್ನು ಅಂಟಿಸಿಕೊಳ್ಳದೆ ರಾಕೆಟ್ ತಾನು ಹೊತ್ತುತಂದ ಉಪಗ್ರಹವನ್ನು, ತಾನು ಸುಟ್ಟು ಧರೆಗುದುರಿದರೂ, ಆಕಾಶದಲ್ಲಿ ಅದರ ಗಮ್ಯ ಸೇರಿಸುವಂತೆ, ದೇಹ ಆತ್ಮದ ಊರ್ಧ್ವಗತಿ ಪ್ರಯಾಣಕ್ಕೆ ಪೂರಕವಾಗಬೇಕೇ ಹೊರತು ತೊಡಕಾಗಬಾರದು, ಎನ್ನವುದೇ ಈ ಮುಕ್ತಕದ ಹೂರಣ.

# ಸಾಪೇಕ್ಷ ಸತ್ಯ 389-393

**ಮುಕ್ತಕ - 389**

**ಕಾಯವನು ಮೃದ್ಭಾಂಡ ಮಾಂಸಪಿಂಡವೆನ್ನುತ್ತೆ |**
**ಹೇಯವೆಂದೆಂದೊಡಾತ್ಮಂಗಪ್ಪುದೇನು ||**
**ಆಯುಧವದನು ತೊರೆದಾತ್ಮನೇಂಗೈದವನು |**
**ನ್ಯಾಯ ತನುವಿಗಿರಲಿ - ಮಂಕುತಿಮ್ಮ |**

ಹೇಯವೆಂದೆಂದೊಡಾತ್ಮಂಗಪ್ಪುದೇನು=ಹೇಯವು+ಎಂದು+ಎಂದೊಡೆ+ಆತ್ಮಂಗೆ+ಅಪ್ಪುದೇನು, ಆಯುಧವದನು=ಆಯುಧವು+ಅದನು, ತೊರೆದಾತ್ಮನೇಂಗೈದಪನು=ತೊರೆದು+ಆತ್ಮನು+ಏಂ+ಗೈದಪನು, ತನುವಿಗಿರಲಿ=ತನುವಿಗೆ+ಇರಲಿ.

ಮೃದ್ಭಾಂಡ=ಮಣ್ಣ ಮಡಕೆ, ಹೇಯ=ಹೀನ, ಅಪ್ಪುದೇನು=ಆಗುವುದೇನು, ಗೈದಪನು=ಮಾಡುವನು, ತನುವಿಗೆ=ದೇಹಕ್ಕೆ.

ನಮ್ಮ ದೇಹವನ್ನು ಕೇವಲ ಮಣ್ಣಿಂದ ಆದ ಮಡಕೆ ಅಥವಾ ಮೂಳೆ ಮಾಂಸದ ತಡಿಕೆ ಎಂದು ಅಸಹ್ಯ ಪಟ್ಟುಕೊಂಡರೆ ಆತ್ಮನಿಂದ ಏನೂ ಮಾಡಲಾಗುವುದಿಲ್ಲ. ಆತ್ಮನಿಗೆ ದೇಹವೊಂದು ಆಯುಧ, ಅದನ್ನು ತೊರೆದು ಆತ್ಮನೇನು ಮಾಡಬಲ್ಲ? ಹಾಗಾಗಿ ದೇಹಕ್ಕೂ ನ್ಯಾಯವನ್ನು ಒದಗಿಸು, ಅದನ್ನು ಸೊರಗಿಸಬೇಡ ಎನ್ನುವ ಅರ್ಥದಲ್ಲಿ ಈ ಮುಕ್ತಕದಲ್ಲೂ ದೇಹಾತ್ಮ ಸಂಬಂಧವನ್ನು ಕುರಿತು ಉಲ್ಲೇಖ ಮಾಡಿದ್ದಾರೆ ಮಾನ್ಯ ಗುಂಡಪ್ಪನವರು.

(225)

ಸಾಪೇಕ್ಷ ಸತ್ಯ 389-393 ಕಗ್ಗ ರಸಧಾರೆ-2

'ಮಾನವಾ ಮೂಳೆ ಮಾಂಸದ ತಡಿಕೆ' ಎಂದು ಯಾರೋ ಅಂದರು. 'ಮಣ್ಣಿಂದ ಕಾಯ ಮಣ್ಣಿಂದ ಎಂದು ಮತ್ತ್ಯಾರೋ ಅಂದರು "ಇದಂ ಶರೀರಂ ಪರಿಣಾಮ ಪೇಶಲಂ ಪತ್ಯತ್ ಅವಶ್ಯಂ", 'ಪರಿಣಾಮಗಳಿಗೆ ಒಳಗಾಗಿ ಈ ಶರೀರವು ನಿಶ್ಚಯವಾಗಿ ಬಿದ್ದು ಹೋಗುತ್ತದೆ' ಎಂದು ಇನ್ಯಾರೋ ಅಂದರು. ಹೌದು ಈ ಶರೀರಕ್ಕೆ ಪ್ರಾಯ ಮೂಡಿ ಜರ್ಝರಿತವಾಗಿ ಒಂದು ದಿನ ಮಣ್ಣಲ್ಲಿ ಮಣ್ಣಾಗಿ ಹೋಗುತ್ತದೆ. ಆದರೆ ಅಲ್ಲಿಯ ತನಕ ಅದು ಆತ್ಮಕ್ಕೆ ಒಂದು ಆಯುಧವಿದ್ದಂತೆ. ಈ ದೇಹದ ಮೂಲಕವೇ ಆತ್ಮ ತನ್ನ ಪೂರ್ವ ಕರ್ಮವನ್ನು ನೀಗಿಕೊಳ್ಳಬೇಕು. ಈ ದೇಹಕ್ಕೆ ಪೂರಕವಾದ ಇತರೆ ಅಂಗಗಳಾದ ಮನಸ್ಸು ಬುದ್ಧಿಗಳ ಸಹಾಯದಿಂದಲೇ ಸತ್ಸಂಗ, ಧ್ಯಾನ ಮುಂತಾದವುಗಳ ಮೂಲಕ ಆನ್ನೋದ್ಧಾರವಾಗಬೇಕಲ್ಲವೇ? ಹಾಗಿರುವಾಗ ದೇಹವನ್ನು ಹೀನ ಅಥವಾ ಹೇಯವೆನ್ನುವುದು ಸರಿಯಲ್ಲ ಅಲ್ಲವೇ?

“ಒಂದು ಆರೋಗ್ಯವಂತ ದೇಹದಲ್ಲಿ ಒಂದು ಆರೋಗ್ಯವಂತ ಮನಸ್ಸು' ಎನ್ನುವುದು ಆಂಗ್ಲ ಗಾದೆ. ದೇಹ ಸುಸ್ಥಿತಿಯಲ್ಲಿದ್ದರೆ ಮನಸ್ಸು ಬುದ್ಧಿಗಳೂ ಸುಸ್ಥಿತಿಯಲ್ಲಿರುತ್ತವೆ. ಹಾಗೆ ದೇಹ ಮನಸ್ಸು ಬುದ್ಧಿ ಎಲ್ಲವೂ ಸದಾಚಾರ ಸದ್ವಿಚಾರಗಳಲ್ಲಿ ಮುಳುಗಿದ್ದರೆ, ಅವು ಆತ್ಮಕ್ಕೆ ಪೂರಕವಾಗೇ ಇರುತ್ತವೆ ಅಲ್ಲವೆ? ಹಾಗಾಗಿ ನಾವು ದೇಹವನ್ನು ಗಮನಿಸದೆ, ಉಪವಾಸಗೆಡವಿ, ಸೊರಗಿಸಿ ಕೇವಲ ದೇವರ ಧ್ಯಾನ ಮಾಡುತ್ತೇನೆ, ಜಪ ತಪಗಳನ್ನು ಮಾಡುತ್ತಾ ಕಾಲ ಕಳೆಯುತ್ತೇನೆ ಎಂದರೆ ಸಾಧ್ಯವಿಲ್ಲ. ಏಕೆಂದರೆ ದೇಹದ ಬಂಧನದಿಂದಲೇ ಆತ್ಮ ತನ್ನೆಲ್ಲ ಬಂಧನಗಳಿಂದ ಮುಕ್ತಿ ಪಡೆಯಬೇಕು. ಎಂತಹ ವಿಪರ್ಯಾಸ ನೋಡಿ, ಬಂಧ ವಿಮುಕ್ತಿಗೆ ಬಂಧನವೇ ಮಾರ್ಗ.

ಯಾವುದೂ ಅತಿಯಾಗಬಾರದು. ದೇಹ ಮನಸ್ಸು ಬುದ್ಧಿಗಳನ್ನೂ ಸಮತೋಲನದಲ್ಲಿಟ್ಟುಕೊಳ್ಳಬೇಕು. “ಕತ್ತಿಯನ್ನು ಹರಿತವಾಗಿಟ್ಟುಕೊಂಡರೆ ಹಣ್ಣಿಗೆ ಮುಕ್ತಿ”. ಬದುಕಿನ ಯುದ್ಧದಲ್ಲಿ ಜಯಕ್ಕೆ ಬದುಕಿನ ಮುಖ್ಯ ಆಯುಧವಾದ ದೇಹವನ್ನು ಸರಿಯಾಗಿಟ್ಟುಕೊಳ್ಳಲೇಬೇಕು.

**ಮುಕ್ತಕ - 390**

**ಸುಳ್ಳಲ್ಲ ಕಥೆಯ ತಿರುಕನು ಕಂಡ ಸವಿಗನಸು।**
**ಚೆಲ್ಲಿತಲ್ಲವೆ ಹಿಟ್ಟು ಘಟವನವನೊದೆಯೇ॥**
**ಜಳ್ಳು ಸುಖದುಃಖವಿರಬಹುದಾದೊಡದರ ಮೊನೆ।**
**ಮುಳ್ಳಹುದು ಜೀವಕ್ಕೆ - ಮಂಕುತಿಮ್ಮ॥**

ಚೆಲ್ಲಿತಲ್ಲವೆ=ಚೆಲ್ಲಿತು+ಅಲ್ಲವೆ, ಘಟವನವನೊದೆಯೆ=ಘಟವನು+ಅವನು+ಒದೆಯೆ,
ಸುಖದುಃಖವಿರಬಹುದಾದೊಡದರ=ಸುಖ+ದುಃಖವು+ಇರಬಹುದು+ಆದೊಡೆ+ಅದರ,
ಮುಳ್ಳಹುದು=ಮುಳ್ಳು+ಅಹುದು,
ಘಟವನು=ಮಡಕೆಯನು.

ಮುಪ್ಪಿನ ಷಡಕ್ಷರಿ ಎಂಬ ಕವಿಯ “ತಿರುಕನ ಕನಸು” ಎಂಬ ಕವಿತೆಯ ಕಥೆಯನ್ನು ಉಲ್ಲೇಖ ಮಾಡುತ್ತಾ ಮಾನ್ಯ ಗುಂಡಪ್ಪನವರು, ಅವನು ಕಂಡದ್ದು ಕನಸೇ ಆದರೂ ಕನಸಿನ ಅಂತ್ಯದಲ್ಲಿ ಅವನು ತಾನು ತಿರುಪ

ಎತ್ತಿ ತಂದಿದ್ದ ಹಿಟ್ಟಿನ ಮಡಕೆಯನ್ನು ಒದ್ದದ್ದು ವಾಸ್ತವವಲ್ಲವೇ? ಹಾಗೆಯೇ ನಮ್ಮ ಜೀವನದಲ್ಲಿ ನಡೆಯುವ ಎಲ್ಲ ಘಟನೆಗಳೂ ಕನಸಂತೆ ಕಂಡರೂ ಅ ಘಟನೆಗಳಿಂದಾಗುವ ಪರಿಣಾಮಗಳು ನಮ್ಮ ಸ್ವಭಾವಕ್ಕೆ ಸೇರಿಕೊಂಡು ಆತ್ಮದ ಗುಣವಾಗುತ್ತದೆ ಎಂದು ಕರ್ಮಶೇಷದ ಪ್ರಯಾಣದ ವಿಚಾರವನ್ನು ಮಂಡಿಸಿದ್ದಾರೆ, ಈ ಮುಕ್ತಕದಲ್ಲಿ.

ಜೀವನದಲ್ಲಿ ನಡೆಯುವ ಘಟನೆಗಳು ಸಾವಿರಾರು. ಕೆಲವು ನಮ್ಮ ಪ್ರಮೇಯದಿಂದ, ಮತ್ತೆ ಕೆಲವು ಪ್ರಮೇಯವಿಲ್ಲದೆ, ಅದಕ್ಕೆ ಕರ್ಮ, ಹಣೆಬರಹ, ವಿಧಿ ಎಂದು ಹಲವಾರು ವಿವರಣೆಗಳನ್ನು ನೀಡುತ್ತಾರೆ. ಆದರೆ ಈ ಘಟನೆಗಳು ಕೇವಲ ಘಟನೆಗಳಾಗಿ ಕನಸಿನಂತೆ ನಡೆದು ಹೋಗುತ್ತವೆ. ಅದರಿಂದಾದ ಪರಿಣಾಮಗಳು ನಮ್ಮ ಮನಸ್ಸು ಬುದ್ಧಿಗಳ ಮೇಲೆ ತಮ್ಮ ಪ್ರಭಾವವನ್ನು ಬೀರುತ್ತವೆ. ಹಾಗೆ ಆದ ಪ್ರಭಾವ ಸೂಕ್ಷ್ಮ ಮತ್ತು ತಾತ್ಕಾಲಿಕ ಪ್ರಭಾವವಾಗಿರಬಹುದು ಅಥವಾ ಗಾಢ ಮತ್ತು ದೀರ್ಘಕಾಲಿಕವಾಗಿರಬಹುದು. ಎಷ್ಟೋ ಬಾರಿ ಘಟನೆಗಳನ್ನು ನಾವು ಮರೆತೇ ಹೋದರೂ ಘಟನೆಗಳಿಂದಾಗುವ ಪರಿಣಾಮ ಮತ್ತು ಪ್ರಭಾವ ನಮ್ಮ ಸ್ವಭಾವದೊಳಕ್ಕೆ ಹೊಕ್ಕು, ಹಲವು ಬಾರಿ, ಅದು ನಮ್ಮ ಗುಣವೇ ಆಗಿಬಿಡುತ್ತದೆ. ಆ ಗುಣ ಸುಗುಣವೂ ಆಗಬಹುದು ಅಥವಾ ದುರ್ಗುಣವೂ ಆಗಬಹುದು. ಹಾಗೆ ಕನಸಿನಂತಹ ಬದುಕಿನಿಂದಾಗುವ ಪರಿಣಾಮಗಳ ಕೊಂಡಿಗಳು ನಮ್ಮನ್ನು ಈ ಜಗತ್ತಿಗೆ ಅಂಟಿಸಿಬಿಡುತ್ತದೆ. ಈ ಅಂಟಿನಿಂದ ಜೀವ ಅಥವಾ ಆತ್ಮದ ಊರ್ಧ್ವಮುಖ ಪ್ರಯಾಣ ಕುಂಠಿತವಾಗಿಬಿಡುತ್ತದೆ. ಮತ್ತೆ ಅದೇ ಚಕ್ರದಲ್ಲೇ ತಿರು ತಿರುಗಿ ಉರುಳಾಟ, ಬಿಡುಗಡೆಯಿಲ್ಲದ ಬದುಕು.

ಮುಳ್ಳಹುದು ಜೀವಕ್ಕೆ ಎಂದು ಜೀವಕ್ಕೆ ಇದು ಹಾನಿಕರ ಎಂದು ಗುಂಡಪ್ಪನವರು ಹೇಳಿದ್ದಾರೆ. ಈ ಹಾನಿಯಿಂದ ಆತ್ಮದ ರಕ್ಷಣೆಯಾಗಬೇಕಾದರೆ, ಜೀವಿಸಿದ್ದು ಕನಸಿನಂತ ಬದುಕೇ ಆದರೂ, ಅದರ ಪ್ರಭಾವ ನಮ್ಮ ಮೇಲೆ ಗಾಢವಾಗಿ ಬೀಳದಂತೆ ಒಂದು ನಿರ್ಲಿಪ್ತತೆಯ ಕವಚವನ್ನು ಹೊದಿಸಬೇಕು. ಬದುಕಿನ ಘಟನೆಗಳು ನಮ್ಮ ಮೇಲೆ ಪ್ರಭಾವ ಬೀರದ ಹಾಗೆ ನೋಡಿಕೊಂಡರೆ ಪ್ರಯಾಣ ಸುಗಮವಾಗುತ್ತದೆ. ಮನಸ್ಸು ಬುದ್ಧಿಗಳು ಪಕ್ವವಾದರೆ ಅಂತಹ ಪ್ರಭಾವದಿಂದ ನಮ್ಮನ್ನು ನಾವು ಕಾಪಾಡಿಕೊಳ್ಳಬಹುದು. ಆ ಪಕ್ವತೆಯನ್ನು ಪಡೆಯಲು ಸಾಧನೆಯ ಪ್ರಯತ್ನ ಮಾಡಬೇಕು.

**ಮುಕ್ತಕ - 391**

**ಹುರಿಯುರುಳ್ ಹಾವಲ್ಲವಾದೊಡಂ ಮಬ್ಬಿನಲಿ।**
**ಹರಿದಾಡಿದಂತಾಗೆ ನೋಳ್ಪವಂ ಬೆದರಿ॥**
**ಸುರಿಸುವಾ ಬೆವರು ದಿಟ; ಜಗವುಮಂತುಟೆ ದಿಟವು।**
**ಜರೆಯದಿರು ತೋರ್ಕೆಗಳ - ಮಂಕುತಿಮ್ಮ॥**

ಹುರಿಯುರುಳ್=ಹುರಿಯ+ಉರುಳ್, ಹಾವಲ್ಲವಾದೊಡಂ=ಹಾವು+ಅಲ್ಲ+ಆದೊಡಂ,
ಹರಿದಾಡಿದಂತಾಗೆ=ಹರಿದಾಡಿದಂತೆ+ಆಗೆ, ಜಗವುಮಂತುಟೆ=ಜಗವುಂ+ಅಂತುಟೆ
ಹುರಿಯ=ಹಗ್ಗದ, ಮಬ್ಬಿನಲಿ=ಕತ್ತಲಲ್ಲಿ, ನೋಳ್ಪವಂ=ಕಾಣುವವನು, ದಿಟ=ಸತ್ಯ.





ಕತ್ತಲಲ್ಲಿ ಹಗ್ಗವನ್ನು ಕಂಡು ಹಾವೆಂದು ತಿಳಿದು ಹೆದರಿ ಗಾಬರಿಗೊಂಡು ಬೆವರು ಸುರಿಸಿದಾಗ, ಅದು ಹಗ್ಗ; ಹಾವಲ್ಲವೆಂದು ಸತ್ಯ ನಂತರ ಗೊತ್ತಾದರೂ, ಹರಿಸಿದ ಬೆವರು ಸತ್ಯವೇ ಅಲ್ಲವೇ? ಅದೇ ರೀತಿ ಈ ಜಗದ ವಿಷಯಗಳೂ ತನ್ನ ಸತ್ಯರೂಪವನ್ನು ತೋರಗೊಡದೆ, ನಮ್ಮನ್ನು ಹೆದರಿಸಿ ಬೆದರಿಸುತ್ತವೆ. ಸತ್ಯವಲ್ಲದಿದ್ದರೂ ತೋರಿಕೆಯ ರೂಪಗಳೇ ತಮ್ಮ ಪ್ರಭಾವವನ್ನು ಬೀರುತ್ತವೆ. ಹಾಗಾಗಿ ತೋರಿಕೆಗಳನ್ನು ತಿರಸ್ಕರಿಸಬೇಡ ಎಂದು ಜಗದ್ವಿಷಯಗಳನ್ನು ವಿಮರ್ಶಿಸಿದ್ದಾರೆ ಈ ಮುಕ್ತಕದಲ್ಲಿ.

ಇದು ಸಾಮಾನ್ಯ ಎಲ್ಲ ವ್ಯಕ್ತಿ, ವಸ್ತು ಮತ್ತು ವಿಷಯಗಳಿಗೆ ಅನ್ವಯವಾಗುತ್ತದೆ. ಯಾವುದೇ ಆದರೂ ತಮ್ಮ ಸತ್ಯರೂಪವನ್ನು ತೋರ್ಗೊಡದೆ ನಮ್ಮನ್ನು ಭ್ರಮಿಸುವಂತೆ ಮಾಡುತ್ತದೆ. ಆ ಸಮಯಕ್ಕೆ ನಾವು ಸತ್ಯರೂಪ ಅಥವಾ

ಗುಣವನ್ನು ನೋಡಲು ಅಸಮರ್ಥರಾಗಿರುತ್ತೇವೆ. ನಾವು ನೋಡಲಿ, ಬಿಡಲಿ ಅಥವಾ ಅರಿಯಲಿ, ಬಿಡಲಿ ಆ ವ್ಯಕ್ತಿ, ವಸ್ತು ಮತ್ತು ವಿಷಯಗಳು, ನಮ್ಮ ಮೇಲೆ ತಮ್ಮ ಪ್ರಭಾವನ್ನು ತೋರಿ ಪರಿಣಾಮವನ್ನು ಮಾಡಿಯೇಬಿಡುತ್ತವೆ ಅಲ್ಲವೆ?

ಉದಾಹರಣೆಗೆ, ನಮಗೆ ಒಬ್ಬ ವ್ಯಕ್ತಿಯ ಪರಿಚಯವಾಗುತ್ತದೆ. ಪರಿಚಯ ಸ್ನೇಹವೂ ಆಗುತ್ತದೆ. ಕೊಟ್ಟು, ತೆಗೆದುಕೊಳ್ಳುವ ಹಂತಕ್ಕೂ ಹೋಗುತ್ತದೆ. ಸಾಕಷ್ಟು ದಿನಗಳ ಬಳಿಕ ನಮಗೆ ಗೊತ್ತಾಗುತ್ತದೆ, ಆವನು ಬರೀ ಸ್ವಾರ್ಥಿ, ಮೋಸಗಾರ ಅಥವಾ ಸುಳ್ಳ ಎಂದು. ಮೊದಲು ಅರಿಯದೆ ನಂತರ ಸತ್ಯದ ಅರಿವಾದರೂ ಅವನೊಡನೆ ಆದ ಪರಿಚಯ ಮತ್ತು ತದನಂತರದ ವ್ಯವಹಾರದಿಂದ ನಮಗೆ ಆದ ಲಾಭವೋ ನಷ್ಟವೋ ಆಗಿಯೇ ಇರುತ್ತದೆ ಅಲ್ಲವೇ?

ಇದು ಜಗತ್ತಿನ ರೀತಿ, ಇದರಿಂದ ಯಾರಿಗೂ ಮುಕ್ತಿಯಿಲ್ಲ. ಹಾಗಾಗಿ ಅವುಗಳನ್ನು ಅಲ್ಲಗೆಳೆಯದೆ ಅನುಭವಿಸುವುದೇ ದಾರಿ. ನಾವು ಎಷ್ಟು ಗಾಢವಾಗಿ ಈ ವಸ್ತು ವಿಷಯ ಮತ್ತು ವ್ಯಕ್ತಿಗಳಿಗೆ ಅಂಟಿಕೊಂಡಿರುತ್ತೇವೇಯೋ ನಮಗಾಗುವ ಪ್ರಭಾವ ಮತ್ತು ಪರಿಣಾಮಗಳೂ ಅಷ್ಟೇ ಗಾಡವಾಗಿರುತ್ತವೆ. ಅಂಟಿಯೂ ಅಂಟದ ರೀತಿ ಇದ್ದರೆ ಅವುಗಳ ಪ್ರಭಾವದ ತೀವ್ರತೆಯಿಂದ ಸ್ವಲ್ಪಮಟ್ಟಿಗೆ ಪಾರಾಗಬಹುದು.

**ಮುಕ್ತಕ-392**

**ಸೌಂದರ್ಯ ಬಾಂಧವ್ಯಗಳನ್ನು ಬರಿದೆನಲಹುದೆ |**
**ಹೊಂದಿಸವೆ ಕುಂದಿಸವೆ ಜೀವಿಗಳನವುಗಳ್ ||**
**ಸಿಂಧುಪರದಿ ಬಿದ್ದವರೊಳೊಬ್ಬರೊಬ್ಬರನು |**
**ಅಂದಿಕೊಳಲದು ಬರಿದೆ?-ಮಂಕುತಿಮ್ಮ ? ||**

ಬರಿದೆನಲಹುದೆ=ಬರಿದೆ+ಎನಲು+ಅಹುದೆ, ಜೀವಿಗಳನವುಗಳ್=ಜೀವಿಗಳನು+ಅವುಗಳ್,
ಬಿದ್ದವರೊಳೊಬ್ಬರೊಬ್ಬರನು=ಬಿದ್ದವರೊಳು+ಒಬ್ಬರು+ಒಬ್ಬರನು, ಅಂದಿಕೊಳಲದು ಅಂದಿಕೊಳಲು+ಅದು.
ಕುಂದಿಸವೆ=ಕುಗ್ಗಿಸವೆ, ಸಿಂಧು=ಸಾಗರ, ಸಮುದ್ರ, ಕಡಲು, ಪೂರದಿ=ಪ್ರವಾಹದಿ,
ಅಂದಿಕೊಳಲು=ಹಿಡಿದುಕೊಳಲು.

ಕಗ್ಗ ರಸಧಾರೆ-2 ಸಾಪೇಕ್ಷ ಸತ್ಯ 389-393

ಈ ಜಗತ್ತಿನ ಸೌಂದರ್ಯ ಮತ್ತು ಬಾಂಧವ್ಯಗಳನ್ನು ವ್ಯರ್ಥವೆಂದು ಹೇಳಬಹುದೇ? ಅವು ಜೀವಿಗಳನ್ನು ಒಬ್ಬರಿಗೊಬ್ಬರನ್ನು ಸೇರಿಸುತ್ತದೆ ಅಗಲಿಸುತ್ತದೆ, ಉಬ್ಬುವಂತೆ ಮಾಡುತ್ತದೆ ಮತ್ತು ಕುಗ್ಗುವಂತೆ ಮಾಡುತ್ತದೆ. ಪ್ರವಾಹದಲ್ಲಿ ಸಿಕ್ಕು ಕೊಚ್ಚಿಕೊಂಡು ಹೋಗುವಾಗ ಯಾರು ಸಿಕ್ಕರೆ ಅವರನ್ನು ಹಿಡಿದು ಪ್ರಾಣ ರಕ್ಷಣೆ ಮಾಡಿಕೊಳ್ಳುವುದಿಲ್ಲವೇ? ಅಂತಹ ಬಂಧನಗಳನ್ನು ಬರಿದಾದ ಬಂಧವೆನ್ನಲು ಸಾಧ್ಯವೇ? ಎಂದು, ಮನುಷ್ಯ ಮನುಷ್ಯರ ನಡುವಿನ ಸಂಬಂಧಗಳ ವಿಚಾರವನ್ನು ಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಜೀವನವನ್ನು ಭವಸಾಗರವೆಂದಿದ್ದಾರೆ ನಮ್ಮ ಹಿರಿಯರು. ಹೌದು ಈ ಬದುಕೇ ಒಂದು ಮಹಾ ಸಾಗರ. ಹುಟ್ಟಿದ ಪ್ರತೀ ಜೀವಿಯೂ ಈ ಬದುಕೆಂಬ ಮಹಾಸಾಗರದಲ್ಲಿ ಈಜಲೇಬೇಕು. ಹಾಗಾಗಿಯೇ ಪುರಂದರ ದಾಸರು "ಈಸಬೇಕು, ಈಸಿ ಜಯಿಸಬೇಕು" ಎಂದಿದ್ದಾರೆ. ಹಾಗೆ ನಾವು ಈ ಜೀವನದ ಸಾಗರದಲ್ಲಿ ಈಜುವಾಗ, ಹಲವಾರು ಬಾರಿ, ಸಮುದ್ರದಂತೆಯೇ ಏರಿಳಿತಗಳನ್ನು ಬದುಕಿನ ಸಮಸ್ಯೆಗಳ ರೂಪದಲ್ಲಿ ಎದುರಿಸಬೇಕಾಗುತ್ತದೆ. ಹಾಗೆ ಎದುರಿಸುವಾಗ, ನಮಗೆ ಹಲವಾರು ಜನ ಒದಗುತ್ತಾರೆ, ನಾವು ಹಲವರಿಗೆ ಒದಗುತ್ತೇವೆ. ಹೀಗೆ ಒಬ್ಬರಿಗೊಬ್ಬರು ಒದಗುವಾಗ ಹೊಂದಿಕೊಳ್ಳುತ್ತೇವೆ, ಸಂತೈಸುತ್ತೇವೆ, ಕುಗ್ಗುತ್ತೇವೆ ಮತ್ತು ಹಿಗ್ಗುತ್ತೇವೆ.

ಇದು ಸಾಮಾನ್ಯವಾಗಿ ಎಲ್ಲರ ಅನುಭವಕ್ಕೂ ಬಂದಿರುತ್ತದೆ. ಕೆಲವರೊಡನೆ ನಮಗೆ ಪರಿಚಯವಾಗುತ್ತದೆ. ಪರಿಚಯ ಸ್ನೇಹವಾಗುತ್ತದೆ. ಸ್ನೇಹ 'ಕೊಡು-ಕೊಳ್ಳು'ವುದಕ್ಕೆ ಎಡೆಮಾಡಿಕೊಡುತ್ತದೆ. ಸಂಬಂಧ ಮತ್ತು ಬಂಧಗಳು ಬೆಳೆಯುತ್ತವೆ, ಕಳೆದುಹೋಗುತ್ತವೆ, ಕೆಲವು ಸುಂದರವಾಗಿರುತ್ತವೆ, ಕೆಲವು ಅಸಹನೀಯವಾಗಿರುತ್ತವೆ. ಕೆಲವು ನೆನಪಿನಲ್ಲಿ ಉಳಿಯುತ್ತದೆ, ಕೆಲವು ಮರೆಯಾಗುತ್ತವೆ. ಇವೆಲ್ಲಕ್ಕೂ ಒಂದು ಅರ್ಥವಿರುತ್ತದೆ. ಯಾವುದೇ ಸಂಬಂಧ ಸಂಪರ್ಕಗಳು ಬರಿದೆ ಅರ್ಥಹೀನವಾಗಿರುವುದಿಲ್ಲ. ಇದನ್ನೇ ಮಾನ್ಯ ಗುಂಡಪ್ಪನವರು ಅಂದಿಕೊಳಲದು ಬರಿದೆ?' ಎಂದು ಪ್ರಶ್ನೆ ಕೇಳುತ್ತಾ, ಇವೆಲ್ಲಕ್ಕೂ ಒಂದು ಅರ್ಥವುಂಟು ಮತ್ತು ಇವೆಲ್ಲ ಬರಿದಲ್ಲ ಎಂದು ವಿಶದೀಕರಿಸುತ್ತಾರೆ.

ಇಂತಹ ಸಂಬಂಧಗಳಲ್ಲಿ ಜೀವಿಸುವ ನಾವು ಸ್ವಾರ್ಥ ಮತ್ತು ಅಹಂಕಾರದ ಲೇಪವಿಲ್ಲದ ಬಾಂಧವ್ಯಗಳನ್ನು ಬೆಳೆಸಿಕೊಂಡರೆ ನಮಗೂ ಮತ್ತು ಇತರರಿಗೂ ಹಿತವಾಗಿರುತ್ತದೆ. ಅಂತಹ ಸುಂದರ ಬಂಧನಗಳಲ್ಲಿ ನಮಗೆ ಆನಂದ ಮತ್ತು ಸಂತೋಷ ಸಿಗುವುದರಲ್ಲಿ ಸಂದೇಹವೇ ಇಲ್ಲ.

**ಮುಕ್ತಕ - 393**

**ಎನಿತೆನಿತ್ತು ವಿಕಾರ ಪರಿಣಾಮಗಳ ನಮ್ಮ।**
**ಮನಕಾಗಿಸುವೊ ಲೋಕರೂಪಶಕ್ತಿಗಳು ॥**
**ಅನಿತನಿತು ಸತ್ಯತೆಯವಕ್ಕುಂಟು ಜೀವಿತದಿ।**
**ಅನುಭವವೆ ದಿಟದಳತೆ – ಮಂಕುತಿಮ್ಮ ॥**

ಎನಿತೆನಿತ್ತು=ಎನಿತು+ಏನಿತ್ತು, ಮನಕಾಗಿಸುವೊ=ಮನಕೆ+ಆಗಿಸುವೊ, ಅನಿತನಿತು=ಅನಿತು+ಅನಿತು, ಸತ್ಯತೆಯವಕ್ಕುಂಟು=ಸತ್ಯತೆಯು+ಅವಕ್ಕುಂಟು, ದಿಟದಳತೆ=ದಿಟದ+ಅಳತೆ.





ಎನಿತು=ಎಷ್ಟು, ಅನಿತು=ಅಷ್ಟು, ದಿಟದ=ನಿಜವಾದ

ನಮ್ಮ ಬದುಕಿನಲ್ಲಿ, ಲೋಕದ ಆಗುಹೋಗುಗಳು ಮತ್ತು ಅವುಗಳಿಂದಾಗುವ ಪರಿಣಾಮಗಳು ನಮ್ಮ ಮನಸ್ಸಿಗೆ ಹಲವಾರು ವಿಕಾರಗಳನ್ನು ಅಂಟಿಸುತ್ತದೆ ನಮ್ಮ ಮಟ್ಟಿಗೆ ಅವು ಸತ್ಯವಲ್ಲವೇ? ಆ ಪರಿಣಾಮಗಳಿಂದಾಗುವ ಅನುಭವವೇ ನಮ್ಮ ಅರಿವಿಗೆ ಒಂದು ಮಾಪನ ಅಥವಾ ಅಳತೆ ಎಂದು ಜೀವನಾನುಭವದ ಮತ್ತು ಅದರಿಂದ ನಮ್ಮ ಮೇಲೆ ಆಗುವ ಪರಿಣಾಮದ ವಿಚಾರವನ್ನು ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ ಪ್ರಸ್ತಾಪಮಾಡಿದ್ದಾರೆ.

ನಮ್ಮ ಅಂತರಂಗದಲ್ಲಿ ನಡೆಯುವ ವಿಚಾರ ಮತ್ತು ಅದರ ಮಂಥನಕ್ಕಿಂತ ಈ ಜಗತ್ತಿನೊಂದಿಗೆ ಮತ್ತು ಜಗತ್ತಿನ ಸಕಲ ವ್ಯಕ್ತಿ, ವಸ್ತು ಮತ್ತು ವಿಷಯದೊಂದಿಗಿನ ನಮ್ಮ ಸಂಪರ್ಕ ಮತ್ತು ಸಂಬಂಧಗಳಿಂದ ನಮ್ಮ ಮನಸ್ಸಿನ ಮೇಲಾಗುವ ಪರಿಣಾಮ ಅತ್ಯಧಿಕ. ಈ ಪರಿಣಾಮಗಳೇ ನಮ್ಮ ಒಳಗೆ ಇಳಿದು ಅನುಭವದ ಗಂಟಾಗುತ್ತದೆ. ಈ ಅನುಭವಗಳ ಸಮೂಹವೇ ನಮ್ಮ ವ್ಯಕ್ತಿತ್ವವನ್ನು ರೂಪಿಸುತ್ತದೆ.

ನಮ್ಮ ಸಕಾರಾತ್ಮಕ ಗುಣಗಳಾದ, ಪ್ರೇಮ, ಕರುಣೆ, ಅನುರಾಗ, ಸಹಿಷ್ಣುತೆ ಮತ್ತು ನಕಾರಾತ್ಮಕ ಗುಣಗಳಾದ ಸಿಟ್ಟು, ಅಸಹನೆ, ಕೋಪ, ದ್ವೇಷಗಳು ಯಾವುದೂ ನಮ್ಮ ಸಂಪರ್ಕದ ವಸ್ತು, ವ್ಯಕ್ತಿ ಮತ್ತು ವಿಷಯಗಳಲ್ಲಿ ಇಲ್ಲದಿದ್ದರೂ, ಅವುಗಳಿಂದ ನಮ್ಮ ಮೇಲೆ ಪರಿಣಾಮ ಬೀರಿ ನಮಗಾಗುವ ಅನುಭವಗಳು ಸತ್ಯವಲ್ಲವೇ? ಹಾಗಾಗಿ, ನಮ್ಮ ವ್ಯಕ್ತಿತ್ವ ರೂಪಗೊಳ್ಳುವಲ್ಲಿ, ಅವುಗಳ ಪಾತ್ರವೇ ಅಧಿಕವಾಗಿರುತ್ತದೆ. ಇದನ್ನೇ ಮಾನ್ಯ ಗುಂಡಪ್ಪನವರು 'ಅನುಭವವೆ ದಿಟದಳತೆ' ಎಂದಿದ್ದಾರೆ ಈ ಮುಕ್ತಕದಲ್ಲಿ.

ನಾವು ಎಂದು ಆಂತರಿಕವಾಗಿ ಪಕ್ವವಾಗುತ್ತೇವೋ, ಎಂದು ನಾವು, ಕೇವಲ ಗುಣ ಗ್ರಹಣ ಮಾಡುವ ಕ್ಷಮತೆಯನ್ನು ಬೆಳೆಸಿಕೊಳ್ಳುತ್ತೆವೋ, ಅಂದು ನಮ್ಮ ವ್ಯಕ್ತಿತ್ವವೂ ಕೇವಲ ಗುಣಗಳಿಂದ ಕೂಡಿದ್ದಾಗುತ್ತದೆ. ಪ್ರಯತ್ನ ಪಟ್ಟರೆ ಸಾಧಿಸಬಹುದು.

## ದೇಹ ಕುದುರೆ-ಆತ್ಮ ಸವಾರ 394-398

**ಮುಕ್ತಕ - 394**

**ಕನಸು ದಿಟ; ನೆನಸು ದಿಟ, ತನುವೊಳಿಹ ಚೇತನವ |**
**ಕನಲಿಸುವ ಕುಣಿಸುವಾ ಹಬೆಗಳೆಲ್ಲ ದಿಟ ||**
**ಇನಿತಿನಿತು ದಿಟಗಳಿವು - ತುಂಬುದಿಟದಂಶಗಳು |**
**ಗಣನೀಯವವು ಬಾಳ್ಗೆ – ಮಂಕುತಿಮ್ಮ ||**

ತನುವೊಳಿಹ=ತನುವೊಳು+ಇಹ, ತುಂಬುದಿಟದಂಶಗಳು=ತುಂಬು+ದಿಟದ+ಅಂಶಗಳು,
ಗಣನೀಯವವು=ಗಣನೀಯವು+ಅವು

ತನು=ದೇಹ, ಹಬೆ=ಆವಿ, ದಿಟ=ಸತ್ಯ, ಇನಿತಿನಿತು=ಸ್ವಲ್ಪಸ್ವಲ್ಪ, ತುಂಬುದಿಟ=ಪೂರ್ಣ ಸತ್ಯ, ಗಣನೀಯವು=ಬಹಳ ಮುಖ್ಯ.

ನಾವು ಕಾಣುವ ಕನಸುಗಳು, ಕಾಣುವಾಗ ನಿಜವಾಗಿರುತ್ತವೆ ಮತ್ತು ನೆನಸಿನಲ್ಲಿ ನಮಗಾಗುವ ಅನುಭವಗಳೂ ಸಹ ಸತ್ಯವಾಗಿರುತ್ತವೆ. ಆ ಕನಸು ನೆನಸುಗಳಲ್ಲಿ ಆಗುವ ಅನುಭವಗಳು ಮತ್ತು ಅವುಗಳ ಪ್ರಭಾವ ಮತ್ತು ಪರಿಣಾಮ ನಮ್ಮ ದೇಹವನ್ನು ಧರಿಸಿರುವ ಚೇತನದ ಮೇಲೆ ಖಂಡಿತ ಆಗುತ್ತದೆ. ಹೀಗೆ ಆಗುವ ಸಣ್ಣ ಸಣ್ಣ ನಿಜಗಳೆಲ್ಲ ನಮ್ಮ ಬಾಳ್ವೆಗೆ ಅವಶ್ಯಕವೆಂದು ಉಲ್ಲೇಖ ಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಯಾರೋ ನಮ್ಮ ಮೇಲೆ ಮತ್ತು ಯಾರ್ಯಾರ ಮೇಲೂ ನಾವು ತೋರುವ, ಪ್ರೀತಿ, ಪ್ರೇಮ, ಕರುಣೆ, ಅನುರಾಗ, ಕೋಪ, ಅಸಹನೆ, ದ್ವೇಷ, ಅಸೂಯೆಯಂಥಾ ಭಾವಗಳು ಶಾಶ್ವತವಾಗಿ ನಮ್ಮಲ್ಲಿ ಉಳಿಯದಿದ್ದರೂ, ಅವುಗಳನ್ನು ವ್ಯಕ್ತಪಡಿಸುವ ಸಮಯಕ್ಕೆ ಸತ್ಯವೇ ಅಲ್ಲವೇ? ಹಾಗೆ ಅಂತಹ ಭಾವಗಳನ್ನು ತೋರುವಾಗ ಅವುಗಳಿಂದ ನಮ್ಮಲ್ಲಿ ಉಂಟಾಗುವ ಭಾವ ತರಂಗಗಳ ಸರಮಾಲೆಗಳೇ ನಮ್ಮ ಸ್ವಭಾವವನ್ನು ರೂಪಿಸುತ್ತದೆ. ಹಾಗೆ ರೂಪುಗೊಂಡ ಸ್ವಭಾವವು ನಮ್ಮ ವ್ಯಕ್ತಿತ್ವವಾಗುತ್ತದೆ. ಹೀಗೆ ರೂಪುಗೊಂಡ ವ್ಯಕ್ತಿತ್ವ ಆತ್ಮದ ಗುಣವಾಗುತ್ತದೆ.

ಇದೇ ಕಾರಣಕ್ಕಾಗಿಯೇ ನಮ್ಮ ಸನಾತನದಲ್ಲಿ, ವಿದ್ಯಾಭ್ಯಾಸದಿಂದ ಸಂಸ್ಕಾರಗಳ ವಿಕಾಸ, ಸಂಸ್ಕಾರಗಳಿಂದ ಸಾಧನೆ ಮತ್ತು ಸಾಧನೆಯಿಂದ ಆತ್ಮೋದ್ಧಾರವೆನ್ನುವ ಕ್ರಮವುಂಟು. ಸದ್ವಿಚಾರ, ಸದಾಚಾರ, ಸತ್ಸಂಪ್ರದಾಯ ಮುಂತಾದ ಹಲವಾರು ವಿಧಾನಗಳಿಂದ ಸಾಧನೆಯನ್ನು ರೂಪಿಸಿಕೊಳ್ಳುವ ಪರಿಪಾಠವೂ ನಮ್ಮಲ್ಲಿ ಉಂಟು. ಇವುಗಳಿಂದಾಗುವ ಪರಿಣಾಮಗಳನ್ನು ಮಾನ್ಯ ಗುಂಡಪ್ಪನವರು 'ಗಣನೀಯವವು ಬಾಳ್ಗೆ' ಎಂದು ಹೇಳಿ ಅವುಗಳ

ಮಹತ್ವವನ್ನು ನಮಗೆ ಅರುಹಿದ್ದಾರೆ. ಅಂತಹ ಸತ್ಯದ ಅನುಭವವನ್ನು ನಮ್ಮದಾಗಿಸಿಕೊಳ್ಳಬೇಕಾದರೆ ನಾವೂ ಸಹ ಆ ಹಾದಿಯಲ್ಲಿ ನಡೆಯುವ ಪ್ರಯತ್ನವನ್ನು ಮಾಡಬೇಕು.

**ಮುಕ್ತಕ - 395**

**ತುಂಬುದಿಟ ಜೀವಿತದ ಗಣನೆಗಳಮೀರಿದದು |**
**ಇಂಬುಗಳ ಬಿಂಬಗಳ ಸನ್ನಿಧಾನವದು ||**
**ಅಂಬರದಿನಾಚೆನದು, ತುಂಬಿರುವುದೆತ್ತಲುಂ |**
**ಶಂಬು ಪರಬೊಮ್ಮನದು – ಮಂಕುತಿಮ್ಮ ||**

ಅಂಬರದಿನಾಚೆನದು=ಅಂಬರದಿನ+ಆಚೆಯದು, ತುಂಬಿರುವುದೆತ್ತಲುಂ=ತುಂಬಿರುವುದು+ಎತ್ತಲು,
ತುಂಬುದಿಟ=ಸಂಪೂರ್ಣ ಸತ್ಯ, ಗಣನೆ=ಲೆಕ್ಕಾಚಾರ, ಇಂಬುಗಳ=ಪ್ರೀತಿ ಅಥವಾ ಒತ್ತಾಸೆ.
ಬಿಂಬಗಳ=ರೂಪಗಳು.





ಈ ಜಗತ್ತಿಗೆ ಕಾರಣವಾದ ಪೂರ್ಣ ಸತ್ಯ ಅಥವಾ ಪರಮ ಸತ್ಯ ನಮ್ಮ ಲೆಕ್ಕಾಚಾರಕ್ಕೆ ನಿಲುಕದ್ದು, ಪ್ರೀತಿ ಪ್ರೇಮಗಳ ಪ್ರತಿರೂಪದ ಸ್ಥಾನವದು. ಗಗನಕ್ಕೂ ಮೀರಿದ್ದು, ಎಲ್ಲ ಕಡೆಯೂ ತುಂಬಿರುವ ಈ ರೂಪ ಪರಬ್ರಹ್ಮನಾದ ಶಂಭುವಿನ ರೂಪವು ಎಂದು ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ ಪ್ರಸ್ತಾಪಿಸಿದ್ದಾರೆ.

"ಪೂರ್ಣಮದಃ ಪೂರ್ಣಮಿದಂ ಪೂರ್ಣಾತ್ ಪೂರ್ಣಾಮುದಚ್ಯತೇ ಪೂರ್ಣಸ್ಯ ಪೂರ್ಣಮಾದಾಯ ಪೂರ್ಣಮೇವಾವಶಿಷ್ಯತೆ" ಎನ್ನುತ್ತದೆ ಈಶಾವಾಸ್ಯ ಉಪನಿಷತ್, ಅದು ಪೂರ್ಣ, ಇದು ಪೂರ್ಣ, ಪೂರ್ಣದಿಂದ ಪೂರ್ಣ ಹುಟ್ಟುತ್ತದೆ. ಪೂರ್ಣದಿಂದ ಪೂರ್ಣವನ್ನು ತೆಗೆದರೆ, ಪೂರ್ಣವೇ ಉಳಿಯುತ್ತದೆ. ಇಲ್ಲಿ ನಾವು ಪೂರ್ಣವೆನ್ನುವೆಡೆ, ಸತ್ಯವೆಂದು ಬದಲಾಯಿಸಿ ನೋಡಿದರೆ, ಒಂದು ಸಂಪೂರ್ಣ ಪರಮ ಸತ್ಯ. ಆ ಸತ್ಯದಿಂದಲೇ ಸಣ್ಣ ಸಣ್ಣ ಪೂರ್ಣ

ಸತ್ಯಗಳು ಹುಟ್ಟಿವೆ ಮತ್ತು ಇವೆಲ್ಲವೂ ಇಲ್ಲವಾದಾಗ ಅಥವಾ ಒಂದಾದಾಗ, ಒಂದು ಸಂಪೂರ್ಣ ಸತ್ಯವೇ ಉಳಿಯುತ್ತದೆ.

ಈ ಜಗತ್ತಿನ ಎಲ್ಲವೂ ಆ ಪರಮ ಸತ್ಯದಿಂದಲೇ ಆಗಿ, ಆ ಪರಮ ಸತ್ಯದಿಂದಲೇ ಅಸ್ತಿತ್ವದಲ್ಲಿದ್ದು ಆ ಪರಮ ಸತ್ಯದಲ್ಲೇ ಲೀನವಾಗುವ, ಆ ಪರಮಸತ್ಯದ ಪ್ರತಿರೂಪಗಳೇ ಎಂಬುವುದರಲ್ಲಿ ಸಂದೇಹವೇ ಇಲ್ಲ. ಇವುಗಳನ್ನೆಲ್ಲ ಆ ಪರಮಸತ್ಯದಿಂದ ಭಿನ್ನವಾಗಿ ನೋಡುವುದು ಪ್ರಾಕೃತ ಭಾವ. ಭಿನ್ನತೆಯನ್ನು ಕಾಣುವವರೆಗೆ ನಮಗೆ ಗುಂಡಪ್ಪನವರು ಹೇಳುವ ಆ ತುಂಬುದಿಟ ಅರ್ಥವಾಗುವುದಿಲ್ಲ.

ಸಕಲ ಜೀವರಾಶಿಗಳಲ್ಲೂ ಆ ಪರಮ ಸತ್ಯದ ಬಿಂಬವನ್ನು ಅಥವಾ ಪ್ರತಿರೂಪವನ್ನು ನೋಡುವ ಪ್ರವೃತ್ತಿಯನ್ನು ನಾವು ಬೆಳೆಸಿಕೊಂಡರೆ, ಗುಂಡಪ್ಪನವರು ಹೇಳುವ 'ತುಂಬಿರುವುದೆತ್ತಲುಂ' ಅನ್ನು ಕಾಣಲು ನಮಗೆ ಸಾಧ್ಯವಾದರೆ ನಾವೇ ಧನ್ಯರಾಗುತ್ತೇವೆ. ನಾವೂ ಅಂತಹ ಪ್ರಯತ್ನವನ್ನು ಮಾಡೋಣವೆ?

**ಮುಕ್ತಕ - 396**

**ಕಲ್ಮಷದ ವಲ್ಮೀಕವೆಂದೊಡಲ ಜರೆಯದಿರು।**
**ಬ್ರಹ್ಮಪುರಿಯೆಂದದದನು ಋಷಿಗಳೊರೆದಿಹರು॥**
**ಹಮ್ಮುಳ್ಳ ಹಯವ ಕಾಪಿಟ್ಟು ಕಡಿವಾಣ ತೊಡಿಸೆ।**
**ನಮ್ಮ ಗುರಿಗೈದಿಪುವು – ಮಂಕುತಿಮ್ಮ॥**

ವಲ್ಮೀಕವೆಂದೊಡಲ=ವಲ್ಮೀಕ+ಎಂದು+ಒಡಲ, ಬ್ರಹ್ಮಪುರಿಯೆಂದದದನು=ಬ್ರಹ್ಮಪುರಿ+ಎಂದು+ಅದನು,
ಋಷಿಗಳೊರೆದಿಹರು+ಋಷಿಗಳು+ಒರೆದಿಹರು, ಗುರಿಗೈದಿಸುವು=ಗುರಿಗೆ+ಐದಿಪುವು.
ಕಲ್ಮಷ=ಕೊಳೆ, ವಲ್ಮೀಕ=ಹುತ್ತ, ಒಡಲು=ದೇಹ, ಜರೆಯದಿರು=ಹೀಗಳೆಯದಿರು,
ಬ್ರಹ್ಮಪುರಿ=ಪರಬ್ರಹ್ಮನ ಅವಾಸಸ್ಥಾನ, ಒರೆದಿಹರು=ಹೇಳಿಹರು, ಹಮ್ಮುಳ್ಳ=ಉತ್ಸಾಹವುಳ್ಳ,
ಹಯವ=ಕುದುರೆಯನ್ನು, ಕಾಪಿಟ್ಟು=ರಕ್ಷಿಸಿ ಐದಿಸುವು=ಸೇರಿಸುತ್ತವೆ.

ನಮ್ಮ ದೇಹವನ್ನು ಕೊಳೆಯ ಹುತ್ತವೆನ್ನಬೇಡಿ. ನಮ್ಮ ಋಷಿ ಮುನಿಗಳು ಈ ದೇಹವನ್ನು ಪರಮಾತ್ಮನ ಆವಾಸಸ್ಥಾನವೆಂದಿದ್ದಾರೆ. ಚೆನ್ನಾಗಿ ಬೆಳೆಸಿ, ರಕ್ಷಿಸಿ, ಕಡಿವಾಣ ತೊಡಿಸಿ ಓಡಿಸಿದರೆ ತನ್ನ ಗುರಿಮುಟ್ಟುವ

ಒಳ್ಳೆಯ ಕುದುರೆಯಂತೆ, ನಾವೂ ಸಹ ನಮ್ಮ ದೇಹವನ್ನು ರಕ್ಷಿಸಿಕೊಂಡು ದೃಢವಾಗಿಟ್ಟುಕೊಂಡು ತನ್ಮೂಲಕ ಸಾಧನೆಗೈದರೆ, ನಮ್ಮ ಗಮ್ಯವಾದ ಪರಮಾತ್ಮನನ್ನು ಮುಟ್ಟಬಹುದು ಎಂದು ದೇಹಾತ್ಮ ಸಂಬಂಧವನ್ನು ವಿಮರ್ಶೆಮಾಡಿದ್ದಾರೆ, ಮಾನ್ಯ ಗುಂಡಪ್ಪನವರು.

ವಾಚಕರೆ ದಯಮಾಡಿ ಮುಕ್ತಕ 388 ರ ವ್ಯಾಖ್ಯಾನವನ್ನು ನೋಡಬೇಕಾಗಿ ವಿನಂತಿ. ನಮ್ಮ ದೇಹದ ಯಜಮಾನನಾದ ಆತ್ಮನು ದೇಹವನ್ನು ಒಂದು ಉಪಕರಣದ ರೀತಿ ಉಪಯೋಗಿಸಿಕೊಳ್ಳುತ್ತಾನೆ. ನಾವು ಕೆಲಸ ಕಾರ್ಯಗಳಿಗೆ ಉಪಯೋಗಿಸುವ ಹಲವಾರು ಉಪಕರಣಗಳು ಇವೆ. ಆ ಉಪಕರಣಗಳನ್ನು ಸರಿಯಾಗಿ ನೋಡಿಕೊಂಡು, ಕಾಪಾಡಿಕೊಂಡರೆ ಅವು ಕೆಲಸಕ್ಕೆ ಬರುತ್ತವೆ. ಉದಾಹರಣೆಗೆ, ನಮ್ಮ ಮೋಟರ್‌ಸೈಕಲ್ಲನ್ನು ಜೋಪಾನವಾಗಿ ನೋಡಿಕೊಂಡು, ಸಕಾಲಕ್ಕೆ ಸರ್ವೀಸ್ ಮಾಡಿಸಿಟ್ಟುಕೊಂಡರೆ, ಓಡುವಾಗ ತೊಂದರೆ ಕೊಡದೆ, ನಮ್ಮನ್ನು ನಮ್ಮ ಗಮ್ಯಕ್ಕೆ ಸೇರಿಸುತ್ತದೆ.

ಇದೇ ರೀತಿ ಪರಮಾತ್ಮನ ಪ್ರತಿರೂಪವಾದ ಆತ್ಮನ ವಾಸ ಸ್ಥಾನವಾದ ದೇಹವನ್ನು, ಕಾಪಾಡಿಕೊಳ್ಳಬೇಕು ಸುಸ್ಥಿತಿಯಲ್ಲಿಟ್ಟುಕೊಳ್ಳಬೇಕು. ಒಂದು ಸದೃಢ ದೇಹದಲ್ಲಿ ಒಂದು ಆರೋಗ್ಯಕರವಾದ ಮನಸ್ಸು ಇರುತ್ತದೆ ಎನ್ನುವುದು ಒಂದು ಆಂಗ್ಲ ನಾಣ್ಣುಡಿ, ಹಾಗಾಗಿ ಆರೋಗ್ಯಕರವಾದ ದೇಹದಲ್ಲಿರುವ ಆರೋಗ್ಯಕರವಾದ ಮನಸ್ಸಿನ ಸಹಾಯದಿಂದಲೇ ಆತ್ಮಜ್ಞಾನ ಪಡೆಯಲು ಅನುಕೂಲವಾದ 'ಬೇಕು - ಬೇಡ' ಗಳ ಇತ್ಯರ್ಥವಾಗಿ, ಆನ್ನೋದ್ಧಾರಕ್ಕೆ ಯಾವುದು ಬೇಕೋ ಅದನ್ನು ಪಡೆದು, ಶೇಖರಿಸಿ, ವೃದ್ಧಿಗೊಳಿಸಿಕೊಂಡು ತನ್ಮೂಲಕ ಬೇಡದ್ದನ್ನು ಪ್ರಯತ್ನಪೂರ್ವಕವಾಗಿ ತ್ಯಜಿಸಿದರೆ, 'ಆತ್ಮ ಜ್ಞಾನ ' ಪಡೆಯಲು ಸಾಧ್ಯ. ಹಾಗೆ ಪಡೆದ ಆತ್ಮ ಜ್ಞಾನವೇ ನಮ್ಮನ್ನು ಪರಮಾತ್ಮಾಭಿಮುಖವಾಗಿಸುವುದು.

ಹಾಗೆಂದು ಕೇವಲ ದೇಹಕ್ಕೆ ಮಾತ್ರ ಪ್ರಾಮುಖ್ಯತೆಯನ್ನು ಕೊಟ್ಟು ಲೌಕಿಕಾನಂದವನ್ನೇ ಪಡೆದು ಇಂದ್ರಿಯ ಸುಖವನ್ನು ಅನುಭವಿಸದೆ ದೇಹವನ್ನು, ಕೇವಲ ಒಂದು ಉಪಕರಣದಂತೆ ಉಪಯೋಗಿಸಿಕೊಂಡು ಅತ್ಮಾನುಭವ ಮತ್ತು ತನ್ಮೂಲಕ ಪರಮಾತ್ಮಾನುಭವ ಪಡೆಯುವ ಪ್ರಯತ್ನ ನಮ್ಮದಾಗಬೇಕು.

**ಮುಕ್ತಕ - 397** **ದೇಹವೆಂಬುದು ಕುದುರೆಯಾತ್ಮನದರಾರೋಹಿ।**
**ವಾಹನವನುಪವಾಸವಿರಿಸೆ ನಡೆದೀತೆ?॥**
**ರೋಹಿ ಜಾಗ್ರತೆದಪ್ಪೆ ಯಾತ್ರೆ ಸುಖ ಸಾಗೀತೆ?।**
**ಸ್ನೇಹವೆರಡಕುಮುಚಿತ - ಮಂಕುತಿಮ್ಮ॥**

ಕುದುರೆಯಾತ್ಮನದರಾರೋಹಿ=ಕುದುರೆ+ಆತ್ಮ+ಅದರ+ಆರೋಹಿ,
ವಾಹನವನುಪವಾಸವಿರಿಸೆ=ವಾಹನವನು+ಉಪವಾಸ+ಇರಿಸಿ, ಜಾಗ್ರತೆದಪ್ಪೆ=ಜಾಗ್ರತೆ+ತಪ್ಪೆ,
ಸ್ನೇಹವೆರಡಕುಮುಚಿತ=ಸ್ನೇಹವು+ಎರಡಕುಂ+ಉಚಿತ.
ಆರೋಹಿ ಸವಾರ,





ದೇಹವೆಂಬುದು ಕುದುರೆಯಂತೆ ಮತ್ತು ಅದನ್ನು ಸವಾರಿ ಮಾಡುವವನೇ ಆತ್ಮ ತಾನು ಸವಾರಿ ಮಾಡುವ ವಾಹನವಾದ ದೇಹವನ್ನು ಉಪವಾಸ ಕೆಡವಿದರೆ ಪ್ರಯಾಣ ಸಾಧ್ಯವಾದೀತೆ? ಅಥವಾ ಆರೋಹಣ ಮಾಡಿ ಪ್ರಯಾಣ ಮಾಡುವ ಸವಾರನಾದ ಆತ್ಮ ಎಚ್ಚರ ತಪ್ಪಿದರೆ ಪ್ರಯಾಣ ಸುಗಮವಾದೀತೇ? ಎರಡೂ ಸರಿಯಲ್ಲ. ಹಾಗಾಗಿ ಇವೆರಡಕ್ಕೂ ಸ್ನೇಹ ಇರುವುದೇ ಉಚಿತ ಎಂದು ವಿವರಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ದೇಹಾತ್ಮ ಸಂಬಂಧವನ್ನು ಬಹಳ ಸ್ಪಷ್ಟವಾಗಿ ವಿವರಿಸುತ್ತಾ, ದೇಹವು ಸುಸ್ಥಿತಿಯಲ್ಲಿದ್ದರೆ ಆತ್ಮದ ಪ್ರಯಾಣ ಸುಗಮವಾಗುತ್ತದೆ ಎಂದಿದ್ದಾರೆ ಮಾನ್ಯ ಗುಂಡಪ್ಪನವರು. ಕೃಶವಾದ, ಅನಾರೋಗ್ಯದಿಂದ ನರಳುವ ದೇಹದಲ್ಲಿ ಆತ್ಮ ಚಿಂತನೆ ಬರುವುದಕ್ಕೆ ಸಾಧ್ಯವೇ ಇಲ್ಲ. ಅಂತಹ ದೇಹವನ್ನು ಹೊತ್ತ ಆತ್ಮ ಸೊರಗುತ್ತದೆ. ಏಕೆಂದರೆ ಮನಸ್ಸು ಬುದ್ಧಿಗಳು ಸದಾಕಾಲ ರೋಗಿಷ್ಟ ನರಳುವ ಮತ್ತು ನೋವನ್ನು ಅನುಭವಿಸುವ ದೇಹದ ಚಿಂತೆಯಲ್ಲಿಯೇ ಮಗ್ನವಾಗಿರುವಾಗ, ಆತ್ಮ ಚಿಂತನೆ ಮತ್ತು ಪರಮಾತ್ಮ ಚಿಂತನೆಗೆ ಎಡೆಯೆಲ್ಲಿ? ಹಾಗಾಗಿ ಸದೃಢ, ಆರೋಗ್ಯವಂತ ದೇಹವಿದ್ದರೆ ತನ್ನ ಮೂಲ ಸೇರುವ, ಆತ್ಮದ ಪ್ರಯಾಣ ಸುಗಮವಾದೀತು.

'ರೋಹಿ ಜಾಗ್ರತೆದಪ್ಪ' ಎಂದಿದ್ದಾರೆ ಮಾನ್ಯ ಗುಂಡಪ್ಪನವರು. ಅರ್ಥಾತ್, ಮನಸ್ಸು ಬುದ್ಧಿ ದೇಹಗಳ ಸಹಕಾರ ಮತ್ತು ಸಹವಾಸದಿಂದ ಪ್ರಯಾಣ ಮುಂದುವರೆಸುವ ಆತ್ಮವೂ ಸಹ ಎಚ್ಚರದಿಂದಿದ್ದು, ಅವುಗಳು ಸನ್ಮಾರ್ಗದಲ್ಲಿದ್ದು, ಕೇವಲ ಗುಣ ಗ್ರಹಣವನ್ನು ಮಾಡುತ್ತಾ ಇವೆಯೇ ಎಂದು ಎಚ್ಚರದಿಂದಿದ್ದು ತನ್ನ ಪ್ರಯಾಣದ ಮಾರ್ಗ ಸುಗಮವಾಗಿಸಿಕೊಳ್ಳಬೇಕು.

ಹಾಗಾದರೆ ಆರೋಗ್ಯವಂತರಾದವರೆಲ್ಲರೂ ಆಧ್ಯಾತ್ಮಿಕವಾಗಿ ಮುನ್ನಡೆಯುತ್ತಾರೆಂದು ಅರ್ಥವಲ್ಲ. ಆರೋಗ್ಯವಂತ ದೇಹ ಕೇವಲ ಒಂದು ಉಪಕರಣ. ಅದಕ್ಕೆ ಪೂರಕವಾಗಿ ಸದಾಚಾರ, ಸದ್ವಿಚಾರ, ಸತ್ಸಂಗ, ಮತ್ತು ಸತ್ ಪ್ರಯತ್ನಗಳೂ ಸಹ ಈ ಪ್ರಯಾಣಕ್ಕೆ ಪೂರಕವಾಗಿರುತ್ತವೆ. ಆದರೆ ಇವೆಲ್ಲವೂ ಸಾಧ್ಯವಾಗುವುದು ದೇಹ ಸ್ಥಿರವಾಗಿದ್ದರೆ ಮಾತ್ರ ಹಾಗಾಗಿ ದೇಹವನ್ನು ಆರೋಗ್ಯವಾಗಿಟ್ಟುಕೊಂಡು, ಮೇಲೆ ಹೇಳಿದ ಮಿಕ್ಕೆಲ್ಲದರ ಸಹಾಯದಿಂದ ನಮ್ಮ ಆಧ್ಯಾತ್ಮಿಕ ಪ್ರಯಾಣ ಸಾಗಿಸಿದರೆ ಅದು ಸುಗಮವಾಗುತ್ತದೆ. ಅಂತಹ ಪ್ರಯತ್ನವನ್ನು ನಾವೆಲ್ಲಾ ಮಾಡಬೇಕು ಎನ್ನುವುದೇ ಈ ಮುಕ್ತಕದ ಆಶಯ.

**ಮುಕ್ತಕ - 398**

**ಇರುವನ್ನಮೀ ಬಾಳು ದಿಟವದರ ವಿವರಣೆಯ |**
**ಹೊರೆ ನಮ್ಮ ಮೇಲಿಲ್ಲ ನಾವದರ ಸಿರಿಯಾ ||**
**ಪಿರಿದಾಗಿಸಲು ನಿಂತು ಯುಕ್ತಿಯಿಂ ದುಡಿಯುವುದೆ |**
**ಪುರುಷಾರ್ಥಸಾಧನೆಯೊ - ಮಂಕುತಿಮ್ಮ ||**

ಇರುವನ್ನಮೀ=ಇರುವನ್ನಂ+ಈ, ದಿಟವದರ=ದಿಟವು+ಅದರ,ನಾವದರ=ನಾವು+ಅದರ,
ಪಿರಿದಾಗಿಸಲು=ಪಿರಿದು+ಆಗಿಸಲು,

ಇರುವನ್ನಂ=ಇರುವ ತನಕ, ದಿಟವು=ಸತ್ಯವು, ಸಿರಿಯ+ಸಂಪತ್ತನ್ನು, ಪಿರಿದು=ಹಿರಿದು, ಯುಕ್ತಿಯಿಂ=ಯುಕ್ತಿಯಿಂದ.

ನಾವು ಇರುವ ಬಾಳು ನಮ್ಮ ಮಟ್ಟಿಗೆ ಸತ್ಯವಾದದ್ದು, ಅದರ ವಿವರಣೆ ಮತ್ತು ವಿಶ್ಲೇಷಣೆ ಮಾಡುವ ಹೊಣೆ ಅಥವಾ ಜವಾಬುದಾರಿ ನಮ್ಮ ಮೇಲಿಲ್ಲ. ಅದನ್ನು ಕೇವಲ ಜಾಣೆಯಿಂದ ಅನುಭವಿಸಿ, ಇದರ ಹಿರಿಮೆಯನ್ನು ಹೆಚ್ಚಿಸುವುದಕ್ಕೆ ಕ್ರಿಯಾಶೀಲರಾಗುವುದೇ, ನಮ್ಮ ಕರ್ತವ್ಯ ಎಂದು ಬಾಳನ್ನು ಹೇಗೆ ನಡೆಸಬೇಕು ಎನ್ನುವ ಮಂತ್ರವನ್ನು ನಮಗೆ ಕೊಟ್ಟಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ನಾವು ನಮ್ಮ ಪ್ರಮೇಯವಿಲ್ಲದೆ ಈ ಜಗತ್ತಿಗೆ ಬಂದಿದ್ದೇವೆ. ನಾವೆಲ್ಲಾ ಈ ಜಗತ್ತನ್ನು ನಡೆಸುವ ಆ ಪರಮ ಚೇತನದ ಅಧೀನ. ನಾವು ಒಪ್ಪಿದರೂ ಬಿಟ್ಟರೂ ಇದೇ ಸತ್ಯ. ಆದ್ದರಿಂದ ನಾವು ಇಲ್ಲಿ ಕೇವಲ ಇದ್ದು ಹೋಗಲು ಬಂದ ಅತಿಥಿಗಳು. ಯಾರ ಮನೆಗಾದರೂ ಅತಿಥಿಗಳು ಬಂದರೆ ಹೇಗಿರುತ್ತಾರೆ? ಬಂದ ಸ್ಥಳದಲ್ಲಿ ಇರುವುದನ್ನು ವಿಮರ್ಶೆ ಮಾಡದೆ, ಇದ್ದು ಹೋಗುತ್ತಾರಲ್ಲವೇ? ಹಾಗೆಯೇ ನಾವೂ ಸಹ ಇದ್ದು ಹೋಗಬೇಕು. ಪರಮಾತ್ಮ ತನಗೆ ಹೇಗೆ ಬೇಕೋ ಹಾಗೆ, ನಮ್ಮನ್ನೂ ಸೇರಿ, ಈ ಜಗತ್ತನ್ನು ಸೃಷ್ಟಿಮಾಡಿಕೊಂಡಿದ್ದಾನೆ. ನಾವು ಕೇವಲ ಇದ್ದು ಹೋಗಬೇಕೇ ಹೊರತು ಇಲ್ಲಿನ ವ್ಯವಸ್ಥೆಯನ್ನು ವಿಮರ್ಶೆ ಮಾಡಬಾರದು.

ಹಾಗೆ ಇರುವಾಗ ನಾವು ಹೇಗಿರಬೇಕು ಎಂದರೆ "ನಾವದರ ಸಿರಿಯಾ ಪಿರಿದಾಗಿಸಲು ನಿಂತು ಯುಕ್ತಿಯಿಂ ದುಡಿಯುವುದೆ" ಎಂದಿದ್ದಾರೆ ಗುಂಡಪ್ಪನವರು. ಎಂದರೆ ಇಲ್ಲಿರುವುದನ್ನು ಅನುಭವಿಸಬೇಕು. ಆ ಪರಮಾತ್ಮ ನಮಗಾಗಿ ಸೃಷ್ಟಿಸಿದ ಸಿರಿ, ಎಂದರೆ ಸಂಪತ್ತನ್ನು ಅಭಿವೃದ್ಧಿಗೊಳಿಸವ ಪ್ರಯತ್ನವನ್ನು ಮಾಡುತ್ತಾ ನಮ್ಮ ಈ ಪ್ರಯಾಣವನ್ನು

ಮುಗಿಸಬೇಕು. ಅದನ್ನೇ 'ಪುರುಷಾರ್ಥ'ವೆಂದಿದೆ ನಮ್ಮ ಸನಾತನ. ಪ್ರಕೃತಿ ಪ್ರಭಾವಿತರಾಗಿ, ಇಂದ್ರಿಯಗಳ ಸ್ಪಂದನಗಳಿಗೆ ಅಧೀನರಾದ ನಾವು ಸಹಜವಾಗೇ 'ಕಾಮ' ಆಸೆ ಪಡುತ್ತೇವೆ. ನಾವು ಕಾಮಿಸಿ ಪಡೆಯುವುದೆಲ್ಲಾ 'ಅರ್ಥ' ಎಂದರೆ ನಾವು ಪಡೆದ ಸಂಪತ್ತು, ಅದನ್ನು ನಾವು 'ಧರ್ಮ'ದಿಂದ ಅನುಭವಿಸಬೇಕು ಮತ್ತು ಪರರಲ್ಲಿ ವಿನಿಯೋಗಿಸಬೇಕು, ಎಂದರೆ ಹಂಚಬೇಕು. ಹೀಗೆ ಧರ್ಮದಿಂದ ವಿನಿಯೋಗ ಮಾಡಿ ಎಲ್ಲವನ್ನೂ ತೊರೆದು ಮೋಕ್ಷವನ್ನು ಪಡೆದು ಮುಕ್ತರಾಗಬೇಕು ಎನ್ನವುದು ಚತುರ್ವಿಧ ಪುರುಷಾರ್ಥದ ನಿಯಮ.

ಪ್ರಕೃತಿಯಿಂದ ಪ್ರಭಾವಿತರಾಗಿ, ಆಸೆಪಟ್ಟು ಪಡೆದು, ಅನುಭವಿಸಿ, ಧರ್ಮದಿಂದ ಹಂಚಿ, ಎಲ್ಲವನ್ನೂ ತೊರೆದು ಪ್ರಕೃತಿಯ ಪ್ರಭಾವದಿಂದ ಮುಕ್ತಿಯನ್ನು ಪಡೆಯುವುದೇ ಪುರುಷಾರ್ಥದ ನಾಲ್ಕು ಪಾದಗಳು. ಪ್ರತಿಯೊಬ್ಬರೂ ಈ 'ಪುರುಷಾರ್ಥ'ವನ್ನು ನಿಜ ಸ್ವರೂಪದಲ್ಲಿ ಪರಿಪಾಲಿಸಿದರೆ, ಈ ಜಗತ್ತು ಸ್ವರ್ಗವಾಗಿಬಿಡುವುದರಲ್ಲಿ ಸಂದೇಹವೇ ಇಲ್ಲ.





# ದೃಶ್ಯ-ನಶ್ಯ-ದರ್ಶನೀಯ 399-404

**ಮುಕ್ತಕ - 399**

**ಕಾಯಮಾತ್ರದುದಲ್ಲವಾತ್ಮಮಾತ್ರದುದಲ್ಲ - ।**
**ವಾಯೆರಡುಮೊಂದಾಗಲದು ಜೀವಲೀಲೆ ॥**
**ತಾಯಿವೊಲು ನಿನಗಾತ್ಮ, ಮಡದಿವೊಲು ಕಾಯುವವ ।**
**ರಾಯವನು ಸರಿನೋಡು – ಮಂಕುತಿಮ್ಮ ॥**

ಕಾಯಮಾತ್ರದುದಲ್ಲವಾತ್ಮಮಾತ್ರದುದಲ್ಲವಾಯೆರಡುಮೊಂದಾಗಲದು=ಕಾಯ+ಮಾತ್ರದುದು+
ಅದಲ್ಲವು+ಆತ್ಮ+ಮಾತ್ರದುದು+ಅದಲ್ಲವು+ಆ+ಎರಡುಂ+ಒಂದಾಗಲು+ಅದು,
ಕಾಯವವರಾಯವನು=ಕಾಯುವ+ಅವರ+ಆಯವನು.
ತಾಯಿವೊಲು=ತಾಯಿಯಂತೆ, ಮಡದಿವೊಲು=ಹೆಂಡತಿಯಂತೆ, ಆಯವನು=ಅವಶ್ಯಕತೆಯನ್ನು.

ನಮ್ಮ ಜೀವನವು ಕೇವಲ ದೇಹದಿಂದಾಗಲೀ ಅಥವಾ ಕೇವಲ ಆತ್ಮದಿಂದಾಗಲೀ ನಡೆಯುವುದಿಲ್ಲ. ಇವರೆಡೂ ಒಂದಾದಾಗ ಮಾತ್ರ ಜೀವನ ಸಾಗುತ್ತದೆ. ಆತ್ಮ ತಾಯಿಯಂತಾದರೆ ದೇಹವು ಮಡದಿಯಂತೆ. ಹೇಗೆ ನಾವು ತಾಯಿ ಮತ್ತು ಮಡದಿಯರನ್ನು ಸಮಭಾವದಿಂದ ನೋಡಿಕೊಳ್ಳುತ್ತೇವೆಯೋ, ಅದೇ ರೀತಿ ದೇಹ ಮತ್ತು ಆತ್ಮಗಳ ಸಮನ್ವಯವನ್ನು ಕಾಯ್ದುಕೊಳ್ಳಬೇಕು ಎಂದು ದೇಹಾತ್ಮ ಸಂಬಂಧವನ್ನು ವಿಶ್ಲೇಷಣೆ ಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ,

ಎಲ್ಲಿಂದಲೋ ಬಂದು ಈ ದೇಹವನ್ನು ಹೊಕ್ಕು ಈ ದೇಹವನ್ನು ತನ್ನ ಪ್ರಯಾಣಕ್ಕಾಗಿ ಒಂದು ವಾಹನದಂತೆ ಉಪಯೋಗಿಸುವ ಆತ್ಮಕ್ಕೆ ಈ ದೇಹವು ಬಹಳ ಮುಖ್ಯ ಮತ್ತು ತಾಯ ಗರ್ಭದಲ್ಲಿ ರೂಪುಗೊಂಡ ಆ ದೇಹಕ್ಕೆ ಈ ಜಗತ್ತಿನ ದರ್ಶನ ಕೇವಲ ಆತ್ಮದಿಂದ ಅಥವಾ ಚೇತನದಿಂದಲೇ ಸಾಧ್ಯ. ಈ ಜಗತ್ತಿನಾಟ ನಡೆಯುವುದು ದೇಹ ಮತ್ತು ಆತ್ಮದ ಪರಸ್ಪರ ಪೂರಕವಾದ ಅಸ್ತಿತ್ವದಿಂದ. ಹಾಗಾಗಿ ನಮ್ಮ ಬದುಕಿನಲ್ಲಿ ಇವೆರಡಕ್ಕೂ ಸಮಾನವಾದ ಮಹತ್ವವನ್ನು ನೀಡಬೇಕು.

ಜಗತ್ತಿನ ಬದುಕಿನಲ್ಲಿ ಹಿಂದೆಯೂ ಇದ್ದು, ತಾಯ ಗರ್ಭದಲ್ಲಿಯ ದೇಹವನ್ನು ಧರಿಸುವ ಆತ್ಮವನ್ನು ತಾಯಂತೆಯೂ ಮತ್ತು ಆ ತಾಯ ಗರ್ಭದಿಂದ ನಂತರ ಹೊರಬಂದ ಈ ದೇಹವನ್ನು, ನಮ್ಮ ಬದುಕಿನಲ್ಲಿ ನಂತರ ಬರುವ ಮಡದಿಯಂತೆಯೂ ನೋಡಬೇಕು ಎಂದಿದ್ದಾರೆ ಮಾನ್ಯ ಗುಂಡಪ್ಪನವರು.

ಹೇಗೆ ಸಂಸಾರದಲ್ಲಿ ಸಮನ್ವಯತೆಯನ್ನು ಕಾಪಾಡಲು ಹೆತ್ತ ತಾಯಿ ಮತ್ತು ಕಟ್ಟಿಕೊಂಡ ಹೆಂಡತಿಯನ್ನು ಸಮನಾಗಿ ನೋಡಬೇಕಾಗುತ್ತದೋ ಹಾಗೆಯೇ ದೇಹ ಮತ್ತು ಆತ್ಮಗಳೊಂದಿಗೆ 'ಅವರಾಯವನು ಸರಿನೋಡು ಎಂದು ಡಿ.ವಿ.ಜಿ ಯವರು ಹೇಳುವಂತೆ ಆಯವರಿತು ನಡೆದುಕೊಳ್ಳಬೇಕು ಎಂಬುದೇ ಈ ಮುಕ್ತಕದ ಹೂರಣ.

**ಮುಕ್ತಕ - 400**

**ದೃಶ್ಯವೆಲ್ಲವು ನಶ್ಯವಾದೊಡೇಂ? ದೃಷ್ಟಿಗದು।**
**ವಶ್ಯವಿರುವನಕದನು ದೃಷ್ಟಿಪುದೆ ಕಾರ್ಯಂ॥**
**ವಿಶ್ವಾನುಭವವೆ ವಿಶ್ವಾತ್ಮಾನುಭವಕೆ ಪಥ।**
**ನಶ್ಯದಿಂದವಿನಶ್ಯ - ಮಂಕುತಿಮ್ಮ॥**

ದೃಶ್ಯವೆಲ್ಲವು=ದೃಶ್ಯವು+ಎಲ್ಲವು, ನಶ್ಯವಾದೊಡೇಂ=ನಶ್ಯ+ವಾದೊಡೆ+ಏಂ, ದೃಷ್ಟಿಗದು=ದೃಷ್ಟಿಗೆ+ಅದು,
ವಶ್ಯವಿರುವನಕದನು=ವಶ್ಯವು+ಇರುವನಕ+ಅದನು, ನಶ್ಯದಿಂದವಿನಶ್ಯ=ನಶ್ಯದಿಂದ+ಅವಿನಶ್ಯ.
ದೃಶ್ಯ = ಕಾಣಬಹುದಾದದ್ದು, ನಶ್ಯ ನಾಶವಾಗುವುದು, ಅವಿನಶ್ಯ=ನಾಶವಿಲ್ಲದ್ದು,

ನಮಗೆ ಕಾಣುವುದೆಲ್ಲವೂ ನಾಶವಾಗುವಂತಹದ್ದಾದರೂ, ನಮ್ಮ ನೋಟದ ಪರಿಧಿಗೆ ಬಂದಾಗ ಅದು ಸತ್ಯವಾಗಿರುತ್ತದೆ. ಹಾಗಾಗಿ ಕೇವಲ ನೋಡುವುದಷ್ಟೇ ನಮ್ಮ ಕರ್ತವ್ಯ. ವಿಶ್ವದ ಅನುಭವವೇ ವಿಶ್ವಾತ್ಮಾನುಭವಕ್ಕೆ ದಾರಿ ಮತ್ತು ನಾಶವಾಗುವುದರ ಮೂಲಕವೇ ಅವಿನಾಶಿಯಾದ ಆ ಪರಮಾತ್ಮನನ್ನು ಅರಿತುಕೊಳ್ಳಲು ಸಾಧ್ಯವೆಂದು ನಮ್ಮ ಬದುಕಿನಲ್ಲಿ ಸತ್ಯವಾದ ಅರಿವಿನ ಮತ್ತು ಅರಿವಿಗೆ ಮಾರ್ಗದ ಪರಿಯನ್ನು ಅರುಹಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಈ ಜಗತ್ತು ಜಡ ಮತ್ತು ಚೇತನದಿಂದ ಆಗಿದೆ. ಜಡಕ್ಕೆ ರೂಪವುಂಟು. ಚೇತನಕ್ಕೆ ರೂಪವಿಲ್ಲ. ಆದರೆ ಆ ಜಡದ ರೂಪ ಬದಲಾಗುತ್ತಾ ಇರುತ್ತದೆ. ಯಾವ ರೂಪವೂ ಶಾಶ್ವತವಾಗಿರುವುದಿಲ್ಲ. ಚೇತನಕ್ಕೆ ಮಾತ್ರ ನಾಶವಿಲ್ಲ. ಅದು ಅನಶ್ಯ. ಜಡದ ಈಗಿನ ರೂಪ ನಾಶವಾಗಿ ಮತ್ತೊಂದು ರೂಪವನ್ನು ಪಡೆದುಕೊಂಡರೂ ನಾವು ನೋಡುವಾಗಿನ ರೂಪ ನಮಗೆ ಸತ್ಯವಲ್ಲವೆ. ಅದನ್ನು ನೋಡುವುದಷ್ಟೇ ನಮ್ಮ ಕರ್ತವ್ಯ.

ಉದಾಹರಣೆಗೆ, ಒಂದು ಪುಟ್ಟ ಮಗು, ಮಗುವಾಗೇ ಇರದೆ, ಬಾಲಕ(ಕಿ)ನಾಗಿ ಯುವಕ(ತಿ)ನಾಗಿ, ವಯಸ್ಕನಾಗಿ, ಮುದುಕ(ಕಿ)ನಾಗಿ, ಒಂದು ದಿನ ಆ ರೂಪವೂ ಇಲ್ಲದೆ ಮಣ್ಣಲ್ಲಿ ಮಣ್ಣಾಗಿ ಹೋಗುತ್ತದೆ. ಹೀಗೆ ಬದಲಾಗುತ್ತಾ ಹೋಗುವ ರೂಪವು ಶಾಶ್ವತವಲ್ಲದಿದ್ದರೂ ಆಯಾ ಅವಸ್ಥೆಗಳಲ್ಲಿ ನಾವು ನೋಡುವ ದೃಶ್ಯ (ಕಾಣಬಹುದಾದದ್ದು), ಸತ್ಯವಲ್ಲವೇ?

ಇನ್ನು ಚೇತನಕ್ಕೆ ರೂಪವಿಲ್ಲ. ಅದನ್ನು ರೂಪಗಳ ಮೂಲಕ, ಕೇವಲ ಅನುಭವದಿಂದ ಅರಿಯಬಹುದು. ಆದರೆ ಅದು ಶಾಶ್ವತ ಮತ್ತು ನಿರಂತರ. ಕಾಣುವಂತಹ ಮತ್ತು ಬದಲಾಗುತ್ತಾ ಹೋಗುವ ರೂಪ ಮತ್ತು ಕಾಣಲಾಗದ ಚೇತನಗಳ ಸಮ್ಮಿಲನವೇ ಈ ಜಗತ್ತು. ಕಾಣುವಂತಾ ರೂಪ, ಎಂದರೆ ಈ ದೇಹ. ಈ ಜಗತ್ತಿನ ಅನುಭವ ಪಡೆಯುವುದೇ ಆ ಕಾಣಲಾಗದ ಚೇತನದ ಮೂಲಕ ಮತ್ತು ಕಾಣಲಾಗದ ಚೇತನ ತನ್ನ ಜಗತ್ತಿನ ಪಯಣವನ್ನು ನಡೆಸುವುದೇ ಬದಲಾಗುತ್ತಾ ಹೋಗುವ ರೂಪ ಹೊಂದಿದ ಈ ದೇಹದ ಮೂಲಕ. ಇದನ್ನೇ ಮಾನ್ಯ ಗುಂಡಪ್ಪನವರು 'ವಿಶ್ವಾನುಭವವೆ ವಿಶ್ವಾತ್ಮಾನುಭವಕೆ ಪಥ' ಎಂದರು.





ಪರಮ ಚೇತನವನ್ನು ಅರಿಯುವುದೇ ಆಧ್ಯಾತ್ಮದ ಗುರಿ. ಆದರೆ ಅವಿನಾಶಿಯಾದ ಆ ಪರಮ ಚೇತನವನ್ನು ಅರಿಯಲು ನಾಶಿಯಾದ ಈ ದೇಹದ ಅಥವಾ ರೂಪದ ಮೂಲಕವೇ ಸಾಧ್ಯ ಎಂದು ಜಡ ಮತ್ತು ಜೀವಗಳ ಒಂದು ಅವಿನಾಭಾವ ಸಂಬಂಧವೇ ಈ ಮುಕ್ತಕದ ಹೂರಣ.

**ಮುಕ್ತಕ - 401**

**ಮರಣಶಯ್ಯೆಯದೆಂದು ತಿಳಿದೊಡಂ ರೋಗಿಯನು |**
**ಹರಣಮಿರುವನ್ನೆಗಂ ಪರಿಚರಿಸುವಂತೆ ||**
**ಸ್ಥಿರವಲ್ಲವೀ ಲೋಕವಾದೊಡಮದುಳ್ಳನಕ |**
**ಚರಿಸು ನೀನಾಳಾಗಿ - ಮಂಕುತಿಮ್ಮ ||**

ಮರಣಶಯ್ಯೆಯದೆಂದು=ಮರಣಶಯ್ಯೆ+ಅದು+ಎಂದು,
ಹರಣಮಿರುವನ್ನೆಗಂ=ಹರಣಂ+ಇರುವ+ಅನ್ನೆಗಂ, ಸ್ಥಿರವಲ್ಲವೀ=ಸ್ಥಿರವಲ್ಲವು+ಈ,
ಲೋಕವಾದೊಡಮದುಳ್ಳನಕ=ಲೋಕವಾದೊಡಂ+ಅದು+ಉಳ್ಳನಕ, ನೀನಾಳಾಗಿ=ನೀನು+ಆಳಾಗಿ
ಶಯ್ಯೆ=ಹಾಸಿಗೆ, ಮಂಚ, ತಿಳಿದೊಡಂ=ತಿಳಿದರೆ, ಹರಣ=ಪ್ರಾಣ, ಚೇತನ, ಜೀವ, ಅನ್ನೆಗಂ=ಅಲ್ಲಿಯತನಕ
ಪರಿಚರಿಸು=ಉಪಚರಿಸು, ಸ್ಥಿರವಲ್ಲವು=ಶಾಶ್ವತವಲ್ಲವು, ಉಳ್ಳನಕ=ಇರುವತನಕ.

ರೋಗಿ ಇನ್ನೇನು ಸಾಯುವ ಸ್ಥಿತಿಯಲ್ಲಿದ್ದಾನೆ ಎಂದು ಅರಿತ ವೈದ್ಯನು, ಆ ರೋಗಿಯಲ್ಲಿ ಪ್ರಾಣವಿರುವ ತನಕ, ಔಷಧಿಗಳನ್ನು ಇತ್ತು ಪರಿಚರ್ಯ ಮಾಡುವ ರೀತಿಯಲ್ಲಿ, ಸ್ಥಿರವಲ್ಲದ, ಈ ಲೋಕದಲ್ಲಿ ನಮ್ಮೊಳಗೆ ಪ್ರಾಣವಿರುವ ತನಕ ಒಂದು ಆಳಿನಂತೆ ಕೆಲಸಮಾಡುತ್ತಲೇ ಇರಬೇಕು ಎಂದು ಒಂದು ಆದೇಶವನ್ನು ನೀಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ, 'ಬಡಿತವಿರವನಕ ಬಡಿವಾರವಿರಬೇಕು' ಎಂದು ಹೇಳಿದ ಸ್ನೇಹಿತರ ಮಾತು ಜ್ಞಾಪಕಕ್ಕೆ ಬರುತ್ತದೆ.

ಈ ಜಗತ್ತಿನಲ್ಲಿ ಇದ್ದ ಮೇಲೆ, ಬದುಕಬೇಕು. ಇಲ್ಲಿನ ಕಷ್ಟಗಳ ಸರಮಾಲೆಯನ್ನು ಹೊತ್ತು, ಈ ಜೀವನ ಎಂದಾದರೂ ಒಂದು ದಿನ ಕೊನೆಯಾಗುತ್ತದೆ ಅಥವಾ ನಶ್ವರವಾದ ಈ ಬದುಕಿನಿಂದ ಏನಾಗಬೇಕು, ಎಂದು ಹೇಳುವವರಿಗೇನೂ ಕಡಿಮೆ ಇಲ್ಲ. ಅದು ಒಣ ವೇದಾಂತ, ರೋಗಿ ಸಾಯುವತನಕ ವೈದ್ಯರು ಶುಶೂಷೆ ಮಾಡುವುದಿಲ್ಲವೇ? ಹಾಗೆ, ಈ ಜೀವ ಮತ್ತು ದೇಹದ ಸಂಬಂಧವಿರುವ ತನಕ, ಬದುಕಲೇ ಬೇಕು. ಅನಾಸಕ್ತಿಯಿಂದ ಬದುಕುವುದಕ್ಕಿಂತ ಸಾಯುವುದೇ ಲೇಸು.

ತನ್ನ ಕರ್ಮಶೇಷವನ್ನು ಕಳೆಯಲು ಜೀವ ದೇಹಧಾರಣೆ ಮಾಡುತ್ತದೆ. ಕಷ್ಟ ಅಥವಾ ಸುಖಗಳನ್ನು ಅನುಭವಿಸುವ ಮೂಲಕವೇ ಕರ್ಮ ಶೇಷವನ್ನು ಕಳೆಯಲು ಸಾಧ್ಯ. ಅಸಹನೀಯ ಕಷ್ಟಗಳನ್ನು ಅನುಭವಿಸುವಾಗ 'ಅಯ್ಯೋ ಈ ಜೀವನ ಸಾಕು ಸಾಕಾಗಿದೆ' ಎಂದು ಬದುಕುವುದನ್ನು ಮತ್ತು ಬದುಕಿನ ಜಂಜಾಟವನ್ನು ಅನುಭವಿಸುವುದನ್ನು ಬಿಟ್ಟರೆ ಕರ್ಮ ಕಳೆಯುವುದೆಂತು? ಹಾಗಾಗಿ ಬದುಕಲೇ ಬೇಕು. ಪ್ರಾಣವಿರುವ ತನಕ ಬದುಕಲೇಬೇಕು. ಈ ದೇಹಕ್ಕೆ ಅವಶ್ಯಕ ಉಪಚಾರವನ್ನು ಮಾಡುತ್ತಾ, ಅದನ್ನು ಸುಸ್ಥಿತಿಯಲ್ಲಿ ಇಟ್ಟುಕೊಂಡು, ಜೀವನ ಪ್ರಯಾಣವನ್ನು ಸುಗಮವಾಗಿಸಬೇಕು.

ಆದರೆ ಹಾಗೆ ಬದುಕುವಾಗ, ಮಾನ್ಯ ಗುಂಡಪ್ಪನವರು 'ಚರಿಸು ನೀನಾಳಾಗಿ' ಎಂದು ಹೇಳುವಂತೆ, ಒಬ್ಬ ಆಳು ಅಥವಾ ಸೇವಕ ತನ್ನ ಯಜಮಾನ ನಿಗದಿಸಿದ ಕೆಲಸವನ್ನು ಆಸಕ್ತಿಯಿಂದ ಮಾಡಿದರೂ ಅದರ ಫಲಾಫಲಗಳನ್ನು ಆ ಯಜಮಾನನಿಗೇ ಸಮರ್ಪಿಸುವ ಹಾಗೆ, ಒಂದು ನಿರ್ಲಿಪ್ತ ಭಾವದಿಂದ, ಅಂಟಿಯೂ ಅಂಟದ ಹಾಗೆ ಬದುಕಿದರೆ ನಿಜವಾದ ಆನಂದವನ್ನು ಪಡೆಯಬಹುದು.

**ಮುಕ್ತಕ - 402** **ಜವನ ನಿಂದಿಪುದೇಕೆ ಸರ್ವಘಾತಕನೆಂದು |**
**ಭುವಿಗೆ ವೃದ್ಧ ಸಮೃದ್ಧಿಯವನು ಸುಮ್ಮನಿರಲ್ ||**
**ನವಜನಕ್ಕೆಡೆಯೆತ್ತಲಾರುಮೆಡೆಬಿಡದೆ ನಿಲೆ |**
**ನವತೆಯವನಿಂ ಜಗಕೆ - ಮಂಕುತಿಮ್ಮ ||**

ನಿಂದಿಪುದೇಕೆ=ನಿಂದಿಪುದು+ಏಕೆ?, ಸಮೃದ್ಧಿಯವನು=ಸಮೃದ್ಧಿ+ಅವನು,
ನವಜನಕ್ಕೆಡೆಯೆತ್ತಲಾರುಮೆಡೆಬಿಡದೆ=ನವ+ಜನಕ್ಕೆ+ಎಡೆ+ಎತ್ತಲು+ಆರುಂ+ಎಡೆ+ಬಿಡದೆ,
ನವತೆಯವನಿಂ+ನವತೆ+ಅವನಿಂ.
ಜವನ=ಯಮನ, ಸರ್ವಘಾತಕ=ಎಲ್ಲರ ನಾಶಮಾಡುವವ, ಭುವಿಗೆ=ಭೂಮಿಗೆ, ಎಡೆ=ಸ್ಥಳ, ಜಾಗ,
ಆರುಂ=ಯಾರೂ, ನವತೆ=ಹೊಸತನ, ಅವನಿಂ=ಅವನಿಂದ.

ಎಲ್ಲರನ್ನೂ ನಾಶಮಾಡುವವನೆಂದು ಆ ಯಮರಾಯನನ್ನು ನಿಂದಿಸುವುದೇಕೆ? ಅವನು ತನ್ನ ಕೆಲಸಮಾಡದೇ ಸುಮ್ಮನಿದ್ದರೆ, ಈ ಭೂಮಿಯ ಮೇಲೆ ಮುದುಕರೇ ಅಧಿಕವಾಗಿಬಿಡುತ್ತಾರೆ. ಇಲ್ಲಿರುವವರಾರೂ ಸ್ಥಳ ಬಿಡದೆ ಇಲ್ಲೇ ನೆಲೆ ನಿಂತರೆ ಹೊಸ ಜನ ಬರಲು ಆಸ್ಪದವೇ ಇರುವುದಿಲ್ಲ. ಹಾಗಾಗಿ ಆ 'ಯಮ'ನಿಂದಲೇ ಈ ಜಗತ್ತಿಗೆ ಹೊಸತನ ಉಂಟಾಗುತ್ತದೆ ಎಂದು ಜನನ ಮರಣಗಳ ಸೂಕ್ಷ್ಮತೆಯನ್ನು ಪ್ರಸ್ತಾಪಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಜವರಾಯನೆಂದರೆ ಯಮರಾಯ. ಯಮನಿಗೆ, ಕಾಲ ಎಂದೂ ಮತ್ತೊಂದು ಹೆಸರು. ಈ ಜಗತ್ತಿನಲ್ಲಿ ಜನಿಸಿದ ಪ್ರತೀ ಜೀವಿಗೂ ಒಂದು ಸಮಯವುಂಟು. ಆ ಕಾಲ ಬಂದಾಗ ಎಲ್ಲರೂ ಎಲ್ಲವನ್ನೂ ಬಿಟ್ಟು ಇಲ್ಲಿಂದ ಹೊರಡಲೇ ಬೇಕು. ಹಾಗೆ ಆಗದೆ ಇಲ್ಲಿ ಜನಿಸಿದವರೆಲ್ಲಾ ಇಲ್ಲೇ ಇದ್ದು ಬಿಟ್ಟರೆ ಹೊಸದಾಗಿ ಹುಟ್ಟುವವರಿಗೆ ಇಲ್ಲಿ ಸ್ಥಳವೆ ಇಲ್ಲದೆ, ಈ ಜಗತ್ತೆಲ್ಲಾ ಕೇವಲ ವಯೋವೃದ್ಧರಿಂದ ತುಂಬಿಹೋಗುತ್ತದೆ ಮತ್ತು ಬದುಕು ಅಸಹನೀಯವಾಗುತ್ತದೆ, ಅಲ್ಲವೇ? ಹಾಗಾಗಿ ಸಾವು ಎಂಬ ಪ್ರಕ್ರಿಯೆ ಇರುವುದರಿಂದ ಆ ಕಾಲ ಅಥವಾ ಯಮನೆಂಬುವವನು, ಜಗತ್ತಿನಲ್ಲಿ ಹಳತನ್ನು ತೆಗೆದು, ಹೊಸತನ್ನು ತುಂಬಿ ಇಲ್ಲಿ ಸದಾ ಕಾಲ ಒಂದು ಸಮನ್ವಯವನ್ನು ಕಾಪಾಡಿಕೊಳ್ಳುತ್ತಾನೆ.

ಒಂದು ಮರದ ಬೀಜ ತನ್ನನ್ನು ಇಲ್ಲವಾಗಿಸಿ ಹೊಸ ಸಸಿ, ತನ್ಮೂಲಕ ಒಂದು ಹೊಸ ಗಿಡಕ್ಕೋ, ಮರಕೋ ಎಡೆ ಮಾಡಿಕೊಡುವ ಹಾಗೆ ಈ ಜಗತ್ತಿನ ಜೀವಿಗಳು ಕಾಲವಶವಾದರೆ, ಹೊಸ ಜೀವಿಗಳಿಗೆ ಅವಕಾಶ





ಸಿಗುತ್ತದೆ. ಕಠ ಉಪನಿಷತ್ತಿನಲ್ಲಿ (6) "ಸಸ್ಯಮಿವ ಮರ್ಥ ಪಚ್ಯತೆ ಸಸ್ಯಮಿವಾಜಾಯತೆ ಪುನಃ". ಸಸ್ಯದಂತೆಯೇ ಮನುಷ್ಯನೂ ಪಕ್ವವಾಗುತ್ತಾನೆ, ನಾಶವಾಗುತ್ತಾನೆ, ಮತ್ತೆ ಜನಿಸುತ್ತಾನೆ. ಈ ದೃಷ್ಟಾಂತವನ್ನು ನಾವು ಪ್ರಕೃತಿಯಲ್ಲಿ ಹೇರಳವಾಗಿ ಕಾಣುತ್ತೇವೆ. ನಾವೂ ಸಹ ಪ್ರಕೃತಿಯ ಒಂದು ಅಂಗವಾದ್ದರಿಂದ ಇಲ್ಲಿ ಬಂದು ಜೀವಿಸಿ, ಅನುಭವಿಸಿ ನಮ್ಮ ಕಾಲ ಬಂದಾಗ ಜಾಗ ತೆರವುಗೊಳಿಸಿ ಹೊಸಬರಿಗೆ ಸ್ಥಳ ಮಾಡಿಕೊಡುತ್ತೇವೆ. ಇದು ಪ್ರಕೃತಿ ನಿಯಮ'.

ಹಾಗಾಗಿ ಒಂದು ಕಾಲಕ್ಕೆ ಜನಿಸಿದ ನಾವೂ ಸಹ ಕಾಲ ಬರುವವರೆಗೆ ಜೀವಿಸಿ ಈ ಇಳೆಗೆ ಹೊಸತನ್ನು ಬರಮಾಡಿಕೊಂಡು, ನಮ್ಮ ಕಾಲ ಬಂದಾಗ ಹೊರಡಬೇಕು. ಆದರೆ ಜನಿಸಿದ ಕಾಲದಿಂದ ಹೊರಡುವ ಕಾಲದ ಮಧ್ಯೆ ನಾವು ಹೇಗೆ ಜೀವಿಸುತ್ತೇವೆ? ಎನ್ನುವುದೇ ಪ್ರಶ್ನೆ. ಮುಂದೆ ಬರುವ ನೂತನರಿಗೆ ಸುಖದಿಂದ ಜೀವಿಸಲು ಅನುವುಮಾಡಿಕೊಡುವಂತೆ ಜೀವಿಸಿದರೆ ನಮ್ಮ ಬದುಕೂ ಸಾರ್ಥಕವಾಗುತ್ತದೆ.

**ಮುಕ್ತಕ - 403** **ಹೊಳಪು ಹೊಳಪುಗಳ ನಡುವೆ ಬಿಡುವಿನಿತು ರತ್ನದಲಿ।**
**ಬೆಳಕು ಬೆಳಕಿನ ನಡುವೆ ಅನಿತಿನಿತು ನೆರಳು॥**
**ಬೆಳಸು ಬೆಳಸಿನ ಸಾಲು ನಡುವೆ ಬದಿ ಗದ್ದೆಯಲಿ।**
**ಉಳಿವಿಗಳಿವಿನ ನೆರೆಯೊ - ಮಂಕುತಿಮ್ಮ॥**

ಬಿಡುವಿನಿತು=ಬಿಡುವು+ಇನಿತು, ಉಳಿವಿಗಳಿವಿನ=ಉಳಿವಿಗೆ+ಅಳಿವಿನ, ನೆರೆಯೊ=ಸಹಾಯ

ಹೇಗೆ ರತ್ನಹಾರದಲ್ಲಿ ಒಂದು ರತ್ನಕ್ಕೂ ಮತ್ತೊಂದಕ್ಕೂ ಮಧ್ಯೆ ಚಿನ್ನದ ಗೆರೆಯಿರಿಸಿ ರತ್ನದ ಹೊಳಪನ್ನು ಅಧಿಕವಾಗಿಸುತ್ತಾರೋ, ಹೇಗೆ ನೆರಳು ತಾನಿದ್ದು ಬೆಳಕಿಗೆ ಪ್ರಾಮುಖ್ಯತೆ ನೀಡುತ್ತದೋ, ಹೇಗೆ ಹೊಲ ಗದ್ದೆಗಳಲ್ಲಿ ಪೈರಸಾಲ ನಡುವಿನ ಬದಿ ತನ್ನ ಚೌಕಟ್ಟಿನಲ್ಲಿರುವ ಬೆಳೆಯನ್ನು ಕಾಯುತ್ತದೋ, ಹಾಗೆಯೇ ಉಳಿವಿಗೆ ಅಳಿವು ಪೂರಕವಾಗಿರುತ್ತದೆ ಎಂದು ಪ್ರಸ್ತಾಪಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಬದುಕೇ ಹಾಗೆ. ಪರಸ್ಪರ ವಿರೋಧವಾದರೂ ಒಂದರ ಪಕ್ಕದಲ್ಲಿ ಒಂದು ಇದ್ದೇ ಇರುತ್ತದೆ. ರಾಮನಿರ್ದಂದು ರಾವಣನೊಬ್ಬನಿರ್ದನಲ"(ಮುಕ್ತಕ 288) ಮತ್ತು ದರಿಯಿರದೆ ಗಿರಿಯಿಲ್ಲ, ನೆರಳಿರದೆ ಬೆಳಕಿಲ್ಲ (ಮುಕ್ತಕ 293)" ಎಂದು ಗುಂಡಪ್ಪನವರೇ ಹೇಳುವಂತೆ, ಜಗತ್ತಿನಲ್ಲಿ ಗುಣವಿರೋಧವಿರುವ ಹಲವಾರು ಒಂದಕ್ಕೊಂದು ಪೂರಕವಾಗಿ ಇರುತ್ತವೆ. ರಾವಣನೊಬ್ಬ ಇದ್ದದ್ದರಿಂದ ರಾಮನಿಗೆ ಪ್ರಾಮುಖ್ಯತೆ.

ಹಾಗೆಯೇ ಕಹಿ ಇದ್ದರೆ ಸಿಹಿಗೆ ಬೆಲೆ, ದುಷ್ಟತನವಿದ್ದರೆ ಸಜ್ಜನಿಕೆಗೆ ಬೆಲೆ. ಕಷ್ಟವಿದ್ದರೆ ಸುಖಕ್ಕೆ ಬೆಲೆ. ವಾತಾವರಣದಲ್ಲಿ ತಾಪಮಾನ ಹೆಚ್ಚಾದಾಗ ಅಧಿಕ ಮಳೆ ಬರುತ್ತದೆ. ಮಳೆಗೆ ತಾಪ ಕಾರಣವಾದರೂ ತಾಪದ ಅಂತ್ಯಕ್ಕೆ ಮಳೆ ಕಾರಣವಾಗುತ್ತದೆ. ಒಂದು ಬೀಜ ತಾನಿಲ್ಲವಾದಾಗ ಮಾತ್ರ ಹಲವಾರು ಬೀಜಗಳ ಹುಟ್ಟಿಗೆ ಕಾರಣವಾಗುತ್ತದೆ. ಹೀಗೆ ಒಂದರ ಅಳಿವು ಮತ್ತೊಂದರ ಉಳಿವಿಗೆ ಪೂರಕವಾಗಿರುತ್ತದೆ.

ಆ ಪರಮಾತ್ಮನ ಸೃಷ್ಟಿಯಲ್ಲಿರುವ ಅಸಮತೆಯೇ ಈ ಜಗತ್ತು ಇಷ್ಟೊಂದು ಸುಂದರವಾಗಿರುವುದಕ್ಕೆ ಕಾರಣ. ಈ ಮುಕ್ತಕದಲ್ಲಿ ಗುಂಡಪ್ಪನವರು ಉಳಿವಿಗಳಿವಿನ ನೆರೆಯೊ" ಎಂದು ಹೇಳುವಂತೆ ಸೃಷ್ಟಿಯಲ್ಲಿ ಒಂದರ ಅಳಿವಿನಿಂದಲೇ ಮತ್ತೊಂದರ ಉಳಿವು ಸಾಧ್ಯವಾಗುತ್ತದೆ, ಎಂಬುದೇ ಈ ಮುಕ್ತಕದ ಹೂರಣ.

**ಮುಕ್ತಕ-404**

**ದೇವರ್ಕಳುದಿಸಿ ಮರೆಯಹರು; ದೇವತ್ವ ಚಿರ।**
**ಜಾವ ದಿನ ಬಂದು ಹೋಗುವುವು; ಕಾಲ ಚಿರ॥**
**ಜೀವದ ವ್ಯಕ್ತಿ ಸಾಯ್ವುದು; ಜೀವಸತ್ವ ಚಿರ।**
**ಭಾವಿಸಾ ಕೇವಲವ - ಮಂಕುತಿಮ್ಮ॥**

ದೇವರ್ಕಳುದಿಸಿ=ದೇವರ್ಗಳ್+ಉದಿಸಿ
ಉದಿಸಿ=ಉದಯಿಸಿ, ಮರೆಯಹರು=ಮರೆಯಾಗುವರು, ಹೋಗುವುವು=ಹೋಗುವುವು,
ಜೀವಸತ್ವ=ಚೇತನ, ಕೇವಲವ=ಕೈವಲ್ಯದ ಶಕ್ತಿ.

ದೇವರುಗಳು ಉದಯಿಸಿ ಮರೆಯಾಗುತ್ತಾರೆ, ಆದರೆ ಅವರ ದೇವತ್ವ ಸದಾ ಇರುತ್ತದೆ. ಅವ್ಯಾಹತ ಕಾಲಪ್ರವಾಹದಲ್ಲಿ ಜಾವ, ದಿನ ವಾರಗಳು ಬಂದುಹೋಗುತ್ತವೆ, ಆದರೆ ಕಾಲ ನಿರಂತರ. ಹಾಗೆಯೇ ಒಬ್ಬ ವ್ಯಕ್ತಿ ಮರಣ ಹೊಂದಿದರೆ ಕಾಯ ಕೊನೆಯಾದರೂ ಆ ಕಾಯದಲ್ಲಿ ವಾಸಿಸಿದ ಚೇತನ ನಿರಂತರ. ಹೀಗೆ ಜಗತ್ತಿನ ಎಲ್ಲದರಲ್ಲಿ ಇದ್ದು, ಅದು ಇರುವ ವಸ್ತು ನಾಶವಾದರೂ, ತಾನು ಚಿರವಾಗಿ, ನಿರಂತರವಾಗಿ ಇರುವ "ಚೈತನ್ಯವನ್ನು" ಸದಾಕಾಲ ಭಾವಿಸು ಎಂದು ಒಂದು ಆದೇಶವನ್ನು ನೀಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ನಮ್ಮ ಸನಾತನದಲ್ಲಿ ಬರುವ ಇಂದ್ರ, ವರುಣ, ವಾಯು, ಅಗ್ನಿ ಮುಂತಾದ ದೇವತೆಗಳದು ಒಂದು ಪದವಿ. ಆ ಪದವಿಯನ್ನು ಅಲಂಕರಿಸಿ, ತಮ್ಮ ಅವಧಿ ಮುಗಿದ ನಂತರ ಮರೆಯಾಗುವರು. ಮತ್ತೊಬ್ಬ ದೇವತೆ ಆ ಪದವಿಯನ್ನು ಅಲಂಕರಿಸುವವರು. ಹಾಗಾಗಿ ಆ ದೇವತೆಗಳ ಪ್ರಭಾವ ನಿರಂತರವಾಗಿರುತ್ತದೆ.

ಹಾಗೆಯೇ ಕಾಲ ಅಥವಾ ಸಮಯವೆನ್ನುವುದು, ನಿರಂತರವಾಗಿ ಹರಿಯುವ ಪ್ರವಾಹ. ನಮ್ಮ ಅನುಕೂಲಕ್ಕೆ ಅನುಗುಣವಾಗಿ ಅದನ್ನು ಜಾವ, ದಿನ, ವಾರ, ಪಕ್ಷ ಮತ್ತು ವರ್ಷವೆಂದು, ಒಂದೊಂದು ಕಾಲಮಾನಕ್ಕೆ ಹೆಸರಿಟ್ಟು, ಅವುಗಳು ಸರಿದು ಹೋದರೂ ಕಾಲವು ನಿರಂತರವಲ್ಲವೇ?

ಯಾರಾದರೂ ಮರಣ ಹೊಂದಿದರೆ 'ಸತ್ತು ಹೋದರು' ಎಂದು ಹೇಳುತ್ತೇವೆ. ಅಂದರೆ ಒಂದು ಪ್ರಾಣಿಯಲ್ಲಿದ್ದ 'ಸತ್ ವಸ್ತು'ವು ದೇಹ ತೊರೆದು ಹೊರಟು ಹೋಯಿತು ಎಂದು ಅರ್ಥ. ಹಾಗಾಗಿ ನಮ್ಮ ದೇಹದಲ್ಲಿರುವ ಚೈತನ್ಯವೊಂದೆ ಸತ್ ವಸ್ತು. ಅದೂ ಸಹ ನಿರಂತರವೆನ್ನುತ್ತಾರೆ ಗುಂಡಪ್ಪನವರು.

(241)

ನರ-ನಾರೀ ಪ್ರೇಮ 405-408 ಕಗ್ಗ ರಸಧಾರೆ-2

ಹೀಗೆ ದೇವತೆಗಳನ್ನು, ಪ್ರಕೃತಿಯನ್ನು, ಕಾಲಪ್ರವಾಹವನ್ನು ಮತ್ತು ಸಕಲ ಚರಾಚರ ಪ್ರಾಣಿಗಳನ್ನೂ ಸಕ್ರಿಯವಾಗಿಡುವ, ಪರಮಾತ್ಮನ, ಪರಬ್ರಹ್ಮನ ಅಥವಾ ಆ ಪರಮ ಚೇತನನ ಒಂದಂಶವಾದ, ಈ ಜಗತ್ತಿನ ಎಲ್ಲಕ್ಕೂ ಶಕ್ತಿಯ ಮೂಲವಾದ ಆ ಚೇತನವನ್ನು ಮನಸ್ಸು ಬುದ್ಧಿಗಳಲ್ಲಿ ಭಾವಿಸಬೇಕು. ಅನ್ಯ ವಿಷಯಗಳಲ್ಲಿ, ವಸ್ತು ವ್ಯಕ್ತಿಗಳಲ್ಲಿ ನಮ್ಮ ಮನಸ್ಸು ಬುದ್ದಿಗಳು ಓಡಾಡದೆ, ಈ ಎಲ್ಲ ವಿಷಯ, ವಸ್ತು ವ್ಯಕ್ತಿಗಳಿಗೆ, ಕಾರಣ, ಕಾರಕ ಮತ್ತು ಪ್ರೇರಕವಾದ ಆ ಪರಮ ಚೇತನವನ್ನೇ ಭಾವಿಸಿಬೇಕು, ಅದೇ ನಮ್ಮ ಭಕ್ತಿ ಅಥವಾ ಧ್ಯಾನದ ವಸ್ತುವಾಗಬೇಕು.ಅದೇ ನಿಜವಾದ ಭಕ್ತಿ ಅಥವಾ ಪೂಜೆ.

# ನರ-ನಾರೀ ಪ್ರೇಮ 405-408

**ಮುಕ್ತಕ-405**

**ಪರಬೊಮ್ಮ ಜೀವಭೇದದಿ ನಿಜೈಕ್ಯವ ಮರೆಯೆ।**
**ಮರಳಿ ತನ್ನೊಟ್ಟನವನರಸಲೆಚ್ಚರಿಸಲ್ ॥**
**ನರನಾರಿಯರ ಪರಸ್ಪರ ಮೋಹದಲಿ ಮಾಯೆ।**
**ನಿರವಿಸಿಹಳಂಕುಶವ – ಮಂಕುತಿಮ್ಮ॥**

ತನ್ನೊಟ್ಟನವನರಸಲೆಚ್ಚರಿಸಲ್=ತನ್ನ+ಒಟ್ಟನ್+ಅವನ್+ಅರಸಲ್+ಎಚ್ಚರಿಸಲ್,

ನಿರವಿಸಿಹಳಂಕುಶವ=ನಿರವಿಸಿಹಳ್+ಅಂಕುಶವ.

ಒಟ್ಟನ್=ಸೇರಬೇಕಾದ ಸ್ಥಳ, ಅರಸಲ್=ಹುಡುಕಲು, ನಿರವಿಸಿಹಳ್=ನಿರ್ಮಿಸಿದ್ದಾಳೆ.

ಜಗತ್ತಿನ ಕೋಟ್ಯಾಂತರ ಜೀವ ಭೇದಗಳಲ್ಲಿ, ಆ ಪರಮಾತ್ಮನೇ ಚೇತನದ ರೂಪದಿ ಸೇರಿ, ತನ್ನ ನಿಜ ಸ್ವರೂಪವನ್ನು ಮರೆತು, ತನ್ನ ಸ್ವಸ್ಥಾನವನ್ನು ಮರೆತು ಇರುವಾಗ, ಅಲ್ಲಿಗೆ ಸೇರಲು ಆತ್ಮವನ್ನು ಎಚ್ಚರಿಸಲು, ನರ ನಾರಿಯರ ಪರಸ್ಪರ ಆಕರ್ಷಣೆಯಲ್ಲಿ, ಮಾಯೆ ಅಂಕುಶವನ್ನು ನಿರ್ಮಿಸಿದೆ ಎಂದು ಒಂದು ಗಹನವಾದ ತತ್ವವನ್ನು ವಿವರಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಆ ಪರಬ್ರಹ್ಮ ತಾನು ಒಬ್ಬಂಟಿ ಎಂತಿರುವುದು ಎಂದು ಬೇಸರಗೊಂಡು ಹಲವಾಗಿ ಪ್ರಕಟಗೊಂಡ, ಎಂದು ನಾವು ಈಗಾಗಲೇ ಹಿಂದಿನ ಮುಕ್ತಕಗಳಿಂದ ಅರಿತಿದ್ದೇವೆ. ಹಾಗೆ ಹಲವಾರು ರೂಪಗಳಲ್ಲಿ ಪ್ರಕಟಗೊಂಡ ಪರಮಾತ್ಮ, ದೇಹ ಅಥವಾ ರೂಪದಲ್ಲಿ ಮಗ್ನನಾಗಿ ತನ್ನ ಮೂಲ ಸ್ವರೂಪವನ್ನು ಮರೆತು, ತಾನೂ ಸಹ ಈ ರೂಪವೋ ಎಂಬಂತೆ ಇದ್ದರೆ, ಹೇಗೆ ಸಾಧ್ಯ, ಪ್ರಯಾಣ ಮುಂದುವರೆಯುವುದು ಹೇಗೆ?

ಆತ್ಮದ ಸಹಾಯಕ್ಕೆ ಮಾಯೆ ಬರುತ್ತಾಳೆ. ಹೇಗೆಂದರೆ ಈ ಜಗತ್ತಿನಲ್ಲಿ ಎಲ್ಲ ರೀತಿಯ ಆಕರ್ಷಣೆಗಳಲ್ಲಿ ಅತೀ ಹೆಚ್ಚಾಗಿರುವುದು ಗಂಡು ಮತ್ತು ಹೆಣ್ಣಿನ ಪರಸ್ಪರ ಆಕರ್ಷಣೆ. ಎರಡೂ ರೂಪದಲ್ಲಿ ಇರುವುದು ಒಂದೇ ಚೇತನವಾದರೂ ದೈಹಿಕ ಭೇದದಿಂದ ತಾನು ಬೇರೆ ಬೇರೆ ಎಂದುಕೊಂಡು ಪರಸ್ಪರ ಆಕರ್ಷಣೆಗೆ ಒಳಗಾಗಿ,

ಆ ಆಕರ್ಷಣೆಯಿಂದ ಜಗತ್ತನ್ನು ಅನುಭವಿಸುತ್ತಾ, ಕಷ್ಟ, ಹಿಂಸೆ, ಆನಂದ ಮುಂತಾದ ಅನುಭವಗಳನ್ನು ಪಡೆದು, ಆ ಅನುಭವಗಳಿಂದ ಪಕ್ವತೆಯನ್ನು ಪಡೆದು “ಅಯ್ಯೋ ಇದೆಲ್ಲ ಮಾಯೆ, ಇದರಿಂದ ಸಿಗುವುದೆಲ್ಲ ಕ್ಷಣಿಕ ಅಥವಾ ಅಶಾಶ್ವತ ಸುಖ” ಎಂಬ ಅರಿವಾಗುತ್ತದೆ.

'ಇದೇ ಅಂಕುಶ' ಮಾಯೆಯಿರಿಸಿದ ಅಂಕುಶ. ಇಂದ್ರಿಯ ಸುಖಗಳ ಅನುಭವವನ್ನು ಪಡೆಯುತ್ತಾ ಮದ್ದಾನೆಯಂತೆ ಪಯಣಿಸುತ್ತಿರುವ ಆತ್ಮಕ್ಕೆ ತನ್ನ ಪ್ರಯಾಣದ ಉದ್ದೇಶ ಮತ್ತು ಗಮ್ಯವನ್ನು ತೋರಿಸುವಂತ ಅಂಕುಶವನ್ನು ಮಾಯೆ, ಜಗದನುಭವದ ರೂಪದಲ್ಲಿ ಇರಿಸಿದ್ದಾಳೆ ಎಂಬುವುದೇ ಈ ಮುಕ್ತಕದ ಹೂರಣ. ಒಂದು ಕಡೆ ನಮ್ಮನ್ನು ಈ ಜಗತ್ತಿಗೆ ಅಂಟಿಸುವುದೂ ಈ ಮಾಯೆಯೇ ಮತ್ತು ಇದರಿಂದ ಬಿಡಿಸಿಕೊಳ್ಳುವುದಕ್ಕೂ ಈ ಮಾಯೆಯೇ ನಮಗೆ ಒದಗುತ್ತದೆ. ನಮ್ಮಲ್ಲಿ ಎಷ್ಟು ಜಾಗ್ರತೆಯಾಗಿ ಅರಿವು ಮೂಡಿದರೆ ಅಷ್ಟು ಒಳ್ಳೆಯದು.

**ಮುಕ್ತಕ - 406** **ನರನಾರಿಮೋಹದಿಂ ವಂಶವದಕಾಗಿ ಮನೆ।**
**ನೆರೆಹೊರೆಗಳೂರು ರಾಷ್ಟ್ರಗಳು ಸಂಘಗಳು॥**
**ಕೆರೆಯೊಂದು ಕೇಂದ್ರದಿಂದಲೆಯ ಬಳೆಗಳು ನೂರು।**
**ಹರಿವಂತೆ ಸಂಸಾರ - ಮಂಕುತಿಮ್ಮ॥**

ವಂಶವದಕಾಗಿ=ವಂಶವು+ಅದಕಾಗಿ, ನೆರೆಹೊರೆಗಳೂರು=ನೆರೆಹೊರೆಗಳು+ಊರು,
ಕೆರೆಯೊಂದು ಕೆರೆಯು+ಒಂದು, ಕೇಂದ್ರದಿಂದಲೆಯ-ಕೇಂದ್ರದಿಂದ+ಅಲೆಯ.

ಹೆಣ್ಣು ಗಂಡಿನ ಪರಸ್ಪರ ಆಕರ್ಷಣೆ ಮತ್ತು ಮೋಹದಿಂದಲೇ ವಂಶಗಳು, ಮನೆ, ನೆರೆ ಹೊರೆಯವರು, ಊರುಗಳು, ಸಂಘಗಳು, ದೇಶಗಳು ಆಗಿವೆ. ಕೆರೆಯ ನೀರಲ್ಲಿ ಒಂದು ಬಿಂದುವಿನಿಂದ ಹೊರಡುವ ಅಲೆಯ ಬಳೆಗಳು

ನೂರಾರಾಗುವಂತೆ ಈ ಜಗತ್ತಿನಲ್ಲಿ ಸಂಸಾರವೆಂಬುದು ಎಂದು ಜಗದ್ಬೆಳವಣಿಗೆಯ ಪ್ರಕ್ರಿಯೆಯನ್ನು ಉಲ್ಲೇಖಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಜಗತ್ತಿನಲ್ಲಿ ಕೇವಲ ಗಂಡು ಹೆಣ್ಣು ಎಂಬ ಅಸ್ತಿತ್ವವನ್ನು ಹೊಂದಿದ್ದ ಮತ್ತು ಅಲೆಮಾರಿಯಾಗಿದ್ದ ಮನುಷ್ಯ ಪ್ರಾಣಿ, ಕಾಲ ಕ್ರಮದಲ್ಲಿ ಸಂಸ್ಕಾರವಂತನಾಗುತ್ತಾ ಬಂದಂತೆ, ಒಂದು ಕಡೆ ಸ್ಥಿರವಾಗಿ ನಿಲ್ಲಲು ಮೊದಲಿಟ್ಟ ಮೇಲೆ, ಸಂಘ ಜೀವಿಯಾಗತೊಡಗಿದ. ತನ್ನ ಸಂಬಂಧಗಳಿಗೆ ಹೊಸ ಪರಿಭಾಷೆಯನ್ನು ಬರೆಯತೊಡಗಿದ.

ಹಾಗೆ ಮಾಡುವ ಪ್ರಕ್ರಿಯೆಯಲ್ಲಿ ಗಂಡ, ಹೆಂಡತಿ, ಮಕ್ಕಳು, ಮೊಮ್ಮಕ್ಕಳು ಮತ್ತು ಅವರಿಗೆ ಸಂಬಂದಿಸಿದ ಎಲ್ಲರನ್ನೂ ಒಂದು ವೃತ್ತದಲ್ಲಿ ಸೇರಿಸಿಕೊಂಡ. ಅದು ಒಂದು ಸಂಸಾರವಾಯಿತು. ಅಂತಹ ಹಲವಾರು ಸಂಸಾರಗಳು ಸೇರಿ ಒಂದು ಸಂಘವಾಯಿತು. ಅಂತಹ ಹಲವಾರು ಸಂಘಗಳು ಸೇರಿ ಒಂದು ಊರು, ಅಂತಹ ಹಲವಾರು ಊರುಗಳು ಸೇರಿ ದೇಶ ಅಥವಾ ರಾಷ್ಟ್ರವಾಯಿತು ಮತ್ತು ಜಗತ್ತೇ ಒಂದು ಸಂಸಾರವಾಯಿತು.

(243)

ನರ-ನಾರೀ ಪ್ರೇಮ 405-408 ಕಗ್ಗ ರಸಧಾರೆ-2

ಇದಕ್ಕೊಂದು ಉಪಮೆಯನ್ನು ನೀಡುತ್ತಾರೆ, ಗುಂಡಪ್ಪನವರು. ಒಂದು ಕೆರೆಯಲ್ಲಿ ನೀರಿದೆ. ಒಂದು ಕಲ್ಲನ್ನು ಅದರೊಳಕ್ಕೆ ಎಸೆದಾಗ, ಅದರ ಮಧ್ಯ ಬಿಂದುವಿನಿಂದ ಅಲೆಗಳ ಬೆಳೆಗಳು ಹೊರಡುತ್ತವೆ. ಎಸೆದದ್ದು ಒಂದೇ ಕಲ್ಲಾದರೂ, ನೀರ ಅಲೆಗಳ ಬಳೆಗಳು ಒಂದಾದ ನಂತರ ಒಂದರಂತೆ ನೂರಾರು ಹೊರಡುತ್ತವೆ. ಈ ಜಗತ್ ಸಂಸಾರದಲ್ಲಿ ಪ್ರತೀ ವ್ಯಕ್ತಿಯೂ ಒಂದು ಬಿಂದುವಾದ್ದರಿಂದ, ಪ್ರತಿಯೊಬ್ಬರ ಸುತ್ತೂ ಅವರವರ ಸಂಬಂಧ ಮತ್ತು ಸಂಪರ್ಕಗಳ ವೃತ್ತವೊಂದು ಸೃಷ್ಟಿಯಾಗಿರುತ್ತದೆ.

ಇದೇ ರೀತಿ ಒಂದು ಗಂಡು ಮತ್ತು ಒಂದು ಹೆಣ್ಣಿನ ನಡುವಿನ ಪರಸ್ಪರ ಆಕರ್ಷಣೆ ಮತ್ತು ಮೋಹದಿಂದ ಉಂಟಾದದ್ದೇ ಈ ಜಗತ್ ಸಂಸಾರ ಎನ್ನುವುದೇ ಈ ಮುಕ್ತಕದ ಹೂರಣ.

**ಮುಕ್ತಕ-407** **ಅದರಿಂದ ನೀತಿ ನಯವದರಿಂದ ಕುಲ ಗೋತ್ರ।**
**ವದರಿಂದ ರಾಜ್ಯ ಮಠ ಧರ್ಮ ಸಂಸ್ಥೆಗಳು॥**
**ಒದವುದದರಿಂದ ಮಮತಾನಾಶದವಕಾಶ।**
**ವದರಿನಾತ್ಮ ವಿಕಾಸ - ಮಂಕುತಿಮ್ಮ॥**

ನಯವದರಿಂದ=ನಯವು+ಅದರಿಂದ, ಒದವುದದರಿಂದ=ಒದವುದು+ಅದರಿಂದ, ಮಮತಾನಾಶದವಕಾಶವದರಿನಾತ್ಮ=ಮಮತಾ+ನಾಶದ+ಅವಕಾಶವು+ಅದರಿನ+ಆತ್ಮ, ಒದವುದು=ಸಹಾಯಮಾಡುವುದು, ಅದರಿನ=ಅದರಿಂದ.

ಹಿಂದಿನ ಮುಕ್ತಕದಲ್ಲಿ ಉಲ್ಲೇಖಗೊಂಡಿರುವ ನರ ನಾರಿಯರ ಪರಸ್ಪರ ಆಕರ್ಷಣೆ ಮತ್ತು ವ್ಯಾಮೋಹದಿಂದ ಅತಿ ಒರಟನಾಗಿದ್ದ ಮನುಷ್ಯ, ಕಾಲಾನುಕಾಲಕ್ಕೆ ತನ್ನ ನಡವಳಿಕೆಯಲ್ಲಿ ನಯವನ್ನು ತಂದುಕೊಂಡ ಮನುಷ್ಯ, ತನ್ನದೇ ಬಾಳಿಗೆ ಒಂದು ನಿಯಮವನ್ನು ಸೃಷ್ಟಿಸಿಕೊಂಡು ಪಾಲಿಸತೊಡಗಿದ. ಅವನ ಕುಲಗಳು ಬೆಳೆದವು, ಗೋತ್ರಗಳು ಹುಟ್ಟಿಕೊಂಡವು. ತತ್ಕಾರಣವಾಗಿ ರಾಜ್ಯ, ಮಠ, ಧರ್ಮ, ಸಂಸ್ಥೆಗಳು ಹುಟ್ಟಿಕೊಂಡವು. ಇವನ ಅನುಭವ ಹೆಚ್ಚಾಗಿ, ಜ್ಞಾನ ಮೂಡಿ, ಬದುಕಿನ ನಶ್ವರತೆಯನ್ನು ಮನಗಂಡು, ಜಗತ್ತಿನ ಮೇಲಿನ ಮಮತೆಯನ್ನು ಕಡಿಮೆ ಮಾಡಿಕೊಳ್ಳುತ್ತಾ, ಅದರಿಂದ ಆತ್ಮ ವಿಕಾಸದತ್ತ ತನ್ನ ಗಮನ ಹರಿಸತೊಡಗಿದ, ಎನ್ನುವುದೇ ಮಾನ್ಯ ಗುಂಡಪ್ಪನವರ ಈ ಮುಕ್ತಕದ ಹೂರಣ.

ಮನುಷ್ಯ ಕಾಡಿನಲ್ಲಿ ವಾಸಿಸುತ್ತಿದ್ದಾಗ, ಅನ್ಯ ಪ್ರಾಣಿಗಳಂತೆ ಅವನ ಅವಶ್ಯಕತೆಗಳು, ಕೇವಲ, ಆಹಾರ, ಸ್ವಸಂರಕ್ಷಣೆ ಮತ್ತು ಸಂತಾನೋತ್ಪತ್ತಿಗೆ ಸೀಮಿತವಾಗಿತ್ತು. ಆದರೆ ನಾಗರೀಕತೆ ಬೆಳೆಯುತ್ತಾ ಹೋದಂತೆ, ಇವನ ಗುಂಪುಗಳೇ, ಕುಲಗಳಾದವು. ಆಯಾಯಾ ಕುಲಕ್ಕೆ ಅದರದ್ದೇ ಹೆಸರು, ನಿಯಮ, ನೀತಿ, ಧರ್ಮ, ಧರ್ಮಗುರು, ಹುಟ್ಟಿಕೊಂಡವು. ತಾನು ಕಟ್ಟಿಕೊಂಡ ಇವುಗಳನ್ನು ಕಾಯಲು, ಮನುಷ್ಯ ಸ್ವಾರ್ಥನಾಗುತ್ತಾ ಹೋದ. ಕುಲ ಕುಲಗಳ ನಡುವೆ ದ್ವೇಷ ಮತ್ತು ಕಲಹಗಳು, ಅಲ್ಲಿಂದಲೇ ಮೊದಲಾಯಿತು.

ವಿಕಸಿತ ಸ್ಥರದಲ್ಲಿ ಮನುಷ್ಯನ ಜ್ಞಾನಾರ್ಜನೆಯ ಕೆಲಸವೂ ಮುಂದುವರೆದು, ಹಲವರಲ್ಲಿ ಸಜ್ಜನಿಕೆ, ಸದ್ಭಾವನೆ ಮೂಡಿ, ಸತ್ಯದ ಮತ್ತು ಸತ್ವದ ಅರಿವಾಗಿ, ತಾನು ಅನುಭವಿಸುತ್ತಿರುವ ಜಗತ್ತಿನ, ನಶ್ವರತೆಯನ್ನು ಮನಗಂಡು, ಆತ್ಮ ವಿಕಾಸಕ್ಕೆ ಬೇಕಾದ ಸಂಸ್ಕಾರಗಳು, ವಿದ್ಯೆ, ನಾಗರೀಕತೆ, ಆಚಾರ ವಿಚಾರಗಳನ್ನು ಮನುಷ್ಯ ರೂಢಿಸಿಕೊಳ್ಳುತ್ತಾ ಹೋದಾಗ ಆತ್ಮ ವಿಕಾಸಕ್ಕೆ ದಾರಿಯಾಯಿತು. ಆದರೆ ಜಗತ್ತಿಗೆ ಕಾರಣವಾದ ಪರಮ ಚೇತನ ಒಂದೇ ಆದರೂ ಅದನ್ನರಿಯುವ ದಾರಿಗಳು ಬೇರೆ ಬೇರೆಯಾದವು. ಹಾಗಾಗಿಯೇ ಇಂದು ಈ ಜಗತ್ತಿನಲ್ಲಿ ಇಷ್ಟೊಂದು ವಿಚಾರ ಭೇದಗಳು, ಎಲ್ಲರ ಗಮ್ಯವೂ ಒಂದೇ ಆದರೂ, ಅದನ್ನು ಸೇರಲು ಹತ್ತು ಹಲವಾರು ಕವಲು ದಾರಿಗಳು.

ಎಂದು ಎಲ್ಲ ದಾರಿಗಳೂ ಒಂದಾಗಿ ಸೇರಿ ಎಲ್ಲರೂ ಒಂದಾಗಿ ಬದುಕಿ, ಬಾಳಿ, ಒಂದೇ ಮಾರ್ಗದಲ್ಲಿ ಆತ್ಮೋದ್ಧಾರಕ್ಕೆ ಪ್ರಯತ್ನ ನಡೆಯುತ್ತದೋ, ಅಂದು ಇಹದಲ್ಲೂ ಸುಖ ಮತ್ತು ಪರದಲ್ಲೂ ಸುಖ.

**ಮುಕ್ತಕ - 408** **ತಲೆಯಿಂದ ತಲೆಗೆ, ಪೀಳಿಗೆಯಿಂದ ಪೀಳಿಗೆಗೆ।**
**ಅಲೆಯಿಂದಲಲೆಗೆ ಟಪ್ಪೆಯ ಚಾರನಂತೆ॥**
**ಇಳಿಯುತಿದೆ ಯುಗದಿಂದ ಯುಗಕೆ ಮಾನವಧರ್ಮ।**
**ನಿಲದಮೃತಧಾರೆಯದು - ಮಂಕುತಿಮ್ಮ॥**

ಅಲೆಯಿಂದಲಲೆಗೆ-ಅಲೆಯಿಂದಲಿ+ಅಲೆಗೆ, ನಿಲದಮೃತಧಾರೆಯದು=ನಿಲದ+ಅಮೃತ+ಧಾರೆಯು+ಅದು.
ನಿಲದ=ನಿಲ್ಲದ, ಅಮೃತಧಾರೆ=ನಿರಂತರ ಹರಿಯುವ ಧಾರೆ.

ಒಂದು ಅಲೆ ಮತ್ತೊಂದು ಅಲೆಗೆ ಕಾರಣವಾಗುವಂತೆ, ಅಂಚೆ ಹಂಚುವವ ತನ್ನ ಕೈಲಿರುವ ಅಂಚೆಯನ್ನು ಹಲವಾರು ಮನೆಗಳಿಗೆ ತಲುಪಿಸುವಂತೆ, ಪ್ರಕೃತಿಯಲ್ಲಿ ಅರಳಿದ ಮನುಷ್ಯ, ತಾನು ರೂಢಿಸಿಕೊಂಡ ವಿಚಾರ, ಅಚಾರ, ಧರ್ಮ, ವಿಜ್ಞಾನ, ಕಲೆ ಮುಂತಾದವುಗಳನ್ನು ತಲೆಮಾರಿನಿಂದ ತಲೆಮಾರಿಗೆ ಪೀಳಿಗೆಯಿಂದ ಪೀಳಿಗೆಗೆ ಹಂಚುತ್ತಾ

'ಅರಿವಿನ ಮತ್ತು ಜ್ಞಾನದ ಅಮೃತಧಾರೆ'ಯನ್ನು ಮುಂದಿನ ಪೀಳಿಗೆಯ ವಿಚಾರ ಶಕ್ತಿಗೆ ಕಾರಕನಾಗುತ್ತಾನೆ ಎಂಬ ವಿಷಯವನ್ನು ಅರುಹುತ್ತಾರೆ ಮಾನ್ಯ ಗುಂಡಪ್ಪನವರು ನಮಗೆ ಈ ಮುಕ್ತಕದಲ್ಲಿ.

ಮನುಷ್ಯರು ಹೀಗೆ ಅನುವಂಶಿಕವಾಗಿ ಇಳಿದು ಬರುವ ಗುಣಗಳನ್ನು ತಮ್ಮ ಕಾಲದಲ್ಲಿ ಅಭಿವೃದ್ಧಿಗೊಳಿಸುತ್ತಾ, ಹೊಸ ಹೊಸ ಆಯಾಮಗಳನ್ನು ಸೇರಿಸಿಕೊಳ್ಳುತ್ತಾ ಮುಂದುವರೆದು, ಪ್ರತ್ಯಕ್ಷವಾಗಿ ವಿದ್ಯಾ ಪ್ರಸರಣದ ಮೂಲಕ, ಪರೋಕ್ಷವಾಗಿ ವಂಶವಾಹಿನಿಯ ಮೂಲಕ ತಮ್ಮ ವಂಶದ ಮುಂದಿನ ಪೀಳಿಗೆಯವರಿಗೆ ತಲುಪಿಸುತ್ತಾರೆ. ಇದನ್ನು ನಾವು ದೃಷ್ಟಾಂತವಾಗಿ ಸಂಗೀತ ಕ್ಷೇತ್ರದಲ್ಲಿ ಕಾಣಬಹುದು. ಈಗಲೂ ಸಾವಿರಾರು ವರ್ಷಗಳಿಂದ ಹರಿದು ಬರುತ್ತಿರುವುದು ಹಲವಾರು ವಿಧಗಳ ಜ್ಞಾನದ ಅಮೃತಧಾರೆ, ಬತ್ತದ ಒರತೆ.





ಹೀಗೆ ಬಂದದ್ದೇ ನಮ್ಮ ಸನಾತನದಲ್ಲಿರುವ, ವೇದ ಉಪನಿಷತ್ತುಗಳು. ಇದು ಎಲ್ಲ ದೇಶ ಪ್ರದೇಶಗಳಿಗೂ ಅನ್ವಯಿಸುತ್ತದೆ. ಇಡೀ ಜಗತ್ತಿನಲ್ಲಿರುವ ಹಲವು ವಿಧವಾದ ಜ್ಞಾನ, ವಿಜ್ಞಾನ, ಕಲೆ ಮುಂತಾದವುಗಳು ಆಯಾ ಪ್ರದೇಶ ಮತ್ತು ಕಾಲಕ್ಕೆ ತಕ್ಕಂತೆ ವಿಕಸನಗೊಂಡಿವೆ. ಹೀಗೆ ಪೀಳಿಗೆಯಿಂದ ಪೀಳಿಗೆಗೆ ಇಳಿದು ಬರುವ ಜ್ಞಾನದ ಅಮೃತಧಾರೆ ಕಾಲಕಾಲಕ್ಕೆ ಜನರ ಜೀವನವನ್ನು ಮತ್ತು ಸಮಗ್ರವಾಗಿ ಎಲ್ಲ ರೀತಿಯ ಜ್ಞಾನವನ್ನೂ ಒಳಗೊಂಡ ಸಂಸ್ಕೃತಿಯನ್ನು ಉತ್ತಮ ಸ್ಥಿತಿಗೆ ಕೊಂಡುಹೋಗಬೇಕಾದ್ದು ಧರ್ಮ.

ಆದರೆ ಎಲ್ಲ ವಿಷಯಕ್ಕೂ ಎರಡು ಮುಖಗಳಿರುವ ಹಾಗೆ ಇದಕ್ಕೂ ಒಳಿತು-ಕೆಡುಕುಗಳ ಎರಡು ಮುಖಗಳುಂಟು. ಮನುಷ್ಯನಿಗೆ ವಿವೇಚನೆಯನ್ನು ಕೊಟ್ಟು ಒಳಿತು ಕೆಡುಕುಗಳ ವಿಶ್ಲೇಷಣೆ ಮತ್ತು ಆಯ್ಕೆ ಮಾಡುವ ಶಕ್ತಿಯನ್ನೂ ಕೊಟ್ಟಿದ್ದಾನೆ ಈ ಜಗತ್ ಕರ್ತ. ಈ ಅಮೃತಧಾರೆಯ ಬೆಳವಣಿಗೆಯ ಒಳಿತನ್ನು ಕೆಡುಕಿಗಾಗಿ

ಉಪಯೋಗಿಸುವ ಕು-ಬುದ್ಧಿಯನ್ನೂ ಮನುಷ್ಯನಿಗೆ ದಯಪಾಲಿಸಿದ್ದಾನೆ, ಆ ಪರಮಾತ್ಮ. ಅವನ ಲೀಲೆಯನ್ನು ವಿಮರ್ಶೆಮಾಡುವ ಅಧಿಕಾರ ಮತ್ತು ಹಕ್ಕು ನಮಗಿಲ್ಲ.

ಇಂದಿನ ಪರಿಸ್ಥಿತಿಯಲ್ಲಿ ಅಭಿವೃದ್ಧಿಯನ್ನು ಮನುಷ್ಯ, ತನ್ನ ಸ್ವಾರ್ಥಕ್ಕೆ ಮತ್ತು ಪರರ ನಾಶಕ್ಕೆ ಬಳಸುವುದೇ ನಮಗೆ ಅಧಿಕವಾಗಿ ಕಾಣಬರುತ್ತಿದೆ. ಇರಲಿ, ಇದೂ ಸಹ ಬದಲಾವಣೆಯ ಮತ್ತೊಂದು ರೂಪವಷ್ಟೆ. ವಿಧಿಯ ಚಿತ್ತಾರದ ಮತ್ತೊಂದು ರೂಪ. ಎಂದಾದರೂ ಒಂದು ದಿನ ಸಕಲ ಜ್ಞಾನದ ಅಮೃತಧಾರೆಯನ್ನು ಮನುಕುಲದ ಸಮಗ್ರ ಒಳಿತಿಗಾಗಿ ಉಪಯೋಗಿಸಲ್ಪಡುವ ಸಮಯಕ್ಕಾಗಿ ನಾವೆಲ್ಲಾ ಕಾಯಬೇಕು ಮತ್ತು ಆ ದಿಕ್ಕಿನಲ್ಲಿ ನಾವೂ ಸಹ ಪ್ರಯತ್ನ ಪಡಬೇಕು.

# ಮಾನುಷ ಚರಿತ್ರೆ 409-413

**ಮುಕ್ತಕ-409**

**ಮಾನುಷದ ಚರಿತೆ ಪರಸತ್ವಸಾಕ್ಷಾತ್ಕವಿತೆ ।**
**ಕಾಣಿಪುದದಾತ್ಮ ಸ್ವಭಾವದುದ್ಗಮವ ॥**
**ಏನಾಶೆ! ಯೇನು ಸಾಹಸ! ವೇನು ಭಂಗಗಳು ।**
**ಅನುಭವವೇದವದು - ಮಂಕುತಿಮ್ಮ ॥**

ಪರಸತ್ವಸಾಕ್ಷಾತ್ಕವಿತೆ=ಪರಸತ್ವ+ಸಾಕ್ಷಾತ್+ಕವಿತೆ, ಕಾಣಿಪುದದಾತ್ಮ=ಕಾಣಿಪುದು+ಅದು+ಆತ್ಮ, ಸ್ವಭಾವದುಮವ=ಸ್ವಭಾವದ+ಉದ್ಯಮವ, ಏನಾಶೆ=ಏನು+ಆಶೆ.

ಚರಿತೆ=ಚರಿತ್ರೆ, ಪರಸತ್ವ=ಪರಮಾತ್ಮ ಅಥವಾ ಪರಮಚೇತನ, ಕಾಣಿಪುದು=ತೋರುವುದು,

ಈ ಜಗತ್ತಿನಲ್ಲಿ ಮಾನವರ ಅಸ್ತಿತ್ವದ ಚರಿತ್ರೆಯು ಪರಮ ಚೇತನದ ಆತ್ಮಚರಿತ್ರೆಯ ಕವಿತೆಯಂತಿದೆ. ಅದು ಅಭಿವೃದ್ಯಾಭಿಮುಖವಾದ ಆತ್ಮದ ಸ್ವಭಾವವನ್ನು ತೋರುತ್ತದೆ. ಮನುಷ್ಯ ದೇಹವನ್ನು ಧರಿಸಿದ ಚೇತನದ

ಆಸೆ, ಸಾಹಸ, ಪ್ರಯತ್ನ, ನಿರಾಸೆ ಮುಂತಾದ ಅನುಭವಗಳನ್ನು ಸಮಗ್ರವಾಗಿ 'ಅನುಭವವೇದ'ವೆಂದು ಕರೆದಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಅವ್ಯಾಹತವಾಗಿ ಹರಿಯುತ್ತಿರುವ ಮಾನವನ ಜೀವನದ ಚರಿತ್ರೆಯನ್ನು ಸೂಕ್ಷ್ಮವಾಗಿ ಅವಗಾಹಿಸಿದರೆ ನಮಗೆ ಮನುಷ್ಯನ ಅಭಿವೃದ್ಧಿಯ ಪರಿಚಯವಾಗುತ್ತದೆ. 'ಚಕ್ರದ' ಮತ್ತು 'ಬೆಂಕಿ'ಯ ಆವಿಷ್ಕಾರದಿಂದ ಹಿಡಿದು ಇಂದಿನ ಪರಮೋತ್ತಮ ವೈಙ್ಞಾನಿಕ ಆವಿಷ್ಕಾರದವರೆಗಿನ ಮನುಷ್ಯನ ಚರಿತ್ರೆ ಒಂದು ಮಹಾ ಕಾವ್ಯದಂತೆ ನಮಗೆ ಕಾಣುತ್ತದೆ.

ಪರಮಾತ್ಮನು ಈ ಜಗತ್ತಿನಲ್ಲಿ ಎಲ್ಲವೂ ತಾನೇ ಆಗಿದ್ದಾನೆ ಮತ್ತು ತಾನೇ ಸೃಷ್ಟಿಸಿದ ಈ ಜಗತ್ತನ್ನು ತಾನೇ ಅನುಭವಿಸುತ್ತಿದ್ದಾನೆ ಮತ್ತು ಬೇರೆ ಬೇರೆ ದೇಹಗಳಲ್ಲಿ ಆತ್ಮದ ರೂಪದಲ್ಲಿ ಪ್ರಕಟಗೊಂಡ ಒಂದೊಂದು ಆತ್ಮವೂ ತನ್ನ ಮೂಲ ಸೇರುವುದಕ್ಕಾಗಿ ಹಲವಾರು ಮಾರ್ಗಗಳನ್ನು ಕಂಡುಕೊಂಡಿದೆ, ಎನ್ನುವುದು ನಮ್ಮ ಸನಾತನ, ಸೃಷ್ಟಿಯಲ್ಲಿ ಉತ್ತಮೋತ್ತಮ ಸೃಷ್ಟಿಯಾದ ನಮ್ಮ ಮನುಷ್ಯ ಪ್ರಾಣಿ, ನಾದೋಪಾಸನೆಯ ಕಲೋಪಾಸನೆಯ, ವಿಙ್ಞಾನದ, ಸಾಹಿತ್ಯದ ಙ್ಞಾನದ ಮೂಲಕ, ಜಪ, ತಪ, ಧ್ಯಾನ ಮುಂತಾದವುಗಳ ಮೂಲಕ, ತನ್ನ ಮೂಲವಾದ ಪರಮಾತ್ಮನನ್ನು ಸೇರುವ ಪ್ರಯತ್ನ ಮಾಡಿದ್ದಾನೆ. ಅಂತಹ ಪ್ರಯತ್ನದ ಕಥೆ ಇಂದು ಚರಿತ್ರೆಯ ರೂಪದಲ್ಲಿ ಜಗತ್ತಿನಲ್ಲಿ ಒಂದು ಮಹಾ ಕಾವ್ಯದಂತೆ, ನಿಂತಿದೆ.

ಈ ದಿಶೆಯಲ್ಲಿ ಇವನು ಪಟ್ಟ ಆಶೆಗಳೇನು, ಪ್ರಯತ್ನಗಳೇನು, ಕಂಡ ಜಯವೇನು ಅಪಜಯವೇನು ಸಾಧಿಸಿದ ಸಾಧನೆಗಳೇನು? ಲೆಕ್ಕಕ್ಕಿಲ್ಲದಷ್ಟು, ಒಬ್ಬ ಕ್ಷತ್ರಿಯ ರಾಜನಾದ ಕೌಶಿಕನು "ಬ್ರಹ್ಮರ್ಷಿ"ಪಟ್ಟಕ್ಕೇರಿ ವಿಶ್ವಾಮಿತ್ರನಾದ ಕತೆ, ತಮ್ಮ ತಪಸ್ಸಿನಿಂದಲೇ ಬೃಹತ್ತಾದ ವೇದ ಙ್ಞಾನ ಸಂಪತ್ತನ್ನು ಪಡೆದು ಈ ಲೋಕಕ್ಕೆ ಸಮರ್ಪಣೆ ಮಾಡಿದ ಋಷಿ ಸಮೂಹದ ಕಥೆ, ರಾಮ, ಕೃಷ್ಣ, ಚಾಣಕ್ಯರಂಥಹ ಮಹನೀಯರು ಈ ಜಗತ್ತಿಗೆ ನೀಡಿದ ಕೊಡುಗೆ ಅಪ್ರತಿಮವಾದದ್ದು. ಇವರೆಲ್ಲರ ಅನುಭವವೂ ಇಂದು ಜಗತ್ತಿನ ಉನ್ನತಿಗೆ ಮಾರ್ಗದರ್ಶನ ಮಾಡುತ್ತಿದೆ. ಅವರ ಅನುಭವವೇ "ಅನುಭವವೇದ", ಅದರ ದರ್ಶನ ನಮಗೆ ಆಗಿ, ನಾವೂ ಸಹ ಈ ಜಗತ್ತನ್ನು ಇನ್ನಷ್ಟು ಸಂಪದ್ಭರಿತವನ್ನಾಗಿಸುವ ಕಾರ್ಯದಲ್ಲಿ ನಿರತರಾದರೆ, ನಮ್ಮ ಬದುಕೂ ಸಹ ಸಾರ್ಥಕವಾಗುತ್ತದೆ.

**ಮುಕ್ತಕ - 410**

**ಜಾನಪದಗಳು ರಾಜ್ಯಸಾಮ್ರಾಜ್ಯಗಳು ಗುರು।**
**ಸ್ಥಾನಗಳು ಧರ್ಮಗಳು ಭಾಷೆ ವಿದ್ಯೆಗಳು॥**
**ಕಾಣಿಸದೆ ಸಾಗಿಹವು ಕಾಲಚಕ್ರ ಪ್ರವಾಹದಲಿ।**
**ಮಾನವತೆ ನಿಂತಿಹುದು - ಮಂಕುತಿಮ್ಮ॥**

ಎಷ್ಟೋ ಗುಂಪುಗಳು ಜಾನಪದಗಳು, ರಾಜ್ಯಗಳು, ಸಾಮ್ರಾಜ್ಯಗಳು, ಗುರುಗಳು, ಗುರುಪೀಠಗಳು, ಧರ್ಮಗಳು, ಭಾಷೆಗಳು, ವಿದ್ಯೆಗಳು, ಹುಟ್ಟಿ ಕೆಲಕಾಲ ಇದ್ದು ಬದಲಾಗಿ ತನ್ನ ಮೂಲ ಸ್ವರೂಪವನ್ನು ಕಳೆದುಕೊಂಡು





ಕಾಲ ಪ್ರವಾಹದಲ್ಲಿ ಕಾಣೆಯಾಗಿವೆ. ಆದರೆ ಅದನ್ನೆಲ್ಲ ಕಂಡ ಕಂಡುಕೊಂಡ, ಅನುಭವಿಸಿದ ಮಾನವತೆ ಮಾತ್ರ ಈ ಜಗತ್ತಿನಲ್ಲಿ ನಿಂತಿದೆ ಎನ್ನುವುದೇ ಈ ಮುಕ್ತಕದ ಹೂರಣ.

ಮನುಷ್ಯ ಈ ಜಗತ್ತಿನಲ್ಲಿ ಹುಟ್ಟಿದಾಗಿನಿಂದ ಅವನ ಚರಿತ್ರೆ ಅಗಾಧ ಮತ್ತು ಬಹಳ ವಿಸ್ತಾರ. ಮಾನ್ಯ ಗುಂಡಪ್ಪನವರು ನಮ್ಮನ್ನು ದಾಖಲೆಗೆ ಸಿಗದ ಆ ಪುರಾತನ ಚರಿತ್ರೆಗೆ ಕೊಂಡು ಹೋಗುತ್ತಾರೆ, ಈ ಮುಕ್ತಕದಲ್ಲಿ. ಒಬ್ಬಂಟಿಯಾಗಿದ್ದವನು, ಗುಂಪುಗಳನ್ನು ಕಟ್ಟಿಕೊಂಡು, ಅಲೆಮಾರಿಯಾಗಿದ್ದವನು, ಒಂದೆಡೆ ಸ್ಥಿರವಾಗಿ ನಿಂತು, ಅನ್ಯ ಪ್ರಾಣಿಗಳಿಗಿಂತ ಉನ್ನತಮಟ್ಟದಲ್ಲಿ ಆಲೋಚಿಸಲು ಕ್ಷಮತೆಯನ್ನು ಪಡೆದ ಇವನು, ತನ್ನ ಸ್ಥಿತಿಯನ್ನು ಸುಧಾರಿಸಿಕೊಳ್ಳಲು ಮಾಡಿದ ಪ್ರಯತ್ನದ ಫಲವೇ ಇವನು ರೂಢಿಸಿಕೊಂಡ ಸಂಸ್ಕಾರಗಳು, ಕಲೆ-ಸಾಹಿತ್ಯಗಳು, ಮತ-ಧರ್ಮಗಳು, ಭಾಷೆ-ಬರವಣಿಗೆಗಳು, ಕತೆ-ಕಾವ್ಯಗಳು, ಜೀವನದ ವಿನ್ಯಾಸಗಳು, ಅಂದಿನಿಂದ ಇಂದಿನವರೆಗೆ ಎಷ್ಟೋ ಬದಲಾವಣೆಗಳನ್ನು ಕಂಡ ಮಾನವನ ಜೀವನ ಶೈಲಿ ನಿರಂತರ ಬದಲಾಗುತ್ತಲೇ ಇದೆ.

ಸಾವಿರಾರು ವರ್ಷಗಳಿಂದಲೂ ಅನ್ಯ ಪ್ರಾಣಿಗಳ ಜೀವನ ಶೈಲಿಯಲ್ಲಿ ಯಾವ ಬದಲಾವಣೆಯೂ ಇಲ್ಲ. ಆದರೆ ಮಾನವನನ್ನು ನೋಡಿ, ಎಲ್ಲಿಂದ ಎಲ್ಲಿಗೆ ಬಂದಿದ್ದಾನೆ. ಇದು ಕೇವಲ ಇವನ ಉನ್ನತ ಯೋಚನಾ ಶಕ್ತಿಯ ಮತ್ತು ತನ್ನ ಬದುಕಿಗೆ ಒಂದು ನವ ನವೀನ ಆಯಾಮವನ್ನು ಕಂಡುಕೊಳ್ಳುವ, ತನ್ನ ಬದುಕನ್ನು ಸುಧಾರಿಸಿಕೊಳ್ಳುವ ಪ್ರಯತ್ನದಿಂದ ಆದದ್ದು. ಇವನು ಕಲ್ಪನಾ ಜೀವಿ. ಇವನು ಭಾವನಾ ಜೀವಿ. ಇವನ ಕಲ್ಪನೆ ಮತ್ತು ಭಾವುಕತೆಯಿಂದಲೇ ಇವನ ಜೀವನದಲ್ಲಿ ಇಷ್ಟೊಂದು ಬದಲಾವಣೆ ಬಂದಿದೆ.

ಈ ರೀತಿಯ ಬದಲಾವಣೆಗಳು ಅನಿವಾರ್ಯ ಮತ್ತು ನಿರಂತರ, ನಮ್ಮ ಬದುಕೂ ಸಹ ಈ ಅವ್ಯಾಹತ ಹರಿಯುವ ಕಾಲ ಪ್ರವಾಹದ ಒಂದು ಭಾಗ. ಇಂತಹ ಬದುಕಿನಲ್ಲಿ ನಮ್ಮ ಪಾತ್ರವನ್ನು ನಾವು ಶುದ್ಧವಾಗಿ ನಿರ್ವಹಿಸಿದರೆ, ಮಾನ್ಯ ಗುಂಡಪ್ಪನವರು ಹೇಳುವ 'ಮಾನವತೆ' ಈ ಜಗತ್ತಿನಲ್ಲಿ ಇನ್ನೂ ದೀರ್ಘಕಾಲ ಉಳಿದೀತು.

**ಮುಕ್ತಕ-411**

**ತೆರಪನರಿಯದೆ ಪರಿವ ಕಾಲಪ್ರವಾಹದಲಿ ।**
**ಪುರುಷರಚಿತಗಳೆನಿತೋ ತೇಲಿಹೋಗಿಹವು ॥**
**ಪುರ ರಾಷ್ಟ್ರ ದುರ್ಗಗಳು ಮತ ನೀತಿ ಯುಕ್ತಿಗಳು ।**
**ಪುರುಷತನ ನಿಂತಿಹುದು - ಮಂಕುತಿಮ್ಮ ॥**

ತೆರಪನರಿಯದೆ=ತೆರಪನು+ಅರಿಯದೆ, ಪುರುಷರಚಿತಗಳೆನಿತೊ=ಪುರುಷ+ರಚಿತಗಳು+ಎನಿತೊ,
ತೆರಪು=ಬಿಡುವು.

ಬಿಡುವಿಲ್ಲದೆ ಅವ್ಯಾಹತ ಹರಿಯುವ ಕಾಲ ಪ್ರವಾಹದಲ್ಲಿ ಮನುಷ್ಯ ರಚಿಸಿದ ರಚನೆಗಳು ಲೆಕ್ಕವಿಲ್ಲದಷ್ಟು ತೇಲಿಹೋಗಿವೆ. ಊರುಗಳು, ರಾಷ್ಟ್ರಗಳು, ಮತಗಳು, ನೀತಿಗಳು, ಯುಕ್ತಿಗಳು ಹೀಗೆ ಎಷ್ಟೋ !!!!. ಪುರುಷನ

ರಚಿತವೆಲ್ಲಾ ತೇಲಿಹೋಗಿದ್ದರೂ, ಪುರುಷ ಮತ್ತು ಅವನ ಪುರುಷತನ ಇನ್ನೂ ಹಾಗೆ ನಿಂತಿಹುದು, ಎನ್ನುವುದೇ ಈ ಮುಕ್ತಕದ ಹೂರಣ.

ಅಂದು ಒಂದೆಡೆ ನೆಲೆ ನಿಲ್ಲಬೇಕೆಂದು ನಿರ್ಧರಿಸಿದ ಮನುಷ್ಯ ಕಟ್ಟಿದ ಊರುಗಳೆಲ್ಲ ಇಂದು ಹೆಸರೇ ಇಲ್ಲದೆ ನಾಶವಾಗಿವೆ. ಅಂದು ಅವನ ನಂಬಿಕೆಗಳು ಲುಪ್ತವಾಗಿ ರೂಪಾವಶೇಷ ಮತ್ತು ನಾಮಾವಶೇಷವಾಗಿದೆ. ಇಂದಿಗೆ ಎಲ್ಲೋ ಕೆಲವು ಕೋಟೆಗಳ ಅವಶೇಷಗಳನ್ನು ನೋಡಬಹುದು. ಆದರೆ ಕಟ್ಟಿದ ಎಷ್ಟೋ ಕೋಟೆಗಳು, ರಾಜ್ಯ ಸಾಮ್ರಾಜ್ಯಗಳು ದೇಶ ರಾಜ್ಯಗಳು ಎಲ್ಲವೂ ಮಣ್ಣಲ್ಲಿ ಮಣ್ಣಾಗಿ, ಚರಿತ್ರೆಯಲ್ಲೂ ದಾಖಲೆಯ ರೂಪದಲ್ಲಿಯೂ ಉಳಿಯದೆ ಅಳಿದುಹೋಗಿದೆಯಲ್ಲವೇ?
ಇದಕ್ಕೆ ಸಾವಿರಾರು ಉದಾಹರಣೆಗಳು ಜಗತ್ತಿನಾದ್ಯಂತ ಮನುಷ್ಯನ ಚರಿತ್ರೆಯಲ್ಲಿ ನಮಗೆ ಹೇರಳವಾಗಿ ಸಿಗುತ್ತವೆ. ಆದರೆ ಬದಲಾವಣೆಯೇ ಬದುಕಿನ ರೂಪವಾದ ಮೇಲೆ, ತನ್ನೊಳಗೆ ಉಳಿಯುವ ಶಕ್ತಿಯನ್ನು ಹೊಂದಿರದ ಯಾವುದೂ ಉಳಿಯುವುದಿಲ್ಲ. ಹಾಗಾಗಿ ಅವೆಲ್ಲ ನಾಶವಾಗಿವೆ. ಹಾಗೆ ತನ್ನೊಳಗೆ ಅದ್ಭುತ ಶಕ್ತಿಯನ್ನು ಹೊಂದಿರುವ ನಮ್ಮ ಸನಾತನದ 'ವೇದನಿಧಿ ಮತ್ತು ಭಗವದ್ಗೀತೆ' ಅನಾದಿ ಕಾಲದಿಂದಲೂ ತಮ್ಮ ಸ್ವರೂಪವನ್ನು ಉಳಿಸಿಕೊಂಡಿವೆ.

ಜೀವನ ಶೈಲಿ, ಉಡುಗೆ ತೊಡುಗೆಗಳು, ಆಚಾರ ವಿಚಾರಗಳು ಆಹಾರ ವ್ಯವಹಾರಗಳು ಎಲ್ಲವೂ ಬದಲಾಗಿವೆ. ಹಿಂದಿನ ಯಾವುದೂ ಉಳಿದಿಲ್ಲ. ಜನಾಂಗದಿಂದ ಜನಾಂಗಕ್ಕೆ, ವಂಶದಿಂದ ವಂಶಕ್ಕೆ ತಲೆಮಾರಿನಿಂದ ತಲೆಮಾರಿಗೆ ಮೂಲ ಮೌಲ್ಯಗಳು ಹರಿದುಬರುತ್ತಾ ಇದ್ದರೂ, ಅವು ಹೊಸತನವನ್ನು ಹೆಚ್ಚಿಸಿಕೊಳ್ಳುತ್ತಾ, ಕಾಲಾನುಕಾಲಕ್ಕೆ ಮೂಲ ರೂಪ ಮತ್ತು ಗುಣವನ್ನೇ ಕಳೆದುಕೊಂಡುಬಿಡುತ್ತಿದೆ. ಇದನ್ನೇ ಮಾನ್ಯ ಗುಂಡಪ್ಪನವರು 'ಪುರುಷರಚಿತಗಳೆನಿತೊ ತೇಲಿಹೋಗಿಹವು' ಎಂದರು.

ಅಂದಿನ ಗಟ್ಟಿತನ ಮಾಯವಾಗಿ ಬದುಕಿನ ಕೋಣೆ ಕೋಣೆಗಳಲ್ಲಿ, ಇಂದು ಕೇವಲ ಪೊಳ್ಳುತನ ವ್ಯಾಪಿಸಿದೆ. ನಮ್ಮ ಬದುಕಿನಲ್ಲೂ ಗಟ್ಟಿತನವನ್ನು ಕಂಡುಕೊಳ್ಳಬೇಕಾದ ಅಗತ್ಯ ಮತ್ತು ಅನಿವಾರ್ಯತೆ ಇಂದು ಹೆಚ್ಚಾಗಿಯೇ ಇದೆ. ಹಾಗಾದರೆ ಮುಂದಿನ ಪೀಳಿಗೆಗೆ ಒಂದು ಸುಂದರ ಸಂಸ್ಕೃತಿಯ ಮತ್ತು ಸಂಸ್ಕಾರದ ಸಮಾಜವನ್ನು ಕೊಟ್ಟಂತಾಗುತ್ತದೆ.

**ಮುಕ್ತಕ-412**

**ಜನಿಸಿದೆಡೆಯಿಂ ಕಡಲವರೆಗಮಡಿಯಡಿ ನೆಲದ |**
**ಗುಣವ ಕೊಳ್ಳುತ ಕೊಡುತ ಪೊನಲು ಮಾರ್ಪಡುಗುಂ ||**
**ಮನುಜಸಂತಾನದಲ್ಲಿ ಗುಣದವತರಣವಂತು |**
**ಗುಣಿಪುದೆಂತಾ ತೆರನ - ಮಂಕುತಿಮ್ಮ ||**

ಜನಿಸಿದೆಡೆಯಿಂ=ಜನಿಸಿದ+ಎಡೆಯಿಂ, ಕಡಲವರೆಗಮಡಿಯಡಿ=ಕಡಲವರೆಗಂ=ಅಡಿ+ಅಡಿ, ಗುಣದವತರಣವಂತು=ಗುಣದ+ಅವತರಣವು+ಅಂತು, ಗುಣಿಪುದೆಂತಾ=ಗುಣಿಪುದು+ಎಂತು+ಆ.



ಪೊನಲು=ಹೊಳೆ, ನದಿ, ಮನುಜಸಂತಾನ=ಮನುಕುಲ, ಗುಣಿಪುದು-ಲೆಕ್ಕಹಾಕುವುದು, ತೆರನ=ರೀತಿ,

ತನ್ನ ಜನ್ಮ ಸ್ಥಾನದಿಂದ ಕಡಲ ಸೇರುವವರೆಗೂ ತಾನು ಹರಿಯುವ ನೆಲದ ಗುಣವನ್ನು ಪಡೆದುಕೊಳ್ಳುತ್ತಾ, ತಾ ಹೊತ್ತು ತಂದದ್ದನ್ನು ಹರಿವೆಡೆಯಲ್ಲೆಲ್ಲಾ ಕೊಡುತ್ತಾ ತಾನು ಬದಲಾಗುತ್ತಾ ಹರಿವ ನದಿಯಂತೆ, ಮನುಜಕುಲವೂ ತನ್ನ ಬದುಕಿನ ಪ್ರವಾಹದಲ್ಲಿ ಹಿಂದಿನಿಂದ ತಾನು ಹೊತ್ತು ತಂದ ಗುಣಗಳೊಂದಿಗೆ, ಇಲ್ಲಿ ಕೆಲವನ್ನು ಗಳಿಸಿ, ಕೆಲವನ್ನು ಹಂಚಿ, ಕೆಲವನ್ನು ಉಳಿಸಿ, ಕೆಲವನ್ನು ಹೊತ್ತು ಮುಂದೆ ಸಾಗುತ್ತಿರವುದೇ ಅದರ ಗುಣವಾಗಿರುವಾಗ, ಅದನ್ನು ಲೆಕ್ಕಹಾಕುವುದು ಹೇಗೆ ಎಂದು ಒಂದು ಪ್ರಶ್ನೆಯನ್ನು ನಮ್ಮ ಮುಂದಿಡುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಮನುಷ್ಯ ಈ ಜಗತ್ತಿನಲ್ಲಿ ಲಕ್ಷಾಂತರ ವರ್ಷಗಳಿಂದ ತಿರುಗಾಡುತ್ತಲೇ ಇದ್ದಾನೆ. ಇಡೀ ಭೂಮಂಡಲದಲ್ಲಿ ಇವನ ಪದ ಸ್ಪರ್ಶವಾಗಿದ. ಹೀಗೆ ತಿರುಗಾಡುವಾಗ, ಅಲ್ಲಿನ ಹವಾಗುಣಕ್ಕೆ ಮತ್ತು ಮಣ್ಣಿನ ಗುಣಕ್ಕೆ ಅನುಗುಣವಾಗಿ ಇವನ ಗುಣಗಳೂ ಸಹ ವಿಕಸಿತಗೊಂಡಿವೆ. ಹಾಗೆ ವಿಕಾಸವಾದ ಗುಣಗಳು ಭಾವಗಳಾಗಿ, ಭಾವಗಳು ಸ್ವಭಾವಗಳಾಗಿವೆ. ಹಾಗೆ ಕೆಲಗುಣಗಳನ್ನು ರೂಢಿಸಿಕೊಂಡ ಮನುಷ್ಯ ವಲಸೆ ಹೋದಲೆಲ್ಲಾ ತನ್ನ ಗುಣವನ್ನು ಅಲ್ಲಿಗೆ ನೀಡಿ, ಅಲ್ಲಿನ ಗುಣಗಳನ್ನು ತಾನು ಅಳವಡಿಸಿಕೊಂಡಿದ್ದಾನೆ.

ಹೀಗೆ ವಿಕಸನ ಮತ್ತು ಪ್ರಸರಣವಾದ ಗುಣಗಳೇ, ಅನಾದಿಕಾಲದಿಂದ ಇವನು ಬೆಳೆಸಿಕೊಂಡ ಗುಣಗಳು, ಇವನ ಸಂಸ್ಕಾರ, ಸಂಸ್ಕೃತಿಗಳಿಗೆ ಕಾರಣವಾಯಿತು. ಇಂದಿಗೂ ನಿರಂತರವಾಗಿ ತಿರುಗಾಡುತ್ತಿರುವ ಮಾನವನ ಗುಣಗಳು ಜಗತ್ತಿನಾದ್ಯಂತ ಹರಡುತ್ತಿದೆ. ಭೂಭಾಗಗಳನ್ನು ಹುಡುಕಿಕೊಂಡು ಜಗತ್ತಿನಾದ್ಯಂತ ಹೊರಟ ಫಿರಂಗಿಗಳು, ಅಕ್ರಮಣಕಾರರಾಗಿ ಹೊರಟ ಮುಸಲ್ಮಾನರು, ಇಲ್ಲಿನ ತಮಿಳುನಾಡಿನಿಂದ ಮಲೇಶಿಯಾ, ಇಂಡೋನೇಶಿಯಾ, ಶ್ರೀಲಂಕಾ ದೇಶಗಳಿಗೆ ಕೂಲಿಗಳಾಗಿ ಹೋದ ತಮಿಳರು, ಆಫ್ರಿಕಾಕ್ಕೆ ಹೋದ ತೆಲುಗರು, ಆಫ್ರಿಕಾದಿಂದ ಅಮೇರಿಕಾ ಇಂಗ್ಲೆಂಡ್ ದೇಶಗಳಿಗೆ ವಲಸೆ ಬಂದ ಆಫ್ರಿಕನ್ನರು, ಹೀಗೆ ಈ ಜಗತ್ತಿನಲ್ಲಿ ಈ ವಲಸೆ ಹೋಗುವ ಪ್ರಕ್ರಿಯೆ ನಿರಂತರವಾಗಿ, ನಡೆಯುತ್ತಲೇ ಇದೆ.

ಮನುಷ್ಯ ಅನುವಂಶಿಕವಾಗಿ ಬಂದ ತನ್ನ ಮೂಲ ಗುಣಗಳನ್ನು ಉಳಿಸಿಕೊಂಡು ತಾ ಹೆಜ್ಜೆಯಿಟ್ಟ ಸ್ಥಳದ ಗುಣಗಳನ್ನು ತೆಗೆದುಕೊಳ್ಳುತ್ತಾ, ತಾ ಸೇರಿದ ಸ್ಥಳದ ಗುಣಗಳನ್ನು ರೂಢಿಸಿಕೊಂಡುಬಿಡುತ್ತಾನೆ. ಎಷ್ಟೋ ಬಾರಿ ಇವನ ಮೂಲ ಗುಣವೇನು ಎಂದು ಅರಿಯಲಾಗದಷ್ಟು ಬದಲಾಗಿ ಬಿಡುತ್ತಾನೆ. ಇನ್ನು ಇವನು ಸೇರಿದೆಡೆ ಇವನ ಸಂತತಿಯ ಗುಣಗಳು ಇವನ ಮೂಲ ಗುಣಕ್ಕಿಂತ ಭಿನ್ನವಾಗಿರುತ್ತದೆ. ಇದನ್ನು ಲೆಕ್ಕ ಹಾಕಲು ಸಾಧ್ಯವಿಲ್ಲ ಎಂದು ಹೇಳುತ್ತಾರೆ ನಮ್ಮ ಗುಂಡಪ್ಪನವರು.

ಇವನು ಎಲ್ಲಿಯಾದರೂ ಇರಲಿ, ಎಲ್ಲಿಗೆ ಬೇಕಾದರೂ ಹೋಗಲಿ, ಏನನ್ನಾದರೂ ಗಳಿಸಲಿ, ಬಿಡಲಿ, ತನ್ನ ಮೂಲ ಗುಣವಾದ ಮಾನವತೆಯನ್ನು ಬಿಡದಿದ್ದರೆ ಒಳಿತು.

**ಮುಕ್ತಕ-413** **ಬರಿಯ ಹೆಣ್ ಬರಿಯ ಗಂಡೆಂಬುದಿಳೆಯೊಳಗಿಲ್ಲ।**
**ಬೆರಕೆಯೆಲ್ಲರುಮರ್ಧನಾರೀಶನಂತೆ ॥**
**ನರತೆಯಣ ನಾರಿಯಲಿ ನಾರೀತ್ವ ನರನೊಳಣು।**
**ತಿರಿಚುತಿರುವುದು ಮನವ - ಮಂಕುತಿಮ್ಮ ॥**

ಗಂಡೆಂಬುದಿಳೆಯೊಳಗಿಲ್ಲ-ಗಂಡು+ಎಂಬುದು+ಇಳೆಯೊಳಗೆ+ಇಲ್ಲ,
ಬೆರಕೆಯೆಲ್ಲರುಮರ್ಧನಾರೀಶನಂತೆ=ಬೆರಕೆ+ಎಲ್ಲರುಂ+ಅರ್ಧ+ನಾರೀಶನಂತೆ,
ನರತೆಯಣು=ನರತೆಯ+ಅಣು, ನರನೊಳಣು=ನರನೊಳು+ಅಣು,
ತಿರಿಚುತಿರುವುದು=ತಿರಿಚುತ+ಇರುವುದು.
ಬೆರಕೆ=ಮಿಶ್ರಣ.

ಸೃಷ್ಟಿಯಲ್ಲಿ ಕೇವಲ ಗಂಡು ಅಥವಾ ಕೇವಲ ಹೆಣ್ಣು ಎನ್ನುವುದಿಲ್ಲ. ಎಲ್ಲರೂ ಅರ್ಧನಾರೀಶ್ವರರಂತೆ ಮಿಶ್ರಗುಣಗಳನ್ನು ಹೊಂದಿದ್ದಾರೆ. ಗಂಡಿನಲ್ಲಿ ಹೆಣ್ಣಿನ ಗುಣಗಳ ಅಣುಗಳೂ ಮತ್ತು ಹೆಣ್ಣಿನಲ್ಲಿ ಗಂಡಿನ ಗುಣಗಳ ಅಣುಗಳೂ ಸೇರಿಕೊಂಡು ಎಲ್ಲರ ಮನಗಳಲ್ಲೂ ಈ ದ್ವಿಗುಣಗಳ ಮಿಶ್ರಣವೇ ಇದೆ ಎಂದು ವಿಮರ್ಶಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಮಾನವರಾದ ಗಂಡು ಹೆಣ್ಣು ಇಬ್ಬರಲ್ಲೂ ಪುಂ-ಸ್ತ್ರೀ ಗುಣಗಳು ಮಿಶ್ರಿತಗೊಂಡಿರುತ್ತವೆ. ಪರಿಮಾಣದ ವ್ಯತ್ಯಯವಿದ್ದರೂ, ಇಬ್ಬರಲ್ಲೂ ಇಬ್ಬರ ಗುಣಗಳೂ ಇರುತ್ತವೆ. ಯಾವ ಗುಣದ ಆಧಿಕ್ಯವಿರುತ್ತದೋ ಅವರ ಸ್ವಭಾವವೂ ಹಾಗೇ ಇರುತ್ತದೆ. ಅಷ್ಟೇ, ಅಲ್ಲ ಸಮಯಕ್ಕೆ ಮತ್ತು ಸಂದರ್ಭಕ್ಕೆ ಅನುಗುಣವಾಗಿ ಆ ಗುಣಗಳು ಪ್ರಮುಖವಾಗಿ ಪ್ರಕಟಗೊಳ್ಳುತ್ತವೆ.

ಹೆಂಗರುಳಿನ ಗಂಡಸರು, ಪುಂ ಸ್ವಭಾವದ ನಾರಿಯರನ್ನು ನಾವು ನಮ್ಮ ಸುತ್ತ ಮುತ್ತ ನೋಡುತ್ತಿರುತ್ತೇವೆ. ಇಲ್ಲಿ ಗಂಡು ಹೆಣ್ಣು ಎನ್ನುವುದು ಕೇವಲ ದೈಹಿಕ ಅಂಗ ವಿನ್ಯಾಸದ ವ್ಯತ್ಯಾಸದಿಂದಲೇ ಹೊರತು ಗುಣ ಭೇದದಿಂದಲ್ಲ. ಏಕೆಂದರೆ ಎರಡೂ ಗುಣಗಳು ಇಬ್ಬರಲ್ಲೂ ಇರುವುದರಿಂದ, ಹೆಣ್ಣಿಗೆ ಹೆಣ್ಣಿನ ಗುಣಗಳು ಅಧಿಕವಾಗಿಯೂ ಗಂಡಾದರೆ ಗಂಡಿನ ಗುಣಗಳು ಅಧಿಕವಾಗಿಯೂ ಇರುತ್ತವೆ ಮತ್ತು ಇರಬೇಕು. ಅಕಸ್ಮಾತ್ ತದ್ವಿರುದ್ಧವಾಗಿದ್ದರೆ ಹೆಣ್ಣನ್ನು ಗಂಡುಬೀರಿ ಎಂತಲೂ ಗಂಡನ್ನು ಹೆಣ್ಣಪ್ಪಿ ಎಂತಲೂ ಕರೆಯುತ್ತಾರೆ.

ಹಾಗಾಗಿ ಹೆಣ್ಣು ಮತ್ತು ಗಂಡಿನ ಗುಣಗಳನ್ನೆರಡನ್ನೂ ಮಿಶ್ರಿತ ಪರಿಮಾಣದಲ್ಲಿ ಹೊಂದಿರುವ ಎರಡೂ ಮಾನವ ಪ್ರಭೇದಗಳು ತಮ್ಮ ದೈಹಿಕ ವಿನ್ಯಾಸಕ್ಕನುಗುಣವಾಗಿ, ಸಮಯ ಮತ್ತು ಸಂದರ್ಭಕ್ಕನುಗುಣವಾಗಿ ಆಯಾ ಗುಣಗಳನ್ನು ಪ್ರಕಟಿಸಿದ್ದಲ್ಲಿ ಅದು ಸಹಜತೆ. ನಮ್ಮನ್ನು ಆ ಪರಮಾತ್ಮ ಅಂತಹ ಸಹಜತೆಯಿಂದ ವಿನ್ಯಾಸಗೊಳಿಸಿದ್ದರೆ, ನಾವೇ ಧನ್ಯರು.





# ಪ್ರೇಮ ವಿಕಟ 414-418

**ಮುಕ್ತಕ-414**

**ಅಳೆವರಾರ್ ಪೆಣ್ಗಡುಗಳನೆಳೆವ ನೂಲುಗಳ ।**
**ಕೆಳಪನೆಗಳೆಲ್ಲವಾಳದಲ್ಲಿ ಬಲು ತೊಡಕು ॥**
**ಇಳೆಯ ಋಣಗಳ ಲೆಕ್ಕವಿಹುದು ವಿಧಿಯಕ್ಕರದಿ ।**
**ತಿಳಿಯಗೊಡನದ ನಮಗೆ - ಮಂಕುತಿಮ್ಮ ॥**

ಅಳೆವರಾರ್=ಅಳೆವರ್+ಆರ್, ಪೆಣ್ಗಡುಗಳನೆಳೆವ=ಪೆಣ್+ಗಂಡುಗಳನು+ಎಳೆವ,
ಕೆಳೆಪಗೆಗಳೆಲ್ಲವಾಳದಲಿ=ಕೆಳೆ+ಪಗೆಗಳೆಲ್ಲವು+ಆಳದಲಿ, ಲೆಕ್ಕವಿಹುದು-ಲೆಕ್ಕವು+ಇಹುದು,

ವಿಧಿಯಕ್ಕರದಿ=ವಿಧಿಯ+ಅಕ್ಕರದಿ, ತಿಳಿಯಗೊಡನದ=ತಿಳಿಯಗೊಡನು+ಅದ.

ಎಳೆವ=ಸೆಳೆವ, ಕೆಳೆ=ಗೆಳೆತನ, ಸ್ನೇಹ, ಪಗೆ=ದ್ವೇಷ, ಅಕ್ಕರದಿ=ಅಕ್ಕರೆಯಿಂದ, ಸರಿಯಾಗಿ, ಜೋಪಾನವಾಗಿ

ಹೆಣ್ಣು ಗಂಡುಗಳ ಪರಸ್ಪರ ಸೆಳೆವ ದಾರಗಳನ್ನು ಅಳೆವುದು ಯಾರು? ಅದು ಸಾಧ್ಯವಿಲ್ಲ. ಪರಸ್ಪರ ಸ್ನೇಹ ಅಥವಾ ದ್ವೇಷಗಳ ಕಾರಣದ ಆಳ ಬಹಳ ಮತ್ತು ಅಭೇದ್ಯ ಪ್ರತಿ ಜೀವಿಗೂ ಇರುವ ಈ ಭೂಮಿಯ ಋಣದ ಲೆಕ್ಕವನ್ನು ವಿಧಿ ಸರಿಯಾಗಿ ಬರೆದಿಟ್ಟಿರುತ್ತಾನೆ. ಅದರ ಪ್ರಕಾರ ಎಲ್ಲ ನಡೆಯುತ್ತದೆ. ಆದರೆ ಆ ವಿಧಿ ನಮಗೆ ಅದನ್ನು ತಿಳಿಯಗೊಡಲಾರ ಎಂದು ಮಾನವರ ಪರಸ್ಪರ ಸಂಬಂಧದ ಸೂಕ್ಷ್ಮತೆಯನ್ನು ವಿಶ್ಲೇಷಣೆ ಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಗಂಡು ಹೆಣ್ಣುಗಳ ಪರಸ್ಪರ ಸೆಳೆತವೇ ಜಗತ್ತಿನಲ್ಲಿರುವ ಆಕರ್ಷಣೆಗಳಲ್ಲಿ ಅತೀ ಹೆಚ್ಚಾದ ಆಕರ್ಷಣೆ. ಆದರೆ ಯಾವ ಕಾರಣಕ್ಕಾಗಿ ಒಬ್ಬ ಗಂಡಿಗೆ ಒಬ್ಬ ಹೆಣ್ಣಲ್ಲಿ ಆಕರ್ಷಣೆ, ಪ್ರೀತಿ ಪ್ರೇಮಗಳು ಉಂಟಾಗುತ್ತವೆ ಎನ್ನುವುದು ಹೇಳುವುದು ಸಾಧ್ಯವೇ ಇಲ್ಲ ಅಲ್ಲವೆ. ನೀವು ಯಾರನ್ನಾದರೂ, ನಿಮಗೆ ಆಕೆ ಏಕೆ ಇಷ್ಟವಾದಳು? ಎಂದು ಕೇಳಿದರೆ ಯಾವುದಾದರೂ ಒಂದು ಕಾರಣವನ್ನು ಕೊಡಲಾಗುವುದಿಲ್ಲ. ಏಕೆಂದರೆ ಇದು ವಿಧಿಯಾಟ, ಬಹಳ ನಿಗೂಢ. ಹಾಗಾಗಿಯೇ ನಮ್ಮಲ್ಲಿ ಋಣಾನುಬಂಧ ರೂಪೇಣ ಪಶು ಪತ್ನಿ (ಪತಿ) ಸುತಾಲಯಾ, ಎಂದಿದ್ದಾರೆ. ಯಾವುದು ನಮಗೆ ತಿಳಿಯುವುದಿಲ್ಲವೋ ಅಥವಾ ಅರ್ಥವಾಗುವುದಿಲ್ಲವೋ ಅದಕ್ಕೆ ಋಣಾನುಬಂಧ ಎಂದರು.

ನಮಗೆ ಅರ್ಥವಾಗದಿದ್ದರೂ ವಿಧಿಯ ಬಳಿ ಅದರ ಲೆಕ್ಕಾಚಾರ ಸರಿಯಾಗೇ ಇರುತ್ತದೆ. ಎಲ್ಲೋ ಕೋಲಾರದಲ್ಲಿ ಹುಟ್ಟಿ, ಮೈಸೂರಿನಲ್ಲಿ ಬೆಳೆದ ಒಂದು ಐಯ್ಯಂಗಾರ್ ಹುಡುಗಿಗೂ, ಎಲ್ಲೋ ಪಂಜಾಬಿನಲ್ಲಿ ಹುಟ್ಟಿ ದಿಲ್ಲಿಯಲ್ಲಿ ಬೆಳೆದ ಹುಡುಗನಿಗೂ ಅಮೇರಿಕಾದಲ್ಲಿ ಪರಿಚಯವಾಗುವುದೇನು, ಪರಸ್ಪರ ಪ್ರೇಮ ಉಂಟಾಗಿ ವಿವಾಹವಾಗುವುದು ಎಂದರೆ ಅದು ವಿಧಿ ಲಿಖಿತವೇ ಅಲ್ಲವೇ? ಇದು ಕೇವಲ ಒಂದು ದೃಷ್ಟಾಂತವಷ್ಟೆ. ಇಂತಹದ್ದನ್ನು ನಾವು ಪ್ರತಿ ನಿತ್ಯ ನೋಡುತ್ತಿರುತ್ತೇವೆ. ಇಂದಿನ ಮುಕ್ತ ಸಮಾಜದಲ್ಲಿ ಇದು ಇನ್ನೂ ಸಹಜವಾಗೇ ನಡೆಯುತ್ತದೆ.

'ಇಳೆಯ ಋಣಗಳ ಲೆಕ್ಕ' ಎಂದು ಗುಂಡಪ್ಪನವರು ಉಲ್ಲೇಖಿಸಿರುವಂತೆ, ಪ್ರತಿಯೊಬ್ಬರೂ, ಈ ಭುವಿಗೆ, ಇಲ್ಲಿ ಸಂಚಯಿಸಿದ ಪೂರ್ವ ಕರ್ಮಗಳ ಋಣವನ್ನು ತೀರಿಸಲೆಂದೇ ಬರುತ್ತಾರೆ. ಹಾಗೆ ಬರುವಾಗ ಈ ಸಂಬಂಧಗಳನ್ನೂ ಹೊತ್ತು ತಂದಿರುತ್ತಾರೆ. ಅದರ ಲೆಕ್ಕಾಚಾರವೆಲ್ಲ ಆ ವಿಧಿಯ ಬಳಿ ಇರುತ್ತದೆ. ತನ್ನ ಬಳಿ ಎಲ್ಲ ಲೆಕ್ಕಾಚಾರಗಳು ಇದ್ದರೂ ಅದನ್ನು ನಮಗೆ ತಿಳಿಯಗೊಡುವುದಿಲ್ಲ. ಹಾಗೆ ನಮ್ಮ ಮುಂದಿನ ಆಗುಹೋಗುಗಳನ್ನು ನಿಗೂಢವಾಗಿಡುವುದೇ ವಿಧಿ ನಿಯಮ.

ನಮಗರಿವಿಲ್ಲದಿದ್ದರೂ ನಮಗೆ ಕೆಲವು ರೀತಿಯಲ್ಲಿ ಕೆಲವರೊಂದಿಗೆ ನಂಟು ಉಂಟಾಗುತ್ತದೆ. ಇದು ವಿಧಿಯಾಟ. ಹಾಗೆ ವಿಧಿ ಮುಖೇನ ಉಂಟಾದ ನಂಟನ್ನು ಶುದ್ಧ ಮನಸ್ಸಿನಿಂದ ನಿಭಾಯಿಸುವುದೇ ನಮ್ಮ ಕರ್ತವ್ಯ.

**ಮುಕ್ತಕ-415**

**ಎಲ್ಲಿಯದನೋ ಅದೆಲ್ಲಿಯದಕೋ ಹೆಣೆಯುವನು।**
**ಒಲ್ಲೆವೆನೆ ನೀವೇ ಕಿತ್ತಾಡಿಕೊಳಿರೆನುವನ್॥**
**ಬೆಲ್ಲದಡುಗೆಯಲಿ ಹಿಡಿ ಮರಳನೆರಚರಿಸುವನು।**
**ಒಳ್ಳೆಯುಪಕಾರಿ ವಿಧಿ - ಮಂಕುತಿಮ್ಮ॥**

ಅದೆಲ್ಲಿಯದಕೋ=ಅದ+ಎಲ್ಲಿಯದಕೋ, ಕಿತ್ತಾಡಿಕೊಳಿರೆನುವನ್=ಕಿತ್ತಾಡಿ+ಕೊಳಿರಿ+ಎನುವನ್, ಬೆಲ್ಲದಡುಗೆಯಲಿ=ಬೆಲ್ಲದ+ಅಡುಗೆಯಲಿ, ಮರಳನೆರಚಿರಿಸುವನು=ಮರಳನು+ಎರಚಿಸಿ+ಇರುವನು, ಒಳ್ಳೆಯುಪಕಾರಿ=ಒಳ್ಳೆಯ+ಉಪಕಾರಿ.

ವಿಧಿ=ನಮ್ಮನ್ನೆಲ್ಲ ಒಂದು ಸೂತ್ರದಲ್ಲಿ ಆಡಿಸುವ ಆ ಪರಮ ಚೇತನ.

ವಿಧಿ, ಎಲ್ಲಿಯೋ ಇರುವುದಕ್ಕೆ ಮತ್ತೆಲ್ಲಿಯೋ ಇರುವುದನ್ನು ನಂಟು ಹಾಕಿಸುತ್ತಾನೆ. ನಾವು ಅಕಸ್ಮಾತ್ ವಿಧಿ ಲಿಖಿತವನ್ನು ಧಿಕ್ಕರಿಸಿ, ನಮ್ಮ ಸ್ವಂತ ಬುದ್ಧಿ ಉಪಯೋಗಿಸಿ ಏನೋ ಮಾಡಲು ಹೋಗಿ ಪರದಾಟದಲ್ಲಿ ಸಿಕ್ಕಿಹಾಕಿಕೊಂಡರೆ, 'ನೀನೇ ಹೋರಾಡಿಕೋ' ಎಂದು ಸುಮ್ಮನಿರುತ್ತಾನೆ. ನಾವು ಆಸೆಪಟ್ಟದ್ದನ್ನು ಕೆಡಿಸಿ 'ಸಿಹಿಯಾದ ಪಾಕದಲ್ಲಿ ಮರಳನ್ನು ಎರಚುತ್ತಾನೆ' ಇವನು ನಮಗೆ ಬಹಳ ಒಳ್ಳೆಯ ಉಪಕಾರಿ ಎಂದು ನಮ್ಮ ಬದುಕುಗಳಲ್ಲಿ ವಿಧಿಯಾಟವನ್ನು ಕುಹಕವಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಈ ಬದುಕೇ ಹಾಗೆ, ನಮ್ಮ ಮನಸ್ಸು ಬುದ್ಧಿ ದೇಹಗಳಿಗೆ ಇಂದ್ರಿಯ ಸಂಪರ್ಕದಿಂದ ಉಂಟಾದ ಅಭಿರುಚಿಗೆ ತಕ್ಕಂತೆ ವಸ್ತು, ವ್ಯಕ್ತಿ ಮತ್ತು ವಿಷಯಗಳನ್ನು ಆಸೆಪಡುತ್ತೇವೆ. ಆದರೆ ವಿಧಿ ಲಿಖಿತವೇ ಬೇರೆ ಇರುತ್ತದೆ. ಅದು ನಮಗೆ ತಿಳಿದಿರುವುದಿಲ್ಲ. ಹಾಗಾಗಿಯೇ ನಾವು ಅಸೆಪಡುವುದಕ್ಕೂ ನಮಗೆ ಲಭ್ಯವಾಗುವುದಕ್ಕೂ ಅಷ್ಟೊಂದು ಅಂತರ. ಹಾಗಾಗಿಯೇ ನಿರಾಸೆ ಬೇಸರ ಮತ್ತು ಜಿಗುಪ್ಸೆಗಳಂತಹ ಭಾವನೆಗಳು ಬರುತ್ತವೆ. ಕೆಲವೇ ಬಾರಿ ನಾವು ಅಸೆ ಪಟ್ಟದ್ದು ಮತ್ತು ಪಡೆದದ್ದು ಎರಡೂ ಒಂದಾಗಿ ಸಂತೋಷವುಂಟಾಗುತ್ತದೆ. ಅದು ಕೇವಲ ಕಾಕತಾಳೀಯವೆಂದು ಪ್ರಾಜ್ಞರು ಹೇಳುತ್ತಾರೆ.

(253)

ಪ್ರೇಮ ವಿಕಟ 414-418 ಕಗ್ಗ ರಸಧಾರೆ-2

ವಿಧಿಲಿಖಿತವೇನು ಎಂದು ಮೊದಲೇ ಅರಿತರೆ, ಅದನ್ನೇ ಆಸೆಪಡಬಹುದು. ಆದರೆ ಅದು ಗೊತ್ತಾಗುವುದಿಲ್ಲವಲ್ಲ. ನಮಗೆ ಗೊತ್ತಾಗುವುದು ಕೇವಲ ನಮ್ಮ ಇಂದ್ರಿಯಗಳ ಮೂಲಕ ನಮ್ಮ ಅರಿವಿಗೆ ಬರುವ ವಿಷಯಗಳಷ್ಟೆ. ಹಾಗಾಗಿ ನಾವು ಅವನ್ನೇ ಆಸೆಪಡುತ್ತೇವೆ. ಆಸೆಪಟ್ಟು ಅದರಿಂದ ಬರುವ ಸುಖವನ್ನು ನಮ್ಮ ಮನಸ್ಸಿನಲ್ಲಿ ಲೆಕ್ಕಾಚಾರ ಹಾಕುತ್ತೇವೆ ಸಿಹಿಯಾದ ಪಾಕದಂತೆ. ಆದರೆ ವಿಧಿಲಿಖಿತದಿಂದ ನಮಗೆ ಸಿಗುವುದು ಬೇರೆಯೇ ಆದಾಗ ನಮ್ಮ ಆಸೆಗಳ ಪಾಕಕ್ಕೆ ಮರಳು ಸುರಿದಂತಾಗುತ್ತದೆ. ಈ ರೀತಿಯ ನಿರಾಸೆಯನ್ನು ನಮಗೆ ತಂದಿತ್ತು ಆ ವಿಧಿ ನಮಗೆ ಬಹಳ ಅಪಕಾರದ ಉಪಕಾರವನ್ನು ಮಾಡುತ್ತಾನೆ.

ಇದನ್ನು ಉಪಕಾರವೆಂದುಕೊಳ್ಳಲೇಬೇಕು. ಏಕೆಂದರೆ ಈ ರೀತಿಯ ನಿರಾಸೆಗಳ ಸರಮಾಲೆಗಳ ಕೊನೆಯಲ್ಲಿ ನಮಗೆ ಜ್ಞಾನ ಉಂಟಾಗಿ ಈ ಜಗತ್ತಿನಲ್ಲಿ ಆಸೆ ಕಡಿಮೆಯಾಗಿ, ಪರತತ್ವದಲ್ಲಿ ಮತ್ತು ತನ್ಮೂಲಕ ಪರಮಾತ್ಮನಲ್ಲಿ ಆಸ್ಥೆಯನ್ನು ನಮ್ಮಲ್ಲಿ ಉಂಟಾಗಿಸುವುದೇ ಆ ವಿಧಿ. ಹಾಗಾಗಿ ವಿಧಿ ನಮಗೆ ಅಪಕಾರವನ್ನು ಮಾಡುವಂತೆ ಕಂಡರೂ ಉಪಕಾರವನ್ನೇ ಮಾಡುತ್ತದೆ.

ನಾವೂ ಸಹ ಸ್ವಪ್ರಯತ್ನದಿಂದ ನಮ್ಮ ಆಸೆ ಪಡುವ ಪ್ರವೃತ್ತಿಯಿಂದ ದೂರಾಗಿ ವಿಧಿಯಾಟಕ್ಕೆ ತಲೆಬಾಗಿ ಬಂದದ್ದು ಬರಲಿ ಎಂದು ಒಂದು ನಿರ್ಲಿಪ್ತ ಭಾವವನ್ನು ಮತ್ತು ಬಂದದ್ದರಿಂದ ತೃಪ್ತಿಪಡುವ ಪ್ರವೃತ್ತಿಯನ್ನು ಬೆಳೆಸಿಕೊಂಡರೆ ಸುಖದಿಂದಿರಬಹುದು, ಆನಂದದಿಂದಿರಬಹುದು.

**ಮುಕ್ತಕ-416** **ಕುಸುಮಕೋಮಲಗಾತ್ರ ಶೂರ್ಪಣಖಿಗರಿದಾಯ್ತೆ।**
**ವಿಷದ ಪೂತನಿ ನಯನಪಕ್ಷದೊಳಗಿರಳೆ॥**
**ಮುಸಿನಗುವಿನೊಳಗಿರಲಶಕ್ಯವೆ ಪಿಶಾಚಿಗೆ।**
**ಮೃಷೆಯೋ ಮೈಬೆಡಗೆಲ್ಲ – ಮಂಕುತಿಮ್ಮ॥**

ಶೂರ್ಪಣಖಿಗರಿದಾಯ್ತೆ?=ಶೂರ್ಪಣಖಿಗೆ+ಅರಿದು+ಆಯ್ತೆ,
ನಯನಪಕ್ಷ್ಮದೊಳಗಿರಳೆ=ನಯನಪಕ್ಷದೊಳಗೆ+ಇರಳೆ,
ಮುಸಿನಗುವಿನೊಳಗಿರಲಶಕ್ಯವೆ=ಮುಸಿನಗುವಿನೊಳಗೆ+ಇರಲು+ಆಶಕ್ಯವೆ.
ಅರಿದು=ಕಷ್ಟ, ಕುಸುಮಕೋಮಲಗಾತ್ರ=ಹೂವಿನಂತಾ ಮೃದುವಾದ ಶರೀರ,
ನಯನಪಕ್ಷದೊಳಗೆ=ಕಣ್ಣರೆಪ್ಪೆಗಳು, ಮೃಷೆಯೋ=ಭ್ರಮೆಯೋ, ಕಪಟವೋ.

ರಾಮಾಯಣದ ಶೂರ್ಪಣಖಿಗೆ ರಾಮನನ್ನು ಕೀಟಲೆ ಮಾಡಲು ಸುಂದರ ರೂಪವನ್ನು ಧರಿಸಲು ಕಷ್ಟವೇನೂ ಆಗಲಿಲ್ಲ. ಹಾಗೆಯೇ ಕೃಷ್ಣನನ್ನು ಕೊಲ್ಲಲು ಬಂದ ಪೂತನೆಯು ತನ್ನ ದೇಹವೆಲ್ಲಾ ವಿಷವಾದರೂ, ಮೋಹನ ರೂಪವನ್ನು ಧರಿಸಿ ಬರಲಿಲ್ಲವೇ? ಪಿಶಾಚಿಗೆ ಮುಗುಳುನಗೆ ಸೂಸುವುದು ಅಶಕ್ಯವಲ್ಲ. ಹಾಗಾಗಿ ಹೊರಗಿನ ರೂಪವೆಲ್ಲ ಕೇವಲ ಕಪಟ, ಭ್ರಮೆ ಎಂದು ಹೊರ ರೂಪ ಮತ್ತು ಆಂತರ್ಯದ ವ್ಯತ್ಯಾಸಗಳನ್ನು ತೋರಿದ್ದಾರೆ ಮಾನ್ಯ ಗುಂಡಪ್ಪನವರು ನಮಗೆ ಈ ಮುಕ್ತಕದಲ್ಲಿ.

ಈ ಜಗತ್ತಿನಲ್ಲಿ ನಮಗೆ ಇಂತಹವರು ಕಂಡಲ್ಲೆಲ್ಲಾ ಸಾಮಾನ್ಯವಾಗಿ ಸಿಗುತ್ತಾರೆ. ಈ ಅರ್ಥದಲ್ಲಿ ನಾವೆಲ್ಲರೂ ಕಪಟಿಗಳೇ, ಏಕೆಂದರೆ ಎಲ್ಲರಿಗೂ ಒಳಗೊಂದು ಹೊರಗೊಂದು. ಸಮಯ ಸಂದರ್ಭಕ್ಕನುಸಾರವಾಗಿ ವ್ಯವಹರಿಸುವಾಗ ಎಲ್ಲವನ್ನೂ ಹೇಳಿಬಿಡಲಾಗುವುದೇ ಇಲ್ಲ. ಹಾಗೆ ಮನದಲ್ಲಿರುವುದನ್ನೆಲ್ಲವನ್ನೂ ಹೇಳಿಬಿಟ್ಟರೆ ಎಂತೆಂತಹ ತೊಂದರೆಗಳಿಗೆ ಸಿಕ್ಕಿಕೊಳ್ಳಬಹುದೆಂದು ಊಹಿಸಲೂ ಸಾಧ್ಯವಿಲ್ಲ ಅಲ್ಲವೇ?

ಹಾಗಾಗಿ ಮಾನ್ಯ ಗುಂಡಪ್ಪನವರು ಹೇಳುವಂತೆ ಹೊರಗಿನ ರೂಪ ಕೇವಲ ಮೃಷೆ, ಅಂದರೆ ಕೇವಲ ಭ್ರಮೆ. ಏಕೆಂದರೆ ತೋರುವುದು ಸತ್ಯವಲ್ಲವಲ್ಲ. ಆಂಗ್ಲ ಭಾಷೆಯಲ್ಲಿ looks are deceptive, ಎನ್ನುತ್ತಾರೆ. ಇದು ಬಹುಶಃ ಸಾಮಾನ್ಯಾಭಿಪ್ರಾಯ. ಎಲ್ಲವೂ ಹಾಗಲ್ಲ. ಕೆಲವರಾದರೂ ಈ ನಿಯಮಕ್ಕೆ ಅಪವಾದವಾಗಿರಬಹುದು.

ಪ್ರತಿಯೊಬ್ಬರಿಗೂ ಒಳಗಿನ ರೂಪ ಬೇರೆ ಮತ್ತು ಹೊರಗಿನ ರೂಪ ಬೇರೆ. ಆದರೆ ಈ ರೂಪಾಂತರಗಳಿಂದ ಎಲ್ಲಿಯ ತನಕ ಅನ್ಯರಿಗೆ ನೋವು, ಹಾನಿ ಅಥವಾ ನಷ್ಟಗಳು ಆಗದಿದ್ದರೆ ಅಲ್ಲಿಯ ತನಕ ತೊಂದರೆ ಇಲ್ಲ. ಹಾಗೆ ನಮ್ಮಲ್ಲಿಯೂ ಒಳಗೊಂದು ಹೊರಗೊಂದು ಇದ್ದಾಗ್ಯೂ, ಆ ರೂಪ ವ್ಯತ್ಯಯದಿಂದ ಅನ್ಯರಿಗೆ ತೊಂದರೆ ಆಗದಂತೆ, ನಾವು ನೋಡಿಕೊಂಡರೆ ಅದೇ ನಮ್ಮ ಜೀವನದ ಸಾಧನೆಯಾಗುತ್ತದೆ.

**ಮುಕ್ತಕ-417**

**ಹೇಮಕುಂಬದಿ ಕೊಳಚೆರೊಚ್ಚುನೀರ್ಗಳ ತುಂಬಿ।**
**ರಾಮಣೀಯಕದೊಳಿಟ್ಟಾಮಗಂಧವನು ॥**
**ಪ್ರೇಮಪುಷ್ಪಕೆ ಮೊನಚು ಗರಗಸವನಂಚರಿಸಿ।**
**ಏಂ ಮಾಡಿದನೊಬೊಮ್ಮ! - ಮಂಕುತಿಮ್ಮ ॥**

ಕೊಳಚೆರೊಚ್ಚುನೀರ್ಗಳ=ಕೊಳಚೆ+ರೊಚ್ಚು+ನೀರ್ಗಳ,

ರಾಮಣೀಯಕದೊಳಿಟ್ಟಾಮಗಂಧವನು=ರಾಮಣೀಯಕದೊಳು+ಇಟ್ಟ+ಆಮಗಂಧವನು,

ಗರಗಸವನಂಚೆರಿಸಿ=ಗರಗಸವನು+ಅಂಚೆ+ಇರಿಸಿ.

ಹೇಮಕುಂಬ=ಬಂಗಾರದ ಕೊಡ, ರಾಮಣೀಯಕ=ಸುಂದರವಾದ, ಆಮಗಂಧ=ದುರ್ನಾತಭರಿತ,

ಬೊಮ್ಮ=ಬ್ರಹ್ಮ.

ಸೃಷ್ಟಿಯಲ್ಲಿ ಬಂಗಾರದಂತಹ ಅಮೂಲ್ಯ ವಸ್ತುವಿನೊಳಗೆ ಕೊಳಚೆ ರೊಚ್ಚೆಯಂತಹ ಹೊಲಸನ್ನು ತುಂಬಿ, ಅತೀ ಸುಂದರವಾದ ಪ್ರಾಣಿಯೊಳಗೆ ಕೀವು, ಮಲ ಮುಂತಾದ ದುರ್ನಾತದ ವಸ್ತುಗಳನ್ನು ಸೇರಿಸಿ, ದೂರದಿಂದ ಸುಂದರವಾಗಿ ರಮಣೀಯವಾಗಿ ಕಾಣುವ ಹೂವಿನ ಕಾಂಡದಲ್ಲಿ ಮೊನಚಾದ, ಚುಚ್ಚುವ ಮುಳ್ಳುಗಳನ್ನು ಇಟ್ಟು, ಈ ಜಗತ್ತನ್ನು ಏಕೆ ಸೃಷ್ಟಿಸಿದನೋ ಆ ಪರಬ್ರಹ್ಮ ಎಂದು ಪರಸ್ಪರ ವಿರೋಧಗಳ ಸಹ ವಾಸ್ತವ್ಯವನ್ನು ವಿಶ್ಲೇಷಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

(255)

| ಪ್ರೇಮ ವಿಕಟ 414-418 | ಕಗ್ಗ ರಸಧಾರೆ-2 |
| --- | --- |

ನಮ್ಮ ಸುತ್ತ ಇರುವ ವಸ್ತುಗಳನ್ನೇ ನಾವು ನೋಡಿದರೆ, ಸುಂದರವಾದ ವ್ಯಕ್ತಿಯ ಬಾಯಲ್ಲಿ ಹೊಲಸು ಮಾತು, ಕೆಟ್ಟ ಯೋಚನೆ, ದುರಭ್ಯಾಸಗಳ ಆಗರ. ನಮಗೆ ಬಹಳ ಒಳ್ಳೆಯವರೆಂದು ಕಾಣುವ ವ್ಯಕ್ತಿಯ ಸ್ನೇಹದಲ್ಲಿ ಹುಳುಕು, ಸುಂದರವಾದ ದೇಹ ಹೊತ್ತ ವ್ಯಕ್ತಿಯಲ್ಲಿ ಅನಾರೋಗ್ಯದ ಛಾಯೆ. ಅದರಿಂದ ಒಳಗೆಲ್ಲಾ ಕೆಟ್ಟುಹೋದ ಅಂಗಾಂಗಗಳು, ಆರೋಗ್ಯವಂತನಾಗಿ ಕಾಣುತ್ತಿದ್ದ ವ್ಯಕ್ತಿಗೆ ಹಠಾತ್ ಮೃತ್ಯು ಪ್ರಾಪ್ತಿ. ಎಷ್ಟೊಂದು ವೈಪರೀತ್ಯದಿಂದ ಕೂಡಿದೆ ಈ ಸೃಷ್ಟಿ

ನಿಸರ್ಗದಲ್ಲೂ ನಾವು ಅದನ್ನು ಕಾಣಬಹುದು. ರಮಣೀಯವಾದ ಜಲಪಾತದಡಿಯಲ್ಲಿ ತೀವ್ರ ರಭಸ, ಹೊಂಡ ಮೃತ್ಯುಕೂಪ. ದೂರದಿಂದ ನುಣ್ಣಗೆ ಕಾಣುವ ಗಿರಿ ಪರ್ವತಗಳಲ್ಲಿ ಕೊರಕಲು, ಕಂದರ ಮತ್ತು ಕಣಿವೆಗಳಿಂದ ಕೂಡಿ

ಅದರಲ್ಲಿ ನಡೆದಾಡುವುದೇ ಒಂದು ದುಃಸಾಹಸವಾಗುತ್ತದೆ. ನೋಡಲು ಅತಿ ಸುಂದರವಾದ ಬಣ್ಣ ಮತ್ತು ಚಿತ್ತಾರಗಳಿಂದ ಕೂಡಿದ ಹಾವಿನ ಹಲ್ಲಿನಲ್ಲಿ ಘೋರ ವಿಷವಿರುತ್ತದೆ.

ಹೀಗೆ ಒಂದಕ್ಕೊಂದು ವಿರುದ್ಧವಾದ ವಸ್ತುಗಳನ್ನು ಏಕೆ ಮಾಡಿದನೋ ಆ ದೇವ? ಎನ್ನುವ ಪ್ರಶ್ನೆಯೇ ಈ ಮುಕ್ತಕದ ವಿಷಯ. ಆ ಪರಮಾತ್ಮನ ಸೃಷ್ಟಿಗೆ ಮತ್ತು ಅದರ ವೈಚಿತ್ರ್ಯಕ್ಕೆ ಅವನದೇ ಆದ ಕಾರಣಗಳಿರಬಹುದು. ಉದಾಹರಣೆಗೆ, ಕೈ ಕಾಲಿಲ್ಲದ ಹಾವಿಗೆ ತನ್ನನ್ನು ತಾನು ರಕ್ಷಿಸಿಕೊಳ್ಳಲು ಅಥವಾ ತನ್ನ ಬೇಟೆಯನ್ನು ಹಿಡಿಯಲು ಅದರ ಬಾಯಲ್ಲಿ ವಿಷಕ್ಕಿಂತ ಅನ್ಯ ದಾರಿಯೇ ಇಲ್ಲವೆಂಬುದನ್ನು ನೋಡಿದರೆ ಸೃಷ್ಟಿಯ ಪರಿಪೂರ್ಣತೆ ನಮಗೆ ಅರ್ಥವಾಗುತ್ತದೆ.

**ಮುಕ್ತಕ-418**

**ಕೈಕೇಯಿ ಸತ್ಯಭಾಮೆಯರಂಶವಿರದ ಪೆಣ್ ।**
**ಲೋಕದೊಳಗಿರಳು ಬೆಳೆವುದು ಲೋಕವವರಿಂ ॥**
**ಸಾಕಿ ಸಲುಹುವ ಮತ್ಸರವದು ಸೃಷ್ಟಿಯುಪಾಯ ।**
**ಬೇಕದಕೆ ನಗು ಸಹನೆ – ಮಂಕುತಿಮ್ಮ ॥**

ಸತ್ಯಭಾಮೆಯರಂಶವಿರದ=ಸತ್ಯಭಾಮೆಯರ+ಅಂಶವು+ಇರದ,
ಲೋಕದೊಳಗಿರಳು=ಲೋಕದೊಳಗೆ+ಇರಳು, ಲೋಕವವರಿಂ=ಲೋಕವು+ಅವರಿಂ,
ಮತ್ಸರವದು=ಮತ್ಸರವು+ಅದು, ಸೃಷ್ಟಿಯುಪಾಯ=ಸೃಷ್ಟಿಯ+ಉಪಾಯ, ಬೇಕದಕೆ=ಬೇಕು+ಅದಕೆ.
ಪೆಣ್=ಹೆಣ್ಣು, ಮತ್ಸರ=ಈರ್ಷ್ಯ ಅಥವಾ ಅಸೂಯೆ,

ಕೈಕೇಯಿ ಮತ್ತು ಸತ್ಯಭಾಮೆಯರ ಗುಣಗಳ ಅಂಶವಿರದ ಹೆಣ್ಣು ಈ ಜಗತ್ತಿನಲ್ಲಿ ಇರಲು ಸಾಧ್ಯವಿಲ್ಲ. ಅಂತಹವರಿಂದಲೇ ಜಗತ್ತು ವೃದ್ಧಿಯಾಗುತ್ತದೆ. ಹೆಣ್ಣಿನಲ್ಲಿ ಅಂತಹ ಮಮತೆ, ಸ್ವಾರ್ಥ, ಮತ್ತು ಮತ್ಸರದ ಭಾವನೆಗಳು ಈ ಜಗತ್ತಿನ ಬೆಳವಣಿಗೆಗೆ ಅಗತ್ಯ ಮತ್ತು ಇದು ಸೃಷ್ಟಿಯಿಂದ ಬಂದ ಸಹಜವಾದ ಗುಣ. ಇಂತಹ ಗುಣಗಳಿಗೆ ತೀವ್ರ ಪ್ರತಿಕ್ರಿಯೆ ನೀಡದೆ ಸಹನೆಯಿಂದ ನಕ್ಕು ಮನವನ್ನು ಹಗುರಾಗಿಸಿಕೊಳ್ಳಬೇಕು ಎಂದು ಸೂಚಿಸುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಕೈಕೇಯಿಯಂತೆ ತನ್ನ ಮಗನೇ ಅಗ್ರಗಣ್ಯನಾಗಬೇಕೆಂದು ಅಥವಾ ಸತ್ಯಭಾಮೆಯಂತೆ ತನ್ನ ಪತಿ ಕೇವಲ ತನ್ನವನಾಗಬೇಕೆಂದು ಬಯಸುವುದು ಬಹಳ ಸಹಜವಾದ ಗುಣ. ಅಂತಹ ಗುಣವಿಲ್ಲದ ಹೆಣ್ಣು ಈ ಜಗತ್ತಿನಲ್ಲೇ ಇರಲು ಸಾಧ್ಯವಿಲ್ಲ. ಕೈಕೇಯಿ ಹಾಗೆ ಆಸೆ ಪಟ್ಟಿದ್ದರಿಂದ ರಾವಣ ಸಂಹಾರವಾಯಿತು ಮತ್ತು ಸತ್ಯಭಾಮೆಯ ಆಸೆ, ಭಕ್ತಿಯ ಮಹಿಮೆಯನ್ನು ಜಗತ್ತಿಗೆ ಅರುಹಿದಂತಾಯಿತು.

ಇಂತಹ ಸ್ವಾರ್ಥದ ಅಥವಾ ಅಸೂಯೆಯ ಭಾವನೆಗಳು ನಮಗೆ ಅರಿವಿಲ್ಲದೆಯೇ ತಮ್ಮ ಕಾರ್ಯ ಸಿದ್ಧಿಯನ್ನು ಮಾಡುತ್ತವೆ. ಹಾಗಾಗಿ ಅವುಗಳನ್ನು ಕೆಟ್ಟದ್ದು ಎಂದು ಪರಿಗಣಿಸಬಾರದೆಂಬುದೇ ಈ ಮುಕ್ತಕದ ಆಂತರ್ಯ. ಏಕೆಂದರೆ ಹೊರನೋಟಕ್ಕೆ ಅದು ಅಸೂಯೆ ಅಥವಾ ಸ್ವಾರ್ಥವೆಂದು ಕಂಡರೂ ಆ ಭಾವಗಳಿಗೆ ಕಾರಣವನ್ನು ಮತ್ತು ಮುಂದೆ ಅದರಿಂದಾಗುವ ಪರಿಣಾಮಗಳನ್ನು ನಾವು ಅರ್ಥಮಾಡಿಕೊಳ್ಳಲು ಸಾಧ್ಯವೇ ಇಲ್ಲ. ಇದು ಗುಂಡಪ್ಪನವರು ಹೇಳುವಂತೆ ಸೃಷ್ಟಿಯ ಉಪಾಯ.

ಎಲ್ಲೋ ಕೆಲವು ಕಡೆ ಧೃತರಾಷ್ಟ್ರನ ರೀತಿ ತಮ್ಮ ಮಕ್ಕಳನ್ನು ಅತೀ ಪ್ರೀತಿ ಮಾಡುವ ಮತ್ತು ಮಕ್ಕಳು ಮಾಡುವ ತಪ್ಪುಗಳನ್ನು ಕುರುಡು ಮಮತೆಯಿಂದ ಸಮರ್ಥಿಸಿಕೊಳ್ಳುವ ತಾಯಂದಿರು ಸಿಗಬಹುದು. ಅವರ ವಿನಃ ಸಾಮಾನ್ಯವಾಗಿ ಸಹಜವಾಗಿರುವ ಈ ಗುಣಗಳು ಕೆಲವು ಬಾರಿ ಅತಿ ಎಂದು ನಮಗನ್ನಿಸಿದರೂ, ತಕ್ಷಣ ತೀವ್ರವಾದ ಪ್ರತಿಕ್ರಿಯೆ ತೋರದೆ, ಇದೂ ಸಹಃ ಪರಮಾತ್ಮನ ಲೀಲಾವಿನೋದವೆಂದು, ಮುಗುಳು ನಗೆಯಿಂದ ಸಹಿಸಿಕೊಳ್ಳಬೇಕು.

ಹಾಗೆ ಸಹಿಸಿಕೊಂಡರೆ ಅದಕ್ಕೆ ಕಾಲವೇ ಪರಿಣಾಮವನ್ನು ತೋರುತ್ತದೆ. ಗುಂಡಪ್ಪನವರೇ ಹೇಳುವಂತೆ "ಸಹನೆ ವಜ್ರಕವಚ' ಎಂಬುದನ್ನು ಅರಿತು ಶಾಂತವಾಗಿರಬೇಕು.

# ಭಾವರಾಗೋದ್ರೇಕ 419-423

**ಮುಕ್ತಕ-419** **ಎಳೆಯ ತರು ದಿನದಿನವು ಹೊಸತಳಿರ ತಳೆವಂತೆ |**

**ತಿಳಿನೀರು ಚಿಲುಮೆಯಲ್ಲಿ ನಿಲದುಕ್ಕುವಂತೆ ||**

**ಎಳೆ ಮಕ್ಕಳೊಳು ತಿಳಿವು ಮೊಳೆತು ಬೆಳೆವುದು ನೋಡು।**
**ಇಳೆಯೊಳಗದೊಂದು ಸೊಗ - ಮಂಕುತಿಮ್ಮ॥**

ನಿಲದುಕ್ಕುವಂತೆ=ನಿಲದೆ+ಉಕ್ಕುವಂತೆ, ಇಳೆಯೊಳಗದೊಂದು=ಇಳೆಯೊಳಗೆ+ಅದು+ಒಂದು ತರು=ಗಿಡ, ಹೊಸತಳಿರ=ಹೊಸ ಚಿಗುರು, ಚಿಲುಮೆ-ಊಟೆ, ನಿಲದೆ=ನಿಲ್ಲದೆ, ಇಳೆ=ಭೂಮಿ, ಸೊಗ=ಸೊಗಸು

ಒಂದು ಚಿಕ್ಕ ಗಿಡ ಪ್ರತಿನಿತ್ಯ ಹೊಸ ಚಿಗುರನ್ನು ತಳೆವಂತೆ, ಭೂಮಿಯಲ್ಲಿರುವ ನೀರ ಚಿಲುಮೆಯಲ್ಲಿ ನಿಲ್ಲದೆ ತಿಳಿನೀರುಕ್ಕುವಂತೆ, ಎಳೆಯ ಮಕ್ಕಳಲ್ಲಿ ಪ್ರತಿನಿತ್ಯ ಹೊಸತನ್ನು ಅರಿತುಕೊಳ್ಳುವಿಕೆ ನಿರಂತರವಾಗಿ ನಡೆದೇ





ಇರುತ್ತದೆ. ಈ ನಿರಂತರ ಅರಿತುಕೊಳ್ಳುವಿಕೆ ಈ ಜಗತ್ತಿನಲ್ಲಿ ಬಹಳ ಸೊಗಸಾದ ವಿಚಾರ ಎಂದು ಪ್ರಸ್ತಾಪಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಬೆಳೆಯುವ ಮಕ್ಕಳ ಮನಸ್ಸು ಬುದ್ಧಿಗಳು ಶುದ್ಧ ಮತ್ತು ಮುಗ್ಧವಾಗಿರುತ್ತವೆ. ಇನ್ನೂ ಉತ್ತು, ಬಿತ್ತು, ಬೇಸಾಯಮಾಡದ ಭೂಮಿಯಲ್ಲಿ ಯಾವುದೇ ಬೀಜವನ್ನು ನೆಟ್ಟರೂ ನಳನಳಿಸಿ ಬೆಳೆಯುವಂತೆ, ತಾವು ಕೇಳುವ, ನೋಡುವ ಎಲ್ಲ ವಿಷಯಗಳೂ ಮಕ್ಕಳಲ್ಲಿ ಕುತೂಹಲವನ್ನು ಕೆರಳಿಸುತ್ತದೆ, ಎಲ್ಲವೂ ನವೀನವಾಗಿ ಕಂಡು ಅದರಿಂದ

ಕಲಿಯುತ್ತಾ ಹೋಗುತ್ತಾರೆ. ಅವರ ಗ್ರಹಿಸುವ ಶಕ್ತಿ ಅಗಾಧ. ಅವರಲ್ಲಿ ಮೂಡುವ ವಿಚಾರಗಳು, ಅವರು ಕೇಳುವ ಪ್ರಶ್ನೆಗಳು, ಅವರ ಕುತೂಹಲ ಎಲ್ಲವೂ ಅವರಲ್ಲಿ ತಿಳುವು ಮೊಳೆತು ಬೆಳೆಯುವ ಲಕ್ಷಣಗಳೇ ಅಲ್ಲವೇ?

ಹಾಗೆ ಅರಿಯಲು ಮೊದಲಾದ ಮನಸ್ಸು ಬುದ್ಧಿಗಳು ಕಾಲಾನುಕ್ರಮದಲ್ಲಿ ಏನೇನನ್ನೋ ತುಂಬಿಕೊಳ್ಳುತ್ತದೆ. ತುಂಬಿ ತುಂಬಿ ತುಂಬಿಹೋಗಿ ನವೀನ ವಿಚಾರಗಳಿಗೆ ಸ್ಥಳವೇ ಇಲ್ಲದಂತಾಗುತ್ತದೆ. ಕಸವನ್ನು ಹೊರಹಾಕುವುದು ಹೇಗೆಂದು ಅರಿಯಲಾಗದೆ ಪರಿತಪಿಸುತ್ತವೆ. ನಮ್ಮ ಮನಸ್ಸು, ಬುದ್ಧಿಗಳಲ್ಲಿ ತುಂಬಿರುವ ಕಸದ ಸಂದಣಿಯ ನಡುವೆ ಹೊಸತನ್ನು ಸೇರಿಸುವುದಕ್ಕೆ ಶತ ಪ್ರಯತ್ನ ಮಾಡುತ್ತೇವೆ. ಹಾಗಾಗಿ ಹೊಸತನ್ನು ಕಲಿಯುವುದು ಒಂದು ಪ್ರಾಯ ಸಂದಮೇಲೆ ಕಷ್ಟ

ಅದಕ್ಕಾಗಿಯೇ 'ಮಕ್ಕಳಿಗೆ ತಂದೆ ಬಾಲ್ಯದೊಳಕ್ಕರ ವಿದ್ಯೆಗಳನರಿಪದಿರ್ದೊಡೆ ಕೊಂದಂ, ಲಕ್ಕ ಧನಮಿರಲು ಕೆಡುಗುಂ ಚಿಕ್ಕಂದಿನ ವಿದ್ಯೆ ಪೊರಗು ಚೂಡಾರತ್ನ' ಎಂಬ ಚಿಕ್ಕಂದಿನಲ್ಲಿ ಮಕ್ಕಳ ಕಲಿಕೆ ಏನಿರಬೇಕು ಮತ್ತು ಹೇಗಿರಬೇಕು ಎಂದು ಹೇಳುವ ಈ ಹಿತೋಕ್ತಿಯನ್ನು ಎಲ್ಲ ತಂದೆ ತಾಯಿಯರೂ ಭದ್ರವಾಗಿ ಗಂಟುಹಾಕಿಕೊಳ್ಳಬೇಕು. 'ಬೆಳೆಯುವ ಸಿರಿ ಮೊಳಕೆಯಲ್ಲಿ' ಎಂಬ ಕನ್ನಡ ನಾಣ್ಣುಡಿಯಂತೆ ಮಕ್ಕಳಿಗೆ ಮೊಳಕೆಯಲ್ಲೇ ಸರಿಯಾದದ್ದನ್ನು ಮನಸ್ಸು, ಬುದ್ಧಿಗಳಲ್ಲಿ ತುಂಬಿದರೆ, ಕಸಕ್ಕೆಡೆಯಿಲ್ಲದಂತಾಗುತ್ತದೆ. ಇದೇ ತಂದೆ ತಾಯಿಗಳ ಮೂಲ ಮತ್ತು ಆದ್ಯ ಕರ್ತವ್ಯ.

**ಮುಕ್ತಕ - 420**

**ಮಕ್ಕಳ ಭವಿಷ್ಯಕ್ಕೆ ಕಕ್ಕುಲತೆಗೊಳಬೇಡ ।**
**ಪಕ್ಕಾಗುವುದು ಭಾಗ್ಯವೆಂತೆಂತೊ ಜಗದಿ ॥**
**ದಕ್ಕಿತೇಂ ಕುರುಪಾಂಡುತನಯರ್ಗೆ ರಾಜ್ಯಸುಖ ।**
**ದಿಕ್ಕವರಿಗವರೆ - ಮಂಕುತಿಮ್ಮ ॥**

ಭಾಗ್ಯವೆಂತೆಂತೊ=ಭಾಗ್ಯವು+ಎಂತೆಂತೋ, ಕುರುಪಾಂಡುತನಯರ್ಗೆ=ಕುರು+ಪಾಂಡು+ತನಯರ್ಗೆ,
ದಿಕ್ಕವರಿಗವರೆ=ದಿಕ್ಕು+ಅವರಿಗೆ+ಅವರೆ,
ಕಕ್ಕುಲತೆ=ಅತಿ ಅಕ್ಕರೆ, ಪಕ್ಕಾಗುವುದು=ಮಾಗುವುದು.

ಕೌರವರಿಗೂ ಪಾಂಡವರಿಗೂ ರಾಜ್ಯಸುಖ ಸಿಗಲೇ ಇಲ್ಲ. ಅವರವರು ಪಡೆದುಕೊಂಡು ಬಂದ ಭಾಗ್ಯ ಅವರವರಿಗೆ ಜಗತ್ತಿನಲ್ಲಿ ಖಂಡಿತ ಸಿಗುತ್ತದೆ. ಹಾಗಾಗಿ, ಮಕ್ಕಳ ಭವಿಷ್ಯವ ಕುರಿತು ಅತಿಯಾದ ಅಕ್ಕರೆ, ಅಪೇಕ್ಷೆಪಡಬೇಡ. ಅವರವರ ದಿಕ್ಕು ಅವರವರಿಗೆ ಇರುತ್ತದೆ ಎಂದು ಮಕ್ಕಳ ಭವಿಷ್ಯದ ಬಗ್ಗೆ ಅತಿಯಾಗಿ ಚಿಂತಿಸುವ ಮಕ್ಕಳ ತಂದೆ ತಾಯಂದಿರಿಗೆ ಒಂದು ಸ್ಪಷ್ಟ ಸೂಚನೆಯನ್ನು ನೀಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ತಾಯಿ ತಂದೆಯರು ತಮ್ಮ ಮಕ್ಕಳ ಭವಿಷ್ಯದ ಬಗ್ಗೆ ಯೋಚನೆ ಮತ್ತು ಆಲೋಚನೆ ಮಾಡುವುದು ಸಹಜ. ಆದರೆ ಬಹಳಷ್ಟು ಉದಾಹರಣೆಗಳಲ್ಲಿ ಬಯಸಿದ್ದು ಆಗದೆ ಬೇರೇನೋ ಆಗುತ್ತದೆ. ಆದರೆ ಸಾಮಾನ್ಯವಾಗಿ ತಮ್ಮ ಮಕ್ಕಳ ಭವಿಷ್ಯದ ಬಗ್ಗೆ ತಾಯಿ ತಂದೆಯರು ಸ್ವಲ್ಪ ಅಧಿಕವಾಗೇ ಚಿಂತೆ ಅಥವಾ ಯೋಚನೆ ಮಾಡುತ್ತಾರೆ. ಅದು ಪ್ರೀತಿಯಿಂದ ಆಗಬಹುದು ಅಥವಾ ಕಕ್ಕುಲತೆಯಿಂದ ಆಗಬಹುದು. ಅಂತಹ ಅಂಧ ಕಕ್ಕುಲತೆಯನ್ನೇ ಅಲ್ಲವೇ ಕುರುಡ ದೃತರಾಷ್ಟ್ರ ಕೂಡ ತೋರಿದ್ದು, ಅವನಂತೆಯೇ ಇವರುಗಳೂ ಸಹ ನಿರಾಸೆ ಹೊಂದುವುದರಲ್ಲಿ ಸಂದೇಹವೇ ಇಲ್ಲ

ಅಂತಹ ಕುರುಡು ಪ್ರೀತಿಯ ತಂದೆ ತಾಯಿಯರು ಹೇರಳವಾಗಿ ಸಿಗುತ್ತಾರೆ. ಗಣಿತವೇ ಬಾರದವನನ್ನು ಇಂಜಿನಿಯರ್ ಮಾಡಿಸಲೇಬೇಕು ಎಂದು ಹಠ ಹಿಡಿದರೆ ಇಬ್ಬರಿಗೂ ಒತ್ತಡ ಮಾತ್ರ ಜಾಸ್ತಿ, ಫಲ ಶೂನ್ಯ. ಮಹಾಭಾರತದಲ್ಲಿ ಹಠದಿಂದ ನಡೆದುಕೊಂಡ ಕೌರವರಿಗೆ ರಾಜ್ಯವೂ ಸಿಗಲಿಲ್ಲ ಸುಖವೂ ಇರಲಿಲ್ಲ. ರಾಜ್ಯ ದಕ್ಕಿಸಿಕೊಂಡ ಪಾಂಡವರೂ ಸಹ ಸುಖವಾಗಿರಲಿಲ್ಲ.

ನಾವೇನೇ ಆಸೆ ಪಟ್ಟರೂ ಪಡದೆ ಇದ್ದರೂ ನಡುವುದೆಲ್ಲ ನಡೆದೇ ನಡೆಯುತ್ತದೆ. ಯಾವುದನ್ನೂ ತಡೆಯುವುದಕ್ಕಾಗುವುದಿಲ್ಲ. ಹಾಗಂದು ತೀರ ತಟಸ್ಥರಾಗಿಬಿಟ್ಟರೆ, ಜೀವನದಲ್ಲಿ ಸ್ವಾರಸ್ಯವಿರುವುದಿಲ್ಲ. ಹಾಗಾಗಿ ಮಕ್ಕಳ ಇಚ್ಛೆ, ಅಭಿರುಚಿ ಮತ್ತು ಅವರ ಕ್ಷಮತೆಗಳನ್ನು ಸರಿಯಾಗಿ ಗುರುತಿಸಿ ಅವರ ಯೋಗ್ಯತೆಗಳನ್ನು ಪರೀಕ್ಷಿಸಿ ಅವರ

ಪುರೋಗಮನಕ್ಕೆ ಒತ್ತಾಸೆ ನೀಡಿ ಮತ್ತು ದೈವ ಬಲದಿಂದ ಅವರು ಆ ದಿಕ್ಕಿನಲ್ಲೇ ಅಭಿವೃದ್ಧಿ ಹೊಂದಿದರೆ ತೃಪ್ತಿಯಾಗುತ್ತದೆ.

ಅವರವರ ಅಭಿರುಚಿ ಮತ್ತು ಕ್ಷಮತೆಗನುಸಾರವಾಗಿ ಸರಿಯಾದ ಮಾರ್ಗದಲ್ಲಿ ಮಕ್ಕಳನ್ನು ಕೊಂಡುಹೋಗುವ ಶುದ್ಧ ಪ್ರಯತ್ನ ನಮ್ಮದಾಗಬೇಕು. ಅಷ್ಟು ಮಾಡಿದರೆ ಅವರವರು ಪಡೆದು ಬಂದ ಭಾಗ್ಯಕ್ಕನುಸಾರವಾಗಿ ಅವರು ರೂಪುಗೊಳ್ಳುತ್ತಾರೆ. ಅತೀ ಕಕ್ಕುಲತೆ, ಅತೀ ಪ್ರೀತಿ ಮತ್ತು ಅತೀ ಅಪೇಕ್ಷೆಗಳು ನಮ್ಮನ್ನು ನಿರಾಸೆ ಮತ್ತು ದುಃಖಕ್ಕೆ ತಳ್ಳುತ್ತದೆ.





**ಮುಕ್ತಕ-421**

**ತನುಭವವ್ಯಾಮೋಹ ಮುಸುಕಿತು ವ್ಯಾಸನಂ।**
**ಜನಿಪುದದು ಪ್ರಕೃತಿತಂತ್ರದ ಹೃದಯತಳದೊಳ್॥**
**ಕ್ಷಣಮಾತ್ರಮಾನುಮದು ಕಣ್ಣೀರ ಬರಿಸುವುದು।**
**ಗಣಿಸಬೇಡದನು ನೀಂ - ಮಂಕುತಿಮ್ಮ॥**

ಜನಿಪುದದು=ಜನಿಪುದು+ಅದು, ಕ್ಷಣಮಾತ್ರಮಾನುಮದು=ಕ್ಷಣ+ಮಾತ್ರಂ+ಆನುಂ+ಅದು,

ಗಣಿಸಬೇಡದನು=ಗಣಿಸಬೇಡ+ಅದನು.

ಗಣಿಸಬೇಡ=ಲೆಕ್ಕಿಸಬೇಡ.

ಮಹಾನ್ ಜ್ಞಾನಿ ವ್ಯಾಸನನ್ನೂ ಪುತ್ರ ವ್ಯಾಮೋಹ ಬಿಡಲಿಲ್ಲ. ಈ ವ್ಯಾಮೋಹ ಎನ್ನುವುದು ಪ್ರಕೃತಿಯಿಂದ ಸಹಜವಾಗಿ ಹೃದಯಾಂತರಾಳಕ್ಕೆ ಬಂದು, ಎಂತಹ ಗಟ್ಟಿ ಮನುಷ್ಯನಿಗೂ, ಆ ಕ್ಷಣಕ್ಕೆ ಕಣ್ಣೀರು ತರಿಸುತ್ತದೆ. ಅದನ್ನು ಲೆಕ್ಕಕ್ಕೆ ತೆಗೆದುಕೊಳ್ಳಬೇಡ ಎಂದು ಒಂದು ಉಪದೇಶವನ್ನು ಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ನಮಗೆ ತಾತ್ಕಾಲಿಕವಾಗಿ ಸಂಬಂಧಪಡುವ ವಸ್ತು ವಿಷಯ ಮತ್ತು ವ್ಯಕ್ತಿಗಳೊಂದಿಗೆ ನಮಗೆ ವ್ಯಾಮೋಹವಿರುತ್ತದೆ. ಇನ್ನು ನಮ್ಮ ದೇಹದ ರಕ್ತ ಮಾಂಸಗಳನ್ನು ಹಂಚಿಕೊಂಡು ಹುಟ್ಟಿದ ಮಕ್ಕಳಲ್ಲಿ ನಮಗೆ ವ್ಯಾಮೋಹ ಇರುವುದು ತೀರ ಸಹಜ. ಅದರಲ್ಲಿ ತಪ್ಪು ಸರಿಗಳ ವಿಶ್ಲೇಷಣೆ ಸಲ್ಲ.

ವ್ಯಾಸಮುನಿಯ ಮಗ ಶುಕಮುನಿ ಗರ್ಭದಲ್ಲೇ ಬ್ರಹ್ಮಜ್ಞಾನಿಯಾಗಿದ್ದನಂತೆ. ಅವನು ಉಪನಯನವಾಗುವ ಮುನ್ನವೇ ಮನೆಯನ್ನು ತೊರೆದು ಹೊರಟನಂತೆ. ಆಗ ವ್ಯಾಸನು ಪುತ್ರ ವ್ಯಾಮೋಹದಿಂದ ಗೋಳಾಡುತ್ತಾ ಕಾಡು ಮೇಡುಗಳಲ್ಲಿ ಅಲೆಯುತ್ತಿದ್ದಾಗ ಆ ಕಾಡು ಮೇಡುಗಳು 'ಶುಕ ಬ್ರಹ್ಮಜ್ಞ' ಎಂದು ಪ್ರತಿಧ್ವನಿಸಿದಾಗ, ಸಮಾಧಾನಗೊಂಡನಂತೆ. ಅಂತಹ ಮಹಾನುಭಾವನಿಗೇ ಅಂತಹ ವ್ಯಾಮೋಹವುಂಟಾದಾಗ, ನಮ್ಮಂತಹ ಹುಲುಮಾನವರ ಗತಿಯೇನು?

ಈ ವ್ಯಾಮೋಹ ಬಹಳ ಸಹಜ ಮತ್ತು ಅದೇ ನಮ್ಮ ಮಕ್ಕಳನ್ನು ಆಸೆ ಮತ್ತು ಆಸ್ಥೆಯಿಂದ ತಿದ್ದಿ ರೂಪಿಸಲು ಸಹಾಯವಾಗುತ್ತದೆ. ಅದು ಅಷ್ಟೇ ಆದರೆ ಸಾಧು. ಹಾಗಾಗದೆ ದೃತರಾಷ್ಟ್ರನಂತೆ ಕುರುಡು ವ್ಯಾಮೋಹ ನಮ್ಮದಾದರೆ ಮಕ್ಕಳು ತಪ್ಪುದಾರಿ ಹಿಡಿಯುವ ಸಾಧ್ಯತೆಗಳೇ ಹೆಚ್ಚು. ಬಹಳಷ್ಟು ತಂದೆ ತಾಯಿಗಳು ಈ ವ್ಯಾಮೋಹದಿಂದ ಮಕ್ಕಳು ಮಾಡುವ ತಪ್ಪುಗಳನ್ನು ಮುಚ್ಚಿಕೊಂಡು, ಸಮರ್ಥಿಸಿಕೊಂಡು ತಮ್ಮ ಮಕ್ಕಳಿಗೆ ಒಳಿತನ್ನು ಮಾಡುತ್ತಿದ್ದೇವೆ ಎಂದು ತಿಳಿದುಕೊಳ್ಳುತ್ತಾರೆ. ಅದೇ ಆ ಮಕ್ಕಳ ಪತನಕ್ಕೆ ದಾರಿಯಾಗುತ್ತದೆ. ತಪ್ಪು ಮಾಡಿದ ಮಕ್ಕಳಿಗೆ ದಂಡನೆಯಿಲ್ಲದಿದ್ದರೆ ಅವರನ್ನು ಕೂಪಕ್ಕೆ ತಳ್ಳಿದಂತೆಯೇ ಆಗುತ್ತದೆ.

ಮಕ್ಕಳಿಗೆ ಪ್ರೋತ್ಸಾಹ ನೀಡಲು ಮತ್ತು ಅವರನ್ನು ಸತ್ಪ್ರಜೆಗಳನ್ನಾಗಿಸಲು ಮಾತ್ರ ವ್ಯಾಮೋಹ ಇರಬೇಕು ಮತ್ತು ಅಲ್ಲಿಗೇ ನಿಲ್ಲಬೇಕು. ಹಾಗಿಲ್ಲದಿದ್ದರೆ ವ್ಯಾಮೋಹದ ಸುಳಿಯಲ್ಲಿ ಗೋಳಾಟವೇ ನಮಗೆ ಕಟ್ಟಿಟ್ಟ ಬುತ್ತಿ.

**ಮುಕ್ತಕ-422** **ಅನುರಾಗದುಃಖಂಗಳಮ್ಮೊಮ್ಮೆ ಬಿರುಬಿಸಿ ।**
**ಮನದಿ ತೆರೆಗಳ ಕುಲುಕಿ ಕಡೆಯುವುದುಮೊಳಿತು ॥**
**ಘನ ವರ್ಷ ಬಿರುಗಾಳಿ ಬಡಿಯಲಿರುಳೊಳ್ ನೆಲನ ।**
**ದಿನದ ಸೊಗಸಿಮ್ಮಡಿಯೊ - ಮಂಕುತಿಮ್ಮ ॥**

ಅನುರಾಗದುಃಖಂಗಳೆಮ್ಮೊಮ್ಮೆ=ಅನುರಾಗ+ದುಃಖಂಗಳು+ಒಮ್ಮೊಮ್ಮೆ,
ಕಡೆಯುವುದುಮೊಳಿತು=ಕಡೆಯುವುದುಂ+ಒಳಿತು, ಬಡಿಯಲಿರುಳೊಳ್=ಬಡಿಯಲು+ಇರುಳೊಳ್,
ಸೊಗಸಿಮ್ಮಡಿಯೊ=ಸೊಗಸು+ಇಮ್ಮಡಿಯೊ.
ಬಿರುಬೀಸಿ=ಬಿರುಗಾಳಿಯಂತೆ ಬೀಸಿ, ತೆರೆಗಳ=ಅಲೆಗಳ, ಕುಲುಕಿ=ಕದಡಿ, ಇರುಳೊಳ್=ರಾತ್ರಿಯಲಿ,
ನೆಲನ=ನೆಲವನ್ನು ಇಮ್ಮಡಿ=ಎರಡು ಪಟ್ಟು,

ರಾತ್ರಿಯಲ್ಲಾ ಘನವಾದ ಮಳೆ ಸುರಿದು ಮುಂಜಾನೆ ಮಳೆ ನಿಂತ ನಂತರದ ಬೆಳಗು ಎಷ್ಟು ಆಹ್ಲಾದಕರವಾಗಿರುವ ರೀತಿ, ಮನಸ್ಸಿನಲ್ಲಿ ಅಡಗಿ ಕುಳಿತ ಅನುರಾಗ, ಪ್ರೀತಿ, ಕೋಪ, ದುಗುಡ, ದುಃಖಗಳಂತಹ ಭಾವಗಳು ಹೃದಯದಲ್ಲೇ ಮಂಥನವಾಗಿ ಒಮ್ಮೊಮ್ಮೆ ಹೊಮ್ಮಿ ಹೊರ ಬಂದರೆ ಒಳ್ಳೆಯದು. ಏಕೆಂದರೆ ಅದು ಹೊರಬಂದ ನಂತರ ಮನಸ್ಸು ನಿರಾಳವಾಗುತ್ತದೆ ಎನ್ನುವ ಅರ್ಥವನ್ನು ಈ ಮುಕ್ತಕದಲ್ಲಿ ನಮಗೆ ಕೊಟ್ಟಿದ್ದಾರೆ ಮಾನ್ಯ ಗುಂಡಪ್ಪನವರು.

ನಮ್ಮ ಜೀವನದಲ್ಲಿ ನಡೆಯುವ ಘಟನೆಗಳಿಂದ ನಮಗಾಗುವ ಅನುಭವಗಳು, ಹತ್ತು ಹಲವಾರು ಭಾವಗಳನ್ನು ನಮ್ಮ ಮನಸ್ಸಿನಲ್ಲಿ ಉಂಟಾಗಿಸುತ್ತದೆ. ಅವುಗಳು ನಮ್ಮ ನೆನಪಿನಲ್ಲಿ ಉಳಿಯುತ್ತದೆ. ಅದರ ಕುಲುಕಾಟ ಅಥವಾ ಕಡೆತ ಅಧಿಕವಾದಾಗ, ಯಾವುದಾದರೂ ಒಂದು ಸಂದರ್ಭದಲ್ಲಿ ಅದು ಹೊರಬಂದು ಮನಸ್ಸು ನಿರಾಳವಾದರೆ ಮನಸ್ಸಿನ ಆರೋಗ್ಯಕ್ಕೆ ಒಳ್ಳೆಯದು.

ಹಾಗಾಗದೆ ಅವುಗಳನ್ನೆಲ್ಲ ಹೊರಗೆಡುಹದೆ ಹಾಗೇ ಹೃದಯದಲ್ಲಿ ಇಟ್ಟುಕೊಂಡು ಒಳಗೊಳಗೇ ಕುದಿಯಲು ಬಿಟ್ಟರೆ ಅದು ವಿಷವಾಗಿ ಪರಿವರ್ತಿತಗೊಂಡು, ಹೃದಯಾಘಾತವೋ, ಹೃದಯ ಸ್ತಂಭನವೋ ಆಗುವ ಸಾಧ್ಯತೆಗಳು ಹೆಚ್ಚು. ಹಾಗೆಂದು ಯಾವ ಭಾವವನ್ನು ಯಾವಾಗ ಯಾವ ಪ್ರಮಾಣದಲ್ಲಿ ಹೊರಹಾಕಬೇಕು ಎನ್ನವುದೇ ಪ್ರಶ್ನೆ? ಅದಕ್ಕೆ ಉತ್ತರವನ್ನು ನಮ್ಮ ಮನಸ್ಸುಗಳಲ್ಲೇ ಕಂಡುಕೊಳ್ಳಬೇಕು!!!





ಆದರೆ ಭಾವ ತೀವ್ರತೆ ನಮ್ಮ ಹೃದಯದಲ್ಲಿ ಉಂಟಾಗದೆ ಇದ್ದರೆ ಅಥವಾ ಉಂಟಾದ ಭಾವೋದ್ವೇಗವನ್ನು ನಮ್ಮ ಒಳಗೇ ಕರಗಿಸಿಕೊಳ್ಳುವ ಕಲೆಯನ್ನು ನಾವು ಬೆಳೆಸಿಕೊಂಡರೆ, ರೋಗವನ್ನು ತಂದುಕೊಂಡು ಅದಕ್ಕೆ ಮದ್ದು ಮಾಡುವ ಬದಲು ರೋಗವನ್ನು ತಂದುಕೊಳ್ಳದೆ ಅಥವಾ ಬಂದ ರೋಗವನ್ನು ಸ್ವಾಭಾವಿಕವಾಗಿ ಗುಣಪಡಿಸಿಕೊಳ್ಳುವ ಸಾಧನೆ ನಮ್ಮದಾಗುತ್ತದೆ.

**ಮುಕ್ತಕ-423** **ಭಾವರಾಗೋದ್ರೇಕ ತಾನೇ ತಪ್ಪೇನಲ್ಲ।**
**ಧೀವಿವೇಕದ ಸಮತೆಯದರಿನದಿರದಿರೆ ॥**

ಸ್ವಾವಿದ್ಯೆಯಾ ಮೋಹ ಮಮತೆಯದನಂಟದಿರೆ।

ಪಾವನವೊ ಹೃನ್ಮಥನ – ಮಂಕುತಿಮ್ಮ॥

ಭಾವರಾಗೋದ್ರೇಕ=ಭಾವ+ರಾಗ+ಉದ್ರೇಕ, ತಪ್ಪೇನಲ್ಲ ತಪ್ಪು+ಏನೂ+ಅಲ್ಲ,

ಸಮತೆಯದರಿನದಿರದಿರೆ=ಸಮತೆ+ಅದರಿನ್+ಅದಿರದೆ+ಇರೆ,

ಮಮತೆಯದನಂಟದಿರೆ=ಮಮತೆ+ಅದನ್+ಅಂಟದಿರೆ.

ಅದಿರದೆ=ವಿಚಲಿತವಾಗದೆ, ಸ್ವಾವಿದ್ಯೆಯಾ=ಜಗತ್ತಿನಜ್ಞಾನ, ಪಾವನವೊ=ಶುದ್ಧವೋ

ಹೃನ್ಮಥನ=ಹೃದಯದೊಳಗಿನ ಮಂಥನ.

ಭಾವುಕತೆ, ಕೋಪ, ಉದ್ರೇಕ ಮುಂತಾದ ಭಾವಗಳು ಇರಲಿ ತಪ್ಪೇನಿಲ್ಲ. ಆದರೆ ಆ ಭಾವ ಉತ್ಕಟತೆ ಬುದ್ಧಿಯ ಸಮತೋಲನವನ್ನು ವಿಚಲಿತಗೊಳಿಸಿ ಕದಡದೆ ಇದ್ದರೆ ಅಷ್ಟೇ, ಸಾಕು. ಮನಸ್ಸಿನಲ್ಲಿ ನಡೆಯುವ ಎಲ್ಲ ವ್ಯಾಪಾರವೂ ಸಹಜವಾಗಿ ಇರಲಿ ಆದರೆ ನಾವು ಈ ಜಗತ್ತಿನಲ್ಲಿ ಕಲಿತ ವಿದ್ಯೆ ಮತ್ತು ಅಂಟಿಸಿಕೊಂಡ ವ್ಯಾಮೋಹ ಮತ್ತು ಮಮಕಾರಗಳ ಮನೋವ್ಯಾಪಾರದ ಮೇಲೆ ತನ್ನ ಪ್ರಭಾವ ಬೀರದೆ ಇದ್ದರೆ ಮನಸ್ಸು ಬುದ್ಧಿಗಳು ಶುದ್ಧವಾಗಿರುತ್ತವೆ, ಎಂದು ಉಲ್ಲೇಖ ಮಾಡಿದ್ದಾರೆ ಈ ಮುಕ್ತಕದಲ್ಲಿ.

ಅತಿಯಾದ ಸಂತೋಷ, ಉದ್ವಿಗ್ನತೆ, ಕೋಪ ಮುಂತಾದ ಭಾವಗಳು ಸಹಜವಾಗೇ ನಮಗೆ ನಮ್ಮ ಪ್ರತಿನಿತ್ಯದ ಆಗುಹೋಗುಗಳಲ್ಲಿ ಬರುತ್ತವೆ. ಇದರಲ್ಲಿ ಅತಿಶಯವೇನಿಲ್ಲ. ಅವುಗಳು ನಮ್ಮ ಮನಸ್ಸು ಬುದ್ಧಿಗಳನ್ನು ವಿಚಲಿತಗೊಳಿಸಬಾರದು. ನಾವು ಜಗತ್ತಿನಲ್ಲಿ ಕಲಿತ ವಿದ್ಯೆಯ ಪ್ರಭಾವದಿಂದ ಅಥವಾ ನಾವು ಈ ಜಗತ್ತಿನಲ್ಲಿ ಬೆಳೆಸಿಕೊಂಡ ಮೋಹ, ಮಮತೆ ಮತ್ತು ವ್ಯಾಮೋಹಗಳು ನಮ್ಮ ಹೃದಯಕ್ಕೆ ಅಂಟಿಕೊಂಡು ಮನಸ್ಸನ್ನು ಉದ್ವಿಗ್ನಗೊಳಿಸದಿದ್ದರೆ, ನಮ್ಮ ಹೃದಯದ ಶುದ್ಧತೆಯನ್ನು ನಾವು ಕಾಪಾಡಿಕೊಳ್ಳಬಹುದು.

ಆದರೆ ಹಾಗೆ ವಿಚಲಿತಗೊಳ್ಳದ ಸ್ಥಿತಿಗೆ ತಲುಪುವುದು ಅಷ್ಟು ಸುಲಭವಲ್ಲ. ಸಾಮಾನ್ಯ ಮಾನವರಾದ ನಮಗೆ ಅಂತಹ ಸ್ಥಿತಿಗೆ ತಲುಪಬೇಕಾದರೆ ಜೀವನದಲ್ಲಿ ಬಹಳ ಅನುಭವವಾಗಬೇಕು, ಪೆಟ್ಟು ಬೀಳಬೇಕು, ನೋವುಣ್ಣಬೇಕು, ನಿರ್ಲಿಪ್ತತೆ ಬೆಳೆಸಿಕೊಳ್ಳಬೇಕು. ಹಾಗಾದಾಗ ಮಾತ್ರ ಗುಂಡಪ್ಪನವರು ಹೇಳುವಂತೆ ಹೃದಯದಲ್ಲಿ ನಡೆಯುವ ಮಂಥನವು ಪಾವನವಾಗಬಹುದು.

# ಮಾನುಷ ಪ್ರೀತಿ 424-429

**ಮುಕ್ತಕ - 424**

**ಕಾರಿರುಳೊಳಾಗಸದಿ ತಾರೆ ನೂರಿದ್ದೇನು? |**
**ದಾರಿಗನ ಕಣ್ಗೆ ಬೇಕೊಂದು ಮನೆಬೆಳಕು ||**
**ದೂರದಾ ದೈವವಂತಿರಲಿ, ಮಾನುಷಸಖನ |**
**ಕೋರುವುದು ಬಡಜೀವ - ಮಂಕುತಿಮ್ಮ ||**

ಕಾರಿರುಳೊಳಾಗಸದಿ=ಕಾರ್+ಇರುಳೊಳು+ಆಗಸದಿ, ನೂರಿದ್ದೇನು=ನೂರು+ಇದ್ದು+ಏನು,
ದೈವವಂತಿರಲಿ=ದೈವವು+ಅಂತೆ+ಇರಲಿ,
ಕಾರಿರುಳು+ಮುಕ್ತಕತ್ತಲೆಯ ರಾತ್ರಿ, ದಾರಿಗನ=ಪಥಿಕನ, ಮಾನುಷಸಖನ=ಮಾನವ ಮಾತ್ರನಾದ ಮಿತ್ರ

ಕತ್ತಲ ರಾತ್ರಿಯಲ್ಲಿ ದಾರಿಗನಿಗೆ ದಾರಿತೋರಲು, ಆಕಾಶದಲ್ಲಿ ನೂರಾರು ನಕ್ಷತ್ರಗಳಿದ್ದರೇನು? ಅವು ಅವನಿಗೆ ದಾರಿಯನ್ನು ತೋರಲು ಸಾಧ್ಯವೇ? ಆದರೆ ದಾರಿಯಲ್ಲಿರುವ ಯಾವುದೋ ಮನೆಯ ಬೆಳಕು ಅವನಿಗೆ ದಾರಿ ತೋರುತ್ತದೆ. ಹಾಗೆಯೇ ನಾವು ಕಾಣದ, ನಮ್ಮಿಂದ ಬಹಳ ದೂರದಲ್ಲಿರುವ ಮತ್ತು ಕಷ್ಟಸಾಧ್ಯನಾದ ಆ ದೈವಕ್ಕಿಂತ, ನಮ್ಮ ಪಕ್ಕದಲ್ಲಿ ನಿಂತು, ನಿನಗೆ ನಾನಿದ್ದೇನೆ ಎನ್ನುವಂತಹ ಒಬ್ಬ ಮಾನವನ ಸ್ನೇಹವನ್ನು ಕೋರುತ್ತದೆ ಮಾನವ ಜೀವ ಎಂದು ಮನುಷ್ಯನ ಆಕಾಂಕ್ಷೆಗಳ ಬಗ್ಗೆ ಬರೆಯುತ್ತಾರೆ ಮಾನ್ಯ ಗುಂಡಪ್ಪನವರು.

ಆಕಾಶದಲ್ಲಿ ಎಷ್ಟು ನಕ್ಷತ್ರಗಳಿದ್ದರೇನು, ಅವು ನಮಗೆ ಬೆಳಕನ್ನು ತೋರುವುದೇ? ಸಾಧ್ಯವೇ ಇಲ್ಲ. ಮುಕ್ತಕತ್ತಲೆಯ ರಾತ್ರಿಯಲ್ಲಿ ನಾವು ದಾರಿ ಸವೆಸುವಾಗ, ದೂರದಲ್ಲಿರುವ ಯಾವುದೋ ಮನೆಯ ಬೆಳಕು ನಮಗೆ ದಿಕ್ಕನ್ನು ಮತ್ತು ದಾರಿಯನ್ನೂ ತೋರುತ್ತದೆ. ಹಾಗೆಯೇ ಗಗನದಲ್ಲಿರುವ ನೂರಾರು ನಕ್ಷತ್ರಗಳು ಸ್ವತಃ ಎಷ್ಟೇ

ಪ್ರಖರವಾಗಿದ್ದರೂ, ಅವು ಬೀರುವ ಬೆಳಕು ಭೂಮಿಯನ್ನು ತಲುಪಿ ನಮಗೆ ದಾರಿತೋರಲು ಸಾಧ್ಯವೇ ಇಲ್ಲ. ಹಾಗಾಗಿ ಬೆಳಕಿನ ಪ್ರಖರತೆ ಕಡಿಮೆಯಾದರೂ, ಹತ್ತಿರದಲ್ಲಿರುವ ಬೆಳಕು ನಮಗೆ ನೋಡಲು ಅನುವುಮಾಡಿಕೊಡುತ್ತದೆ ಅಲ್ಲವೇ?

ಹಾಗೆಯೇ, ಆ ದೈವದ ಶಕ್ತಿ ಅಪಾರವೇ ಆಗಿದ್ದರೂ ನಮಗೆ ನಮ್ಮ ಪ್ರತಿ ದಿನದ ಚಟುವಟಿಕೆಗಳಲ್ಲಿ ಸಹಾಯ ಮಾಡುವುದು ನಮ್ಮ ಪಕ್ಕದ ಮನುಷ್ಯನಲ್ಲವೇ? ನಮ್ಮ ಕಷ್ಟ ಸಮಯದಲ್ಲಿ ಅಥವಾ ಅವಶ್ಯಕತೆ ಇದ್ದಾಗ, ' ನಿನ್ನೊಡನೆ ನಾನಿದ್ದೇನೆ' ಎಂದು ಹೇಳುವ ಒಬ್ಬ ಮಿತ್ರನಿದ್ದರೆ, ಅವನು ಆ ದೂರದ ದೈವಕ್ಕಿಂತ ಮಿಗಿಲಲ್ಲವೇ?

ಎಷ್ಟೋ ಬಾರಿ ನಮಗೆ ಯಾರಾದರೂ ಸಮಯಕ್ಕೆ ಸರಿಯಾಗಿ ಸಹಾಯವನ್ನೋ, ಸಹಾನುಭೂತಿಯನ್ನೋ ಅಥವಾ ಸಾಂತ್ವನವನ್ನೋ ತೋರಿದರೆ, ಸಧ್ಯ ದೇವರು ಬಂದ ಹಾಗೆ ಬಂದೆಯಪ್ಪ ಎನ್ನುವುದನ್ನು ನಾವು ನೋಡಿದ್ದೆವಲ್ಲ. ಆ ದೂರದ ದೈವವನ್ನು ಒಲಿಸಿಕೊಂಡು ಅದರ ಸಹಾಯ ಪಡೆಯುವುದಕ್ಕಿಂತ ಹತ್ತಿರದ 'ಮಾನುಷಸಖನ' ಸ್ನೇಹವೇ ದೈವ ಸಹಾಯದಂತೆ ತೋರುವುದು ಸಹಜ.





ಹಾಗಾಗಿ ನಮ್ಮ ಒಡನಾಟದ ಮಾನವರ ಹೃದಯಗಳಲ್ಲಿ ಆ ದೂರದ ದೈವವನ್ನು ಕಾಣುವುದು ಧರ್ಮ. ಏಕೆಂದರೆ ಅದು ಹೆಚ್ಚು ಆಪ್ಯಾಯಮಾನವಾಗಿರುತ್ತದೆ ಮತ್ತು ಮನಸ್ಸಿಗೆ ಹಿತವಾಗಿರುತ್ತದೆ.

**ಮುಕ್ತಕ-425**

**ಹರಿಗೆ ನಿನ್ನನುರಾಗವೆಲ್ಲವನು ಸಲ್ಲಿಸೆನೆ।**
**ಮರುನುಡಿಯ ನುಡಿವನೇನ್ ಒಡಲ ತೋರದನು॥**
**ಪರಿತಪಿಸುವುದು ಜೀವ ಜೀವಸರಸವನೆಳಸಿ।**
**ನರಧರ್ಮಸೂಕ್ಷ್ಮವಿದು - ಮಂಕುತಿಮ್ಮ॥**

ನಿನ್ನನುರಾಗವೆಲ್ಲವನು=ನಿನ್ನ+ಅನುರಾಗವನು+ಎಲ್ಲವನು, ಸಲ್ಲಿಸೆನೆ=ಸಲ್ಲಿಸು+ಎನೆ,
ನುಡಿವನೇನ್=ನುಡಿವನು+ಏನ್, ಜೀವಸರಸವನೆಳಸಿ=ಜೀವ+ಸರಸವನು+ಎಳಸಿ.
ಸಲ್ಲಿಸೆನೆ=ಸಲ್ಲಿಸು ಎಂದರೆ, ಎಳಸಿ,=ಅರಸಿ, ನರಧರ್ಮ=ಮನುಷ್ಯ ಸ್ವಭಾವ.

ಆ ಹರಿ ಗೆ ನಿನ್ನ ಪ್ರೀತಿ ಪೂರ್ವಕವಾದ ಭಕ್ತಿಯನ್ನು ಸಲ್ಲಿಸು! ಎಂದರೆ, ತನ್ನ ರೂಪವನ್ನೇ ತೋರದ ಅವನು ಪ್ರತ್ಯುತ್ತರ ನೀಡುವನೇನು? ಈ ಜಗತ್ತಿನಲ್ಲಿ ಜನಿಸಿದ ಜೀವ ಪ್ರತಿಸ್ಪಂದಿಸುವ ಮತ್ತೊಂದು ಜೀವವನ್ನು ಸೇರಲು, ಪ್ರೀತಿ ತೋರಲು, ಸರಸವಾಡಲು, ಹಾತೊರೆಯುವುದು. ಇದು ನರರ ಸ್ವಭಾವದ ಸೂಕ್ಷ್ಮವು, ಎಂದು ಮನುಷ್ಯನ ಪರಸ್ಪರ ಆಕರ್ಷಣೆಯ ವಿಚಾರವನ್ನು ಪ್ರಸ್ತಾಪಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಆ ದೇವರಲ್ಲಿ ನಮಗೆ ಅನನ್ಯವಾದ ಭಕ್ತಿಯುಂಟು. ಆದರೆ ನಮ್ಮ ಪ್ರಾರ್ಥನೆ ಮೊರೆಗಳಿಗೆ ಉತ್ತರ ಬರುವುದಿಲ್ಲ. ಬಂದರೂ ನಮಗೆ ಅರ್ಥವಾಗುವುದಿಲ್ಲ. ನಾವು ಅವನನ್ನು ಕಂಡೂ ಇಲ್ಲ. ಏಕೆಂದರೆ ಅವನು ನಮ್ಮ ಮುಂದೆ ಎಂದಿಗೂ ಮೂರ್ತರೂಪದಲ್ಲಿ ಬಂದು ನಿಂತಿಲ್ಲ. ಹಾಗೆ ತನ್ನ ರೂಪವನ್ನೇ ತೋರದವನು, ಇನ್ನು ಮೊರೆಗೆ ಉತ್ತರಿಸಿಯಾನೆ? ಎನ್ನವುದು ಪ್ರಶ್ನೆ, ಉತ್ತರ ಗೊತ್ತಿಲ್ಲ.

ನಾವು ಹುಲುಮಾನವರು. ಇಂದ್ರಿಯವಶರಾದ ಮಾನವರು. ಈ ಜಗತ್ತಿನಲ್ಲಿ ನಮ್ಮಂತೆ ದೇಹಧಾರಣೆ ಮಾಡಿರುವ ಅನ್ಯ ಜೀವಗಳಲ್ಲಿ ನಮಗೆ ಆಕರ್ಷಣೆ. ಏಕೆಂದರೆ ಅವರಿಂದ ಉತ್ತರವನ್ನು ಪಡೆಯಬಹುದು ಸಂಬಂಧ ಬೆಳೆಸಬಹುದು, ಪ್ರತಿಕ್ರಿಯೆ ನೀಡಬಹುದು. ಹೀಗೆ ಒಬ್ಬರಿಂದ ಮತ್ತೊಬ್ಬರು ಸೆಳೆತಕ್ಕೆ ಒಳಗಾಗುವುದು, ಪ್ರೀತಿ ಪ್ರೇಮಗಳಂತಹ ಭಾವಗಳನ್ನು ಅಪೇಕ್ಷಿಸುವುದು, ಪಡೆದುಕೊಳ್ಳುವುದು, ನೀಡುವುದು ಎಲ್ಲವೂ ಮಾನವ ಸಹಜವಾದ ಪ್ರಕ್ರಿಯೆ ಮತ್ತು ಇದೂ ಸಹ ಮಾನವ ಧರ್ಮಗಳಲ್ಲಿ ಒಂದು.

ಆದರೆ ಯಾರು ಯಾರಿಂದ ಏತಕ್ಕಾಗಿ ಎಷ್ಟು ಸಮಯಕ್ಕೆ ಆಕರ್ಷಿತರಾಗುತ್ತಾರೆ, ಸೆಳೆತಕ್ಕೊಳಗಾಗುತ್ತಾರೆ ಎಂದು ಹೇಳಲಾಗುವುದಿಲ್ಲ. ಇದನ್ನೇ ಮಾನ್ಯ ಗುಂಡಪ್ಪನವರು "ನರಧರ್ಮಸೂಕ್ಷ್ಮವಿದು" ಎನ್ನುತ್ತಾ ಇದು

ಬಹಳ ಸೂಕ್ಷ್ಮ ವಿಚಾರ ಎನ್ನುತ್ತಾರೆ. ನಾವೆಲ್ಲಾ ಸದಾ ಅಂತಹ ಸೂಕ್ಷವಾದ ಸೆಳೆತದ ಸುಳಿಯಲ್ಲಿರುವವರು. ಇದು ಸೂಕ್ಷ್ಮವಾದರೂ ನಮಗೆ ಇದರ ಕಾರಣಗಳು ಅರ್ಥವಾಗದಿದ್ದರೂ ನಮಗುಂಟಾದ ಸೆಳೆತಗಳಿಂದ ನಾವು ಹಮ್ಮಿಕೊಳ್ಳುವ ಸಂಬಂಧಗಳ ಶುದ್ಧತೆಯನ್ನು ಕಾಪಾಡಿಕೊಳ್ಳಲಾದರೆ ಅದೇ ನಮ್ಮ ಸರ್ವೋಚ್ಚ ಸಾಧನೆಯಾಗುತ್ತದೆ.

**ಮುಕ್ತಕ - 426**

**ಮನುಜರೂಪದಿನಾದರವನು ಪಡೆಯದ ಹೃದಯ- |**
**ವನುರಾಗವನು ಬಿಡಾಲಕೋ ಶುಕಕೊ ಕಪಿಗೋ ||**
**ಶುನಕಕೋ ಸುರಿದದರ ಮಾರ್ದನಿಯನಾಲಿಪುದು |**
**ತಣಿವು ಜೀವಸ್ವರದೆ – ಮಂಕುತಿಮ್ಮ ||**

ಮನುಜರೂಪದಿನಾದರವನು=ಮನುಜರೂಪದಿನ್+ಆದರವನು,
ಹೃದಯವನುರಾಗವನು=ಹೃದಯವು+ಅನುರಾಗವನು.
ಸುರಿದದರ=ಸುರಿದರೆ ಅದರ, ಮಾರ್ದನಿಯನಾಲಿಪುದು=ಮಾರ್ದನಿಯನು+ಅಲಿಪುದು.
ಆದರವನು=ಸ್ನೇಹವನ್ನು ಅಥವಾ ಪ್ರೀತಿಯನು, ಬಿಡಾಲ=ಬೆಕ್ಕು, ಶುಕ=ಗಿಣಿ, ಕಪಿ=ಕೋತಿ,
ಶುನಕ=ನಾಯಿ, ತಣಿವು=ಸಾಂತ್ವನ ಅಥವಾ ತೃಪ್ತಿ.

ಹಾಗೆ ಮತ್ತೊಂದು ಜೀವಿಯಿಂದ ಮಾನುಷ ಪ್ರೀತಿಗೆ ಹಾತೊರೆಯುವವನಿಗೆ, ಅನ್ಯ ಮನುಷ್ಯರಿಂದ ಆದರ ಪ್ರೀತಿಗಳು ಲಭ್ಯವಾಗದಿದ್ದಲ್ಲಿ, ಆ ಪ್ರೀತಿಯನ್ನು ಅವನು ತಾನು ಸಾಕಿದ ಬೆಕ್ಕಿಗೋ, ಗಿಣಿಗೋ, ಕೋತಿಗೋ ಅಥವಾ ನಾಯಿಗೋ ತೋರಿದ್ದಲ್ಲಿ ಆ ಪ್ರಾಣಿಗಳು ಪ್ರೀತಿಯ ಪ್ರತಿಕ್ರಿಯೆ ನೀಡಿದಾಗ, ಮತ್ತೊಂದು ಜೀವ ಸ್ವರವನ್ನು ಆಲಿಸಿ ಈ ಜೀವವೂ ಸಾಂತ್ವನವನ್ನು ಪಡೆಯುತ್ತದೆ ಎಂದು ಜೀವ ಜೀವಕ್ಕಿರುವ ಪರಸ್ಪರ ಪ್ರೀತಿಯ ಸ್ಪಂದನದ ವಿಷಯವನ್ನು ಮಾನ್ಯ ಗುಂಡಪ್ಪನವರು ನಮಗರುಹಿದ್ದಾರೆ ಈ ಮುಕ್ತಕದಲ್ಲಿ.

ಒಂದು ಕಡೆ ಸಿಗದಿರುವುದನ್ನು ಮತ್ತೊಂದು ಕಡೆ ಅರಸುವುದು ಮನುಷ್ಯ ಸಹಜವಾದ ಗುಣ. ಆದ್ದರಿಂದ ಮನುಷ್ಯರಿಗೆ ಮನುಷ್ಯರಲ್ಲಿ ಪ್ರೀತಿ ಆದರಗಳು ಸಿಗದಿದ್ದಲ್ಲಿ, ಅದನ್ನು ಅನ್ಯ ಜೀವಿಗಳಲ್ಲಿ ಅರಸುವುದು ಬಹಳ ಸಹಜವಲ್ಲವೇ? ಹಾಗೆಯೇ ಮನುಷ್ಯ ತಾನು ಸಾಕಿದ ಪ್ರಾಣಿಗಳನ್ನು ಪ್ರೇಮದಿಂದ ನೋಡಿಕೊಂಡು ಆ ಪ್ರಾಣಿಗಳೊಡನೆ ಒಂದು ಪ್ರೇಮಾನುಬಂಧವನ್ನು ಬೆಸೆದುಕೊಳ್ಳುತ್ತಾನೆ. ಇದರ ಉದಾಹರಣೆಗಳು ನಮಗೆ ನಮ್ಮ ಸುತ್ತ ಮುತ್ತ ಹೇರಳವಾಗಿ ಕಾಣಸಿಗುತ್ತದೆ.

ಎಂತಹ ವಿಚಾರ!!! ಸಕಲ ಜೀವರಾಶಿಗಳಲ್ಲೂ ಇರುವ ಜೀವ ಅಥವಾ ಚೇತನವು ಒಂದೇ ಎಂದು ಪ್ರತಿಪಾದಿಸುವುದಕ್ಕೆ ಇದಕ್ಕಿಂತ ಬೇರೆ ದೃಷ್ಟಾಂತ ಬೇಕೆ? ಎಲ್ಲ ಜೀವಿಗಳು ಪ್ರೀತಿಗಾಗಿ ಒಲವಿಗಾಗಿ ಹಾತೊರೆಯುತ್ತವೆ. ಅದು ನಮಗೆ ಯಾರಿಂದ ಸಿಕ್ಕರೂ "ತಣಿವು ಜೀವಸ್ವರದೆ' ಎಂದು ಮಾನ್ಯ ಗುಂಡಪ್ಪನವರು ಹೇಳುವಂತೆ ಒಂದು ಜೀವದಿಂದ ಇನ್ನೊಂದು ಜೀವಕ್ಕೆ ಸಿಗುವ ಪ್ರೇಮಾದರಗಳು ಹೃದಯವನ್ನು ತಣಿಸುತ್ತದೆ.





ಪ್ರಾಣಿಗಳ ಪ್ರೀತಿಗೂ ಮನುಷ್ಯ ತೋರುವ ಪ್ರೀತಿಗೂ ಒಂದು ವ್ಯತ್ಯಾಸವುಂಟು. ಮನುಷ್ಯನ ಪ್ರೀತಿಗೆ ಸ್ವಾರ್ಥದ ಲೇಪನ ಸದಾ ಇದ್ದೇ ಇರುತ್ತದೆ. ಆದರೆ ಪ್ರಾಣಿಗಳಿಗೆ ಒಂದು ಬಾರಿ ಪ್ರೀತಿ ತೋರಿದರೆ ಅವು ಆಜೀವಪರ್ಯಂತ ನಮಗೆ ಪ್ರೀತಿಯನ್ನು ತೋರುತ್ತದೆ. ಮನುಷ್ಯರಾದ ನಾವೂ ಸಹ ಆ ಪ್ರಾಣಿಗಳಂತೆ ಶುದ್ಧ ಪ್ರೀತಿಯನ್ನು ನೀಡುವಂತಾದರೆ ಈ ಜಗತ್ತು ಎಷ್ಟು ಸುಂದರವಾಗಬಹುದಲ್ಲವೇ?

**ಮುಕ್ತಕ - 427** **ಮಾತೆವೊಲೊ ಪಿತನವೊಲೊ ಪತಿಯವೊಲೋ ಸತಿಯವೊಲೊ |**

**ಭ್ರಾತಸುತಸಖರವೊಲೊ ಪಾತ್ರವೊಂದಕೆ ತಾಂ ||**

**ಕಾತರಿಸುತಿಹುದು ತನ್ನೆಲ್ಲವನು ಮುಡುಪುಕುಡೆ।**

**ಪ್ರೀತಿಯಾ ಹುಟ್ಟು ಚಟ – ಮಂಕುತಿಮ್ಮ॥**

ಕಾತರಿಸುತಿಹುದು=ಕಾತರಿಸುತ+ಇಹುದು, ತನ್ನೆಲ್ಲವನು=ತನ್ನ+ಎಲ್ಲವನು.

ಭ್ರಾತ=ಅಣ್ಣ ಅಥವಾ ತಮ್ಮ ಸುತ=ಮಗ (ಸುತಾ=ಮಗಳು) ಸಖ=ಮಿತ್ರ, ಮುಡುಪುಕುಡೆ+ಮುಡುಪಾಗಿ

ಇಡೆ ಚಟ=ಅಭ್ಯಾಸ, ವೋಲು=ಹಾಗೆ.

ಮನುಷ್ಯ ತನ್ನದನ್ನು ಪರರಿಗೆ ಕೊಡಲು ಮತ್ತು ಪರರಿಂದ ಏನಾದರೂ ಪಡೆಯಲು ಪ್ರೀತಿ ಪ್ರೇಮಗಳ ಸಹಾಯವನ್ನು ಪಡೆದುಕೊಳ್ಳುತ್ತಾನೆ. ಹಾಗೆ ಕೊಡಲು ಅಥವಾ ಪಡೆದುಕೊಳ್ಳಲು ಅವನು ತಾಯಿಯ, ತಂದೆಯ, ಪತಿಯ, ಪತ್ನಿಯ, ಸ್ನೇಹಿತನ, ಅಣ್ಣ-ತಮ್ಮಂದಿರ ಅಥವಾ ಅಕ್ಕತಂಗಿಯರ ಪಾತ್ರವನ್ನು ವಹಿಸುತ್ತಾನೆ(ಳೆ). ಪ್ರೀತಿ ತೋರುವುದು ಮನುಷ್ಯನಿಗೊಂದು ಚಟ ಎನ್ನುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಮನುಷ್ಯನಿಗೆ ಜಗತ್ತನ್ನೇ ಅಪ್ಪುವಾಸೆ. ಇವನಲ್ಲಿ ಪ್ರೇಮಾನುರಾಗಗಳ ಒರತೆಯನ್ನು ಸ್ವಲ್ಪ ಅಧಿಕವಾಗೆ ಇಟ್ಟಿದ್ದಾನೆ ಪರಮಾತ್ಮ, ಹಾಗಾಗಿ ಅದನ್ನು ಹಂಚಲು ಇವನು ತಂದೆ, ತಾಯಿ, ಅಣ್ಣ-ತಮ್ಮ-ಅಕ್ಕ-ತಂಗಿ, ಗಂಡ-ಹೆಂಡತಿ-ಮಕ್ಕಳು-ಮಿತ್ರ, ಹೀಗೆ ಹತ್ತು ಹಲವಾರು ಸಂಬಂಧಗಳನ್ನು ಈ ಜಗತ್ತಿನೊಂದಿಗೆ ಕಲ್ಪಿಸಿಕೊಂಡು ಪ್ರೀತಿ ಪ್ರೇಮಗಳನ್ನು ಹಂಚಲು ಮಾರ್ಗಗಳನ್ನು ಕಂಡುಕೊಂಡಿದ್ದಾನೆ. ಆಸೆ ನಮ್ಮಲ್ಲಿ ಸಹಜವಾಗಿ ಹುಟ್ಟಿದರೆ ಆ ಆಸೆಯ ಪೂರೈಕೆಗೆ ಪ್ರೇಮ ಹುಟ್ಟುತ್ತದೆ. ಏಕೆಂದರೆ ಪ್ರೇಮದಿಂದ ಪೂರೈಸಿಕೊಳ್ಳಲಾಗದ ಆಸೆಯನ್ನು ಬಲಾತ್ಕಾರವೆನ್ನುತ್ತಾರೆ.

ಈ ಜಗತ್ತಿನಲ್ಲಿರುವ ಎಲ್ಲ ಪ್ರಾಣಿಗಳಲ್ಲಿರುವ ಚೇತನವು ಒಂದೇ ಮತ್ತು ಇವುಗಳ ರೂಪಗಳಿಗೆ ಕಾರಣವಾದ ಜಡವೂ ಒಂದೇ. ಹಾಗಾಗಿ ಒಂದೇ ಮೂಲದಿಂದ ಬಂದ ಇವುಗಳು ತಮ್ಮನ್ನು ತಾವು ಸೇರುವ ಪ್ರಯತ್ನವೇ ಈ ಪ್ರೀತಿ ಪ್ರೇಮಾನುರಾಗಗಳು ಮತ್ತು ಅದನ್ನು ವ್ಯಕ್ತಪಡಿಸಲು ಅನೇಕಾನೇಕ ರೂಪಗಳು, ವೈವಿಧ್ಯಮಯ

ಭಾವಗಳು. ಅಷ್ಟೇ ಅಲ್ಲ ತನ್ನ ಪ್ರೇಮವನ್ನು ತನ್ನೊಳಗೆ ಇಟ್ಟುಕೊಳ್ಳಲು ಸಾಧ್ಯವಾಗುವುದೇ ಇಲ್ಲ. ಅದನ್ನು ಪರರಲ್ಲಿ ತೋರಲು ಸಾಹಸ ಮಾಡುತ್ತಾನೆ ಮತ್ತು ಇವನಿಗೆ ಇದೊಂದು ಚಟ ಎನ್ನುತ್ತಾರೆ ಮಾನ್ಯ ಗುಂಡಪ್ಪನವರು.

ಜಗತ್ತು ಇಷ್ಟೊಂದು ಪ್ರೇಮಮಯವಾಗಿದ್ದರೆ, ಒಬ್ಬರಿಗೊಬ್ಬರು ದ್ವೇಷ ಅಸೂಯೆ ಮುಂತಾದವು ಏಕೆ? ಎಂದರೆ, ನಮ್ಮ ಪ್ರೇಮ, ಪ್ರೀತಿಗಳು ಸ್ವಾರ್ಥದಿಂದ ಕೂಡಿದೆ, ನಾವು ಶುದ್ಧ ಚೇತನವನ್ನಲ್ಲದೆ ಕೇವಲ ಆ ಚೇತನ ಧರಿಸಿರುವ ಬಾಹ್ಯ ರೂಪವನ್ನು ಪ್ರೀತಿಸುತ್ತೇವೆ. ಎಂದು ನಾವು ಎಲ್ಲರಲ್ಲೂ ಸಮಗ್ರವಾದ ಪ್ರೀತಿ ಪ್ರೇಮಗಳನ್ನು ಬೆಳೆಸಿಕೊಳ್ಳುತ್ತೇವೋ ಅಂದು ಈ ಜಗತ್ತಿನಲ್ಲಿ ಸತ್ಯವಾದ ವಿಶ್ವ ಶಾಂತಿ ನೆಲೆಸಲು ಸಾಧ್ಯ.

**ಮುಕ್ತಕ-428** **ಪ್ರೇಮ ಕನಲೆ ಪಿಶಾಚಿ, ತೃಪ್ತಿಯಾಂತಿರೆ ಲಕ್ಷ್ಮಿ।**
**ಭ್ರಾಮಿಪುದದು ಪ್ರತಿಪ್ರೇಮಯಾಚನೆಯೊಳ್॥**
**ಮಾಮಕವಿದೆಂದಾವುದಕ್ಕೆ ತಾನೇ ಬಲಿವೋಗಿ।**
**ಶಾಮನವನೊಂದುವುದು - ಮಂಕುತಿಮ್ಮ॥**

ತೃಪ್ತಿಯಾಂತಿರೆ=ತೃಪ್ತಿಯಂತೆ+ಇರೆ, ಭ್ರಾಮಿಪುದದು=ಭ್ರಾಮಿಪುದು+ಅದು,
ಮಾಮಕವಿದೆಂದಾವುದಕೊ=ಮಾಮಕವು+ಇದು+ಎಂದು+ಆವುದಕೊ,
ಶಾಮನವನೊಂದುವುದು=ಶಾಮನವನು+ಒಂದುವುದು
ಕನಲೆ=ಕೆರಳೆ, ಮಾಮಕವು=ಮಮಕಾರವು, ಶಾಮನವನು=ಶಮನವನು

ಪ್ರೇಮವು ಕೆರಳಿದರೆ ಅದು ತೃಪ್ತಿಯಾಗುವ ತನಕ ಮನಸ್ಸು ಪಿಶಾಚಿಯಂತೆ ಆಡುತ್ತದೆ. ಬಯಸಿದ ವಸ್ತು ಸಿಕ್ಕಿಬಿಟ್ಟರೆ ಸಂತಸಗೊಳ್ಳುತ್ತದೆ. ಪ್ರತಿಬಾರಿ ಪ್ರೇಮವುಕ್ಕಿದಾಗಲೂ ಮನಸ್ಸು ಒಂದು ಭ್ರಮೆಯಲ್ಲಿರುತ್ತದೆ. ತನ್ನದು ಎನ್ನುವ ವಸ್ತುವಿಗೆ ಪ್ರೇಮದಲಿ ಬಲಿಯಾಗಿ ಆ ವಸ್ತುವನ್ನು ಪಡೆದು ಮನಸ್ಸು ಶಮನಗೊಳ್ಳುತ್ತದೆ, ಎಂದು ಮಾರ್ಮಿಕವಾಗಿ ನಮ್ಮ ಆಸೆಗಳ, ಪ್ರೀತಿ, ಪ್ರೇಮಗಳನ್ನು ವಿಡಂಬನಾತ್ಮಕವಾಗಿ ವರ್ಣಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ತಾನು ಪ್ರೇಮಿಸಿದ ಹುಡುಗಿ (ಗ) ತನಗೆ ಸಿಗುವವರೆಗೆ ಏನೆಲ್ಲಾ ದೊಂಬರಾಟವನ್ನು ಪಿಶಾಚಿಯಂತೆ ಆಡುತ್ತಾಳೆ(ನೆ). ಸಿಗದಿದ್ದರೆ ಪ್ರೇಮದ ತೀವ್ರತೆಯ ಆಧಾರದ ಮೇಲೆ ಹತ್ಯೆ ಅಥವಾ ಆತ್ಮಹತ್ಯೆಯ ತನಕ ಹೋಗುವ ಹುಚ್ಚು. ಇದು ಪೈಶಾಚಿಕ ಪ್ರೇಮ. ಒಂದು ವಸ್ತು ತನ್ನದು ಅಥವಾ ತನ್ನದಾಗಬೇಕು ಎನ್ನುವ ಭ್ರಮೆ. ಸಿಕ್ಕರೆ ಎಲ್ಲವೂ ಶಾಂತ, ಸುಖ ಸಂತೋಷ, ಹಾಗಾಗಿ ಅದು ಲಕ್ಷ್ಮಿ, ಇಲ್ಲಿ ಮಾನ್ಯ ಗುಂಡಪ್ಪನವರು 'ಲಕ್ಮ' ಎನ್ನುವ ಪದಕ್ಕೆ ಬಹಳ ಸೂಕ್ತ ವಿವರಣೆಯನ್ನು ನೀಡಿದ್ದಾರೆ. ನಾವು ಬಯಸಿದ ವಸ್ತು ನಮಗೆ ತರುವ ಸುಖ, ಸಂತೋಷ, ತೃಪ್ತಿಗಳೇ ನಮಗೆ ಲಕ್ಷ್ಮಿ ಎಂದು.

(267)

| | |
|---|---|
| ಮಾನುಷ ಪ್ರೀತಿ 424-429 | ಕಗ್ಗ ರಸಧಾರೆ-2 |

ಮನುಷ್ಯ ಆಸೆಪಡುವುದು ಸಹಜ. ಆ ಆಸೆಗೆ ಭ್ರಮೆಯೂ ಕೂಡಿಕೊಂಡರೆ ಅದು ಕೇವಲ ಆಸೆಯಾಗಿ ಉಳಿಯದೆ ಅದು ಪೈಶಾಚಿಕ ಅಭಿಲಾಷೆಯಾಗುತ್ತದೆ. ಆ ಭ್ರಮಾಪೂರಿತ ಆಸೆಯನ್ನು ಈಡೇರಿಸಿಕೊಳ್ಳುವ ದಾರಿಯಲ್ಲಿ, 'ತಾನೇ ಬಲಿಪೋಗಿ' ಎನ್ನುವಂತೆ ಮನುಷ್ಯ ತಾನೇ ಬಲಿಯಾಗಿಬಿಡುತ್ತಾನೆ. ಹಾಗೆ ಅವನು ಬಯಸಿದ ವಸ್ತು ಸಿಕ್ಕಾಗ ಅವನು ಶಾಂತನಾಗುತ್ತಾನೆ ಎನ್ನುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಭ್ರಮಾಪೂರಿತ ಆಸೆಯನ್ನು ಬಿಟ್ಟರೆ, ಪೈಶಾಚಿಕತ್ವದಿಂದ ಮುಕ್ತರಾಗಬಹುದು. ಹಾಗಾದಾಗ ಮನಸ್ಸಿನ ನೆಮ್ಮದಿಯನ್ನು ಕಾಪಾಡಿಕೊಂಡು, ನಾವು ಬಯಸಿದ ವಸ್ತು ಸಿಕ್ಕರೂ, ಸಿಗದಿದ್ದರೂ ನಮ್ಮ ಮನಸ್ಸನ್ನು ಸದಾಕಾಲ ಲಕ್ಷ್ಮಿಯನ್ನಾಗಿರಿಸಿಕೊಳ್ಳಬಹುದು.

**ಮುಕ್ತಕ-429**

**ಬಂಧನವದೇನಲ್ಲ ಜೀವಜೀವಪ್ರೇಮ |**
**ಒಂದೇ ನಿಲೆ ಜೇವವರೆ, ಬೆರೆತರಳೆ ಪೂರ್ಣ ||**
**ದಂದುಗವನ್ ಅರೆಗೆಯ್ದು, ಸಂತಸವನಿಮ್ಮಡಿಪ |**
**ಬಾಂಧವ್ಯ ದೈವ ಕೃಪೆ – ಮಂಕುತಿಮ್ಮ ||**

ಬಂಧನವದೇನಲ್ಲ=ಬಂಧನವು+ಅದು+ಏನಲ್ಲ, ಜೇವವರೆ=ಜೀವವು+ಅರೆ, ಬೆರೆತರಳೆ=ಬೆರೆತು+ಅರಳೆ, ಸಂತಸವನಿಮ್ಮಡಿಪ=ಸಂತಸವನು+ಇಮ್ಮಡಿಪ.
ಅರಳೆ=ವಿಕಸಿತವಾದರೆ, ದಂದುಗವನ್=ಸಂಕಷ್ಟಗಳ ಮೂಟೆ, ಅರೆಗೆಯ್ದು=ಎರಡು ಭಾಗವಾಗಿಸಿ, ಇಮ್ಮಡಿಪ=ಎರಡುಪಟ್ಟು ಆಗಿಸುವ, ಬಾಂಧವ್ಯ=ಸಂಬಂಧವು

ಒಂದು ಜೀವಕ್ಕೂ ಮತ್ತೊಂದು ಜೀವಕ್ಕೂ ಇರುವ ಪ್ರೇಮವೇನೂ ತೊಂದರೆ ಎನ್ನುವರ್ಥದಲ್ಲಿ ಬಂಧನವಲ್ಲ. ಜೀವ ಒಂದೇ ಇದ್ದರೆ ಜೀವನವು ಅರ್ಧವಾಗಿರುತ್ತದೆ. ಅಲ್ಲದೆ, ಇನ್ನೊಂದು ಜೀವದೊಡನೆ ಬೆರೆತು ಬಾಂಧವ್ಯ ಅರಳಿದರೆ, ಬದುಕು ಪರಿಪೂರ್ಣವಾಗುವುದು. ಬದುಕಿನಲ್ಲಿ ಸಂದ ಕಷ್ಟದ ಕೋಟಲೆಯನ್ನು ಮತ್ತೊಂದು ಜೀವದೊಡನೆ ಸಮನಾಗಿ ಹಂಚಿಕೊಂಡಾಗ ಕಷ್ಟವು ಅರ್ಧವಾಗಿ ಸಂತಸವು ಎರಡುಪಟ್ಟಾಗುತ್ತದೆ. ಈ ಬದುಕಿನ ಬಾಂಧವ್ಯಗಳು ನಮಗೆ ಕೇವಲ ದೈವ ಕೃಪೆಯಿಂದ ಬರುವಂತಹುದು ಎಂದು ಜೀವ ಜೀವಗಳ ಪರಸ್ಪರ ಬಾಂಧವ್ಯಗಳನ್ನು ವಿಶ್ಲೇಷಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತದಲ್ಲಿ.

ಈ ಜಗತ್ತಿನಲ್ಲಿ ಜೀವಿಗಳು ಯಾವ ಬಂಧನವೂ ಇಲ್ಲದೆ, ಒಂಟಿಯಾಗಿ, ಭಾವರಹಿತವಾಗಿ ಇರಲು ಸಾಧ್ಯವಿಲ್ಲ ಮತ್ತು ಅಂತಹ ಸ್ಥಿತಿಯನ್ನು ಊಹಿಸಲೂ ಸಾಧ್ಯವಿಲ್ಲ. ಈ ಬಂಧನಗಳು ಪ್ರಕೃತಿಯೊಂದಿಗಾಗಬಹುದು ಅಥವಾ ಅನ್ಯ ಜೀವಿಗಳೊಂದಿಗಾಗಬಹುದು. ಬಂಧನವಿರಲೇಬೇಕು. ಕಣ್ಣುಗಳು ನೋಡಿದ್ದನ್ನು ಮನಸ್ಸಿನ ಮೂಲಕ ನಮ್ಮ ಬುದ್ಧಿಗೆ ತಲುಪಿಸುತ್ತದೆ. ಹಾಗೆ ತಲುಪಿದ್ದು ಇಂದ್ರಿಯಾಕ್ರಾಂತವಾದ ನಮ್ಮಲ್ಲಿ ಭಾವನೆಗಳನ್ನು ಉಂಟಾಗಿಸುತ್ತವೆ. ಈ

ಭಾವನೆಗಳೇ ನಮ್ಮನ್ನು ಈ ಜಗತ್ತಿನೊಂದಿಗೆ ಬೆಸೆಯುವ ಕೊಂಡಿಗಳು. ವಾಸ್ತವಿಕ ಬದುಕಿನಲ್ಲಿ ಒಂದು ವ್ಯಕ್ತಿ ಮತ್ತೊಂದು ವ್ಯಕ್ತಿಯೊಡನೆ ಬೆಸೆದುಕೊಂಡಾಗ ಭಾವನೆಗಳ ವಿನಿಮಯವಾಗುತ್ತದೆ.





ಕಷ್ಟಸುಖಗಳನ್ನೂ ಹಂಚಿಕೊಳ್ಳುವ ಪ್ರಕ್ರಿಯೆ ನಡೆಯುತ್ತದೆ. ಹಂಚಿಕೊಂಡಾಗ ಕಷ್ಟಗಳು ಕಡಿಮೆಯಾಗುತ್ತವೆ ಎನ್ನುವುದು ಎಲ್ಲರ ಅನುಭವವೂ ಹೌದು.

ಆದರೆ ನಮಗೆ ಯಾರೊಂದಿಗೆ, ಯಾವ ಸಂದರ್ಭದಲ್ಲಿ, ಯಾವ ರೀತಿಯಲ್ಲಿ, ಎಷ್ಟು ಕಾಲಕ್ಕೆ ಸಂಬಂಧವುಂಟಾಗುತ್ತದೆ, ಎಂದು ಬಿಟ್ಟುಹೋಗುತ್ತದೆ ಎಂದು ಹೇಳಲು ಸಾಧ್ಯವೇ ಇಲ್ಲ. ಇದು ದೇವ ರಹಸ್ಯ ಮತ್ತು ನಮ್ಮ ಎಲ್ಲ ಬಂಧ ಮತ್ತು ಸಂಬಂಧಗಳೂ ಸಹ ನಮಗರಿವಿಲ್ಲದಂತೆಯೇ ಆ ದೈವಕೃಪೆಯಿಂದಲೇ ಆಗುತ್ತದೆ.

ಎಲ್ಲ ಸಂಬಂಧಗಳನ್ನೂ ನಾವು ಆ ದೇವನ ಪ್ರಸಾದವೆಂದೇ ಸ್ವೀಕರಿಸಬೇಕು ಮತ್ತು ಹಾಗೆ ಸಂದ ಸಂಬಂಧಗಳನ್ನು ನಮ್ಮ ಮಾನುಷಿ ಭಾವನೆಗಳಿಂದ ಕಲುಷಿತಗೊಳ್ಳಲು ಬಿಡದೆ, ಸದ್ಭಾವನೆಯಿಂದ ಶುದ್ಧವಾಗಿಟ್ಟುಕೊಳ್ಳುವ ಪ್ರಯತ್ನವನ್ನು ಸದಾ ಮಾಡುತ್ತಲೇ ಇರಬೇಕು.

# ದೃಷ್ಟಿಯಿಂದ ಸಮಷ್ಠಿ 430-433

**ಮುಕ್ತಕ-430**

**ಒಬ್ಬನುಣುವೂಟದಲಿ ಸವಿಯಿಲ್ಲ ಸೊಗವಿಲ್ಲ।**
**ಇಬ್ಬರಾಗುವೆನೆಂದನಂತೆ ಪರಬೊಮ್ಮಂ ॥**
**ಹೆಬ್ಬದುಕನೊಂಟಿತನದೊಳದೇನು ಬದುಕುವೆಯೊ?।**
**ತಬ್ಬಿಕೊಳೊ ವಿಶ್ವವನು - ಮಂಕುತಿಮ್ಮ ॥**

ಒಬ್ಬನುಣುವೂಟದಲಿ=ಒಬ್ಬನು+ಉಣುವ+ಊಟದಲಿ, ಇಬ್ಬರಾಗುವೆನೆಂದನಂತೆ=ಇಬ್ಬರು+ಆಗುವೆ+ಎಂದನಂತೆ, ಹೆಬ್ಬದುಕನೊಂಟಿತನದೊಳದೇನು=ಹೆಬ್ಬದುಕನು+ಒಂಟಿತನದೊಳು+ಅದೇನು.
ಉಣುವ=ತಿನ್ನುವ, ಹೆಬ್ಬದುಕನು=ದೊಡ್ಡದಾದ ಜೀವನವ.

ಆ ಪರಮಾತ್ಮ ತಾನು ಒಬ್ಬನೇ ಕುಳಿತು ಊಟ ಮಾಡುವುದರಲ್ಲಿ ಏಕೋ ರುಚಿಯಿಲ್ಲ ಮತ್ತು ಸೊಗಸೂ ಇಲ್ಲ ಎಂದು ನೆನೆದು 'ಇಬ್ಬರಾಗುವೆ' ಎಂದನಂತೆ, ಸಕಲ ಚರಾಚರಗಳಿಗೆ ಒಡೆಯನಾದ ಅವನಿಗೇ ಹಾಗನ್ನಿಸಿರುವಾಗ, ಇಷ್ಟು ದೊಡ್ಡದಾದ ಬದುಕನ್ನು ನೀನು ಒಂಟಿಯಾಗಿ ಹೇಗೆ ಬದುಕುವೆ? ಹಾಗಾಗಿ ಇಡೀ ವಿಶ್ವವನ್ನೇ ತಬ್ಬಿಕೊಳ್ಳು ಎಂದು ಅದೇಶಿಸುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಒಬ್ಬಂಟಿಯಾಗಿ ಈ ಜಗತ್ತಿನಲ್ಲಿ ಬದುಕಲು ಸಾಧ್ಯವೆ? ಸಂಪೂರ್ಣ ದೈವೀ ಸಂಪರ್ಕವನ್ನು ಇಟ್ಟುಕೊಂಡ ಕಾಲಕ್ಕೆ ಕೆಲ ಋಷಿ ಮುನಿಗಳಿಗೆ ಸಾಧ್ಯವಾಗಿರಬಹುದು ಎಂದು ಅನಿಸುತ್ತದೆ. ಆದರೆ ಮಾನವ ಸಂಘ ಜೀವಿಯಾದಂದಿನಿಂದ ಅವನಿಗೆ ಜಗತ್ತಿನಲ್ಲೇ ಹೆಚ್ಚು ಆಕರ್ಷಣೆ ಮತ್ತು ಸೆಳೆತ. ಈ ಆಕರ್ಷಣೆಯ ಬಳ್ಳಿಗಳಿಂದಲೇ ಇವನ ಸಂಪರ್ಕ ಜಗತ್ತಿನೊಂದಿಗೆ ಉಂಟಾಗುತ್ತದೆ.

ನಮ್ಮ ಬದುಕಿನಲ್ಲೂ ನಾವು ಒಬ್ಬರೇ ಕುಳಿತು ಊಟಮಾಡಲು ಸಾಧ್ಯವೇ? ಅದು ತೀರ ಅಸಹನೀಯ. ಹಾಗಾಗಿಯೇ ತೈತ್ತರೇಯದಲ್ಲಿ 'ಅನ್ನಂ ಬಹು ಕುರ್ವೀತ" ಎಂದು ಹೇಳಲ್ಪಟ್ಟಿದೆ. ಅರ್ಥಾತ್ ಅನ್ನವನ್ನು (ಆಹಾರವನ್ನು ಹೆಚ್ಚಾಗಿ ಮಾಡು. ಏಕೆಂದರೆ ಯಾವ ಸಮಯದಲ್ಲಿ ಯಾರು ನಿಮ್ಮ ಮನೆಗೆ ಬರುವರೋ ಗೊತ್ತಿಲ್ಲ. ಬಂದವರಿಗೆ "ತಸ್ಮಾತ್ ಯಯಾಕಯಾಚ ವಿಧಾಯ ಬಹ್ವನ್ನಂ ಪ್ರಾಪ್ನುಯಾತ್" ಎಂದರೆ ಬಂದವರಿಗೆ ಹೇಗಾದರೂ ಮಾಡಿ ಅಧಿಕ ಅನ್ನವನ್ನು ಕೊಡಬೇಕು, ಎನ್ನುವಂತೆ ಊಟವನ್ನು ಬಡಿಸು, ಎಂದು ಹೇಳುತ್ತದೆ. ಇದು ಕೇವಲ ಅನ್ನಕ್ಕೆ ಮಾತ್ರ ಅನ್ವಯವಲ್ಲ. ಯಾವುದೂ ಇದರಿಂದ ಹೊರತಲ್ಲ.

ಪರರಿಂದ ಪಡೆಯಬೇಕು, ಪರರಿಗೆ ಕೊಡಬೇಕು, ಪರಸ್ಪರ ಹೊಂದಾಣಿಕೆಯಲ್ಲಿ ಜೀವಿಸಬೇಕು ಎನ್ನುವುದೇ ಮೂಲ ಉದ್ದೇಶ. ಇದೇ ಅರ್ಥದಲ್ಲಿ "ತಬ್ಬಿಕೊಳೊ ವಿಶ್ವವನು" ಎಂದಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ. ನಾವೂ ಸಹ ವಿಶ್ವವನ್ನು ತಬ್ಬಿಕೊಳ್ಳಬೇಕು, ಸೊಗದಿಂದ ಬಾಳಬೇಕು ಮತ್ತು ತೃಪ್ತಿಯನ್ನು
ಕಾಣಬೇಕು.

**ಮುಕ್ತಕ-431**

**ಕೊಳದಿ ನೀಂಮೀವಂದು ತೆರೆಯೆದ್ದು ಹರಡುತ್ತೆ।**
**ವಲಯವಲಯಗಳಾಗಿ ಸಾರುವುದು ದಡಕೆ ॥**
**ಅಲೆಗಳಾ ತೆರದಿ ನಿನ್ನಾತ್ಮದಿಂ ಪರಿಪರಿದು।**
**ಕಳೆತುಕೊಳ್ಳಲಿ ಜಗದಿ - ಮಂಕುತಿಮ್ಮ॥**

ತೆರೆಯೆದ್ದು ತೆರೆ+ಎದ್ದು,

ವಲಯವಲಯ-ಅಲೆಯ ಉಂಗುರಗಳು.

ನಾವು ಕೊಳದಲ್ಲಿ ಸ್ನಾನಮಾಡಲು ಹೋಗಿ ಮುಳುಗೆದ್ದಾಗ ನೀರ ಉಂಗುರಗಳು ನಮ್ಮ ಸುತ್ತಲೂ ಹರಡಿ ದಡವ ತಲುಪುವಂತೆ, ನಾವು ನಮ್ಮ ಚೈತನ್ಯದಿಂದ ಸುಭಾವವನ್ನು ಹರಿಸಿ ಜಗತ್ತಿನಲ್ಲೆಲ್ಲ ಕಲೆತುಕೊಳ್ಳುವಂತೆ ಬಾಳಬೇಕು ಮತ್ತು ಹಾಗೆಯೇ ಬದುಕಿನ ದಡ ಸೇರಬೇಕೆಂದು ಒಂದು ಆದೇಶವನ್ನು ನೀಡಿದ್ದಾರೆ ಮಾನ್ಯ ಗುಂಡಪ್ಪನವರು ನಮಗೆ ಈ ಮುಕ್ತಕದಲ್ಲಿ.

ಪ್ರತಿಯೊಬ್ಬರಿಗೂ ಸಂಬಂಧಗಳ ಮತ್ತು ಸಂಪರ್ಕಗಳ ಅವರವರದೇ ಆದ ವೃತ್ತ ಇರುತ್ತದೆ. ಹಲವರ ವೃತ್ತ ಚಿಕ್ಕದು, ಹಲವರದ್ದು ದೊಡ್ಡದು. ಅಷ್ಟೇ ಅಲ್ಲ ಕಾಲಾನುಕಾಲಕ್ಕೆ ಈ ನಮ್ಮ ಸಂಬಂಧಗಳ ವೃತ್ತ ಬದಲಾಗುತ್ತಾ ಹೋಗುತ್ತದೆ. ನಮ್ಮಿಂದ ಹೊರಟ ಭಾವ ತರಂಗಗಳೇ ನಮ್ಮ ಸುತ್ತ ಹರಡಿ ಆ ಭಾವ ತೀವ್ರತೆಯ ಆಧಾರದ ಮೇಲೆ, ತನ್ನ ಪ್ರಭಾವವನ್ನು ಸುತ್ತಲೂ ಬೀರುತ್ತದೆ ಮತ್ತು ಪ್ರತಿಯೊಬ್ಬರೂ ತಮ್ಮೊಳಗಿನ ಭಾವ ಮತ್ತು ಅನ್ಯರಿಂದ ಹೊರಡುವ ಭಾವಗಳ ಪ್ರಭಾವಕ್ಕೊಳಗಾಗಿಯೇ ರೂಪುಗೊಳ್ಳುತ್ತಾರೆ.

(270)

| ಕಗ್ಗ ರಸಧಾರೆ-2 | ದೃಷ್ಟಿಯಿಂದ ಸಮಷ್ಟಿ 430-433 |
|---|---|

ತಂದೆ ತಾಯಿಗಳ, ನೆರೆಹೊರೆಯ, ಸಹಪಾಠಿಗಳ ಸಮಾಜದ ಹೀಗೆ ಒಟ್ಟಾರೆ ನಮ್ಮ ಸಂಪರ್ಕಕ್ಕೆ ಬರುವ ಎಲ್ಲದರಿಂದಲೂ ನಾವು ಪ್ರಭಾವಿತರಾಗಿ ನಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುತ್ತೇವೆ. ಹಾಗೆಯೇ ನಮ್ಮಿಂದ, ಗುಂಡಪ್ಪನವರು ಹೇಳುವಂತೆ "ಅಲೆಗಳಾ ತೆರದಿ ನಿನ್ನಾತ್ಮದಿಂ ಪರಿಪರಿದು" ಹೊರಟ ಭಾವತರಂಗಗಳೂ ಸಹ ಅನ್ಯರ ಮೇಲೆ ಪ್ರಭಾವ ಬೀರುತ್ತಾದ್ದರಿಂದ, ನಾವು ನಮ್ಮ ಭಾವನೆಯ ಶುದ್ಧತೆಯನ್ನು ಕಾಪಾಡಿಕೊಳ್ಳುವುದು ಬಹಳ ಅಗತ್ಯ. ಏಕೆಂದರೆ ಸಮಾಜದಲ್ಲಿ ನಮ್ಮ ವ್ಯಕ್ತಿತ್ವದ ಗಣನೆ ನಮ್ಮಿಂದ ಹೊರಟ ಭಾವಗಳೇ ನಿರ್ಧರಿಸುತ್ತವೆ.

ಹಾಗಾಗಿ ನಮ್ಮ ಭಾವಶುದ್ಧತೆಯನ್ನು ಬೆಳೆಸಿ ರೂಪಿಸಿ ಮತ್ತು ಕಾಪಾಡಿಕೊಂಡು ಅದನ್ನೇ ಹೊರಗೆಡುಹುತ್ತಾ, ನಮ್ಮ ಶಕ್ತಾನುಸಾರ ನಾವು ಹೊರಡಿಸಿದ ಭಾವಗಳು ಯಾವ ದಡವನ್ನು ಮುಟ್ಟುತ್ತವೆಯೋ ಅಲ್ಲಿಯೂ ಸಹ ಅಂತಹ ಶುದ್ಧತೆಯನ್ನು ಉಂಟುಮಾಡುವುದರಲ್ಲಿ ಸಫಲರಾದರೆ ನಮ್ಮ ಜೀವನ ಸಾರ್ಥಕವಾಯಿತೆಂದು ಅಂದುಕೊಳ್ಳಬಹುದು. ಅಂತಹ ಪ್ರಯತ್ನವನ್ನು ನಾವೆಲ್ಲರೂ ಮಾಡಬೇಕಲ್ಲವೇ?

**ಮುಕ್ತಕ-432**

**ಪ್ರತ್ಯೇಕಸುಖವಲ್ಪದುದು, ಗಳಿಗೆತೋರ್ಕೆಯದು।**
**ಆತ್ಮವಿಸ್ತಾರವಾಗಿಪುದೆ ನಿತ್ಯಸುಖ ॥**
**ವ್ಯಕ್ತಿಜೀವನದ ಸೊಂಪು ಸಮಜೀವನದಿ।**
**ಒಟ್ಟುಬಾಳ್ವುದು ಕಲಿಯೊ - ಮಂಕುತಿಮ್ಮ ॥**

ಪ್ರತ್ಯೇಕಸುಖವಲ್ಲದುದು=ಪ್ರತ್ಯೇಕ+ಸುಖ+ಅಲ್ಪದುದು, ಗಳಿಗೆತೋರ್ಕೆಯದು=ಗಳಿಗೆ+ತೋರ್ಕೆ+ಅದು
ಸೊಂಪು=ಸುಖ ಅಥವಾ ಹಿತ, ಸಮಷ್ಠಿಜೀವನ=ಸಹಜೀವನ.

ನಾವು ಪ್ರತಿಯೊಬ್ಬರೂ ನಮ್ಮಷ್ಟಕ್ಕೆ ನಾವೇ ಅನುಭವಿಸಿ ಆನಂದ ಪಡುವ ಸುಖ, ಅಲ್ಪ ಸುಖ ಮತ್ತು ಕ್ಷಣಿಕವಾದದ್ದು. ಹಾಗಲ್ಲದೆ ಆತ್ಮದ ಭಾವವನ್ನು ವಿಶಾಲವಾಗಿಸಿವುದೇ ಶಾಶ್ವತ ಸುಖ. ಒಬ್ಬ ವ್ಯಕ್ತಿ ತನ್ನಷ್ಟಕ್ಕೆ ತಾನೇ ಸುಖಪಡುವುದಕ್ಕಿಂತ ತನ್ನೊಡನೆ ಸಮಸ್ತರನ್ನೂ ಸೇರಿಸಿಕೊಂಡು ಸುಖಪಡುವುದು ಹಿತವಾಗಿರುತ್ತದೆ, ಹಾಗಾಗಿ ಒಟ್ಟು ಬಾಳುವೆಯನ್ನು ಕಲಿತುಕೋ, ಎಂದು ಒಂದು ಆದೇಶವನ್ನು ನೀಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಈ ವಿಷಯಕ್ಕೆ ವೇದಕಾಲದಿಂದಲೂ ಪ್ರಾಧಾನ್ಯವನ್ನು ಕೊಟ್ಟಿದ್ದಾರೆ. ಉದಾಃ ಋಗ್ವೇದದಲ್ಲಿ 'ಸಂಗಚ್ಚತ್ವಂ ಸಂವದತ್ವಂ ಸಂ ವೋ ಮನಾಂಸಿ ಜಾನತಾಂ' ಎಂದೂ 'ಸಮಾನೀ ವ ಆಕೂತಿಃ ಸಮಾನಾ ಹೃದಯಾನಿ ವಃ ಎಂದು ಸಹಬಾಳ್ವೆಯ ರೂಪ ರೇಷೆಗಳನ್ನು ಪುರಾತನ ಋಷಿಗಳು ಕೊಟ್ಟಿದ್ದಾರೆ. ನಮ್ಮ ಬುದ್ಧಿಯನ್ನು, ವಿಚಾರವನ್ನು, ನುಡಿಯನ್ನು ಮತ್ತು ನಡೆಯನ್ನು ಒಟ್ಟು ನಾಗರೀಕತೆಯ ಒಳಿತಿಗಾಗಿ ಬೆಳೆಸಿಕೊಳ್ಳುವುದು, ಉಳಿಸಿಕೊಳ್ಳುವುದು ಮತ್ತು ಉಪಯೋಗಿಸಿಕೊಳ್ಳುವುದಕ್ಕೆ ಎಲ್ಲ ಬೋಧನೆಗಳಲ್ಲೂ ಒತ್ತು ನೀಡಲಾಗಿದೆ.

ನಮ್ಮ ಸುಖವನ್ನು ನೋಡಿಕೊಳ್ಳುವುದು ಕೇವಲ ಸ್ವಾರ್ಥ "ಸರ್ವೇ ಜನಾಃ ಸುಖಿನೋ ಭವಂತು" ಎನ್ನುವುದು "ಸರ್ವ ಹಿತ". ಎಲ್ಲರೂ ಸುಖದಿಂದಿರಬೇಕೆನ್ನುವುದು ಆತ್ಮದ ವಿಸ್ತೃತ ಭಾವ. ಸಕಲ ಜೀವಿಗಳಲ್ಲೂ ಇರುವುದು ಬೇರೆ ಬೇರೆ ರೂಪಗಳನ್ನು ಧಾರಣೆಮಾಡಿರುವುದು ಒಂದೇ ಚೇತನವೆಂದು ಅರಿತು ಅನ್ಯರ ಸಂತೋಷದಲ್ಲಿಯೇ ಅಥವಾ ಅನ್ಯರ ಹಿತದಲ್ಲಿ ತನ್ನ ಸುಖವನ್ನು, ಹಿತವನ್ನು ಕಂಡುಕೊಂಡರೆ ನಮ್ಮ ವೈಯಕ್ತಿಕ ಆನಂದ, ಸುಖ ಮತ್ತು ತೃಪ್ತಿಯೂ ಅಧಿಕವಾಗುತ್ತದೆ ಎನ್ನುವುದು ಮಾನ್ಯ ಗುಂಡಪ್ಪನವರ ಮತ.

"ಸರ್ವಹಿತವು" ಸ್ವಹಿತವನ್ನು ಗೆಲ್ಲಬೇಕು. ಹಾಗಾದಾಗ ಎಂತಹ ಸಮಾಜ ನಿರ್ಮಾಣವಾಗುತ್ತದೆ ಎಂದು ಎಲ್ಲರೂ ಯೋಚಿಸಬೇಕಾದ ವಿಷಯ. ಆದರೆ ಇಂದಿನ ಸ್ವಾರ್ಥಪೂರಿತ ಜನ ಜೀವನದಲ್ಲಿ ನಾನು ಎನ್ನುವ ಕಡೆ ನಾವು ಎಂದು ಬದಲಾಗಬೇಕಾದರೆ ಸಮಾಜದ ಎಲ್ಲರ ಪ್ರಯತ್ನ ಅಗತ್ಯ. ಅಂತಹ ಸಮಾಜವನ್ನು ನಿರ್ಮಾಣಮಾಡುವ ಪ್ರಯತ್ನವನ್ನು ನಾವು ಮಾಡಬೇಕು.

**ಮುಕ್ತಕ-433**

**ಅಳುವೇನು? ನಗುವೇನು? ಹೃತ್ಕಪಾಟೋದ್ಘಾಟ |**
**ಶಿಲೆಯೆ ನೀಂ ಕರಗದಿರಲ್? ಅರಳದಿರೆ ಮರಳೇಂ? ||**
**ಒಳಜಗವ ಹೊರವಡಿಪ, ಹೊರಜಗವನೊಳಕೊಳುವ |**
**ಸುಳದಾರಿಯಳು ನಗುವು – ಮಂಕುತಿಮ್ಮ ||**

ಹೃತ್ಕಪಾಟೋದ್ಘಾಟ=ಹೃತ್+ಕಪಾಟ+ಉದ್ಘಾಟ, ಹೊರವಡಿಪ=ಹೊರ+ಅವಡಿಪ,

ಹೊರಜಗವನೊಳಕೊಳುವ=ಹೊರಜಗವನು+ಒಳ+ಕೋಳುವ,

ಸುಳುದಾರಿಯಳುನಗುವು=ಸುಳುದಾರಿ+ಅಳು+ನಗುವು

ಹೃತ್ಕಪಾಟೋದ್ಘಾಟ=ಹೃದಯದ ಬಾಗಿಲ ತೆರೆಯಲು, ಕರಗದಿರಲ್=ಕರಗದೆ ಇರಲು,

ಹೊರವಡಿಪ=ಹೊರಹಾಕುವ, ಸುಳುದಾರಿ=ಸುಲಭವಾದ ಮಾರ್ಗ

ಅಳುವೇನು, ನಗುವೇನು? ಅವು ಹೃದಯದ ಬಾಗಿಲನ್ನು ತೆಗೆದು ಮುಚ್ಚುವ ಸಾಧನಗಳು. ಕರಗದೆ ಇರಲು ನೀನು ಕಲ್ಲೇನು? ಅಥವಾ ಅರಳದೆ ಇರಲು ನೀನು ಮರಳೇನು? ನಿನ್ನ ಒಳಗಿರುವ ಭಾವ ಜಗತ್ತನ್ನು ಹೊರಜಗತ್ತಿನೊಂದಿಗೆ ಬೆರೆಸಿ ಹೊರಜಗತ್ತಿನ ಭಾವ ಸಂಪತ್ತನ್ನು ನಿನ್ನ ಒಳಕ್ಕೆ ಸೆಳೆದುಕೊಳ್ಳಲು ಈ ನಗು ಮತ್ತು ಅಳುಗಳೇ ಸುಲಭದ ದಾರಿಗಳು ಎಂದು ಒಂದು ಅದ್ಭುತ ವಿಚಾರವನ್ನು ಮಂಡಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಈ ಮುಕ್ತಕದಲ್ಲಿ ಡಿ.ವಿ.ಜಿ.ಯವರು ಒಂದು ಸ್ಪಷ್ಟ ಆದೇಶವನ್ನು ನೀಡಿ ಹೇ! ಮಾನವ ಹೃದಯಗಳೇ ಕಲ್ಲಾಗಬೇಡಿ, ಮುದುಡದೇ ಅರಳಿನಲ್ಲಿ, ನಿಮ್ಮ ಭಾವಗಳನ್ನು ಜಗತ್ತಿಗೆ ಹಂಚಿ ಮತ್ತು ಜಗತ್ತಿನ ಭಾವಗಳನ್ನು ಸ್ವಾಗತಿಸಿ ನಿಮ್ಮ ಹೃದಯ ವೈಶಾಲ್ಯವನ್ನು ಹೆಚ್ಚಿಸಿಕೊಳ್ಳಿ ಎಂದಿದ್ದಾರೆ.





ಹೃದಯದ ಬಾಗಿಲನ್ನು ತೆರೆದು ಇಟ್ಟುಕೊಂಡವರಿಗೆ ಹೊರಜಗತ್ತಿನ ಪರಿಚಯವಾಗುತ್ತದೆ. ಹೊರಜಗತ್ತಿನಲ್ಲಿ ಇರುವ ವಿಚಾರ, ವಿಷಾದ, ವಿನೋದ, ವಿಸ್ಮಯಗಳ, ಸುಖ, ದುಃಖ, ನೋವು ನಲಿವಿನ ಭಾವಗಳ ಸಂಪತ್ತಿನ ಅರಿವಾಗಿ ನಮ್ಮ ಹೃದಯವೂ ವಿಶಾಲವಾಗಲು ಗುಂಡಪ್ಪನವರು 'ಸುಳುದಾರಿಯಳುನಗುವು' ಎನ್ನುವಂತೆ ಸುಲಭವಾದ

ದಾರಿಗಳಾಗುತ್ತವೆ. ವಿಡಂಬನೆಯೆಂದರೆ, ನಾವು ನಮ್ಮ ಹೃದಯಗಳನ್ನು ಮುಚ್ಚಿಕೊಂಡಿದ್ದೇವೆ. ನಾವು ಅದನ್ನು ಕೇವಲ ನಮ್ಮ ಸ್ವಾರ್ಥಸಾಧನೆಗೆ ತೆರೆದುಕೊಳ್ಳುತ್ತೇವೆ, ಪಡೆದುಕೊಳ್ಳುವುದಕ್ಕೆ ಮಾತ್ರ ತೆರೆಯುತ್ತೇವೆ, ಕೊಡುವುದಕ್ಕಲ್ಲ.

ಜಗತ್ತು ವಿಶಾಲವಾಗಿದೆ. ಹೃದಯವನ್ನೂ ವಿಶಾಲವಾಗಿಸಿಕೊಂಡರೆ, ಇಡೀ ಜಗತ್ತನ್ನೇ ಹೃದಯದ್ಲ ತುಂಬಿಕೊಳ್ಳಬಹುದು. ನಾ ಒಲ್ಲೆ! ಎಂದರೆ ಏನು ಮಾಡುವುದು? ನಮ್ಮ ಹೃದಯಗಳು ಹೊರ ಪ್ರಪಂಚಕ್ಕೆ ಮಿಡಿಯುವಂತಹ ಮೆತ್ತನೆಯ ಚೆಂಡುಕಗಳಾಗಬೇಕು. ಸ್ಪಂದನೆಯೇ ಇಲ್ಲದ ಕಲ್ಲಾಗಬಾರದು.

# ನಗುವಳುವು ರಸಪಾಕ 434-441

**ಮುಕ್ತಕ-434**

**ನಗುವೊಂದು ರಸಪಾಕವಳುವೊಂದು ರಸಪಾಕ।**
**ನಗುವಾತ್ಮ ಪರಿಮಳವ ಪಸರಿಸುವ ಕುಸುಮ॥**
**ದುಗುಡವಾತ್ಮವ ಕಡೆದು ಸತ್ವವೆತ್ತುವ ಮಂತು।**
**ಬಗೆದೆರಡನುಂ ಭುಜಿಸು – ಮಂಕುತಿಮ್ಮ॥**

ನಗುವೊಂದುರಸಪಾಕವಳುವೊಂದುರಸಪಾಕ=ನಗುವು+ಒಂದು+ರಸಪಾಕ+ಅಳುವು+ಒಂದು+ರಸಪಾಕ
ನಗುವಾತ್ಮ=ನಗುವ+ಆತ್ಮ, ದುಗುಡವಾತ್ಮವ=ದುಗುಡವು+ಆತ್ಮವ, ಸತ್ವವೆತ್ತುವ=ಸತ್ವವ+ಎತ್ತುವ,
ಬಗೆದೆರಡನುಂ=ಬಗೆದು+ಎರಡುನುಂ,
ಮಂತು=ಮೊಸರ ಕಡೆಯುವ ಕಡೆಗೋಲು, ಭುಜಿಸು=ತಿನ್ನು, ಅನುಭವಿಸು

ಮನಸ್ಸಿನ ಭಾವರಸದಲ್ಲಿ ಉಕ್ಕಿಹರಿಯುವುದೇ ನಗು ಮತ್ತು ಅಳು. ಆತ್ಮದ ಸಂತೋಷದ ಭಾವ ಪರಿಮಳವನ್ನು ಹರಡುವ ಹೂವೇ ನಗು. ಕಷ್ಟಗಳನ್ನು ಅನುಭವಿಸಿದ ಆತ್ಮವನ್ನು ಕಡೆದು ಸತ್ವವೆನ್ನುವ ಬೆಣ್ಣೆಯನ್ನು ತೆಗೆಯುವ ಕಡಗೋಲಂತೆ ಅಳು. ಇವೆರಡರ ಅನುಭವವನ್ನೂ ಪಡೆದು ನೀ ಜೀವಿಸಬೇಕೆಂದು, ಒಂದು ಆದೇಶವನ್ನು ನೀಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಸಂತೋಷವಾದರೆ ನಗು, ದುಃಖವಾದರೆ ಅಳು ಸಹಜವಾಗಿ ವ್ಯಕ್ತವಾಗುವ ಭಾವಗಳು. ಆ ಭಾವಗಳಿಗೆ ಕಾರಣವಾದ ಘಟನೆಗಳ ಪ್ರಭಾವ ತೀವ್ರವಾಗಿದ್ದರೆ, ಆ ಭಾವಗಳು ನಗುವಾಗಿಯೋ ಅಥವಾ ಅಳುವಾಗಿಯೋ ಹೊರಹೊಮ್ಮುತ್ತದೆ. ಅದು ಆತ್ಮದ ಭಾವ. ಅಂತಃಸತ್ವ ಅನುಭವಿಸಿದ ಭಾವವನ್ನು, ಹೂ ತನ್ನ 'ಪರಿಮಳ'ವನ್ನು

ಹೊರಸೂಸುವಂತೆ, ನಗುವಿನ ರೂಪದಲ್ಲಿ ಹೊರಸೂಸುತ್ತದೆ. ಭಾವ ಮಂಥನವಾದಾಗ ದುಃಖವು 'ಅಳು'ವಿನ ರೂಪದಲ್ಲಿ ಹೊರಬರುತ್ತದೆ.

ತೀವ್ರ ಕಲ್ಲಿನ ಮನಸ್ಸು ಇರುವವರ ಹೊರತು ಸಕಲ ಮಾನವರಿಗೂ ಅಳು ಮತ್ತು ನಗುವಿನ ಮೂಲಕ ತಮ್ಮ ಮನಸ್ಸಿನ ಭಾವ ತೀವ್ರತೆಯನ್ನು ಹೊರಗೆಡುಹುವ ಕ್ಷಮತೆಯನ್ನು ಆ ಪರಮಾತ್ಮ ಕರುಣಿಸಿದ್ದಾನೆ. ಕೆಲವರಿಗೆ ನಗುವೋ ಅಳುವೋ ತಕ್ಷಣ ಬರುತ್ತದೆ. ಹಲವರು ತಮಗೆ ಸಂಬಂಧಪಡದ ವಿಷಯವಾದರೂ ಭಾವುಕರಾಗಿ ನಗುತ್ತಾರೆ ಅಥವಾ ಅಳುತ್ತಾರೆ. ಕೆಲವರು ತಮ್ಮ ತರ್ಕದಿಂದ ಅದನ್ನು ತಡೆದುಕೊಳ್ಳುತ್ತಾರೆ. ಹಾಗೆ ತಡೆದುಕೊಳ್ಳಲು ಪ್ರತಿಯೊಬ್ಬರಿಗೂ ಅವರವರದೇ ಕಾರಣವಿರಬಹುದು. ಆದರೆ ಅದು ಆರೋಗ್ಯದ ದೃಷ್ಟಿಯಿಂದ ಒಳ್ಳೆಯದಲ್ಲ.

ನಗು ಪರಮಾತ್ಮ ಮಾನವ ಪ್ರಾಣಿಗೆ ಕೊಟ್ಟ ವರ. ವಿನೋದಪೂರಿತ ಅಥವಾ ವಿನೋದಕಾರಿಕ ನಗುವಿಲ್ಲದ ಜಗತ್ತನ್ನು ಊಹಿಸಿಕೊಳ್ಳಲೂ ಸಾಧ್ಯವಿಲ್ಲ. ಹಾಗಾಗಿ ಗುಂಡಪ್ಪನವರು "ಬಗೆದೆರಡನುಂ ಭುಜಿಸು" ಎಂದು ಹೇಳುವಂತೆ ನಮಗಾದ ಅನುಭವಗಳನ್ನು ಮನಸ್ಸಿನಲ್ಲಿ ಮಥಿಸಿ ನಗುವನ್ನೂ ಅಳುವನ್ನೂ ನಾವು ಹೊರಗೆಡುಹಿದರೆ, ಅದು ಸಹಜತೆ ಮತ್ತು ಮನಸ್ಸಿಗೆ ನಿರಾಳವಾಗುತ್ತದೆ.

**ಮುಕ್ತಕ-435**

**ರಾಮಣೀಯಕದಿ ನಲಿವಕ್ಷಿಯೊಡನಚಲಮನ |**
**ಪ್ರೇಮಮಯಮನದೊಡನೆ ಮೋಹಬಡದಾತ್ಮ ||**
**ಭೀಮಬಲದೊಡನೆ ರಾಮನ ಅಭಯ ನಿಯಮವಿರೆ |**
**ಯಾಮಳ ವರಂಗಳವು - ಮಂಕುತಿಮ್ಮ ||**

ನಲಿವಕ್ತಿಯೊಡನಚಲಮನ=ನಲಿವ+ಅಕ್ತಿಯೊಡನೆ+ಅಚಲ+ಮನ,

ಪ್ರೇಮಮಯಮನದೊಡನೆ=ಪ್ರೇಮಮಯ+ಮನದೊಡನೆ, ಮೋಹಬಡದಾತ್ಮ-ಮೋಹ+ಪಡದ+ಆತ್ಮ,

ನಿಯಮವಿರೆ=ನಿಯಮವು+ಇರೆ.

ರಾಮಣೀಯಕ-ಸುಂದರ, ಅಕ್ಷಿ=ಕಣ್ಣು, ಅಚಲಮನ=ಸ್ಥಿರವಾದ ಮನಸ್ಸು, ಯಾಮಳ=ಎರಡು, ಜೋಡಿ.

ಸುಂದರವಾದ ವಸ್ತುಗಳು ನಮ್ಮ ಕಣ್ಣಿಗೆ ಬಿದ್ದರೂ ಅದನ್ನು ಪಡೆಯಬೇಕೆಂದು ಮನಸ್ಸಾದರೂ ಅದರಲ್ಲಿ ಮೋಹಪರವಶರಾಗದ ಮನೋ ನಿಗ್ರಹವಿರುವುದು, ಭೀಮನಷ್ಟು ಬಲವಿದ್ದರೂ ಮತ್ತನಾಗದೆ ರಾಮನಂತೆ ಆ ಬಲವನ್ನು ಕೇವಲ ಲೋಕಕಲ್ಯಾಣಕ್ಕಾಗಿ ಅಥವಾ ಪರಹಿತಕ್ಕಾಗಿ ಉಪಯೋಗಿಸುವ ನಿಯಮವನ್ನು ನಮಗೆ ನಾವೇ ಹಾಕಿಕೊಂಡರೆ, ಈ ಎರಡೂ ಗುಣಗಳು ನಮಗೆ ಆ ದೈವ ಕೊಟ್ಟ ಎರಡು ವರಗಳಂತೆ ಎಂದು ಮನಸ್ಸಿನ ಭಾವವನ್ನು ಹೇಗೆ ಆತ್ಮಹಿತ ಮತ್ತು ಪರಹಿತಕ್ಕೆ ಉಪಯೋಗಿಸಿಕೊಳ್ಳಬಹುದು ಎಂದು ಸೂಚ್ಯವಾಗಿ ಹೇಳಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

(274)

ಕಗ್ಗ ರಸಧಾರೆ-2 ನಗುವಳುವು ರಸಪಾಕ 434-441

ನಮ್ಮ ಪ್ರತಿ ನಿತ್ಯದ ಆಗುಹೋಗುಗಳಲ್ಲಿ ನಮಗೆ ಎಷ್ಟೋ ಸುಂದರವಾದ ವಸ್ತುಗಳು ಕಣ್ಣಿಗೆ ಬೀಳುತ್ತವೆ. 'ದೃಷ್ಯಮಾಣೆ ಭವೇತ್ ಪ್ರೀತಿಃ' ಎನ್ನುವ ಹಾಗೆ ಕಂಡ ವಸ್ತುವನ್ನೆಲ್ಲ ಪಡೆಯಬೇಕು, ಅನುಭವಿಸಬೇಕು ಎನ್ನುವ ಆಸೆ ಮನಸ್ಸಿನಲ್ಲಿ ಮೂಡುತ್ತದೆ. ನಮಗೆ ಯಾವುದು ಹಿತ ಯಾವುದು ಅಹಿತ ಎನ್ನುವ ಪರಿಜ್ಞಾನ ಅಥವಾ ವಿವೇಚನೆ ಸದಾಕಾಲ ಇರುವುದಿಲ್ಲ. ಅಂತಹ ಪರಿಸ್ಥಿತಿಯಲ್ಲಿ ಮನೋನಿಗ್ರಹವಿದ್ದರೆ, ಸಂಕಷ್ಟಗಳಲ್ಲಿ ಸಿಕ್ಕಿಕೊಳ್ಳುವ ಸಾಧ್ಯತೆಗಳು ಕಡಿಮೆಯಾಗುತ್ತದೆ. ವಸ್ತುವನ್ನು ಪಡೆಯದೇ ಇದ್ದರೆ, ಅದರಲ್ಲಿ ಮೋಹಗೊಳ್ಳುವ ಪ್ರಶ್ನೆ ಬರುವುದಿಲ್ಲ. ಮೋಹವಿಲ್ಲದೆ

ಇದ್ದರೆ ಮನಸ್ಸು ಹಗುರವಾಗಿ, ಮುಕ್ತವಾಗಿ ಇರುತ್ತದೆ. ಬಹಳಷ್ಟು ಜನ ಪರದಾಡುವುದು ಅಥವಾ ಸಾಧನೆ ಮಾಡುವುದು ಇಂತಹ ಸ್ಥಿತಿಗೆ ತಲುಪಲು ಅಲ್ಲವೇ? ಅದು ನಮಗೆ ಕೇವಲ ಮನೋ ನಿಗ್ರಹದಿಂದ ಸಿಕ್ಕರೆ, ಇದು ಒಂದು ವರವೇ ಸರಿ.

ಇನ್ನು ಬಲದ ವಿಷಯಕ್ಕೆ ಬಂದರೆ, ಜನ, ದೇಹ ಮತ್ತು ಹಣದ ಬಲ ಹೆಚ್ಚಿದ್ದರೆ ಮನುಷ್ಯ ಯಾವಾಗಲೂ ಅಹಂಕಾರವನ್ನು ತೋರುವ ಸಾಧ್ಯತೆಗಳು ಅಧಿಕ. ಇವೆಲ್ಲಾ ಅವಶ್ಯಕತೆಗೂಮೀರಿ ಇದ್ದರೂ ಅಹಂಕಾರವನ್ನು ತೋರದೆ ನಮ್ಮಲ್ಲಿರುವ ಬಲವನ್ನು ಪರಹಿತಕ್ಕಾಗಿಯೇ ಉಪಯೋಗಿಸುವ ಮನೋದೃಢತೆ ನಮಗಿದ್ದರೆ ನಮ್ಮ ಸಂಸ್ಕಾರಗಳನ್ನು, ಶೀಲವನ್ನು ಉಳಿಸಿ, ಬೆಳೆಸಿ, ಕಾಪಾಡಿಕೊಳ್ಳಬಹುದು. ರಾಮಾಯಣದಲ್ಲಿ ತನಗೆ ಅಮಿತ ಬಲವಿದ್ದರೂ ರಾಮ "ಈಗಲೂ ಶರಣಾಗು, ನಿನ್ನನ್ನು ಕ್ಷಮಿಸುವೆ" ಎಂದು ರಾವಣನಿಗೆ ಹೇಳಿದಂತೆ, ನಾವೂ ಸಹ ಮನಸ್ಸು ಮತ್ತು ಬಲವನ್ನು ನಿಯಮದಲ್ಲಿಟ್ಟುಕೊಳ್ಳಲಾದರೆ ಅದನ್ನು ದೈವ ಕೊಟ್ಟ ವರವೆಂದೇ ಭಾವಿಸಬೇಕು.

**ಮುಕ್ತಕ - 436**

**ಎದೆ ಮಾರುವೋಗದೊಡೆ, ಕಣ್ ಸೊಬಗನುಂಡರೇಮ್ ।**
**ಹೃದಯ ಮುಯ್ ಕೇಳದೊಡೆ, ನಲವ ಸೂಸಿದರೇಮ್ ॥**
**ಕದಡದಿರ್ದೊಡೆ ಮನವ ತನು ಸೊಗವ ಸವಿದೊಡೇಂ ।**
**ಮುದ ತಾನೇ ತಪ್ಪಲ್ಲ - ಮಂಕುತಿಮ್ಮ ॥**

ಮಾರುವೋಗದೊಡೆ=ಮಾರು+ಹೋಗದೊಡೆ, ಸೊಬಗನುಂಡರೇಮ್=ಸೊಬಗನು+ಉಂಡರೆ+ಎಂ,
ಸೂಸಿದರೇಮ್=ಸೂಸಿದರೆ+ಏಂ, ಕದಡದಿರ್ದೊಡೆ=ಕದಡದೆ+ಇರ್ದೊಡೆ,
ಸವಿದೊಡೇಂ = ಸವಿದೊಡೆ+ಏಂ.
ಎದೆ=ಹೃದಯ, ಮುಯ್=ಪ್ರತಿಸ್ಪಂದನ, ನಲವ=ಒಲವ, ಮುದ ಪ್ರೀತಿ, ಪ್ರೇಮ, ಹಿತ.

ಸುಖಪಡುವುದು ತಪ್ಪಲ್ಲ. ಒಂದು ಸುಂದರ ವಸ್ತುವನ್ನು ನೋಡಿದಾಗ ಹೃದಯ ತದನುಸಾರವಾಗಿ ಮಿಡಿಯದಿದ್ದರೆ ಏನು ಪ್ರಯೋಜನ? ಪ್ರೀತಿ ತೋರಿದ ಹೃದಯ ಮರು ಪ್ರೀತಿಯನ್ನು ಅಪೇಕ್ಷಿಸದಿದ್ದರೆ ಏನು ಪ್ರಯೋಜನ? ದೇಹವು ಏನನ್ನಾದರೂ ಪಡೆದು ಸಂತೋಷಪಟ್ಟಾಗ ಮನಸ್ಸೂ ಸಹ ಆನಂದಿಸಿ ಸಂತೋಷಪಡದಿದ್ದರೆ ಏನು ಪ್ರಯೋಜನ? ಹೀಗೆ ಮನಸ್ಸು, ಹೃದಯ ಮತ್ತು ದೇಹಗಳ ಪರಸ್ಪರ ಸ್ಪಂದನೆಗಳ ಬಗ್ಗೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ ಪ್ರಸ್ತಾಪ ಮಾಡಿದ್ದಾರೆ.

ಯಾರಿಗಾದರೂ ಪಾಷಾಣ ಹೃದಯವಿದ್ದರೆ ಸೊಬಗನ್ನು ನೋಡಿಯೂ ಸಹ ಮಿಡಿಯುವುದಿಲ್ಲ. ಮಿಡಿದರೂ ತೋರಗೊಡುವುದಿಲ್ಲ. ಆದರೆ ನೋಡಿದ ಬಹುಮಂದಿ ಸ್ಪಂದಿಸುತ್ತಾರೆ. ತಮಗಾದ ಸಂತೋಷವನ್ನು ವ್ಯಕ್ತಪಡಿಸುತ್ತಾರೆ. ನಾವು ಒಬ್ಬರನ್ನು ಇಷ್ಟಪಡುತ್ತೇವೆ ಪ್ರೀತಿಸುತ್ತೇವೆ, ಒಲವು ತೋರುತ್ತೇವೆ. ಹಾಗೆ ತೋರಿದ ಪ್ರೀತಿಗೆ ಅವರಿಂದ ಪ್ರತಿ ಪ್ರೀತಿಯನ್ನು ಬಯಸುವುದು ಹೃದಯದ ಸಹಜ ಪ್ರವೃತ್ತಿ. ಹಾಗೆ ಬಯಸದೆ ಇದ್ದರೆ ಅದು ತೀರ ಅಸಹಜತೆ, ನಿರ್ಲಿಪ್ತತೆಯ ಪರಮಾವಧಿ.

ನಾವು ಊಟ ಮಾಡುತ್ತೇವೆ, ತಿನ್ನುವುದನ್ನು ಸುಮ್ಮನೆ ಬಾಯಲ್ಲಿ ಹಾಕಿಕೊಂಡು ಜಗಿದು (ಪ್ರಾಣಿಗಳಂತೆ) ನುಂಗಿಬಿಟ್ಟರೆ ಏನು ಪ್ರಯೋಜನ? ರುಚಿಯನ್ನು ಸವಿಯಬೇಕು. ಮನದಲ್ಲಿ ಹಿಂದೆ ತಿಂದ ಅದೇ ರೀತಿಯ ವಸ್ತುವಿನೊಂದಿಗೆ ಹೋಲಿಕೆಯಾಗಬೇಕು, ರುಚಿಯ ಘಮದ ಹೊಲಿಕೆಯಾಗಬೇಕು ಮತ್ತದೇ ರೀತಿ ಮಾಡುವ ಯೋಜನೆಯಾಗಬೇಕು, ಮಾಡಿದವರ ಕೈವಾಸಿಯ ಹೊಗಳಬೇಕು, ಉಣಬಡಿಸಿದವರು ಮತ್ತು ತಿಂದವರು ಇಬ್ಬರೂ ತೃಪ್ತರಾಗಬೇಕು. ಆಗ ಒಂದು ಸಾರ್ಥಕತೆ.

ನೋಡಿದ ನೋಟ, ಅನುಭವಿಸಿದ ವಸ್ತು, ಪಡೆದುಕೊಂಡ ಪ್ರೀತಿ-ಪ್ರೇಮಗಳು, ಕೇಳಿದ ಮಾತು-ದನಿ-ಧ್ವನಿ ಎಲ್ಲವೂ ನಮ್ಮ ಮನದೊಳಕ್ಕೆ ನುಗ್ಗಿ, ನಮಗೆ ಆನಂದ, ದುಃಖ, ಬೇಸರ, ಒಲವು ಮುಂತಾದ ಅನುಭೂತಿಗಳನ್ನು ಸೃಷ್ಟಿಮಾಡದಿದ್ದಲ್ಲಿ ಅವುಗಳಿಗೆಲ್ಲ ಏನು ಬೆಲೆ, ಏನು ಪ್ರಯೋಜನ? ಹಾಗಾಗಿ ಮನಸ್ಸಿನಲ್ಲಿ ಅಂತಹ ಭಾವನೆಗಳು ಬರಬೇಕು, ಸಂತೋಷಪಡಬೇಕು. ಭಾವದ ಅಭಾವವೂ ಇರಬಾರದು, ಅತಿ ಭಾವುಕತೆಯೂ ಇರಬಾರದು. ಸಹಜ ಪ್ರವೃತ್ತಿಯೇ ಸುಖ ತರುವುದು.

**ಮುಕ್ತಕ - 437 ಶಕ್ತಿ ಕರಣಕ್ಕಿರಲಿ, ರಸ ಸಂಗ್ರಹಣ ಶಕ್ತಿ।**

ಯುಕ್ತವದರೊಡನಿರಲಿ ಭೋಗಾದಿ ವಿರಕ್ತಿ ||
ಶಕ್ತಿ ತನ್ನೊಳಗಿದ್ದು ರಕ್ತಮನನಾಗದನೆ |
ಉತ್ತಮೋತ್ತಮ ಸುಕೃತಿ - ಮಂಕುತಿಮ್ಮ ||

ಕರಣಕ್ಕಿರಲಿ=ಕರಣಕ್ಕೆ+ಇರಲಿ, ಯುಕ್ತವದರೊಡನಿರಲಿ+ಯುಕ್ತವು+ಅದರೊಡನೆ+ಇರಲಿ,
ರಕ್ತಮನನಾಗದನೆ=ರಕ್ತ+ಮನನ್=ಆಗದನೆ
ಕರಣ=ಅಂಗಾಂಗಗಳು, ರಸ=ಸ್ವಾರಸ್ಯ, ಸಂಗ್ರಹಣ=ಪಡೆದುಕೊಳ್ಳುವಿಕೆ, ಯುಕ್ತ=ಸಹಿತ, ವಿರಕ್ತಿ=ವೈರಾಗ್ಯ,
ರಕ್ತ=ಆಸಕ್ತಿ ಇರುವವನು, ಅನುರಕ್ತ, ಸುಕೃತಿ=ಉತ್ತಮವಾದ ಕೃತಿ.

ದೇಹದ ಅಂಗಾಂಗಗಳಲ್ಲಿ ಪಟುತ್ವವಿರಬೇಕು, ಜೀವನದ ಸ್ವಾರಸ್ಯವನ್ನು ಗ್ರಹಿಸುವ ಶಕ್ತಿಯಿರಬೇಕು. ಆ ಸ್ವಾರಸ್ಯದಲ್ಲಿ ಆಸಕ್ತಿಯಿದ್ದರೂ ಅದನ್ನು ಭೋಗಿಸುವುದರಲ್ಲಿ ಆಸಕ್ತಿಯಿಲ್ಲದೆ, ವಿರಕ್ತರಾಗಿರಬೇಕು. ವ್ಯಕ್ತಿ, ವಸ್ತು, ವಿಷಯಗಳನ್ನು ನೋಡುವ, ಸ್ವಾರಸ್ಯವನ್ನು ಗ್ರಹಿಸುವ, ಅನುಭವಿಸುವ ಶಕ್ತಿ ಇದ್ದಾಗ್ಯೂ, ಸ್ವಯಂ ಪ್ರೇರಣೆಯಿಂದ ನಿಗ್ರಹವನ್ನು ಪಾಲಿಸಲು ಆದರೆ, ಆದೇ ಉತ್ತಮೋತ್ತಮವಾದ ಮಾರ್ಗವೆಂದು, ವಿರಕ್ತಿಯ ನಿಜಸ್ವರೂಪವನ್ನು ಅನಾವರಣ ಮಾಡಿದ್ದಾರೆ, ಮಾನ್ಯ ಗುಂಡಪ್ಪನವರು, ಈ ಮುಕ್ತಕದಲ್ಲಿ.





ನಮ್ಮ ಜೀವನದ ಅವಧಿಯಲ್ಲಿ ಎಷ್ಟೋ ತಿನ್ನುವ, ಉಡುವ, ತೊಡುವ ಮುಂತಾದ ವಸ್ತುಗಳನ್ನು ನೋಡುತ್ತೇವೆ, ಹಲವಾರು ರೀತಿಯ ವ್ಯಕ್ತಿಗಳೊಂದಿಗೆ ಸಂಗವನ್ನು ಬೆಳೆಸುತ್ತೇವೆ ಮತ್ತು ಹಲವಾರು ವಿಷಯಗಳನ್ನು ಕೇಳುತ್ತೇವೆ. ನಮ್ಮ ಕ್ಷಮತೆಗೆ ಅನುಸಾರವಾಗಿ ನಾವು ಅವುಗಳನ್ನು ಅನುಭವಿಸಬಹುದು. ಅನುಭವಿಸುವ ಕ್ಷಮತೆ ಇದ್ದರೂ ಹಲವು ನಮ್ಮ ಪರಿಧಿಯೊಳಕ್ಕೆ ಬಾರದೆ ಇರಬಹುದು. ಆದರೆ ವಸ್ತು ನಮ್ಮೆದುರಿಗೆ ಇದ್ದು ಅದನ್ನು ಅನುಭವಿಸುವ ಶಕ್ತಿ ನಮ್ಮಲ್ಲಿ

ಇಲ್ಲದೆ ಇದ್ದರೆ, ಏನು ಪ್ರಯೋಜನ. ಹಾಗಾಗಿ ನಾವು ಶಕ್ತಿವಂತರಾಗಿರಬೇಕು, ಅನುಭವಿಸುವ ಸಾಮರ್ಥ್ಯ ಇಟ್ಟುಕೊಳ್ಳಬೇಕು, ಆದರೆ ಯುಕ್ತಾಯುಕ್ತತೆಯ ವಿವೇಚನೆ ಇರಬೇಕು.

ಭಾವುಕತೆಯ ಸುಳಿಗೆ ಸಿಕ್ಕಿ ನಾವು ವಸ್ತು ವಿಷಯ ಅಥವಾ ವ್ಯಕ್ತಿಗಳಿಗೆ ಅಂಟಿಕೊಳ್ಳುತ್ತೇವೆ, ಅಂಟಿಕೊಂಡಾಗ ಅತೀ ಸಂತೋಷಪಡುತ್ತೇವೆ ಅಂಟು ಅಥವಾ ನಂಟು ಸಡಿಲವಾದರೆ ದುಃಖಿಸುತ್ತೇವೆ, ಗೋಳಾಡುತ್ತೇವೆ. ನಮಗೆ ದುಃಖ ಇರಬಾರದು ಎಂದರೆ ಅಂಟಿಕೊಳ್ಳಬಾರದು. ಅಂಟಿಕೊಳ್ಳದೆ ವಸ್ತುವಿನ ಸಂಸರ್ಗದಲ್ಲಿರುವುದು ಹೇಗೆಂದರೆ, ಮಾನ್ಯ ಗುಂಡಪ್ಪನವರು ಹೇಳುವಂತೆ 'ಶಕ್ತಿ ತನ್ನೊಳಗಿದ್ದು ರಕ್ತಮನನಾಗದನೆ'. ಶಕ್ತಿ ಮತ್ತು ರಕ್ತಿ ಎರಡೂ ಇದ್ದಾಗ್ಯೂ ವಿರಕ್ತರಾಗಿರಬೇಕು. ವಿಷಯವನ್ನು ಗ್ರಹಿಸುವ ಶಕ್ತಿಯನ್ನಿಟ್ಟುಕೊಳ್ಳಬೇಕು ಆದರೆ ಅಂಟಿಕೊಳ್ಳಬಾರದು. ಆ ರೀತಿ ನಾವು ನಮ್ಮ ಮನಸ್ಸು ಬುದ್ಧಿಗಳನ್ನು ತಿದ್ದಿಕೊಂಡರೆ ಲಾಭಾಲಾಭಗಳಲ್ಲಿಯೂ, ಜಯಾಪಜಯಗಳಲ್ಲಿಯೂ, ಸುಖ ಮತ್ತು ದುಃಖಗಳಲ್ಲಿಯೂ ಸಾಕ್ಷೀ ಭಾವದಿಂದ ಇರಬಹುದು. ಅಂತಹ ಸ್ಥಿತಿಗೆ ತಲುಪಿದವರಿಗೆ ವಿರಕ್ತ ಭಾವ ಸಿದ್ಧಿಸಿ ಸುಕೃತರೆನಿಸಿಕೊಳ್ಳುತ್ತಾರೆ.

ನಾವು ನಮ್ಮನ್ನೇ ಪರೀಕ್ಷಿಸಿ ನೋಡಿಕೊಳ್ಳಬೇಕು, ಉತ್ತಮರಾಗಬೇಕು ಅಂತಹ ಪ್ರಯತ್ನವನ್ನು ನಾವೂ ಸಹ ಮಾಡಬಹುದಲ್ಲವೇ?

**ಮುಕ್ತಕ-438**

**ತಳಿರ ನಸುಗೆಂಪು, ಬಳುಕಲೆಯ ಹಸುರಿನ ಸೊಂಪು |**
**ತಿಳಿಮನದ ಯುವಜನದ ನಗುಗಣ್ಣ ಹೊಳಪು ||**
**ಬೆಳೆವರಿವು ಮಗುದುಟಿಯಿನುಣಿಸುವ ನುಡಿಚಿಗುರು |**
**ಇಳೆಯೊಳವನೊಲ್ಲನಾರ್ - ಮಂಕುತಿಮ್ಮ ||**

ಬಳುಕಲೆಯ=ಬಳುಕು+ಎಲೆಯ, ಬೆಳೆವರಿವು=ಬೆಳೆವ+ಅರಿವು,
ಮಗುದುಟಿಯಿನುಣಿಸುವ=ಮಗು+ತುಟಿಯಿನ್+ಉಣ್ಣಿಸುವ,
ಇಳೆಯೊಳಿವನೊಲ್ಲನಾರ್=ಇಳೆಯೊಳು+ಇವನ್ನು+ಒಲ್ಲನಾರ್.

ಬಳುಕಲೆಯ=ತೂಗಾಡುವ ಎಲೆಗಳು, ತಿಳಿಮನದ=ಮುಗ್ಧ ಮನಸ್ಸಿನ, ಬೆಳೆವರಿವು=ಬೆಳೆಯುವ ಬುದ್ಧಿ,
ಉಣ್ಣಿಸುವ=ಹೊರಸೂಸುವ, ನುಡಿಚಿಗುರು=ತೊದಲು ಮಾತು, ಇಳೆಯೊಳು=ಭೂಮಿಯಲ್ಲಿ,

ಒಲ್ಲನಾರ್=ಬೇಡವೆನ್ನುವವರಾರು.

ಕೆಂಪಾದ ಚಿಗುರೆಲೆ, ಹಸಿರಾದ ಹೊಸ ಎಲೆಗಳ ಬಳ್ಳಿಗಳು, ಮುಗ್ಧ ಮನಸ್ಸಿನ ಎಳೆಯರ ಆಶಾಭಾವನೆಯ ಕಣ್ಣ ಹೊಳಪು, ಬೆಳೆಯುವ ಮಕ್ಕಳು ಮಾತು ಕಲಿಯುವಾಗ ಆಡುವ ಮೊದಲ ತೊದಲು ನುಡಿಗಳು,





ಇವೆಲ್ಲವನ್ನೂ ಬೇಡವೆನ್ನುವ ಮತ್ತು ನೋಡಿ, ಕೇಳಿ ಆನಂದಿಸದ ಮನುಷ್ಯ ಈ ಭೂಮಿಯ ಮೇಲೆ ಇರಲು ಸಾಧ್ಯವೇ? ಎಂದು ಒಂದು ಪ್ರಶ್ನೆ ಕೇಳುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಮನಸ್ಸನ್ನು ಕೊಟ್ಟ ಆ ಪರಮಾತ್ಮ ಆ ಮನಸ್ಸನ್ನು ಸಂತೋಷದಿಂದಿಡಲು ಹಲವಾರು ವಸ್ತುಗಳನ್ನು ಸೃಷ್ಟಿಸಿದ್ದಾನೆ. ಅವುಗಳಲ್ಲಿ ಹೊಸ ಚಿಗುರು, ಬಳುಕುವ ಬಳ್ಳಿಗಳು, ಆ ಬಳ್ಳಿಗಳು ಹೊತ್ತ ತಳಿರೆಲೆಗಳು, ಹೂಗಳು, ಆ ಹೂಗಳ ಸಾವಿರಾರು ಬಣ್ಣಗಳು, ಹಲವಿಧವಾದ ರುಚಿಗಳನ್ನು ಹೊತ್ತ ಹಣ್ಣುಗಳು. ನಿಸರ್ಗವೆಲ್ಲ ಮಾನವನಿಗೆ ಪೂರಕವಾಗೇ ಇದೆಯಲ್ಲ!

ಅಷ್ಟೇ ಅಲ್ಲ ಪ್ರಾಣಿ ಸಂಕುಲದಲ್ಲೂ ಸಹ, ಎಲ್ಲ ರೀತಿಯ ಪುಟ್ಟ ಮಕ್ಕಳು, ಅಂದರೆ ಮಾನವನ ಮಗು, ನಾಯಿ ಮರಿ, ಹಂದಿ ಮರಿ, ಗುಬ್ಬಚ್ಚಿ ಮರಿ ಇತ್ಯಾದಿ, ಎಲ್ಲವೂ ಎಷ್ಟೊಂದು ಸುಂದರವಾಗಿ ಮನಕ್ಕೆ ಮುದ ನೀಡುತ್ತದಲ್ಲವೇ? ಅವುಗಳ ಆಟ ಪಾಠಗಳು, ಮುಗ್ಧ ಮನಸ್ಸಿನ ತೊದಲು ನುಡಿಗಳು, ಕಪಟವಿಲ್ಲದೆ ಕೇಳುವ ಪ್ರಶ್ನೆಗಳು, ಯುವಜನಕ್ಕೆ ಜಗತ್ತಿನಲ್ಲಿ ಏನನ್ನೋ ಸಾಧಿಸಿಬಿಡುವೆವೆಂಬ ಉತ್ಸಾಹದ ಹೊಳಪು, ಹೀಗೆ ಸಾವಿರಾರು ವಿಷಯಗಳು ನಮ್ಮ ಮನಸ್ಸಿಗೆ ಉತ್ಸಾಹ ಮತ್ತು ಉಲ್ಲಾಸವನ್ನು ನೀಡುತ್ತವೆ. ಇದನ್ನಾರಾದರೂ ಬೇಡವೆನ್ನುತ್ತಾರೆಯೇ? ಎಂಬಂತೆ 'ಇಳೆಯೊಳಿವನೊಲ್ಲನಾರ್' ಎಂದು ಕೇಳುತ್ತಾರೆ ಮಾನ್ಯ ಗುಂಡಪ್ಪನವರು.

ಹಾಗೆ ಜಗತ್ತಿನಲ್ಲಿ ಮನಕ್ಕೆ ಆನಂದವೀಯುವ ಇಂತಹ ಸುಂದರವಾದ ವಸ್ತುಗಳನ್ನು ನೋಡಿ ಸಂತಸಪಡಲಾರೆ ಎನ್ನುವ ಅರಸಿಕ ಶಿಖಾಮಣಿಗಳಿಗೆ ಏನು ಹೇಳುವುದು. ನಗಲಾರೆ ಅಳುವೇ ಎಂದರೆ ಅದು ನಿನ್ನ ಕರ್ಮ, ಎಂದು ಅವರನ್ನು ಬಿಟ್ಟು, ನಮ್ಮ ಮನಸ್ಸನ್ನು ಅಂತಹ ಸಣ್ಣ ಸಣ್ಣ ಆನಂದಗಳಿಗೆ ಸದಾ ತೆರೆದಿಟ್ಟುಕೊಳ್ಳುವುದೇ ಉತ್ತಮ.

**ಮುಕ್ತಕ-439** **ಏಳಿಸುವುದೊಂದು ಹೊರಸುಳಿವೆನ್ನ ಹೃದಯದಲಿ |**
**ಗಾಳಿಸುಂಟರೆಯನದು ಹರಣಗಳ ಕುಲುಕಿ ||**
**ಬಾಳನಲ್ಲಾಡಿಸುದು ಬೇರಿಂದ ತುದಿಗೆ |**
**ಧೂಳದೊರಳೀ ಜನ್ಮ - ಮಂಕುತಿಮ್ಮ ||**

ಏಳಿಸುವುದೊಂದು=ಏಳಿಸುವುದು+ಒಂದು, ಹೊರಸುಳಿವೆನ್ನ=ಹೊರಸುಳಿವು+ಎನ್ನ,
ಗಾಳಿಸುಂಟರೆಯನದು=ಗಾಳಿ+ಸುಂಟರೆಯನು+ಅದು, ಬಾಳನಲ್ಲಾಡಿಸುದು=ಬಾಳನು+ಅಲ್ಲಾಡಿಸುದು,
ಧೂಳದೊರಳೀ ಧೂಳು+ಅದರೊಳು+ಈ.
ಹೊರಸುಳಿವೆನ್ನ=ಹೊರಪ್ರಪಂಚದ ಸಮಸ್ಯಾ ಸುಳಿಗಳು, ಗಾಳಿಸುಂಟರೆಯನು=ಸುತ್ತಿ ಸುತ್ತಿ ಬರುವ ಗಾಳಿ,
ಹರಣ=ಶಕ್ತಿ, ಧೂಳು=ಕಣ





ಹೊರಗೆ ಸುಳಿದಾಡುವ ಯಾವುದೋ ವಿಚಾರ ನಮ್ಮ ಹೃದಯವನ್ನು ಹೊಕ್ಕು ನಮ್ಮ ಮನಸ್ಸು ಬುದ್ಧಿಗಳನ್ನು ಆವರಿಸಿ, ಕಲಕಿ ನಮ್ಮ ಇಡೀ ಜೀವನವನ್ನು ಮೇಲಿಂದ ಕೆಳಗೆ, ಮೊದಲಿಂದ ಅಂತ್ಯದವರೆಗೆ ಅಲ್ಲಾಡಿಸಿ, ತನ್ನ ಅಗಾಧತೆಯನ್ನು ತೋರಿ ನಮ್ಮ ಶಕ್ತಿಯನ್ನು ಕುಲಕಿ, ನಮ್ಮ ಬದುಕನ್ನು ಧೂಳೆಬ್ಬಿಸುತ್ತದೆ ಎಂದು ಬದುಕಿನ ವಾಸ್ತವ ಚಿತ್ರಣವನ್ನು ನಮ್ಮ ಮುಂದೆ ಇಟ್ಟಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ನಮ್ಮ ಬದುಕಿನಲ್ಲಿ ನಾವೊಂದು ಬಿಂದು ಎಂದು ಇಟ್ಟುಕೊಂಡರೆ, ನಮ್ಮ ಮೇಲೆ ಸರ್ವತೋಮುಖವಾದ ವಿಚಾರಗಳ, ವಿಷಯಗಳ ದಾಳಿಯಾಗುತ್ತಿರುತ್ತದೆ. ನಮ್ಮ ಅಪೇಕ್ಷೆ ಮತ್ತು ಪ್ರಮೇಯವಿಲ್ಲದೆ ಅವ್ಯಾಹತವಾಗಿ ಶಬ್ದಗಳು, ಮುಖಗಳು, ವಿಷಯಗಳು ವಿಚಾರಗಳು ನಮ್ಮ ಒಳಕ್ಕೆ ತೂರಿಕೊಂಡು ಬರುತ್ತವೆ ಮತ್ತು ನಮ್ಮ ಮೇಲೆ ತಮ್ಮ ಪ್ರಭಾವವನ್ನು ಬೀರುತ್ತವೆ. ಅಂತಹ ಪ್ರಭಾವದಲ್ಲಿ ಕೆಲವನ್ನು ಸ್ವೀಕರಿಸಿ, ಕೆಲವನ್ನು ತಿರಸ್ಕರಿಸಿ, ಒಳಗೆ ಬಂದ ಕೆಲವನ್ನು ಹೊರಹಾಕಿ, ಕೆಲವನ್ನು ಇಟ್ಟುಕೊಂಡು ಹಲವನ್ನು ಬೆಳೆಸಿಕೊಳ್ಳುತ್ತಾ, ನಮ್ಮ ಇಡೀ ಜೀವನ ರೂಪುಗೊಳ್ಳುತ್ತಾ ಹೋಗುತ್ತದೆ.

ಬಿರುಗಾಳಿಗೆ ಒಡ್ಡಿನಿಂತ ಮರದಂತೆ ನಾವೂ ಸಹ ನಮ್ಮ ಹೊರಗಿನಿಂದ ಆಗುವ ದಾಳಿಗೆ ಒಡ್ಡಿ ನಿಲ್ಲುತ್ತೇವೆ. ಹೇಗೆ ಆ ಮರ ಬೀಸುವ ಗಾಳಿಯಿಂದ, ಸುಡುವ ಬಿಸಿಲಿನಿಂದ, ಸುರಿಯುವ ಮಳೆಯಿಂದ, ಬೇರುಬಿಟ್ಟ ಇಳೆಯಿಂದ ಪ್ರಭಾವಿತಗೊಂಡು ತಾನು ರೂಪುಗೊಳ್ಳುತ್ತದೋ ಹಾಗೆಯೇ ನಾವೂ ಸಹ ನಮ್ಮ ಮನೆ, ಸಮಾಜ, ಮಿತ್ರರು, ಹಿರಿಯರು, ಕಿರಿಯರು, ಪರಿಚಿತರು, ಅಪರಿಚಿತರು ಹೀಗೆ ಯಾವುದೇ ರೀತಿಯಿಂದ ನಮ್ಮ ಸಂಪರ್ಕಕ್ಕೆ ಬರುವ ಎಲ್ಲರಿಂದಲೂ ಪ್ರಭಾವಿತರಾಗುತ್ತೇವೆ. ಏನೋ ಆಗಬೇಕಾದವರು ಏನೋ ಆಗಿಬಿಡುತ್ತೇವೆ. ಎಷ್ಟೋ ಬಾರಿ ಮೂಲ ಗುಣ ಕಳೆದುಹೋಗಿ ಪ್ರಭಾವಿತ ಗುಣಗಳೇ ಹೆಚ್ಚಾಗಿ ಒಳ್ಳೆಯ ಸಂಗೀತಗಾರನಾಗಬೇಕೆಂದಿದ್ದವನು ಪೋಲಿಸ್ ಕನಿಷ್ಠಬಿಲ್ಲೆಯಾಗಿ ಬಿಡುತ್ತಾನೆ ಅಥವಾ ವೇದ ಪಂಡಿತನಾಗಬೇಕು ಎಂದಿದ್ದವನು, ನ್ಯಾಯವಾದಿಯಾಗುತ್ತಾನೆ. ಹಾಗಾಗಿ ನಾವು ಏನಾಗಬೇಕು ಅಥವಾ ಏನಾಗುತ್ತೇವೆ ಎನ್ನುವುದು ನಮ್ಮ ಕೈಯಲ್ಲಿ ಇಲ್ಲವೆಂಬುದು ಶತಃಸಿದ್ಧ.

"ಧೂಳದೊರಳೀ ಜನ್ಮ" ಎಂದು ಗುಂಡಪ್ಪನವರು ಹೇಳುವಂತೆ ನಾವು ಹೊರ ಸುಳಿಯಲ್ಲಿ ಸಿಕ್ಕ ಧೂಳ ಕಣದಂತೆ. ಆದರೆ ಸಕಲ ಚರಾಚರಗಳೂ ಇದೇ ಸ್ಥಿತಿಯಲ್ಲಿದ್ದಾಗ್ಯೂ, ಮಾನವರಾದ ನಮಗೆ ವಿವೇಚನೆ, ವಿವೇಕ ಮತ್ತು ವಿಷಮ ಸ್ಥಿತಿಯಲ್ಲಿಯೂ ನಮ್ಮನ್ನು ನಾವು ರೂಪಿಸಿಕೊಳ್ಳುವ ಕ್ಷಮತೆಯನ್ನು ಪರಮಾತ್ಮ ಸ್ವಲ್ಪ ಅಧಿಕವಾಗೇ ಕೊಟ್ಟಿದ್ದಾನೆ. ಅದನ್ನುಪಯೋಗಿಸಿಕೊಂಡು ನಮ್ಮ ಬಾಳನ್ನು ಹಸನಾಗಿಸಿಕೊಳ್ಳಬಹುದಲ್ಲವೇ?

**ಮುಕ್ತಕ-440** **ಹೊರಗೆ ಹೊಳೆವೊಂದು ಹೊಳಪಿನ ಕಿರಣವೆನ್ನೆದೆಯೋ-।**
**ಳುರಿಯನೆಬ್ಬಿಸಿ ಹೊಗೆಯನರಚಿ ಕಂಗಳಿಗೆ ॥**
**ಕೆರಳಿಸುವು ಕರಣಗಳ, ಮರಳಿಪುದು ಹರಣಗಳ।**
**ಹೊರಮೋಹವೊಳದಾಹ - ಮಂಕುತಿಮ್ಮ ॥**

ಹೊಳೆವೊಂದು=ಹೊಳೆವ+ಒಂದು,

ಕಿರಣವೆನ್ನೆದೆಯೊಳುರಿಯನೆಬ್ಬಿಸಿ=ಕಿರಣವು+ಎನ್ನ+ಎದೆಯೊಳು+ಉರಿಯನು+ಎಬ್ಬಿಸಿ,

ಹೊಗೆಯನೆರಚಿ = ಹೊಗೆಯನು+ಎರಚಿ, ಹೊರಮೋಹವೊಳದಾಹ=ಹೊರಮೋಹವು+ಒಳದಾಹವು.

ಕರಣ=ಇಂದ್ರಿಯಗಳು,

ಹೊರಗಿನ ಆಕರ್ಷಣೆಯ ಹೊಳಪುಗಳು ನಮ್ಮ ಹೃದಯದಲ್ಲಿ ಆಸೆಯನ್ನು ಹುಟ್ಟಿಸಿ ನಮ್ಮ ಇಂದ್ರಿಯಗಳನ್ನು ಕೆರಳಿಸಿ ನಮಗೆ ಶಕ್ತಿಯನ್ನು ನೀಡುತ್ತವೆ. ಹೊರಗಿನ ವಸ್ತುಗಳ ಮೋಹ ಮತ್ತು ಪಡೆದುಕೊಳ್ಳುವ ಒಳಗಿನ ದಾಹದ ಸಹಜ ಪ್ರಕ್ರಿಯೆಯನ್ನು, ಈ ಮುಕ್ತಕದಲ್ಲಿ ಸೂಚಿಸಿದ್ದಾರೆ ಮಾನ್ಯ ಗುಂಡಪ್ಪನವರು.

ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳಿಂದಾದ ಹೊರ ಹೊಳಪುಗಳು, ನಮ್ಮ ಇಂದ್ರಿಯಗಳಾದ ಕಿವಿ, ಚರ್ಮ, ಕಣ್ಣು, ನಾಲಿಗೆ ಮತ್ತು ಮೂಗುಗಳ ಮೂಲಕ ನಮಗೆ ಪರಿಚಯವಾಗುತ್ತದೆ, ನಮ್ಮಲ್ಲಿ ಅವುಗಳನ್ನು ನೋಡಬೇಕೆಂಬ, ಅಸ್ವಾದಿಸಬೇಕೆಂಬ, ಮೂಸಬೇಕೆಂಬ, ಪಡೆಯಬೇಕೆಂಬ, ಅನುಭವಿಸಬೇಕೆಂಬ ಆಸೆಗಳನ್ನು ಹುಟ್ಟಿಸಿ, ಹೊರಗಿರುವುದನ್ನು ಒಳಗೆ ತಳ್ಳುತ್ತದೆ. ಒಳಕ್ಕೆ ಬಂದ ಅವು ನಮ್ಮ ಒಳ ಶಕ್ತಿಯನ್ನು ಉದ್ದೀಪಿಸಿ ಈ ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳನ್ನು ಅನುಭವಿಸುವಂತೆ ಮಾಡಿ ತಮ್ಮ ಪ್ರಭಾವವನ್ನು ನಮ್ಮ ಮೇಲೆ ಬೀರುತ್ತದೆ.

ಪ್ರತಿನಿತ್ಯ ನಮ್ಮ ಜೀವನದಲ್ಲಿ ನಡೆಯುವ ಎಲ್ಲಕ್ಕೂ ಹೊರಗಿನ ಹೊಳಪುಗಳು ಎಂದರೆ ಆಕರ್ಷಣೆಗಳೇ ಕಾರಣ. ಅವು ತಮ್ಮ ವಿಶೇಷತೆಗಳನ್ನು ನಮಗೆ ತೋರುತ್ತಾ ನಮ್ಮ ಮೇಲೆ ಪ್ರಭಾವ ಬೀರುತ್ತಾ, ನಮ್ಮ ಒಳಗನ್ನು ತುಂಬುತ್ತವೆ. ಹಾಗೆ ತುಂಬಿದ ಅವುಗಳು ನಮ್ಮನ್ನು ಪ್ರಭಾವಿತಗೊಳಿಸುತ್ತಾ, ನಮ್ಮನ್ನು ರೂಪಿಸುತ್ತವೆ. ನಮ್ಮ ಇಂದ್ರಿಯಗಳನ್ನು ಕೆರಳಿಸುತ್ತಾ ನಮ್ಮ ಶಕ್ತಿಯನ್ನು ಹೆಚ್ಚಿಸುವುದೋ ಅಥವಾ ಕುಂದಿಸುವುದೋ ಮಾಡುತ್ತದೆ. ನಾವು

ಇಷ್ಟಪಡಲಿ ಬಿಡಲಿ ವಸ್ತು ವಿಷಯಗಳು ಮತ್ತು ವ್ಯಕ್ತಿಗಳು ನಮಗೆ ಕಾಣುತ್ತವೆ, ಕಂಡ ವಸ್ತುಗಳ ವಿಶ್ಲೇಷಣೆ ಮನದಲ್ಲಿ ನಡೆಯುತ್ತದೆ. ಬೇಕು ಬೇಡಗಳ ಮಂಥನ ನಡೆಯುತ್ತದೆ. ಮೋಹ ಮತ್ತು ವಿವೇಕಗಳ ನಡುವೆ ಯುದ್ಧವಾಗುತ್ತದೆ. ಯಾವುದರ ಕೈ ಮೇಲಾಗುತ್ತದೋ ಅದರ ವಿಜಯ ಮತ್ತು ಅದರ ಪರಿಣಾಮ ನಮ್ಮ ಮೇಲೆ.

"ಭದ್ರಂ ಕರ್ಣೇಭಿಃ ಶೃಣುಯಾಮ ದೇವಾಃ ಭದ್ರಂ ಪಶ್ಯೇಮಾಕ್ಷಭಿರ್ಯಜತ್ರಾಃ" ಎಂಬ ಆಶಯವನ್ನು ಬೋಧಿಸುವ ವೇದವು ಮನುಷ್ಯನನ್ನು ಒಳ್ಳೆಯದನ್ನೇ ನೋಡುವ ಮತ್ತು ಕೇಳುವುದಕ್ಕೆ ಪ್ರೇರೇಪಿಸುತ್ತದೆ.





ಹಾಗಾಗಿ ನಾವು ಸಚೇತರಾಗಿ ಅಂತರ್ಮುಖಿಗಳಾಗಿ ಹೊರ ಮೋಹಗಳು ಮತ್ತು ಒಳದಾಹಗಳಿಂದ ನಮ್ಮನ್ನು ನಾವು ಕಾಪಾಡಿಕೊಳ್ಳುವ ಪ್ರಯತ್ನವನ್ನು ಮಾಡಲೇಬೇಕು.

**ಮುಕ್ತಕ-441** **ಇಂತು ಹೊರಗೊಳಗುಗಳು ಬೇರೆಲೋಕಗಳಲ್ಲ।**
**ಅಂತರಂಗದೊಳೂರಸಂತೆ ಸದ್ದಿಹುದು ॥**

**ಸಂತೆಯೊಳಮಂತರಂಗದ ಸದ್ದು ಕೇಳಿಪುದು।**

**ಸ್ವಾಂತದಿಕ್ಕೆಲಗಳವು - ಮಂಕುತಿಮ್ಮ।**

ಹೊರಗೊಳಗುಗಳು-ಹೊರಗು+ಒಳಗುಗಳು, ಅಂತರಂಗದೊಳ್ಸಂತೆ=ಅಂತರಂಗದೊಳು+ಊರ+ಸಂತೆ, ಸಂತೆಯೊಳಮಂತರಂಗದ=ಸಂತೆಯೊಗಳಗಂ+ಅಂತರಂಗದ,ಸ್ವಾಂತದಿಕ್ಕೆಲಗಳವು=ಸ್ವಾಂತದ+ಇಕ್ಕೆಲಗಳು+ ಅವು. ಸ್ವಾಂತದ=ಮನಃ ಪಟಲದ

ಹೀಗೆ ಹೊರಗು ಮತ್ತು ಒಳಗುಗಳೆಲ್ಲ ಬೇರೆ ಬೇರೆ ಅಲ್ಲ. ಅಂತರಂಗದೊಳಗೆ ಹೊರಗಿನ ಜಗದ್ವ್ಯಾಪಾರದ ಸದ್ದು ಮತ್ತು ನಮ್ಮ ಅಂತರಂಗದ ಪ್ರತಿಬಿಂಬದಂತೆ ಜಗದ್ವ್ಯಾಪಾರ, ಒಳಮನಸ್ಸು ಮತ್ತು ಹೊರಜಗತ್ತು ಎರಡೂ ಅಕ್ಕಪಕ್ಕಗಳಲ್ಲಿ ಇರುತ್ತವೆ ಎಂದು ನಮ್ಮ ಮತ್ತು ಈ ಜಗತ್ತಿನ ಸಂಬಂಧದ ಸೂಕ್ಷ್ಮತೆಯನ್ನು ಅರುಹಿದ್ದಾರೆ, ಈ ಮುಕ್ತಕದಲ್ಲಿ ಮಾನ್ಯ ಗುಂಡಪ್ಪನವರು.

ಅಂತರ್ಯದಲ್ಲಿ ನಡೆಯುವ ಒಳ ವ್ಯಾಪಾರವೂ ಹೊರಜಗತ್ತಿನ ವಿದ್ಯಮಾನಗಳಿಂದಲೇ ಪ್ರಭಾವಿತವಲ್ಲವೇ? ಎಷ್ಟೇ ದೂರ ತಳ್ಳಿದರೂ ಹೊರಜಗತ್ತು ಒಳಗೆ ನುಸುಳದೆ ಇರುತ್ತದೆಯೇ? ತನ್ನ ಪ್ರಭಾವ ಬೀರದೆ ಇರುತ್ತದೆಯೇ? ಹಾಗಾಗಿ ನಮ್ಮ ಅಂತರಂಗದಲ್ಲಿ ಜಗತ್ತಿನ ಎಲ್ಲವೂ ರುದ್ರ ತಾಂಡವವಾಡುತ್ತಿರುತ್ತದೆ.

ಮನಸ್ಸು ಹೊರಚಾಚಿಕೊಂಡಾಗ ಹೊರಗಿನದೆಲ್ಲ ಒಳಗೆ, ಮನಸ್ಸನ್ನು ಒಳಕ್ಕೆಳೆದುಕೊಂಡಾಗ ಅಂದರೆ ಅಂತರ್ಮುಖಿಗಳಾದರೆ, ತನ್ಮಯತೆ, ಹೊರಜಗತ್ತಿನಿಂದ ವಿರಾಮ. ಕಣ್ಣು ಮುಚ್ಚಿಕೊಂಡು ಏನನ್ನೂ ನೋಡದೆ ಇರಬಹುದು, ಏನನ್ನೂ ಕೇಳದೆ ಇರಬಹುದು. ಆದರೆ ಈಗಾಗಲೇ ಮನಃ ಪಟಲದಲ್ಲಿ ಮುದ್ರಿತವಾಗಿರುವ ವಿಷಯಗಳನ್ನು ಅಳಿಸಿಹಾಕುವುದು ಸಾಧ್ಯವೇ? ಅವುಗಳು ನಮ್ಮ ಮನದಲ್ಲಿ ನಲಿದಾಡುತ್ತಲೇ ಇರುತ್ತವೆ. ಸಾಧನೆಯ ಮೂಲಕ ಅಲ್ಪ ಸ್ವಲ್ಪ ಮನಸ್ಸಿನಲ್ಲಿ ಈ ಜಗತ್ತಿನ ವಿಷಯಗಳನ್ನು ದೂರಮಾಡಬಹುದು. ಅದು ಕೇವಲ ತಾತ್ಕಾಲಿಕ. ಮತ್ತೆ ಮಹಾಪೂರದಂತೆ ಜಗತ್ತಿನ ವಿಷಯಗಳು ಒಳನುಗ್ಗುತ್ತವೆ.

ಹೀಗೆ ಜಗತ್ತನ್ನು ನಮ್ಮೊಳಗೇ ತುಂಬಿಕೊಂಡು, ಮನದ ಭಾವಗಳನ್ನು ಕ್ರಿಯೆಯಮೂಲಕ ಜಗತ್ತಿಗೆ ಹರಿಬಿಡುತ್ತಾ ಸಾಗುವುದೇ ಜೀವನ. ಇದನ್ನೇ ಮಾನ್ಯ ಗುಂಡಪ್ಪನವರು 'ಸ್ವಾಂತದಿಕ್ಕೆಲಗಳವು' ಎಂದು ಹೇಳುತ್ತಾ ಎರಡೂ, ಮನಸ್ಸಿನ ಭಾಗಗಳು ಎನ್ನುತ್ತಾರೆ. ಇರಲಿ ಸ್ವಾಭಾವಿಕವಾಗಿ ಇರುವುದನ್ನು ಬದಲಾಯಿಸಲು ನಮ್ಮಿಂದ ಸಾಧ್ಯವಿಲ್ಲ.

ಅತಿಯಾಗಿ ಜಗತ್ತಿನಲ್ಲಿ ಮುಳುಗದೇ ಅಥವಾ ಅತಿಯಾಗಿ ಅದರಿಂದ ದೂರವಾಗಿ ನಮ್ಮ ಅಸ್ತಿತ್ವಕ್ಕೆ ಧಕ್ಕೆಯನ್ನು ತಂದುಕೊಳ್ಳದೆ ಸಹಜವಾಗಿ ಬಾಳುವುದು ಉತ್ತಮ.

# ಸೌಂದರ್ಯ ಮಹಿಮೆ 442-445

**ಮುಕ್ತಕ-442**

**ಸೊಗಸು ಬೇಡದ ನರಪ್ರಾಣಿಯೆಲ್ಲಿಹುದಯ್ಯ ? ।**
**ಮಗುವೆ, ಮುದುಕನೆ, ಪುರಾಣಿಕ ಪುರೋಹಿತರೆ? ॥**
**ಜಗದ ಕಣ್ಣಿಣಿಕದೆಡೆ ಮುಕುರದೆದುರೊಳು ನಿಂತು ।**
**ಮೊಗವ ತಿದ್ದುವರೆಲ್ಲ ಮಂಕುತಿಮ್ಮ ॥**

ನರಪ್ರಾಣಿಯೆಲ್ಲಿಹುದಯ್ಯ= ನರಪ್ರಾಣಿ+ಎಲ್ಲಿ+ಇಹುದಯ್ಯ, ಕಣ್ಣಿಣಿಕದೆಡೆ =ಕಣ್ಣು+ಇಣುಕದ+ಎಡೆ,
ಮುಕುರದೆದುರೊಳು=ಮುಕುರದ+ಎದುರೊಳು, ತಿದ್ದುವರೆಲ್ಲ =ತಿದ್ದುವರು+ಎಲ್ಲ.
ಮುಕುರ= ಕನ್ನಡಿ, ಮೊಗವ=ಮುಖವನ್ನು.

ಅಂದ ಚೆಂದವನ್ನು (ಸೊಗಸು) ಬೇಡದ ಮನುಷ್ಯರು ಎಲ್ಲಿಹರು? ಮಗುವಿನಿಂದ ಹಿಡಿದು ಮುದುಕನ ತನಕ, ಪುರಾಣ ಹೇಳುವವರು, ಪುರೋಹಿತರು ಹೀಗೆ ಜಗತ್ತಿನ ಎಲ್ಲರೂ ತಮ್ಮನ್ನು ಯಾರೂ ನೋಡದಿದ್ದಾಗ ಕನ್ನಡಿಯ ಮುಂದೆ ನಿಂತು ತಮ್ಮ ಅಂದ ಚೆಂದಗಳ ನೋಡಿ ಅಭಿಮಾನಪಡುತ್ತಾ, ತಮ್ಮ ಮುಖವನ್ನು ತಾವು ತಿದ್ದಿಕೊಳ್ಳುವವರೇ ಎಲ್ಲ ಎಂದು ಮನುಷ್ಯರ ಸ್ವಭಾವದ ವಿಶ್ಲೇಷಣೆ ಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ತನ್ನನ್ನು ತಾನು ಇಷ್ಟಪಡುವುದು ಮನುಷ್ಯನ ಸ್ವಭಾವ. ಮನುಷ್ಯ ತನ್ನನ್ನು ತಾನು ಪ್ರೀತಿಸುತ್ತಾನೆ ಇಷ್ಟಪಡುತ್ತಾನೆ. ಹಾಗೆ ಇಷ್ಟಪಡುವುದಕ್ಕೆ ಅವನ ಅಹಂಕಾರವೇ ಕಾರಣ. ಇಲ್ಲಿ ಅಹಂ ಎಂದರೆ ನಾನು ಎನ್ನುವ ಭಾವ. ಈ ಭಾವ ಇರುವವರೆಗೆ ಮನುಷ್ಯ ತನ್ನನ್ನು ತಾನು ಪ್ರೀತಿಸುತ್ತಲೇ ಇರುತ್ತಾನೆ. ಅವನು ಮಗುವಾಗಲಿ, ಮುದುಕನಾಗಲಿ, ಸ್ತ್ರೀಯಾಗಲಿ, ಪುರುಷನಾಗಲಿ, ಸಂಪ್ರದಾಯಸ್ಥ ಪುರೋಹಿತನಾಗಲಿ, ಅಧ್ಯಾತ್ಮಿಕ ರಂಜನೆಯನ್ನು ನೀಡುವ ಪುರಾಣಿಕನಾಗಲಿ, ಯಾರೂ ಇದಕ್ಕೆ ಹೊರತಲ್ಲ.

ಪರರಿಗೆ ಹೋಲಿಸಿದರೆ, ತಾನು ರೂಪವಂತನಲ್ಲ ಎಂದು ಒಳ ಮನಸ್ಸು ಹೇಳುತ್ತಿದ್ದರೂ ಮತ್ತು ಅದನ್ನು ನಾವು ಒಪ್ಪಿಕೊಳ್ಳುತ್ತಿದ್ದರೂ, ಮೇಲ್ಮೈಗೆ ತಾನೇನೋ ಮಹಾ ರೂಪವಂತನೆಂದು ತೋರಿಸಿಕೊಳ್ಳಲು ನಾವೆಲ್ಲಾ ಪಡುವ ಪಾಡನ್ನು ನೋಡಿದರೆ ನಮ್ಮ ಮೇಲೆ ನಮಗೆ ಕರುಣೆ, ಅಸಹ್ಯ ಉಂಟಾಗುತ್ತವೆ. ಅನ್ಯರು ನನ್ನನ್ನು ನೋಡಬೇಕು, ನೋಡಿ ಮೆಚ್ಚಬೇಕು, ಮೆಚ್ಚಿ ಹೊಗಳಬೇಕು ಎಂಬ ಆಸೆ ಎಲ್ಲರಿಗೂ ಇರುತ್ತದೆ. ಇದು ಸಹಜ ಗುಣ ಮತ್ತು ಮನುಷ್ಯ ಸ್ವಭಾವ. ಇದಕ್ಕೆ ಯಾರೂ ಹೊರತಲ್ಲ.

(282)

ಕಗ್ಗ ರಸಧಾರೆ-2 ಸೌಂದರ್ಯ ಮಹಿಮೆ 442-445

ಆದರೆ ಬಾಹ್ಯ ರೂಪಕ್ಕೆ ನಾವು ಅಧಿಕ ಪ್ರಾಮುಖ್ಯತೆಯನ್ನು ನೀಡದೆ ಅಂತರಂಗದ ಸೌಂದರ್ಯಕ್ಕೆ ಒತ್ತು ನೀಡಿದರೆ, ಆಗ ಒಳಗೂ ಹೊರಗೂ ಎಲ್ಲವೂ ಸುಂದರವಾಗೇ ಕಾಣುತ್ತದೆ. ಪರಿಣಾಮಗಳಿಗೊಳಗಾಗಿ ಜರ್ಜರಿತವಾಗಿ, ಇಂದಿನ ಸೌಂದರ್ಯ ಮುಂದೆ ಇರದಂತೆ, ಒಂದು ದಿನ ಖಂಡಿತ ನಾಶವಾಗುವ ಶರೀರದ ಸೌಂದರ್ಯಕ್ಕಿಂತ ಸದಾ ಕಾಲ ಇರುವ ಆತ್ಮ ಸೌಂದರ್ಯವನ್ನು ಹೆಚ್ಚಿಸಿಕೊಳ್ಳುವುದರಲ್ಲಿ ನಮ್ಮ ಪ್ರಯತ್ನ ನಡೆಯಬೇಕು.

**ಮುಕ್ತಕ-443** **ತಿಂಗಳಾರರ ದುಡಿತ ಚೆಂಗುಲಾಬಿಯ ಬೆಳೆತ।**
**ಕಂಗೊಳಿಪುದದರ ಸಿರಿಯರೆಗಳಿಗೆಯಲರೊಳ್॥**
**ಪೊಂಗುವಾನಂದವದನನುಭವಿಸದವನ್ ಅಜನ।**
**ಹಂಗಿಪನೆ ಕೃಪಣತೆಗೆ? – ಮಂಕುತಿಮ್ಮ॥**

ತಿಂಗಳಾರರ=ತಿಂಗಳು+ಆರರ, ಕಂಗೊಳಿಪುದದರ=ಕಂಗೊಳಿಪುದು+ಅದರ,
ಸಿರಿಯರೆಗಳಿಗೆಯಲರೊಳ್=ಸಿರಿಯ+ಅರೆಗಳಿಗೆಯ+ಅಲರೊಳ್,
ಪೊಂಗುವಾನಂದವದನನುಭವಿಸದವನ್=ಪೊಂಗುವ+ಆನಂದವನು+ಅನುಭವಿಸದವನ್,
ಅಲರ್=ಹೂವು, ಅಜನ=ಸೃಷ್ಟಿಕರ್ತ ಬ್ರಹ್ಮನ, ಕೃಪಣತೆಗೆ=ಜಿಪುಣತೆಗೆ

ಆರು ತಿಂಗಳ ಸತತ ದುಡಿತದಿಂದ ಬೆಳೆಸಿದ ಒಂದು ಗುಲಾಬಿ ಗಿಡ ತನ್ನ ಸಿರಿತನವನ್ನು ತನ್ನಲ್ಲಿ ಬಿಡುವ ಮೊದಲ ಹೂವಿನಲ್ಲಿ ಪ್ರಕಟಗೊಳಿಸುತ್ತದೆ. ಅದರ ಅಂದ ಚೆಂದಗಳು ಒಂದು ದಿನವಿದ್ದು ಬಾಡಿಹೋಗುತ್ತದೆ. ಹಾಗೆ ಆ ಗಿಡದಲ್ಲಿ ಹೂವಿನ ರೂಪದಲ್ಲಿ ಉಕ್ಕುವ ಆನಂದವನ್ನು, ನೋಡಿ ಸಂತಸಪಡದವನು, ಹೂವನ್ನು ಅರೆಗಳಿಗೆಯ ಸಂತೋಷಕ್ಕೆ ಸೃಷ್ಟಿಸಿದ ಆ ಸೃಷ್ಟಿಕರ್ತನ ಜಿಪುಣತನವನ್ನು ಹಳಿದರೇನು ಪ್ರಯೋಜನ ಎಂದು ಜಗತೃಷ್ಟಿಯನ್ನು ಮತ್ತು ಅದರಲ್ಲಿನ ಸಂತೋಷವನ್ನು ಅನುಭವಿಸುವ ಪರಿಯ ಬಗ್ಗೆ ಉಲ್ಲೇಖಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ನಮ್ಮಲ್ಲಿ ಕೆಲವರಿದ್ದಾರೆ, ಅವರಿಗೆ ಯಾವುದೂ ಸಮರ್ಪಕವಾಗಿ ಕಾಣುವುದೇ ಇಲ್ಲ. ಎಲ್ಲದರಲ್ಲೂ ಇಲ್ಲದ ಕೊರತೆಗಳನ್ನು ಹುಡುಕುವ ದುರಭ್ಯಾಸ ಅವರಿಗೆ, ಅದೊಂದು ಮದ್ದಿಲ್ಲದ ಮನೋರೋಗ, ಈ ಜಗತ್ತಿನ ಸೃಷ್ಟಿಯೆಲ್ಲವೂ ಸುಂದರವಾಗಿದೆ. ಕಾಣುವ ಮನೋಭಾವ ಬೇಕು ಅಷ್ಟೇ,. ಒಂದು ಮರ ವಸಂತ ಮಾಸದಲ್ಲಿ ಹೊಸ ಚಿಗುರನ್ನು ತಳೆದು ನಳನಳಿಸುತ್ತಾ ಎಷ್ಟೊಂದು ಸುಂದರವಾಗಿ ಕಾಣುತ್ತದೆ. ಹಾಗೆ ಚಿಗುರು ಮೂಡುವುದಕ್ಕೆ ಆ ಮರದಲ್ಲಿ ಎಷ್ಟೊಂದು ಪೂರ್ವಭಾವಿ ಸಿದ್ಧತೆ ನಡೆದಿರುತ್ತದೆ ಎಂಬುದು ನಮಗೆ ಕಾಣುವುದಿಲ್ಲ. ಆದರೆ ಆ ಚಿಗುರು ನಾವು ನೋಡ ನೋಡುತ್ತಿದ್ದಂತೆಯೇ ನಮಗೆ ತಾತ್ಕಾಲಿಕ ಆನಂದವಿತ್ತು ತಾನು ಬಲಿತು ಹೋಗುತ್ತದೆ.

ಪುಟ್ಟ ಮಕ್ಕಳನ್ನು ನೋಡಿದಾಗ ನಮಗೆ ಎಷ್ಟೊಂದು ಸಂತೋಷವಾಗುತ್ತದೆ. ಅವರ ಒಂದು ಮುಗುಳು ನಗೆ ಎಷ್ಟೊಂದು ಮನೋಹರವಾಗಿರುತ್ತದೆ. ಆ ಮಕ್ಕಳು ನಮ್ಮ ಮನೆಯಂಗಳದಲ್ಲಿ ನಲಿದು ಆಡುವಾಗ ಅವರು

ನಮಗೆ ನೀಡುವ ಸಂತೋಷಕ್ಕೆ ಬೆಲೆ ಕಟ್ಟಲಾಗುವುದೇ ಇಲ್ಲ. ಇದು ಸಕಲ ಪ್ರಾಣಿ, ಪಕ್ಷಿ, ಗಿಡ, ಮರಗಳಿಗೂ ಅನ್ವಯವಾಗುತ್ತದೆ. ನೋಡುವ ಮನಸ್ಸಿರಬೇಕು ಅಷ್ಟೇ, ಹಾಗಲ್ಲದೆ, ಇದ್ದಾಗ ಆನಂದ ಪಡದೆ ಆ ಮಕ್ಕಳು ಬೆಳೆದು ಮಂಗನಾಟ ಆಡುವಾಗ, 'ಅಯ್ಯೋ ಈ ಮಕ್ಕಳನ್ನು ಇಷ್ಟು ಬೇಗ ದೊಡ್ಡವರನ್ನಾಗಿಸಿಬಿಟ್ಟನಲ್ಲ' ಆ ಪರಮಾತ್ಮ ಎಂದು ಸೃಷ್ಟಿಕರ್ತನನ್ನು ಹಳಿಯದೆ ಅವನು ಕೊಟ್ಟ ಆನಂದವನ್ನು ಆ ಸಮಯಕ್ಕೆ ನೋಡಿ ಭಾವಿಸಿ, ಆನಂದಪಡುವುದು ಒಳ್ಳೆಯದಲ್ಲವೇ?

ಜಗತ್ತಿನಲ್ಲಿ ನಮಗೆ ಮುದ, ಆನಂದ, ಸಂತೋಷ ನೀಡುವುಂತಹ ವಸ್ತುಗಳು, ವಿಷಯಗಳು ಮತ್ತು ವ್ಯಕ್ತಿಗಳು ಹೆಜ್ಜೆ ಹೆಜ್ಜೆಗೂ ಸಿಗುತ್ತಾರೆ. ಶುದ್ಧಮನಸ್ಸಿನಿಂದ ಸಂತೋಷಪಡುವ ಮನೋಭಾವವನ್ನು ನಾವು ಬೆಳೆಸಿಕೊಂಡರೆ, ಸಂತೋಷಪಡಬಹುದು. ಕೇವಲ ಕೊರತೆಗಳೇ ಕಾಣುವ ಮನೋಭಾವದವರು ಆ ಆನಂದದಿಂದ ವಂಚಿತರಾಗುತ್ತಾರೆ. ಸಂತೋಷಪಡುವ ಮನಸ್ತತ್ವ ಬೆಳೆಸಿಕೊಂಡರೆ ಆನಂದ ನಮ್ಮದು ಇಲ್ಲದಿದ್ದರೆ ಇಲ್ಲ. ಆಯ್ಕೆ ನಮಗೆ ಬಿಟ್ಟದಲ್ಲವೇ?

**ಮುಕ್ತಕ-444**

**ಬಾಂದಳದ ಬಾಗು, ರವಿಕಿರಣಗಳ ನೀಳ್ಕೋಲು।**
**ಇಂದುಮಣಿನುಣ್ಣು, ತಾರೆಗಳ ಕಣ್ಮಿನುಗು॥**
**ಚೆಂದದಂಗಾಂಗಭಾವದಿ ಮೊದಲ ಪಾಠವಿವು।**
**ಸೌಂದರ್ಯಗುರು ಪ್ರಕೃತಿ - ಮಂಕುತಿಮ್ಮ॥**

ನೀಳ್ಕೋಲು=ನೀಳ+ಕೋಲು, ಇಂದುಮಣಿನುಣ್ಣು=ಇಂದುಮಣಿ+ನುಣ್ಣು, ಕಣ್ಮಿನುಗು=ಕಣ್ಣ+ಮಿನುಗು,

ಚೆಂದದಂಗಾಂಗಭಾವದಿ=ಚೆಂದದ+ಅಂಗಾಂಗ+ಭಾವದಿ, ಪಾಠವಿವು=ಪಾಠವು+ಇವು.

ಇಂದುಮಣಿ=ಚಂದ್ರ,

ಕ್ಷಿತಿಜದಲ್ಲಿ ನಮಗೆ ಕಾಣುವ ಆ ಬಾಗಿದಂತಹ ಆಕಾಶ, ನೇರವಾಗಿ ಭೂಮಿಯ ಮೇಲೆ ಇಳಿಯುವ ಸೂರ್ಯನ ಕಿರಣಗಳು, ತಂಪಾದ ಚಂದ್ರ, ಫಳಫಳನೆ ಹೊಳೆಯುವ ಮುಗಿಲ ನಕ್ಷತ್ರಗಳ ಹೊಳಪು ಇತ್ಯಾದಿಗಳು ಪ್ರಕೃತಿಯಲ್ಲಿ ಚೆಂದವಾಗಿ ಕಾಣುವ ಆ ಸೌಂದರ್ಯಗಳೆಲ್ಲಾ, ಪ್ರಕೃತಿಯು ನಮಗೆ ನೀಡುವ ಸುಂದರತೆಯ ಮೊದಲ ಪಾಠದಂತಿದೆ ಎಂದು ಮೂಲ ಸೌಂದರ್ಯವನ್ನು ನಮಗೆ ಅರುಹುತ್ತಾರೆ, ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

'ಅಜನ ಹಂಗಿಪನೆ ಕೃಪಣತೆಗೆ' ಎಂದು ಹಿಂದಿನ ಮುಕ್ತಕದಲ್ಲಿ ಹೇಳಿದ್ದಾರೆ ಮಾನ್ಯ ಗುಂಡಪ್ಪನವರು. ಅಜ ಎಂದರೆ ಸೃಷ್ಟಿಕರ್ತ ಬ್ರಹ್ಮ ಎಂದು ಅರ್ಥ. ಆ ಸೃಷ್ಟಿಕರ್ತ ಬ್ರಹ್ಮ ಎಂದಿಗೂ ಕೃಪಣತೆಯನ್ನು ತೋರೇ ಇಲ್ಲ. ಅವನ ಇಡೀ ಸೃಷ್ಟಿಯೇ ಒಂದು ಸುಂದರ ಚಿತ್ರಣ, ಕಾಣುವ ಕಣ್ಣಿರಬೇಕಷ್ಟೇ!! ನಭೋ ಮಂಡಲದಲ್ಲಿನ ಗ್ರಹ ಮತ್ತು ನಕ್ಷತ್ರಗಳ ಸುಂದರ ಚಿತ್ತಾರ, ಸುಡುವ ಸೂರ್ಯನ ಕಿರಣ, ಶೀತಲ ಚಂದಿರನ ಬೆಳಕು, ಗಿರಿ ಬೆಟ್ಟಗಳು ಕಾಡು ಮೇಡುಗಳು, ನದಿ ಸಮುದ್ರಗಳು, ಪ್ರಾಣಿ-ಪಕ್ಷಿಗಳು, ಹೀಗೆ ಹೇಳುತ್ತಾ ಹೋದರೆ ಪಟ್ಟಿಯೇ ದೊಡ್ಡದಾದೀತು.





ಎಲ್ಲವೂ ಸುಂದರ, ಜಗತ್ತಿನಲ್ಲಿ ಬೇರಾರೂ ಸೃಷ್ಟಿಸಲಾಗದ ಸುಂದರತೆಯನ್ನು ಪ್ರಕೃತಿಯೇ ನಮಗೆ ತೋರುತ್ತಿದೆ. ನೋಡಿ ಆನಂದಿಸುವ ಮನಸ್ಸು ಮತ್ತು ಸಂಸ್ಕಾರಗಳು ನಮಗಿರಬೇಕು ಅಲ್ಲವೇ?

ಹಾಗಾಗಿ ಗುಂಡಪ್ಪನವರು "ಸೌಂದರ್ಯಗುರು ಪ್ರಕೃತಿ" ಎಂದು ಹೇಳುವಂತೆ ಪ್ರಕೃತಿಯೇ ನಮಗೆ ಸೌಂದರ್ಯದ ಮೊದಲ ಗುರು. ಇಡೀ ಜಗತ್ತಿನಲ್ಲಿನ ಕಲೆ, ಕವಿತೆ, ಕಾವ್ಯ, ಪುರಾಣ, ಸಾಹಿತ್ಯ, ಮುಂತಾದವುಗಳ ಪಾಠವನ್ನು ಮನುಷ್ಯನಿಗೆ ಹೇಳಿಕೊಟ್ಟದ್ದೇ ಈ ಪ್ರಕೃತಿ. ಹಾಗಾಗಿ ಪ್ರಕೃತಿಯೇ ನಮಗೆ ಸುಂದರತೆಯ ಮೊದಲ ಗುರು.

ವಿಷಾದವೆಂದರೆ 'ಮಂಗನ ಕೈಲಿ ಮಾಣಿಕ್ಯ ಕೊಟ್ಟಹಾಗೆ' ಈ ಮನುಷ್ಯನಿಗೆ ಅತಿ ಬುದ್ಧಿಯನ್ನು ಕೊಟ್ಟು ಎಲ್ಲವನ್ನೂ ಕೆದಕಿ ಕೆದಕಿ ಹಾಳುಗೆಡುಹುವ, ಎಲ್ಲವನ್ನೂ ತನ್ನ 'ತಾತ್ಕಾಲಿಕ ಸುಖಕ್ಕೆ, ಆನಂದಕ್ಕೆ ಬಳಸಿಕೊಳ್ಳುವ ದುರ್ಬುದ್ಧಿಯ ಮನುಷ್ಯ, ಪ್ರಕೃತಿಯಲ್ಲಿ ಯಾವುದು ಸುಂದರ ಎಂದು ಎನಿಸಿಕೊಳ್ಳುತ್ತದೋ ಅದನ್ನೆಲ್ಲ ಹಾಳುಗೆಡುಹುವ ಪ್ರವೃತ್ತಿ ಬೆಳೆಸಿಕೊಂಡಿದ್ದಾನೆ. ಸೃಷ್ಟಿಯ ಬೇರೆಲ್ಲವೂ ಪ್ರಕೃತಿಯ ಮಡಿಲಲ್ಲಿ ಬದುಕುತ್ತವೆ, ಮನುಷ್ಯ ಮಾತ್ರ ತನ್ನ ಸ್ವಾರ್ಥದ, ಅಹಂಕಾರದ ತೊಟ್ಟಿಲಲ್ಲಿ ತೂಗಾಡುತ್ತಾನೆ. ಆ ಸೃಷ್ಟಿಕರ್ತನೂ ಅಸಹಾಯಕನಾಗಿ ನೋಡುತ್ತಿದ್ದಾನೆ.

ಪ್ರಕೃತಿಯ ಸುಂದರತೆಯನ್ನು ನೋಡುವ, ಆನಂದಿಸುವ ಮತ್ತು ರಕ್ಷಿಸುವ ಪ್ರವೃತ್ತಿ ಬೆಳೆಸಿಕೊಂಡರೆ ಇಳೆಗೆ ಉಳಿವು ಇಲ್ಲದಿದ್ದರೆ ಮುಂದಿನ ಪೀಳಿಗೆಗೆ ಬರಡು ಭೂಮಿಯನ್ನೇ ನಾವು ಬಿಟ್ಟುಹೋಗುತ್ತೇವೆ ಅಲ್ಲವೇ? ತನ್ನ ಅಳಿವನ್ನು ತಾನೇ ತಂದುಕೊಳ್ಳುವ ಅತಿ ಬುದ್ಧಿ ಕೇವಲ ಮನುಷ್ಯನಿಗೆ ಮಾತ್ರ ಇದೆ!!!

**ಮುಕ್ತಕ-445**

**ಕ್ಷಣವದೊಂದೆ ಅನಂತಕಾಲ ತಾನಾಗುವುದು |**
**ಅನುಭವಕ್ಕೆ ಸತ್ತ್ವ ಶಿವ ಸುಂದರಗಳಮರೆ ||**
**ಮನ ತುಂಬಶಶಿಯಾಗಿ, ನೆನಪಮೃತವಾಗುವುದು |**
**ಕ್ಷಣದೊಳಕ್ಷಯ ಕಾಣೋ- ಮಂಕುತಿಮ್ಮ ||**

ಕ್ಷಣವದೊಂದೆ=ಕ್ಷಣವು+ಅದು+ಒಂದೆ, ಸುಂದರಗಳಮರೆ=ಸುಂದರಗಳ್+ಅಮರೆ,
ನೆನಪಮೃತವಾಗುವುದು=ನೆನಪು+ಅಮೃತವಾಗುವುದು, ಕ್ಷಣದೊಳಕ್ಷಯ=ಕ್ಷಣದೊಳು+ಅಕ್ಷಯ.

ಒಂದೊಂದು ಕ್ಷಣವೇ ಅನಂತಕಾಲವಾಗಿರುವಾಗ, ನಮ್ಮ ಅನುಭವಕ್ಕೆ ಸುಂದರವಾದ ಶಿವಸ್ವರೂಪದ ಸತ್ತ್ವವು ಬಂದರೆ, ಮನವು ಚಂದ್ರನ ಬೆಳಕಿನಂತೆ ತಣ್ಣಗಿದ್ದರೆ ನಮ್ಮ ನೆನಪುಗಳೆಲ್ಲಾ ಸವಿಯಾದ ಅಮೃತದಂತೆ ಆಗುವುವು. ಹಾಗಾಗಿ ಪ್ರತೀ ಕ್ಷಣದಲ್ಲೂ ಎಂದೂ ಕರಗದ ಅಮೃತ ಭಾವವನ್ನು ಕಾಣು ಎಂದು ಒಂದು ಆದೇಶವನ್ನು ನೀಡಿದ್ದಾರೆ ಮಾನ್ಯ ಗುಂಡಪ್ಪನವರು, ನಮಗೆ ಈ ಮುಕ್ತಕದಲ್ಲಿ.

ನಮ್ಮ ಅನುಭವಕ್ಕೆ ಬರುವ ಪ್ರತೀ ಗಳಿಗೆಯಲ್ಲೂ ಸುಂದರತೆಯನ್ನು ಕಾಣಬೇಕು ಅಥವಾ ಕಾಣುವ ಮನೋಭಾವವನ್ನು ಬೆಳಸಿಕೊಳ್ಳಬೇಕು. ಪರಮಾತ್ಮನ ಸೃಷ್ಟಿಯಲ್ಲಿಯ ಪ್ರತಿಯೊಂದರಲ್ಲೂ ಒಂದು ಸತ್ವವನ್ನು,





ಪೂರ್ಣತೆಯನ್ನು ಮತ್ತು ಅದರಲ್ಲಿನ ಸುಂದರತೆಯನ್ನು ಕಾಣಬೇಕು. ಹಾಗೆ ನಮಗೆ ಕಂಡಾಗ ನಮ್ಮ ಮನಸ್ಸ ಸಹ ಶಾಂತವಾಗಿ ಪ್ರಫುಲ್ಲವಾಗಿರುತ್ತದೆ. ಕಹಿ ನೆನಪುಗಳು ಕರಗುತ್ತವೆ. ಬದುಕಿನ ಪ್ರತೀ ಕ್ಷಣವೂ ನರಳುವುದಕ್ಕಿಂತ, ನಿರಂತರವಾಗಿ ಸುಖವಾಗಿ ಬದುಕಬಹುದು.

ನಮ್ಮಲ್ಲಿ ಬಹಳಷ್ಟು ಜನಕ್ಕೆ ನಿಜವಾದ ಸಂತೋಷ ಅಥವಾ ಆನಂದ ಎನ್ನುವುದು ಏನೆಂದೇ ಗೊತ್ತಿಲ್ಲ. ಪಾಪ ಯಾವುದಾವುದನ್ನೂ ಸಂತೋಷ ಅಥವಾ ಆನಂದ ಎಂದುಕೊಂಡಿರುತ್ತಾರೆ. ಕ್ಷಣಿಕವಾದ ಆ ಸುಖವೋ ಆನಂದವೋ ಇಲ್ಲವಾದಾಗ ಮತ್ತೆ ಮತ್ಯಾವುದರ ಹಿಂದೆಯೋ ಓಡುತ್ತಾರೆ. ನಿರಂತರ ಓಟದಲ್ಲಿ ನಲುಗುತ್ತಾರೆ, ಜರ್ಜರಿತರಾಗುತ್ತಾರೆ ಮತ್ತು ನಿರಾಶರಾಗುತ್ತಾರೆ. ನೋಟ ನಿಂತರೆ ಓಟವೂ ನಿಲ್ಲಬಹುದು.

ಹಾಗಾಗಿ, ನಿಜವಾದ ಆನಂದಕ್ಕೆ ಅಂತರ್ಮುಖಿಗಳಾಗಬೇಕು. 'ಮನತುಂಬಶಶಿಯಾಗಿ' ಎಂದು ಗುಂಡಪ್ಪನವರು ಹೇಳುವಂತೆ ಮನವನ್ನು ಶಾಂತಗೊಳಿಸಬೇಕು. ಮನಃ ಪಟಲದಲ್ಲಿ ನಡೆಯುವ ಲಕ್ಷಾಂತರ ಯೋಚನೆಗಳಿಗೆ ತಡೆ ಹಾಕದೆ, ಅವುಗಳು ಇಲ್ಲದಂತೆ ಮಾಡಬೇಕು. ಮನಸ್ಸಿನ ಭಾವಕ್ಕೆ 'ಸತ್ಯ ಶಿವ ಸುಂದರ'ಗಳನ್ನು ತುಂಬಿಕೊಳ್ಳಬೇಕು. ಆಗ ಈ ಜಗತ್ತಿನ ಎಲ್ಲವೂ ಸುಂದರವಾಗಿ ಕಂಡು ಮನಸ್ಸು ಆನಂದ ಸಾಗರದಲ್ಲಿ ಓಲಾಡುತ್ತದೆ. ಆಗ ಕ್ಷಣದಲ್ಲಿ ಪಡೆಯುವ ಕ್ಷಣಿಕಾನಂದ ಕ್ಷೀಣಿಸಿ, ಕ್ಷಣವು ಕ್ಷೀಣಿಸದೆ ಅನಂತವಾಗಿ, ಮುದನೀಡುತ್ತದೆ. ಅಂತಹ ಮನೋಭಾವ ನಮ್ಮದಾದರೆ ಒಳ್ಳೆಯದೇ ಅಲ್ಲವೇ?

# ಬ್ರಹ್ಮಸ್ಪಂದನ 446-448

**ಮುಕ್ತಕ-446**

**ಸುಂದರತೆಯೆನುವುದೇಂ? ಜನಕೆ ಮೈಮರೆಯಿಪಾ |**
**ನಂದದೊಳಮರುಮವೇಂ? ವಿಶ್ವಚೇತನದಾ ||**
**ಸ್ಪಂದನವೆ ಸೌಂದರ್ಯಮದುವೆ ಜೀವನಮೂಲ |**
**ಬಂಧುರತೆ ಬೊಮ್ಮನದು - ಮಂಕುತಿಮ್ಮ ||**

ಸುಂದರತೆಯೆನುವುದೇಂ=ಸುಂದರತೆ+ಎನುವುದು+ಏಂ,
ಮೈಮರೆಯಿಪಾನಂದದೊಳಮರುಮವೇಂ=ಮೈ+ಮರೆಯಿಪ+ಆನಂದದ+ಒಳ+ಮರುಮವೇಂ,
ವಿಶ್ವಚೇತನದಾಸ್ಪಂದನವೆ=ವಿಶ್ವ+ಚೇತನದ+ಆ+ಸ್ಪಂದನವೆ, ಸೌಂದರ್ಯಮದುವೆ=ಸೌಂದರ್ಯಂ+ಅದುವೆ,
ವಿಶ್ವಚೇತನ=ಜಗತ್ತನ್ನು ನಡೆಸುವ ಶಕ್ತಿ, ಬಂಧುರತೆ=ಆಕರ್ಷಣೆ.

ಸುಂದರತೆ ಎಂದರೆ ಏನು? ಜಗತ್ತಿನ ಸೃಷ್ಟಿಯು ಎಲ್ಲವೂ ಅದನ್ನು ಕಂಡು ಮೈ ಮರೆಯುವಂತೆ ಮಾಡುವ ಆ ಒಳಗುಟ್ಟು ಏನು? ಎಂದರೆ ಪರಮ ಚೇತನಕ್ಕೆ ಜಗತ್ತಿನ ಸೃಷ್ಟಿಯೆಲ್ಲವೂ ಪ್ರತಿಸ್ಪಂದಿಸುವಂತೆ ಮಾಡುವುದೇ ಸುಂದರತೆ, ಪರಮಾತ್ಮ ಸೃಷ್ಟಿಯಾದ ಈ ಜಗಜ್ಜೀವಜಾಲದ ಪರಸ್ಪರ ಆಕರ್ಷಣೆಗೆ ಈ ಸುಂದರತೆಯೇ ಕಾರಣ ಎಂದು ಪ್ರಸ್ತಾಪಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.



ಪರಮಾತ್ಮ ಈ ಜಗತ್ತಿನಲ್ಲಿ ಎಲ್ಲೆಲ್ಲೂ ಸುಂದರತೆಯನ್ನು ಸೃಷ್ಟಿಸಿ ಅದನ್ನು ಕಂಡು ಸ್ಪಂದಿಸುವ ಗುಣವನ್ನೂ ನಮಗೆ ಕೊಟ್ಟಿದ್ದಾನೆ. ಆ ಸುಂದರತೆಯನ್ನು ಕಂಡು ಮೈ ಮರೆಯುವ ಮನದಾಳದ ವಿಚಾರ ನಮಗೆ ಅರ್ಥವಾಗುವುದಿಲ್ಲ. ಅದೊಂದು ಮರ್ಮದಂತೆಯೇ ಕಾಣುತ್ತದೆ. ಸರ್ವ ವ್ಯಾಪಿಯಾಗಿರುವ ಈ ಜಗತ್ತಿನ ಚೇತನವೇ ಈ

ಸೌಂದರ್ಯಾಸ್ವಾದನೆಗೆ ಮೂಲ ಕಾರಣ. ಇಲ್ಲಿರುವುದೆಲ್ಲವೂ ಚೇತನವೇ ಆಗಿರುವಾಗ ಮತ್ತು ಈ ಚೇತನದ ಪರಸ್ಪರ ಆಕರ್ಷಣೆಯೇ (ಬಂಧುರತೆ) ಸೌಂದರ್ಯಾಸ್ವಾದನೆಗೆ ಕಾರಣ.

ನಮಗೆ ಒಂದು ವಸ್ತು ಸುಂದರವಾಗಿ ಕಾಣಲು ಆ ವಸ್ತುವಿನಲ್ಲಿರುವ ಆ ಪರಮಚೇತನದ ಅಂಶವೇ ಕಾರಣ. ನಾವು ಎಲ್ಲಿಯ ತನಕ ಸಕಲ ಸೃಷ್ಟಿಯಲ್ಲಿ ಆ ಪರಮ ಚೇತನವನ್ನು ಕಾಣುತ್ತೇವೆಯೋ, ಅಲ್ಲಿಯ ತನಕ ನಮಗೆ ಎಲ್ಲವೂ ಸುಂದರವಾಗಿ ಕಾಣುತ್ತದೆ. ಅನ್ಯ ರೀತಿಯಲ್ಲಿ ನಾವು ನೋಡಿದಾಗ ನಮಗೆ ಆ ಸುಂದರತೆ ಕಾಣುವುದಿಲ್ಲ. ಆದ್ದರಿಂದಲೇ, ಸೌಂದರ್ಯ ನೋಡುಗನ ದೃಷ್ಟಿಯಲ್ಲಿರುತ್ತದೆ, ಎಂದು ಹೇಳಿರುವುದು.

ಕಾಣುವ ಮನಸ್ಸಿದ್ದರೆ ನಮಗೆ ಎಲ್ಲವೂ ಸುಂದರವಾಗಿ ಕಾಣುತ್ತದೆ. ಇಲ್ಲದಿದ್ದರೆ ಯಾವುದೂ ನಮಗೆ ಸುಂದರವಾಗಿ ಕಾಣದೆ, ಎಲ್ಲದರಲ್ಲೂ ಕೊರತೆಯನ್ನು ಕಾಣುವ ಮನೋಭಾವ ನಮ್ಮದಾಗುತ್ತದೆ. ಹಾಗಾಗಿ ನಾವು ಕಂಡಲ್ಲೆಲ್ಲಾ ನಮಗೆ ಆ ಪರಮ ಚೇತನದ ಕಲಾನೈಪುಣ್ಯತೆ ಕಾಣಬೇಕು, ಅದರ ಸೌಂದರ್ಯ ಕಂಡರೆ ನಮಗೆ ಮನೋ ಆನಂದ ಸಿಗುತ್ತದೆ. ಅಂತಹ ಮನೋಭಾವವನ್ನು ನಾವು ಬೆಳೆಸಿಕೊಳ್ಳುವ ಪ್ರಯತ್ನವನ್ನು ಮಾಡಬೇಕು.

**ಮುಕ್ತಕ-447**

**ದೃಷ್ಟಿಚುಕ್ಕೆಯದೊಂದನೆಲ್ಲ ಚೆಂದಂಗಳ್ಗ - |**
**ಮಿತ್ತಿಹನು ಪರಮೇಷ್ಠಿ, ಶಶಿಗೆ ಮಶಿಯವೊಲು ||**
**ಗುಟ್ಟೆನೋ? ರಕ್ಷೆಯೋ? ಸಿಂಗರವೋ? ಹೇಳನವೋ? |**
**ಮಷ್ಟು ಸೃಷ್ಟಿಗೆ ಬೊಟ್ಟು - ಮಂಕುತಿಮ್ಮ ||**

ದೃಷ್ಟಿಚುಕ್ಕೆಯದೊಂದನೆಲ್ಲ=ದೃಷ್ಟಿ+ಚುಕ್ಕೆ+ಅದು+ಒಂದನ+ಎಲ್ಲ,
ಚೆಂದಂಗಳಮಿತ್ತಿಹನು=ಚೆಂದ+ಅಂಗಳಂ+ಇತ್ತು+ಇಹನು, ಮಶಿಯವೊಲು=ಮಶಿಯ+ಒಲು
ಪರಮೇಷ್ಠಿ=ಸೃಷ್ಟಿಕರ್ತ, ಶಶಿ=ಚಂದ್ರ, ಮಷಿ=ಕಪ್ಪು, ಮಷ್ಟು=ಕೊಳೆ,

ಸೃಷ್ಟಿಕರ್ತ, ತನ್ನ ಸೃಷ್ಟಿಯಲ್ಲಿನ ಚೆಂದಗಳಿಗೆಲ್ಲಾ ಒಂದು ದೃಷ್ಟಿಚುಕ್ಕೆಯನ್ನು ಇಟ್ಟಿದಾನೆ, ಚಂದ್ರನಲ್ಲಿ ಕಲೆಗಳಂತೆ. ಇದರ ಗುಟ್ಟು ಏನಿರಬಹುದು ಎಂದು ಒಂದು ಪ್ರಶ್ನೆ ಕೇಳುತ್ತಾ, ಹಾಗೆ ಕಲೆಗಳನ್ನು ಇಟ್ಟು ಅದನ್ನು ಇನ್ನೂ ಅಧಿಕ ಸಿಂಗಾರಕ್ಕೊ, ಕಾಪಾಡುವುದಕ್ಕಾಗಿಯೋ, ಅಥವಾ ಹಳಿಯಲೋ', ಎಂದು ಸೂಚಿಸುತ್ತಾ, ಏನಾದರಾಗಲಿ ಕೊಳೆ ಈ ಜಗತ್ತಿನ ಸೌಂದರ್ಯಕ್ಕೆ ಇಟ್ಟ ದೃಷ್ಟಿಬೊಟ್ಟು ಎಂದು ಹೇಳಿದ್ದಾರೆ ಮಾನ್ಯ ಗುಂಡಪ್ಪನವರು ನಮಗೆ ಈ ಮುಕ್ತಕದಲ್ಲಿ.

ಹಿಂದೆ ಚಿಕ್ಕಮಕ್ಕಳಿಗೆ ಎಣ್ಣೆಹಚ್ಚಿ ತಲೆ ಬಾಚಿ, ಮುಖಕ್ಕೆ ಪೌಡರ್ ಹಚ್ಚಿ, ಗಲ್ಲದ ಮೇಲೆ ಒಂದು ಕಾಡಿಗೆಯ ಚುಕ್ಕೆ ಇಡುತ್ತಿದ್ದರು. ಹಾಗೆ ಇಟ್ಟು, ಎರಡೂ ಕೈಯಲ್ಲಿ ನೀವಾಳಿಸಿ ನೆಟಿಕೆ ತೆಗೆದು ತೃಪ್ತಿಪಟ್ಟುಕೊಳ್ಳುತ್ತಿದ್ದರು, ತಾಯಂದಿರು. ತಾಯ ಸ್ವರೂಪದ ಆ ಪರಮಾತ್ಮನೂ ಸಹ ಅದೇ ರೀತಿ ಈ ಸೃಷ್ಟಿಯಲ್ಲಿ ತಾನೇ ಸೃಷ್ಟಿಸಿದ ಸುಂದರತೆಗೆ ಪಕ್ಕದಲ್ಲಿ ದೃಷ್ಟಿಬೊಟ್ಟಂತೆ ಕೊಳೆಯನ್ನೂ ಇಟ್ಟು ತೃಪ್ತಿಪಟ್ಟುಕೊಂಡಿರಬೇಕು. ಸೂರ್ಯನಲ್ಲಿ ಅಗ್ನಿ, ಚಂದ್ರನಲ್ಲಿ ಕಲೆಗಳಂತೆ, ಕೆಂಪು ಗುಲಗಂಜಿಯಲ್ಲಿ ಕಪ್ಪು ಚುಕ್ಕೆ, ಹೀಗೆ ನಮಗೆ ಸೃಷ್ಟಿಯಲ್ಲಿ ಬಹಳಷ್ಟು ಕಡೆ ಕಾಣುತ್ತದೆ.

ಕಾರಣಗಳು ಹಲವಾರಿರಬಹುದು. ಪ್ರಮುಖವಾಗಿ ಒಂದು ವಸ್ತು ಅತೀ ಸುಂದರವಾಗಿದ್ದರೆ ಅದನ್ನು ಯಾರಾದರೂ ಹಾಳುಮಾಡಿಬಿಡುವರೇನೋ ಎಂಬ ಶಂಕೆಯಿಂದ, ಅದರ ರಕ್ಷಣೆಗೋಸ್ಕರ ಒಂದು ಚುಕ್ಕೆ ಅಥವಾ ಹತ್ತಾರು ದಡ್ಡರ ನಡುವೆ ಅಲ್ಪ ಬುದ್ಧಿವಂತನಾದರೂ ಮಹಾ ಬುದ್ಧಿವಂತನಂತೆ ಕಾಣುವಂತೆ ಒಂದು ವಸ್ತುವಿನ ಸುಂದರತೆಯನ್ನು, ಅದರೊಳಗಿನ ಒಂದು ಚುಕ್ಕೆ ಅಥವಾ ಕಲೆ, ಅಧಿಕವಾಗಿಸಬಹುದು ಅಥವಾ ಒಬ್ಬ ಸುಂದರವಾದ ವ್ಯಕ್ತಿ ತಾನು ಅತೀ ಸುಂದರನೆಂದು ಗರ್ವಪಡುವಾಗ ಅಹಂಕಾರವನ್ನು ಇಳಿಸಲೋಸುಗ ಈ ರೀತಿಯ ಕಲೆ ಅಥವಾ ಚುಕ್ಕಿಯನ್ನು ಇಟ್ಟಿರಬಹುದು ಆ ಸೃಷ್ಟಿಕರ್ತ.

ಕಪ್ಪಾದ ಕೂದಲನ್ನು ತೀಡಿ ತಿದ್ದಿ ತಲೆಬಾಚಿ ಒಂದು ಮಲ್ಲಿಗೆಯ ದಂಡೆಯನ್ನು ಮುಡಿಸಿದಾಗ ಆ ಜಡೆಯ ಮತ್ತು ತಲೆಗೂದಲಿನ ಅಂದ ಹೆಚ್ಚುವುದು ಅಲ್ಲವೇ? ಹಾಗೆಯೇ ನೋಡುವವನ ಮನಸ್ಸು, ತೀವ್ರವಾಗಿ ಒಂದು ವಸ್ತುವಿನ ಸೌಂದರ್ಯಾಸ್ವಾದನೆಯಲ್ಲಿ ಮುಳಗದಿರಲೆನ್ನುವಂತೆ ಮನಸ್ಸನ್ನು ಪಕ್ಕಕ್ಕೆ ಹರಿಸಲು ಈ ರೀತಿಯ ತಂತ್ರ ಸೃಷ್ಟಿಕರ್ತನದು. ಇದನ್ನು ಹಲವಾರು ವ್ಯಕ್ತಿಗಳಲ್ಲಿ, ವಿಷಯಗಳಲ್ಲಿ ಮತ್ತು ವಸ್ತುಗಳಲ್ಲಿ ಕಾಣುತ್ತೇವೆ. ಪ್ರತಿ ವಸ್ತುವಿನಲ್ಲೂ ಪರಮಾತ್ಮನ ಕೃತಿಯನ್ನು ಕಂಡಾಗ ನಮ್ಮ ಮನಸ್ಸುಗಳು ವಿಚಲಿತವಾಗುವ ಸಾಧ್ಯತೆಗಳು ಕಡಿಮೆಯಾಗುತ್ತದೆ.

**ಮುಕ್ತಕ-448** **ಬಿಂದು ವಿಸರಗಳನುವು, ವಂಕು ಸರಲಗಳನುವು।**
**ಚೆಂದ ಕಣ್ಣಿಗೆ ವರ್ಣವಿವಿಧಂಗಳನುವು ॥**
**ಚೆಂದ ವೇಗ ಸ್ತಿಮಿತದನುವು ಹುಳಿಯುಪ್ಪನುವು।**
**ದ್ವಂದದನುವುಗಳಂದ - ಮಂಕುತಿಮ್ಮ ॥**

ವಿಸರಗಳನುವು=ವಿಸರಗಳ+ಅನುವು, ಸರಲಗಳನುವು=ಸರಲಗಳ+ಅನುವು, ವರ್ಣವಿವಿಧಂಗಳನುವು=ವರ್ಣ+ವಿವಿಧಂಗಳ+ಅನುವು, ಸ್ತಿಮಿತದನುವು=ಸ್ಥಿಮಿತದ+ಅನುವು, ಹುಳಿಯುಪ್ಪನುವು=ಹುಳಿ+ಉಪ್ಪು+ಅನುವು, ದ್ವಂದದನುವುಗಳಂದ=ದ್ವಂದದ+ಅನುವುಗಳು+ಅಂದ. ಬಿಂದು=ಒಂದು ಚುಕ್ಕೆ, ವಿಸರ=ವಿಸ್ತಾರ, ಅನುವು=ಹೊಂದಾಣಿಕೆ.





ಸೃಷ್ಟಿಯಲ್ಲಿ ಹಲವಾರು ದ್ವಂದ್ವಗಳು ಜೊತೆಜೊತೆಯಲ್ಲೇ ಇರುತ್ತವೆ. ಒಂದು ಚುಕ್ಕೆಯ ಸುತ್ತ ವಿಸ್ತಾರ, ಅಂಕುಡೊಂಕುಗಳೊಡನೆ ನೇರಗಳು, ಒಂದಕ್ಕೊಂದು ಹೊಂದಿಕೊಂಡು ಹಲವಾರಾದರೂ, ನಮ್ಮ ಕಣ್ಣಿಗೆ ಚೆಂದವಾಗಿ ಕಾಣುವ ವಿವಿಧ ಬಣ್ಣಗಳು, ಕೆಲವು ಸ್ಥಾಯೀಯಾಗಿರುವುದು ಮತ್ತೆ ಕೆಲವು ವೇಗವಾಗಿ ಓಡುತ್ತಿರುವುದು, ಹೀಗೆ ಪರಸ್ಪರ

ವಿರುದ್ಧವಾಗಿದ್ದರೂ ಅಕ್ಕ ಪಕ್ಕಗಳಲ್ಲೇ ಇರುವ ಈ ದ್ವಂದ್ವಗಳ ಪರಸ್ಪರ ಅನೋನ್ಯತೆ ಈ ಜಗತ್ತನ್ನು ಇನ್ನಷ್ಟು ಸುಂದರವಾಗಿಸಿದೆ ಎಂದು ಪ್ರಸ್ತಾಪಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಜಗತ್ತಿನಲ್ಲಿ ಎಲ್ಲವೂ ಸಮನಾಗಿಲ್ಲ. ಹಾಗೆ ಅಸಮತೆಯಿಂದ ಕೂಡಿರುವುದೇ ಈ ಜಗತ್ತಿಗೆ ಹೆಚ್ಚಿನ ಸುಂದರತೆಯನ್ನು ತಂದುಕೊಟ್ಟಿದೆ. ನಿರಂತರ ಬದಲಾಗುತ್ತಿರುವ ಜಗತ್ತ್ವರೂಪದಲ್ಲಿ ಹಲವು ಹೊಸತು, ಹಲವು ಹಳತು, ಹಲವು ಶಕ್ತಿವಂತ, ಹಲವು ಶಕ್ತಿಹೀನ ಹೀಗೆ ಹಲವಾರು ವೈವಿಧ್ಯತೆಯನ್ನು ಹೊತ್ತಿರುವುದೇ ಪ್ರಪಂಚ. ಇದು ಹೀಗಿದ್ದರೆ ಮಾತ್ರ ಸುಂದರವಾಗಿರಲು ಸಾಧ್ಯ. ಇಲ್ಲದಿದ್ದರೆ ಏಕತಾನತೆಯಿಂದ ಬದುಕು ಬರಡಾಗಿಹೋಗುತ್ತಿತ್ತು. ಪ್ರಾಣಿಗಳು, ಪಕ್ಷಿಗಳು, ಭೂ ಭಾಗಗಳು, ಗಿಡ ಮರಗಳು, ಹೂಗಳು, ಹಣ್ಣುಗಳು ಹೀಗೆ ಎಲ್ಲವೂ, ಆಕಾರ, ಗುಣ, ಬಣ್ಣ, ರುಚಿ, ಒಳ್ಳೆಯದು ಕೆಟ್ಟದ್ದು ಎಂಬ ಹಣೆಪಟ್ಟಿ (ಲೇಬಲ್) ಹೊತ್ತ ಹಲವಾರು ವೈವಿಧ್ಯತೆಯಿಂದ ಕೂಡಿದ್ದರೂ ಒಂದಕ್ಕೊಂದು ಹೊಂದಿಕೊಂಡು ಇರುವುದೇ ಈ ಜಗತ್ತಿನ ವಿಶೇಷತೆ.

ಒಂದು ಮತ್ತೊಂದಕ್ಕಿಂತ ಭಿನ್ನವಾಗಿದ್ದರೆ ಮಾತ್ರ ಎರಡರ ಅನುಭವ ನಮಗೆ ಆಗುತ್ತದೆ ಮತ್ತು ಆ ಎರಡರ ಗುಣ ವಿಶೇಷಗಳನ್ನು ನಾವು ಅನುಭವಿಸಲು ಸಾಧ್ಯ ಭಿನ್ನವಾದ ಎರಡೂ ತಮ್ಮ ತಮ್ಮ ಸ್ಥಾನದಲ್ಲಿ ಸಮರ್ಪಕವಾಗೇ ಇರುತ್ತವೆ. ಕೆಲವು ನಮಗೆ ಹಿತವಾಗಿರಬಹುದು, ಕೆಲವು ಅಹಿತವಾಗಿರಬಹುದು ಅಥವಾ ಎರಡೂ ಹಿತವಾಗಿರಬಹುದು ಅಥವಾ ಎರಡೂ ಅಹಿತವಾಗಿರಬಹುದು. ಹಿತಾಹಿತಗಳು ಕೇವಲ ನಮ್ಮ ಭಾವನೆಯಷ್ಟೆ. ವಸ್ತು ವಿಷಯಗಳಲ್ಲಿ ಯಾವ ದೋಷವೂ ಇರುವುದಿಲ್ಲ, ಅಲ್ಲವೇ? ಆದ್ದರಿಂದ ನಾವು ಎಲ್ಲ ವೈವಿಧ್ಯತೆಗಳನ್ನೂ ನೋಡುತ್ತಾ ಆ ಪರಮಾತ್ಮನ ಸೃಷ್ಟಿಯಲ್ಲಿನ ಸುಂದರತೆಯನ್ನು ಅನುಭವಿಸುತ್ತಾ ತೃಪ್ತಿ ಮತ್ತು ಸಂತಸದಿಂದ ಬಾಳಬೇಕು.

# ದ್ವಂದ್ವ ಸ್ವಾರಸ್ಯ 449

**ಮುಕ್ತಕ-449**

**ಸೌಂದರ್ಯಾಲಯ ಬರಿ ದ್ವಂದ್ವವೇನಲ್ಲ।**
**ದ್ವಂದ್ವದೊಳಗನುವು; ಅದು ಪರಿಮಾಣದುಚಿತ॥**
**ಸಂಧಾನ ರೀತಿಯದು, ಸಹಕಾರ ನೀತಿಯದು।**
**ಸಂದರ್ಭ ಸಹಜತೆಯೊ – ಮಂಕುತಿಮ್ಮ॥**

ದ್ವಂದ್ವದೊಳಗನುವು=ದ್ವಂದ್ವಗಳ+ಅನುವು, ಪರಿಮಾಣದುಚಿತ=ಪರಿಮಾಣದ+ಉಚಿತ, ಪರಿಮಾಣ=ಮಿಶ್ರಣಾಂಶ.

ದ್ವಂದ್ವ ಸ್ವಾರಸ್ಯ 449 ಕಗ್ಗ ರಸಧಾರೆ-2

ಕೇವಲ ದ್ವಂದ್ವಗಳು ಇದ್ದರೆ ಸಾಲದು, ಅವು ಒಂದಕ್ಕೊಂದು ಅನುಗುಣವಾಗಿರಬೇಕು, ಪರಿಮಾಣಗಳ ಔಚಿತ್ಯವನ್ನು ಹೊಂದಿರಬೇಕು, ಒಂದಕ್ಕೊಂದು ಸಮರ್ಪಕವಾಗಿ ಅನುಸಂಧಾನದಿಂದಿರಬೇಕು ಮತ್ತು ಪರಸ್ಪರ ಸಹಕಾರಯುತವಾಗಿರಬೇಕು. ಈ ಎಲ್ಲ ರೀತಿಯ ಸಂದರ್ಭಗಳು ಇದ್ದಾಗ ಅದು ನಿಜವಾದ ಸೌಂದರ್ಯ ಎಂದು ಉಲ್ಲೇಖಮಾಡಿದ್ದಾರೆ, ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ವೈವಿಧ್ಯಮಯ ಈ ಜಗತ್ತಿನಲ್ಲಿ ಎಲ್ಲವೂ ಇದೆ. ಪ್ರತಿಯೊಂದೂ ತನ್ನ ವೈಯಕ್ತಿಕ ಸ್ವರೂಪವನ್ನು ಹೊಂದಿ ತಮ್ಮಷ್ಟಕ್ಕೆ ತಾವು ಸಮರ್ಪಕವಾಗೇ ಇವೆ. ಒಂದು ವಸ್ತು, ವಿಷಯ ಅಥವಾ ವ್ಯಕ್ತಿ ಮತ್ತೊಂದರೊಂದಿಗೆ ಸೂಕ್ತ ಪ್ರಮಾಣ ಮತ್ತು ಪರಿಮಾಣಗಳೊಂದಿಗೆ ಹೊಂದಿಕೊಂಡಾಗ ಆ ಮಿಶ್ರಣಕ್ಕೆ ಒಂದು ಸುಂದರತೆ ಉಂಟಾಗುತ್ತದೆ. ಆ ಸುಂದರತೆ ಆನಂದ ಮತ್ತು ಸಂತೋಷವನ್ನು ಉಂಟುಮಾಡುತ್ತದೆ.

ಪಂಚಭೂತಗಳಿಂದಾದ ಪ್ರಕೃತಿಯಲ್ಲಿ ಎಲ್ಲವೂ ಪರಿಮಾಣದ ಔಚಿತ್ಯವನ್ನು ಹೊಂದಿಕೊಂಡೇ ಇವೆ, ಒಂದಕ್ಕೊಂದು ಪೂರಕವಾಗೆ ಇವೆ. ಆದರೆ ಮನುಷ್ಯ ಮಾತ್ರ ತನ್ನ ಅಹಂಕಾರದಿಂದ ಇದಕ್ಕೆ ಹೊಂದಿಕೊಳ್ಳದಂತೆ ಆಗಿದ್ದಾನೆ. ತಾನು ಯಾವುದಕ್ಕೂ ಹೊಂದಿಕೊಳ್ಳದಿದ್ದರೂ, ಬೇರೆಲ್ಲವೂ ತನಗೆ ಹೊಂದಿಕೊಳ್ಳಬೇಕೆಂದು ಅಪೇಕ್ಷೆ ಪಡುತ್ತಾನೆ. ವಿಪರ್ಯಾಸವೆಂದರೆ ಎಲ್ಲ ವಿಷಯಗಳೂ, ಎಲ್ಲ ವಸ್ತುಗಳೂ ಮತ್ತು ಎಲ್ಲ ವ್ಯಕ್ತಿಗಳೂ ಇವನಿಗನುಗುಣವಾಗಿಸಿಕೊಳ್ಳಲು ಸತತ ಪ್ರಯತ್ನವನ್ನು ಮಾಡುತ್ತಾನೆ. ದುರಾಸೆ, ದುರ್ನಿರೀಕ್ಷೆಗಳಂತಹ ಭಾವನೆಗಳಿಂದ ತನ್ನನ್ನು ಹೊರತು ಮತ್ತೆಲ್ಲದರ ಪ್ರಮಾಣ ಮತ್ತು ಪರಿಮಾಣವನ್ನು ಭಗ್ನಗೊಳಿಸಿ, ತನ್ನ ಸ್ವಾರ್ಥಕ್ಕೆ ಬಳಸಿಕೊಳ್ಳುವ ಇವನ ಹವಣಿಕೆಯಲ್ಲಿ ಎಲ್ಲವನ್ನೂ ಹಾಳುಗೆಡುವುತ್ತಿದ್ದಾನೆ. ಇದರಿಂದ ಇವನಿಗೆ ಖಂಡಿತ ಸುಖ ಸಿಕ್ಕಿಲ್ಲ ಎನ್ನುವುದು ಸರ್ವವಿದಿತ.

ಪರಮಾತ್ಮನ ಸೃಷ್ಟಿಯಲ್ಲಿ ಮತ್ತೆಲ್ಲದರಂತೆ ತಾನೂ ಒಂದು ಎಂದು ಎಲ್ಲದರೊಂದಿಗೆ ಸಮನ್ವಯದ ಬಾಳನ್ನು ಇವನು ಎಂದು ಅಳವಡಿಸಿಕೊಳ್ಳುತ್ತಾನೋ, ಅಂದೇ ಇವನಿಗೆ ನಿಜವಾದ ಸುಖ ಆನಂದಗಳು ಸಿಗುತ್ತವೆ. ಇದನ್ನು ಅರಿತುಕೊಳ್ಳುವ ಪ್ರಯತ್ನವನ್ನು ಮಾಡಿ ತನ್ನನ್ನು ತಾನು ಬದಲಾಯಿಸಿಕೊಂಡರೆ ಸರ್ವರ ಹಿತವನ್ನು ಸಾಧಿಸಿದಂತಾಗುತ್ತದೆ.

**ಮುಕ್ತಕ-450**

**ಸೌಂದರ್ಯದೊಳ್ ದ್ವಂದ್ವ, ಬಾಂಧವ್ಯದೊಳ್ ದ್ವಂದ್ವ।**
**ದ್ವಂದ್ವವೀ ಲೋಕ ಸಹವಾಸಗಳೊಳೆಲ್ಲ॥**
**ಮುಂದೆ ನೀನಾವುಭಯಗಳ ದಾಟಿ ಸಾಗುತಿರೆ।**
**ಬಂದವಿಮೋಚನ ನಿನಗೆ – ಮಂಕುತಿಮ್ಮ॥**

ಸೌಂದರ್ಯದೊಳ್=ಸೌಂದರ್ಯದ+ಒಳ್, ಬಾಂಧವ್ಯದೊಳ್=ಬಾಂಧವ್ಯದ+ಒಳ್,
ಸಹವಾಸಗಳೊಳೆಲ್ಲ=ಸಹವಾಸಗಳ+ಒಳು+ಎಲ್ಲ, ನೀನಾವುಭಯಗಳ=ನೀನು+ಆ+ಉಭಯಗಳ,
ಉಭಯ=ಎರಡು,

ಈ ಜಗತ್ತಿನಲ್ಲಿರುವ ಎಲ್ಲ ಸೌಂದರ್ಯ ಮತ್ತು ಬಾಂಧವ್ಯಗಳಲ್ಲಿ ದ್ವಂದ್ವಗಳಿವೆ. ಈ ಜಗತ್ತಿನ ಸಹವಾಸವೆಂದರೆ, ದ್ವಂದ್ವದಲ್ಲಿ ಬಿದ್ದೆವು ಎಂದರ್ಥ. ಎಂದು ನಾವು ಈ ದ್ವಂದ್ವಗಳನ್ನು ಮೀರಿ ಮುಂದೆ ಹೋಗುತ್ತೇವೆಯೋ ಅಂದೇ ನಮಗೆ ಬಂಧ ವಿಮೋಚನೆ ಎಂದು ಸುಂದರ ವಿಚಾರವನ್ನು ಪ್ರಸ್ತಾಪಮಾಡಿದ್ದಾರೆ, ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ದ್ವಂದ್ವವೆಂದರೆ ಇದೋ ಅಥವಾ ಅದೋ ಎನ್ನುವ ವಿಚಾರ. ಹಾಗೆ ಪ್ರಕೃತಿಯಲ್ಲಿ ಭಿನ್ನ ಭಿನ್ನ ಸುಂದರತೆಗಳು ಇರುವಾಗ ಇದೋ ಅಥವಾ ಅದೋ ಎನ್ನುವ ದ್ವಂದ್ವ ನಮಗೆ ಬರುತ್ತದೆ. ನಮ್ಮ ದೈನಂದಿನ ಕಾರ್ಯ ಕಲಾಪಗಳಲ್ಲಿ ಮಾಡಬೇಕಾದ ಕೆಲಸಕ್ಕೆ ಹಲವಾರು ಪರ್ಯಾಯಗಳಿರುವಾಗ, ಹಾಗೋ ಅಥವಾ ಹೀಗೋ ಎನ್ನುವ ದ್ವಂದ್ವವಿರುತ್ತದೆ. ಲೋಕದಲ್ಲಿ ನಾವು ಇದ್ದೇವೆ ಎಂದರೆ, ಹಲವಾರು ವಿಭಿನ್ನ ಮನೋಭಾವಗಳ ವ್ಯಕ್ತಿಗಳೊಡನೆ ನಮ್ಮ ಸಂಪರ್ಕವಿರುವಾಗ ಇವರೋ ಅಥವಾ ಅವರೋ ಎನ್ನುವ ದ್ವಂದ್ವಗಳಿರುತ್ತದೆ. ಈ ರೀತಿಯ ದ್ವಂದ್ವಗಳ ನಡುವೆ ನಮ್ಮ ಬಾಳು ಸಾಗುತ್ತದೆ.

ವಸ್ತುಗಳಲ್ಲಿ ದ್ವಂದ್ವ, ವಸ್ತುವಿನ ಗುಣಗಳಲ್ಲಿ ದ್ವಂದ್ವ ವ್ಯಕ್ತಿಗಳಲ್ಲಿ ದ್ವಂದ್ವ ಮತ್ತು ವಿಷಯಗಳಲ್ಲಿ ದ್ವಂದ್ವ ಇರುವಾಗ ಈ ದ್ವಂದ್ವಗಳಲ್ಲಿ ನಾವು ಯಾವುದೋ ಒಂದನ್ನು ಆಯ್ಕೆ ಮಾಡುವುದು, ಯಾರೋ ಒಬ್ಬರ ಸಹವಾಸ ಮಾಡುವುದು ಅಥವಾ ಯಾವುದೋ ಒಂದು ವಿಷಯವನ್ನು ಅನುಮೋದಿಸುವುದು ಮಾಡಬೇಕಾಗುತ್ತದೆ. ಯಾವುದೋ ಒಂದರ ಕಡೆ ವಾಲಬೇಕಾಗುತ್ತದೆ. ಆದರೆ ಸಂಸ್ಕೃತಿಯ ಔನ್ನತ್ಯ ಅಥವಾ ಜ್ಞಾನದ ಔನ್ನತ್ಯದಲ್ಲಿ ಈ ದ್ವಂದ್ವದಲ್ಲಿರುವ ಎರಡೂ ಭಾಗಗಳನ್ನು ಚೆನ್ನಾಗಿ ಅರಿತು, ಪರಮಾತ್ಮನ ಸೃಷ್ಟಿಯಲ್ಲಿ ಈ ಎರಡೂ ದ್ವಂದ್ವಗಳ ಸಂಪೂರ್ಣತೆ ಅಥವಾ ಸಮರ್ಪಕತೆಯನ್ನು ಮನಗಂಡು ಮತ್ತು ಈ ಎರಡೂ ದ್ವಂದ್ವಗಳ ಸಮನ್ವಯತೆಯನ್ನು ಅರಿತು ನಾವು ಅವುಗಳನ್ನು ಮೀರಿ ಬೆಳೆದರೆ ಆಗ ನಮಗೆ ಬಂಧ ವಿಮುಕ್ತಿಯೆಂದು ಸೂಚಿಸಿದ್ದಾರೆ ಮಾನ್ಯ ಗುಂಡಪ್ಪನವರು.

ದ್ವಂದ್ವವಿದ್ದರೆ, ಭೇದವುಂಟು. ಇದು ಅಥವಾ ಅದು ಎನ್ನುವ ಸಂಕುಚಿತತೆಯನ್ನು ತೊರೆದು, ಭೇದಗಳನ್ನು ಗೌಣವಾಗಿ ಕಂಡು, ಸೃಷ್ಟಿಯ ಸಮಗ್ರತೆ, ಭಿನ್ನತೆಯಲ್ಲೂ ಏಕತೆಯನ್ನು ಕಂಡು ಸೃಷ್ಟಿಯ ಶಿಖರದಲ್ಲಿರುವ ಆ ಪರತತ್ವವನ್ನು ನಾವು ಅನುಸಂಧಾನ ಮಾಡಿದಾಗ ಮತ್ತು 'ಅನೇಕ 'ಗಳನ್ನು ಮೀರಿ 'ಏಕ' ವನ್ನು ಅನುಭವಿಸಿದಾಗ, ನಮಗೆ ಈ ದ್ವಂದ್ವಗಳ ತೊಳಲಾಟದಿಂದ ಮುಕ್ತಿ ಸಿಗುತ್ತದೆ. ಮನಸ್ಸು ಆನಂದದಿಂದ ತುಂಬಿ ಪ್ರಫುಲ್ಲವಾಗುತ್ತದೆ. ಅಂತಹ ಸ್ಥಿತಿಗೆ ತಲುಪುವ ಪ್ರಯತ್ನ ನಮ್ಮದಾಗಬೇಕು.



# ರವಿ ತಿರುಮಲೈ

ಮೂಲತಃ ಕೋಲಾರ ಜಿಲ್ಲೆಯವರಾದ ರವಿ ತಿರುಮಲೈಯವರು ವಾಣಿಜ್ಯ ಪದವಿ ಪಡೆದು ಕೆನರಾ ಬ್ಯಾಂಕಿನಲ್ಲಿ ೨೦ವರ್ಷಗಳ ಸೇವೆ ಸಲ್ಲಿಸಿ, ಐಚ್ಛಿಕ ನಿವೃತ್ತಿ ಪಡೆದು, ಬಹಳ ವರ್ಷಗಳ ಕಾಲ ಮೈಸೂರಿನಲ್ಲಿ ವಾಸಿಸಿ, ಪ್ರಸ್ತುತ ಬೆಂಗಳೂರಿನಲ್ಲಿದ್ದಾರೆ. ಪತ್ನಿ, ಒಬ್ಬ ಪುತ್ರ ಮತ್ತು ಒಬ್ಬ ಪುತ್ರಿಯ ಸುಖೀ ಸಂಸಾರದ ಕೇಂದ್ರ ಬಿಂದು ಇವರು. ಕನ್ನಡ ಪ್ರೇಮ, ಪುಸ್ತಕ ಓದುವುದು, ತರ್ಜುಮೆ ಮಾಡುವುದು, ಲೇಖನ, ಕವನ, ಹಾಡುಗಳನ್ನು ಬರೆಯುವುದು, ರಂಗಭೂಮಿ, ಹಳೆಯ ಚಿತ್ರ ಸಂಗೀತ ಹೀಗೆ ಅವರ ಹವ್ಯಾಸಗಳು ಹಲವು. ಉತ್ತಮ ಶಾಸ್ತ್ರೀಯ ಸಂಗೀತ ಕೇಳುವುದೆಂದರೆ ಇವರಿಗೆ ಬಹಳ ಇಷ್ಟ.

ಪ್ರಚಾರಪ್ರಿಯರಲ್ಲದ ತಿರುಮಲೈಯವರು ಈಗ್ಗೆ ಎರಡು ವರ್ಷಗಳಿಂದ ಮುಖಪುಸ್ತಕದ ಕನ್ನಡ ಬ್ಲಾಗಿನಲ್ಲಿ ದಿನಕ್ಕೊಂದರಂತೆ ಬರೆದ "ಮಂಕುತಿಮ್ಮನಕಗ್ಗ"ಗಳ ವ್ಯಾಖ್ಯಾನದ ಸಂಗ್ರಹವೇ ಈ ಪುಸ್ತಕ. ಇದರ ಮೊದಲನೇ ಸಂಪುಟವು ೨೦೧೩ರಲ್ಲಿ ಪ್ರಕಟಗೊಂಡು ಸಹೃದಯರ ಮೆಚ್ಚುಗೆಗೆ ಪಾತ್ರವಾಗಿದೆ. ಮುಂದುವರೆದ ಭಾಗಗಳನ್ನು ಸದ್ಯದಲ್ಲಿಯೇ ಪ್ರಕಟಪಡಿಸುವ ಯೋಜನೆಯೂ ಇದೆ. ಇದನ್ನು ಬರೆದ ಅವರು, ಇದು ತನಗೆ ಒಂದು ಕಲಿಕೆಯ ಮಾಧ್ಯಮ ಎಂದು ನಮ್ರರಾಗಿ ಹೇಳಿಕೊಳ್ಳುತ್ತಾರೆ.

ಬೆಲೆ : ರೂ.250/-

ಪ್ರಕಾಶಕರು : ವಿಜಯರವಿ ಪ್ರಕಾಶನ, ಬೆಂಗಳೂರು-560 064 ದೂರವಾಣಿ-080-2366 4241